ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ—೪೪

ಶ್ರೀ ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯ ಸಂಹಿತಾ

(ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ—೨

ಅಶ್ವಮೇಧಖಂಡ

(ಅಧ್ಯಾಯಗಳು ೩೮—೬೨)

ಆಸ್ಥಾನ ಮಹಾವಿದ್ವಾನ್

ಹಾಸನದ ಪಂಡಿತ ವೆಂಕಟರಾವ್,

ಅನುವಾದಕ

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್

೧೯೪೮

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ—೪೪

ಶ್ರೀ ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ—೭

ಅಶ್ವಮೇಧಖಂಡ

(ಅಧ್ಯಾಯಗಳು ೩೮—೬೨)

ಆಸ್ಥಾನ ಮಹಾವಿದ್ವಾನ್

ಹಾಸನದ ಪಂಡಿತ ವೆಂಕಟರಾವ್,

ಅನುವಾದಕ

ಮೈ ಸೂ ರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್

೧೯೪೮

ಪೀಠಿಕೆ

ಹತ್ತನೆಯದಾದ ಅಶ್ವಮೇಧಖಂಡವು ಗಾರ್ಗ್ಯಸಂಹಿತೆಯಲ್ಲಿ ಕೊನೆಯ ಖಂಡವಾಗಿರುವುದು. ಇದು ದೊಡ್ಡ ಖಂಡವಾದ್ದರಿಂದ ಎರಡು ಭಾಗಗಳಲ್ಲಿ ಮುದ್ರಿಸಲ್ಪಟ್ಟಿರುವುದು. ಇದರಲ್ಲಿ ಯಾದವೇಶ್ವರನಾದ ಉಗ್ರಸೇನಮಹಾರಾಜನು ಮಾಡಿದ ಅಶ್ವಮೇಧಯಾಗದ ವಿವರಣೆಯನ್ನೂ ಆ ಯಾಗದ ಪೂರ್ವಭಾವಿಯಾಗಿ ಪ್ರದ್ಯುಮ್ನ ಪುತ್ರನಾದ ಅನಿರುದ್ಧನು ಕೈಗೊಂಡ ದಿಗ್ವಿಜಯವರ್ಣನೆಯನ್ನೂ ವಿಸ್ತಾರವಾಗಿ ವಿವರಿಸಲಾಗಿದೆ. ಅಲ್ಲಲ್ಲಿ ಕೆಲವು ಉಪಾಖ್ಯಾನಗಳೂ ಇವೆ. ಕೃಷ್ಣಲೀಲಾವಿನೋದಗಳೂ, ರಾಸಕ್ರೀಡಾವರ್ಣನೆಯೂ ಹೃದಯಂಗಮವಾಗಿ ವರ್ಣಿತವಾಗಿವೆ. ಈ ಖಂಡದಲ್ಲಿ ಹೇಳಿರುವ ಶ್ರೀಕೃಷ್ಣಸಹಸ್ರನಾಮವನ್ನು ಅರ್ಥಸಹಿತವಾಗಿಯೂ, ಪೂಜಾಕಾಲದಲ್ಲಿ ಪಠನಮಾಡಲು ಅನುಕೂಲವಾಗುವಂತೆ ಸಹಸ್ರನಾಮಾವಳಿಯನ್ನೂ ಸೇರಿಸಲಾಗಿದೆ. ಒಟ್ಟಿನಲ್ಲಿ ಈ ಗ್ರಂಥದ ಶೈಲಿಯು ಸರಳವಾಗಿಯೂ, ವಿಷಯನಿರೂಪಣೆಯು ಭಕ್ತಿಜನಕವಾಗಿಯೂ, ಹೃದಯಂಗಮವಾಗಿಯೂ ಇದೆ. ಈ ಗ್ರಂಥಪಠನದಿಂದ ಶ್ರೀ ಕೃಷ್ಣನ ಮಹಿಮೆಯು ಚೆನ್ನಾಗಿ ಮನದಟ್ಟಾಗುವುದಲ್ಲದೆ ಶ್ರೀಕೃಷ್ಣನಲ್ಲಿ ಭಕ್ತಿಯುಂಟಾಗಿ ಪರಮಾತ್ಮನ ಅನುಗ್ರಹವುಂಟಾಗುವುದರಲ್ಲಿ ಸಂದೇಹವಿಲ್ಲ.

ಇಂತಹ ಉತ್ಕೃಷ್ಟಗ್ರಂಥವನ್ನು ಸರ್ವಜನೋಪಯೋಗವಾಗುವಂತೆ ಸರಳವಾದ ಕನ್ನಡಭಾಷೆಗೆ ಪರಿವರ್ತನೆಮಾಡಿಸಿ ಶ್ರೀಕೃಷ್ಣಪರಮಾತ್ಮನ ಅನುಗ್ರಹವು ಸರ್ವರಿಗೂ ಲಭಿಸುವಂತೆ ಸಕಲ ವಿಧವಾದ ಪ್ರೋತ್ಸಾಹವನ್ನಿತ್ತು ತಮ್ಮ ಪ್ರಜೆಗಳನ್ನು ಸಲಹುತ್ತಿರುವ ಕರ್ಣಾಟಕ ಸಿಂಹಾಸನಾಧೀಶ್ವರರೂ, ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ, ಪ್ರಜಾವತ್ಸಲರೂ ಆದ **ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುವರ್ಯರಿಗೂ ಅವರನ್ನಾಶ್ರಯಿಸಿರುವ ಸಮಸ್ತ ಪ್ರಜಾವರ್ಗಕ್ಕೂ ಶ್ರೀಕೃಷ್ಣಪರಮಾತ್ಮನು ಆಯುರಾರೋಗ್ಯ ಪುತ್ರಸಂತಾನಾದಿ ಸಕಲಸಂಪತ್ತನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಸರ್ವಧಾರಿ ಸಂ॥ ಶ್ರಾವಣ ಬ॥ ಅಷ್ಟಮಿ
ತಾ॥ 27–8–48,
ಮೈಸೂರು

ಆಸ್ಥಾನ ಮಹಾವಿದ್ವಾನ್
ಹೆಚ್ ಪಿ ವೆಂಕಟರಾವ್
ಅನುವಾದಕ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

|| ಶ್ರೀಃ ||

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ಅಷ್ಟತ್ರಿಂಶೋಽಧ್ಯಾಯಃ

|| ಗರ್ಗ ಉವಾಚ ||

ತದಾ ಮೃತ್ಯುಂಜಯಃ ಕ್ರುದ್ಧೋ ಭೈರವಂ ವೀಕ್ಷ್ಯ ನಿದ್ರಿತಂ ।
ವೃಷಭಂ ಪ್ರೇರಯಾಮಾಸ ಕಾರ್ಷ್ಣಿಜಂ ಶೂರಮಾನಿನಂ || ೧ ||

ತದೈವ ವೃಷಭಃ ಕೋಪಾಚ್ಛೃಂಗಾಭ್ಯಾಂ ಮಾರಯನ್ನೃಪಾನ್ ।
ದಂತೈಃ ಪಶ್ಚಿಮಪಾದಾಭ್ಯಾಂ ಸೇನಾಯಾಂ ವಿಚಚಾರ ಹ || ೨ ||

ಮೂವತ್ತೆಂಟನೆಯ ಅಧ್ಯಾಯವು

೧. ಗರ್ಗಮಹರ್ಷಿಯು ಹೇಳತೊಡಗಿದನು :—ಅನಿರುದ್ಧನು ಬಿಟ್ಟ ಜೃಂಭಣಾಸ್ತ್ರದ ಮಹಿಮೆಯಿಂದ ಕಾಲಭೈರವನು ನಿದ್ರಾಪರವಶನಾದುದನ್ನು ಕಂಡು ಮೃತ್ಯುಂಜಯನೆನಿಸಿದ ಶಿವನು ಕುಪಿತನಾಗಿ ನಂದಿಯನ್ನು ಕರೆದು, ತಾನೇ ಶೂರನೆಂದು ಮೆರೆಯುತ್ತಿರುವ ಪ್ರದ್ಯುಮ್ನಪುತ್ರನಾದ ಅನಿರುದ್ಧನಮೇಲೆ ಯುದ್ಧಮಾಡುವಂತೆ ಆಜ್ಞಾಪಿಸಿ ಕಳುಹಿಸಿದನು.

೨. ತನ್ನ ಪ್ರಭುವಿನ ಅಪ್ಪಣೆಯಾಗುತ್ತಲೆ ಆ ನಂದಿಯು ಕೋಪದಿಂದ ಆ ಯದುಸೇನೆಯ ನಡುವೆ ನುಗ್ಗಿ ತನ್ನೆದುರಿಗೆ ಸಿಕ್ಕಿದ ಯಾದವರನ್ನೆಲ್ಲಾ ಕೊಂಬುಗಳಿಂದಲೂ, ಹಲ್ಲುಗಳಿಂದಲೂ, ಹಿಂಗಾಲುಗಳಿಂದಲೂ ತಿವಿಯುತ್ತಲೂ, ಕಚ್ಚುತ್ತಲೂ, ಒದೆಯುತ್ತಲೂ ಕೊಲ್ಲುತ್ತಾ ಸುತ್ತಾಡತೊಡಗಿದನು.

ತ್ವರಂ ಜಘಾನ ಶೃಂಗೇಣ ಸಂಮುಖಸ್ಥಂ ಸುನಂದನಂ ।
ಶೃಂಗೇಣ ಭಿನ್ನಹೃದಯಃ ಪಪಾತ ಪಂಚತಾಂ ಗತಃ ॥ ೩ ॥

ತದಾಜಗಾಮ ಸಂಕ್ರುದ್ಧೋಽನಿರುದ್ಧೋ ಗಜಸಂಸ್ಥಿತಃ ।
ಧನುರ್ಧರೋ ದಂಶಿತಶ್ಚ ಮಾ ಭೈರ್ಮಾ ಭೈರಿತಿ ಬ್ರುವನ್ ॥ ೪ ॥

ದೃಷ್ಟ್ವಾ ತತ್ರ ಹತಂ ವೀರಂ ಕೃಷ್ಣಪುತ್ರಂ ಸುನಂದನಂ ।
ಪ್ರಾಪ್ತೋ ದುಃಖಂ ಮೃಧೇತ್ಯಂತಂ ಕಂಪಿತಃ ಶೋಕಪೂರಿತಃ ॥ ೫ ॥

ಹತೇ ತಸ್ಮಿನ್ಮಹಾವೀರೇ ಶೋಚಂತಂ ತಂ ಶಿವೋಽಬ್ರವೀತ್ ।
ಮಾ ಕೃಥಾಸ್ತ್ವಂ ರಣೇ ಶೋಕಮನಿರುದ್ಧ ಮಹಾಬಲ ॥ ೬ ॥

ರಣಮಧ್ಯೇ ಪಾತನಂ ಚ ಶೂರಾಣಾಂ ಕೀರ್ತಯೇ ಸ್ಮೃತಂ ।
ತಸ್ಮಾತ್ತ್ವಮಪಿ ಸಂಗ್ರಾಮೇ ಮಯಾ ಯುಧ್ಯಸ್ವ ಯತ್ನತಃ ॥ ೭ ॥

---

೩. ಹೀಗೆ ಸುತ್ತುತ್ತಿರುವಾಗ ಎದುರಿಗೆ ಬಂದ ಸುನಂದನನೆಂಬ ಕೃಷ್ಣ ಪುತ್ರನನ್ನು ಕೊಂಬಿನಿಂದ ಜೋರಾಗಿ ತಿವಿದುಬಿಟ್ಟನು. ಆ ತಿವಿತದಿಂದ ಆ ಸುನಂದನನ ಎದೆಯು ಸೀಳಿಹೋಗಿ ಅವನು ನೆಲದಮೇಲೆ ಬಿದ್ದು ಪ್ರಾಣಬಿಟ್ಟನು.

೪. ಅದನ್ನು ಕಂಡೊಡನೆಯೇ ಎದೆಗೆ ಕವಚವನ್ನು ತೊಟ್ಟು, ಕೈಲಿ ಬಿಲ್ಲುಹಿಡಿದು ಆನೆಯಮೇಲೆ ಮಂಡಿಸಿದ್ದ ಅನಿರುದ್ಧನು ತನ್ನ ಸೈನ್ಯದವರನ್ನು 'ಹೆದರಬೇಡಿರಿ, ಹೆದರಬೇಡಿರಿ' ಎಂದು ಹುರಿದುಂಬಿಸುತ್ತಾ ನಂದಿಯಕಡೆಗೆ ಕೋಪದಿಂದ ಧಾವಿಸಿ ಬಂದನು.

೫. ಅಲ್ಲಿ ಕೃಷ್ಣಪುತ್ರನಾದ ವೀರ ಸುನಂದನನು ಯುದ್ಧದಲ್ಲಿ ಹೋರಾಡಿ ಮಡಿದು ಬಿದ್ದುದನ್ನು ಕಂಡು ಮಿತಿಮೀರಿದ ದುಃಖದಿಂದ ತಲ್ಲಣಿಸಿಹೋದನು.

೬. ಈರೀತಿ ಮಹಾವೀರನಾದ ಸುನಂದನನು ಮಡಿದುದರಿಂದ ಶೋಕಿಸುತ್ತಿರುವ ಆ ಅನಿರುದ್ಧನನ್ನು ಕಂಡು ಶಿವನು ಎಲೈ ಬಲಶಾಲಿಯೇ, ಈ ರಣರಂಗದಲ್ಲಿ ನೀನೇಕೆ ಇಂತು ವ್ಯಥೆಪಡುವೆ ?

೭. ಶೂರರಾದವರು ಯುದ್ಧಮಾಡುತ್ತಾ ಮಡಿಯುವುದು ಅವರಿಗೆ ಕೀರ್ತಿಯನ್ನೇ ಉಂಟುಮಾಡುವುದಲ್ಲವೆ? ಆದುದರಿಂದ ನೀನೂ ಸಹ ಈ ವ್ಯಥೆಯನ್ನು ಬಿಟ್ಟು ನನ್ನೊಡನೆ ಯುದ್ಧಮಾಡುವುದಕ್ಕೆ ಸಿದ್ಧನಾಗು. ಬಾ !

ಪ್ರಯಾತಾನ್ ರಕ್ಷಸ್ವ ಪ್ರಾಣಾನ್ ಮಮಾಗ್ರೇ ಯುದ್ಧಕಾಂಕ್ಷಯಾ ।

॥ ಗರ್ಗ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಶೋಕಂ ತ್ಯಕ್ತ್ವಾ ಯದೂತ್ತಮಃ ॥ ೮ ॥

ನಿಚಖಾನ ಪಂಚಬಾಣೈಃ ಶಿವಸ್ಯ ಶಿರಸಿ ನೃಪ ।
ನಾರಾಚಾಸ್ತೇ ಮಹೇಶಸ್ಯ ಜಟಾಜೂಟೇಷು ನಿಷ್ಠಿತಾಃ ॥ ೯ ॥

ದೃಶ್ಯಂತೇ ಗೃಧ್ರಪಕ್ಷಾಢ್ಯಾಃ ಶಾಖಾ ಇವ ವನಸ್ಪತೇಃ ।
ತತೋ ರುದ್ರಃ ಸ್ವಕೋದಂಡೇ ಬಾಣಮೇಕಂ ನಿಧಾಯ ಚ ॥ ೧೦ ॥

ಚಿಚ್ಛೇದ ತೇನ ಸಹಸಾ ತಸ್ಯ ಚಾಪಸ್ಯ ಸಿಂಜಿನೀಂ ।
ಅನಿರುದ್ಧಃ ಪುನಃ ಶೀಘ್ರಂ ಸಜ್ಯಂ ಕೃತ್ವಾ ಧನುರ್ದೃಢಂ ॥ ೧೧ ॥

ಉಗ್ರಚಾಪಸ್ಯ ಚಿಚ್ಛೇದ ಸಿಂಜಿನೀಂ ಸಾಯಕೇನ ಚ ।
ತತಃ ಶ್ರುತ್ವಾ ತಯೋರ್ಯುದ್ಧಮದ್ಭುತಂ ರೋಮಹರ್ಷಣಂ ॥ ೧೨ ॥

---

೮. ನನ್ನೆದುರು ಯುದ್ಧಮಾಡುವುದಕ್ಕೆ ಬರುವ ಮೊದಲೇ ಪ್ರಯಾಣೋನ್ಮುಖವಾದ ನಿನ್ನ ಪ್ರಾಣಗಳನ್ನು ಕಾಪಾಡಿಕೋ ಎಂದನು. ಎಲೈ ವಜ್ರನಾಭರಾಜನೇ! ಈರೀತಿ ಶಿವನಾಡಿದ ಮಾತನ್ನು ಕೇಳುತ್ತಲೇ ಯದುಶ್ರೇಷ್ಠನಾದ ಆ ಅನಿರುದ್ಧನು ಶೋಕವನ್ನು ತೊರೆದೆದ್ದು ನಿಂತನು.

೯-೧೦. ಬಳಿಕ ಐದು ಬಾಣಗಳನ್ನು ತೆಗೆದು ಶಿವನ ತಲೆಗೆ ಸರಿಯಾಗಿ ಗುರಿಯಿಟ್ಟು ಹೊಡೆದನು. ಆದರೇನು? ಹದ್ದಿನ ಗರಿಗಳನ್ನು ಕಟ್ಟಿದ್ದ ಆ ಬಾಣಗಳೈದೂ ಶಿವನ ಜಟಾಜೂಟದಲ್ಲಿ ನಾಟಿ ಭಾರಿ ಮರದಲ್ಲಿ ಹೊರಟ ಕೊಂಬೆಗಳಂತೆ ಶೋಭಿಸಿದುವು. ಅನಂತರ ಶಿವನು ತನ್ನ ಧನಸ್ಸಿನಲ್ಲಿ ಬಾಣವೊಂದನ್ನು ಹೂಡಿ ಅದರಿಂದ

೧೧. ಆ ಅನಿರುದ್ಧನ ಬಿಲ್ಲಿನ ಹೆದೆಯನ್ನು ಸರ್‍ರನೆ ಕತ್ತರಿಸಿಬಿಟ್ಟನು. ಒಡನೆಯೇ ಆ ಅನಿರುದ್ಧನೂ ಸಹ ತನ್ನ ಬಿಲ್ಲಿಗೆ ಬೇರೊಂದು ಹೆದೆಯೇರಿಸಿ,

೧೨-೧೩. ಒಂದೇ ಒಂದು ಬಾಣದಿಂದ ಆ ಶಿವನ ಬಿಲ್ಲಿನ ಹೆದೆಯನ್ನು ಛೇದಿಸಿಬಿಟ್ಟನು. ಈ ರೀತಿಯಾಗಿ ಕೇಳಿದವರ ಮೈ ಜುಮ್ಮೆನ್ನುವಷ್ಟು ಮಟ್ಟಿಗೆ

ವಿಮಾನಸ್ಥಾಶ್ಚ ಶಕ್ರಾದ್ಯಾ ಆಜಗ್ಮುಃ ಕೌತುಕಾನ್ವಿತಾಃ ।
ಊಚುಃ ಪರಸ್ಪರಂ ಖಸ್ಥಾ ನಿರೀಕ್ಷ್ಯ ಭಯವಿಹ್ವಲಾಃ ॥ ೧೩ ॥

॥ ದೇವಾ ಊಚುಃ ॥

ಅಮೂ ಲೋಕತ್ರಯಸ್ಯಾಪಿ ಹ್ಯುತ್ಪತ್ತಿಲಯಕಾರಕೌ ।
ಏತಯೋಶ್ಚ ರಣಂ ತಸ್ಮಾದ್ವಿಫಲಂ ರಣಮಂಡಲೇ ॥ ೧೪ ॥

ಕೋ ವಿಜೇಷ್ಯತಿ ಸಂಗ್ರಾಮಂ ಪ್ರಾಪ್ಸ್ಯತೇ ಕಃ ಪರಾಜಯಂ ।

॥ ಗರ್ಗ ಉವಾಚ ॥

ತತಸ್ತ್ರಿದಿನಪರ್ಯಂತಂ ಯುದ್ಧಮಾಸೀತ್ತಯೋರ್ಭೃಶಂ ॥ ೧೫ ॥

ಪುನಃ ಶರಾಸನಂ ರುದ್ರಃ ಸಜ್ಜಂ ಕೃತ್ವಾ ರುಷಾನ್ವಿತಃ ।
ಬ್ರಹ್ಮಾಸ್ತ್ರಂ ಸಂದಧೇ ತತ್ರ ಲೋಕಪ್ರಲಯಕಾರಕಂ ॥ ೧೬ ॥

ಅದ್ಭುತವಾಗಿ ನಡೆಯುತ್ತಿರುವ ಆ ಅನಿರುದ್ಧಶಿವರ ಯುದ್ಧವೃತ್ತಾಂತವನ್ನು ಕೇಳಿ ಅವರ ಯುದ್ಧವನ್ನು ನೋಡಬೇಕೆಂಬ ಕುತೂಹಲದಿಂದ ಇಂದ್ರಾದಿ ದೇವತೆಗಳು ತಂತಮ್ಮ ವಿಮಾನಗಳನ್ನೇರಿ ಅಲ್ಲಿಗೆ ಬಂದು ಮೇಲುಗಡೆ ನೆರದು ಬಿಟ್ಟರು. ಆಗವರು ಆ ಯುದ್ಧವನ್ನು ಕಂಡು ಭಯದಿಂದ ತತ್ತಳಿಸುತ್ತಾ ತಮ್ಮ ತಮ್ಮಲ್ಲಿ

೧೪. "ಈ ಅನಿರುದ್ಧ ಮತ್ತು ಶಿವರಿಬ್ಬರೂ ಮೂರುಲೋಕಗಳನ್ನೂ ಸೃಷ್ಟಿಸಲೂ, ನಾಶಮಾಡಲೂ ತಕ್ಕ ಸಾಮರ್ಥ್ಯವುಳ್ಳವರಾಗಿರುವರು. ಇಂಥಹವರಿಗೇ ಪರಸ್ಪರ ಯುದ್ಧವು ಸಂಘಟಿಸಿರುವಾಗ ಅದು ಸಫಲವಾಗುವುದು ಹೇಗೆ?

೧೫. ಈ ಯುದ್ಧದಲ್ಲಿ ಯಾರು ಗೆಲ್ಲುವರು? ಯಾರು ಸೋಲುವರು? ಎಂದು ಮಾತನಾಡಿಕೊಳ್ಳುತ್ತಿದ್ದರು. ಎಲೈ ರಾಜನೇ ಈರೀತಿ ಅವರಿಬ್ಬರಿಗೆ ಮೂರು ದಿವಸಗಳವರೆಗೆ ಭಾರಿ ಯುದ್ಧವು ಜರಗಿತು.

೧೬. ಅನಂತರ ಶಿವನಿಗೆ ಕೋಪವು ಉಕ್ಕಿ ಬಂದು ತನ್ನ ಬಿಲ್ಲನ್ನು ಸರಿಯಾಗಿ ಹೆದೆಯೇರಿಸಿ ಹಿಡಿದು ಲೋಕಗಳೆಲ್ಲವನ್ನೂ ಕ್ಷಣಮಾತ್ರದಲ್ಲಿ ನಾಶ ಮಾಡಿಬಿಡುವಂತಹ ಬ್ರಹ್ಮಾಸ್ತ್ರವನ್ನು ಸಂಧಾನ ಮಾಡಿದನು.

ಬ್ರಹ್ಮಾಸ್ತ್ರೇಣ ತು ಬ್ರಹ್ಮಾಸ್ತ್ರಂ ಭಿದುರಾಸ್ತ್ರೇಣ ಪಾರ್ವತಂ ।
ಪರ್ಜನ್ಯಾಸ್ತ್ರೇಣ ಚಾಗ್ನೇಯಮನಿರುದ್ಧೋ ಜಹಾರ ಹ ॥ ೧೭ ॥

ತದಾ ಪ್ರಕುಪಿತೋಽತ್ಯಂತಂ ಪಿನಾಕೀ ಪ್ರಜ್ವಲನ್ನಿವ ।
ತ್ರಿಶಿಖೇನ ತ್ರಿಶೂಲೇನ ಜಘಾನ ಕಾರ್ಷ್ಣಿನಂದನಂ ॥ ೧೮ ॥

ಸತ್ರಿಶೂಲಶ್ಚ ತಂ ಭಿತ್ವಾ ಗಜಂ ಭಿತ್ವಾ ವಿನಿರ್ಗತಃ ।
ಸ್ಥಿತೋಽಭೂಚ್ಚ ತಯೋರ್ಮಧ್ಯೇ ಊರ್ಧ್ವಪುಂಖ ಅಧೋಮುಖಃ ॥

ಗಜೋ ಮೃತ್ಯುಂ ಗತೋ ಯುದ್ಧೇಽನಿರುದ್ಧೋ ಮೂರ್ಛಿತೋಽಭವತ್ ।
ಪೇತತುಸ್ತೌ ಚ ಸಂಲಗ್ನೌ ಭಿನ್ನವಕ್ಷಸ್ಥಲೌ ಮೃಧೇ ॥ ೨೦ ॥

---

೧೭. ಆದರೇನು ? ಆ ಅನಿರುದ್ಧನು ತಾನೂ ಬ್ರಹ್ಮಾಸ್ತ್ರವನ್ನು ಹೂಡಿ ಶಿವನ ಆ ಬ್ರಹ್ಮಾಸ್ತ್ರವನ್ನು ಅಡಗಿಸುದಲ್ಲದೆ, ಆತನು ಬಿಟ್ಟ ಪರ್ವತಾಸ್ತ್ರವನ್ನು ವಜ್ರಾಸ್ತ್ರದಿಂದಲೂ, ಆಗ್ನೇಯಾಸ್ತ್ರವನ್ನು ಪರ್ಜನ್ಯಾಸ್ತ್ರದಿಂದಲೂ ನಾಶಪಡಿಸಿದನು.

೧೮. ಆಗ ಶಿವನಿಗೆ ಕೋಪವು ಮೇರೆಮೀರಿತು. ಒಡನೆಯೇ ಅವನು ಬಹಳವಾಗಿ ಉರಿಯುತ್ತಾ ಮೂರು ಮೊನೆಗಳಿಂದ ಕೂಡಿರುವ ತ್ರಿಶೂಲದಿಂದ ಆ ಅನಿರುದ್ಧನನ್ನು ಪ್ರಹರಿಸಿದನು.

೧೯. ಕೂಡಲೇ ಆ ತ್ರಿಶೂಲವು ಆ ಅನಿರುದ್ಧನನ್ನೂ, ಅವನು ಕುಳಿತಿದ್ದ ಆನೆಯನ್ನೂ ಭೇದಿಸಿಬಿಟ್ಟುದಲ್ಲದೆ, ಅವರಿಬ್ಬರ ಎದೆಯ ನಡುವೆ ಬುಡವು ಮೇಲುಮುಖವಾಗಿಯೂ, ಮೊನೆಯು ಕೆಳಮುಖವಾಗಿಯೂ ಇರುವಂತೆ ನಾಟಿಬಿಟ್ಟಿತು.

೨೦. ತ್ರಿಶೂಲದಿಂದ ಎದೆಯ ಭಾಗದಲ್ಲಿ ಇರಿಯಲ್ಪಟ್ಟಿದ್ದ ಆ ಅನಿರುದ್ಧನು ಮೂರ್ಛಾಕ್ರಾಂತನಾದನು. ಎದೆಯು ಸೀಳಿಹೋಗಿದ್ದ ಆನೆಯು ಪ್ರಾಣಗಳನ್ನು ಬಿಟ್ಟಿತು. ಕೂಡಲೇ ಅವರಿಬ್ಬರೂ ನೆಲದಮೇಲೆ ಬಿದ್ದುಬಿಟ್ಟರು.

ಹಾಹಾಕಾರಸ್ತದೈವಾಸೀದ್ರುರುದುಃ ಸರ್ವಯಾದವಾಃ ।
ರುದ್ರಸ್ಯಾಗ್ರೇ ಯಥಾ ಭೀತಾ ಯಮಸ್ಯಾಗ್ರೇ ಚ ಪಾಪಿನಃ ॥ ೨೧ ॥
ಅನಿರುದ್ಧಂ ನಿಪತಿತಂ ಮೃತತುಲ್ಯಂ ವಿಮೂರ್ಛಿತಂ ।
ಶ್ರುತ್ವಾಯಯೌ ಶಂಕಿತಶ್ಚ ಸಾಂಬಃ ಸ್ಕಂದಂ ವಿಹಾಯ ಚ ॥ ೨೨ ॥
ಮೂರ್ಛಿತಂ ಯದುವೀರಂ ತು ವೀಕ್ಷ್ಯ ಕ್ರೋಧಪರಿಪ್ಲುತಃ ।
ಅಶ್ರುಪೂರ್ಣಮುಖಃ ಸಾಂಬಃ ಶರ್ವಂ ಪ್ರಾಹ ಧನುರ್ಧರಃ ॥ ೨೩ ॥
ಕಸ್ಮಾತ್ಕರಿಷ್ಯಸೇ ರುದ್ರ ದಾನವಾನಾಂ ಹಿ ಪಾಲನಂ ।
ಹತ್ವಾನಿರುದ್ಧಂ ಸಂಗ್ರಾಮೇ ವೀರಂ ಚೈವ ಸುನಂದನಂ ॥ ೨೪ ॥
ವೇದೇ ಭಾಗವತೇ ಶಾಸ್ತ್ರೇ ಪುರಾ ವಿಪ್ರೈಃ ಶ್ರುತಂ ಮಯಾ ।
ಶ್ರೀಕೃಷ್ಣಾಖ್ಯಂ ಪರಂ ನಿತ್ಯಂ ಶಿವಃ ಸೇವತಿ ವೈಷ್ಣವಃ ॥ ೨೫ ॥

---

೨೧. ಆಗ ಎಲ್ಲೆಲ್ಲೂ ಹಾ ಹಾಕಾರಕ್ಕೆ ಮೊದಲಾಯಿತು. ಪಾಪಿಗಳಾದವರು ಯಮನೆದುರು ನಿಲ್ಲಲು ತಲ್ಲಣಿಸುವಂತೆ ಆ ರುದ್ರನ ಎದುರು ಯಾದವರೆಲ್ಲರೂ ನಿಲ್ಲಲಾರದೆ ಹೆದರಿಕೆಯಿಂದ ಅರಚಿಕೊಳ್ಳಲು ಮೊದಲುಮಾಡಿದರು.

೨೨. ಆಗ ಸ್ಕಂದನೊಡನೆ ಯುದ್ಧಮಾಡುತ್ತಿದ್ದ ಸಾಂಬನು "ಅನಿರುದ್ಧನು ತ್ರಿಶೂಲಾಹತನಾಗಿ ಮೂರ್ಛೆಹೊಂದಿ ಸತ್ತಂತೆ ಬಿದ್ದಿರುವನೆಂಬ" ವೃತ್ತಾಂತವನ್ನು ಕೇಳಿ ಸ್ಕಂದನೊಡನೆ ಯುದ್ಧವನ್ನು ನಿಲ್ಲಿಸಿ ಗಾಬರಿಯಿಂದ ಅನಿರುದ್ಧನ ಬಳಿಗೆ ಬಂದನು.

೨೩. ಅಲ್ಲಿ ಮೂರ್ಛೆನೊಂದಿ ಬಿದ್ದಿರುವ ಅನಿರುದ್ಧನನ್ನು ಕಾಣುತ್ತಲೇ ದುಃಖದಿಂದಲೂ, ಕೋಪದಿಂದಲೂ ತಲ್ಲಣಿಸುತ್ತಾ ಇರುವ ಆ ಧನುರ್ಧಾರಿಯಾದ ಸಾಂಬನು ಕಣ್ಣೀರು ಸುರಿಸುತ್ತಾ ಇವನನ್ನು ಕುರಿತು ಇಂತೆಂದನು-

೨೪-೨೫. "ಓ ರುದ್ರಾ! ಯುದ್ಧದಲ್ಲಿ ವೀರನಾದ ಅನಿರುದ್ಧನನ್ನೂ, ಸುನಂದನನ್ನೂ ಕೊಂದು ದಾನವರನ್ನೇಕೆ ಸಲಹುತ್ತಿರುವೆ? ಪ್ರತಿನಿತ್ಯವೂ ಶಿವನು ಶ್ರೀಕೃಷ್ಣನೆಂಬ ಪರಾತ್ಪರವಸ್ತುವನ್ನು ಆರಾಧಿಸುವ ವೈಷ್ಣವಶ್ರೇಷ್ಠನೆಂಬುದು ವೇದಗಳಲ್ಲೂ, ಭಾಗವತದಲ್ಲೂ, ಶಾಸ್ತ್ರಗಳಲ್ಲೂ ಹೇಳಿದೆಯೆಂದು ವಿಪ್ರೋತ್ತಮರು ಹಿಂದೆ ಹೇಳಿರುವುದನ್ನು ಕೇಳಿರುವೆನು.

ವೃಷಾ ಜಾತಂ ಹಿ ತತ್ಸರ್ವಂ ಕಾರ್ಷ್ಣಿಜೇ ಪತಿತೇ ಸತಿ |
ಸುನಂದನಃ ಕೃಷ್ಣಸುತೋ ಸೋಽಪಿ ಯುದ್ಧೇ ತ್ವಯಾ ಹತಃ || ೨೬ ||

ವೃಥಾ ಕರಿಷ್ಯಸೇ ಯುದ್ಧಂ ಧಿಕ್ತ್ವಾಂ ತಸ್ಮಾನ್ಮಹೇಶ್ವರ |
ಅಹಂ ತ್ವಾಂ ಪಾತಯಿಷ್ಯಾಮಿ ರಣೇ ಕೃಷ್ಣಪರಾಙ್ಮುಖಂ || ೨೭ ||

ಕ್ಷುರಪ್ರೈಃ ಸಾಯಕೈಃ ಶೀಘ್ರಂ ತಿಷ್ಠ ತಿಷ್ಠ ರಣೇ ಶಿವ |
ಏತದ್ವಚಃ ಸಮಾಕರ್ಣ್ಯ ಪ್ರಸನ್ನಃ ಶಂಕರೋಽಬ್ರವೀತ್ || ೨೮ ||

|| ಶಿವ ಉವಾಚ ||

ಧನ್ಯಸ್ತ್ವಂ ಯಾದವಶ್ರೇಷ್ಠ ಸತ್ಯಂ ವದಸಿ ನೋ ಭವಾನ್ |
ಮನ್ನಾಥಃ ಕೃಷ್ಣಚಂದ್ರೋಽಯಂ ದೇವದಾನವವಂದಿತಃ || ೨೯ ||

---

೨೬. ಆದರೆ ಪ್ರದ್ಯುಮ್ನಪುತ್ರನಾದ ಈ ಅನಿರುದ್ಧನನ್ನೂ, ಶ್ರೀಕೃಷ್ಣನ ಸಾಕ್ಷಾತ್ಪುತ್ರನಾದ ಈ ಸುನಂದನನ್ನೂ ಈಗ ನೀನು ಯುದ್ಧದಲ್ಲಿ ಕೊಂದು ಕೆಡವಿದುದರಿಂದ ಅದೆಲ್ಲವೂ ಸುಳ್ಳೇ ಆಗಿ ಹೋಯಿತಲ್ಲವೆ?

೨೭-೨೮. ಎಲೈ ಮಹೇಶ್ವರನೇ, ನಿನಗೆ ಧಿಕ್ಕಾರವಿರಲಿ. ನೀನು ಮಾಡುವ ಯುದ್ಧವು ವ್ಯರ್ಥವಾದುದು. ಕೃಷ್ಣನ ವಿಷಯದಲ್ಲಿ ವಿಪರೀತವಾಗಿ ನಡೆದುಕೊಂಡ ನಿನ್ನನ್ನು ಇದೋ ನಾನೀಗ ಕ್ಷೌರದ ಕತ್ತಿಯಂತೆ ಅಲುಗುಳ್ಳ ಕ್ಷುರಪ್ರಗಳಿಂದಲೂ, ಬಾಣಗಳಿಂದಲೂ ಬೇಗನೆ ಕೊಂದು ನೆಲದಮೇಲೆ ಕೆಡಹುವೆನು, ನಿಲ್ಲು! ನಿಲ್ಲು! ಎಂದನು. ಇದನ್ನು ಕೇಳಿ ಶಿವನು ಪ್ರಸನ್ನನಾಗಿ ಆ ಸಾಂಬನನ್ನು ಕುರಿತು,

೨೯. ಎಲೈ ಯಾದವಶ್ರೇಷ್ಠನೇ! ನೀನು ಸತ್ಯವನ್ನೇ ನುಡಿಯುತ್ತಿರುವೆ. ದೇವತೆಗಳಿಂದಲೂ, ದಾನವರಿಂದಲೂ ಆರಾಧಿಸಲ್ಪಡುವ ಈ ಶ್ರೀಕೃಷ್ಣನೇ ನನ್ನ ಪ್ರಭುವು.

ಸುನಂದನೇ ಚ ನಿಹತೇ ಬಲ್ವಲೇ ಮೂರ್ಛಿತೇ ರಣೇ ।
ಸಹಾಯಾರ್ಥಮಹಂ ವೀರ ಭಕ್ತರಕ್ಷಾರ್ಥಮಾಗತಃ ॥ ೩೦ ॥

ಸತ್ಯಂ ಕರ್ತುಂ ಸ್ವವಚನಂ ಕಿಂಚಿತ್ಕೋಪೇನ ಪೂರಿತಃ ।
ಕರೋಮಿ ಪ್ರಧನೇ ಯುದ್ಧಂ ಭಕ್ತಪ್ರಿಯಚಿಕೀರ್ಷಯಾ ॥ ೩೧ ॥

ಇತ್ಥಂ ವದತಿ ಭೂತೇಶೇ ಸಾಂಬೋ ರೋಷಪ್ರಪೂರಿತಃ ।
ತತಾಡ ಶೀಘ್ರಂ ಚಾಪೇನ ಕ್ಷುರಪ್ರೈಃ ಸಾಯಕೈರ್ಮೃಡಂ ॥ ೩೨ ॥

ತೈರ್ಬಾಣೈರ್ನಿಹತೋ ರುದ್ರೋ ನ ಕಿಂಚಿತ್ಕಶ್ಮಲಂ ಗತಃ ।
ಯಥಾ ಮತಂಗಜಶ್ಚೈಃ ಪುಷ್ಪೈರ್ಜಗ್ರಾಹ ಸ್ವಧನುಃ ಶಿವಃ ॥ ೩೩ ॥

ತತಾಡ ನಿಶಿತೈರ್ಬಾಣೈರ್ಯುದ್ಧೇ ಜಾಂಬವತೀಸುತಂ ।
ಸಾಂಬಃ ಶಿವಂ ಶಿವಃ ಸಾಂಬಂ ಜಘ್ನತುಸ್ತೌ ಪರಸ್ಪರಂ ॥ ೩೪ ॥

---

೩೦. ಆದರೆ ಎಲೈ ವೀರನೇ! ಸುನಂದನನು ಯುದ್ಧದಲ್ಲಿ ಮಡಿದುದನ್ನೂ- ವಲ್ವಲನು ಮೂರ್ಛೆಹೋದುದನ್ನೂ ಕಂಡು ಭಕ್ತರನ್ನು ಸಂರಕ್ಷಿಸುವ ಸಲುವಾಗಿ ಆವರ ಸಹಾಯಕ್ಕೆ ಬಂದೆನು.

೩೧. ಮತ್ತು ನನ್ನ ಮಾತನ್ನು ಉಳಿಸಿಕೊಳ್ಳಲೂ, ಭಕ್ತರಿಗೆ ಪ್ರಿಯವನ್ನುಂಟುಮಾಡಬೇಕೆಂತಲೂ ಅಪೇಕ್ಷಿಸಿ ನಾನೀಗ ಸ್ವಲ್ಪ ಕೋಪದಿಂದಲೇ ಯುದ್ಧವನ್ನು ಮಾಡುತ್ತಿರುವೆನು ಎಂದನು.

೩೨. ಈರೀತಿ ಶಿವನು ನುಡಿದುದನ್ನು ಕೇಳಿ, ಸಾಂಬನು ಕೋಪವನ್ನು ತಾಳಿ ಬೇಗ ಬೇಗನೆ ಬಿಲ್ಲಿನಲ್ಲಿ ಕ್ಷುರಪ್ರಗಳನ್ನೂ, ಇತರ ವಿಧವಾದ ಬಾಣಗಳನ್ನೂ ಹೂಡಿ ಆ ಶಿವನನ್ನು ಪ್ರಹರಿಸಿದನು.

೩೩-೩೪. ಆದರೇನು? ಮದ್ದಾನೆಯಮೇಲೆ ಹೂಗಳು ಉದುರಿದರೆ ಅದು ಹೇಗೆ ಲಕ್ಷ್ಯವೇ ಮಾಡುವುದಿಲ್ಲವೋ, ಅದೇ ರೀತಿ ಆ ಸಾಂಬನ ಬಾಣವರ್ಷದಿಂದ ಶಿವನು ಸ್ವಲ್ಪವೂ ಖೇದವನ್ನು ತಾಳಲಿಲ್ಲ. ಬಳಿಕ ಆ ಶಿವನು ತನ್ನ ಬಿಲ್ಲನ್ನು ತೆಗೆದುಕೊಂಡು ಚೂಪಾದ ಬಾಣಗಳನ್ನು ಹೂಡಿ ಜಾಂಬವತೀಪುತ್ರನಾದ ಆ ಸಾಂಬನಮೇಲೆ ಬಿಟ್ಟನು. ಈ ರೀತಿ ಸಾಂಬನು ಶಿವನನ್ನೂ ಶಿವನು ಸಾಂಬನನ್ನೂ ಪರಸ್ಪರವಾಗಿ ಪ್ರಹರಿಸುತ್ತಿದ್ದರು.

ದೃಷ್ಟ್ವಾ ಯುದ್ಧಂ ತಯೋರ್ಲೋಕಸಂಹಾರಂ ಮೇನಿರೇಽಮರಾಃ ।
ಭೂತಲೇ ಗಗನೇ ರಾಜನ್ಮಹಾನ್ಕೋಲಾಹಲೋಽಭವತ್ ॥ ೩೫ ॥

ಭೀತಾಶ್ಚ ವೃಷ್ಣಯಸ್ತತ್ರ ನಾಥಂ ಕೃಷ್ಣಂ ಸ್ಮರಂತಿ ಹಿ ॥ ೩೬ ॥

ತದಾ ಹರಿಃ ಶ್ರೀಯದುಪಾಲಕಶ್ಚ
ಜ್ಞಾತ್ವಾ ಯದೂನಾಂ ಚ ಮಹಾವಿಪತ್ತಿಂ ।
ರಥೇನ ತತ್ರಾಗತವಾನ್ರಿಪುಘ್ನೋ
ಯುಕ್ತೇನ ವೈ ಸೂತತುರಂಗಮೈಶ್ಚ ॥ ೩೭ ॥

ಶ್ಯಾಮಃ ಕಿರೀಟೀ ನವಕಂಜನೇತ್ರೋ
ನವಾರ್ಕಕೋಟಿದ್ಯುತಿಮಾಪಧಾನಃ ।
ಕೌಮೋದಕೀ ಶಂಖರಥಾಂಗಪದ್ಮ-
ಕೋದಂಡಬಾಣೈರ್ನಿಯುತೋಽಸಿಧಾರೀ ॥ ೩೮ ॥

೩೫-೩೬. ಶಿವಸಾಂಬರಿಗೆ ಜರುಗುತ್ತಿದ್ದ ಯುದ್ಧವನ್ನು ನೋಡಿ ಪ್ರಪಂಚಕ್ಕೇ ವಿನಾಶಕಾಲವೊದಗಿತೆಂದು ದೇವತೆಗಳು ಭಾವಿಸಿದರು. ಓ ರಾಜೇಂದ್ರ! ಆಗ ಭೂಮಿಯಲ್ಲೂ, ಅಂತರಿಕ್ಷದಲ್ಲೂ ಭಾರಿಯಾಗಿ ಗದ್ದಲವುಂಟಾಯಿತು. ಭೀತರಾದ ವೃಷ್ಣಿಗಳು ತಮ್ಮ ಒಡೆಯನಾದ ಕೃಷ್ಣನನ್ನು ನೆನೆಯತೊಡಗಿದರು.

೩೭. ಆಗ ಶ್ರೀಕೃಷ್ಣನು ಯಾದವರಿಗೆ ಭಾರಿಯಾದ ವಿಪತ್ತು ಒದಗಿದೆಯೆಂದು ತಿಳಿದು ಕೂಡಲೇ ಸಾರಥಿಯಿಂದಲೂ, ಉತ್ತಮಾಶ್ವಗಳಿಂದಲೂ ಸಜ್ಜಾದ ಚೈತ್ರರಥವನ್ನೇರಿ ಆ ಯುದ್ಧವು ನಡೆಯುತ್ತಿದ್ದಲ್ಲಿಗೆ ಬಂದನು.

೩೮. ಆ ಕೃಷ್ಣನ ದಿವ್ಯರೂಪವನ್ನು ಏನೆಂದು ವಿವರಿಸಲಿ? ಶ್ಯಾಮಲವಾದ ದೇಹಕಾಂತಿ! ದಿವ್ಯವಾದ ಕಿರೀಟ! ಅರಳುತ್ತಿರುವ ತಾವರೆಯನ್ನು ಹೋಲುತ್ತಿರುವ ಕಣ್ಣುಗಳು! ಆಗತಾನೇ ಉದಯಿಸುತ್ತಿರುವ ಕೋಟಿಸೂರ್ಯರಿಗೆಣೆಯಾದ ತೇಜಸ್ಸು! ಕೈಗಳಲ್ಲಿ ಕೌಮೋದಕಿ, ಶಂಖ, ಚಕ್ರ, ಪದ್ಮ, ಬಿಲ್ಲು, ಬಾಣ, ಕತ್ತಿ, ಮೊದಲಾದ ಆಯುಧಗಳು!

ಶ್ರೀವತ್ಸಚಿಹ್ನೇನ ತು ಕೌಸ್ತುಭೇನ
ಪೀತಾಂಬರೇಣಾಪಿ ಚ ಮಾಲಯಾಢ್ಯಃ ।
ನೀಲಾಲಕೈಃ ಕುಂಡಲಕಂಕಣಾದ್ಯೈ-
ರ್ವಿಭೂಷಿತಃ ಕೋಟಿಮನೋಜತುಲ್ಯಃ ॥ ೩೯ ॥

ಸಮುದ್ಗಲದ್ಭಿಃ ಸಿತಫೇನ ಶೀಕರಾನ್
ಮುಕ್ತಾಫಲಾನೀವ ಚ ರಾಜಹಂಸಕೈಃ ।
ಸುಗ್ರೀವಮುಖ್ಯೈರತಿವೇಗವತ್ತರೈ-
ರ್ಹಯೈರ್ಯುತಃ ಸುಂದರಸಾಮಗಾಯನೈಃ ॥ ೪೦ ॥

ದೃಷ್ಟ್ವಾ ಸ್ವನಾಥಂ ಯದವೋ ಸ್ವಾಗತಂ ಹರ್ಷವಿಹ್ವಲಾಃ ।
ಬಭೂವುಃ ಸುಖಿನಃ ಸರ್ವೇ ಶೀತಭೀತಾ ರವಿಂ ಯಥಾ ॥ ೪೧ ॥

---

೩೯. ಶ್ರೀವತ್ಸವೆಂಬ ಮಚ್ಚೆ! ಎದೆಯಮೇಲೆ ಶೋಭಿಸುವ ಕೌಸ್ತುಭವೆಂಬ ಮಣಿ! ಉಟ್ಟಿರುವ ಹಳದಿ ಬಣ್ಣದ ಪಟ್ಟೆವ.ಡಿ! ಧರಿಸಿರುವ ವನಮಾಲೆ! ಕಪ್ಪಾದ ತಲೆಕೂದಲು! ದಿವ್ಯವಾದ ಕಂಕಣ! ಕರ್ಣಕುಂಡಲಗಳು! ಕೋಟಿ ಮನ್ಮಥರಿಗೆಣೆಯಾದ ಸೌಂದರ್ಯ!

೪೦. ಇಂತಹ ದಿವ್ಯವೇಷದಿಂದೊಪ್ಪುವ ಆ ಶ್ರೀಕೃಷ್ಣನು ಮುತ್ತುಗಳನ್ನು ಗುಳುತ್ತಿರುವ ರಾಜಹಂಸಗಳಂತೆ ತೋರುತ್ತಾ ಬೆಳ್ಳಗಿರುವ ನೊರೆಯನ್ನು ಸೂಸುತ್ತಿರುವ ಸುಗ್ರೀವ ಮೊದಲಾದ ಮಹಾವೇಗದಿಂದ ಸಂಚರಿಸುವ ಉತ್ತಮಾಶ್ವಗಳನ್ನು ಕಟ್ಟಿದ್ದ ರಥದಲ್ಲಿ ಕುಳಿತು ಅಲ್ಲಿಗೆ ಬಂದನು.

೪೧. ಈರೀತಿ ಪ್ರಭಾವದ ಶ್ರೀಕೃಷ್ಣನು ಅಲ್ಲಿಗೆ ಬಂದುದನ್ನು ಕಾಣುತ್ತಲೇ, ಚಳಿಯಿಂದ ನಡುಗುತ್ತಿರುವರು ಸೂರ್ಯನನ್ನು ಕಂಡರೆ ಹೇಗೋ ಹಾಗೆ ಆ ಯಾದವರು ಮಹಾ ಹರ್ಷವನ್ನು ತಾಳಿ ತಮ್ಮ ದುಃಖವನ್ನು ಮರೆತು ಬಿಟ್ಟರು.

ತದಾ ಜಯ ಜಯಾರಾವೋ ಯದುಸೈನ್ಯೇ ಬಭೂವ ಹ ।
ಪ್ರಚಕ್ರಿರೇ ಪುಷ್ಪವರ್ಷಂ ಗಗನಸ್ಥಾಶ್ಚ ದೇವತಾಃ ॥ ೪೨ ॥

ದೃಷ್ಟ್ವಾ ಸಾಂಬಸ್ತು ಶ್ರೀಕೃಷ್ಣಂ ಸಹಾಯಾರ್ಥಂ ಸಮಾಗತಂ ।
ಪಪಾತ ಪದಯೋಸ್ತಸ್ಯ ಚಾಪಂ ತ್ಯಕ್ತ್ವಾ ಪ್ರಹರ್ಷಿತಃ ॥ ೪೩ ॥

ಇತಿ ಶ್ರೀ ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರಾ ಅನಿರುದ್ಧಾದಿ ಸಾಹಾಯ್ಯಾರ್ಥ ಶ್ರೀಕೃಷ್ಣಾಗಮನಂ
ನಾಮಾಷ್ಟತ್ರಿಂಶೋಽಧ್ಯಾಯಃ

---

೪೨. ಆಗ ಆ ಯದುಸೈನ್ಯದಲ್ಲಿ ಆನಂದದಿಂದ ಎಲ್ಲೆಲ್ಲಿಯೂ ಜಯ ಜಯಾಕಾರಗಳುಂಟಾದುವು. ಅಂತರಿಕ್ಷದಲ್ಲಿ ನೋಡುತ್ತಿದ್ದ ದೇವತೆಗಳೂ ಸಹ ಸಂತೋಷದಿಂದ ಹೂವಿನ ಮಳೆಯನ್ನು ಕರೆದರು.

೪೩. ಆಗ ಸಾಂಬನು ತಮ್ಮ ಸಹಾಯಕ್ಕೆ ಶ್ರೀಕೃಷ್ಣನು ಬಂದುದನು ಕಂಡು ಮಹಾ ಸಂತೋಷವನ್ನು ತಾಳಿ ಕೈಲಿದ್ದ ಬಿಲ್ಲನ್ನು ಬಿಸುಟು ಆ ಕೃಷ್ಣನ ಕಾಲುಗಳಮೇಲೆ ಬಿದ್ದನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧಚರಿತ್ರದಲ್ಲಿ
ಅನಿರುದ್ಧಾದಿ ಯಾದವರ ಸಹಾಯಕ್ಕೋಸ್ಕರ ಶ್ರೀಕೃಷ್ಣನು ಬಂದನೆಂಬ
ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕೋನಚತ್ವಾರಿಂಶೋಽಧ್ಯಾಯಃ

—

|| ಗರ್ಗ ಉವಾಚ ||

ಕೃಷ್ಣಂ ದೃಷ್ಟ್ವಾ ಹರಸ್ತತ್ರ ಭೀತಃ ಶಂಕಿತಮಾನಸಃ ।
ತ್ಯಕ್ತ್ವಾ ಚಾಪತ್ರಿಶೂಲಾದೀನ್ ಭಕ್ತ್ಯಾ ಶ್ರೀನಾಥಮಬ್ರವೀತ್ || ೧ ||

|| ಶಂಕರ ಉವಾಚ ||

ಅವಿನಯಮಪನಯ ವಿಷ್ಣೋ
ದಮಯ ಮನಃ ಶಮಯ ವಿಷಯಮೃಗತೃಷ್ಣಾಂ ।
ಭೂತದಯಾಂ ವಿಸ್ತಾರಯ
ತಾರಯ ಸಂಸಾರಸಾಗರತಃ || ೨ ||

ಮೂವತ್ತೊಂಭತ್ತನೆಯ ಅಧ್ಯಾಯವು

೧. ಗರ್ಗಮಹರ್ಷಿಯು ಹೇಳತೊಡಗಿದನು :—ಕೃಷ್ಣನು ಯುದ್ಧ ಭೂಮಿಗೆ ಬಂದುದನ್ನು ಕಾಣುತ್ತಲೇ ಶಿವನು ಹೆದರಿದನು. ಅವನಿಗೆ ಮನಸ್ಸಿನಲ್ಲಿ ಗಾಬರಿಹುಟ್ಟಿತು. ಕೂಡಲೇ ತ್ರಿಶೂಲವನ್ನೂ, ಪಿನಾಕವನ್ನೂ ಒಕ್ಕಡೆಯೆಸೆದು ಭಕ್ತಿಯಿಂದ ಆ ಶ್ರೀಹರಿಯನ್ನು ಈರೀತಿ ಸ್ತುತಿಸಿದನು.

೨. ಎಲೈ ಸರ್ವವ್ಯಾಪಿಯೇ! ನನ್ನೀ ಅವಿನಯವನ್ನು ಹೋಗಲಾಡಿಸು. ಮನಸ್ಸನ್ನು ನಿಗ್ರಹಿಸುವ ಶಕ್ತಿಯನ್ನು ನೀಡು. ವಿಷಯ ಸುಖಗಳೆಂಬ ಬಿಸಿಲುಕುದುರೆಯನ್ನು ಅಡಗಿಸಿಬಿಡು. ಪ್ರಾಣಿಗಳಲ್ಲಿ ದಯೆಯು ಹೆಚ್ಚುವಂತೆ ಅನುಗ್ರಹಿಸು. ಈ ಸಂಸಾರಸಾಗರದಿಂದ ನನ್ನನ್ನು ಪಾರುಗಾಣಿಸು.

ದಿವ್ಯಧುನೀ ಮಕರಂದೇ
ಪರಿಮಳಪರಿಭೋಗಸಚ್ಚಿದಾನಂದೇ ।
ಶ್ರೀಪತಿಪದಾರವಿಂದೇ
ಭವಭಯಖೇದಚ್ಛಿದೇ ವಂದೇ ॥ ೩ ॥

ಸತ್ಯಪಿ ಭೇದಾಪಗಮೇ ನಾಥ
ತವಾಹಂ ನ ಮಾಮಕೀನಸ್ತ್ವಂ ।
ಸಾಮುದ್ರೋ ಹಿ ತರಂಗಃ
ಕ್ವಚನ ಸಮುದ್ರೋ ನ ತಾರಂಗಃ ॥ ೪ ॥

ಉದ್ಧೃತನಗನಗಭಿದನುಜ-
ದನುಜಕುಲಾಮಿತ್ರಮಿತ್ರಶಶಿದೃಷ್ಟೇ ।
ದೃಷ್ಟೇ ಭವತಿ ಪ್ರಭವತಿ
ನ ಭವತಿ ಕಿಂ ಭವತಿರಸ್ಕಾರಃ ॥ ೫ ॥

---

೩. ದೇವನದಿಯಾದ ಗಂಗೆಯೂ ಸಹ ಯಾವುದರ ಮಕರಂದವೆನಿಸುವುದೋ, ಸತ್ಯಜ್ಞಾನಾನಂದವೆಂಬ ಸ್ವರೂಪವೂ ಯಾವುದರ ಸುವಾಸನೆಯೆನಿಸುವುದೋ ಅಂತಹ, ಸಂಸಾರದ ಭಯವನ್ನೂ, ಖೇದವನ್ನೂ ಹೋಗಲಾಡಿಸುವ ಶ್ರೀಹರಿಯ (ನಿನ್ನ) ಪಾದಪದ್ಮಗಳನ್ನು ವಂದಿಸುವೆನು.

೪. ಹೇ ಪ್ರಭು! ವಸ್ತುತಃ ನಮ್ಮಿಬ್ಬರಿಗೂ ಭೇದವಿಲ್ಲದಿರುವುದಾದರೂ ನಾನು ನಿನ್ನಂಶವೆಂದೂ, ನೀನು ನನ್ನ ಅಂಶವಲ್ಲವೆಂದೂ ತಿಳಿದಿರುವೆನು. ಏಕೆಂದರೆ ಸಮುದ್ರದಲ್ಲಿ ಏಳುವ ಅಲೆಯು ವಾಸ್ತವಿಕ ಸ್ಥಿತಿಯಲ್ಲಿ ಏಕರೂಪವಾಗಿದ್ದರೂ ವ್ಯವಹಾರದಲ್ಲಿ ಸಮುದ್ರದ ಒಂದು ಅಂಶವೆನಿಸುವುದೇ ವಿನಾ ಸಮುದ್ರವೆಂದಿಗೂ ಅಲೆಯ ಅಂಶವೆನಿಸುವದಿಲ್ಲವಷ್ಟೇ!

೫. ಹೇ ಗೋವರ್ಧನಗಿರಿಧಾರಿ! ಹೇ ಇಂದ್ರಾನುಜಾ! ಹೇ ದಾನವಕುಲವೈರಿ! ಹೇ ಚಂದ್ರ ಸೂರ್ಯ ನೇತ್ರ! ನಿನ್ನ ಸಂದರ್ಶನವು ಒಂದು ಸಾರಿ ಲಭಿಸಿದರೂ ಸಾಕು. ಈ ಸಂಸಾರವು ಪರಿಹಾರವಾಗದಿರುವುದೇ?

ಮತ್ಸ್ಯಾದಿಭಿರವತಾರೈ
ರವತಾರವತಾವತಾ ವಸುಧಾಂ ।
ಪರಮೇಶ್ವರ ಪರಿಪಾಲ್ಯೋ
ಭವತಾ ಭವತಾಪಭೀತೋಽಹಂ ॥ ೬ ॥

ದಾಮೋದರ ಗುಣಮಂದಿರ
ಸುಂದರವದನಾರವಿಂದ ಗೋವಿಂದ ।
ಭವಜಲಧಿಮಥನಮಂದಿರ
ಪರಮಂದರಮಪನಯ ತ್ವಂ ಮೇ ॥ ೭ ॥

ನಾರಾಯಣ ಕರುಣಾಮಯ
ಶರಣಂ ಕರವಾಣಿ ತಾವಕೌ ಚರಣೌ ।
ಇತಿ ಷಟ್ಪದೀ ಮದೀಯೇ
ವದನಸರೋಜೇ ಸದಾ ವಸತು ॥ ೮ ॥

---

೬. ಹೇ ಪರಮೇಶ್ವರ! ಮತ್ಸ್ಯ ಕೂರ್ಮಾದ್ಯವತಾರಗಳನ್ನು ಎತ್ತಿ ಭೂಮಿಯನ್ನು ಸಲಹಿದ ನೀನು ಸಂಸಾರತಾಪದಿಂದ ತಲ್ಲಣಿಸುತ್ತಿರುವ ನನ್ನನ್ನು ಕೈ ಬಿಡದೆ ಕಾಪಾಡು.

೭. ಹೇ ದಾಮೋದರಾ! ಹೇ ಕಲ್ಯಾಣಗುಣಪರಿಪೂರ್ಣಾ! ಹೇ ಗೋವಿಂದಾ! ನಿನ್ನ ಸುಂದರವಾದ ವದನವು ತಾವರೆಯ ಹೂವನ್ನು ಹೋಲುವುದು. ನೀನು ಈ ಸಂಸಾರವೆಂಬ ಸಾಗರವನ್ನು ಮಥಿಸುವ ಮಂದರಪರ್ವತವಾಗಿರುವೆ. ನನಗೆ ಉಂಟಾಗಿರುವ ಈ ಭಾರಿ ಹೆದರಿಕೆಯನ್ನು ಹೋಗಲಾಡಿಸು.

೮. ಹೇ ನಾರಾಯಣ! ಹೇ ಕರುಣಾಳು! ನಿನ್ನ ಪಾದಗಳನ್ನು ಮೊರೆಹೊಕ್ಕಿರುವೆನು. ಈಗ ನಾನು ಮಾಡಿದ ಸ್ತೋತ್ರದ ರೂಪದಲ್ಲಿರುವ ಈ ಆರು ಪದ್ಯಗಳೆಂಬ (ಷಟ್ಪದೀ ಆರು ಕಾಲುಗಳುಳ್ಳ) ಹೆಣ್ಣು ದುಂಬಿಯು ನನ್ನ ಮುಖಕಮಲದಲ್ಲಿ ಸರ್ವಕಾಲದಲ್ಲಿಯೂ ಝೇಂಕರಿಸುತ್ತಿರಲಿ. (ಧ್ವನಿಗೈಯುತ್ತಿರಲಿ).

ಇತಿ ಸ್ತುತಃ ಶಂಕರೇಣ ಪ್ರೀತಃ ಸಂಕರ್ಷಣಾನುಜಃ ।
ಪಪ್ರಚ್ಛ ಸರ್ವಾಭಿಪ್ರಾಯಂ ನಮಂತಂ ಚಂದ್ರಶೇಖರಂ ॥ ೯ ॥

॥ ಶ್ರೀಕೃಷ್ಣ ಉವಾಚ ॥

ಕಿಂ ಕೃತಸ್ತೇಽಪರಾಧೋ ವೈ ಮತ್ಪುತ್ರೇಣ ಕುಬುದ್ಧಿನಾ ।
ಯತಸ್ತ್ವಯಾ ಹತಃ ಸಂಖ್ಯೇಽನಿರುದ್ಧೋ ಮೂರ್ಛಿತಃ ಕೃತಃ ॥ ೧೦ ॥

ಹತಂ ಯದುಬಲಂ ಕಸ್ಮಾತ್ಕಸ್ಮಾತ್ತ್ವಂ ಚಾಗತೋ ರಣೇ ।
ಕಸ್ಮಾದ್ಯುದ್ಧಂ ಚ ಕೃತವಾನ್ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧೧ ॥

ಇತ್ಥಂ ಶ್ರೀಕೃಷ್ಣವಚನಂ ನಿಶಮ್ಯ ಪ್ರಮಥೇಶ್ವರಃ ।
ಉವಾಚ ಲಜ್ಜಿತೋ ಭೂತ್ವಾ ವಿಚಾರ್ಯ ಮಧುಸೂದನಂ ॥ ೧೨ ॥

---

೯. ಈ ರೀತಿಯಾಗಿ ಶಿವನು, ನಮಸ್ಕಾರ ಮಾಡುತ್ತಿರಲು, ಕೃಷ್ಣನು ಆ ಚಂದ್ರಶೇಖರನನ್ನು ಈರೀತಿ ಕೇಳಿದನು.

೧೦. ಆ ದುಷ್ಟಬುದ್ಧಿಯಾದ ನನ್ನ ಮಗನು ನಿನಗೆ ಏನು ಅಪರಾಧ ಮಾಡಿದನು? ಅದರಿಂದಲ್ಲವೇ ನೀನು ಯುದ್ಧದಲ್ಲಿ ಅವನನ್ನು ಕೊಂದು ಅನಿರುದ್ಧನನ್ನೂ ಮೂರ್ಛೆಯೊಂದುವಂತೆ ಮಾಡಿದುದು?

೧೧. ಈ ಯಾದವಸೇನೆಯಲ್ಲವನ್ನೂ ನೀನು ಕೊಂದುದೇಕೆ? ಮತ್ತು ಏತಕ್ಕೋಸ್ಕರ ಯುದ್ಧಕ್ಕೆ ಬಂದೆ? ಅಷ್ಟು ಅಲ್ಲದೆ ಯುದ್ಧಕ್ಕೆ ಕೈಹಾಕಿದುದಾದರೂ ಏಕೆ? ಇದೆಲ್ಲವನ್ನೂ ನೀನು ನನಗೆ ತಿಳಿಸಬೇಕು.

೧೨. ಎಂದುದಾಗಿ ಶ್ರೀಕೃಷ್ಣನು ತನ್ನನ್ನು ಪ್ರಶ್ನಿಸುತ್ತಲೇ ಪ್ರಮಥಾಧಿಪತಿಯಾದ ಶಿವನು ತನ್ನಲ್ಲಿ ಸ್ವಲ್ಪ ಹೊತ್ತು ವಿಚಾರ ಮಾಡುತ್ತಿದ್ದು ಬಳಿಕ ನಾಚಿಕೆಯನ್ನು ತಾಳಿದನು. ತರುವಾಯ ಶ್ರೀಕೃಷ್ಣನನ್ನು ಕುರಿತು ಈ ರೀತಿ ನುಡಿದನು.

|| ಶಂಕರ ಉವಾಚ ||

ದೇವದೇವ ಜಗನ್ನಾಥ ರಾಧಿಕೇಶ ಜಗನ್ಮಯ ।
ಪಾಹಿ ಪಾಹಿ ಕೃಪಾಕಾರಿನ್ನಿಸ್ತ್ರಪಂ ಮಾಂ ಕೃತಾಗಸಂ || ೧೩ ||

ತ್ವಂ ನ ಜಾನಾಸಿ ಕಿಂ ದೇವ ಕಥಯಿಷ್ಯಾಮಿ ಕಿಂ ತ್ವಹಂ ।
ಭಕ್ತಸ್ಯ ಪಾಲನಂ ಕರ್ತುಂ ಮಾಯಯಾ ತವ ಮೋಹಿತಃ || ೧೪ ||

ಅಹಮಾಗತವಾನ್ದೇವ ತ್ವಂ ಸರ್ವಂ ಕ್ಷಂತುಮರ್ಹಸಿ ।
ಶಾಸ್ತಾಹಂ ಸರ್ವಲೋಕಸ್ಯ ಮಾನಾದಿತಿ ಮಯಾ ಹರೇ || ೧೫ ||

ಮಾರಿತಾ ಸಂಗರೇ ಶೂರಾ ವೃಷ್ಣಯಃ ಕೃಷ್ಣದೇವತಾಃ ।
ತಸ್ಮಾತ್ಸಂತಃ ಸ್ವಯಂ ತ್ಯಕ್ತ್ವಾ ಪರಮೈಶ್ವರ್ಯಮೀಪ್ಸಿತಂ || ೧೬ ||

ಧ್ಯಾಯಂತೇ ಸತತಂ ಕೃಷ್ಣಪಾದಾಬ್ಜಂ ತೇ ನಿರಾಪದಂ ।
ಸುಖಂ ದುಃಖಂ ನೃಣಾಂ ತಾವದ್ಯಾವತ್ಕೃಷ್ಣೇನ ಮಾನಸಂ || ೧೭ ||

---

೧೩. ಹೇ ದೇವದೇವ! ಜಗತ್ಪ್ರಭು, ರಾಧಾಕಾಂತ! ಹೇ ಜಗನ್ಮಯ! ಕೃಪಾಳು! ಅಪರಾಧವನ್ನು ಮಾಡಿ ನಚಿಕೆಯಿಲ್ಲದೆ ಇರುವ ನನ್ನನ್ನು ಕಾಪಾಡು! ಕಾಪಾಡು.

೧೪-೧೫. ಹೇ ದೇವ, ನಿನಗೆ ಇದೇನೂ ತಿಳಿಯದೇ? ನಾನು ನಿನಗೆ ಏನು ತಿಳಿಯಪಡಿಸಲಿ? ನಿನ್ನ ಮಾಯೆಯಿಂದ ಭ್ರಾಂತಿಗೊಳಗಾದ ನಾನು ನಿನ್ನ ಭಕ್ತರನ್ನು ಸಲಹುವನೆಂದು ಈ ಯುದ್ಧರಂಗಕ್ಕೆ ಬಂದೆನು ಇದೆಲ್ಲವನ್ನೂ ನೀನು ಕ್ಷಮಿಸಬೇಕು. ಹೇ ಹರೇ! ಎಲ್ಲರನ್ನೂ ನಾನೇ ಆಳುವೆನೆಂಬ ಸಲ್ಲದ ಅಭಿಮಾನಕ್ಕೆ ಒಳಗಾದ ನಾನು—

೧೬-೧೭. ನಿನ್ನನ್ನೇ ನೆಚ್ಚಿಕೊಂಡಿರುವ ಶೂರರಾದ ವೃಷ್ಣಿಗಳನ್ನು ಯುದ್ಧದಲ್ಲಿ ಕೊಂದುಬಿಟ್ಟೆನು. ಆದುದರಿಂದಲೇ ಸತ್ಪುರುಷರಾದವರು ತಮಗೆ ಬೇಕಾದ ಅತ್ಯುನ್ನತಪದವಿಯು ದೊರೆತರೂ ಅದಕ್ಕಾಸೆಪಡದೆ ಅದನ್ನು ನಿರ್ಲಕ್ಷಿಸಿ, ನಿರಾಪದವೆನಿಸಿದ ನಿನ್ನ ಪಾದಾರವಿಂದಗಳನ್ನು ಸರ್ವದಾ ಧ್ಯಾನಿಸುತ್ತಿರುವರು. ಹೇ ಕೃಷ್ಣಾ! ಎಲ್ಲಿಯುವರಿಗೆ ಮನಸ್ಸು ನೆಲೆಗೊಳ್ಳುವುದಿಲ್ಲವೋ ಅಲ್ಲಿಯುವರೆಗೆ ಮಾನವನನ್ನು ಸುಖವೂ, ದುಃಖವೂ ಪೀಡಿಸುತ್ತಿರುವುದು.

ಕೃಷ್ಣೇ ಮನಸಿ ಸಂಜಾತೋ ಭಕ್ತಿಖಡ್ಗೋ ಮರತ್ಯಯೋಃ ।
ನರಾಣಾಂ ಕರ್ಮವೃಕ್ಷಾಣಾಂ ಮೂಲಚ್ಛೇದಂ ಕರೋತಿ ಯಃ ॥ ೧೮ ॥

ಮದ್ಭಕ್ತಿಬಲದರ್ಪಿಷ್ಟಾ ಮತ್ಪ್ರಭುಂ ತ್ವಾಂ ಯದೂತ್ತಮಂ ।
ನ ಮನ್ಯಂತೇ ಚ ತೇ ಸರ್ವೇ ಯಾಸ್ಯಂತಿ ನಿರಯಂ ಧ್ರುವಂ ॥ ೧೯ ॥

ಇತ್ಯುಕ್ತ್ವಾ ಶಂಕರಸ್ತೂಷ್ಣೀಂ ಭೂತ್ವಾ ಕೃಷ್ಣಸ್ಯ ಪಾದಯೋಃ ।
ಪಪಾತ ದಂಡವದ್ಭಕ್ತ್ಯಾ ಹ್ಯಶ್ರುಪೂರ್ಣಾಕುಲೇಕ್ಷಣಃ ॥ ೨೦ ॥

ಉತ್ಥಾಪ್ಯಾಶ್ವಾಸ್ಯ ತಂ ರುದ್ರಂ ಪಾರ್ಶ್ವತಸ್ತತ್ರದರ್ಶನಾತ್ ।
ಮಿಲಿತ್ವಾ ಭಗವಾನ್ಕೃಷ್ಣ ಆಲುಲೋಕೆ ಸುಧಾರ್ದ್ರದೃಕ್ ॥ ೨೧ ॥

---

೧೮. ಮಾನವರು ಮಾಡಿದ ಪ್ರಾಚೀನಕರ್ಮಗಳೆಂಬ ಮಹಾವೃಕ್ಷಗಳ ಬೇರುಗಳನ್ನು ಕತ್ತರಿಸುವಂತಹ ಹರಿತವಾದ ಕತ್ತಿಯು ಯಾವುದೆಂದರೆ ಅವರ ಮನಸ್ಸಿನಲ್ಲಿರುವ ಶ್ರೀಕೃಷ್ಣವಿಷಯಕವಾದ ನಿರತಿಶಯ ಭಕ್ತಿಯೊಂದೇ (ಆ ಕೃಷ್ಣ ಭಕ್ತಿಯೇ ಮಾನವರ ಕರ್ಮರಾಶಿಯನ್ನು ಸಹಮೂಲವಾಗಿ ನಾಶಪಡಿಸುವುದು.) ಎಂದು ತಿಳಿದಿರುವೆನು.

೧೯. ಯಾವ ಮಾನವರು ನನ್ನ ಭಕ್ತರಾಗಿರುವೆವೆಂಬ ಹೆಮ್ಮೆಯಿಂದ, ನನಗೂ ಪ್ರಭುವಾದ ಯದುಶ್ರೇಷ್ಠನಾದ ನಿನ್ನನ್ನು ಸನ್ಮಾನಿಸದೆ ಇರುವರೋ ಅಂಥವರು ಖಂಡಿತವಾಗಿಯೂ ನರಕಕ್ಕೆ ಹೋಗುವರು.

೨೦. ಈರೀತಿ ನುಡಿದು ಶಿವನು ಸುಮ್ಮನಾದನು. ಬಳಿಕ ತಾನು ಮಾಡಿದ ಅಪರಾಧಕ್ಕಾಗಿ ಮರುಗಿ ಕಣ್ಣೀರು ತುಂಬಿದವನಾಗಿ ಭಕ್ತಿಯಿಂದ ಆ ಶ್ರೀಕೃಷ್ಣನ ಕಾಲುಗಳಮೇಲೆ ದಂಡಾಕಾರವಾಗಿ ಬಿದ್ದುಬಿಟ್ಟನು.

೨೧. ಆಗ ಶ್ರೀಕೃಷ್ಣನು ಆ ಶಿವನನ್ನು ಮೇಲಕ್ಕೆಬ್ಬಿಸಿ ಅವನನ್ನು ಸಂತೈಸಿ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅಮೃತಮಯವಾದ ದೃಷ್ಟಿಯಿಂದ ಅವನನ್ನು ನೋಡಿದನು.

ಆಹ ಕೃಷ್ಣಃ ಸುರಾಸ್ಸರ್ವೇ ಕುರ್ವಂತಿ ಭಕ್ತಪಾಲನಂ ।
ತ್ವಯಾ ಜುಗುಪ್ಸಿತಂ ಕರ್ಮ ಕಿಂ ಕೃತಂ ಭಕ್ತಪಾಲನೇ ॥ ೨೨ ॥

ಮಮಾಸಿ ಹೃದಯೇ ತ್ವಂ ತು ಭವತೋ ಹೃದಯೇ ಹ್ಯಹಂ ।
ಆವಯೋರಂತರಂ ನಾಸ್ತಿ ಮೂಢಾಃ ಪಶ್ಯಂತಿ ದುರ್ಧಿಯಃ ॥ ೨೩ ॥

ತ್ವಾಂ ನಮಂತಿ ಚ ಮದ್ಭಕ್ತಾ ಸ್ತ್ವದ್ಭಕ್ತಾ ಮಾಂ ಸದಾಶಿವ ।
ಯೇ ನ ಮನ್ಯಂತಿ ಮದ್ವಾಕ್ಯಂ ಯಾಸ್ಯಂತಿ ನರಕಂ ಚ ತೇ ॥ ೨೪ ॥

ಇತ್ಯುಕ್ತ್ವಾ ಭಗವಾನ್ಕೃಷ್ಣೋ ಹತಂ ಪುತ್ರಂ ಸುನಂದನಂ ।
ದೃಷ್ಟ್ಯಾ ಪೀಯೂಷವರ್ಷಿಣ್ಯಾ ಜೀವಯಾಮಾಸ ಸಂಯುಗೇ ॥ ೨೫ ॥

---

೨೨. ಬಳಿಕ ಆ ಶಂಕರನನ್ನು ಕುರಿತು ಇಂತೆಂದನು. "ಎಲ್ಲ ದೇವತೆಗಳೂ ತಮ್ಮ ತಮ್ಮ ಭಕ್ತರನ್ನು ಕಾಪಾಡುವುದು ನಿಜ. ಆದರೆ, ಭಕ್ತರನ್ನು ಸಲಹಲು ಬಂದ ನೀನು ಏಕೆ ಇಂತಹ ಹೀನಾಯವಾದ ಕೆಲಸವನ್ನು ಮಾಡಿದೆ?

೨೩. ಇರಲಿ. ನೀನು ನನ್ನ ಹೃದಯವೆನಿಸಿರುವೆ. ನಿನ್ನ ಹೃದಯವೇ ನಾನು. ನನಗೂ, ನಿನಗೂ ಯಾವ ಭೇದವೂ ಇಲ್ಲವು. ಆ ರೀತಿ ಭೇದಬುದ್ಧಿಯನ್ನು ಮಾಡುವವರು ಬುದ್ಧಿಹೀನರೆಂದೂ ಮತಿಗೆಟ್ಟವರೆಂದೂ ಭಾವಿಸಬೇಕು.

೨೪. ಎಲೈ ಸದಾಶಿವನೇ! ನಿಜವಾಗಿಯೂ ನನ್ನ ಭಕ್ತರಾದವರು ನಿನ್ನನ್ನು ನಮಸ್ಕರಿಸುವರು. ನಿನ್ನ ಭಕ್ತರೂ ನನ್ನನ್ನು ನಮಸ್ಕರಿಸುವರು. ಯಾರು ಈ ನನ್ನ ಮಾತಿಗೆ ಬೆಲೆಯನ್ನು ಕೊಡದೆ ಇರುವರೋ ಅವರು ನರಕಭಾಗಿಗಳಾಗುವರು."

೨೫. ಹೀಗೆಂದು ಭಗವಂತನಾದ ಶ್ರೀಕೃಷ್ಣನು ನುಡಿದು ಯುದ್ಧದಲ್ಲಿ ಮಡಿದು ಬಿದ್ದಿದ್ದ ತನ್ನ ಪುತ್ರನಾದ ಸುನಂದನನ್ನು ಅಮೃತಮಯನಾದ ದೃಷ್ಟಿಯಿಂದ ನೋಡಿ ಬದುಕಿಸಿದನು.

ತತ್ಪಶ್ಚಾದನಿರುದ್ಧಸ್ಯ ಹೃದಯಾಚ್ಛೂಲಮೇವ ಚ ।
ಶನೈಃ ಶನೈಃ ಸಮಾಕೃಷ್ಯ ಜೀವಯಾಮಾಸ ತಂ ಹರಿಃ ॥ ೨೬ ॥

ತತ್ಪಶ್ಚಾದ್ಯಾದವಾನ್ಸರ್ವಾನ್ ನಿಹತಾನ್ ಸಂಯುಗೇ ಭೃಶಂ ।
ಅಜೀವಯತ್ಸುಧಾದೃಷ್ಟ್ಯಾ ಕೃಷ್ಣಸ್ತು ಪ್ರಭುರೀಶ್ವರಃ ॥ ೨೭ ॥

ತಾವತ್ಸದುಂದುಭಿರವಂ ಪುಷ್ಪವೃಷ್ಟಿಂ ದಿವೌಕಸಃ ।
ಉತ್ಸಾಹಲಕ್ಷಣಾಂ ಚಕ್ರುಃ ಪ್ರಾಸಾದ್ಯ ಗರುಡಧ್ವಜಂ ॥ ೨೮ ॥

ಸರ್ವತ್ರೈಲೋಕ್ಯನೇತಾರಂ ಕೃಷ್ಣಂ ದೃಷ್ಟ್ವಾ ಯದೂತ್ತಮಾಃ ।
ಉತ್ಥಾಯ ಸಂಭ್ರಮಾಚ್ಚಕ್ರುರ್ಜಯಾರಾವಂ ಮುದಾನ್ವಿತಾಃ ॥ ೨೯ ॥

ಅಥೋತ್ಥಿತೋ ಬಲ್ವಲಸ್ತು ಮಹಾದೇವೇನ ರಕ್ಷಿತಃ ।
ಕ್ವ ಗತಶ್ಚಾನಿರುದ್ಧೋ ವೈ ಬ್ರುವನ್ವಾಕ್ಯಂ ರುಷಾನ್ವಿತಃ ॥ ೩೦ ॥

---

೨೬. ಅದಾದ ಬಳಿಕ ಅನಿರುದ್ಧನ ಹೃದಯಭಾಗದಲ್ಲಿ ನೆಟ್ಟುಹೋಗಿದ್ದ ಶೂಲಾಯುಧವನ್ನು ಮೆಲ್ಲಮೆಲ್ಲನೆ ಈಚೆಗೆಳೆದು ಅವನನ್ನೂ ಬದುಕಿಸಿದನು.

೨೭. ಅನಂತರ ಯುದ್ಧದಲ್ಲಿ ಹೋರಾಡಿ ಪ್ರಾಣಗಳನ್ನು ತೊರೆದಿದ್ದ ಯಾದವರೆಲ್ಲರನ್ನೂ ಅಮೃತದೃಷ್ಟಿಯಿಂದ ನೋಡಿ ಬದುಕಿಸಿದನು.

೨೮. ಆ ಸಮಯದಲ್ಲಿ ದೇವತೆಗಳು ಗರುಡಧ್ವಜನಾದ ಆ ಶ್ರೀಕೃಷ್ಣನನ್ನು ನಮಸ್ಕರಿಸಿ ಉತ್ಸಾಹಸೂಚಕವಾಗಿ ನಗಾರಿಗಳನ್ನು ಬಾರಿಸಿದರು. ಪುಷ್ಪವೃಷ್ಟಿಯನ್ನು ಸುರಿಸಿದರು.

೨೯. ಅಗ ಮೂರು ಲೋಕಗಳಿಗೂ ಪ್ರಭುವೆನಿಸಿದ ಆ ಶ್ರೀಕೃಷ್ಣನನ್ನು ಕಂಡು ಯದುವೀರರೆಲ್ಲರೂ ಸಂಭ್ರಮದಿಂದ ಎದ್ದು ನಿಂತು ಸಂತೋಷದಿಂದ ಜಯಜಯಧ್ವನಿಯನ್ನು ಮಾಡಿದರು.

೩೦. ಅನಂತರ ಶಿವನಿಂದ ಸಂರಕ್ಷಿಸಲ್ಪಟ್ಟ ವಲ್ವಲನು ಮೂರ್ಛೆಯಿಂದೆಚ್ಚೆತ್ತು "ಅನಿರುದ್ಧನೆಲ್ಲಿಹೋದನು' ಎಂಬುದಾಗಿ ಕೋಪವಾಕ್ಯಗಳನ್ನಾಡುತ್ತಾ ಮೇಲಕ್ಕೆದ್ದನು.

ತತಃ ಶರ್ವೇಣ ದೈತ್ಯಸ್ತು ಬೋಧಿತೋ ವಚನೈಃ ಶುಭೈಃ ।
ಜ್ಞಾತ್ವಾ ಕೃಷ್ಣಸ್ಯ ಮಾಹಾತ್ಮ್ಯಂ ಮುದಿತೋಽಭೂನ್ಮಹಾಮನಾಃ ॥೩೦॥

ತತಃ ಪ್ರಣಮ್ಯ ಗೋವಿಂದಂ ಸ್ತುತ್ವಾ ದೈತ್ಯಸ್ತು ಬಲ್ವಲಃ ।
ತುರಗಂ ಪ್ರದದೌ ರಾಜನ್ ಬಹುದ್ರವ್ಯೇಣ ಸಂಯುತಂ ॥ ೩೧ ॥

ತತೋ ಯಜ್ಞಹಯಂ ನೀತ್ವಾ ಪುತ್ರಪೌತ್ರಪರಿವೃತಃ ।
ಸೇತುಮಾರ್ಗೇಣ ಕೃಷ್ಣಸ್ತು ಪ್ರಯಯೌ ಪಶ್ಚಿಮಾಂ ದಿಶಂ ॥ ೩೩ ॥

ಕೃಷ್ಣೇ ಗತೇ ಭಗವತಿ ರಾಜ್ಯೇ ಸಂಸ್ಥಾಪ್ಯ ಬಲ್ವಲಂ ।
ಕೈಲಾಸಂ ಪ್ರಯಯೌ ರುದ್ರಃ ಸಗಣಸ್ತು ಸಭೈರವಃ ॥ ೩೪ ॥

---

೩೦. ಆಗ ಶಿವನು ಶುಭಕರವಾದ ವಾಕ್ಯಗಳಿಂದ ಆ ವಲ್ವಲನಿಗೆ ತತ್ವಾಂಶವನ್ನು ಬೋಧಿಸಲು, ಉದಾರವಾದ ಮನಸ್ಸುಳ್ಳ ಆ ದೈತ್ಯನು ಕೃಷ್ಣನ ಮಹಿಮೆಯನ್ನು ಅರಿತು ಬಹಳ ಸಂತೋಷವನ್ನು ತಾಳಿದನು.

೩೧. ಅನಂತರ ಆ ವಲ್ವಲದೈತ್ಯನು ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ಆತನನ್ನು ಸ್ತುತಿಸಿ, ಅನೇಕ ಧನಕನಕಾದಿಗಳೊಡನೆ ತಾನು ಕಟ್ಟಿಹಾಕಿದ್ದ ಯಜ್ಞಾಶ್ವವನ್ನು ಹಿಂದಕ್ಕೆ ಒಪ್ಪಿಸಿದನು.

೩೩. ಅನಂತರ ಶ್ರೀಕೃಷ್ಣನು ತನ್ನ ಮಕ್ಕಳು ಮೊಮ್ಮಕ್ಕಳೊಡಗೂಡಿ ಆ ಯಜ್ಞಾಶ್ವದೊಡನೆ ಸೇತುವಿನ ಮಾರ್ಗವಾಗಿ ಪಶ್ಚಿಮದಿಕ್ಕಿಗೆ ಪ್ರಯಾಣ ಮಾಡಿದನು.

೩೪. ಭಗವಂತನಾದ ಶ್ರೀಕೃಷ್ಣನು ತೆರಳುತ್ತಲೇ ಶಿವನು ವಲ್ವಲನನ್ನು ಆ ರಾಜ್ಯದಲ್ಲಿ ನಿಲ್ಲಿಸಿ ಭೈರವನೊಡನೆಯೂ, ಗಣಗಳೊಡನೆಯೂ ಕೈಲಾಸಕ್ಕೆ ತೆರಳಿದನು.

ಏತತ್ಕೃಷ್ಣಚರಿತ್ರಂ ತು ಯೇ ಶೃಣ್ವಂತಿ ಗೃಹೇ ಜನಾಃ ।
ತೇಷಾಂ ಸಾಹಾಯ್ಯಂ ಭಗವಾನ್ ಕರಿಷ್ಯತಿ ಸದಾ ಹರಿಃ ॥ ೩೫ ॥

ಇತಿ ಶ್ರೀ ಗರ್ಗಸಂಹಿತಾಯಾಂ ಹಯಮೇಧಚರಿತ್ರೇ ಸುಮೇರೌ
ಅನಿರುದ್ಧವಿಜಯವರ್ಣನಂ ನಾಮೈಕೋನ-
ಚತ್ವಾರಿಂಶೋಽಧ್ಯಾಯಃ

---

೩೫. ಓ ರಾಜೇಂದ್ರ! ಈ ಕೃಷ್ಣಚರಿತ್ರವನ್ನು ಯಾವ ಮಾನವರು ಮನೆಯಲ್ಲಿ ಶ್ರವಣಮಾಡುವರೋ ಅವರಿಗೆ ಎಂದೆಂದಿಗೂ ಭಗವಂತನಾದ ಶ್ರೀ ಹರಿಯು ಸಹಾಯವನ್ನು ಮಾಡುವನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಅಶ್ವಮೇಧ ಚರಿತ್ರವಲ್ಲಿ
ಅನಿರುದ್ಧ ವಿಜಯ ವರ್ಣನವೆಂಬ ಮೂವತ್ತೊಂಭತ್ತನೆಯ
ಅಧ್ಯಾಯವು ಮುಗಿದುದು

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಚತ್ವಾರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಮುಕ್ತಸ್ತುರಗಃ ಕೃಷ್ಣೇನ ಪತ್ರಚಾಮರಭೂಷಿತಃ ।
ಪ್ರಯಯೌ ಸ ಬಹೂನ್ದೇಶಾನ್ನೇತ್ರಾಭ್ಯಾಂ ಚ ವಿಲೋಕಯನ್ ॥ ೧ ॥

ಬಲ್ವಲಂ ನಿರ್ಜಿತಂ ಶ್ರುತ್ವಾ ನಾನಾದೇಶಾಧಿಪಾ ನೃಪಾಃ ।
ಹಯಂ ನ ಜಗೃಹುಃ ಪ್ರಾಪ್ತಂ ಶ್ರೀಕೃಷ್ಣಸ್ಯ ಭಯಾನ್ನೃಪ ॥ ೨ ॥

ಇತ್ಥಂ ವ್ರಜನ್ ಭಾರತೇ ವೈ ಯದುವೀರೋ ತುರಂಗಮಃ ।
ಏಕಮಾಸೇನ ರಾಜೇಂದ್ರ ಪ್ರಾಪ್ತೋಽಭೂದ್ವ್ರಜಮಂಡಲೇ ॥ ೩ ॥

ನಲವತ್ತನೆಯ ಅಧ್ಯಾಯವು.

೧. ಗರ್ಗನು ಹೇಳತೊಡಗಿದನು:—ಇತ್ತಲಾಗಿ ಶ್ರೀಕೃಷ್ಣನಿಂದ ಬಿಡಲ್ಪಟ್ಟ ಹಣೆಯ ಪಟ್ಟಿಯಿಂದಲೂ, ಚಾಮರಾದಿ ರಾಜಚಿಹ್ನೆಗಳಿಂದಲೂ ಅಲಂಕೃತವಾದ ಆ ಯಜ್ಞಾಶ್ವವು ಅನೇಕ ದೇಶಗಳನ್ನು ನೋಡುತ್ತಾ ಮುಂದುವರಿಯಿತು.

೨. ಓ ರಾಜೇಂದ್ರ! ವಲ್ವಲನು ಸೋತುಹೋದ ಸಂಗತಿಯನ್ನು ಕೇಳಿದ್ದುದರಿಂದ ಆ ನಾನಾದೇಶದ ಅರಸರಲ್ಲಿ ಯಾವನೊಬ್ಬನೂ ಕೂಡ ಶ್ರೀಕೃಷ್ಣನ ಹೆದರಿಕೆಯಿಂದ ಆ ಯಜ್ಞಾಶ್ವವನ್ನು ಕಟ್ಟಿಹಾಕಲಿಲ್ಲ.

೩. ಈ ರೀತಿಯಾಗಿ ಆ ಯದುಗಳ ಯಜ್ಞಾಶ್ವವು ಭಾರತದಲ್ಲೆಲ್ಲಾ ಸಂಚರಿಸಿ ಒಂದೇ ತಿಂಗಳೊಳಗಾಗಿ ವ್ರಜಮಂಡಲಕ್ಕೆ ಬಂದು ಸೇರಿತು.

ತತಃ ಕೃಷ್ಣಾಂ ಸಮುತ್ತೀರ್ಯ ದೃಷ್ಟ್ವಾ ಬೃಂದಾವನಂ ವನಂ ।
ತಮಾಲಸ್ಯ ತಲೇ ರಾಜನ್ ಸ್ಥಿತೋಽಭೂದ್ಧಯಸತ್ತಮಃ ॥ ೪ ॥

ದೂರ್ವಾಂ ಚರಂತಂ ತುರಗಂ ವಿಲೋಕ್ಯ
ವಿಹಾಯ ಗಾಸ್ತೇ ಕಿಲ ಗೋಪಬಾಲಾಃ ।
ಸಮಾಯಯುಸ್ತೇ ನೃಪ ಕೌತುಕೇನ
ಹಯಸ್ಯ ಪಾರ್ಶ್ವೇ ಕರತಾಡನೈಶ್ಚ ॥ ೫ ॥

ಇತಿ ಪಶ್ಯತ್ಸು ಸರ್ವೇಷು ಶ್ರೀದಾಮಾ ಗೋಪನಾಯಕಃ ।
ಜಗ್ರಾಹ ಲೀಲಯಾ ರಾಜನ್ ಚರಂತಂ ಚಂಚಲಂ ಹಯಂ ॥ ೬ ॥

ಗೋಪಾಶೇನ ಹಯಂ ಬಧ್ವಾ ಗಲೇ ಗೋಪೈಃ ಪರಿವೃತಃ ।
ಕೇನೋತ್ಸೃಷ್ಟೋ ವದನ್ವಾಕ್ಯಂ ನಂದಸ್ಯ ನಿಕಟಂ ಯಯೌ ॥ ೭ ॥

---

೪. ಬಳಿಕ ಆ ಹಯರತ್ನವು ನೀಲವರ್ಣವಾದ ಯಮುನಾನದಿಯನ್ನು ದಾಟಿ ವೃಂದಾವನವನ್ನು ಕಂಡು ಅಲ್ಲಿದ್ದ ಒಂದಾನೊಂದು ಹೊಂಗೆಯಮರದ ಕೆಳಗಡೆ ನಿಂತುಬಿಟ್ಟಿತು.

೫. ಓ ರಾಜೇಂದ್ರ! ಆಗ ಅಲ್ಲಿದ್ದ ಗೋಪಬಾಲಕರೆಲ್ಲರೂ ಹುಲ್ಲನ್ನು ಮೆಯ್ಯುತ್ತಾ ನಿಂತಿರುವ ಆ ಯಜ್ಞಾಶ್ವವನ್ನು ಕಾಣುತ್ತಲೇ ತಾವು ಕಾಯುತ್ತಿದ್ದ ಹಸುಗಳನ್ನು ಬಿಟ್ಟು ಮಹಾ ಆಶ್ಚರ್ಯದಿಂದ ಚಪ್ಪಾಳೆ ತಟ್ಟುತ್ತಾ ಅದರ ಬಳಿಗೆ ಬಂದರು.

೬. ಈ ರೀತಿ ಅವರೆಲ್ಲರೂ ನೋಡುತ್ತಿರಲು ಆ ಗೊಲ್ಲರ ಯಜಮಾನನಾದ ಶ್ರೀದಾಮನೆಂಬುವನು ಅತ್ತಿತ್ತಲಾಗಿ ಓಡಾಡುತ್ತಾ ಹುಲ್ಲು ಮೇಯುತ್ತಿರುವ ಆ ಕುದುರೆಯನ್ನು ಲೀಲಾಮಾತ್ರದಿಂದ ಹಿಡಿದುಕೊಂಡನು.

೭. ಅನಂತರ ಹಸುವನ್ನು ಕಟ್ಟುವ ಹಗ್ಗದಿಂದ ಆ ಯಜ್ಞಾಶ್ವವನ್ನು ಕುತ್ತಿಗೆಯ ಬಳಿ ಕಟ್ಟಿ ಹಿಡಿದುಕೊಂಡು "ಯಾರು ಈ ಕುದುರೆಯನ್ನು ಬಿಟ್ಟವರು? ಎಂದು ಮುಂತಾಗಿ ಹೇಳುತ್ತಾ ಆ ಗೊಲ್ಲಹುಡುಗರೊಡನೆ ನಂದನ ಬಳಿಗೆ ಹೋದನು.

ಆಗತಂ ವಾಜಿನಂ ದೃಷ್ಟ್ವಾ ನಂದೋಽಪಿ ಹರ್ಷಪೂರಿತಃ ।
ತತ್ಪತ್ರಂ ವಾಚಯಿತ್ವಾಹ ಸರ್ವಾನ್ಗದ್ಗದಯಾ ಗಿರಾ ॥ ೮ ॥

ಉಗ್ರಸೇನಹಯಶ್ಚೈಷ ಪುರೇ ಮಮ ಸಮಾಗತಃ ।
ಪಾಲಿತೋಽಹ್ಯನಿರುದ್ಧೇನ ಮತ್ಪ್ರಪೌತ್ರೇಣ ಸರ್ವತಃ ॥ ೯ ॥

ಗೃಹ್ಣಾಮಿ ಯಜ್ಞತುರಗಂ ಮಿತ್ರಾಣಾಂ ಮಿಲನಾಯ ಚ ।
ತತಃ ಪ್ರಪೌತ್ರಂ ಪಶ್ಯಾಮಿ ಕೃಷ್ಣಾಕಾರಂ ಪ್ರಿಯಂಕರಂ ॥ ೧೦ ॥

ಇತ್ಯುಕ್ತ್ವಾ ನಂದರಾಜಸ್ತು ದ್ರಷ್ಟುಂ ಗೋಪೈಃ ಪರಿವೃತಃ ।
ಕಥಯಿತ್ವಾ ಯಶೋದಾಗ್ರೇಽಭಿಪ್ರಾಯಂ ನಿರ್ಯಯೌ ಪುರಾತ್ ॥೧೧ ॥

---

೮. ಆ ನಂದನೂ ಕೂಡ ಕುದುರೆಯು ಬಂದುದನ್ನು ಕಂಡು ಸಂತೋಷವನ್ನು ತಾಳಿದನು. ಅನಂತರ ಅದರ ಹಣೆಯಲ್ಲಿದ್ದ ಪತ್ರಿಕೆಯನ್ನು ಓದುತ್ತಲೇ ಸಂತೋಷದಿಂದ ಗದ್ಗದ ಧ್ವನಿಯುಳ್ಳವನಾಗಿ ಅವರೆಲ್ಲರನ್ನೂ ಕುರಿತು ಈ ರೀತಿ ಹೇಳಿದನು.

೯. "ನಮ್ಮ ಊರಿಗೆ ಬಂದಿರುವ ಈ ಕುದುರೆಯು ಉಗ್ರಸೇನನದು ನನ್ನ ಮರಿಮಗನಾದ ಅನಿರುದ್ಧನು ಇದಕ್ಕೆ ಬೆಂಗಾವಲಾಗಿ ಬಂದಿರುವನು.

೧೦. ನಮ್ಮೆಲ್ಲ ಬಾಂಧವರೊಡನೆಯೂ, ಸ್ನೇಹಿತರೊಡನೆಯೂ ಒಟ್ಟಾಗಿ ಕಲೆಯುವುದಕ್ಕೋಸ್ಕರ ಈ ಯಜ್ಞಾಶ್ವವನ್ನು ಕಟ್ಟಿಹಾಕುವೆನು. ಅನಂತರ ಕೃಷ್ಣನನ್ನೇ ಹೋಲುವ ರೂಪವುಳ್ಳ ನನ್ನ ಪ್ರೀತಿಯನ್ನು ಹೆಚ್ಚಿಸುವ ಆ ಮರಿಮಗನನ್ನು ಕಾಣುವೆನು."

೧೧. ಎಂಬುದಾಗಿ ಗೋಪರಾಜನಾದ ಆ ನಂದನು ಅವರಿಗೆ ಹೇಳಿ ಯಶೋದೆಗೂ ಸಹ ತನ್ನ ಅಭಿಪ್ರಾಯವನ್ನು ತಿಳಿಸಿ ಅನಂತರ ಎಲ್ಲ ಗೋಪರೊಡನೆಯೂ ಕಲೆತು ಅನಿರುದ್ಧನನ್ನು ಕಾಣಲು ಊರಿನಿಂದ ಹೊರಕ್ಕೆ ಹೊರಟು ಬಂದನು.

ತದೈವ ಯಾದವಾಃ ಸರ್ವೇ ಭೋಜವೃಷ್ಣ್ಯಂಧಕಾದಯಃ ।
ಹಯಸ್ಯ ಪೃಷ್ಠತೋ ಲಗ್ನಾಸ್ತತ್ರಾಜಗ್ಮುರ್ನೃಪೇಶ್ವರ　　॥ ೧೨ ॥

ವಿಲೋಕಯಂತೋ ನಯಪಾಲತೀರ್ಥಂ
ತಥಾ ಚ ಮಾರ್ಗೇ ಮಿಥಿಲಾಮಯೋಧ್ಯಾಂ ।
ಬರ್ಹಿಷ್ಮತೀಂ ಚೈವ ಹಿ ಕಾನ್ಯಕುಬ್ಜಂ
ಸಾಂಕರ್ಷಣಂ ಗೋಕುಲಮೇವ ರಾಜನ್　　॥ ೧೩ ॥

ಮಾರ್ತಂಡಕನ್ಯಾಂ ಮಥುರಾಂ ಪುರೀಂ ಚ
ವಿರಾಜತೇ ಯತ್ರ ತು ಕೇಶವಶ್ಚ ।
ವೃಂದಾವನೇ ನಂದಪುರೇ ನೃಪೇಂದ್ರ
ಸಮಾಗತಾಃ ಕೃಷ್ಣಯುತಾಶ್ಚ ಸರ್ವೇ　　॥ ೧೪ ॥

ನಂದಗ್ರಾಮಂ ತತ್ರ ದದೃಷ್ಟ್ವಾ ರಥಸ್ಥೋ ನಂದನಂದನಃ ।
ಸರ್ವೇಷಾಮಗ್ರತೋ ಭೂತ್ವಾ ಹ್ಯಾಯಯೌ ಯಾದವೈರ್ವೃತಃ　॥ ೧೫ ॥

---

೧೨. ಓ ರಾಜೇಂದ್ರ! ಆ ಸಮಯಕ್ಕೆ ಸರಿಯಾಗಿ ಆ ಯಜ್ಞಾಶ್ವದ ಹಿಂದೆಯೇ ಭೋಜರು, ವೃಷ್ಣಿಗಳು, ಅಂಧಕರು ಮೊದಲಾದ ಯಾದವರೆಲ್ಲರೂ ಅಲ್ಲಿಗೇ ಬಂದರು.

೧೩-೧೪. ಆ ಯಾದವರು ಬರುವಾಗ ದಾರಿಯಲ್ಲಿ ನಯಪಾಪಾಲ ತೀರ್ಥವನ್ನೂ, ಮಿಥಿಲಾಪತ್ತನವನ್ನೂ, ಅಯೋಧ್ಯಾನಗರವನ್ನೂ, ಬರ್ಹಿಷ್ಮತಿಯನ್ನೂ, ಕನ್ಯಾಕುಬ್ಜನಗರವನ್ನೂ, ಸಂಕರ್ಷಣಪುರವನ್ನೂ, ಗೋಕುಲವನ್ನೂ ನೋಡುತ್ತಾ ಬಂದುದಲ್ಲದೆ, ಯಮುನಾನದಿಯನ್ನೂ, ಸಾನ್ನಿಧ್ಯದಿಂದ ಶೋಭಿಸುತ್ತಿರುವ ಮಥುರಾನಗರಿಯನ್ನೂ ವೃಂದಾವನವನ್ನೂ ದಾಟಿ ನಂದನ ನಿವಾಸವಾದ ಆ ಊರಿನ ಬಳಿಗೆ ಕೃಷ್ಣನೊಡನೆ ಬಂದಿದ್ದರು.

೧೫. ರಥವನ್ನೇರಿ ಬರುತ್ತಿದ್ದ ನಂದಕುಮಾರನಾದ ಆ ಶ್ರೀಕೃಷ್ಣನು ತನ್ನ ಪಾಲಕ ಪಿತೃವಿನ ಆ ಊರನ್ನು ಕಾಣುತ್ತಲೇ ಎಲ್ಲರಿಗಿಂತಲೂ ಮೊದಲು ಮುಂದಾಗಿ ಬಂದನು.

ದದರ್ಶ ತತ್ರ ಪುರತೋ ಗೋಪಾಲೈಃ ಪಿತರಂ ಹರಿಃ ।
ಸಂಸ್ಥಿತಂ ಚ ಪುರಸ್ಕೃತ್ಯ ವಾರಣೇಂದ್ರಮಲಂಕೃತಂ ॥ ೧೬ ॥
ವಾದಿತ್ರೈಃ ಶಂಖಶಬ್ದೈಶ್ಚ ಜಯಶಬ್ದೈರ್ನೃಪೇಶ್ವರ ।
ಪುಷ್ಪಾಲಂಕಾರಕಲಶಲಾಜಾದ್ಯೈಃ ಪರಿಭೂಷಿತಂ ॥ ೧೭ ॥
ತೈಶ್ಚ ಯಾದವಾಃ ಸರ್ವೇ ನೇಮುರ್ನಂದಂ ನಿರೀಕ್ಷ್ಯ ಚ ।
ಹರ್ಷಾಶ್ರುವಿಪ್ಲುತಾ ರಾಜನ್ನುದ್ಧವಾದ್ಯಾಶ್ಚ ತತ್ರ ವೈ ॥ ೧೮ ॥
ತದೈವ ನಂದರಾಜಸ್ಯ ದಕ್ಷಿಣಾಂಗಮಥಾಸ್ಫುರತ್ ।
ಉವಾಚ ದೃಷ್ಟ್ವಾ ಮನಸಿ ಹ್ಯುತ್ತಮಂ ಶಕುನಂ ನೃಪ ॥ ೧೯ ॥
ಅದ್ಯ ಪಶ್ಯಾಮಿ ನೇತ್ರಾಭ್ಯಾಂ ಕೃಷ್ಣಂ ಕಿಂ ಪ್ರಿಯವಾದಿನಂ ।
ಯಸ್ಮಾನ್ಮಮಾಂಗಃ ಸ್ಫುರತಿ ದಕ್ಷಿಣಶ್ಚ ಪ್ರಿಯಂಕರಃ ॥ ೨೦ ॥

೧೬-೧೭. ಆಗ ತನ್ನನ್ನು ಎದುರುಗೊಳ್ಳಲು ದಿವ್ಯವಾಗಿ ಅಲಂಕರಿಸಿದ್ದ ಮದ್ದಾನೆಯನ್ನು ಮುಂದಿಟ್ಟುಕೊಂಡು, ಧ್ವನಿಗೈಯ್ಯುತ್ತಿರುವ ಶುಭವಾದ್ಯಗಳಿಂದಲೂ, ಶಂಖಗಳಿಂದಲೂ, ಜಯಶಬ್ದಗಳಿಂದಲೂ, ಹೂವಿನ ಮಾಲೆಗಳು, ದಿವ್ಯಾಭರಣಗಳು, ಪೂರ್ಣಕಲಶಗಳು ಮುಂತಾದ ಮಂಗಳದ್ರವ್ಯಗಳಿಂದಲೂ ಕೂಡಿ ಗೋಪಾಲಕರೊಡನೆ ಬರುತ್ತಿರುವ ತನ್ನ ತಂದೆಯಾದ ನಂದನನ್ನು ಕಂಡನು.

೧೮. ಓ ರಾಜೇಂದ್ರ! ಆಗ ಉದ್ಧವ ಮೊದಲಾದ ಯಾದವರೆಲ್ಲರೂ ಆನಂದದಿಂದ ಕಣ್ಣೀರನ್ನು ಸುರಿಸುತ್ತಾ ನಂದನನ್ನು ಕಂಡು ನಮಸ್ಕಾರವನ್ನು ಮಾಡಿದರು.

೧೯. ಆ ಸಮಯಕ್ಕೆ ಸರಿಯಾಗಿ ನಂದನ ಬಲಗಣ್ಣು ಅದುರಿತು. ಅದನ್ನು ಕಂಡು ತನಗೆ ಒಳ್ಳೆಯ ಶಕುನವಾಯಿತೆಂದೆಣಿಸಿ ತನ್ನ ಮನಸ್ಸಿನಲ್ಲಿ ಇಂತು ನುಡಿದುಕೊಂಡನು.

೨೦. '' ನನ್ನ ದೇಹದ ಬಲಪಾರ್ಶ್ವವು ಪ್ರಿಯ ವಾರ್ತೆಯನ್ನು ಅರುಹುವಂತೆ ಅಲುಗಿದುದರಿಂದ ಈ ದಿನ ನನ್ನೀಕಣ್ಣುಗಳಿಂದ ಮಧುರವಾಗಿ ಮಾತನಾಡುತ್ತಾ ಬರುವ ಶ್ರೀಕೃಷ್ಣನನ್ನು ನೋಡುವೆನೇನು ?

ಮನ್ನೇತ್ರಗೋಚರಃ ಕೃಷ್ಣೋ ಯದಾ ಭೂಯಾತ್ತದಾ ಹ್ಯಹಂ ।
ಗವಾಂ ಲಕ್ಷಂ ಪ್ರದಾಸ್ಯಾಮಿ ಬ್ರಾಹ್ಮಣೇಭ್ಯೋಽಹ್ಯಲಂಕೃತಂ ॥ ೨೧ ॥

ಇತ್ಯುಕ್ತ್ವಾ ವಚಸಂ ನಂದೋ ವಿರರಾಮ ಯದಾ ನೃಪ ।
ತದಾಶೃಣೋತ್ಸ್ವಪುತ್ರಸ್ಯಾಗಮನಂ ವ್ರಜವಾಸಿಭಿಃ ॥ ೨೨ ॥

ಶ್ರೀಕೃಷ್ಣಾಗಮನಂ ಶ್ರುತ್ವಾ ನಂದೋ ವಿರಹವಿಪ್ಲುತಃ ।
ಪಶ್ಯನ್ಹರಿಂ ಚ ಸರ್ವೇಷಾಂ ವಿಚಚಾರ ರುದನ್ನಿವ ॥ ೨೩ ॥

ವದನ್ಕೃಷ್ಣೇತಿ ಕೃಷ್ಣೇತಿ ಗಿರಾ ಗದ್ಗದಯಾ ಭೃಶಂ ।
ಹೇ ಕೃಷ್ಣಚಂದ್ರ ಕ್ವ ಗತೋ ದುಃಖಿತಂ ಮಾಂ ನ ಪಶ್ಯಸಿ ॥ ೨೪ ॥

ತತೋ ನಿರೀಕ್ಷ್ಯ ಪಿತರಂ ಶ್ರೀಕೃಷ್ಣಃ ಪಿತೃವತ್ಸಲಃ ।
ಅವಪ್ಲುತ್ಯ ರಥಾತ್ತೂರ್ಣಂ ಪಪಾತ ಚರಣೌ ಪಿತುಃ ॥ ೨೫ ॥

---

೨೧. ಆ ಶ್ರೀಕೃಷ್ಣನೇನಾದರೂ ನನ್ನ ಕಣ್ಣಿಗೆ ಬಿದ್ದರೆ ಆ ಕ್ಷಣವೇ ಸೊಗಸಾಗಿ ಅಲಂಕರಿಸಲ್ಪಟ್ಟ ಒಂದು ಲಕ್ಷ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡುವೆನು.''

೨೨. ಹೀಗೆ ಆ ನಂದನು ತನ್ನ ಮನಸ್ಸಿನಲ್ಲಿ ಹೇಳಿಕೊಳ್ಳುವಷ್ಟರಲ್ಲಿಯೇ ಆ ವ್ರಜನಿವಾಸಿಗಳು ತನ್ನ ಮಗನಾದ ಶ್ರೀಕೃಷ್ಣನು ಬರುತ್ತಿರುವನೆಂದು ಆಡುತ್ತಿದ್ದ ಪ್ರಿಯವಾಕ್ಯವನ್ನು ಕೇಳಿದನು.

೨೩-೨೪. ಅದನ್ನು ಕೇಳುತ್ತಲೇ ಬಹುಕಾಲದಿಂದಲೂ ಪುತ್ರನ ವಿರಹದಿಂದ ಪರಿತಪಿಸುತ್ತಿದ್ದ ನಂದನು, ಶ್ರೀಕೃಷ್ಣನನ್ನು ಕಂಡು ಬಹುವಾಗಿ ಗದ್ಗದ ಧ್ವನಿಯಿಂದ "ಕೃಷ್ಣ! ಕೃಷ್ಣ!'' ಎಂತಲೂ, ಹೇ ಕೃಷ್ಣಾ! ಎಲ್ಲಿಗೆ ಹೊರಟು ಹೋದೆ? ದುಃಖದಿಂದ ತಲ್ಲಣಿಸುತ್ತಿರುವ ನನ್ನನ್ನು ನೋಡುವುದಿಲ್ಲವೇ?'' ಎಂದು ಮುಂತಾಗಿಯೂ ಹೇಳುತ್ತಾ ಎಲ್ಲರ ಮುಂದೆಯೂ ಅಳುತ್ತಿರುವಂತೆ ಓಡಾಡತೊಡಗಿದನು.

೨೫. ಈರೀತಿ ಹಾತೊರೆಯುತ್ತಿದ್ದ ತನ್ನ ತಂದೆಯಾದ ನಂದನನ್ನು ಕಾಣುತ್ತಲೇ ಪಿತೃವತ್ಸಲನಾದ ಶ್ರೀಕೃಷ್ಣನು ತಟ್ಟನೆ ರಥದಿಂದ ಧುಮುಕಿ ಆತನ ಕಾಲ್ಗಳಮೇಲೆ ಪ್ರಣಾಮಮಾಡಿದನು.

ಶ್ರೀನಂದರಾಜಸ್ತನಯಂ ಸಮುತ್ಥಾಯ ಚಿರಾಗತಂ ।
ಸ್ನಾಪಯಾಮಾಸ ಸಲಿಲೈಃ ಕೃತ್ವಾ ವಕ್ಷಸಿ ನೇತ್ರಯೋಃ ॥ ೨೬ ॥
ಅಕ್ಷಿಭ್ಯಾಂ ಕೃಷ್ಣಚಂದ್ರಸ್ತು ಮುಮೋಚಾಶ್ರುಘೃಣಾತುರಃ ।
ಶ್ರೀದಾಮಾದೀನ್ ಸಖೀನ್ ದೃಷ್ಟ್ವಾ ಪಶ್ಚಾತ್ಪ್ರೇಮಪರಿಪ್ಲುತಾನ್ ॥ ೨೭ ॥
ಪೃಥಕ್ಪೃಥಕ್ಪರಿರೇಭೇ ಕೃಷ್ಣಃ ಪ್ರೇಮಪರಿಪ್ಲುತಃ ।
ಭಕ್ತಾನಾಂ ಕೋಽಸ್ತಿ ಮಾಹಾತ್ಮ್ಯಮಹೋ ವಕ್ತುಂ ಧರಾತಲೇ ॥೨೮॥
ನಂದಾದ್ಯಾ ರುರುದುರ್ಗೋಪಾಃ ಶ್ರೀಕೃಷ್ಣಾದ್ಯಾಶ್ಚ ಯಾದವಾಃ ।
ಪ್ರವಕ್ತುಂ ನ ಸಮರ್ಥಾಸ್ತೇ ಸರ್ವೇ ವಿರಹವಿಕ್ಲವಾಃ ॥ ೨೯ ॥
ಅಶ್ರುಪೂರ್ಣಮುಖಃ ಕೃಷ್ಣೋ ಗೋಪಾನ್ಗದ್ಗದಯಾ ಗಿರಾ ।
ಸರ್ವಾನಾಶ್ವಾಸಯಾಮಾಸ ಪ್ರೇಮಾನಂದಸಮಾಕುಲಾನ್ ॥ ೩೦ ॥

---

೨೬. ಬಳಿಕ ಆ ನಂದಗೋಪನು ಬಹು ದಿನಗಳಾದಮೇಲೆ ಮರಳಿ ತನ್ನ ಬಳಿಗೆ ಬಂದಿದ್ದ ಆ ಪ್ರಿಯಪುತ್ರನನ್ನ ಮೇಲಕ್ಕೆಬ್ಬಿಸಿ ಎದೆಗೆ ಅಪ್ಪಿಕೊಂಡು ಆನಂದಾಶ್ರುಗಳಿಂದ ಅಭಿಷೇಕಮಾಡಿದನು.

೨೭-೨೮. ಬಂಧುಸ್ನೇಹಕಾತುರನಾದ ಆ ಶ್ರೀಕೃಷ್ಣನೂ ಸಹ ಹರ್ಷದಿಂದ ಕಂಬನಿಯನ್ನು ಸೂಸಿದನು. ಅನಂತರ ತನ್ನ ಸ್ನೇಹಿತರಾದ ಶ್ರೀದಾಮ ಮೊದಲಾದ ಗೋಪರನ್ನು ಕಂಡು ಪ್ರೇಮದಿಂದ ಒಬ್ಬೊಬ್ಬರನ್ನಾಗಿ ಆಲಿಂಗಿಸಿದನು. ಆಹಾ! ಈ ಭೂಮಿಯಲ್ಲಿ ಯಾವನು ತಾನೇ ಭಕ್ತರ ಮಹಿಮೆಯನ್ನು ಕೊಂಡಾಡಬಲ್ಲನು ?

೨೯. ಆಗ ಪ್ರಿಯಬಂಧುಗಳನ್ನು ನೋಡಿದ ಸಂತೋಷದಿಂದ ನಂದ ಮೊದಲಾದ ಗೋಪರೂ, ಶ್ರೀಕೃಷ್ಣ ಮೊದಲಾದ ಯಾದವರೂ ಅತ್ತುಬಿಟ್ಟರು. ಆ ಸುಖಪರವಶತೆಯಿಂದ ಕೆಲಹೊತ್ತು ಯಾರಿಗೂ ಮಾತಾಡುವುದಕ್ಕೇ ಆಗಲಿಲ್ಲವು.

೩೦. ಆಗ ಹರ್ಷಾಶ್ರುಗಳಿಂದ ತುಂಬಿದ ಮುಖವುಳ್ಳ ಶ್ರೀಕೃಷ್ಣನು ಪ್ರೀತಿಯಿಂದಲೂ, ಆನಂದದಿಂದಲೂ ತನ್ಮಯರಾಗಿರುವ ಆ ಗೋಪಾಲಕರೆಲ್ಲರನ್ನೂ ಗದ್ಗದವಾಣಿಯಿಂದ ಸಮಾಧಾನಪಡಿಸಿದನು.

ಪರಿಪೂರ್ಣತಮಂ ಸಾಕ್ಷಾಚ್ಛ್ರೀಕೃಷ್ಣಂ ಜಗದೀಶ್ವರಂ ।
ತಾದೃಶಂ ದದೃಶುಃ ಸರ್ವೇ ಯಾದೃಶೋ ಮಥುರಾಂ ಗತಃ ॥ ೩೧ ॥

ನವೀನನೀರದಶ್ಯಾಮಂ ಕಿಶೋರವಯಸಂ ಶಿಶುಂ ।
ಶರತ್ಪ್ರಭಾತಕಮಲಕಾಂತಿಮೋಚನಲೋಚನಂ ॥ ೩೨ ॥

ಶರತ್ಪೂರ್ಣೇಂದುಶೋಭಾಢ್ಯಂ ಶೋಭಾಸ್ವಾಚ್ಛಾದನಾನನಂ ।
ಕೋಟಿಮನ್ಮಥಲಾವಣ್ಯಂ ಲೀಲಾನಂದಿತಸುಂದರಂ ॥ ೩೩ ॥

ಸಸ್ಮಿತಂ ಮುರಲೀಹಸ್ತಂ ದ್ವಿಭುಜಂ ಹ್ಯತಿಸುಂದರಂ ।
ತಡಿದ್ವಸ್ತ್ರಧರಂ ದೇವಂ ಮತ್ಸ್ಯಕುಂಡಲಿನಂ ಹರಿಂ ॥ ೩೪ ॥

ಚಂದನೋಕ್ಷಿತಸರ್ವಾಂಗಂ ಕೌಸ್ತುಭೇನ ವಿರಾಜಿತಂ ।
ಆಜಾನುಮಾಲತೀಮಾಲಾವನಮಾಲಾವಿಭೂಷಿತಂ ॥ ೩೫ ॥

---

೩೧. ಆಗ ಪರಿಪೂರ್ಣ ಸ್ವರೂಪನೂ, ಜಗತ್ಪ್ರಭುವೂ ಆದ ಆ ಶ್ರೀ ಕೃಷ್ಣನು ಹಿಂದೆ ತಾನು ಮಥುರಾಪಟ್ಟಣಕ್ಕೆ ಹೋದಾಗ ಯಾವ ವೇಷ ಭೂಷಣಗಳಿಂದ ಒಪ್ಪಿದ್ದನೋ ಅದೇ ವೇಷ ಭೂಷಣಗಳನ್ನು ತಾಳಿರುವವನಂತೆ ಅಲ್ಲಿದ್ದವರೆಲ್ಲರಿಗೂ ತೋರಿದನು.

೩೨-೩೬. ಆ ದಿವ್ಯರೂಪವನ್ನು ಏನೆಂದು ವರ್ಣಿಸಲಿ? ಅದೇ ಆಗ ತಾನೇ ನೀರನ್ನು ತುಂಬಿಕೊಂಡು ಮೇಲೇರಿ ಬರುತ್ತಿರುವ ಮೋಡದಂತೆ ಶ್ಯಾಮಲವಾದ ಶರೀರಕಾಂತಿ! ಅದೇ ಎಳೆವಯಸ್ಸು! ಅದೇ ಶರತ್ಕಾಲದ ಪ್ರಭಾತದಲ್ಲಿ ಅರಳುತ್ತಿರುವ ಕಮಲದ ಕಾಂತಿಯನ್ನು ಧಿಕ್ಕರಿಸುವ ಮುದ್ದಾದ ಕಣ್ಣುಗಳು! ಅದೇ ಕೋಟಿ ಮನ್ಮಥರ ಲಾವಣ್ಯವನ್ನೂ ಸೂರೆಗೊಂಡಿರುವ ಸೌಂದರ್ಯಸಂಪತ್ತು! ಅದೇ ಮೆಲುನಗೆ! ಅದೇ ಕೈಲಿರುವ ಕೊಳಲು! ಅದೇ ಎರಡು ತೋಳುಗಳು! ಅದೇ ಸೊಬಗು! ಅದೇ ಮಿಂಚನ್ನು ಹೋಲುವ ಪೀತಾಂಬರ! ಅದೇ ಮೀನಿನಂತೆ ಮುದ್ದಾಗಿ ಮೆರೆಯುತ್ತಿರುವ ಕಿವಿಯಲ್ಲಿನ ಕಡುಕುಗಳು! ಅದೇ ಮೈಗೆಲ್ಲಾ ತೊಡೆದುಕೊಂಡಿರುವ ದಿವ್ಯಗಂಧ! ಅದೇ

ಮಯೂರಪಿಚ್ಛಚೂಡಂ ಚ ಸದ್ರತ್ನಮುಕುಟೋಜ್ಜ್ವಲಂ ।
ಪಕ್ವಬಿಂಬಾಧಿಕೋಷ್ಠಂ ಚ ನಾಸಿಕೋನ್ನತಶೋಭನಂ ॥ ೩೭ ॥

ಏವಂ ಕೃಷ್ಣಸ್ಯ ರಾಜೇಂದ್ರ ರೂಪಂ ನೇತ್ರೈರ್ವ್ರಜೌಕಸಃ ।
ಪಪುರಾನಂದಸಂಮುಗ್ನಾಃ ಪೀಯೂಷಂ ಮಾನವಾ ಇವ ॥ ೩೭ ॥

ಅನಿರುದ್ಧಂ ತತೋ ನಂದಃ ಸಾಂಬಾದೀಂಶ್ಚೈವ ಯಾದವಾನ್ ।
ಆಶಿಷಂ ಪ್ರದದೌ ರಾಜನ್ ಪ್ರೀತಃ ಪ್ರೇಮಪರಿಪ್ಲುತಃ ॥ ೩೮ ॥

ತತಃ ಸರ್ವೈಶ್ಚ ಯದುಭಿಃ ಪುತ್ರಪೌತ್ರಪರಿವೃತಃ ।
ವಿವೇಶ ಸ್ವಪುರಂ ನಂದೋ ಗತದುಃಖೋ ಮಹಾಮತಿಃ ॥ ೩೯ ॥

ಅವಪ್ಲುತ್ಯ ರಥಾತ್ಕೃಷ್ಣಃ ಸಾಂಬಾದ್ಯೈಃ ಪರಿಭೂಷಿತಃ ।
ತ್ವರಂ ಸ್ವಮಾತುರ್ಭವನಮಾನಂದಂ ಪ್ರದದನ್ಯಯೌ ॥ ೪೦ ॥

ಎದೆಯಮೇಲೆ ಶೋಭಿಸುವ ಕೌಸ್ತುಭಮಣಿ! ಅದೇ ಮಂಡಿಯವರೆಗೂ ಇಳಿಬಿದ್ದು ಓಲಾಡುತ್ತಿರುವ ಜಾಜಿ ಮತ್ತು ತುಲಸಿಯ ದಂಡೆಗಳು! ಅದೇ ತೊಂಡೆ ಹಣ್ಣನ್ನು ನಾಚಿಸುವ ಚೆಂದುಟಿಗಳು! ಅದೇ ಎತ್ತರವಾದ ಮೂಗು!

೩೭. ಓ ರಾಜೇಂದ್ರ! ಇಂತಹ ದಿವ್ಯವಾದ ಶ್ರೀಕೃಷ್ಣನ ರೂಪವನ್ನು ಆ ವ್ರಜನಿವಾಸಿಗಳೆಲ್ಲರೂ ಅಮೃತವನ್ನು ಕಂಡ ಮಾನವರಂತೆ ಆನಂದದಿಂದ ಬಹುಹೊತ್ತು ಪಾನಮಾಡಿದರು.

೩೮. ಅನಂತರ ನಂದನು ಪ್ರೀತಿಯಿಂದ ಅನಿರುದ್ಧನಿಗೂ, ಸಾಂಬನೇ ಮೊದಲಾದ ಯಾದವ ಕುಮಾರರಿಗೂ ಆಶೀರ್ವಾದಗಳನ್ನು ಮಾಡಿದನು.

೩೯. ಆಮೇಲೆ ಮಹಾಪ್ರಾಜ್ಞನಾದ ಆ ನಂದನು ಬಂಧುಸಂದರ್ಶನದಿಂದ ಅದುವರೆಗೆ ತನಗಿದ್ದ ವಿಯೋಗ ದುಃಖವನ್ನೂ ಮರೆತು, ತನ್ನ ಪುತ್ರ ಪೌತ್ರರೊಡನೆಯೂ, ಇತರ ಯಾದವರೆಲ್ಲರೊಡನೆಯೂ ಕಲೆತು ತನ್ನ ಊರಿಗೆ ಹೊರಟನು.

೪೦. ಆಗ ಶ್ರೀಕೃಷ್ಣನು ತನ್ನ ಮಕ್ಕಳಾದ ಸಾಂಬಾದಿಗಳೊಡನೆ ರಥದಿಂದ ಕೆಳಕ್ಕೆ ಧುಮುಕಿ ತನ್ನ ತಾಯಿಯ ಮನೆಗೆ ಬೇಗಬೇಗನೆ ಹೊರಟನು.

ದೃಷ್ಟ್ವಾ ಸ್ವಮಾತರಂ ಕೃಷ್ಣೋ ಗೃಹದ್ವಾರೇ ಸಮಾಗತಾಂ ।
ರುದಂತೀಂ ಬಾಷ್ಪಕಂಠೀಂ ತಾಂ ನನಾಮ ಪ್ರರುದನ್ ಹರಿಃ ॥ ೪೧ ॥

ಯಶೋದಾ ತಸ್ಯ ಜನನೀ ಸ್ವಪ್ರಾಣೇಭ್ಯಃ ಪ್ರಿಯಂ ಸುತಂ ।
ಉಪಗುಹ್ಯ ದದೌ ತಸ್ಮೈ ಗಿರಾ ಗದ್ಗದಯಾಶಿಷಃ ॥ ೪೨ ॥

ನಂದಸ್ತಥೋಪನಂದಶ್ಚ ತಥಾ ಷಡ್ವೃಷಭಾನವಃ ।
ವೃಷಭಾನುವರಶ್ಚೈವ ಹ್ಯೇತೇ ದ್ರಷ್ಟುಂ ಸಮಾಯಯುಃ ॥ ೪೩ ॥

ತತ್ರಾಗತಾನಾಂ ಗೋಪಾನಾಂ ಶ್ರೀಕೃಷ್ಣೋ ಯಾದವೈರ್ವೃತಃ ।
ಯಥಾವಿಧ್ಯುಪಸಂಗಮ್ಯ ಸರ್ವೇಷಾಂ ಮಾನಮಾದಧೇ ॥ ೪೪ ॥

ತೇ ತು ಕೃಷ್ಣಸ್ಯ ಕುಶಲಂ ಪಪ್ರಚ್ಛುರ್ಮುದಿತಾನನಾಃ ।
ತೇಷಾಂ ಕೃಷ್ಣಸ್ತು ಭಗವಾನ್ ಪಪ್ರಚ್ಛ ಕುಶಲಂ ಪರಂ ॥ ೪೫ ॥

---

೪೧. ಆ ಸಮಯದಲ್ಲಿ ಪುತ್ರಸ್ನೇಹದಿಂದ ಉಕ್ಕಿಬರುತ್ತಿರುವ ಅಳುವಿನಿಂದ ಕುತ್ತಿಗೆಯು ಬಿಗಿದುಹೋಗಿ ಬಾಗಿಲಿನಲ್ಲಿ ನಿಂತು ತನ್ನನ್ನೇ ನಿರೀಕ್ಷಿಸುತ್ತಿರುವ ಯಶೋದೆಯನ್ನು ಕಾಣುತ್ತಲೇ ಶ್ರೀಕೃಷ್ಣನೂ ಸಹ ಮಾತೃವಾತ್ಸಲ್ಯದಿಂದ ಬಿಕ್ಕಿ ಬಿಕ್ಕಿ ಅಳುತ್ತಾ ಆಕೆಗೆ ನಮಸ್ಕಾರ ಮಾಡಿದನು.

೪೨. ಕೂಡಲೇ ಶ್ರೀಕೃಷ್ಣನ ತಾಯಿಯಾದ ಯಶೋದೆಯು ತನ್ನ ಪ್ರಾಣಗಳಿಗಿಂತಲೂ ಪ್ರಿಯನಾದ ಆ ಮಗನನ್ನು ಬಿಗಿಯಪ್ಪಿ ಗದ್ಗದವಾದ ಸ್ವರದಿಂದ ಶುಭಾಶೀರ್ವಾದಗಳನ್ನು ಮಾಡಿದಳು.

೪೩. ಆಗ ನಂದ, ಉಪನಂದ, ವೃಷಭಾನು ಮೊದಲಾದ ಆರು ಮಂದಿ ಸೋದರರು, ವೃಷಭಾನುವರ ಎಂಬಿವರು ನೋಡಲು ಬಂದರು.

೪೪. ಆಗ ಶ್ರೀಕೃಷ್ಣನು ಯಾದವರೊಡನೆ ಅಲ್ಲಿಗೆ ಬಂದ ಗೋಪರೆಲ್ಲರನ್ನೂ ಯಥೋಚಿತವಾಗಿ ಎದುರುಗೊಂಡು ಅವರನ್ನು ಗೌರವಿಸಿದನು.

೪೫. ಆ ಗೋಪಾಲರೆಲ್ಲರೂ ನಗುಮುಖದಿಂದ ಶ್ರೀಕೃಷ್ಣನನ್ನು ಕುಶಲಪ್ರಶ್ನೆ ಮಾಡಿದರು. ಶ್ರೀಕೃಷ್ಣನೂ ಸಹ ಅವರೆಲ್ಲರ ಕುಶಲ ಸಮಾಚಾರವನ್ನು ವಿಚಾರಿಸಿದನು.

ತತಶ್ಚ ಯಮುನಾತೀರೇ ವೃಂದಾರಣ್ಯೇ ನೃಪೇಶ್ವರ ।
ಬಭೂವುಃ ಶಿಬಿರಾಃ ಸರ್ವೇಽನಿರುದ್ಧಸ್ಯ ಮಹಾತ್ಮನಃ ॥ ೪೬ ॥

ಶಿಬಿರೇಷ್ವನಿರುದ್ಧಾದ್ಯಾಃ ಸಾಂಬಾದ್ಯಾಶ್ಚೋದ್ಧವಾದಯಃ ।
ನಿವಾಸಂ ಚಕ್ರಿರೇ ಕೃಷ್ಣಃ ಸ್ಥಿತೋಽಭೂನ್ನಂದಪತ್ತನೇ ॥ ೪೭ ॥

ಆಗತೇಭ್ಯಶ್ಚ ಸರ್ವೇಭ್ಯೋ ನಂದಃ ಕೃಷ್ಣೇನ ಸಂಯುತಃ ।
ಭೋಜನಂ ಪ್ರದದೌ ರಾಜನ್ ಪಶುಭ್ಯಶ್ಚ ತೃಣಾನಿ ಚ ॥ ೪೮ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧ
ಚರಿತ್ರೇ ಸುಮೇರೌ ವ್ರಜಪ್ರವೇಶೋ ನಾಮ
ಚತ್ವಾರಿಂಶೋಽಧ್ಯಾಯಃ

---

೪೬. ಓ ರಾಜೇಂದ್ರ! ಅನಂತರ ಮಹಾತ್ಮನಾದ ಅನಿರುದ್ಧನು ಯಮುನಾನದಿಯ ಕರೆಯಲ್ಲಿದ್ದ ವೃಂದಾವನ ಪ್ರದೇಶದಲ್ಲಿ ಯಾದವರೆಲ್ಲರಿಗೂ ಶಿಬಿರವನ್ನೇರ್ಪಡಿಸಿದನು.

೪೭. ಆ ಶಿಬಿರಗಳಲ್ಲಿ ಅನಿರುದ್ಧ, ಸಾಂಬ, ಉದ್ಧವ, ಮೊದಲಾದ ಯಾದವರೆಲ್ಲರೂ ತಂಗಿದರು. ಶ್ರೀಕೃಷ್ಣನು ಮಾತ್ರ ನಂದನ ವ್ರಜದಲ್ಲಿಯೇ ತಂಗಿದನು.

೪೮. ಆ ವ್ರಜದಲ್ಲಿ ನಂದನೂ, ಕೃಷ್ಣನೂ ಇಬ್ಬರೂ ಬಂದವರೆಲ್ಲರನ್ನೂ ಊಟ ಉಪಚಾರಾದಿಗಳಿಂದ ಸತ್ಕರಿಸಿದುದಲ್ಲದೆ ಕುದುರೆ ಮೊದಲಾದ ಪಶುಗಳಿಗೆ ಹುಲ್ಲು ಕಡ್ಡಿಗಳನ್ನೂ ಇತ್ತರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತದಲ್ಲಿ ವ್ರಜಪ್ರವೇಶವೆಂಬ ನಲವತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕಚತ್ವಾರಿಂಶೋಽಧ್ಯಾಯಃ

ಆಹೂತೋ ರಾಧಯಾ ಕೃಷ್ಣಃ ಸಂಧ್ಯಾಯಾಂ ನಂದನಂದನಃ ।
ಜಗಾಮ ಶಶ್ವದೇಕಾಂತೇ ಶೀತಲಂ ಕದಲೀವನಂ ॥ ೧ ॥

ರಂಭಾದಲೈಶ್ಚಂದನಸ್ಯ ಪಂಕಯುಕ್ತಂ ಮನೋಹರಂ !
ಸ್ಫಾರಾಸ್ಫುರನ್ನಭ್ರಗೇಹಂ ಯಮುನಾವಾಯುಶೀಕರಂ ॥ ೨ ॥

ನಲವತ್ತೊಂದನೆಯ ಅಧ್ಯಾಯವು.

೧. ನಂದಕುಮಾರನಾದ ಶ್ರೀಕೃಷ್ಣನು ತನ್ನನ್ನು ಪ್ರಿಯೆಯಾದ ರಾಧೆಯು ಬರುವಂತೆ ಹೇಳಿಕಳುಹಿಸಿದ್ದುದರಿಂದ ಒಂದು ದಿನ ಸಂಧ್ಯಾಸಮಯದಲ್ಲಿ ಯಾರಿಗೂ ಗೋಚರವಾಗದಂತೆ ಏಕಾಂತದಲ್ಲಿ ಆಕೆಯು ವಾಸವಾಗಿರುತ್ತಿದ್ದ ತಂಪಾದ ಬಾಳೆಯ ತೋಟಕ್ಕೆ ಹೊರಟನು.

೨. ಆ ಕದಲೀವನದಲ್ಲಿ ಮೇಘಮಂದಿರವೆಂಬ ಮನೋಹರವಾದ ಸೌಧವಿರುವುದು. ಅದರ ಸುತ್ತಲೂ ಹಸುರಾದ ಬಾಳೆಯೆಲೆಗಳು; ಅರೆದು ಸಿದ್ಧಗೊಳಿಸಲ್ಪಟ್ಟಿರುವ ಸೊಗಸಾದ ಚಂದನಲೇಪಗಳು; ಯಮುನಾನದಿಯ ತುಂತುರುಗಳನ್ನು ಹೊತ್ತು ಮೆಲ್ಲನೆ ಸಾಗಿಬರುತ್ತಿರುವ ತಂಗಾಳಿ;

ಏತಾದೃಶಂ ರಾಧಿಕಾಯಾಃ ಸುಂದರಂ ಮೋಘಮಂದಿರಂ ।
ಸರ್ವದುಃಖಾಗ್ನಿನಾ ನಿತ್ಯಂ ಭಸ್ಮೀಭೂತಂ ಬಭೂವ ಹ ॥ ೩ ॥

ಶ್ರೀದಾಮಶಾಪೇನ ನೃಪ ದುಃಖೇನ ವೃಷಭಾನುಜಾ ।
ತನುಂ ರಕ್ಷತಿ ತತ್ರಾಪಿ ಕೃಷ್ಣಾಗಮನಹೇತವೇ ॥ ೪ ॥

ನಿಶಮ್ಯ ಕೃಷ್ಣಂ ಸ್ವವನೇ ಸಮಾಗತಂ
ಸಖೀಮುಖಾಚ್ಛ್ರೀವೃಷಭಾನುನಂದಿನೀ ।
ಆನೇತುಮುತ್ಥಾಯ ವರಾಸನಾತ್ತ್ವರಂ
ದ್ವಾರೇ ಸಖೀಭಿರ್ನೃಪ ಸಾ ಜಗಾಮ ಹ ॥ ೫ ॥

ದದೌ ಹ್ಯಾಸನಪಾದಾದ್ಯಾನುಪಚಾರಾನ್ವ್ರಜೇಶ್ವರೀ ।
ವದಂತೀ ಕುಶಲಂ ವಾಕ್ಯಂ ಕೃಷ್ಣಾ ಕೃಷ್ಣಂ ವ್ರಜೇಶ್ವರಂ ॥ ೬ ॥

---

೩. ಇಂತಹ ರಮಣೀಯವಾದ ಆ ರಾಧೆಯ ಮೋಘಮಂದಿರವು ಆಕೆಯ ವಿರಹಾಗ್ನಿಯ ತಾಪದಿಂದ ಇದುವರೆಗೆ ಭಸ್ಮೀಭೂತವಾದಂತೆ ಆಗಿ ಬಿಟ್ಟಿದ್ದಿತು.

೪. ಓ ರಾಜೇಂದ್ರ! ವೃಷಭಾನುವಿನ ಸುತೆಯಾದ ಆ ರಾಧೆಯು ಶ್ರೀದಾಮನು ಇತ್ತ ಶಾಪದಿಂದಲೂ, ವಿರಹದುಃಖದಿಂದಲೂ ತಲ್ಲಣಿಸುತ್ತಾ ಇದ್ದರೂ ಕೃಷ್ಣನು ಎಂದಾದರೂ ಬಂದಾನೆಂಬ ಅತ್ಯಾಸೆಯಿಂದ ತನ್ನ ಶರೀರವನ್ನು ಸಂರಕ್ಷಿಸಿಕೊಂಡಿದ್ದಳು.

೫. ವೃಷಭಾನುಸುತೆಯು ತನ್ನ ಕದಲೀವನಕ್ಕೆ ಶ್ರೀಕೃಷ್ಣನು ಬಂದ ನೆಂಬ ಸುದ್ದಿಯನ್ನು ಸಖಿಯರು ತಿಳಿಸಿದಕೂಡಲೇ ತಾನು ಕುಳಿತಿದ್ದ ಉತ್ತಮ ಪೀಠದಿಂದ ಝುಗ್ಗನೆ ಮೇಲಕ್ಕೆದ್ದು ತನ್ನ ಸಖಿಯರೊಡಗೂಡಿ ಬೇಗನೆ ಬಾಗಿಲ ಬಳಿಗೆ ಬಂದಳು.

೬. ವ್ರಜೇಶ್ವರಿಯಾದ ಆ ರಾಧೆಯು ವ್ರಜೇಶ್ವರನಾದ ಆ ಶ್ರೀಕೃಷ್ಣ ನನ್ನು ಕುಶಲಪ್ರಶ್ನಾದಿಗಳನ್ನು ಮಾಡುತ್ತಾ ಕುಳಿತುಕೊಳ್ಳಲು ಉತ್ತಮಾಸನ ವನ್ನಿತ್ತು ಪಾದ್ಯಾದ್ಯುಪಚಾರಗಳನ್ನು ಮಾಡಿದಳು.

ಪರಿಪೂರ್ಣತಮಂ ದೃಷ್ಟ್ವಾ ಪರಿಪೂರ್ಣತಮಾ ನೃಪ ।
ಜಹೌ ವಿರಹಜಂ ದುಃಖಂ ಸಂಯೋಗೇ ಹರ್ಷಪೂರಿತಾ ॥ ೭ ॥

ಚಕಾರ ಸ್ವಸ್ಯಾಃ ಶೃಂಗಾರಂ ವಸ್ತ್ರಾಲಂಕಾರಚಂದನೈಃ ।
ಕುಶಸ್ಥಲ್ಯಾಂ ಗತೇ ನಾಥೇ ಶೃಂಗಾರೋ ನ ಕೃತಸ್ತಯಾ ೮ ॥

ಪುರಾ ತಯಾ ನ ಭುಕ್ತಂ ಚ ತಾಂಬೂಲಂ ಮಿಷ್ಟಭೋಜನಂ ।
ಕೃತಂ ನ ಶಯ್ಯಾಶಯನಂ ಕ್ವಚಿದ್ಧಾಸ್ಯಂ ನ ವಾ ಕೃತಂ ॥ ೯ ॥

ಸಿಂಹಾಸನೇ ಸ್ಥಿತಂ ರಾಧಾ ದೇವಂ ಮದನಮೋಹಿನಂ ।
ಹರ್ಷಾಶ್ರೂಣಿ ಪ್ರಮುಂಚಂತೀ ಜಗೌ ಗದ್ಗದಯಾ ಗಿರಾ ॥ ೧೦ ॥

---

೭. ಪರಿಪೂರ್ಣ ಪರಬ್ರಹ್ಮಸ್ವರೂಪನಾದ ಆ ಶ್ರೀಕೃಷ್ಣನ ಮತ್ತೊಂದು ರೂಪವೆನಿಸಿದ ಆ ರಾಧೆಯು ಕೃಷ್ಣಾಗಮನದಿಂದ ಹರ್ಷವನ್ನು ತಾಳಿದವಳಾಗಿ ತನ್ನ ವಿರಹದುಃಖವೆಲ್ಲವನ್ನೂ ಮರೆತುಬಿಟ್ಟಳು.

೮. ತನ್ನ ಪ್ರಿಯನು ಕುಶಸ್ಥಲಿಗೆ ಹೊರಟುಹೋದಂದಿನಿಂದ ಶರೀರಾಲಂಕಾರಗಳೆಲ್ಲವನ್ನೂ ತೊರೆದುಬಿಟ್ಟಿದ್ದ ಆ ಕಾಂತೆಯು ಆ ದಿವಸ ದಿವ್ಯವಾದ ದುಕೂಲಗಳಿಂದಲೂ, ಆಭರಣಗಳಿಂದಲೂ, ಗಂಧಾದಿಲೇಪನಗಳಿಂದಲೂ ತನ್ನನ್ನು ಸಿಂಗರಿಸಿಕೊಂಡಳು.

೯. ಆ ವಿರಹಸಮಯದಲ್ಲಿ ರಾಧೆಯು ತಾಂಬೂಲವನ್ನು ಹಾಕಿಕೊಳ್ಳುತ್ತಿರಲಿಲ್ಲ. ಮೃಷ್ಟಾನ್ನವನ್ನು ಭುಜಿಸುತ್ತಿರಲಿಲ್ಲ. ಹಾಸಿಗೆಯಮೇಲೆ ಮಲಗುತ್ತಿರಲಿಲ್ಲ. ಯಾರೊಡನೆಯೂ ಒಂದು ಬಾರಿಯೂ ಸಹ ನಗುತ್ತ ವಿನೋದವಾಗಿರಲಿಲ್ಲ.

೧೦. ಇಂತಹ ರಾಧೆಯು ಮನ್ಮಥನಂತೆ ಸೌಂದರ್ಯದಿಂದ ಮೆರೆಯುತ್ತಾ ಸಿಂಹಾಸನದಮೇಲೆ ಕುಳಿತಿದ್ದ ತನ್ನಪ್ರಿಯತಮನನ್ನುನೋಡಿ ಆನಂದಬಾಷ್ಪಗಳನ್ನು ಸುರಿಸುತ್ತಾ ತಡೆದು ತಡೆದು ಬರುತ್ತಿರುವ ಗದ್ಗದವಾಣಿಯಿಂದ ಈರೀತಿ ಸಂಭಾಷಿಸಿದಳು.

॥ ರಾಧೋವಾಚ ॥

ಗೋಕುಲಂ ಮಥುರಾಂ ತ್ಯಕ್ತ್ವಾ ಗತಃ ಕಸ್ಮಾತ್ಕುಶಸ್ಥಲೀಂ।
ವದ ತನ್ಮೇ ಹೃಷೀಕೇಶ ತ್ವಂ ಸಾಕ್ಷಾದ್ಗೋಕುಲೇಶ್ವರ ॥ ೧೧ ॥

ಕ್ಷಣಂ ಯುಗಸಮಂ ನಾಥ ಜಾನಾಮಿ ತ್ವದ್ವಿಯೋಗತಃ ।
ಘಟೀಮನ್ವಂತರಸಮಾಂ ದ್ವಿಪರಾರ್ಧಸಮಂ ದಿನಂ ॥ ೧೨ ॥

ಕಸ್ಮಿನ್ಕಾಲೇ ವಿರಹೋ ಮೇ ಬಭೂವ ಚ ದುಃಖದಃ ।
ಯೇನ ತ್ವಚ್ಚರಣೌ ದೇವ ನ ದ್ರಕ್ಷ್ಯಾಮಿ ಸುಖಪ್ರದೌ ॥ ೧೩ ॥

ಯಥಾ ರಾಮಂ ತು ಸೀತೇವ ಮಾನಸಂ ವರಟೀವ ಚ ।
ತಥಾ ರಾಸೇಶ್ವರಂ ತ್ವಾಂ ತು ಮಾನದಂ ಹಿ ಸಮುತ್ಸಹೇ ॥ ೧೪ ॥

---

೧೧. "ಹೇ ಹೃಷೀಕೇಶ! ಗೋಕುಲಕ್ಕೆಲ್ಲಾ ಏಕಮಾತ್ರ ಪ್ರಭುವೆನಿಸಿದ್ದ ನೀನು ಏತಕ್ಕೋಸ್ಕರ ಈ ಗೋಕುಲವನ್ನೂ ಮಥುರೆಯನ್ನೂ ಬಿಟ್ಟು ಕುಶಸ್ಥಲಿಗೆ ಹೊರಟುಹೋದೆ?

೧೨. ಹೇ ನಾಥ! ನಿನ್ನ ವಿಯೋಗದಿಂದ ನನಗೆ ಒಂದು ಕ್ಷಣವೂ ಒಂದು ಯುಗವಾಗಿರುವುದು. ಗಳಿಗೆಯು ಮನ್ವಂತರವಾಗಿರುವುದು. ಒಂದು ದಿವಸವು ಎರಡು ಪರಾರ್ಧ ಕಾಲದಂತೆ ತೋರುತ್ತಿರುವುದು.

೧೩. ಹೇ ದೇವ! ಈ ದುಃಖಕರವಾದ ನಿನ್ನ ವಿರಹವು ಎಂತಹ ದುಷ್ಟ ಸಮಯದಲ್ಲಿ ನನಗೆ ಸಂಘಟಿಸಿತೋ ತಿಳಿಯದು. ಸುಖದಾಯಕವಾದ ನಿನ್ನ ಸಂದರ್ಶನವೂ ತಪ್ಪಿಹೋಗುವಂತಹ ಸಮಯವೊದಗಿತಲ್ಲಾ ;

೧೪. ಯಾವರೀತಿ ಜನಕಸುತೆಯು ಶ್ರೀರಾಮಚಂದ್ರನನ್ನೂ, ಹಂಸಾಂಗನೆಯು ಮಾನಸಸರೋವರವನ್ನೂ ಎಂದಿಗೂ ಅಗಲದೆ ಸರ್ವದಾ ಒಡನೆಯೇ ಇರಲು ಅಪೇಕ್ಷಿಸುವರೋ ಅದೇರೀತಿ ರಾಸೇಶ್ವರನಾದ ನಿನ್ನನ್ನು ನಾನು ಬಿಟ್ಟಿರಲಾರದೆ ಬಳಿಯಲ್ಲಿಯೇ ಇರಬಯಸುವೆನು.

ಸರ್ವಂ ಜಾನಾಸಿ ಸರ್ವಜ್ಞ ಕಿಂ ದುಃಖಂ ಕಥಯಾಮ್ಯಹಂ ।
ಶತವರ್ಷಂ ಗತಂ ನಾಥ ವಿಯೋಗೋ ನ ಗತೋ ಮಮ ॥ ೧೫ ॥

ಇತ್ಯುಕ್ತ್ವಾ ವಚಸಂ ರಾಜನ್ ಸ್ವಾಮಿನೀ ಸ್ವಾಮಿನಂ ಪರಂ ।
ವಿಯೋಗಖಿನ್ನಾ ದುಃಖಾನಿ ಸ್ಮರಂತೀ ಸಾ ರುರೋದ ಹ ॥ ೧೬ ॥

ದೃಷ್ಟ್ವಾ ಪ್ರಿಯಾಂ ರುದಂದೀಂ ತಾಂ ಪ್ರಿಯಃ ಪ್ರಾಹ ಪ್ರಿಯಂ ವಚಃ ।
ತಸ್ಯಾಶ್ಚ ಶಮಯನ್ವಾಕ್ಯೈಃ ಕೃಷ್ಣಃ ಕಶ್ಮಲಮೇವ ಚ ॥ ೧೭ ॥

॥ ಶ್ರೀಕೃಷ್ಣ ಉವಾಚ ॥

ನ ಕರ್ತವ್ಯಸ್ತ್ವಯಾ ರಾಧೇ ಶೋಕಶ್ಚ ತನುಶೋಷಕಃ ।
ತೇಜಶ್ಚೈಕಂ ದ್ವಿಧಾಭೂತಮಾವಯೋ ಋಷಯೋ ವಿದುಃ ॥ ೧೮ ॥

---

೧೫. ಹೇ ಪ್ರಭು! ನೀನು ಸರ್ವಜ್ಞನಲ್ಲವೇ? ಎಲ್ಲವನ್ನೂ ತಿಳಿದೇ ಇರುವೆ. ಹೀಗಿರುವಾಗ ನಾನು ಏಕೆ ಆ ವ್ಯಥೆಯನ್ನು ನಿನಗೆ ತಿಳಿಯಪಡಿಸಲಿ? ಕಾಲವೇನೋ ನೂರು ವರ್ಷಗಳು ಸಂದುಹೋದವು. ಆದರೆ ಮಾತ್ರ ನನ್ನ ವಿರಹವು ಕೊನೆಗಾಣಲಿಲ್ಲವು'' ಎಂದಳು.

೧೬. ಓ ರಾಜೇಂದ್ರ! ಈ ರೀತಿಯಾಗಿ ಆ ವ್ರಜಸ್ವಾಮಿನಿಯಾದ ರಾಧಿಕೆಯು ವ್ರಜಸ್ವಾಮಿಯಾದ ಶ್ರೀಕೃಷ್ಣನೊಡನೆ ಹೇಳಿದನಂತರ ತಾನು ಇದುವರೆಗೆ ಅನುಭವಿಸಿದ ವಿಯೋಗದುಃಖವನ್ನು ನೆನೆನೆನೆದು ಅತ್ತುಬಿಟ್ಟಳು.

೧೭. ಹೀಗೆ ಅಳುತ್ತಿರುವ ಪ್ರೇಯಸಿಯಾದ ರಾಧೆಯನ್ನು ಕಂಡು ಆ ಕೃಷ್ಣನು ಮೆಲುನುಡಿಗಳಿಂದ ಆಕೆಯ ಮನದಳವನ್ನು ಹೋಗಲಾಡಿಸುತ್ತಾ ಪ್ರಿಯವಾಕ್ಯಗಳಿಂದ ಸಂತೈಸಿದನು.

೧೮. "ಪ್ರಿಯೆ, ರಾಧೆ! ನೀನೀರೀತಿ ವ್ಯಥೆಪಡಬಾರದು. ಈ ದುಃಖವು ನಿನ್ನ ಶರೀರವನ್ನು ಶೋಷಿಸಿಬಿಡುವುದು. ಇದನ್ನು ಬಿಡು. ನಾವಿಬ್ಬರೂ ಒಂದೇ ತೇಜಸ್ಸಿನ ಎರಡು ರೂಪಗಳೆಂದು ಪ್ರಾಜ್ಞರಾದ ಋಷಿಗಳು ಅರಿತಿರುವರು.

ಯತ್ರಾಹಂ ತ್ವಂ ಸದಾ ತತ್ರ ಯತ್ರ ತ್ವಂ ಹ್ಯಹಮೇವ ಚ ।
ವಿಯೋಗ ಆವಯೋರ್ನಾಸ್ತಿ ಮಾಯಾಪುರುಷಯೋರ್ಯಥಾ ॥ ೧೯ ॥

ಭೇದಂ ಹಿ ಚಾವಯೋರ್ಮಧ್ಯೇ ಯೇ ಪಶ್ಯಂತಿ ನರಾಧಮಾಃ ।
ದೇಹಾಂತೇ ನರಕಾನ್ರಾಧೇ ತೇ ಪ್ರಯಾಂತಿ ಸ್ವದೋಷತಃ ॥ ೨೦ ॥

ಅಥಾತಸ್ತ್ವಂ ತು ಮಾಂ ರಾಧೇ ನಿತ್ಯಂ ದ್ರಕ್ಷ್ಯಸಿ ಚಾಂತಿಕೇ ।
ಪ್ರಭಾತೇ ಚಕ್ರವಾಕೀವ ಚಕ್ರವಾಕಂ ಪ್ರಿಯಂಕರಂ ॥ ೨೧ ॥

ಕಿಂಚಿತ್ಕಾಲೇನ ದಯಿತೇ ಗೋಪಗೋಪೀಭಿರೇವ ಚ ।
ಸಾಕಂ ತ್ವಯಾಽಕ್ಷರಂ ಬ್ರಹ್ಮಶ್ರೀಗೋಲೋಕಂ ವ್ರಜಾಮ್ಯಹಂ ॥ ೨೨ ॥

---

೧೯. ಆದುದರಿಂದ ನಾನು ಎಲ್ಲಿರುವೆನೋ ಅಲ್ಲಿ ನೀನೂ ಸಹಾ ಎಲ್ಲಾ ಕಾಲದಲ್ಲಿಯೂ ಇರುವೆ. ನೀನು ಇರುವ ಕಡೆಯಲ್ಲೆಲ್ಲಾ ನಾನೂ ಇರುವೆನು. ಪ್ರಕೃತಿಗೂ ಪುರುಷನಿಗೂ ಯಾವರೀತಿ ಎಂದಿಗೂ ವಿಯೋಗವಿಲ್ಲದಿರುವುದೋ ಅದೇ ರೀತಿ ನಮ್ಮಿಬ್ಬರಿಗೂ ವಿಯೋಗವು ಇಲ್ಲವೇ ಇಲ್ಲ-

೨೦. ಎಲೆ ರಾಧೆ! ಯಾವ ನರಾಧಮರು ನಮ್ಮಿಬ್ಬರನ್ನೂ ಬೇರೆ ಬೇರೆಯಾಗೆಣಿಸುವರೋ ಆ ಪಾಪಿಗಳು ತಮ್ಮ ಮರಣಾನಂತರ ನರಕದಲ್ಲಿ ತೊಳಲುವರು.

೨೧. ಬೆಳಗಾಗುತ್ತಲೇ ಚಕ್ರವಾಕಿಯು ತನ್ನ ಪ್ರಿಯತಮನಾದ ಚಕ್ರವಾಕಪಕ್ಷಿಯನ್ನು ಬಳಿಯಲ್ಲಿಯೇ ಕಾಣುವಂತೆ ನೀನು ಇನ್ನು ಮುಂದೆ ಕೆಲದಿವಸಗಳಲ್ಲಿಯೇ ಪ್ರತಿನಿತ್ಯವೂ ನನ್ನನ್ನು ನಿನ್ನ ಪಕ್ಕದಲ್ಲಿಯೇ ಕಾಣುವೆ.

೨೨. ಎಲೌ ಪ್ರಿಯೆ! ಇನ್ನು ಕೆಲವು ದಿವಸಗಳಲ್ಲಿಯೇ ನಿನ್ನನ್ನು ಜೊತೆಯಲ್ಲಿ ಕರೆದುಕೊಂಡು ಎಲ್ಲ ಗೋಪಗೋಪಾಂಗನೆಯರೊಡನೆ ಅವಿನಾಶಿಯಾದ ಪರಬ್ರಹ್ಮಸ್ವರೂಪವೆನಿಸಿದ ಶ್ರೀಗೋಲೋಕಕ್ಕೆ ಹೋಗಿ ಸೇರುವೆನು.''

|| ಗರ್ಗ ಉವಾಚ ||

ಮಾಧವಸ್ಯ ವಚಃ ಶ್ರುತ್ವಾ ಗೋಪೀಭಿಃ ಸಹ ರಾಧಿಕಾ |
ಪ್ರಸನ್ನಾ ಪೂಜಯಾಮಾಸ ರಮೇಶಂ ಚ ರಮಾ ಯಥಾ || ೨೩ ||

ಶ್ರೀರಾಧಯಾ ಪುನಃ ಕೃಷ್ಣೋ ರಾಸಾರ್ಥಂ ಪಾರ್ಥಿತೋ ನೃಪ |
ಪ್ರಸನ್ನೋ ವೃಂದಕಾರಣ್ಯೇ ರಾಸಂ ಕರ್ತುಂ ಮನೋ ದಧೇ || ೨೪ ||

ಇತಿ ಶ್ರೀ ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ರಾಧಾಕೃಷ್ಣಮಿಲನಂ ನಾಮ
ಏಕಚತ್ವಾರಿಂಶೋಽಧ್ಯಾಯಃ

---

೨೩. ಹೀಗೆಂದು ನುಡಿದ ಆ ಶ್ರೀಕೃಷ್ಣನ ಮಾತನ್ನುಕೇಳಿ ರಾಧೆಯೂ, ಗೋಪಿಯರೂ ಬಹುಮಟ್ಟಿಗೆ ಸಂತೋಷಭರಿತರಾದರು. ಅನಂತರ ರಾಧೆಯು ನಾರಾಯಣನನ್ನು ಲಕ್ಷ್ಮಿಯು ಅರ್ಚಿಸುವಂತೆ ಆತನನ್ನು ಪೂಜಿಸಿದಳು.

೨೪. ಓ ರಾಜೇಂದ್ರ ! ಆಗ ರಾಧೆಯು ಶ್ರೀಕೃಷ್ಣನನ್ನು ಮತ್ತೊಮ್ಮೆ ರಾಸಲೀಲೆಯನ್ನು ಆರಂಭಿಸುವಂತೆ ಪ್ರಾರ್ಥಿಸಲು ಶ್ರೀಕೃಷ್ಣನು ಸಂತುಷ್ಟನಾಗಿ ವೃಂದಾವನದಲ್ಲಿ ರಾಸಲೀಲೆಯನ್ನೆಸಗಲು ನಿರ್ಧರಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತದಲ್ಲಿ ರಾಧಕೃಷ್ಣ ಮಿಲನವೆಂಬ ನಲವತ್ತೊಂದನೆಯ
ಅಧ್ಯಾಯವು ಮುಗಿದದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ದ್ವಿಚತ್ವಾರಿಂಶೋಽಧ್ಯಾಯಃ

|| ಗರ್ಗ ಉವಾಚ ||

ಹೇಮಂತೇ ಮಾಸಿ ಪೂರ್ವಸ್ಮಿನ್ರಾಕಾಯಾಂ ರಾಧಿಕೇಶ್ವರಃ |
ವಂಶೀವ ಶಂಕರೀಂ ದಧ್ಮೌ ಯಥಾ ವೃಂದಾವನೇ ಪುರಾ || ೧ ||

ಧ್ವನಿರ್ಬಭೂವ ತಸ್ಯಾಶ್ಚ ಸರ್ವೇಷಾಮಾಹರೇನ್ಮನಃ |
ನಿಶಮ್ಯ ಗೋಪ್ಯಃ ಸಂಖಿನ್ನಾಃ ಕಾಮಖೇದೇನ ತತ್ರಸುಃ || ೨ ||

ನಲವತ್ತೆರಡನೆಯ ಅಧ್ಯಾಯವು

೧. ಗರ್ಗಮುನಿಯು ಹೇಳತೊಡಗಿದನು—ಓ ರಾಜೇಂದ್ರ! ಕೆಲವು ಕಾಲದಲ್ಲಿಯೇ ಹೇಮಂತಋತುವು ಪ್ರಾಪ್ತವಾಯಿತು. ಆಗ ತುಂಬು ಬೆಳದಿಂಗಳಿನಿಂದ ರಮಣೀಯವಾಗಿರುವ ಮಾರ್ಗಶಿರ ಶುದ್ಧ ಹುಣ್ಣಿಮೆಯ ರಾತ್ರಿ ಆ ರಾಧಾಕಾಂತನು ಹಿಂದೆ ವೃಂದಾವನದಲ್ಲಿ ಊದಿದಂತೆ ಸಕಲರನ್ನೂ ಸಂಮೋಹಗೊಳಿಸುವ ಮುರಲಿಯನ್ನು ತೆಗೆದುಕೊಂಡು ಊದತೊಡಗಿದನು.

೨. ಅವನು ಕೊಳಲನ್ನು ಊದತೊಡಗುತ್ತಲೇ ಅದರಿಂದ ಇಂಪಾದ ಧ್ವನಿಯು ಕಿವಿಗೆ ಬೀಳುತ್ತಲೇ ಗೋಪಿಯರೆಲ್ಲರೂ ಮನ್ಮಥ ತಾಪದಿಂದ ಕಳವಳಕ್ಕೀಡಾಗಿ ತಲ್ಲಣಿಸತೊಡಗಿದರು.

ರುಂಧನ್ನಂಬುಭೃತಶ್ಚಮತ್ಕೃತಿಪರಂ ಕುರ್ವನ್ಮುಹುಸ್ತುಂಬರಂ
ಧ್ಯಾನಾದ್ಧಂ ತನಯನ್ಸನಂದನಮುಖಾನ್ವಿಸ್ಮೇರಯನ್ವೇಧಸಂ ।
ಔತ್ಸುಕ್ಯಾದ್ಬಲಿಭಿರ್ಬಲಿಂ ಚಟುಲಯನ್ಭೋಗೇಂದ್ರಮಾಘೂರ್ಣಯನ್
ಭಿಂದನ್ನಂಡಕಟಾಹಭಿತ್ತಿಮಭಿತೋ ಬಭ್ರಾಮ ವಂಶೀಧ್ವನಿಃ ॥ ೩ ॥

ಅಥೋದಗಾಚ್ಚಂದ್ರಮಾಸ್ತು ಚರ್ಷಣೀನಾಂ ಶುಚೋ ಮೃಜನ್ ।
ಯಥಾ ಪ್ರಿಯಾಯಾ ರಾಜೇಂದ್ರ ವಿದೇಶಾದಾಗತಪ್ರಿಯಃ ॥ ೪ ॥

ತದೈವ ಯಮುನಾ ರಾಜಂಸ್ತನುಂ ದಿವ್ಯಂ ದಧಾರ ಹ ।
ವೃಂದಾವನಂ ಗಿರೀಂದ್ರಶ್ಚ ವ್ರಜಭೂಮಿಶ್ಚ ಮಾನದ ॥ ೫ ॥

---

೩. ಆ ಮುರಲೀ ನಿನಾದವು ಎಲ್ಲೆಡೆಯಲ್ಲೂ ಹಬ್ಬುತ್ತಾ ಚಲಿಸುತ್ತಿದ್ದ ಮೋಘಗಳನ್ನು ತಡೆದು ನಿಲ್ಲಿಸಿತು. ಆಕಾಶವೆಲ್ಲವನ್ನೂ ಮಾರ್ದನಿಯಿಂದ ತುಂಬುವಂತೆ ಚಮತ್ಕಾರವೆಸಗಿತು. ಸನಂದನ ಮೊದಲಾದ ಸಿದ್ಧಪುರುಷರನ್ನು ಧ್ಯಾನದಿಂದ ಪರಾಙ್ಮುಖರಾಗುವಂತೆ ಮಾಡಿತು. ಬ್ರಹ್ಮನನ್ನು ಆಶ್ಚರ್ಯದಿಂದ ಹರ್ಷಿಸುವಂತೆ ಮಾಡಿತು. ಪಾತಾಳಲೋಕದಲ್ಲಿರುವ ಬಲಿಯನ್ನೂ ಅವನ ಅನುಯಾಯಿಗಳಾದ ಇತರ ಬಲಶಾಲಿಗಳನ್ನೂ ಕುತೂಹಲದಿಂದ ಕೆರಳಿಸಿತು. ಆದಿಶೇಷನು ಆನಂದದಿಂದ ತಲೆದೂಗುವಂತೆ ಮಾಡಿತು. ಬ್ರಹ್ಮಾಂಡಕಟಾಹದ ಭಿತ್ತಿಭಾಗಗಳೆಲ್ಲವೂ ಒಡೆದು ಹೋಗುವಂತೆ ಎಸಗಿತು.

೪. ಆ ವೇಳೆಗೆ ಸರಿಯಾಗಿ ಪ್ರವಾಸದಿಂದ ಹಿಂದುರಿಗಿದ ಪ್ರಿಯನು ತನ್ನ ಮಡದಿಯ ವಿರಹ ದುಃಖವನ್ನು ಶಮನಗೊಳಿಸುವಂತೆ ಕತ್ತಲೆಯಿಂದ ತೊಳಲುವ ಕುಲಟೆಯರ ದುಃಖವನ್ನು ಪರಿಹರಿಸುತ್ತಾ ಪೂರ್ವಾಚಲದಲ್ಲಿ ಚಂದ್ರನು ಉದಯಿಸಿದನು.

೫. ಆ ಸಮಯದಲ್ಲಿ ಯಮುನಾನದಿಯು ದಿವ್ಯವಾದ ಶರೀರವನ್ನು ತಳೆದು ಕಂಗೊಳಿಸಿದಳು. ಅದೇರೀತಿ ವೃಂದಾವನವೂ, ಗೋವರ್ಧನ ಪರ್ವತವೂ, ವ್ರಜಭೂಮಿಯೂ ಮಾನವ ದೇಹವನ್ನು ತಳೆದು ಶೋಭಿಸಿದುವು.

ಕೃಷ್ಣಾನದೀ ಜಯತಿ ಯತ್ರ ಮಣೀಂದ್ರಮುಕ್ತಾ-
ಮಾಣಿಕ್ಯಶುಭ್ರಹರಿತಾಕರತೋಲಿಕಾಭಿಃ ।
ವೈಢೂರ್ಯನೀಲಕಹರಿದ್ಧ್ರಿವಜ್ರಪೀತ-
ಸೋಪಾನಮಂಡಪಯುತಾಭಿರತಿಸ್ಫುರಂತೀ ॥ ೬ ॥

ಸ್ವಚ್ಛಂದಸೂತ್ಪತಿತಮತ್ಸ್ಯಗಣೈರ್ವಹಂತೀ
ಸಚ್ಛ್ಯಾಮಲೇನ ವಪುಷಾsಘಗಣಂ ಹರಂತೀ ।
ಉತ್ತುಂಗಲೋಲಲಹರೀಕಮಲೈರ್ಲಸಂತೀ
ಕೃಷ್ಣಾನದೀ ಜಯತಿ ಕೃಷ್ಣಗೃಹೇ ಲುಠಂತೀ ॥ ೭ ॥

ಗೋವರ್ಧನಂ ಭಜ ಗಿರಿಂ ಶತಚಂದ್ರಯುಕ್ತಂ
ಮಂದಾರಚಂದನಲತಾವೃತಕಲ್ಪವೃಕ್ಷಂ ।
ಶ್ರೀರಾಸಮಂಡಪಯುತಂ ಮಣಿಮಂಡಪಾಢ್ಯಂ
ಕೋಟೀರಮಂಜುಲನಿಕುಂಜಕುಟೀರ ಕೋಟಿಂ ॥ ೮ ॥

೬-೭. ಆ ಯಮುನಾನದಿಯ ವೈಭವವನ್ನೇನು ವರ್ಣಿಸಲಿ! ಅದರ ಉಭಯ ಪಾರ್ಶ್ವಗಳಲ್ಲಿಯೂ ರತ್ನ, ಮುತ್ತು, ಕೆಂಪು, ಪಚ್ಚೆ, ವೈಢೂರ್ಯ, ನೀಲಮಣಿ, ವಜ್ರ ಮೊದಲಾದ ಮಣಿಜಾತಿಗಳಿಂದಲೂ ಬಿಳಿಯಕಲ್ಲು, ಹಸುರು ಕಲ್ಲು, ಹಳದಿಯಕಲ್ಲು ಇವುಗಳಿಂದಲೂ ನಿರ್ಮಿಸಿದ ಸೋಪಾನಗಳೂ, ಮಂಟಪ ಗಳೂ, ಸಾಲು ಸಾಲಾಗಿರುವುವು. ಅದರ ನೀರಿನಲ್ಲಿ ಇತ್ತಲಿಂದತ್ತ ಸ್ವಚ್ಛಂದ ವಾಗಿ ಅಸಂಖ್ಯಾಕವಾದ ಮೀನುಗಳು ನಲಿದಾಡುತ್ತಿರುವುವು. ಮತ್ತು ಅದರ ಚಂಚಲವಾದ ತರಂಗಗಳು ಎತ್ತರವಾಗಿ ಏಳುತ್ತಾ ಅಲ್ಲಿಯೇ ಬೆಳೆದ ಕಮಲದ ಹೂವುಗಳೊಡನೆ ಚೆಲುವಾಗಿ ರಂಜಿಸುವುವು. ಈ ರೀತಿಯಾಗಿ ನೀಲವಾದ ಕಾಂತಿಯಿಂದ ಕೂಡಿದ ಜಲರಾಶಿಯುಳ್ಳ ಆ ಯಮುನೆಯು ಮಾನವರ ಪಾಪ ರಾಶಿಗಳನ್ನು ಪರಿಹರಿಸುತ್ತಾ ಕೃಷ್ಣನ ಮನೆಯ ಹೊಸಿಲನ್ನು ತೊಳೆಯುವಂತೆ ಹರಿಯುತ್ತಾ ಶೋಭಿಸುವಳು.

೮. ಓ ರಾಜೇಂದ್ರ! ಅದೇರೀತಿ ಗೋವರ್ಧನಪರ್ವತವು ಮಂದಾರ, ಶ್ರೀಗಂಧ, ಕಲ್ಪವೃಕ್ಷಗಳಿಂದಲೂ ನಾನಾವಿಧವಾದ ಲತೆಗಳಿಂದಲೂ, ನವಿಲು

ವೃಂದಾವನಂ ಚ ಯಮುನಾತಟನೀರತೀರ-
ಸಂಪೃಕ್ತಮಂದಗಮನೈರತಿಗಂಧವಾತೈಃ ।
ತತ್ಕಂಪಿತಂ ಚ ಸುರಭೀಕೃತಸರ್ವದೇಶಂ
ಶ್ರೀಖಂಡಕುಂಕುಮಮೃದಾಗುರುಚರ್ಚಿತಂಶಂ ॥ ೯ ॥

ಜುಷ್ಟಂ ವಸಂತನವಪಲ್ಲವಪುಷ್ಪರಂಗೈ-
ರ್ಮಂದಾರಚಂದನಸುಚಂಪಕನೀಪನಿಂಬೈಃ ।
ಆಮ್ರಾತಕಾಮ್ರಪನಸಾಗುರುನಾಗರಂಗೈಃ
ಶ್ರೀತಾಲಪಿಪ್ಪಲವಟೈರ್ನವನಾರಿಕೇಲೈಃ ॥ ೧೦ ॥

ಖರ್ಜೂರಶ್ರೀಫಲಲವಂಗವಿರಾಜಮಾನ-
ಮಂಜೀರಶಾಲಕತಮಾಲ ಕದಂಬಯುಕ್ತಂ ।
ಸಂತಾನಕುಂದಬದರೀಕದಲೀಸಿತಾಢ್ಯಂ
ಶ್ರೀಶಾಲ್ಮಲೀಬಕುಲಕೇತಕಿಸತ್ಶಿರೀಷಂ ॥ ೧೧ ॥

ಮೊದಲಾದ ಪಕ್ಷಿಗಳಿಂದಲೂ ಕಂಗೊಳಿಸುತ್ತಿರುವುವು. ಅದರಲ್ಲಿಯೇ ರಾಸಲೀಲೆಯನ್ನಾಡಲು ತಕ್ಕ ವೃತ್ತಾಕಾರದ ಪ್ರದೇಶಗಳೂ ಮಣಿಮಯವಾದ ಮಂಟಪಗಳೂ, ಮನೋಹರವಾದ ಲತಾಗೃಹಗಳೂ ಬೇಕಾದಷ್ಟು ಇರುವುವು. ಇಂತಹ ಗೋವರ್ಧನವನ್ನು ಮನಸ್ಸಿನಲ್ಲಿ ಭಜಿಸು.

೯-೧೨. ಆ ವೃಂದಾವನದ ಸೊಬಗನ್ನೂ ವರ್ಣಿಸುವೆನು ಕೇಳು—ಆ ವನವು ಯಮುನಾನದಿಯ ತೀರಪ್ರದೇಶದಲ್ಲಿರುವುದು. ಅಲ್ಲಿ ಸುಗಂಧಯುಕ್ತವಾದ ಎಳೆಗಾಳಿಯು ಆ ಯಮುನೆಯ ತುಂತುರುಗಳನ್ನು ಹೊತ್ತು ಮೆಲ್ಲಮೆಲ್ಲನೆ ಬೀಸಿಬರುವುದು. ಆ ಗಾಳಿಯ ಅಲೆತದಿಂದ ಆ ವೃಂದಾವನದ ಶ್ರೀಗಂಧ, ಕುಂಕುಮಕೇಸರ, ಅಗುರು ಮುಂತಾದ ಮರಗಳು ಅಲುಗುತ್ತಾ ಸುತ್ತುಮುತ್ತಲಿನ ಪ್ರದೇಶಕ್ಕೆಲ್ಲಾ ಸುಗಂಧವನ್ನು ಬೀರುವುವು. ಇಷ್ಟೇ ಅಲ್ಲದೆ ಆ ವೃಂದಾವನದಲ್ಲಿ ವಸಂತಕಾಲದ ಸೊಂಪಿನಿಂದ ಕೂಡಿರುವ ಎಳೆದಾದ ಚಿಗುರುಗಳಿಂದಲೂ, ಹೂವುಗಳಿಂದಲೂ ಚೆಲುವನ್ನು ಬೀರುವ ಮಂದಾರ, ಶ್ರೀಗಂಧ, ಸಂಪಿಗೆ, ಕದಂಬವೃಕ್ಷ, ಬೇವು, ಕಾಡುಮಾವು, ಮಾವು, ಹಲಸು, ಅಗುರು,

ಸನ್ನೋಮೇದಿನೀಜಲಜವೃಂದಮನೋಹರಾಭಂ
ವೃಂದಾರಕಂ ವರವನಂ ತುಲಸೀಲತಾಢ್ಯಂ ।
ಶ್ರೀಮಲ್ಲಿಕಾಮೃತಲತಾಮಧುಮಾಧವೀಭಿಃ
ಸಂರಾಜಿತಂ ಸ್ಮರ ನೃಪೇಂದ್ರವ್ರಜಸ್ಯ ಮಧ್ಯೇ ॥ ೧೨ ॥

ವಂಶೀವಟಂ ಚ ಕಲಕಂಠವಿಹಂಗವೃಕ್ಷೈ
ಕೃಷ್ಣಾತಟೇ ಚ ಪುಲಿನಂ ಕಿಲ ವಾಲುಕಾಢ್ಯಂ ।
ಶ್ರೀಪಾಟಲ್ಯೈರ್ಮಧುಕಕಿಂಶುಕಸತ್ಪ್ರಿಯಾಲೈ-
ರೌದುಂಬರೈಃ ಕ್ರಮುಕದ್ರಾಕ್ಷಕಪಿತ್ಥಯುಕ್ತಂ ॥ ೧೩ ॥

ಶ್ರೀಕೋವಿದಾರಪಿಚುಮುಂದಲತಾರ್ಜುನೈಶ್ಚ
ಪ್ಲಕ್ಷೈರಶೋಕಸರಲೈಸ್ಸುರದಾರುಭಿಶ್ಚ ।
ಜಂಬೂಸುವೇತ್ರನಲಕುಬ್ಜಕಸ್ವರ್ಣಯೂಥೀ
ಪುನ್ನಾಗನಾಗಕುಟಜೈಃ ಕುರಬೈರ್ವೃತಂ ಚ ॥ ೧೪ ॥

ಪುನ್ನಾಗ, ರಂಗ, ಸಿರಿತಾಳೆ, ಹಿಪ್ಪಲಿ, ಆಲ, ತೆಂಗು, ಖರ್ಜೂರ, ಬಿಲ್ವ, ಲವಂಗ, ಮಂಜೀರ- ಸಾಲ, ಹೊಂಗೆ, ಕಡವೆ, ಸಂತಾನಕ, ಮೊಲ್ಲೆ, ಎಲಚಿ, ಬಾಳೆ, ಬಿಳಿಯಮರ, ಬೂರುಗ, ಪಗಡೆ, ಕೇದಗೆ, ಬಾಗೆ ಮೊದಲಾದ ಮರಗಳಿರುವುವು. ಮತ್ತು ತಾವರೆ, ನೈದಿಲೆ ಮೊದಲಾದ ಪುಷ್ಪಗಳಿಂದಲೂ ತುಲಸೀವನಗಳಿಂದಲೂ, ಮಲ್ಲಿಗೆ, ಅಮೃತಲತೆ, ಮಾಧವೀಲತೆಗಳಿಂದಲೂ ಆ ವೃಂದಾವನವು ವ್ರಜಮಂಡಲದ ನಡುವೆ ಕಂಗೊಳಿಸುತ್ತಿರುವುದು. ಓ ರಾಜೇಂದ್ರ ! ಇಂತಹ ವೃಂದಾವನವನ್ನು ಹೃದಯದಲ್ಲಿ ಭಾವಿಸು.

೧೩-೧೭. ಅದೇರೀತಿ ಯಮುನಾನದಿಯ ಅಂಚಿನಲ್ಲಿ ಸಣ್ಣ ಮರಗಳಿಂದ ಕೂಡಿ ವಿಶಾಲವಾಗಿ ಹರಡಿರುವ ಮರಳುದಿಣ್ಣೆಯನ್ನೂ ಮನಸ್ಸಿನಲ್ಲಿ ಭಾವಿಸು. ಆ ಮರಳುದಿಣ್ಣೆಯಮೇಲೆ ಬಿದಿರುಮೆಳೆಗಳೂ, ಆಲದ ಮರಗಳೂ, ಪಾದರಿ, ಹಿಪ್ಪೆ, ಮುತ್ತುಗ, ಪ್ರಿಯಾಲ, ಅತ್ತಿ, ಅಡಕೆ, ದ್ರಾಕ್ಷೆ, ಬೇಲ, ಕೋವಿದಾರ, ಬೇವು, ಬಿಳಿ ಮತ್ತಿ, ಬಸುರಿ, ಅಶೋಕ, ಸರಳ, ಸುರಹೊನ್ನೆ, ನೇರಿಲೆ ಬೆತ್ತ ಮೊದಲಾದ ತೃಣ ಜಾತಿಗಳು, ಗುಜ್ಜುಮರ, ಕಾಂಚನವೃಕ್ಷ,

ಚಕ್ರಾಹ್ವಸಾರಸಶುಕೈಃ ಸಿತರಾಜಹಂಸೈಃ
ಕಾರಂಡವೈಶ್ಚ ಜಲಕುಕ್ಕುಟಕೂಜಿತಂ ಚ ॥ ೧೫ ॥

ದಾತ್ಯೂಹಕೋಕಿಲಕಪೋತಕನೀಲಕಂಠೈ-
ರ್ನೃತ್ಯನ್ಮಯೂರಕಲರಾವವೃತಂ ಸ್ಮರ ತ್ವಂ ॥ ೧೬ ॥

ಶ್ಯಾಮಾಚಕೋರಕಲಖಂಜನಸಾರಿಕಾಭಿಃ
ಪಾರಾವತೈರ್ಭ್ರಮರತಿತ್ತಿರತಿತ್ತಿರೀಭಿಃ ।
ಶ್ರೀಕಾಂಚನೀಮಧುಲತಾಮಧುಯೂಥಿಕಾಭಿಃ
ಸಂವೇಷ್ಟಿತಂ ಹರಿಣಮರ್ಕಟಮರ್ಕಟೀಭಿಃ ॥ ೧೭ ॥

ಶ್ರೀಪದ್ಮರಾಗಶಿಖರಂ ಚ ನಿಕುಂಜಗೇಹಂ
ಶ್ರೀಕೌಸ್ತುಭೇಂದ್ರಮಣಿರಾಜಿವಿರಾಜಮಾನಂ ।
ಕೋಟೀಂದುಮಂಡಲವಿತಾನಗಣೈಶ್ಚ ಹೇಮ್ನೈಃ
ಶ್ರೀಪಟ್ಟಸೂತ್ರರಚಿತೈರ್ಮಣಿತೋರಣಾಢ್ಯಂ ॥ ೧೮ ॥

ಯೂಥಿಕಾ, ಪುನ್ನಾಗ, ನಾಗಸಂಪಿಗೆ, ಗಿರಿಮಲ್ಲಿಗೆ, ಕುರುವಕ, ಮುಂತಾದ ಪುಷ್ಪ ಫಲಭರಿತವಾದ ಲತೆಗಳೂ ವೃಕ್ಷಗಳೂ ಬೆಳೆದಿರುವುವು. ಅಲ್ಲದೆ ಅಲ್ಲಿ ಇಂಪಾಗಿ ಧ್ವನಿಮಾಡುವ ಹಕ್ಕಿಗಳೂ, ಚಕ್ರವಾಕ, ಸಾರಸ, ಬಿಳಿಯ ರಾಜಹಂಸ, ಕಾರಂಡವ, ನೀರುಕೋಳಿ ಮುಂತಾದ ಜಲಚರಪಕ್ಷಿಗಳೂ, ಗಿಳಿ, ಭರತಪಕ್ಷಿ, ಕೋಗಿಲೆ, ಪಾರಿವಾಳ, ನವಿಲು, ಚಕೋರ, ಖಂಜರೀಟ, ಹೆಣ್ಣುಗಿಣಿ, ತಿತ್ತಿರಿ ಮುಂತಾದ ಆಕಾಶಚಾರಿಗಳಾದ ಪಕ್ಷಿಗಳೂ ಭ್ರಮರಗಳೂ ಮನೋಹರವಾಗಿ ವಿಹರಿಸುತ್ತಿರುವುವು. ನವಿಲುಗಳು ಆನಂದದಿಂದ ಮಧುರವಾದ ಕೇಕಾ ಧ್ವನಿಯನ್ನು ಮಾಡುತ್ತಾ ನರ್ತನವನ್ನು ಮಾಡುತ್ತಿರುವುವು. ಮತ್ತು ಆ ಸೈಕತ ಪ್ರದೇಶದಲ್ಲಿ ಕಾಂಚನ, ಮಧುವೃಕ್ಷಗಳೂ, ಮಾಧ್ವೀಲತೆ, ಯೂಥಿಯಕಾಲತೆಗಳೂ ಬೆಳೆದಿರುವುದಲ್ಲದೆ ಜಿಂಕೆಗಳೂ, ಗಂಡು ಹೆಣ್ಣು ಕೋತಿಗಳೂ ಸುತ್ತಾಡುತ್ತಿರುವುವು. ಇಂತಹ ಯಮುನಾನದಿಯ ಪುಲಿನಪ್ರದೇಶವನ್ನು ಮನಸ್ಸಿನಲ್ಲಿ ಸ್ಮರಿಸು. ಅದರಂತೆಯೇ ಶ್ರೀಕೃಷ್ಣನ ವಿಹಾರ ಮಂದಿರವಾದ ನಿಕುಂಜಗೃಹವನ್ನು ಮನಸ್ಸಿನಲ್ಲಿ ಭಾವಿಸು.

೧೮-೨೨. ಆ ನಿಕುಂಜಸದನವು ಪದ್ಮರಾಗಮಣಿನಿರ್ಮಿತವಾದ ಶಿಖರದಿಂದಲೂ, ಕೌಸ್ತುಭವೆಂಬ ರತ್ನಜಾತಿಗೆ ಸೇರಿದ ರತ್ನಗಳ ಸಾಲು

ಮುಕ್ತಾವೃತೈಃ ಕನಕಪೀತಪತತ್ಪತಾಕೈಃ
ಪಾರಾವತೈಃ ಸಿತಪತತ್ರಿಭಿರಾವೃತಂ ಚ ।
ಮಂದಾರಕುಂದಕರವೀರಕಯೂಥಿಕಾನಾಂ
ಮಾಲಾವಿಚಿತ್ರರಚಿತಂ ನವಚಂಪಕಾನಾಂ ॥ ೧೯ ॥

ನಾಗೇಶಪದ್ಮಹರಿಚಂದನಪಲ್ಲವಾನಾಂ
ಶ್ರೀಮಾಲತೀಕುರಬಕಾಂಚನಯೂಥಿಕಾನಾಂ ।
ಮಾಲಾಭಿರಾವೃತಮನಂಗಹರಂ ಗೃಹಂ ತ-
ತ್ಸದ್ರತ್ನದರ್ಪಣವೃತಂ ಸಿತಚಾಮರೈಶ್ಚ ॥ ೨೦ ॥

ಸಿಂಹಾಸನೈಶ್ಚ ನವಪಲ್ಲವಪುಷ್ಪಯುಕ್ತೈಃ
ಶಯ್ಯಾಸನೈಃ ಕನಕವಿದ್ರುಮಪಾದವೃಂದೈಃ ।
ಶ್ರೀಚಂದನಾಗುರುಜಲೈರ್ಮಕರಂದಸಂಘೈಃ
ಕಸ್ತೂರಿಕಾಮುದಿತಕುಂಕುಮಚರ್ಚಿತಂ ತತ್ ॥ ೨೧ ॥

ಗಳಿಂದಲೂ, ಕೋಟಿಸೂರ್ಯರಿಗೆಣೆಯಾದ ಶುಭ್ರವಾದ ಮೇಲ್ಕಟ್ಟುಗಳಿಂದಲೂ, ರಂಜಿಸುತ್ತಿರುವುದು. ಆ ಮೇಲ್ಕಟ್ಟಿನ ಬಟ್ಟೆಗಳು ರೇಶಿಮೆಯ ಎಳೆಗಳಿಂದ ನೇಯಲ್ಪಟ್ಟಿದ್ದು ಅಂಚಿನಲ್ಲಿ ಚಿನ್ನದ ಸರಿಗೆಗಳಿಂದ ಕಂಗೊಳಿಸುತ್ತಿರುವುವು. ಆ ನಿಕುಂಜಸದನದಲ್ಲಿ ಮಣಿಮಯವಾದ ತೋರಣಗಳನ್ನು ಕಟ್ಟಿರುವರು. ಅಂಚಿನಲ್ಲಿ ಮುತ್ತುಗಳನ್ನೂ, ಚಿನ್ನದ ಕುಸುರಿಗಳನ್ನೂ ತಳೆದು ಹೊಂಬಣ್ಣವಾಗಿ ಕಂಗೊಳಿಸುತ್ತಿರುವ ಪತಾಕೆಗಳನ್ನು ಎತ್ತಿಕಟ್ಟಿರುವರು. ಅಲ್ಲಿ ಪಾರಿವಾಳಗಳೂ, ಬಿಳಿಯ ಹಕ್ಕಿಗಳೂ ಹಾರಿ ಬಂದು ಕುಳಿತುಕೊಳ್ಳುತ್ತಿರುವುವು. ಇದೂ ಅಲ್ಲದೆ ಅಲ್ಲಿ ಮಂದಾರ, ಮೊಲ್ಲೆ, ಕರವೀರ, ಯೂಥಿಕಾ, ಸಂಪಿಗೆ ಮುಂತಾದ ಪುಷ್ಪಗಳ ಮಾಲೆಗಳನ್ನು ಚಿತ್ರ ವಿಚಿತ್ರವಾಗಿ ಇಳಿಯಬಿಟ್ಟಿರುವರು. ಮತ್ತು ನಾಗಕೇಸರ, ಪದ್ಮ, ಹರಿಚಂದನ, ಜಾಜಿ, ಕುರವಕ, ಕಾಂಚನ ಮುಂತಾದ ಪುಷ್ಪಗಳ ರಸಗಳಿಂದಲೂ ಎಳೆಯ ಚಿಗರುಗಳ ದಂಡೆಗಳಿಂದಲೂ ಅಲ್ಲಲ್ಲಿ ತೂಗಬಿಟ್ಟು ಆ ನಿಕುಂಜಗೃಹವನ್ನಲಂಕರಿಸಿರುವರು ಅಲ್ಲದೆ ಅಲ್ಲಿ ಮಣಿಮಯವಾದ ಕನ್ನಡಿಗಳು, ಬಿಳುಪಾದ ಚಾಮರಗಳು, ದಿವ್ಯವಾದ ಸಿಂಹಾಸನಗಳು,

ಏತದ್ವಸಂತತರುಪಲ್ಲವಮೇವ ವಾತೈಃ
ಶೀತೈರ್ಗಜೇಂದ್ರಗಮನೈಃ ಸುರಭೀಕೃತಾಂಗಂ ।
ಏತಾದೃಶಂ ಹರಿನಿಕುಂಜಗೃಹಂ ಸ್ಮರ ತ್ವಂ
ಸನ್ನಮ್ರಶಾಖತರುಯುಕ್ತಮತೀವ ಪುಷ್ಪೈಃ ॥ ೨೨ ॥

ಶ್ರೀವೇಣುಗೀತಂ ಬಹುಕಾಮವರ್ಧನಂ
ನಿಶಮ್ಯ ಸರ್ವಾ ವ್ರಜಯೋಷಿತೋ ನೃಪ ।
ಶ್ರೀಕೃಷ್ಣಕಾಂತೇನ ಗೃಹೀತಮಾನಸಾ
ವಿಸೃಜ್ಯ ಕರ್ಮಾಣಿ ಸಮಾಯಯುರ್ವನೇ ॥ ೨೩ ॥

ಎಳೆ ಚಿಗರುಗಳಿಂದಲೂ ಹೂವುಗಳಿಂದಲೂ ರಚಿಸಿರುವ ಶಯ್ಯೆ ಮೊದಲಾದ ಆಸನಗಳು ಕಂಗೊಳಿಸುತ್ತಿರುವುವು. ಆ ಆಸನಗಳ ಕಾಲುಗಳು ಕೆಲವು ಚಿನ್ನದಿಂದಲೂ ಕೆಲವು ಹವಳದಿಂದಲೂ ನಿರ್ಮಿತವಾಗಿರುವುವು. ಆ ನಿಕುಂಜ ಸದನದ ನೆಲದಮೇಲೆ ಆಗಾಗ್ಗೆ ಗಂಧದ ನೀರಿನಿಂದಲೂ ಅಗುರುಚಕ್ಕೆಯ ನೀರಿನಿಂದಲೂ ಪುಷ್ಪಗಳ ಮಕರಂದಗಳಿಂದಲೂ ಧೂಳು ಏಳದ ಹಾಗೆ ಚಿಮುಕಿಸುತ್ತಿರುವರು. ಮತ್ತು ಕಸ್ತೂರಿ, ಕೇಸರಿ ಇವುಗಳನ್ನು ಅರೆದು ಸುತ್ತಲೂ ಲೇಪಿಸಿರುವರು. ಆ ನಿಕುಂಜದಮೇಲೆ ಪುಷ್ಪಭಾರದಿಂದ ಬಾಗಿರುವ ವೃಕ್ಷಗಳು ಸುತ್ತಲೂ ನೆರಳನ್ನು ಬೀರುತ್ತಿರುವುವು. ಆ ಪ್ರದೇಶದಲ್ಲಿ ವಸಂತಕಾಲದಲ್ಲಿರುವಂತೆ ಸರ್ವದಾ ಎಳೆಯ ಚಿಗುರುಗಳು ಕಂಗೊಳಿಸುತ್ತಿರುವುವು. ಅಲ್ಲಿ ಎಳೆಗಾಳಿಯು ಪರಿಮಲವನ್ನು ಹೊತ್ತು ಮದ್ದಾನೆಯಂತೆ ಮಂದವಾದ ಗಮನದಿಂದ ಶೀತಲವಾಗಿ ಬೀಸುತ್ತಿರುವುದು. ಇಂತಹ ಮನೋಹರವಾದ ಶ್ರೀಕೃಷ್ಣನ ವಿಹಾರ ಮಂದಿರವಾದ ನಿಕುಂಜಗೃಹವನ್ನು ಮನಸ್ಸಿನಲ್ಲಿ ಭಾವಿಸು.

೨೩. ಓ ರಾಜೇಂದ್ರ, ಇತ್ತಲಾಗಿ ಮನ್ಮಥತಾಪವನ್ನು ಹೆಚ್ಚಿಸುವಂತಹ ಆ ಶ್ರೀಕೃಷ್ಣನ ಕೊಳಲಿನ ದನಿಯನ್ನು ಕೇಳುತ್ತಲೇ ಗೋಕುಲದಲ್ಲಿದ್ದ ಗೋಪಾಂಗನೆಯರೆಲ್ಲರೂ ಕೃಷ್ಣನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ತಮ್ಮ ತಮ್ಮ ಮನೆಯ ಕೆಲಸಗಳನ್ನು ಅಷ್ಟಷ್ಟಕ್ಕೇ ನಿಲ್ಲಿಸಿಬಿಟ್ಟು ಆತನಿದ್ದ ವೃಂದಾವನ ಪ್ರದೇಶಕ್ಕೆ ಬಂದುಬಿಟ್ಟರು.

ರುದ್ಧಾ ಯಾಃ ಪತಿಭೀ ರಾಜನ್ ಕೃಷ್ಣೇನ ಹೃತಮಾನಸಾಃ ।
ಸ್ಥೂಲಂ ಶರೀರಂ ತಾಸ್ತ್ಯಕ್ತ್ವಾ ತ್ವರಂ ಕೃಷ್ಣಾಂತಿಕಂ ಯಯುಃ ॥

ಸಿಂಹಾಸನೇ ಹೇಮದುಕೂಲಸಂಯುತೇ
ಮಧ್ಯೇ ಸ್ಥಿತಂ ಸುಂದರನಂದನಂದನಂ ।
ಶ್ರೀಸುಂದರೀ ರಾಧಿಕಯಾ ಸಮಂ ಪರಂ
ಗಲೇ ದಧಾನಂ ಮಧುಮಾಲತೀಸ್ರಜಂ ॥ ೨೫ ॥

ಶ್ಯಾಮಂ ಪ್ರಭಾತಾರ್ಕಕಿರೀಟಿನಂ ಹರಿಂ
ಸ್ಫುರತ್ಪ್ರಭಂ ಶ್ರೀಮುರಲೀಮನೋಹರಂ ।
ಪೀತಾಂಬರಂ ಮನ್ಮಥರಾಶಿಮೋಹನಂ
ವ್ರಜಸ್ತ್ರಿಯಸ್ತಂ ದದೃಶುಃ ಸಮಾಗತಾಃ ॥ ೨೬ ॥

---

೨೪. ಓ ರಾಜಾ! ಯಾವ ಯಾವ ಸ್ತ್ರೀಯರು ತಮ್ಮ ಪತಿಗಳಿಂದ ತಪ್ಪಿಸಿಕೊಂಡು ಬರಲಾರದೆ ಕಟ್ಟಿಹಾಕಲ್ಪಟ್ಟಂತೆ ತಲ್ಲಣಿಸುತ್ತಿದ್ದರೋ, ಅವರೆಲ್ಲರೂ ಕೃಷ್ಣನಿಂದ ತಮ್ಮ ಮನಸ್ಸು ಆಕರ್ಷಿತವಾಗಿರುವುದರಿಂದ ಮನೆಯಲ್ಲಿ ನೆಪಮಾತ್ರಕ್ಕೆ ಸ್ಥೂಲವಾದ ಶರೀರವನ್ನು ನಿಲ್ಲಿಸಿ ಸೂಕ್ಷ್ಮರೂಪದಿಂದ ಜಾಗ್ರತೆಯಾಗಿ ಅವನಿದ್ದಲ್ಲಿಗೆ ಬಂದುಬಿಟ್ಟರು.

೨೫-೨೬. ಆ ಶ್ರೀಕೃಷ್ಣನು ಚಿನ್ನದ ಎಳೆಗಳಿಂದಲೇ ರಚಿಸಲ್ಪಟ್ಟಿದ್ದ ದಿವ್ಯವಾದ ದುಕೂಲಗಳನ್ನು ಹಾಸಿದ್ದ ಸಿಂಹಾಸನದ ನಡುವೆ ಮಹಾ ರೂಪವತಿಯಾದ ರಾಧೆಯೊಡನೆ ಕುಳಿತಿದ್ದನು. ಕತ್ತಿನಲ್ಲಿ ವಸಂತಕಾಲದಲ್ಲಿ ಬಿಡುವ ಮಲ್ಲಿಗೆ ಹೂಗಳ ದಂಡೆಯನ್ನು ಧರಿಸಿದ್ದನು. ಲಾವಣ್ಯದಲ್ಲಿ ಕೋಟಿ ಮನ್ಮಥರನ್ನೂ ನೀವಾಳಿಸುವಂತಿದ್ದ ಆ ನಂದನಂದನನು ಶ್ಯಾಮಲವಾದ ಶರೀರಕಾಂತಿಯಿಂದಲೂ, ಉದಯಿಸುತ್ತಿರುವ ಸೂರ್ಯನನ್ನು ಹೋಲುವ ಕಿರೀಟದಿಂದಲೂ, ಉಟ್ಟಿರುವ ಪಟ್ಟೆಮಡಿಯಿಂದಲೂ ಮತ್ತಷ್ಟು ತೇಜಸ್ಸಿನಿಂದ ಮೆರೆಯುತ್ತಾ ಕೊಳಲನ್ನು ಹಿಡಿದು ಮನೋಹರವಾಗಿ ಕಂಗೊಳಿಸುತ್ತಿದ್ದನು.

ದೃಷ್ಟ್ವಾ ಪ್ರಿಯಾ ಪ್ರಿಯತಮಂ ಮತ್ಸ್ಯಕುಂಡಲಿನಂ ಹರಿಂ ।
ಗೋಪ್ಯೋ ಮೂರ್ಛಾಂ ಗತಾಃ ಸದ್ಯೋ ಭೂಪ ಚಾಲಕ್ಷಿತೋದ್ಯಮಾಃ ॥

ಸಾಂತ್ವಯಾಮಾಸ ತಾಃ ಕೃಷ್ಣೋ ಮಿಷ್ಟವಾಕ್ಯೈಃ ಸುಧಾಸಮೈಃ ।
ತದಾ ಗೋಪ್ಯೋ ವನೇ ದೇಶೇ ಸರ್ವಾಶ್ಚೈತನ್ಯತಾಂ ಗತಾಃ ॥ ೨೮ ॥

ಕೃಷ್ಣಾಂ ಗದ್ಗದಯಾ ವಾಚಾಸ್ತುತ್ವಾ ಭೀತಾಃ ಸ್ತ್ರಿಯೋ ವರಾಃ ।
ತ್ಯಕ್ತ್ವಾ ವಿರಹಜಂ ದುಃಖಂ ಗೋವಿಂದಂ ದದೃಶುಃ ಪ್ರಿಯಂ ॥ ೨೯ ॥

ವೃಂದಾವನೇ ಭ್ರಾಜಮಾನೇ ಮಾಲತೀವನಸಂಕುಲೇ ।
ದಿವ್ಯದ್ರುಮಲತಾಜಾಲೇ ಮಧುಪಧ್ವನಿನಾದಿತೇ ॥ ೩೦ ॥

---

೨೭. ಹೇ ರಾಜೇಂದ್ರ! ಆ ಗೋಪಾಂಗನೆಯರೆಲ್ಲರೂ ಅಲ್ಲಿಗೆ ಬಂದಕೂಡಲೇ ಮೀನಿನಂತೆ ಕಂಗೊಳಿಸುವ ಕುಂಡಲಗಳಿಂದ ಮುದ್ದಾಗಿ ತೋರುವ ಪ್ರಿಯತಮನಾದ ಆ ವ್ರಜೇಶ್ವರನನ್ನು ಕಂಡು ಏನು ಮಾಡಬೇಕೆಂದೂ ತೋರದೆ ಮೈಮರೆತು ತಟ್ಟನೆ ಮೂರ್ಛಿತರಾದರು.

೨೮. ಆಗ ಕೃಷ್ಣನು ಅಮೃತಮಯವಾದ ಮಧುರ ವಾಕ್ಯಗಳಿಂದ ಅಲ್ಲಿ ಮೂರ್ಛಿತರಾದ ಆ ಗೋಪಾಂಗನೆಯರೆಲ್ಲರನ್ನೂ ಸಂತೈಸಿದನು. ಬಳಿಕ ಅವರೆಲ್ಲರೂ ಎಚ್ಚರವನ್ನು ಹೊಂದಿದರು.

೨೯. ಅನಂತರ ವ್ರಜೇಶ್ವರಿಯಾದ ರಾಧೆಯನ್ನು ಕಂಡು ಹೆದರಿದ ಆ ಗೋಪಿಯರು ಆಕೆಯನ್ನು ಗದ್ಗದವಾದ ಸ್ವರದಿಂದ ಸ್ತುತಿಗೈದು ಪ್ರಸನ್ನಳನ್ನಾಗಿ ಮಾಡಿಕೊಂಡುದಲ್ಲದೆ ತಮಗೆ ಅದುವರೆಗಿದ್ದ ವಿರಹ ದುಃಖವನ್ನು ತೊರೆದವರಾಗಿ ತಮ್ಮ ಪ್ರಿಯನಾದ ಶ್ರೀಕೃಷ್ಣನನ್ನು ಮನದಣಿಯೆ ಸಂದರ್ಶಿಸಿದರು.

೩೦-೩೧. ಅನಂತರ ತನ್ನ ಸೌಂದರ್ಯದಿಂದ ಮನ್ಮಥನಿಗೆ ಸರಿಸಮನೆನಿಸಿದ ಆ ಶ್ರೀಕೃಷ್ಣನು ತನ್ನ ಕೈಯಿಂದ ಕಮಲದಂತೆ ಸುಂದರವಾದ ರಾಧೆಯ ಕೈಯನ್ನು ಹಿಡಿದು ಸಾಲಾಗಿ ಬೆಳೆದಿರುವ ಜಾಜಿಯ ಬಳ್ಳಿಗಳಿಂದಲೂ,

ವಿಚಚಾರ ಹರಿಃ ಸಾಕ್ಷಾದ್ದೇವೋ ಮದನಮೋಹನಃ ।
ಪದ್ಮಾಭಂ ಪದ್ಮಹಸ್ತೇನ ಗೃಹೀತ್ವಾ ರಾಧಿಕಾಕರಂ ॥ ೩೦ ॥

ಪ್ರಹಸನ್ಭಗವಾನ್ಸಾಕ್ಷಾದಾಯಯೌ ಯಮುನಾತಟಂ ।
ಕೃಷ್ಣಾತೀರೇ ನಿಕುಂಜೇ ವೈ ಶ್ರೀಕೃಷ್ಣೋ ನಿಷಸಾದ ಹ ॥ ೩೧ ॥

ತಸ್ಮಿನ್ಗೃಹೇ ಮಧುಪತೇಃ ಶೃಣು ಗೋಪಿಕಾನಾಂ
ಶ್ರೀಕೃಷ್ಣಚಂದ್ರಚರಣಸ್ಮರಣಾವೃತಾನಾಂ ।
ಝುಂಕಾರನೂಪುರಝುಣತ್ಕರಕಂಕಣಾನಾಂ
ಮಂಜೀರರತ್ನವಿಚಲತ್ಕಟಿಕಿಂಕಿಣೀನಾಂ ॥ ೩೨ ॥

ಸೊಗಸಾದ ಲತಾವೃಕ್ಷಗಳಿಂದಲೂ ಝೇಂಕಾರ ಮಾಡುತ್ತಿರುವ ಭ್ರಮರ ಪಂಕ್ತಿಗಳಿಂದಲೂ ವಿರಾಜಿಸುತ್ತಿರುವ ಆ ವೃಂದಾವನದಲ್ಲಿ ಸಂಚರಿಸತೊಡಗಿದನು.

೩೧. ಹಾಗೆಯೇ ಸಂಚರಿಸುತ್ತಾ ಆ ಭಗವಂತನು ಸಂತೋಷದಿಂದ ನಗುನಗುತ್ತಾ ಯಮುನಾನದಿಯ ತೀರಪ್ರದೇಶಕ್ಕೆ ಬಂದು ಅಲ್ಲಿ ಒಂದು ರಮಣೀಯವಾದ ಲತಾಗೃಹದಲ್ಲಿ ಕುಳಿತನು.

೩೨. ಓ ರಾಜೇಂದ್ರ! ವಸಂತನ ನಿತ್ಯ ನಿವಾಸವೋ ಎನ್ನುವಂತಿದ್ದ ಆ ಲತಾಗೃಹದಲ್ಲಿ ನೆರೆದಿದ್ದ ಆ ಗೋಪಾಂಗನೆಯರ ಲೀಲೆಗಳೆಲ್ಲವನ್ನೂ ವಿವರಿಸುವೆನು ಕೇಳು. ಆ ಗೋಪಿಯರ ಮನಸ್ಸೆಲ್ಲವೂ ಶ್ರೀಕೃಷ್ಣನ ಚರಣಸ್ಮರಣೆಯಿಂದಲೇ ತುಂಬಿಹೋಗಿರುವುದು. ಅವರ ಸಡಗರದ ಓಡಾಟಗಳಲ್ಲಿ ಕಾಲ್ಗಡಗಗಳು ಘಲಘಲನೆ ಧ್ವನಿಗೈಯ್ಯುತ್ತಲೂ, ಕೈಬಳೆಗಳು ಝುಣಝುಣಾಕಾರವನ್ನು ಮಾಡುತ್ತಲೂ ರತ್ನಖಚಿತವಾದ ವಡ್ಯಾಣದ ಕಿರುಗೆಜ್ಜೆಗಳು ಇಂಪಾದ ಧ್ವನಿ ಮಾಡುತ್ತಲೂ ಅಲುಗಾಡುತ್ತಿರುವುವು.

ಸ್ಮೇರದ್ಯುತಿಸ್ಫುಟಚಮತ್ಕೃತಗಂಡದೇಶೈಃ
ಶ್ರೀದಂತಪಂಕ್ತಿವಿಲಸತ್ತಡಿದಾಲಿವೇಶೈಃ ।
ಕೋಟೀರಹಾರಹರಿದಂಗದಭೂಷಿತಾನಾಂ
ಬಾಲಾರ್ಕಮಂಡಲವಿಕುಂಡಲಮಂಡಿತಾನಾಂ ॥ ೩೪ ॥

ತಾಸಾಂ ತು ಕಾಪಿ ಯುವತೀ ಕಥಿತಾ ಚ ಮುಗ್ಧಾ
ಮಧ್ಯಾಪಿ ಕಾಪಿ ತರುಣೀ ರುಚಿರಾ ಪ್ರಗಲ್ಭಾ ।
ಕಾಚಿತ್ತರುಂ ವಿನಯತೀ ಮಧುರಂ ಹಸಂತೀ
ಕಾಚಿತ್ಸಖೀ ಮದಯುತಾ ಸುವನೇ ವ್ರಜಂತೀ ॥ ೩೫ ॥

ಸಂತಾಡ್ಯ ತಾಮಪಿ ಕರೇಣ ತು ಕಾಪ್ಯಧಾವ-
ತ್ಸಂಗೃಹ್ಯ ಕಾಪಿ ಭುವನೇ ಕವುಲೈರ್ಜಘಾನ ।
ಕಾಚ್ಚಿಚಲತ್ಕನಕಹಾರಮುಪಾಜಹಾರ
ಕಾಚಿತ್ಪ್ರಮುಕ್ತಕಬರೀ ತು ವಿಹಾರಮತ್ತಾ ॥ ೩೬ ॥

---

೩೪. ಅವರ ಮುಖದಲ್ಲಿ ಉತ್ಸಾಹದಭರದಿಂದ ಮಂದಹಾಸವು ಮೂಡಿ ಅದರ ಕಾಂತಿಯಿಂದ ಕಪೋಲಗಳು ಕಂಗೊಳಿಸುತ್ತಿರುವುವು. ಅವರ ಸಾಲಾಗಿ ಶೋಭಿಸುವ ದಂತಪಂಕ್ತಿಯು ಶುಭ್ರವಾದ ಕಾಂತಿಯಿಂದ ಮಿಂಚನ್ನು ಹೋಲುತ್ತಿರುವುದು. ಅವರು ದಿವ್ಯವಾದ ಕಿರೀಟವನ್ನೂ, ಹಾರಗಳನ್ನೂ, ಪಚ್ಚೆಯ ತೋಳು ಬಂದಿಗಳನ್ನೂ ತೊಟ್ಟು ಸಿಂಗರಿಸಿಕೊಂಡಿರುವರು. ಅವರ ಕಿವಿಯೋಲೆಗಳು ಉದಯಿಸುತ್ತಿರುವ ಸೂರ್ಯನ ಮಂಡಲದಂತೆ ರಮಣೀಯ ವಾಗಿರುವುವು.

೩೫. ಆ ಗೋಪಾಂಗನೆಯರಲ್ಲಿ ಒಬ್ಬಳು ಮುಗ್ಧಾ ಎಂಬ ನಾಯಿಕಾ ಪ್ರಭೇದಕ್ಕೆ ಸೇರಿದವಳು, ಮತ್ತೊಬ್ಬಳು ಮಧ್ಯೆ ಎಂಬ ವಿಭಾಗಕ್ಕೆ ಸೇರಿದ ತರುಣಿ, ಮತ್ತೋರ್ವಳು ಪ್ರಗಲ್ಭೆ ಎಂಬ ಪ್ರೌಢೆ. ಅವರಲ್ಲಿ ಒಬ್ಬಳು ಮಧುರವಾಗಿ ನಗುನಗುತ್ತಾ ವೃಕ್ಷವೊಂದನ್ನು ಶಿಕ್ಷೆಮಾಡುತ್ತಿರುವಳು. ಮತ್ತೊಬ್ಬ ಸಖಿಯು ಮದಪರವಶಳಾಗಿ ಆ ವನದಲ್ಲೆಲ್ಲಾ ವಿಹರಿಸುತ್ತಿರುವಳು.

೩೬. ಮತ್ತೊಬ್ಬ ಕಾಮಿನಿಯು ಅವಳನ್ನು ಕೈಯಿಂದ ಹೊಡೆದು ದೂರವಾಗಿ ಓಡಿಹೋಗುತ್ತಿರುವಳು. ಇನ್ನೊಬ್ಬ ಯುವತಿಯು ಆರೀತಿ ಓಡಿ

ಶ್ರೀಜಾಹ್ನವೀ ಚ ಯಮುನಾ ಮಧುಮಾಧವೀ ಚ
ಶೀಲಾ ರಮಾ ಶಶಿಮುಖೀ ವಿರಜಾ ಸುಶೀಲಾ ।
ಚಂದ್ರಾನನಾ ಚ ಲಲಿತಾ ತ್ವಚಲಾ ವಿಶಾಖಾ
ಮಾಯಾದ್ಯ ಏವ ಕಥಿತಾ ಭವನೇ ತ್ವಸಂಖ್ಯಾಃ ॥ ೩೭ ॥

ಲೀಲಾತಪತ್ರಮತಿಮೌಕ್ತಿಕದಾಮಜಾಲಂ
ನೀತ್ವಾ ಚಲಂತಿ ಮಣಿಭೂಮಿಷು ತತ್ರ ಕಾಶ್ಚಿತ್ ।
ಶ್ರೀಚಾಮರವ್ಯಜನದಂಡಧರಾ ವಯಸ್ಯಃ
ಕಾಶ್ಚಿದ್ವ್ರಜಂತಿ ಧೃತಪೀತಪತತ್ಪತಾಕಾಃ ॥ ೩೮ ॥

ಹೋಗುವವಳನ್ನು ಹಿಡಿದು ನಿಲ್ಲಿಸಿ ಕೈಲಿದ್ದ ಲೀಲಾಪದ್ಮದಿಂದ ಹೊಡೆಯುತ್ತಿರುವಳು. ಇನ್ನೂ ಒಬ್ಬ ರಮಣಿಯು ಜಾರಿಹೋಗುತ್ತಿರುವ ಚಿನ್ನದ ಸರವನ್ನು ಸರಿಪಡಿಸಿಕೊಳ್ಳುತ್ತಿರುವಳು. ಬೇರೊಬ್ಬ ಕಾಂತೆಯು ಕೇಶಪಾಶವು ಬಿಚ್ಚಿಹೋದುದೂ ತಿಳಿಯದಂತೆ ಮಧಾಂದಳಾಗಿ ವಿಹರಿಸುತ್ತಿರುವಳು.

೩೭. ಈರೀತಿ ವಿಹಾರಾಸಕ್ತರಾದ ಆ ಕೃಷ್ಣಸಖಿಯರು ಯಾರು? ಯಾರೆಂದರೆ, ಶ್ರೀಜಾಹ್ನವೀ, ಯಮುನಾ, ಮಧುಮಾಧವೀ, ಶೀಲಾ, ರಮಾ, ಶಶಿಮುಖಿ, ವಿರಜಾ, ಸುಶೀಲಾ, ಚಂದ್ರಾನನಾ, ಲಲಿತಾ, ಅಚಲಾ, ವಿಶಾಖಾ, ಮಾಯಾ, ಮೊದಲಾದವರು. ಇವರಿಗೆ ಲೆಕ್ಕವೇ ಇಲ್ಲ.

೩೮. ಆ ಸಖಿಯರಲ್ಲಿ ಒಬ್ಬಳು ಮುತ್ತಿನ ಜಾಲರಿಗಳಿಂದ ಮನೋಹರವಾಗಿರುವ ಲೀಲಾರ್ಹವಾದ ಛತ್ರವನ್ನು ಹಿಡಿದು ಆ ಮಣಿಮಯವಾದ ನೆಲದ ಮೇಲೆ ಹೋಗುತ್ತಿರುವಳು. ಇನ್ನೊಬ್ಬನು ಚಾಮರಗಳನ್ನೂ, ಮತ್ತೊಬ್ಬಳು ಬೀಸಣಿಗೆಗಳನ್ನೂ ಬೇರೊಬ್ಬಳು ಮಣಿ ದಂಡವನ್ನೂ ಹಿಡಿದು ನಡೆಯುತ್ತಿರುವರು. ಮತ್ತೆ ಕೆಲವು ಸಖಿಯರು ಗಾಳಿಯಿಂದ ಅಲುಗುತ್ತಿರುವ ಹೊಂಬಣ್ಣದ ಪತಾಕೆಗಳನ್ನು ಹಿಡಿದು ಮುಂಬರಿಯುತ್ತಿರುವರು.

ನೃತ್ಯಂತಿ ತತ್ರ ಹರಿವೇಷಧರಾಸ್ತು ಕಾಶ್ಚಿ-
ದ್ವೀಣಾಕರಾ ಮಧುರತಾಲಮೃದಂಗಹಸ್ತಾಃ ।
ವಂಶೀಧರಾಶ್ಚ ವೃಷಭಾನುಸುತಾಃ ಸುವೇಷಾಃ
ಕೇಯೂರಕುಂಡಲಯುತಾ ಮಣಿವೇತ್ರಹಸ್ತಾಃ ॥ ೩೯ ॥

ಸದ್ಭಾವಭಾವರಸತಾಲಯುತೆಸ್ಮಿತಾಕ್ತೈ-
ರ್ಝಂಕಾರನೂಪುರಯುತೈರ್ವಿಶದೈಃ ಕಟಾಕ್ಷೈಃ ।
ಸಂಗೀತನೃತ್ಯವಿದಿತೈರ್ಭ್ರುಕುಟೀವಿಭಂಗೈ-
ರಾಧಾಂ ಹರಿಂ ಚ ಸತತಂ ಪರಿತೋಷಯಂತ್ಯಃ ॥ ೪೦ ॥

---

೩೯. ಇನ್ನೂ ಕೆಲವು ಜನ ಸಖಿಯರು ಶ್ರೀಕೃಷ್ಣನಂತೆ ವೇಷವನ್ನು ಧರಿಸಿ ನರ್ತನ ಮಾಡುತ್ತಿರುವರು. ಕೆಲವರು ವೀಣೆಯನ್ನು ಬಾಜಿಸುತ್ತಿರುವರು. ಕೆಲವರು ತಾಳಗಳನ್ನೂ ಮೃದಂಗಗಳನ್ನೂ ಪಿಡಿದು ಇಂಪಾಗಿ ಬಾರಿಸುತ್ತಿರುವರು. ಕೆಲವರು ರಾಧೆಯ ವೇಷವನ್ನು ಧರಿಸಿ ಕೊಳಲನ್ನು ನುಡಿಸುತ್ತಿರುವರು. ಕೆಲವರು ತೋಳುಬಂದಿಗಳನ್ನೂ ಕೆಲವರು ದಿವ್ಯವಾದ ಕುಂಡಲಗಳನ್ನೂ ಕೆಲವರು ಮಣಿಮಯವಾದ ವೇತ್ರ (ಬೆತ್ತ) ಗಳನ್ನೂ ಧರಿಸಿರುವರು.

೪೦. ಕೆಲವು ಮಂದಿ ಲಲನೆಯರು ಝುನಝುನ ಎಂದು ಧ್ವನಿಮಾಡುವ ಕಾಲಂದಿಗೆಗಳಿಂದಲೂ, ರಾಗಸೂಚಕವಾದ ಕಡೆಗಣ್ಣುಗಳ ನೋಟಗಳಿಂದಲೂ ಕುಟಿಲವಾದ ಭ್ರೂವಿಲಾಸಗಳಿಂದಲೂ, ಮಧುರವಾದ ಸಂಗೀತದಿಂದಲೂ ತಾಲಾನುಗುಣವಾದ ಗತಿಗಳಿಂದಲೂ, ಮನೋಹರವಾದ ಮೆಲುನಗೆಯಿಂದಲೂ ನರ್ತನದಲ್ಲಿ ತೊಡಗಿ ನಾನಾವಿಧವಾದ ಹಾವಭಾವಗಳನ್ನೂ ಶೃಂಗಾರ ಕರುಣಾದಿ ರಸಗಳನ್ನೂ ಅಭಿನಯಿಸಿ ಪ್ರದರ್ಶಿಸುತ್ತಾ ವ್ರಜರಾಜರಾಣಿಯರಾದ ಶ್ರೀಕೃಷ್ಣನನ್ನೂ ರಾಧೆಯನ್ನೂ ಸಂತೋಷಗೊಳಿಸುತ್ತಲಿರುವರು.

ತಸ್ಮಿನ್ನಿಕುಂಜಭವನೇ ಯಮುನಾತಟೇಽಪಿ
ವಂಶೀವಟೇ ವನಧರಾನಿಕಟೇ ಹರಿಂ ತಂ ।
ಶ್ರೀರಾಧಯಾ ಚ ಗಿರಿರಾಜತಟಂ ವ್ರಜಂತಂ
ನಂದಾತ್ಮಜಂ ಚ ನಟವೇಷಧರಂ ಸ್ಮರ ತ್ವಂ ॥ ೪೧ ॥

ಶ್ರೀಪದ್ಮರಾಗನಖದೀಪ್ತಿಪದಾರವಿಂದಂ
ಝುಂಕಾರಿನೂಪುರಧರಂ ಸ್ಫುರದಂಗದೇಶಂ ।
ಕುರ್ವಂತಮೇವ ತು ಪದಾರುಣಭೂಮಿದೇಶಂ
ಶ್ರೀಮತ್ಪರಾಗಸುರುಚಾಲಮಿತಸ್ತತಸ್ತು ॥ ೪೨ ॥

ಲಕ್ಷ್ಮೀಕರಾಬ್ಜಪರಿಲಾಲಿತಜಾನುದೇಶಂ
ರಂಭೋರುಪೀತವಸನಂ ತು ಕೃಶೋದರಾಭಂ ।
ರೋಮಾವಲಿಭ್ರಮರನಾಭಿಸರಸ್ತ್ರಿರೇಖಂ
ಕಾಂಚೀಧರಂ ಭೃಗುಪದಂ ಮಣಿಕೌಸ್ತುಭಾಢ್ಯಂ ॥ ೪೩ ॥

---

೪೧. ಓ ರಾಜೇಂದ್ರ ! ನಿಕುಂಜಮಂದಿರದಲ್ಲಿಯೂ ಯಮುನಾ ನದಿಯ ತೀರದಲ್ಲಿಯೂ, ಅದರ ಪುಲಿನ ಪ್ರದೇಶದಲ್ಲಿ ಬೆಳೆದಿರುವ ವಂಶೀವಟದ ಅಕ್ಕಪಕ್ಕಗಳಲ್ಲೂ, ದಡದ ಆಚೆಯಿರುವ ಮರಗಳ ತೋಪಿನ ಬಳಿಯಲ್ಲಿಯೂ ರಾಧೆಯೊಡಗೂಡಿ ವಿಹರಿಸುತ್ತಾ ಗೋವರ್ಧನಗಿರಿಯ ತಪ್ಪಲಿನ ಕಡೆಗೆ ಹೊರಡುತ್ತಿರುವ ನಟವೇಷದಿಂದೊಪ್ಪುವ ಆ ನಂದನಂದನನ್ನು ಮನಸ್ಸಿನಲ್ಲಿ ಭಾವಿಸು.

೪೨. ಆ ಶ್ರೀಕೃಷ್ಣನ ಮನೋಹರ ರೂಪವನ್ನು ಇಂತು ಭಾವಿಸು. ರತ್ನದಂತೆ ಹೊಳೆಯುವ ಉಗುರುಗಳ ಕಾಂತಿ! ಕೆಂದಾವರೆಯನ್ನು ಹೋಲುವ ಪಾದಗಳು! ಝುಂ ಝುಂ ಎಂದು ಸದ್ದುಮಾಡುವ ಕಾಲ್ಗಡಗಗಳು! ತಳತಳನೆ ಹೊಳೆಯುವ ಅಂಗಗಳು! ನಡೆಯುವಾಗ ಅತ್ತಿತ್ತ ಹಾರುವ ಧೂಳಿನ ಕಣಗಳಿಂದ ನೆಲವೆಲ್ಲವೂ ಕೆಂಪಾಗುವಂತೆ ಎಸಗುವ ಸ್ವಾಭಾವಿಕವಾದ ಚರಣಕಾಂತಿ !

೪೩. ಲಕ್ಷ್ಮೀದೇವಿಯು ಕೈಲಿ ಹಿಡಿದಿರುವ ಲೀಲಾಕಮಲಗಳಿಂದ ಗಾಳಿ ಹಾಕಿ ಸೇರಿಸಲ್ಪಟ್ಟ ಮಂಡಿಗಳು! ಪೀತಾಂಬರದಿಂದ ಅಲಂಕೃತವಾದ ಬಾಳೆಯ

ಶ್ರೀವತ್ಸಹಾರರುಚಿರಂ ನವಮೇಘನೀಲಂ
ಪೀತಾಂಬರಂ ಕರಿಕರಸ್ಫುಟಬಾಹುದಂಡಂ ।
ರತ್ನಾಂಗದಂ ಚ ಮಣಿಕಂಕಣಪದ್ಮಹಸ್ತಂ
ಶ್ರೀರಾಜಹಂಸವರಕಂಧರಶೋಭಿಮಾನಂ ॥ ೪೪ ॥

ಶ್ರೀಕಂಬುಕಂಠಲಲಿತಂ ವಿಲಸತ್ಕಪೋಲಂ
ಮಧ್ಯಂ ತು[illegible]ನಿಮ್ನಚಿಬುಕಂ ಕಿಲ ಕುಂದದಂತಂ ।
ಬಿಂಬಾಧರಂ ಸ್ಮಿತಲಸಚ್ಛುಕಚಂಚುನಾಸಂ
ಪೀಯೂಷಕಲ್ಪವಚನಂ ಪ್ರಚಲತ್ಕಟಾಕ್ಷಂ ॥ ೪೫ ॥

ಕಂಬದಂತೆ ದುಂಡಗಿರುವ ತೊಡೆಗಳು! ಸಣ್ಣಗಿರುವ ನಡು! ದುಂಬಿಯ ಸಾಲನ್ನು ಹೋಲುವ ಕಪ್ಪಾದ ರೋಮರಾಜಿ! ಸರಸ್ಸಿನಂತೆ ಆಳವಾದ ನಾಭಿ ಪ್ರದೇಶ! ಒಡ್ಯಾಣದಂತೆ ಕಂಗೊಳಿಸುವ ಉದರ ಪ್ರದೇಶದಲ್ಲಿರುವ ಮೂರು ಗೆರೆಗಳು! ಭೃಗುಮಹರ್ಷಿಯ ಪದಚಿಹ್ನದಿಂದಲೂ, ಕೌಸ್ತುಭಮಣಿಯಿಂದಲೂ, ಶ್ರೀವತ್ಸವೆಂಬ ಮಚ್ಚೆಯಿಂದಲೂ ಅನೇಕವಾದ ಹಾರಗಳಿಂದಲೂ ಶೋಭಿಸುತ್ತಿರುವ ವಿಶಾಲವಾದ ಎದೆ!

೪೪. ಆಗತಾನೆ ನೀರು ತುಂಬಿಕೊಂಡು ಬಂದ ಕಾರ್ಮೋಡದಂತೆ ಕಪ್ಪಾದ ಶರೀರಕಾಂತಿ! ಉಟ್ಟಿರುವ ಪಟ್ಟೆಯ ಪೀತಾಂಬರ! ಆನೆಯ ಸೊಂಡಿಲಿನಂತೆ ದುಂಡಾಗಿ ನೀಳವಾಗಿರುವ ಬಾಹುಗಳು! ಆ ಬಾಹುಗಳಲ್ಲಿ ರತ್ನಖಚಿತವಾದ ಬಾಹುಪುರಿ ಮತ್ತು ಮಣಿಮಯವಾದ ಕಂಕಣಗಳು! ಲೀಲಾ ಕಮಲದಿಂದ ಪರಿಶೋಭಿಸುತ್ತಿರುವ ಕಮಲಸದೃಶವಾದ ಕೈಗಳು! ರಾಜಹಂಸದಂತೆಯೂ, ಶಂಖದಂತೆಯೂ ಅಂದವಾಗಿರುವ ಕುತ್ತಿಗೆ!

೪೫. ಹೊಳೆಯುತ್ತಿರುವ ಕೆನ್ನೆಗಳು! ಕೆಳಮುಖವಾಗಿ ಬಾಗಿರುವ ಚಿಬುಕ (ಗಡ್ಡ) ಪ್ರದೇಶ! ಮೊಲ್ಲೆಯ ಮೊಗ್ಗುಗಳಂತೆ ಸಣ್ಣಗೆ ಸಾಲಾಗಿ ಶೋಭಿಸುವ ದಂತಪಂಕ್ತಿ! ಮಂದಹಾಸದಿಂದ ಸುಂದರವಾದ ತೊಂಡೆಯ ಹಣ್ಣನ್ನೂ ನಾಚಿಸುವ ಕೆಂಪಾದ ತುಟಿಗಳು! ಗಿಳಿಯಕೊಕ್ಕಿನಂತೆ ಕೊನೆಯಲ್ಲಿ ಸ್ವಲ್ಪ ಬಾಗಿರುವ ಮೂಗು! ಅಮೃತದಂತೆ ಸವಿಯಾದ ಮಾತುಗಳು, ಚಂಚಲವಾಧ ಕುಡಿನೋಟ!

ಚೂಡಾಮಣಿದ್ಯುತಿಲಸತ್ಸ್ಫುರದರ್ಧಚಂದ್ರಾಂ
ಗ್ರೈವೇಯಕಾಲಪನಪತ್ರವಿಚಿತ್ರರೂಪಾಂ ।
ಶ್ರೀಪಟ್ಟಸೂತ್ರಮಣಿಪಟ್ಟಚಲದ್ದ್ವಿದಾಮ್ನೀಂ
ಸ್ಫೂರ್ಜತ್ಸಹಸ್ರದಲಪದ್ಮಧರಾಂ ಭಜಸ್ವ ॥ ೫೧ ॥

ಶ್ರೀಬಾಹುಕಂಕಣಲಸತ್ಕುಚರತ್ನದೀಪ್ತಿಂ
ಶ್ರೀನಾಸಿಕಾಭರಣಭೂಷಿತಗಂಡದೇಶಾಂ ।
ಸದ್ಯೌವನಾಲಸಗತಿಂ ಕಲಸರ್ಪವೇಣೀಂ
ಸಂಧ್ಯೇಂದುಕೋಟಿವದನಾಂ ಸ್ಫುಟಚಂಪಕಾಭಾಂ ॥ ೫೨ ॥

ಕಿವಿಯೋಲೆಗಳಿಂದ ಮೆರೆಯುತ್ತಿರುವಳು. ಆಕೆಯ ಕಂಠವೂ ಮತ್ತು ವಿಶಾಲವಾದ ಹಣೆಯೂ ಸೌಂದರ್ಯದಿಂದ ರಂಜಿಸುತ್ತಿರುವುದಲ್ಲದೆ, ಆಗತಾನೇ ಕೊಯ್ದು ತಂದ ಹೂಗಳಿಂದ ರಚಿಸಿದ ಮನೋಹರವಾದ ಐದು ಮಾಲೆಗಳನ್ನು ಧರಿಸಿರುವಳು. ಮತ್ತು ಕೈ ಬೆರಳುಗಳಲ್ಲಿ ರತ್ನಗಳ ಹರಳುಗಳನ್ನು ಕೆತ್ತಿರುವ ಉಂಗುರಗಳನ್ನು ಹಾಕಿಕೊಂಡಿರುವಳು.

೫೧. ಅಲ್ಲದೆ ಆಕೆಯ ತಲೆಯಮೇಲೆ ಅರ್ಧಚಂದ್ರಾಕಾರವಾದ ಆಭರಣವೊಂದು ಚೂಡಾಮಣಿಯ ಕಾಂತಿಯೊಡಗೂಡಿ ಮೆರೆಯುತ್ತಿರುವುದು. ಕೊರಳಿನಲ್ಲಿ ಬಗೆಬಗೆಯ ಹಾರಗಳೂ, ಮುಖದಲ್ಲಿ ಚಿತ್ರ ವಿಚಿತ್ರವಾದ ಮಕರಿಕಾದಿ ಪತ್ರವಿನ್ಯಾಸವೂ, ರಂಜಿಸುತ್ತಿರುವುದು. ಅಲ್ಲದೆ ನಡುವಿನಲ್ಲಿ ನಾನಾ ವಿಧವಾದ ರತ್ನಗಳನ್ನು ಪಟ್ಟೆಯದಾರದಲ್ಲಿ ಪೋಣಿಸಿ ಒಡ್ಯಾಣದಂತೆ ರಚಿಸಿರುವ ಎರಡು ಉಡೆಮಾಲುಗಳು ಶೋಭಿಸುತ್ತಿರುವುವು. ಮತ್ತು ಆಕೆಯ ಕೈಯಲ್ಲಿ ಸಾವಿರ ದಳಗಳಿರುವ ಸೊಗಸಾದ ಪದ್ಮವೊಂದನ್ನು ಹಿಡಿದಿರುವಳು.

೫೨. ಓ ರಾಜೇಂದ್ರ! ಆ ರಾಸೇಶ್ವರಿಯು ತೋಳುಗಳಲ್ಲಿ ತೊಟ್ಟಿರುವ ಬಾಜೂಬಂದುಗಳ ರತ್ನಕಾಂತಿಯು ಆಕೆಯ ಸ್ತನತಟಗಳಮೇಲೆ ಪ್ರಸರಿಸುತ್ತಿರುವುದು. ಅದರಂತೆ ಮೂಗುತಿಯ ಕಾಂತಿಯಿಂದ ಕಪೋಲ ಪ್ರದೇಶವು ರಮಣೀಯವಾಗಿರುವುದು. ಮತ್ತು ಆಕೆಯ ನೀಳವಾದ ಕೇಶಪಾಶವು ಕಾಲೋರಗದಂತೆಯೂ, ಮುಖಮಂಡಲವು ಸಂಧ್ಯಾಕಾಲದಲ್ಲಿ ಉದಯಿ

ಸದ್ಭಾವಭಾವಸಹಿತಾಂ ನವಪದ್ಮನೇತ್ರಾಂ
ಸ್ಫೂರ್ಜತ್ಸ್ಮಿತದ್ಯುತಿಕಲಾಂ ಪ್ರಚಲತ್ಕಟಾಕ್ಷಾಂ ।
ಕೃಷ್ಣಪ್ರಿಯಾಂ ಲಲಿತಕುಂತಲಪುಂತಲಾಭಾಂ
ಮಂದಾರಹಾರಮಧುರಭ್ರಮರೀರವಾಢ್ಯಾಂ　　|| ೫೩ ||

ಶ್ರೀಖಂಡಕುಂಕುಮಮೃದಾಗುರುವಾರಿಸಿಕ್ತಾಂ
ಶ್ರೀಬಿಂದುಕೀರುಚಿರಪತ್ರವಿಚಿತ್ರಚಿತ್ರಾಂ ।
ಸಂತಾನಪತ್ರರುಚಿರಾಮಲವಂಜನಾಭಾಂ
ರಾಸೇಶ್ವರೀಂ ಗಜಗತಿಂ ಭಜ ಪದ್ಮಿನೀಂ ತಾಂ　　|| ೫೪ ||

ಸುತ್ತಿರುವ ಕೋಟಿಚಂದ್ರರಿಗೆಣೆಯಾಗಿಯೂ, ಶರೀರ ವರ್ಣವು ಸಂಪಿಗೆಯ ಹೂವಿನಂತೆಯೂ ಕಂಗೊಳಿಸುತ್ತಿರುವುದು. ಆಕೆಯ ಗಮನವು (ನಡಿಗೆ) ಯವ್ವನಭರದಿಂದ ಅಲಸಾಲಸ (ನಿಧಾನ) ವಾಗಿರುವುದು.

೫೩. ಆ ರಮಣೀರತ್ನವು ರಮಣೀಯವಾದ ಹಾವಭಾವ ವಿಲಾಸಗಳಿಂದಲೂ, ಪದ್ಮಸದೃಶವಾದ ನಯನಗಳಿಂದಲೂ, ಮೆರೆಯುತ್ತಿರುವ ಮಂದಹಾಸದ ಕಾಂತಿಯಿಂದಲೂ, ಚಂಚಲವಾದ ಕೊನೆಗಣ್ಣಿನ ನೋಟದಿಂದಲೂ ಮನೋಹರವಾದ ಕುಟಿಲಕುಂತಲರಾಶಿಯಿಂದಲೂ (ಕೇಶಪಾಶ) ಧರಿಸಿರುವ ಮಂದಾರಪುಷ್ಪಗಳ ಮಾಲೆಗಳಿಗೆರಗುವ ದುಂಬಿಗಳ ಮಧುರಝುಂಕಾರದಿಂದಲೂ ಕಂಗೊಳಿಸುತ್ತಿರುವಳು.

೫೪. ಸ್ತ್ರೀವರ್ಗದಲ್ಲೇ ಉತ್ತಮವೆನಿಸಿದ ಪದ್ಮಿನೀಜಾತಿಗೆ ಸೇರಿದ ಆ ರಾಸರಾಣಿಯು ಶ್ರೀಗಂಧ, ಕೇಸರಿ, ಕಸ್ತೂರಿ, ಅಗುರು ಇವುಗಳ ಪನ್ನೀರಿನಿಂದ ತೊಡೆಯಲ್ಪಟ್ಟವಳಾಗಿಯೂ, ಮನೋಹರವಾದ ಬಿಂದುಕೀ ಪತ್ರರಚನೆಯಿಂದ ಚಿತ್ರಿತಳಾಗಿಯೂ, ಸಂತಾನಕಪತ್ರರಚನವಾದ ಅವತಂಸವನ್ನು ಧರಿಸಿರುವವಳಾಗಿಯೂ ಇರುವಳು. ಇಂತಹ ಗಜಗಮನೆಯನ್ನು ಹೃದಯದಲ್ಲಿ ಧ್ಯಾನಿಸು.

ಏತಾದೃಶೀಂ ರತಿವರಾಂ ತು ಸಮೇತ್ಯ ಕೃಷ್ಣೋ
ಗಚ್ಛನ್ನಿಕುಂಜವನಜಾಲವಿಲೋಕನಾಯ ।
ಧಾವಂತಿ ತತ್ರ ಮಣಿಛತ್ರಧರಾಶ್ಚ ಗೋಪ್ಯೋ
ನೀತ್ವಾ ತಥಾ ಚಮರಚಾರುಪತತ್ಪತಾಕಾನ್ ॥ ೫೫ ॥

ಷಡ್ರಾಗಮೇವ ವರಧೈವತಮಧ್ಯಮಾದ್ಯೈ-
ರ್ಗಾಯಂತಮಾದಿಪುರುಷಂ ಭಜ ನಂದಪುತ್ರಂ ।
ಷಟ್ತ್ರಿಂಶತಸ್ತದನುವರ್ತಿತರಾಗಿಣೀನಾಂ
ವಂಶೀರವೇಣ ಲಲಿತೇನ ವರಂ ವ್ರಜಂತಂ ॥ ೫೬ ॥

ಶೃಂಗಾರವೀರಕರುಣಾದ್ಭುತಹಾಸ್ಯರೌದ್ರ-
ಭೀಭತ್ಸಶಾಂತಕಭಯಾನಕನಿತ್ಯಯುಕ್ತಂ ।
ಭಕ್ತಪ್ರಿಯಂ ವ್ರಜವಧೂಮುಖಪದ್ಮಭೃಂಗಂ
ಯೋಗೀಂದ್ರಹೃತ್ಕಮಲವಿಸ್ಫುರದಂಘ್ರಿಯುಗ್ಮಂ ॥ ೫೭ ॥

---

೫೫. ಹೇ ರಾಜೇಂದ್ರ! ಇಂತಹ ಸೌಂದರ್ಯಾಧಿದೇವಿಯೆನಿಸಿದ ರಾಧಿಕೆಯೊಡನೆ ಯಮುನಾತೀರದ ಲತಾಗೃಹಗಳನ್ನೂ, ವೃಕ್ಷಶ್ರೇಣಿಯನ್ನೂ ನೋಡಬೇಕೆಂದು ಶ್ರೀಕೃಷ್ಣನು ಆಕಡೆ ಹೊರಟನು. ಕೂಡಲೇ ಅವರನ್ನು ಹಿಂಬಾಲಿಸಿ ಮಣಿಮಯವಾದ ಛತ್ರಗಳನ್ನೂ, ಸೊಗಸಾದ ಚಾಮರಗಳನ್ನೂ, ಧ್ವಜಪತಾಕೆಗಳನ್ನೂ ಹಿಡಿದು ಗೋಪಿಯರು ಧಾವಿಸಿ ಹೊರಟರು.

೫೬. ಆಗ ಶ್ರೀಕೃಷ್ಣನು ಇಂಪಾದ ದನಿಯಿಂದ ಕೊಳಲಿನಲ್ಲಿ ಧೈವತ, ಮಧ್ಯಮ ಮೊದಲಾದ ಸ್ವರಸಮ್ಮೇಳನದಿಂದ ರಮಣೀಯವಾಗಿರುವ ಆರು ರಾಗಗಳನ್ನೂ ಮೂವತ್ತಾರು ರಾಗಿಣಿಯರನ್ನೂ (ಸ್ತ್ರೀರಾಗ) ನುಡಿಸುತ್ತಾ ಮೆಲ್ಲನೆ ಹೊರಟನು.

೫೭. ಆ ಶ್ರೀಕೃಷ್ಣನು ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ರೌದ್ರ, ಭೀಭತ್ಸ, ಶಾಂತ ಭಯಾನಕಗಳೆಂಬ ರಸಗಳಿಗೆ ನಿತ್ಯಾಶ್ರಯನು, ಭಕ್ತರಲ್ಲಿ ವಾತ್ಸಲ್ಯವುಳ್ಳವನು. ವ್ರಜವಾಸಿನಿಯರಾದ ಗೋಪಿಯರ ಮುಖಾರವಿಂದಗಳಲ್ಲಿ ಭ್ರಮರದಂತೆ ವಿಹರಿಸುವವನು. ಯೋಗೀಂದ್ರರ ಹೃದಯಕಮಲದಲ್ಲಿ ಸರ್ವದಾ ಧ್ಯಾನಿಸಲ್ಪಡುವ ಚರಣಯುಗಲವುಳ್ಳವನು.

ಕ್ಷೇತ್ರಜ್ಞಮಾದಿಪುರುಷಂ ಸ್ವಧಿಯಜ್ಞರೂಪಂ
ಸರ್ವೇಶ್ವರಂ ಸಕಲಕಾರಣಕಾರಣೇಶಂ ।
ಕೃಷ್ಣಂ ಹರಿಂ ಪ್ರಕೃತಿಪೂರುಷಯೋಃ ಪುಮಾಂಸಂ
ಸರ್ವಂ ನಿರಸ್ತಕಪಟಂ ನಿಜತೇಜಸೇಹ ॥ ೩೮ ॥

ಯಂ ವೈ ಸ್ತುವಂತಿ ಶಿವಧರ್ಮಸುರೇಶಶೇಷ-
ಲೋಕೇಶಸಿದ್ಧಿದಗಣೇಶಸುರಾದಯೋಽಪಿ ।
ರಾಧಾರಮಾಪ್ರಕೃತಿಭೂವಿರಜಾಸ್ವರಾದ್ಯಾ
ವೇದಾ ಭಜಂತಿ ಸತತಂ ತಮಹಂ ಭಜಾಮಿ ॥ ೩೯ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧ
ಚರಿತ್ರೇ ಸುಮೇರೌ ರಾಸಕ್ರೀಡಾಯಾಂ
ದ್ವಿಚತ್ವಾರಿಂಶೋಽಧ್ಯಾಯಃ

---

೩೮. ಸಕಲ ಪ್ರಾಣಿಗಳಲ್ಲಿಯೂ ಚೈತನ್ಯಸ್ವರೂಪದಿಂದ ಕಂಗೊಳಿಸುವವನು. ಆದಿಪುರುಷನು. ಯಜ್ಞ ಯಾಗಾದಿಗಳಲ್ಲಿ ಆರಾಧಿಸಲ್ಪಡುವ ಸರ್ವೇಶ್ವರನು. ಎಲ್ಲ ಸ್ಥೂಲವಸ್ತುಗಳಿಗೂ ಕಾರಣಭೂತವೆನಿಸಿದ ಕಾರಣ ವಸ್ತುಗಳೆಲ್ಲವಕ್ಕೂ ಕಾರಣನಾದವನು. ಪ್ರಕೃತಿ ಪುರುಷರಿಗಿಂತಲೂ ಪರನೆನಿಸಿದವನು. ಪುರುಷಶ್ರೇಷ್ಠನು. ತನ್ನ ಒಂದು ತೇಜಸ್ಸಿನಿಂದಲೇ ಈ ಲೋಕದಲ್ಲಿರುವ ಸಕಲ ದುಷ್ಟ ಶಕ್ತಿಗಳನ್ನೂ ನಿಗ್ರಹಿಸುವವನು.

೩೯. ಓ ರಾಜೇಂದ್ರ! ಯಾವಾತನನ್ನು ಶಂಕರನೂ, ಧರ್ಮಪುರುಷನೂ, ಬ್ರಹ್ಮನೂ, ಆದಿಶೇಷನೂ, ಲೋಕಪಾಲಕರೂ, ಸಿದ್ಧಿದಾಯಕರಾದ ಗಣಪತಿ ಮೊದಲಾದ ದೇವತೆಗಳೂ ರಾಧಾ, ಲಕ್ಷ್ಮೀ, ಪ್ರಕೃತಿ, ಭೂಮಿ, ವಿರಜಾ, ಮೊದಲಾದವರೂ, ಉದಾತ್ತಾನುದಾತ್ತಾದಿ ಸ್ವರಗಳೂ, ವೇದಗಳೂ ಆರಾಧಿಸುವರೋ ಆ ಪರಮಪುರುಷನಾದ ಶ್ರೀಕೃಷ್ಣನನ್ನು ನಾನು ಸೇವಿಸುವೆನು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತದ ರಾಸಕ್ರೀಡಾ ಪ್ರಕರಣದಲ್ಲಿ ನಲವತ್ತೆರಡನೆಯ
ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ತ್ರಿಚತ್ವಾರಿಂಶೋಽಧ್ಯಾಯಃ

|| ಗರ್ಗ ಉವಾಚ ||

ವೃಂದಾವನೇ ವೃಕ್ಷಲತಾಲಿಸಂಕುಲೇ
ಮಂದಾನಿಲೇ ವೀಜತಿ ಶೀತಲೇ ನೃಪ ।
ರಂಧ್ರಾಣಿ ವೇಣೋಃ ಕಿಲ ಪೂರಯನ್ ಹರಿ-
ರ್ಮುಹುರ್ಹರತ್ಯೇವ ದಿವೌಕಸಾಂ ಮನಃ || ೧ ||

ವೇಣುಗೀತಂ ತತಃ ಶ್ರುತ್ವಾ ಶ್ರೀರಾಧಾ ಕೀರ್ತಿನಂದಿನೀ ।
ಭುಜಾಭ್ಯಾಂ ನಂದಸೂನುಂ ವೈ ಜಗ್ರಾಹಾನಂಗವಿಹ್ವಲಾ || ೨ ||

ನಲವತ್ತಮೂರನೆಯ ಅಧ್ಯಾಯವು

೧. ಹೇ ರಾಜೇಂದ್ರ! ಈ ರೀತಿಯಾಗಿ ನಾನಾವಿಧವಾದ ವೃಕ್ಷಗಳಿಂದಲೂ, ಲತೆಗಳಿಂದಲೂ, ಝೇಂಕರಿಸುವ ಭ್ರಮರಗಳಿಂದಲೂ ಮೆಲ್ಲನೆ ತಂಪಾಗಿ ಬೀಸಿ ಬರುತ್ತಿರುವ ಎಳೆಗಾಳಿಯಿಂದಲೂ ರಮಣೀಯವಾಗಿರುವ ವೃಂದಾವನದಲ್ಲಿ ಆ ಶ್ರೀಕೃಷ್ಣನು ಕೊಳಲನ್ನೂದುತ್ತಾ ದೇವತೆಗಳ ಮನಸ್ಸನ್ನೂ ಸಹ ಪುನಃ ಪುನಃ ಆಕರ್ಷಿಸುತ್ತಿದ್ದನು.

೨. ಆ ಕೊಳಲಿನ ದನಿಯನ್ನು ಕೇಳುತ್ತಲೇ ಕೀರ್ತಿಯೆಂಬುವಳ ಮಗಳಾದ ಶ್ರೀರಾಧೆಯು ಮನ್ಮಥಪರವಶಳಾಗಿ ನಂದನಂದನನಾದ ಶ್ರೀಹರಿಯನ್ನು ಎರಡು ತೋಳುಗಳಿಂದಲೂ ಬಿಗಿಯಪ್ಪಿ ಆಲಂಗಿಸಿದಳು.

ಗೋಕುಲಸ್ಯ ಚಕೋರೀಂ ತಾಂ ಕೃಷ್ಣೋ ಗೋಕುಲಚಂದ್ರಮಾಃ ।
ದೃಷ್ಟ್ವಾ ಕುಸುಮಪರ್ಯಂಕೇ ತಯಾ ರೇಮೇ ಹರನ್ಮನಃ ॥ ೩ ॥

ಶ್ರೀಕೃಷ್ಣಸ್ಯ ವಿಹಾರೇಣ ಬ್ರಹ್ಮಾನಂದೇನ ಸ್ವಾಮಿನೀ ।
ಮುದಂ ಲೇಭೇ ಮಹಾತ್ಯಂತಂ ತಥಾ ಸ್ವಾಮೀ ವಶೀಕೃತಃ ॥ ೪ ॥

ರಮಣೀಯಂ ರತಿಕರಂ ರಾಸೇ ರಾಮಾ ರಮೇಶ್ವರಂ ।
ಜಗೃಹುಃ ಸರ್ವತೋ ರಾಜನ್ ಶತಯೂಥಾಶ್ಚ ಯೋಷಿತಃ ॥ ೫ ॥

ತಾಭಿಃ ಸಾರ್ಧಂ ಹರೀ ರಮ್ಯೋ ರೇಮೇ ವೈ ರಾಸಮಂಡಲೇ ।
ತಾವದ್ರೂಪಧರೋ ರಾಜನ್ಯಾವತ್ಯೋ ವ್ರಜಯೋಷಿತಃ ॥ ೬ ॥

---

೩. ಗೋಕುಲದ ಚಕೋರಿಯೆನಿಸಿದ ಆ ರಾಧೆಯು ಈರೀತಿ ಮದನ ತಾಪವನ್ನು ತಾಳಲಾರದೆ ಅಸ್ಥಿರಳಾದುದನ್ನು ಕಂಡು ಗೋಕುಲದ ಚಂದ್ರನಾದ ಶ್ರೀಹರಿಯು ಮತ್ತಷ್ಟು ಅವಳ ಮನಸ್ಸನ್ನು ಸೂರೆಗೊಳ್ಳುತ್ತಾ ಅವಳೊಡನೆ ಕುಸುಮಶಯನದಲ್ಲಿ ವಿಹರಿಸಿದನು.

೪. ವ್ರಜಸ್ವಾಮಿನಿಯಾದ ಆ ರಾಧೆಯು ಬ್ರಹ್ಮಾನಂದಕ್ಕೆ ಸರಿಸಮ ನಾದ ಆ ಶ್ರೀಕೃಷ್ಣ ಸಮಾಗಮಸುಖದಿಂದ ಅತಿಶಯವಾದ ಸಂತೋಷವನ್ನು ತಾಳಿದಳು. ಆ ವ್ರಜೇಶ್ವರನಾದ ಶ್ರೀಹರಿಯೂ ಸಹ ಆ ರಾಧೆಯ ವಿಲಾಸ ದಿಂದ ಪರವಶನಾದನು.

೫. ಓ ರಾಜೇಂದ್ರ ! ಆಗ ಸುತ್ತಲೂ ನೂರಾರು ಗುಂಪುಗಳಾಗಿ ಬಂದು ಸೇರಿದ್ದ ಗೋಪಾಂಗನೆಯರೆಲ್ಲರೂ ತಮ್ಮೆಲ್ಲರ ಮನಸ್ಸನ್ನೂ ಸೂರೆ ಗೊಂಡಿರುವ ಆ ರಾಸೇಶ್ವರನನ್ನು ಕಂಡು ಪ್ರೇಮಾತಿಶಯವನ್ನು ತಾಳಿ ಆತನ ಸಂಗಸುಖವನ್ನು ಬಯಸಿ ಕೈಹಿಡಿದು ನಿಂತರು.

೬. ಆಗ ಮನೋಹರವಾಗಿರುವ ಸೌಂದರ್ಯದಿಂದ ಮೆರೆಯುತ್ತಿರುವ ಆ ಶ್ರೀಹರಿಯು ಅವರ ಸಂಖ್ಯೆಯಷ್ಟೇ ರೂಪಗಳನ್ನು ಧರಿಸಿ ಅವರೆಲ್ಲರೊಡನೆ ಆ ರಾಸಮಂಡಲದಲ್ಲಿ ವಿಹರಿಸಿದನು.

ವಿಹರಿಣ್ಯಶ್ಚ ತಾಃ ಸರ್ವಾ ವಿಹಾರೇಣ ವಿಹಾರಿಣಃ ।
ಬ್ರಹ್ಮಾನಂದೇನ ಸನ್ಮರ್ತ್ಯಾ ಆನಂದಂ ಲೇಭಿರೇ ಯಥಾ ॥ ೭ ॥

ಶ್ರೀಕರಾಭ್ಯಾಂ ಶ್ರೀಕರಾಭ್ಯಾಂ ಶ್ರೀಶಃ ಶ್ರೀಶ್ಯಾಮಸುಂದರಃ ।
ದಧಾರ ಹೃದಯೇ ಸರ್ವಾಸ್ತಾಭಿರ್ಭಕ್ತ್ಯಾ ವಶೀಕೃತಃ ॥ ೮ ॥

ಸ್ವೇದಯುಕ್ತಾನ್ಯಾನನಾನಿ ತಾಸಾಂ ಪ್ರೀತ್ಯಾ ವ್ರಜೇಶ್ವರಃ ।
ಪ್ರಾಮೃಜತ್ಪೀತವಸ್ತ್ರೇಣ ಕಿಂ ವದಾಮಿ ತಪಃಫಲಂ ॥ ೯ ॥

ವಿನಾ ಸಾಂಖ್ಯೇನ ಯೋಗೇನ ತಪಸಾ ಶ್ರವಣೇನ ಚ ।
ವಿನಾ ತೀರ್ಥೇನ ದಾನೇನ ಪ್ರಾಪ್ತಾಃ ಕಾಮೇನ ತಾ ಹರಿಂ ॥ ೧೦ ॥

---

೭. ಶುದ್ಧ ಚಾರಿತ್ರರಾದ ಮಾನವರು ಬ್ರಹ್ಮಾನಂದವನ್ನು ಪಡೆದಾಗ ಯಾವರೀತಿ ಸುಖವನ್ನು ಹೊಂದುವರೋ ಅದೇರೀತಿ ವಿಹಾರ ಚತುರನಾದ ಆ ಶ್ರೀಕೃಷ್ಣನ ವಿಹಾರದಿಂದ ಗೋಪಿಯರೆಲ್ಲರೂ ಮಹಾಸಂತೋಷವನ್ನು ತಾಳಿದರು.

೮. ಆ ಗೋಪಾಂಗನೆಯರ ಭಕ್ತಿಯಿಂದ ವಶೀಕೃತನಾದ ಆ ಶ್ರೀಹರಿಯು ಸಂಪತ್ಪ್ರದಾಯಕವೆನಿಸಿದ ತನ್ನೆರಡು ಕೈಗಳಿಂದ ಅವರೆಲ್ಲರನ್ನೂ ಅಪ್ಪಿಹಿಡಿದು ತನ್ನೆದೆಯಲ್ಲಿ ಧರಿಸಿದನು.

೯. ಓ ರಾಜೇಂದ್ರ! ತಪಸ್ಸಿನ ಫಲವನ್ನು ಏನೆಂದು ವರ್ಣಿಸಲಿ? ವ್ರಜೇಶ್ವರನಾದ ಆ ಸಾಕ್ಷಾತ್ ಶ್ರೀಕೃಷ್ಣನೇ ಸುರತಾಂತಸಮಯದಲ್ಲಿ ಆ ಗೋಪಾಂಗನೆಯರ ಮುಖದಲ್ಲಿ ಸಾಲಾಗಿ ತೊಟ್ಟಿಕ್ಕುತ್ತಿರುವ ಬೆವರು ಹನಿಗಳನ್ನು ಪ್ರೀತಿಯಿಂದ ತನ್ನ ಪೀತಾಂಬರದಿಂದಲೇ ಒರೆಸಿದನು.

೧೦. ಆ ಗೋಪಾಂಗನೆಯರು ಸಾಂಖ್ಯವನ್ನು ಅರಿತವರಲ್ಲ ಯೋಗವನ್ನೂ ತಿಳಿದವರಲ್ಲ. ತಪಸ್ಸನ್ನೂ, ಭಗವತ್ಕಥಾಶ್ರವಣವನ್ನೂ ಕಂಡವರಲ್ಲ. ತೀರ್ಥಯಾತ್ರೆಯನ್ನಾಗಲೀ, ದಾನವನ್ನಾಗಲೀ ಮಾಡಿದವರಲ್ಲ. ಆದರೂ ಅವರೆಲ್ಲರೂ ಮೇಲಿನವುಗಳಾವುವೂ ಇಲ್ಲದೆಯೇ ಕೇವಲ ಕಾಮದಿಂದಲೇ ಆ ಶ್ರೀಹರಿಯನ್ನು ಹೊಂದಿದರು.

ತತೋ ಗೋಪೀಜನಾಃ ಸರ್ವೇ ಮಾನವತ್ಯಃ ಪರಸ್ಪರಂ ।
ಕುವಾಕ್ಯಂ ಕಥಯಾಮಾಸುಃ ಕೃಷ್ಣತೃಪ್ತಾವಿಹಾರತಃ ॥ ೧೧ ॥

ಅಸ್ಮಾಂಸ್ತ್ಯಕ್ತ್ವಾ ಪುರಾ ಕೃಷ್ಣೋ ಗತಃ ಶ್ರೀಮಧುರಾಂ ಪುರೀಂ ।
ವಿಲೋಕಿತುಂ ರೂಪಿಣೀಶ್ಚ ಸುಂದರೀಃ ಸ್ತ್ರೀಶ್ಚ ಸುಂದರಃ ॥ ೧೨ ॥

ನ ದೃಷ್ಟ್ವಾಸ್ತೇನ ಸುಂದರ್ಯೋ ಜಗಾಮ ದ್ವಾರಕಾಂ ಪುನಃ ।
ನ ದೃಷ್ಟ್ವಾಸ್ತೇನ ತಾಸ್ತತ್ರ ವಿವಾಹಂ ಕೃತವಾನ್ಪುನಃ ॥ ೧೩ ॥

ರುಕ್ಮಿಣೀಂ ಭೀಷ್ಮಕಸುತಾಂ ನ ಮತ್ವಾ ತಾಂ ತು ರೂಪಿಣೀಂ ।
ಪುನರ್ವಿವಾಹಾನ್ಕೃತವಾನ್ ಸಹಸ್ರಾಣಿ ಚ ಷೋಡಶ ॥ ೧೪ ॥

ನ ಮತ್ವಾ ರೂಪಿಣೀಸ್ತಾಶ್ಚ ಶೋಕಂ ಕುರ್ವನ್ಪುನಃ ಪುನಃ ।
ವ್ರಜಮಾಗತವಾನ್ಸಖ್ಯೋ ಶ್ರೀಕೃಷ್ಣೋಽಸ್ಮಾನ್ವಿಲೋಕಿತುಂ ॥ ೧೫ ॥

---

೧೧. ಅನಂತರ ಶ್ರೀಕೃಷ್ಣನ ಸಹವಾಸ ಸುಖದಿಂದ ತೃಪ್ತರಾಗಿ ಮೈಮರೆತ ಆ ಗೋಪಾಂಗನೆಯರೆಲ್ಲರೂ ತಾವೇ ಸೌಭಾಗ್ಯಶಾಲಿನಿಯರೆಂಬ ಹೆಮ್ಮೆಗೊಳಗಾಗಿ ತಮ್ಮತಮ್ಮಲ್ಲಿ ಈರೀತಿ ವಿವೇಚನೆಯಿಲ್ಲದೆ ಮಾತನಾಡಿಕೊಂಡರು:-

೧೨. ಹಿಂದೆ ಈ ಕೃಷ್ಣನು ತಾನೇ ರೂಪವಂತನೆಂದು ಮೆರೆಯುತ್ತಾ ನಮ್ಮೆಲ್ಲರನ್ನೂ ಬಿಟ್ಟು ಚೆಲುವೆಯರಾದ ಸ್ತ್ರೀಯರನ್ನು ನೋಡಲು ಮಧುರೆಗೆ ಹೋದನಲ್ಲವೇ ?

೧೩. ಅವರ ಸೌಂದರ್ಯವನ್ನು ಕಂಡೂ ತೃಪ್ತಿಯಾಗದೆ ಅಲ್ಲಿಂದ ದ್ವಾರಕೆಗೆ ತೆರಳಿದನು. ಅಲ್ಲಿಯೂ ಸಹ ಇತನಿಗೆ ಚೆಲುವೆಯರಾರೂ ಕಂಡುಬರಲಿಲ್ಲ. ಆದುದರಿಂದಲೇ ಅವನು ಆಮೇಲೆ ಮದುವೆಯಾದನು.

೧೪. ಆದರೇನು, ಭೀಷ್ಮಕನ ಸುತೆಯಾದ ರುಕ್ಮಿಣಿಯ ಚೆಲುವೂ ಅವನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ಆದುದರಿಂದಲೇನೇ ಅವನು ಆಮೇಲೆ ಹದಿನಾರುಸಾವಿರ ಮಂದಿ ಚೆಲುವೆಯರನ್ನು ಮದುವೆ ಮಾಡಿಕೊಂಡನು.

೧೫. ಅಲ್ಲಿಗೂ ಸಹ ಈ ಶ್ರೀಕೃಷ್ಣನ ಸೌಂದರ್ಯಾಭಿಲಾಷೆಯು ಈಡೇರಲಿಲ್ಲ. ಏಕೆಂದರೆ ಅವರ ಸೌಂದರ್ಯವೂ ಮನಸ್ಸಿಗೆ ತೃಪ್ತಿಯುಂಟುಮಾಡಲಿಲ್ಲ. ಆದುದರಿಂದ ಎಲೆ ಗೆಳತಿಯರೆ, ಅವನು ಪದೇ ಪದೇ ಮನಸ್ಸಿನಲ್ಲಿ ಕೊರಗುತ್ತಾ ಮರಳಿ ನಮ್ಮನ್ನು ಕಾಣಲು ಇಲ್ಲಿಗೇ—ಈ ವ್ರಜಕ್ಕೇ ಬಂದನು.

ದೃಷ್ಟ್ವಾ ರೂಪಾಣಿ ಚಾಸ್ಮಾಕಂ ಸರ್ವಪ್ರೇಷ್ಟಾ ರಮೇಶ್ವರಃ ।
ಪ್ರಸನ್ನೋಽಭೂತ್ತಥಾ ಸಖ್ಯೋ ಯಥಾ ರಾಸೇ ಹರಿಃ ಪುರಾ ॥ ೧೬ ॥

ತಸ್ಮಾದ್ವಯಂ ಚ ಸರ್ವೇಷಾಂ ಸುಂದರೀಣಾಂ ವರಾಃ ಸ್ಮೃತಾಃ ।
ಸುನೇತ್ರಾಶ್ಚಂದ್ರವದನಾಃ ಶಶ್ವತ್ಸುಸ್ಥಿರಯೌವನಾಃ ॥ ೧೭ ॥

ಅಸ್ಮತ್ತುಲ್ಯಾಶ್ಚ ರೂಪಿಣ್ಯೋ ನೈವ ದೈವಾಂಗನಾಶ್ಚ ಖೇ ।
ಯಾಭಿಃ ಶೀಘ್ರಂ ಕಟಾಕ್ಷೈಶ್ಚ ಕೃಷ್ಣಃ ಕಾಮೀ ವಶೀಕೃತಃ ॥ ೧೮ ॥

ಅಹೋ ವೈ ಯೇನ ಹಂಸೇನ ಮುಕ್ತಾಃ ಪೂರ್ವಂ ಪ್ರಭಕ್ಷಿತಾಃ ।
ಸ ಏವಾನ್ಯತ್ಕಥಂ ವಸ್ತು ಭಕ್ಷಯಿಷ್ಯತಿ ದುಃಖಿತಃ ॥ ೧೯ ॥

---

೧೬. ಎಲೆ ಗೆಳತಿಯರೆ, ಪ್ರಪಂಚದಲ್ಲಿರತಕ್ಕ ರೂಪರಾಶಿಯೆಲ್ಲವನ್ನೂ ನೋಡಿರುವ ಈ ರಮಾಕಾಂತನು ನಮ್ಮ ರೂಪನನ್ನು ಕಾಣುತ್ತಲೇ ಹಿಂದೆ ತಾನು ರಾಸಲೀಲೆಯಲ್ಲಿ ಯಾವ ಸಂತೋಷಾತಿಶಯವನ್ನು ಪಡೆದಿದ್ದನೋ ಅದೇ ಸಂತೋಷವನ್ನೇ ತಾಳಿರುವನು.

೧೭-೧೮. ಆದುದರಿಂದ ನಾವೇ ಈ ಪ್ರಪಂಚದಲ್ಲಿರುವ ಸ್ತ್ರೀಯರಲ್ಲೆಲ್ಲಾ ಕಡು ಚೆಲುವೆಯರು. ಮುದ್ದಾದ ಕಣ್ಣು, ಚಂದ್ರನಿಗೆಣೆಯಾದ ಮುಖ, ಯಾವಾಗಲೂ ತುಂಬಿರುವ ಪೂರ್ಣಯೌವನ ಇವುಗಳಿಂದಕೂಡಿರುವ ನಮ್ಮಂತಹ ಚೆಲುವೆಯರು ಇನ್ನಾರು ತಾನೇ ಈ ಲೋದಲ್ಲಿರುವರು? ಆ ಸ್ವರ್ಗದಲ್ಲಿ ದೇವಾಂಗನೆಯರೂ ಸಹ ಇರಲಾರರು. ಸ್ವಭಾವತಃ ಕಾಮುಕನಾದ ಈ ಶ್ರೀಕೃಷ್ಣನನ್ನು ನಮ್ಮ ವಿಲೋಲಕಟಾಕ್ಷದಿಂದ ಬಹುಬೇಗನೆ ವಶಪಡಿಸಿಕೊಳ್ಳುವಂತಹ ಚೆಲುವೆಯರು ನಮ್ಮನ್ನು ಬಿಟ್ಟರೆ ಮತ್ತಾರಿರುವರು?

೧೯. ಅಬ್ಬಾ, ಬಹಳ ದಿವಸಗಳಿಂದಲೂ ಮುತ್ತುಗಳನ್ನೇ ತಿಂದು ಅಭ್ಯಾಸವಾಗಿರುವ ರಾಜಹಂಸವು ಈಗ ಹೇಗೆತಾನೆ ಮತ್ತೊಂದು ಪದಾರ್ಥವನ್ನು ತಿನ್ನಬಯಸುವುದು?

ನ ಸಂತಿ ಮುಕ್ತಾಃ ಸರ್ವತ್ರ ಸಂತಿ ಮಾನಸರೋವರೇ ।
ತಥಾ ವರಸ್ತ್ರಿಯೋ ಭೂಮೌ ನ ಸಂತಿ ಸಂತಿ ಚಾತ್ರ ಹಿ ॥ ೨೦ ॥

॥ ಗರ್ಗ ಉವಾಚ ॥

ಇತಿ ಮಾನವತೀನಾಂ ಚ ಸ್ವಾತ್ಮಾರಾಮೋ ಜಗತ್ಪತಿಃ ।
ವಚಃ ಶೃಣ್ವನ್ ರಾಧಯಾ ಚ ತತ್ರೈವಾಂತರಧೀಯತ ॥ ೨೧ ॥
ನಿರ್ಧನೋಽಪಿ ಧನಂ ಲಬ್ಧ್ವಾ ಮಾನಂ ಪ್ರಕುರುತೇ ನೃಪ ।
ಯಸ್ಯ ನಾರಾಯಣಃ ಪ್ರಾಪ್ತೋ ತಸ್ಯ ಕಿಂ ಕಥಯಾಮ್ಯಹಂ ॥ ೨೨ ॥

ಇತಿ ಶ್ರೀ ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ರಾಸಕ್ರೀಡಾಯಾಂ
ತ್ರಿಚತ್ವಾರಿಂಶೋಽಧ್ಯಾಯಃ

---

೨೦. ಮುತ್ತುಗಳು ಇನ್ನೆಲ್ಲಿಯೂ ಸಿಗಲಾರವು. ಮಾನಸಸರೋವರದಲ್ಲಿ ಮಾತ್ರ ಅವು ದೊರೆಯುವುವು. ಅದೇರೀತಿ ಈ ಭೂಮಿಯಲ್ಲಿ ಇನ್ನೆಲ್ಲಿಯೂ ಚೆಲುವೆಯರಾದ ಸ್ತ್ರೀಯರು ದೊರೆಯಲಾರರು. ಈ ಗೋಕುಲವಲ್ಲಿ ಮಾತ್ರವೇ ಅವರು ಇರುವರು ಎಂದರು.

೨೧: ಓ ರಾಜೇಂದ್ರ, ಈ ರೀತಿಯಾಗಿ ಸೌಂದರ್ಯಾಭಿಮಾನದಿಂದ ಗರ್ವಿತೆಯರಾದ ಆ ಗೋಪಿಯರು ಆಡಿಕೊಳ್ಳುತ್ತಿದ್ದ ಮಾತುಗಳನ್ನು ಕೇಳಿ ಆತ್ಮಾರಾಮನಾದ ಆ ಪ್ರಭುವು ರಾಧೆಯರೊಡನೆ ಇದ್ದಕಡೆಯೇ ಇದ್ದಕ್ಕಿದ್ದ ಹಾಗೇ ಕಣ್ಮರೆಯಾದನು.

೨೨. ಹಣವು ಕೈಗೆ ಸಿಕ್ಕಿದರೆ ಬಡವನೂ ಜಂಬದಿಂದ ಹಾರಾಡುವನು; ಹೀಗಿರುವಾಗ ಸಾಕ್ಷಾತ್ ನಾರಾಯಣನನ್ನೇ ಹೊಂದಿದರೆ ಅಂಥವರು ಮೆರೆಯುವದೇನಾಶ್ಚರ್ಯ, ಎಂದನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತ್ರದ ರಾಸಲೀಲಾ ಪ್ರಕರಣದಲ್ಲಿ ನಲವತ್ತಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಚತುಶ್ಚತ್ವಾರಿಂಶೋಽಧ್ಯಾಯಃ

॥ ವಜ್ರನಾಭಿರುವಾಚ ॥

ಅದ್ಭುತಂ ಕೃಷ್ಣಚರಿತಂ ಮಯಾ ತ್ವನ್ಮುಖತಃ ಶ್ರುತಂ ।
ಕಿಂ ಚಕ್ರುರ್ಗೋಪಿಕಾಸ್ತಾಸಾಂ ಸ ಕಥಂ ದರ್ಶನಂ ದದೌ ॥ ೧ ॥

ತತ್ಸರ್ವಂ ಮುನಿಶಾರ್ದೂಲ ಮಹ್ಯಂ ಶ್ರದ್ಧಾಲವೇ ವದ ।
ಧನ್ಯಾಸ್ತೇ ಯೇ ಹಿ ಶೃಣ್ವಂತಿ ಕರ್ಣೇ ಕೃಷ್ಣಕಥಾಂ ಸದಾ ॥ ೨ ॥

ನಲವತ್ತನಾಲ್ಕನೆಯ ಅಧ್ಯಾಯವು

೧. ವಜ್ರನಾಭಿರಾಜನು ಗರ್ಗಮಹರ್ಷಿಯನ್ನು ಕುರಿತು, ಓ ಮುನಿಶ್ರೇಷ್ಠನೇ, ಅತ್ಯದ್ಭುತವಾದ ಶ್ರೀಕೃಷ್ಣನ ಚರಿತ್ರವನ್ನು ನಿನ್ನ ಮುಖದಿಂದ ಕೇಳಿದೆನು. ಬಳಿಕ ಆ ಗೋಪಿಯರು ಏನು ಮಾಡಿದರು, ಶ್ರೀಕೃಷ್ಣನು ಅವರಿಗೆ ಹೇಗೆ ದರ್ಶನವನ್ನಿತ್ತನು?

೨. ಇದೆಲ್ಲವನ್ನೂ ಕೇಳಬೇಕೆಂದು ಕುತೂಹಲವುಳ್ಳ ನನಗೆ ಆ ಸಂಗತಿಯನ್ನು ದಯವಿಟ್ಟು ತಿಳಿಸು. ಯಾರು ಯಾವಾಗಲೂ ಎಡಬಿಡದೆ ಶ್ರೀಕೃಷ್ಣನ ದಿವ್ಯಚರಿತ್ರವನ್ನು ತಮ್ಮ ಕಿವಿಗಳಿಂದ ಕೇಳುವರೋ ಅವರೀಗ ಧನ್ಯರು.

ಮುಖೇನ ಕೃಷ್ಣಚಂದ್ರಸ್ಯ ನಾಮಾನಿ ಪ್ರಜಪಂತಿ ಹಿ ।
ಹಸ್ತೈಃ ಶ್ರೀಕೃಷ್ಣಸೇವಾ ವೈ ಯೇ ಪ್ರಕುರ್ವಂತಿ ನಿತ್ಯಶಃ ॥ ೩ ॥

ನಿತ್ಯಂ ಕುರ್ವಂತಿ ಕೃಷ್ಣಸ್ಯ ಧ್ಯಾನಂ ದರ್ಶನಮೇವ ಚ ।
ಪಾದೋದಕಂ ಪ್ರಸಾದಂ ಚ ಯೇ ಪ್ರಭುಂಜಂತಿ ನಿತ್ಯಶಃ ॥ ೪ ॥

ಇತೀದೃಶೇನ ಭಾವೇನ ಶ್ರಮೇಣ ಜಗದೀಶ್ವರಂ ।
ಯೇ ಭಜಂತಿ ಮುನಿಶ್ರೇಷ್ಠ ತೇ ಪ್ರಯಾಂತಿ ಹರೇಃ ಪದಂ ॥ ೫ ॥

ಸಂಸಾರೇ ಯೇ ಪ್ರಭುಂಜಂತಿ ಭೋಗಾನ್ನಾನಾವಿಧಾನ್ಮುನೇ ।
ಶ್ರವಣಾದೀನ್ನ ಕುರ್ವಂತಿ ದೇಹಸೌಖ್ಯೇನ ದುರ್ಮದಾಃ ॥ ೬ ॥

ತೇ ಚಾಂತೇ ಯಮದೂತೈಶ್ಚ ಗೃಹೀತಾಶ್ಚ ಭಯಾಸಕ್ತೈಃ ।
ಪತಿತಾಃ ಕಾಲಸೂತ್ರೇ ವೈ ಯಾವಚ್ಚಂದ್ರನಿಶಾಕರೌ ॥ ೭ ॥

೩-೫. ಹೇ ಮುನಿಶ್ರೇಷ್ಠ, ಯಾವ ಮಾನವರು ಸರ್ವದಾಮುಖದಲ್ಲಿ ಶ್ರೀಕೃಷ್ಣನ ದಿವ್ಯನಾಮುಗಳನ್ನು ಪಠಿಸುವರೋ ಯಾರು ಪ್ರತಿನಿತ್ಯವೂ ತಮ್ಮ ಕೈಗಳಿಂದ ಆ ಸ್ವಾಮಿಯ ಸೇವೆಯನ್ನು ಮಾಡುವರೋ, ಯಾರು ಅನವರತವೂ ಆ ಪ್ರಭುವನ್ನು ಮನಸ್ಸಿನಲ್ಲಿ ನೆನೆಯುವರೋ, ಯಾರು ದೇವಾಲಯಾದಿಗಳಿಗೆ ಹೋಗಿ ಆತನ ಮೂರ್ತಿಯನ್ನು ದರ್ಶನಮಾಡುವರೋ, ಯಾರು ಶ್ರೀಕೃಷ್ಣನ ಪಾದತೀರ್ಥವನ್ನೂ, ಪ್ರಸಾದವನ್ನೂ ನಿತ್ಯವೂ ತೆಗೆದುಕೊಳ್ಳುವರೋ, ಮತ್ತು ಯಾರು ಮನಃಪೂರ್ತಿಯಾಗಿ ದೈಹಿಕಶ್ರಮವನ್ನೂ ಲೆಕ್ಕಿಸದೆ ಆ ಪ್ರಭುವನ್ನು ನೆನೆಸುವರೋ ಅವರೆಲ್ಲರೂ ಶ್ರೀಹರಿಯ ನಿವಾಸವನ್ನು ಸೇರುವರು.

೬-೭. ಓ ಮುನೀಂದ್ರ, ಯಾವ ಮಾನವರು ಈ ಸಂಸಾರದಲ್ಲಿ ದೇಹ ಸೌಖ್ಯವೊಂದಕ್ಕೇ ಗಮನಕೊಟ್ಟು ನಾನಾವಿಧವಾದ ಸುಖಭೋಗಗಳಲ್ಲೇ ಆಸಕ್ತರಾಗಿ ಮಧಾಂಧತೆಯಿಂದ ಪರಮಪುರುಷನ ನಾಮಸಂಕೀರ್ತನಾದಿಗಳನ್ನು ಮಾಡದೆಯೇ ಇರುವರೋ ಅವರು ತಮ್ಮ ಮರಣಾನಂತರದಲ್ಲಿ ಭಯಂಕರರಾದ ಯಮದೂತರ ಕೈಗೆ ಸಿಕ್ಕಿ ಕಾಲಸೂತ್ರವೆಂಬ ನರಕದಲ್ಲಿ ತಳ್ಳಲ್ಪಟ್ಟು ಸೂರ್ಯ ಚಂದ್ರರಿರುವವರೆಗೂ ಯಾತನೆಯನ್ನು ಅನುಭವಿಸುವರು ಎಂದು ನುಡಿದನು.

॥ ಸೂತ ಉವಾಚ ॥

ಇತ್ಯುಕ್ತವಂತಂ ರಾಜಾನಂ ಪ್ರತ್ಯುವಾಚ ಮುನೀಶ್ವರಃ ।
ಗದ್ಗದಸ್ವರಯಾ ವಾಣ್ಯಾ ಪ್ರಶಂಸ್ಯ ಚರಿತಂ ಹರೇಃ ॥ ೮ ॥

॥ ಗರ್ಗ ಉವಾಚ ॥

ಕೃಷ್ಣೇ ಚಾಂತರ್ಹಿತೇ ರಾಜಂಸ್ತ್ವರಂ ಸರ್ವಾಶ್ಚ ಗೋಪಿಕಾಃ ।
ಆಚಕ್ಷಾಣಾಶ್ಚ ತಂತೇಪಾತ್ತಾ ಹರಿಣ್ಯೋ ಹರಿಣಂ ಯಥಾ ॥ ೯ ॥

ಅಂತರ್ಹಿತಂ ಹರಿಂ ಜ್ಞಾತ್ವಾ ಗೋಪ್ಯಃ ಸರ್ವಾಶ್ಚ ಪೂರ್ವವತ್ ।
ಯೂಥೀಭೂತಾ ವಿಚಿಕ್ಯುರ್ವೈ ಸರ್ವತಸ್ತಂ ವನೇ ವನೇ ॥ ೧೦ ॥

ಪಪ್ರಚ್ಛುರ್ಭೂರುಹಾನ್ಸರ್ವಾನ್ಮಿಲಿತ್ವಾ ತು ಪರಸ್ಪರಂ ।
ಹತ್ವಾ ಹ್ಯಸ್ಮಾನ್ಕಟಾಕ್ಷೇಣ ಕ್ವ ಗತೋ ನಂದನಂದನಃ ॥ ೧೧ ॥

---

೮. ಎಲೈ ಶೌನಕಾದಿ ಮುನಿಗಳಿರಾ, ಈ ರೀತಿಯಾಗಿ ವಜ್ರನಾಭ ರಾಜನು ನುಡಿದುದನ್ನು ಕೇಳಿ ಮುನಿಶ್ರೇಷ್ಠನಾದ ಆ ಗರ್ಗಮಹರ್ಷಿಯು ಆನಂದ ದಿಂದ ಗದ್ಗದವಾದ ಕಂಠವುಳ್ಳವನಾಗಿ ಆ ಶ್ರೀಕೃಷ್ಣನ ದಿವ್ಯಚರಿತ್ರವನ್ನು ಹೇಳ ತೊಡಗಿದನು.

೯. ಎಲೈ ವಜ್ರನಾಭರಾಜನೇ, ಕೇಳು. ಕೃಷ್ಣನು ಇದ್ದಕ್ಕಿದ್ದಂತೆ ಅದೃ ಶ್ಯನಾಗಿ ಬಿಡುತ್ತಲೇ ಆ ಗೋಪಿಯರೆಲ್ಲರೂ, ತಪ್ಪಿಸಿಕೊಂಡುಹೋದ ಸಾರಂಗ ವನ್ನು ಅರಸುವ ಹೆಣ್ಣು ಜಿಂಕೆಗಳಂತೆ ವ್ಯಥೆಯನ್ನು ತಾಳಿ ಕೃಷ್ಣಾ, ಕೃಷ್ಣಾ, ಎಂದು ಕೂಗುತ್ತಾ ಅಲೆಯತೊಡಗಿದರು.

೧೦. ಆಗ ಆ ಗೋಪಿಯರೆಲ್ಲರೂ ಆ ಕೃಷ್ಣನು ಎಲ್ಲಿಯೋ ಅವಿತುಕೊಂ ಡಿರುವನೆಂದು ಭಾವಿಸಿ ಮುಂಚಿನಂತೆ ಗುಂಪು ಗುಂಪಾಗಿ ಹೊರಟು ಆ ಕಾಡಿನ ಪ್ರತಿಯೊಂದು ಪ್ರದೇಶದಲ್ಲಿಯೂ ಹುಡುಕತೊಡಗಿದರು.

೧೧. ಅಲ್ಲದೆ ಕಂಡ ಕಂಡ ಮರಗಳನ್ನೆಲ್ಲಾ ಕುರಿತು, ತನ್ನ ಚಂಚಲ ಕಟಾಕ್ಷವನ್ನು ಬೀರಿ ನಮ್ಮೆಲ್ಲರನ್ನೂ ನಿಶ್ಚೇತನಗೊಳಿಸಿದ ಆ ನಂದಕುಮಾರನು ಎಲ್ಲಿ ಹೋದನು ?

ತದಸ್ಮಾಕಂ ಚ ವದತ ಯೂಯಂ ಸರ್ವೇ ವನೇಶ್ವರಾಃ ।
ಮಾರ್ತಂಡಕನ್ಯೇ ತ್ವಜಿತೇ ಗೋಪಾಲೋ ಗಾಶ್ಚ ಚಾರಯನ್ ॥ ೧೨ ॥
ನಿತ್ಯಂ ಚಕಾರ ಲೀಲಾಂ ತು ಸ ಗತಃ ಕುತ್ರ ನೋ ವದ ।
ಶತಶೃಂಗಗಿರೀಂದ್ರಸ್ತ್ವಂ ಶ್ರೀನಾಥೇನ ಧೃತಃ ಪುರಾ ॥ ೧೩ ॥
ವಾಮಹಸ್ತೇ ರಕ್ಷಣಾರ್ಥಂ ವಾಸವಾದ್ವ್ರಜವಾಸಿನಾಂ ।
ನ ಜಹಾತಿ ಹರಿಸ್ತ್ವಾಂ ತು ಸ್ವಪುತ್ರಂ ಹೃದಯೋದ್ಭವಂ ॥ ೧೪ ॥
ಸ ಗತೋ ವದ ಕುತ್ರಾಸ್ತೇ ವಿಹಾಯ ವಿಪಿನೇ ಚ ನಃ ।
ಹೇ ಮಯೂರಾಶ್ಚ ಹರಿಣಾ ಹೇ ಗಾವೋ ಹೇ ವೃಗಾಃ ಖಗಾಃ ॥ ೧೫ ॥
ಕಿರೀಟೀ ಹ್ಯಲಕೀ ಕೃಷ್ಣೋ ಯುಷ್ಮಾಭಿಃ ಕಿಂ ವಿಲೋಕಿತಃ ।
ವದಂತ ಸೋಽಪಿ ಕುತ್ರಾಸ್ತೇ ವನೇ ಕಸ್ಮಿನ್ಮನೋಹರಃ ॥ ೧೬ ॥

೧೨-೧೪. ಎಲೈ ವನರಾಜರಿರಾ, ನೀವೆಲ್ಲರೂ ದಯವಿಟ್ಟು ಅದನ್ನು ನಮಗೆ ತಿಳಿಸಿ. ಎಲೈ ಯಮುನಾದೇವಿ, ನಿನ್ನ ತಟಪ್ರದೇಶದಲ್ಲಿ ಹಸುಗಳನ್ನು ಮೇಯಿಸುತ್ತಾ ಪ್ರತಿನಿತ್ಯವೂ ಅನೇಕ ಲೀಲೆಗಳನ್ನು ತೋರ್ಪಡಿಸುತ್ತಿದ್ದ ಆ ಗೋಪಾಲನು ಎಲ್ಲಿಗೆ ಹೋದನು? ಎಲೆ ಗೋವರ್ಧನಗಿರಿಯೇ, ಹಿಂದೆ ಇಂದ್ರನು ಏಳು ದಿನಗಳು ಎಡಬಿಡದೆ ಮಳೆಯನ್ನು ಸುರಿಸಿದಾಗ ಭೀತರಾದ ಗೋಕುಲದ ನಿವಾಸಿಗಳನ್ನು ಕಾಪಾಡಲು ಆ ಶ್ರೀನಾಥನು ನಿನ್ನನ್ನು ಎಡಗೈಯಿಂದಲೇ ಎತ್ತಿ ಹಿಡಿದಿರಲಿಲ್ಲವೇ? ಆ ಹರಿಯು ಹೊಟ್ಟೆಯಲ್ಲಿ ಹುಟ್ಟಿದ ಮಗನಿಂತಲೂ ಹೆಚ್ಚಾಗಿ ಭಾವಿಸಿ ನಿನ್ನನ್ನು ಎಂದಿಗೂ ಎಡಬಿಡದೆ ಇರುತ್ತಿರಲಿಲ್ಲವೇ?

೧೫. ಹೇ ಗಿರಿರಾಜ, ಆ ಹರಿಯು ನಮ್ಮೆಲ್ಲರನ್ನೂ ಕಾಡಿನಲ್ಲಿಯೇ ತೊರೆದುಬಿಟ್ಟು ತಾನು ಮಾತ್ರ ಹೊರಟುಹೋಗಿ ಎಲ್ಲಿದ್ದುಬಿಟ್ಟಿರುವನು ? ಎಲೈ ನವಿಲುಗಳಿರಾ, ಜಿಂಕೆಗಳಿರಾ, ಹಸುಗಳಿರಾ, ಮೃಗಪಕ್ಷಿಗಳಿರಾ,

೧೬. ದಿವ್ಯವಾದ ಕಿರೀಟದಿಂದಲೂ, ಮುದ್ದಾದ ಕೇಶರಾಶಿಯಿಂದಲೂ ಎಲ್ಲರ ಮನಸ್ಸನ್ನೂ ಅಪಹರಿಸುವ ಆ ಕೃಷ್ಣನನ್ನು ನೀವು ನೋಡಿದಿರಾ ? ಹೇಳಿ, ಅವನೀಗ ಎಲ್ಲಿ ಇರುವನು, ಯಾವ ವನದಲ್ಲಿರುವನು, ಎಂದು ಮುಂತಾಗಿ ಕೇಳುತ್ತಾ ಹುಡುಕಿದರು.

ಏತೈಸ್ತು ವಾಕ್ಯೈಃ ಸಂಪೃಷ್ಟಾ ಹರಿಣಾಸ್ತೀರ್ಥವಾಸಿನಃ ।
ಉತ್ತರಂ ನೈವ ದಾಸ್ಯಂತಿ ಸರ್ವೇ ತೇ ಮೋಹಿತಾಃ ಕಿಲ ॥ ೧೭ ॥

॥ ಗರ್ಗ ಉವಾಚ ॥

ಏವಂ ಸರ್ವಾ ಹಿ ಪೃಚ್ಛಂತ್ಯಃ ಕೃಷ್ಣಚಂದ್ರಂ ವನೇ ವನೇ ।
ವದಂತ್ಯಃ ಕೃಷ್ಣಕೃಷ್ಣೇತಿ ಬಭೂವುಸ್ತನ್ಮಯಾಸ್ತತಃ ॥ ೧೮ ॥

ಚಕ್ರುಃ ಕೃಷ್ಣಚರಿತ್ರಾಣಿ ತತ್ರ ಕೃಷ್ಣಮಯಾಃ ಸ್ತ್ರಿಯಃ ।
ಯಮುನಾವಾಲುಕಾಯಾಂ ಚ ಪದಾನಿ ದದೃಶುರ್ಹರೇಃ ॥ ೧೯ ॥

ವಜ್ರಧ್ವಜಾಂಕುಶಾದ್ಯೈಶ್ಚ ಚಿಹ್ನಿತಾನಿ ಮಹಾತ್ಮನಃ ।
ತತ್ಪದಾನ್ಯನುಸಾರೇಣ ಪಶ್ಯಂತಃ ಪ್ರಯಯುಸ್ತ್ವರಂ ॥ ೨೦ ॥

---

೧೭. ಹೀಗೆ ಆ ಯಮುನಾನದಿಯ ತೀರದಲ್ಲಿರುವ ವೃಂದಾವನ ಪ್ರದೇಶದಲ್ಲಿ ಸಮಸ್ತ ವಸ್ತುಗಳನ್ನೂ ಕೇಳಿದರೂ ಅವೆಲ್ಲವೂ ಕೃಷ್ಣನ ಮಾಯೆಗೊಳಗಾಗಿ ಕಾಠಿಣ್ಯವನ್ನು ತಳೆದು ಯಾವ ಮಾತಿಗೂ ಪ್ರತ್ಯುತ್ತರವನ್ನು ಕೊಡಲೇ ಇಲ್ಲ.

೧೮. ಎಲೈ ರಾಜೇಂದ್ರನೇ, ಈರೀತಿ ಆ ಗೋಪಾಂಗನೆಯರೆಲ್ಲರೂ ಪ್ರತಿಯೊಂದು ವನದಲ್ಲಿಯೂ ಕೃಷ್ಣನು ಎಲ್ಲಿಹೋದನು ಎಂದು ಪ್ರಶ್ನಿಸುತ್ತಾ ಕೃಷ್ಣಾ, ಕೃಷ್ಣಾ, ಎಂದು ಕರೆಯುತ್ತಾ ತನ್ಮಯರಾಗಿಬಿಟ್ಟರು.

೧೯. ಅನಂತರ ಶ್ರೀಕೃಷ್ಣನಲ್ಲೇ ನೆಲಸಿಹೋದ ಮನಸ್ಸುಳ್ಳ ಆ ಗೋಪಿಯರು ಕೃಷ್ಣನ ಲೀಲೆಗಳನ್ನೇ ಅನುಕರಿಸುತ್ತಾ ಯಮುನಾನದಿಯ ಮರಳಿನ ದಿಬ್ಬದಲ್ಲಿ

೨೦. ವಜ್ರ, ಧ್ವಜ, ಅಂಕುಶ ಮೊದಲಾದ ಶುಭಚಿಹ್ನೆಗಳಿಂದ ಅಲಂಕೃತವಾದ ಮಹಾತ್ಮನಾದ ಆ ಕೃಷ್ಣನ ಹೆಜ್ಜೆಯ ಗುರುತುಗಳನ್ನು ಕಂಡರು. ಅನಂತರ ಅದೇ ಹೆಜ್ಜೆಯ ಜಾಡನ್ನು ಅನುಸರಿಸಿ ಬೇಗಬೇಗನೆ ಮುಂದೆ ನಡೆದರು.

ಕೃಷ್ಣಾಂಘ್ರಿರೇಣವೋ ನೀತ್ವಾ ಮೂರ್ಧ್ನಿ ಧೃತ್ವಾ ವ್ರಜಸ್ತ್ರಿಯಃ ।
ಪದಾನ್ಯಸ್ಯಾನಿ ದದೃಶುಶ್ಚಾನ್ಯಚಿಹ್ನಯುತಾನಿ ಹಿ ॥ ೨೧ ॥

ನಿರೀಕ್ಷ್ಯಾಹುಃ ಪ್ರಿಯಾಸಾರ್ಧಂ ಗತಃ ಪ್ರಿಯತಮೋ ಹ್ಯಸೌ ।
ಏವಂ ವದಂತ್ಯಃ ಪಶ್ಯಂತ್ಯೋ ಗೋಪ್ಯಸ್ತಾಲವನಂ ಗತಾಃ ॥ ೨೨ ॥

ವ್ರಜನ್ನಗ್ರೇ ವ್ರಜೇಂದ್ರಸ್ತು ವ್ರಜೇಶ್ವರ್ಯಾ ವ್ರಜೇ ನೃಪ ।
ಕೋಲಾಹಲಂ ಚ ಗೋಪೀನಾಂ ಶ್ರುತ್ವಾ ಪ್ರತ್ಯಾಹ ಸ್ವಾಮಿನೀಂ ॥ ೨೩ ॥

ಶೀಘ್ರಂ ಗಚ್ಛ ಪ್ರಿಯೇ ತ್ವಂ ತು ಕೋಟಿಚಂದ್ರಸಮಪ್ರಭೇ ।
ಆಗತಾ ವ್ರಜನಾರ್ಯೋ ಹಿ ನೇತುಂ ತ್ವಾಂ ಮಾಂ ಚ ಸರ್ವತಃ ॥ ೨೪ ॥

---

೨೧. ಓ ರಾಜೇಂದ್ರ, ಆ ವ್ರಜಾಂಗನೆಯರು ಶ್ರೀಕೃಷ್ಣನ ಚರಣ ಧೂಳಿಯನ್ನು ಕೈಲಿ ತೆಗೆದುಕೊಂಡು ತಮ್ಮ ತಲೆಯಲ್ಲಿ ಧರಿಸಿಕೊಂಡರು. ಆಗ ಅವರ ಕಣ್ಣಿಗೆ ಶ್ರೀಕೃಷ್ಣನ ಪದಚಿಹ್ನವಲ್ಲದೆ ಮತ್ತೊಂದು ಕಾಲಿನ ಗುರುತೂ ಕಾಣ ಬಂದಿತು.

೨೨. ಆಗವರು ತಮ್ಮ ಪ್ರಿಯತಮನು ತನ್ನ ಪ್ರಿಯೆಯೊಡನೆ ಹೊರಟಿರುವನು, ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾ ಆ ಪದಚಿಹ್ನಾನುಸಾರವಾಗಿ ತಾಳವನದ ಕಡೆಗೆ ಹೊರಟರು.

೨೩. ಎಲೈ ವಜ್ರನಾಭರಾಜನೇ, ಆಗ ವ್ರಜೇಶ್ವರಿಯಾದ ರಾಧೆಯೊಡನೆ ಮುಂದೆ ಮುಂದೆ ಹೋಗುತ್ತಿದ್ದ ವ್ರಜೇಶ್ವರನಾದ ಶ್ರೀಕೃಷ್ಣನು ಹಿಂದುಗಡೆ ಗೋಪಿಯರ ಗದ್ದಲವನ್ನು ಕೇಳಿ ಆ ರಾಧೆಯನ್ನು ಕುರಿತು,

೨೪. ಎಲೈ ಕೋಟಿ ಸೂರ್ಯರಿಗೆ ಸರಿಸಮವಾದ ಕಾಂತಿಯಿಂದ ಮೆರೆಯುತ್ತಿರುವ ಕಾಂತೆಯೇ, ಇದೋ! ನಿನ್ನನ್ನೂ, ನನ್ನನ್ನೂ ಕರೆದೊಯ್ಯಲು ಗೋಪಿಯರು ಎಲ್ಲ ಕಡೆಯಿಂದಲೂ ಬಳಸಿ ಬರುತ್ತಿರುವರು. ಬೇಗ ಬೇಗ ನಡೆ ಎಂದನು.

ತತಃ ಪ್ರಿಯಾ ಹರೇಃ ಪೂರ್ವಂ ಶೃಂಗಾರಂ ಕುಸುಮೈರ್ನೃಪ ।
ಚಕಾರ ಸುಂದರಂ ದಿವ್ಯಂ ವೃಂದಾರಣ್ಯೇ ಚ ಪೂರ್ವವತ್ ॥ ೨೫ ॥

ನಂದಸೂನುಃ ಪ್ರಿಯಾಯಾಶ್ಚ ದಿವ್ಯಂ ಶೃಂಗಾರಮೇವ ಚ ।
ಚಕಾರ ಬಹುಭಿಃ ಪುಷ್ಪೈರ್ಭಾಂಡೀರೇ ಚ ಯಥಾ ಪುರಾ ॥ ೨೬ ॥

ಕೇಶಪ್ರಸಾಧನಾದ್ಯೈಶ್ಚ ಸ್ರಕ್ತಾಂಬೂಲಾನುಲೇಪನೈಃ ।
ಸುಂದರೀ ಸುದರೇಣಾಪಿ ಬಭೂವಾತ್ಯಂತಸುಂದರೀ ॥ ೨೭ ॥

ತತಃ ಕೃಷ್ಣಸ್ತು ಮುದಿತಃ ಪುಷ್ಪವೃಕ್ಷತಲೇ ನೃಪ ।
ಶಯ್ಯಾಂ ಪುಷ್ಪಮಯೀಂ ಕೃತ್ವಾ ತಯಾ ರೇಮೇ ರಮೇಶ್ವರಃ ॥ ೨೮ ॥

---

೨೫. ಆಗ ಆ ರಾಧೆಯು ತನ್ನ ಪ್ರಿಯನಾದ ಶ್ರೀಕೃಷ್ಣನು ಹಿಂದೆ ವೃಂದಾವನದಲ್ಲಿ ಅಲಂಕರಿಸಿಕೊಂಡಿದ್ದಂತೆ ಆತನಿಗೆ ಸೊಗಸಾಗಿ ಹೂಗಳಿಂದ ಶೃಂಗಾರವನ್ನು ಮಾಡಿದಳು.

೨೬. ಅದರಂತೆಯೇ ಆ ನಂದನಂದನನೂ ಸಹ ಹಿಂದೆ ಭಾಂಡೀರವೆಂಬ ವೃಕ್ಷದ ಬಳಿ ರಾಧೆಯು ಪುಷ್ಪಾಲಂಕಾರವನ್ನು ತಳೆದಿದ್ದಂತೆ ಸೊಗಸಾದ ಅನೇಕ ಹೂಗಳಿಂದ ಆಕೆಯನ್ನು ಶೃಂಗರಿಸಿದನು.

೨೭. ಸ್ವಭಾವತಃ ಸುಂದರಿಯಾದ ಆ ವ್ರಜರಾಣಿಯು ತನ್ನ ಪ್ರಿಯತಮನಾದ ಆ ಸುಂದರನು ಹೆರಳು ಮೊದಲಾದ ವಿವಿಧ ಕೇಶರಾಶಿಗಳಿಂದಲೂ, ಹೂವಿನ ಸರಗಳಿಂದಲೂ, ತಾಂಬೂಲರಾಗದಿಂದಲೂ, ಗಂಧಾದ್ಯನುಲೇಪನಗಳಿಂದಲೂ, ತನ್ನನ್ನು ಸಿಂಗರಿಸಲು ಮತ್ತಷ್ಟು ಸುಂದರಿಯಾಗಿ ತೋರಿದಳು.

೨೮. ಓ ರಾಜೇಂದ್ರ, ತನ್ನ ಸೌಂದರ್ಯದಿಂದ ಸ್ವಭಾವಚಂಚಲೆಯೆನಿಸಿದ ಲಕ್ಷ್ಮಿಯನ್ನೂ ಸಹ ಮೋಹಗೊಳಿಸಿ ಅವಳು ತನ್ನನ್ನು ಎಂದೆಂದಿಗೂ ಎಡಬಿಡದೆ ಹೃದಯದಲ್ಲೇ ನೆಲಸುವಂತೆ ಮಾಡಿರುವ ಆ ಅಪಾರರೂಪರಾಶಿಯುಳ್ಳ ಕೃಷ್ಣನು ಅಪರಿಮಿತವಾದ ಸಂತೋಷವನ್ನು ತಾಳಿ ಪುಷ್ಪಭರಿತವಾದ ಒಂದು ಮರದ ಕೆಳಗೆ ಪುಷ್ಪಗಳಿಂದಲೇ ರಚಿತವಾದ ಶಯ್ಯೆಯಲ್ಲಿ ಆ ರಾಧಿಕೆಯೊಡನೆ ವಿಹರಿಸಿದನು.

ವೃಂದಾವನೇ ಗೋವರ್ಧನೇ ಕೃಷ್ಣಾಯೋಃ ಪುಲಿನೇ ತಥಾ ।
ನಂದೀಶ್ವರೇ ಬೃಹತ್ಸಾನೌ ತಥಾ ರೋಹಿತಪರ್ವತೇ ॥ ೨೯ ॥

ಅರಣ್ಯೇಷು ದ್ವಾದಶಸು ಸರ್ವತ್ರ ವ್ರಜಮಂಡಲೇ ।
ಕಾಂತಯಾ ವಿಚರನ್ಕಾಂತೋ ವಂಶೀವಟತಲೇ ಸ್ಥಿತಃ ॥ ೩೦ ॥

ತತ್ರ ಶುಶ್ರಾವ ಗೋಪೀನಾಂ ವದಂತೀನಾಂ ರವಂ ಪರಂ ।
ಸ್ವಾಮಿನ್ಯಾ ಸಹ ರಾಜೇಂದ್ರ ಶ್ರೀಗೋಪೀಜನವಲ್ಲಭಃ ॥ ೩೧ ॥

ಪುನಃ ಪ್ರಾಹ ಪ್ರಿಯಾಂ ಪ್ರೇಮ್ಣಾ ಗಚ್ಛ ಗಚ್ಛ ಪ್ರಿಯೇ ತ್ವರಂ ।
ಕೃಷ್ಣವಾಕ್ಯಂ ತತಃ ಶ್ರುತ್ವಾ ಪ್ರಾಹ ಭೂತ್ವಾ ಚ ಮಾನಿನೀ ॥ ೩೨ ॥

೨೯-೩೦. ಅನಂತರ ಅಲ್ಲಿಂದೆದ್ದು ವೃಂದಾವನದಲ್ಲಿಯೂ, ಗೋವರ್ಧನ ಪರ್ವತದಮೇಲೆಯೂ, ಯಮುನಾನದಿಯ ಸೈಕತಪ್ರದೇಶದಲ್ಲಿಯೂ (ಮರುಳು ದಿಬ್ಬ) ನಂದೀಶ್ವರವೆಂಬಲ್ಲಿಯೂ, ವಿಶಾಲವಾದ ತಪ್ಪಲುಗಳಿಂದ ಕೂಡಿ ರಮಣೀಯವಾಗಿರುವ ರೋಹಿತವೆಂಬ ಪರ್ವತದಲ್ಲಿಯೂ, ಮತ್ತು ಸುತ್ತಮುತ್ತಲೂ ಇರುವ ಹನ್ನೆರಡು ಅರಣ್ಯಪ್ರದೇಶಗಳಲ್ಲಿಯೂ ಹೆಚ್ಚೇನು, ಗೋಕುಲದ ಎಲ್ಲಾ ಕಡೆಗಳಲ್ಲೂ ಕಾಂತೆಯಾದ ಆ ರಾಧೆಯೊಡಗೂಡಿ ಸುಳಿದಾಡುತ್ತಾ ಕೊನೆಗೆ ವಂಶೀವಟದ ಬುಡದಲ್ಲಿ ಕುಳಿತುಕೊಂಡನು.

೩೧. ಎಲೈ ರಾಜೇಂದ್ರನೇ, ಗೋಪೀಜನಪ್ರಿಯನಾದ ಆ ಶ್ರೀಕೃಷ್ಣನು ವ್ರಜಸ್ವಾಮಿನಿಯಾದ ರಾಧೆಯೊಡನೆ ಆ ವಂಶೀವಟದ ಕೆಳಗೆ ಕುಳಿತಿರುವಾಗ ಆ ಗೋಪಿಯರು ಪರಸ್ಪರವಾಗಿ ಮಾತಾಡುತ್ತಾ ಬರುತ್ತಿರುವ ಸದ್ದು ಕೇಳಿಬಂದಿತು.

೩೨. ಆಗ ಕೃಷ್ಣನು ತನ್ನ ಪ್ರಿಯೆಯಾದ ರಾಧೆಯನ್ನು ಕುರಿತು ಪ್ರೀತಿಯಿಂದ, ಏಳು ಬೇಗ ನಡೆ, ಎಂದು ಮತ್ತೆ ಹೇಳಲು ಆ ರಾಧೆಯು ತನ್ನ ಸೌಭಾಗ್ಯದಿಂದ ಉಬ್ಬಿದವಳಾಗಿ ಗರ್ವದಿಂದ—

॥ ರಾಧೋವಾಚ ॥

ನ ಸಮರ್ಥಾ ಪ್ರಚಲಿತುಂ ಕ್ವಚಿದ್ಗೇಹಾನ್ನ ನಿರ್ಗತಾ ।
ನಯ ಮಾಂ ತೇ ಮನೋ ಯತ್ರ ದುರ್ಬಲಾಂ ದೀನವತ್ಸಲ ॥ ೩೩ ॥

ಇತಿ ತದ್ವಾಕ್ಯಮಾಕರ್ಣ್ಯ ರಾಮಾಂ ರಾಮಾನುಜಸ್ತತಃ ।
ಸ್ವೇನ ಪೀತಾಂಬರೇಣಾಪಿ ವೀಜಯಾಮಾಸ ಸ್ವೇದತಃ ॥ ೩೪ ॥

ಪ್ರಗೃಹ್ಯ ಪಾಣಿನಾ ಪ್ರಾಹ ಸರ್ಪ ರಾಜ್ಞಿ ಯಥಾಸುಖಂ ।
ಇತಿ ಸಾ ಹರಿಣಾ ಪ್ರೋಕ್ತಾ ಮತ್ವಾತ್ಮಾನಂ ವರಂ ಪರಂ ॥ ೩೫ ॥

ಹಿತ್ವಾಸೌ ಸ್ತ್ರೀಜನಾನ್ರಾತ್ರೌ ಭಜತೇ ಮಾಂ ರಹಸ್ಥಲೇ ।
ಇತಿ ಮತ್ವಾ ತು ಹರಯೇ ಭೂತ್ವಾ ತೂಷ್ಣೀಂ ವ್ರಜೇಶ್ವರೀ ॥ ೩೬ ॥

---

೩೩. ಎಲೈ ನಾಥನೇ, ನಾನೆಂದೂ ಮನೆ ಬಿಟ್ಟು ಹೊರಟವಳಲ್ಲ. ಮುಂದೆ ಹೆಜ್ಜೆಯಿಡಲು ನನ್ನ ಕೈಲಾಗದು. ಆದುದರಿಂದ ದುರ್ಬಲೆಯಾದ ನನ್ನನ್ನು ನೀನು ಹೋಗಬೇಕೆಂದಿರುವ ಕಡೆಗೆ ನೀನೇ ಕರೆದೊಯ್ಯಬೇಕು, ಎಂದಳು.

೩೪. ಈರೀತಿ ರಾಧೆಯು ನುಡಿದ ಮಾತನ್ನು ಕೇಳಿ, ಆ ಶ್ರೀಕೃಷ್ಣನು ಆ ರಾಧೆಯ ಮುಖದಲ್ಲಿ ಮೂಡಿದ್ದ ಬೆವರನ್ನಾರಿಸಲು ತನ್ನ ಪೀತಾಂಬರದಿಂದ ಮೆಲ್ಲನೆ ಬೀಸಿದನು.

೩೫. ಅನಂತರ ತನ್ನ ಕೈಯಿಂದ ಅವಳನ್ನು ಹಿಡಿದುಕೊಂಡು ಎಲೆ ರಾಣಿ, ನಿನಗೆ ಹೇಗೆ ಹಿತವೋ ಹಾಗೆ ಹೋಗುವಂತೆ ಎಂದು ನುಡಿದನು. ಹೀಗೆ ಕೃಷ್ಣನಾಡಿದುದನ್ನು ಕೇಳುತ್ತಲೇ ಆ ರಾಧೆಯು ತಾನೇ ಮಿಗಿಲಾದವಳೆಂಬ ಹೆಮ್ಮೆಗೀಡಾದಳು.

೩೬-೩೭. ಆದುದರಿಂದಲೇ ಈ ಶ್ರೀಕೃಷ್ಣನು ಉಳಿದ ಹೆಂಗಸರೆಲ್ಲರನ್ನೂ ಬಿಟ್ಟು ರಾತ್ರಿಯೆಲ್ಲಾ ನನ್ನ ಬಳಿಯಲ್ಲಿಯೇ ಏಕಾಂತವಾಗಿ ವಿಹರಿಸುತ್ತಿರುವನು. ಎಂದು ಆ ರಾಸರಾಣಿಯು ಅಭಿಮಾನವನ್ನು ತಾಳಿ ಕೃಷ್ಣನ ಮಾತಿಗೆ ಉತ್ತರ

ವಸ್ತ್ರೇಣಾನನಮಾಚ್ಛಾದ್ಯ ಪೃಷ್ಟಂ ದತ್ವಾ ಸ್ಥಿತಾಭವತ್ ।
ಪುನರಾಹ ಹರಿಸ್ತಾಂ ತು ಪ್ರಿಯೇ ಗಚ್ಛ ಮಯಾ ಸಹ ॥ ೩೭ ॥

ಭಜಾಮಿ ತ್ವಾಮಹಂ ಭದ್ರೇ ವಿಯೋಗಾರ್ತಾಂ ತು ಶಾಪತಃ ।
ವಿಹಾಯ ಗೋಪೀಸ್ಸರ್ವಾಶ್ಚ ಲಗ್ನಾಸ್ತ್ವಾಂ ತು ಭಜಾಮ್ಯಹಂ ॥ ೩೮ ॥

ತ್ವಂ ತು ಮೇ ಸ್ಕಂಧಮಾರುಹ್ಯ ಸುಖಂ ವ್ರಜ ರಹಃಸ್ಥಲೇ ।
ಇತ್ಯುಕ್ತ್ವಾ ಮಾನಿನೀಂ ಮಾನೀ ಸ್ಕಂಧಯಾನಮಭೀಪ್ಸತೀಂ ॥ ೩೯ ॥

ತ್ಯಕ್ತ್ವಾ ಹ್ಯಂತರ್ದಧೇ ರಾಜನ್ ಸ್ವಾತ್ಮಾರಾಮಃ ಸ್ವಲೀಲಯಾ ।
ಅಂತರ್ಹಿತೇ ಭಗವತಿ ಸಹಸಾ ಸಾ ವಧೂರ್ನೃಪ ॥ ೪೦ ॥

ವನ್ನೇ ಕೊಡದೆ ತನ್ನ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಳಲ್ಲದೆ ಅವನ ಕಡೆ ಬೆನ್ನನ್ನೂ ತಿರುಗಿಸಿ ಕುಳಿತುಕೊಂಡಳು. ಆಗ ಕೃಷ್ಣನು ಪುನಃ ಇನ್ನೊಮ್ಮೆ ಅವಳನ್ನು ಕುರಿತು ಪ್ರಿಯೆ, ನಡೆ, ಹೋಗೋಣ.

೩೮. ಶಾಪವಶದಿಂದ ವಿಯೋಗವುಂಟಾಗಿ ತಲ್ಲಣಿಸುತ್ತಿದ್ದ ನಿನ್ನನ್ನು ಸಂತೋಷಗೊಳಿಸಲೆಂದೇ ಈಗ ನಾನು ನನ್ನನ್ನೇ ಕಾಮಿಸಿ ಬಂದಿರುವ ಈ ಗೋಪಿಯರೆಲ್ಲರನ್ನೂ ಬಿಟ್ಟು ನಿನ್ನೊಬ್ಬಳನ್ನೇ ಸೇವಿಸುತ್ತಿರುವೆನು.

೩೯. ನೀನು ನನ್ನ ಹೆಗಲಮೇಲೆ ಹತ್ತಿ ಕುಳಿತುಕೋ, ಯಾರಿಗೂ ತಿಳಿಯದಂತೆ ಏಕಾಂತವಾಗಿರುವ ಪ್ರದೇಶಕ್ಕೆ ಆಯಾಸವಿಲ್ಲದೆ ಹೋಗುವಿಯಂತೆ. ಎಂದು ಹೇಳಿ ಮೊದಲೇ ಸೊಕ್ಕಿನಿಂದ ಬೀಗುತ್ತಿದ್ದ ಆ ರಾಧೆಯನ್ನು ಉಬ್ಬಿಸಿದನು.

೪೦. ಓ ರಾಜೇಂದ್ರ, ಆತನ ಮಾತನ್ನು ಕೇಳುತ್ತಲೇ ಕೃಷ್ಣನು ತನ್ನನ್ನು ಹೆಗಲಮೇಲೆ ಕೂರಿಸಿಕೊಂಡು ಹೋಗುವನೆಂದು ಆಕೆಯು ಭಾವಿಸಿದಳು. ಆದರೇನು. ಆ ಲೀಲಾವಿಶಾರದನು ಇದ್ದಕ್ಕಿದ್ದಂತೆ ಕಣ್ಮರೆಯಾಗಿ ಬಿಟ್ಟನು. ಒಡನೆಯೇ ಆ ರಾಧೆಯು,

ಅನ್ವತಪ್ಯತ ದುಃಖಾರ್ತಾ ಗತಮಾನಾ ರುರೋದ ಹ |
ತತಸ್ತದ್ರೋದನಂ ಶ್ರುತ್ವಾ ವಂಶೀವಟತಟೇ ತ್ವರಂ ॥ ೪೧ ॥

ಆಜಗ್ಮುರ್ಗೋಪಿಕಾಃ ಸರ್ವಾ ದದೃಶುಸ್ತಾಂ ಚ ದುಃಖಿತಾಂ |
ಚಕ್ರುಸ್ತ್ರಿಯಸ್ತದಂಗೇಷು ವಾಯುಂ ವ್ಯಜನಚಾಮರೈಃ ॥ ೪೨ ॥

ಸ್ನಾಪಯಿತ್ವಾ ತು ತಾಂ ಪ್ರೇಮ್ಣಾ ಕಾಶ್ಮೀರಸಲಿಲೇನ ಚ |
ಸಿಷುಚುರ್ಮಕರಂದೈಸ್ತಾಂ ಚಂದನದ್ರವಶೀಕರೈಃ ॥ ೪೩ ॥

ಪುನರ್ವಾಕ್ಯೈಃ ಸಮಾಶ್ವಾಸ್ಯ ಗೋಪ್ಯಃ ಕರ್ಮಸು ಕೋವಿದಾಃ |
ನಿಶಮ್ಯ ತನ್ಮುಖಾದ್ಯಾನಂ ಗೋವಿಂದಸ್ಯ ಚ ಮಾನತಃ ॥ ೪೪ ॥

---

೪೧. ಬಹುವಾಗಿ ದುಃಖಿತಳಾದಳು. ಅವಳ ಸೌಭಾಗ್ಯದ, ಸೊಕ್ಕೆಲ್ಲವೂ ಅಡಗಿಹೋಯಿತು ಸುಮ್ಮನೆ ಗಳಗಳನೆ ಅತ್ತುಬಿಟ್ಟಳು. ಹೀಗಾಗಿ ವಂಶೀವಟದ ಕೆಳಗೆ ಆ ರಾಧೆಯು ಅಳುತ್ತಿರುವ ಸದ್ದು ಹಿಂದೆ ಬರುತ್ತಿದ್ದ ಗೋಪಿಯರ ಕಿವಿಗೆ ಬಿದ್ದಿತು.

೪೨. ಕೂಡಲೇ ಆ ಗೋಪಿಯರೆಲ್ಲರೂ ಅಲ್ಲಿಗೆ ಬಂದು ದುಃಖದಿಂದ ತಲ್ಲಣಿಸುತ್ತಿರುವ ಆಕೆಯನ್ನು ನೋಡಿದರು. ಬಳಿಕ ಬೀಸಣಿಗೆಗಳಿಂದಲೂ, ಚಾಮರಗಳಿಂದಲೂ ಮೆಲ್ಲಗೆ ಬೀಸಿದರು.

೪೩. ಮತ್ತು ಕೇಸರಿಯನ್ನು ಹಾಕಿದ ಸುವಾಸನೆಯಿಂದ ಕೂಡಿದ ನೀರನ್ನು ಅವಳ ಮೈಮೇಲೆ ಚಿಮುಕಿಸುದಲ್ಲದೆ ಹೂಗಳಲ್ಲಿರುವ ಮಕರಂದಗಳಿಂದಲೂ, ಗಂಧದ ನೀರಿನ ತುಂತುರುಗಳಿಂದಲೂ ಅವಳ ಶರೀರತಾಪವನ್ನು ಹೋಗಲಾಡಿಸಿದರು.

೪೪. ಅನಂತರ ಸಮಯೋಚಿತವಾದ ಕೃತ್ಯಗಳನ್ನು ಚೆನ್ನಾಗಿ ಬಲ್ಲವರಾದ ಆ ಗೋಪಿಯರು ಸಾಂತ್ವವಾಕ್ಯಗಳಿಂದ ಅವಳನ್ನು ಸಂತೈಸುತ್ತಾ ಆ ಶ್ರೀಕೃಷ್ಣನು ಹುಸಿಮುನಿಸಿನಿಂದ ಕಣ್ಮರೆಯಾಗಿ ಎಲ್ಲಿಯೋ ಹೊರಟು ಹೋದನೆಂಬ ಸಂಗತಿಯನ್ನು ಅರಿತರು.

ಮಾನಿನ್ಯೋ ಗೋಪಿಕಾಃ ಸರ್ವಾ ವಿಸ್ಮಯಂ ಪರಮಂ ಯಯುಃ ।
ವಿಹಾಯಮಾನಂ ತಾಃ ಸರ್ವಾ ಆಗತ್ಯ ಪುಲಿನಂ ನೃಪ ।
ಸ್ವರೈರ್ಜಗುಃ ಕೃಷ್ಣಗುಣಾಸ್ತದಾಗಮನಹೇತವೇ ॥ ೪೫ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧ
ಚರಿತ್ರೇ ಸುಮೇರೌ ರಾಸಕ್ರೀಡಾಯಾಂ
ಚತುಶ್ಚತ್ವಾರಿಂಶೋಽಧ್ಯಾಯಃ

---

೪೫. ಓ ರಾಜೇಂದ್ರ, ಅದುವರೆಗೆ ಆ ಗೋಪಿಯರೆಲ್ಲರೂ ತಮ್ಮನ್ನು ಬಿಟ್ಟು ಮತ್ತಾವಳೊಡನೆಯೋ ಸೇರಿ ಶ್ರೀಕೃಷ್ಣನು ವಿಹರಿಸುತ್ತಿರುವನೆಂದು ಬಗೆದು ಪ್ರಣಯಕೋಪಕ್ಕೊಳಗಾಗಿದ್ದರು. ಈಗ ತಾವು ನೋಡಿದ ಆ ತರುಣಿಯೂ ಸಹ ತಮ್ಮಂತೆಯೇ ಕೃಷ್ಣನನ್ನು ಕಾಣದೆ ತಳಮಳಿಸುತ್ತಿರುವುದನ್ನು ಕಂಡು ಆಶ್ಚರ್ಯಪಟ್ಟರು. ಆಗವರು ತಮ್ಮ ಪ್ರಣಯಕೋಪವೆಲ್ಲವನ್ನೂ ತೊರೆದು ಎಲ್ಲರೂ ಒಟ್ಟಾಗಿ ಯಮುನಾನದಿಯ ಮರಳು ದಿಣ್ಣೆಗೆ ಬಂದು ತಮ್ಮ ಪ್ರಿಯನಾದ ಶ್ರೀಹರಿಯು ಮರಳಿ ತಮ್ಮ ಬಳಿಗೆ ಬರಲಿ, ಎಂದು ಆಶಿಸುತ್ತಾ ಆತನ ಮಂಗಲಗುಣಗಳನ್ನೇ ಇಂಪಾದ ದನಿಯಿಂದ ಹಾಡತೊಡಗಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತ್ರದಲ್ಲಿ ರಾಸಕ್ರೀಡಾಪ್ರಕರಣದ ನಲವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಪಂಚಚತ್ವಾರಿಂಶೋಽಧ್ಯಾಯಃ

|| ಗೋಪ್ಯ ಊಚುಃ ||

ಅಧರಬಿಂಬವಿಡಂಬಿತವಿದ್ರುಮಂ
ಮಧುರವೇಣುನಿನಾದವಿನೋದಿತಂ ।
ಕಮಲಕೋಮಲನೀಲಮುಖಾಂಬುಜಂ
ತಮಪಿ ಗೋಪಕುಮಾರಮುಪಾಸ್ಮಹೇ || ೧ ||

ಶ್ಯಾಮಲಂ ವಿಪಿನಕೇಲಿಲಂಪಟಂ
ಕೋಮಲಂ ಕಮಲಪತ್ರಲೋಚನಂ ।
ಕಾಮದಂ ವ್ರಜವಿಲಾಸಿನೀದೃಶಾಂ
ಶೀತಲಂ ಮತಿಹರಂ ಭಜಾಮಹೇ || ೨ ||

ನಲವತ್ತೈದನೆಯ ಅಧ್ಯಾಯವು.

೧. ಓ ರಾಜೇಂದ್ರ, ಆ ಗೋಪಿಯರು ಈ ರೀತಿಯಾಗಿ ಆ ಶ್ರೀಕೃಷ್ಣನ ಗುಣಗಳನ್ನು ಹಾಡಿದರು :—ಹವಳದ ಕುಡಿಯನ್ನು ನಾಚಿಸುವ ಎಳೆದುಟಿಗಳಿಂದಲೂ, ಕೊಳಲಿನಿಂದ ಹೊರಸೂಸುತ್ತಿರುವ ಇಂಪಾದ ದನಿಯಿಂದಲೂ, ಕಮಲದಂತೆ ಕೋಮಲವಾದ ಶ್ಯಾಮಲವಾದ ಮುಖಮಂಡಲದಿಂದಲೂ ಕಂಗೊಳಿಸುತ್ತಿರುವ ಗೋಪಕಿಶೋರನೊಬ್ಬನನ್ನು ಭಜಿಸುವೆವು.

೨. ಅರಣ್ಯವಿಹಾರದಲ್ಲಿ ಆಸಕ್ತನೂ, ಕಪ್ಪಾದ ದೇಹಕಾಂತಿಯುಳ್ಳವನೂ, ಸುಕುಮಾರ ಶರೀರನೂ, ತಾವರೆಯ ಎಸಳಿನಂತೆ ಅಗಲವಾದ ಕಣ್ಣುಗ

ತಂ ವಿಸಂಚಲಿತಲೋಚನಾಂಚಲಂ
ಸಾಮಿಕುಡ್ಮಲಿತಕೋಮಲಾಧರಂ |
ವಂಶವಲ್ಗಿತಕರಾಂಗುಲೀಮುಖಂ
ವೇಣುನಾದರಸಿಕಂ ಭಜಾಮಹೇ ॥ ೩ ॥

ಈಷದಂಕುರಿತದಂತಕುಂಡಲಂ
ಭೂಷಣಂ ಭುವನಮಂಗಲಶ್ರಿಯಂ |
ಘೋಷಸೌರಭಮನೋಹರಂ ಹರೇ-
ರ್ವೇಷಮೇವ ಮೃಗಯಾಮಹೇ ವಯಂ ॥ ೪ ॥

ಅಸ್ತು ನಿತ್ಯಮರವಿಂದಲೋಚನಃ
ಶ್ರೇಯಸೇ ಹಿ ತು ಸುರಾರ್ಚಿತಾಕೃತಿಃ |
ಯಸ್ಯ ಪಾದಸರಸೀರುಹಾಮೃತಂ
ಸೇವ್ಯಮಾನಮನಿಶಂ ಮುನೀಶ್ವರೈಃ ॥ ೫ ॥

ಳುಳ್ಳವನೂ, ಬಯಸಿದ ಇಷ್ಟಾರ್ಥಗಳೆಲ್ಲವನ್ನೂ ಈಡೇರಿಸುವವನೂ, ಗೋಪಾಂಗನೆಯರ ಕಂಗಳಿಗೆ ತಂಪನ್ನುಂಟುಮಾಡುವವನೂ, ತನ್ನ ಸೌಂದರ್ಯದಿಂದ ಸಕಲರ ಮನಸ್ಸನ್ನೂ ಸೆಳೆಯುವವನೂ ಆದ ಗೋಪಕುಮಾರನೊಬ್ಬನನ್ನು ಭಜಿಸುವೆವು.

೩. ಚಂಚಲವಾದ ಕುಡಿನೋಟ, ಅರೆಯರಳಿದ ಹೂವಿನಂತೆ ಮೃದುವಾದ ಎಳೆದುಟಿಗಳು, ಕೊಳಲಿನ ರಂಧ್ರಗಳಮೇಲೆ ನಲಿದಾಡುವ ತುದಿಬೆರಳು, ಇವುಗಳಿಂದೊಪ್ಪುವ ಮುರಲೀಮನೋಹರನನ್ನು ಭಾವಿಸುವೆವು.

೪. ಸಕಲ ಜಗತ್ತಿನ ಮಂಗಲಮಯವಾದ ಸೌಭಾಗ್ಯಸಂಪದವೋ, ಗೋಕುಲದ ಪರಿಮಲವೊ, ಎನ್ನುವಂತೆ ತೋರುತ್ತಾ ಕಂಗೊಳಿಸುತ್ತಿರವ ಶ್ರೀಹರಿಯ ಆ ಬಾಲವೇಷವನ್ನೇ ಪುನಃ ಪುನಃ ಬಯಸುವೆವು.

೫. ಯಾವ ಪರಮಪುರುಷನ ಪಾದೋದಕವನ್ನು ಮುನಿಶ್ರೇಷ್ಠರೂ ಸಹ ಸರ್ವದಾ ಸೇವಿಸುವರೋ, ಯಾವನ ಮೂರ್ತಿಯನ್ನು ದೇವತೆಗಳೂ ಪೂಜಿಸುವರೋ, ಆ ಅರವಿಂದಲೋಚನನು ನಿತ್ಯವೂ ನಮಗೆ ಶ್ರೇಯಸ್ಸನ್ನುಂಟುಮಾಡಲಿ.

ಗೋಪಕೈ ರಚಿತಮಲ್ಲಸಂಗರಂ
ಸಂಗರೇ ಜಿತವಿದಗ್ಧಯೌವನಂ ।
ಚಿಂತಯಾಮಿ ಮನಸಾ ಸದೈವತಂ
ದೈವತಂ ನಿಖಿಲಯೋಗಿನಾಮಪಿ ॥ ೬ ॥

ಉಲ್ಲಸನ್ನವಪಯೋದಮೇವ ತಂ
ಫುಲ್ಲತಾಮರಸಲೋಚನಾಂಚಲಂ ।
ಬಲ್ಲವೀಹೃದಯಪಶ್ಯತೋ ಹರಂ
ಪಲ್ಲವಾಧರಮುಪಾಸ್ಮಹೇ ವಯಂ ॥ ೭ ॥

ಯುದ್ಧನಂಜಯರಥಸ್ಯ ಮಂಡನಂ
ಖಂಡನಂ ತದಪಿ ಸಂಚಿತೈನಸಾಂ ।
ಜೀವನಂ ಶ್ರುತಿಗಿರಾಂ ಸದಾಮಲಂ
ಶ್ಯಾಮಲಂ ಮನಸಿ ಮೇಽಸ್ತು ತನ್ಮಹಃ ॥ ೮ ॥

---

೬. ಗೊಲ್ಲರ ಹುಡುಗರೊಡನೆ ಕಾಳಗವಾಡಿದವನೂ, ವಾದಗೋಷ್ಠಿ, ಯುದ್ಧಗೋಷ್ಠಿ ಮೊದಲಾದುವುಗಳಲ್ಲಿ ರಸಿಕರನ್ನೂ, ಯುವಕರನ್ನೂ ಗೆದ್ದವನೂ, ಸಕಲ ಯೋಗಿಗಳಿಗೂ ದೇವತಾಸ್ವರೂಪನೂ ಆದ ಆ ಶ್ರೀಹರಿಯನ್ನೇ ಸರ್ವದಾ ಮನಸ್ಸಿನಲ್ಲಿ ಧ್ಯಾನಿಸುವೆನವು.

೭. ಹೊಸ ಮೋಡದಂತೆ ಹೊಳೆಯುವ ಮೈಯಿಂದಲೂ, ಅರಳಿದ ತಾವರೆಯನ್ನು ಹೋಲುವ ಕಂಗಳಿಂದಲೂ, ಚಿಗುರನ್ನು ಹಳಿಯುವ ತುಟಿಗಳಿಂದಲೂ ಒಪ್ಪುತ್ತಾ ಎಲ್ಲರೂ ನೋಡುತ್ತಿರುವಂತೆಯೇ ಗೋಪಸ್ತ್ರೀಯರ ಮನಸ್ಸನ್ನು ಅಪಹರಿಸಿಬಿಟ್ಟ ಆ ಹೋರನನ್ನು ನಾವು ಆರಾಧಿಸುವೆವು.

೮. ಯಾವುದು ಅರ್ಜುನನ ರಥಕ್ಕೆ ಅಲಂಕಾರವಾಗಿರುವುದೋ, ಯಾವುದು ರಾಶಿರಾಶಿಯಾದ ಪಾಪಗಳನ್ನೂ ಪರಿಹರಿಸುವಂತಹುದೋ, ಮತ್ತು ಯಾವುದು ಶ್ರುತಿವಚನಗಳಿಗೆ ಚೈತನ್ಯವೆನಿಸಿರುವುದೋ, ಅಂತಹ ನಿಷ್ಕಲಂಕವೂ, ಶ್ಯಾಮಲವೂ ಆದ ಒಂದು ತೇಜೋಮಂಡಲವು ನಮ್ಮ ಮನಸ್ಸಿನಲ್ಲಿ ಸರ್ವದಾ ಕಂಗೊಳಿಸುತ್ತಿರಲಿ.

ಗೋಪಿಕಾಸ್ತನವಿಲೋಲಲೋಚನ-
ಪ್ರಾಂತಲೋಚನಪರಂ ಪರಾವೃತಂ ।
ಬಾಲಕೇಲಿರಸಾಲಸಂಭ್ರಮಂ
ಮಾಧವಂ ತಮನಿಶಂ ವಿಭಾವಯೇ ॥ ೯ ॥

ನೀಲಕಂಠಕೃತಪಿಚ್ಛಶೇಖರಂ
ನೀಲಮೇಘತುಲಿತಾಂಗವೈಭವಂ ।
ನೀಲಪಂಕಜಪಲಾಶಲೋಚನಂ
ನೀಲಕುಂತಲಧರಂ ಭಜಾಮಹೇ ॥ ೧೦ ॥

ಘೋಷಯೋಷಿದನುಗೀತವೈಭವಂ
ಕೋಮಲಸ್ವರಿತವೇಣುನಿಸ್ವನಂ ।
ಸಾರಭೂತಮಭಿರಾಮಸಂಪದಾಂ
ಧಾಮ ತಾಮರಸಲೋಚನಂ ಭಜೇ ॥ ೧೧ ॥

---

೯. ಗೋಪಿದೇವಿಯಾದ ಯಶೋದೆಯ ಸ್ತನಮಂಡಲದಮೇಲೆ ತನ್ನ ಚಂಚಲವಾದ ನೋಟವನ್ನು ಬೀರುತ್ತಾ ಬಾಲಲೀಲೆಗಳಿಂದ ಎಲ್ಲರ ಕಣ್ಣುಗಳನ್ನೂ ತನ್ನ ಕಡೆಗೇ ಸೆಳೆಯುತ್ತಾ ಇರುವ ಶಿಶುರೂಪುಧಾರಿಯಾದ ಆ ಶ್ರೀಕೃಷ್ಣನನ್ನು ಸರ್ವದಾ ಭಾವಿಸುವೆನು.

೧೦. ಧರಿಸಿರುವ ಮಯೂರ ಬರ್ಹ! (ನವಿಲುಗರಿ) ನೀಲಮೇಘದಂತೆ ಒಪ್ಪುವ ಶರೀರದ ಸೊಬಗು! ಕನ್ನೈದಿಲೆಯ ಎಸಳಿನಂತೆ ಕಪ್ಪಾದ ಕಣ್ಣು! ಕಪ್ಪಾದ ಕೇಶರಾಶಿ! ಇವುಗಳಿಂದ ಕಂಗೊಳಿಸುವ ಆ ಗೋಪಕಿಶೋರನನ್ನು ಸೇವಿಸುವೆವು.

೧೧. ಹೇ ಕಮಲನಯನ! 'ಗೋಕುಲ ನಿವಾಸಿನಿಯರಾದ ನಾವೆಲ್ಲರೂ ನಿನ್ನ ವೈಭವವನ್ನೇ ಕೊಂಡಾಡುವೆವು. ನೀನೂದುವ ಕೊಳಲಿನ ದನಿಯು ಕೋಮಲವಾದ ಸ್ವರದಿಂದ ಕೂಡಿರುವುದು. ನೀನು ಸುಂದರವಾದ ವಸ್ತುಗಳಿಗೆಲ್ಲಾ ಸಾರಭೂತವೆನಿಸಿರುವೆ, ಅಂತಹ ನಿನ್ನನ್ನು ನಾವು ಭಜಿಸುವೆವು.'

ಮೋಹನಂ ಮನಸಿ ಶಾರ್ಙ್ಗಿಣಂ ಪರಂ
ನಿರ್ಗತಂ ಕಿಲ ವಿಹಾಯ ಮಾನಿನೀಃ ।
ನಾರದಾದಿಮುನಿಭಿಶ್ಚ ಸೇವಿತಂ
ನಂದಗೋಪತನಯಂ ಭಜಾಮಹೇ ॥ ೧೨ ॥

ಶ್ರೀಹರಿಸ್ತು ರಮಣೀಭಿರಾವೃತೋ
ಯಸ್ತು ವೈ ಜಯತಿ ರಾಸಮಂಡಲೇ ।
ರಾಧಯಾ ಸಹ ವನೇ ಚ ದುಃಖಿತಾ-
ಸ್ತಂ ಪ್ರಿಯಂ ಹಿ ಮೃಗಯಾಮಹೇ ವಯಂ ॥ ೧೩ ॥

ದೇವದೇವ ವ್ರಜರಾಜನಂದನ
ದೇಹಿ ದರ್ಶನಮಲಂ ಚ ನೋ ಹರೇ ।
ಸರ್ವದುಃಖಹರಣಂ ಚ ಪೂರ್ವವ-
ತ್ಸಂನಿರೀಕ್ಷ್ಯ ತವ ಶುಲ್ಕದಾಸಿಕಾಃ ॥ ೧೪ ॥

---

೧೨. "ಹೇ ಶಾರ್ಙ್ಗಧನುರ್ಧರ! ನೀನು ಸಕಲರನ್ನೂ ಮೋಹಗೊಳಿಸಿರುವೆ, ನಾವು ಸ್ವಲ್ಪ ಹೆಮ್ಮೆಯನ್ನು ತಳೆದಿದುದರಿಂದಲ್ಲವೇ ನೀನು ನಮ್ಮನ್ನು ಬಿಟ್ಟು ಹೊರಟು ಹೋಗಿರುವುದು? ಓ ನಾರದಾದಿಮುನಿಸೇವಿತ! ಓ ನಂದಕುಮಾರ! ನಿನ್ನನ್ನು ನಾವು ಸೇವಿಸುವೆವು."

೧೩. 'ಹೇ ಶ್ರೀಹರಿ! ಹಿಂದೆ ರಾಸಮಂಡಲದಲ್ಲಿ ಬಳಸಿ ನಿಂತಿರುವ ನಮ್ಮೆಲ್ಲರ ನಡುವೆ ಇದ್ದು ಎಲ್ಲರನ್ನೂ ಸಂತೋಷಗೊಳಿಸಿದೆಯಲ್ಲವೇ! ಅಂತಹ ನೀನು ಈಗ ಎಲ್ಲಿಗೆ ಹೋದೆ? ದುಃಖಿತರಾದ ನಾವು ನಿನ್ನ ಪ್ರೇಯಸಿಯಾದ ರಾಧೆಯೊಡನೆ ಕಾಡಿನಲ್ಲೆಲ್ಲಾ ಪ್ರಿಯನಾದ ನಿನ್ನನ್ನು ಹುಡುಕುತ್ತಾ ಅಲೆಯುತ್ತಿರುವೆವಲ್ಲಾ."

೧೪. "ಹೇ ಹರೇ! ನೀನು ದೇವತೆಗಳಿಗೂ ದೇವನೆನಿಸಿರುವೆ! ಗೋಕುಲಕ್ಕೇ ಪ್ರಭುವಾಗಿರುವೆ! ನಿನ್ನ ಸೌಂದರ್ಯಕ್ಕೆ ಮನಸೋತು ನಾವಾಗಿ ನಿನ್ನ ಹಾಸ್ಯವನ್ನು ಕೋರಿ ಬಂದಿರುವೆವು. ಇಂತಹ ನಮ್ಮೆಲ್ಲರ ಮೇಲೆ ಮೊದಲಿ

ಕ್ಷಿತಿತಲೋದ್ಧರಣಾಯ ದಧಾರ ಯಃ
ಸಕಲಯಜ್ಞವರಾಹವಪುಃ ಪರಂ ।
ದಿತಿಸುತಂ ವಿದದಾರ ಚ ದಂಷ್ಟ್ರಯಾ
ಸ ತು ಸದೋದ್ಧರಣಾಯ ಕ್ಷಮೋಽಸ್ತು ನಃ ॥ ೧೫ ॥

ಮನುಮುಪಾದ್ರುಚಿಜೋ ದಿವಿಜೈಃ ಸಹ
ವಸು ದುದೋಹ ಧರಾಮಪಿ ಯಃ ಪೃಥುಃ ।
ಶ್ರುತಿಮುಪಾದ್ಧೃತಮತ್ಸ್ಯವಪುಃ ಪರಂ
ಸ ಶರಣಂ ಕಿಲ ನೋಽಸ್ತ್ವಶುಭಕ್ಷಣೇ ॥ ೧೬ ॥

ನಂತೆ ಪ್ರೀತಿಯಿಟ್ಟು ಸಕಲ ದುಃಖಗಳನ್ನೂ ಪರಿಹರಿಸುವಂತಹ ಮಧುರವಾದ ನಿನ್ನ ಸಂದರ್ಶನವನ್ನು ಕರುಣಿಸು.''

೧೫. ' ನೀನು ಹಿಂದೆ ಸಾಗರದಲ್ಲಿ ಮುಳುಗಿಹೋಗುತ್ತಿರುವ ಭೂಮಂಡಲವನ್ನು ಉದ್ಧರಿಸುವ ಸಲುವಾಗಿ ದಿವ್ಯವಾದ ಯಜ್ಞವರಾಹರೂಪವನ್ನು ಧಾರಣೆಮಾಡಿ ದುಷ್ಟನಾದ ಆ ಹಿರಣ್ಯಾಕ್ಷನೆಂಬ ದೈತ್ಯನನ್ನು ನಿನ್ನ ಕೋರೆದಾಡೆಗಳಿಂದಲೇ ಸೀಳಿಬಿಟ್ಟೆಯಲ್ಲವೆ? ಹೇ ಪ್ರಭು! ಇದೇ ರೀತಿ ದುಃಖಮಗ್ನರಾದ ನಮ್ಮನ್ನೂ, ಸಹ ಎಂದಿಗೂ ಕೈಬಿಡದೆ ಕಾಪಾಡು!'

೧೬. ' ಹೇ ವ್ರಜೇಶ್ವರ! ಹಿಂದೆ ನೀನು ರುಚಿಯೆಂಬ ಮಹರ್ಷಿಯ ಮಗನಾಗಿ ಅವತರಿಸಿ ಯಜ್ಞನೆಂಬ ಹೆಸರಿನಿಂದ ದೇವತೆಗಳನ್ನೂ ಮನುವನ್ನೂ ಸಲಹಿದೆ! ಪೃಥುವಾಗಿ ಅವತರಿಸಿ ಗೋರೂಪಧಾರಿಣಿಯಾದ ಭೂಮಿಯಿಂದ ಸಕಲ ಸಂಪದವನ್ನೂ ಹಾಲಿನಂತೆ ಕರೆದೆ! ಮತ್ಸ್ಯಾವತಾರವನ್ನೆತ್ತಿ ವೇದಗಳನ್ನು ಸಂರಕ್ಷಿಸಿದೆ! ಹೀಗೆ ಆಪತ್ಸಮಯದಲ್ಲಿ ಸಕಲರನ್ನೂ ಸಲಹುವ ನೀನು ಈ ಅಶುಭ ಸಮಯದಲ್ಲಿ ನಮಗೆ ಸಂರಕ್ಷಕನಾಗು.'

ಆವಹವಬ್ಧಿಮಹೋ ಗಿರಿಮೂರ್ಜಿತಂ
ಕಮಠರೂಪಧರಃ ಪರಮುಸ್ತು ಯಃ ।
ಅಸುಹರಂ ನೃಹರಿಃ ಸಮುದಂಡಯತ್
ಸ ಚ ಹರಿಃ ಪರಮಂ ಶರಣಂ ಚ ನಃ ॥ ೧೭ ॥

ನೃಪಬಲಿಂ ಛಲಯನ್ ದಲಯನ್ನರೀನ್
ಮುನಿಜನಾನನುಗೃಹ್ಯ ಚಚಾರ ಯಃ ।
ಕುರುಪುರಂ ಚ ಹಲೇನ ವಿಕರ್ಷಯನ್
ಯದುವರಃ ಸ ಗತಿರ್ಮಮ ಸರ್ವಥಾ ॥ ೧೮ ॥

ವ್ರಜಪಶೂನ್ಗಿರಿರಾಜಮಥೋದ್ಧರನ್
ವ್ರಜಪಗೋಪಜನಂ ಚ ಜುಗೋಪ ಯಃ ।
ದ್ರುಪದರಾಜಸುತಾಂ ಕುರು ಕಶ್ಮಲಾ-
ದ್ಭವತು ತಚ್ಚರಣಾಬ್ಜರತಿಶ್ಚ ನಃ ॥ ೧೯ ॥

---

೧೭. 'ಹೇ ಹರೇ! ಹಿಂದೆ ನೀನು ಅಮೃತಮಥನ ಸಮಯದಲ್ಲಿ ಕಮಠರೂಪವನ್ನು ಧಾರಣೆಮಾಡಿ ಮಹೋನ್ನತವಾದ ಮಂದರಪರ್ವತವನ್ನು ಬೆನ್ನಿನಿಂದ ಹೊತ್ತೆ! ಭಯಂಕರನಾದ ಹಿರಣ್ಯಕಶಿಪುವೆಂಬ ದೈತ್ಯನನ್ನು ನರಸಿಂಹರೂಪದಿಂದ ಸಂಹರಿಸಿದೆ! ಇಂತಹ ನೀನೇ ನಮಗೆ ಗತಿ.'

೧೮. ಹೇ ಯದುಶ್ರೇಷ್ಠ! ದರ್ಪೋದ್ಧತನಾದ ಬಲಿಯನ್ನು ಕಪಟದಿಂದ ನಿಗ್ರಹಿಸಿದೆ! ಪರಶುರಾಮನಾಗಿ ದುಷ್ಟ ಕ್ಷತ್ರಿಯರನ್ನು ತುಂಡರಿಸಿದೆ! ರಘುರಾಮನಾಗಿ ಪಿತೃವಾಕ್ಯಪರಿಪಾಲನವ್ಯಾಜದಿಂದ ಮುನಿಜನರನ್ನು ಅನುಗ್ರಹಿಸಿದೆ! ಬಲರಾಮರೂಪದಿಂದ ಗರ್ವಿಷ್ಠನಾದ ದುರ್ಯೋಧನನ ಹಸ್ತಿನಾವತಿಯನ್ನು ನೇಗಿಲಿನಿಂದ ಹಿಡಿದೆಳೆದೆ! ಇಂತಹ ನಿನ್ನನ್ನೇ ನಾವು ಸಕಲ ರೀತಿಯಿಂದಲೂ ಮರೆಹೊಕ್ಕಿರುವೆವು.'

೧೯. 'ಹೇ ಕೃಷ್ಣ! ನೀನು ಗೋವರ್ಧನಪರ್ವತವನ್ನು ಎತ್ತಿಹಿಡಿದು ಗೋಕುಲದ ಗೋಧನವನ್ನೂ ಗೋಪಗೋಪಿಯರನ್ನೂ ಸಲಹಿದೆ! ದುರ್ಯೋ

ವಿಷಮಹಾಗ್ನಿಮಹಾಸ್ತ್ರವಿಪದ್ಗಣಾತ್
ಸಕಲಪಾಂಡುಸುತಾಃ ಪರಿರಕ್ಷಿತಾಃ ।
ಯದುವರೇಣ ಪರೇಣ ಚ ಯೇನ ವೈ
ಭವತು ತಚ್ಚರಣಃ ಶರಣಂ ಚ ನಃ ॥ ೨೦ ॥

ಮಾಲಾಂ ಬರ್ಹಿಮನೋಜ್ಞಕುಂತಲಭರಾಂ ವನ್ಯಪ್ರಸೂನೋಕ್ಷಿತಾಂ
ಶೈಲೇಯೋಗುರುಕ್ಲ್ಪ್ತಚಿತ್ರತಿಲಕಾಂ ಶಶ್ವನ್ಮನೋಹಾರಿಣೀಂ ।
ಲೀಲಾವೇಣುರವಾಮೃತೈಕರಸಿಕಾಂ ಲಾವಣ್ಯಲಕ್ಷ್ಮೀಮಯೀಂ
ಬಾಲಾಂ ಬಾಲತಮಾಲನೀಲವಪುಷಂ ವಂದಾಮಹೇ ದೇವತಾಂ ॥ ೨೧ ॥

ಧನನ ಜುಗುಪ್ಸಿತವಾದ ಕಾರ್ಯದಿಂದ ದ್ರೌಪದಿಯನ್ನು ಸಂರಕ್ಷಿಸಿದೆ! ಇಂತಹ ನಿನ್ನ ಚರಣಕಮಲಗಳಲ್ಲಿಯೇ ನಮ್ಮ ಮನಸ್ಸು ಸರ್ವದಾ ಆಸಕ್ತವಾಗಿರಲಿ!'

೨೦. ಹೇ ಪರಮಪುರುಷ! ಪಾಂಡುಕುಮಾರರಾದ ಧರ್ಮರಾಜಾದಿಗಳನ್ನು ವಿಷಪ್ರಯೋಗ, ಲಾಕ್ಷಾಗೃಹ (ಅರಗಿನ ಮನೆ) ದಾಹ, ಮಹಾಸ್ತ್ರಗಳು ಮೊದಲಾದ ಅನೇಕ ವಿಪತ್ತುಗಳಲ್ಲಿ ಬೆಂಬಿಡದೆ ಕಾಪಾಡಿದೆಯಲ್ಲವೆ? ಓ ಯದುಶ್ರೇಷ್ಠ! ಆ ನಿನ್ನ ಚರಣಯುಗಲವೇ ನಮಗೆ ಗತಿಯಾಗಿರಲಿ.

೨೧. ಮುಡಿಯಲ್ಲಿ ಒಪ್ಪುತ್ತಿರುವ ಮನೋಹರವಾದ ನವಿಲುಗರಿ! ಕಾಡಿನ ಹೂಗಳಿಂದ ರಚಿಸಿದ ವನಮಾಲೆ! ಶೃತೀಯ (ಕಲ್ಲುಹೂವು) ಅಗುರು. ಇವುಗಳನ್ನರೆದು ಮುದ್ದಾಗಿ ತಿದ್ದಿರುವ ತಿಲಕ! ಎಳೆದಾದ ಹೊಂಗೆಯ ಮರದಂತೆ ಶ್ಯಾಮಲವಾದ ಕಾಂತಿಯಿಂದೊಪ್ಪುವ ಶರೀರ! ಇವುಗಳಿಂದ ಎಲ್ಲರ ಮನಸ್ಸನ್ನೂ ಅಪಹರಿಸುತ್ತಾ ಲೀಲಾರ್ಥವಾಗಿ ಹಿಡಿದಿರುವ ಕೊಳಲನ್ನು ಊದುತ್ತಾ ಅದರ ಮಧುರ ನಿನಾದದಲ್ಲಿಯೇ ತಲ್ಲೀನನಾಗಿರುವ ಲಾವಣ್ಯಲಕ್ಷ್ಮಿಯ ನಿತ್ಯನಿವಾಸವೆನಿಸಿದ ನಿನ್ನ ದೇವಮೂರ್ತಿಯನ್ನೇ ಯಾವಾಗಲೂ ವಂದಿಸುವೆವು ಎಂದರು.

॥ ಗರ್ಗ ಉವಾಚ ॥

ಇತಿ ಸ್ತ್ರೀಭೀ ರುದಂತೀಭೀ ರೇವತೀರಮಣಾನುಜಃ ।
ಆವಿರ್ಬಭೂವ ಚಾಹೂತೋ ತಾಸಾಂ ಮಧ್ಯೇ ಚ ಭಕ್ತಿತಃ ॥ ೨೨ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ರಾಸಕ್ರೀಡಾಯಾಂ ಕೃಷ್ಣಾಗಮನಂ ನಾಮ
ಪಂಚಚತ್ವಾರಿಂಶೋಽಧ್ಯಾಯಃ

---

೨೨. ಹೇ ರಾಜೇಂದ್ರ! ಈರೀತಿಯಾಗಿ ಆ ಗೋಪಸ್ತ್ರೀಯರು ಕಣ್ಣೀರು ಸುರಿಸುತ್ತಾ ಭಕ್ತಿಯಿಂದ ತನ್ನನ್ನು ಕರೆಯುತ್ತಿರುವುದನ್ನು ಕಂಡು ಕರುಣಾಳುವಾದ ಶ್ರೀಕೃಷ್ಣನು ಅವರ ನಡುವೆ ಮೈದೋರಿದನು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತದ ರಾಸಕ್ರೀಡಾ ಪ್ರಕರಣದಲ್ಲಿ ನಲವತ್ತೈದನೆಯ
ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಷಟ್ಚತ್ವಾರಿಂಶೋಽಧ್ಯಾಯಃ

|| ಗರ್ಗ ಉವಾಚ ||

ಕೃಷ್ಣಂ ಸಮಾಗತಂ ದೃಷ್ಟ್ವಾ ತಾಃ ಸಮುತ್ಥಾಯ ಹರ್ಷಿತಾಃ |
ಚಕ್ರುರ್ಜಯಜಯಾರಾವಂ ಗೋಪ್ಯೋ ದುಃಖಂ ವಿಸೃಜ್ಯ ಚ || ೧ ||

ದೃಷ್ಟ್ವಾ ಸಂಮೂರ್ಛಿತಾಂ ರಾಧಾಂ ಗೋಪೀಭಿಃ ಪ್ರಾರ್ಥಿತೋ ಹರಿಃ |
ಚೈತನ್ಯಾರ್ಥೇ ವ್ರಜೇ ತತ್ರ ಚಕಾರ ಮುರಲೀರವಂ || ೨ ||

ನಲವತ್ತಾರನೆಯ ಅಧ್ಯಾಯವು

೧. ಓ ರಾಜೇಂದ್ರ! ಕೃಷ್ಣನು ಬಂದುದನ್ನು ಕಾಣುತ್ತಲೇ ಆ ಗೋಪಿಯರು ತಮ್ಮ ದುಃಖವೆಲ್ಲವನ್ನೂ ತೊರೆದು ಮಹಾ ಸಂತೋಷದಿಂದ ತಟ್ಟನೆ ಎದು ನಿಂತು ಜಯಜಯ ಧ್ವನಿಯನ್ನು ಮಾಡಿದರು.

೨. ಆದರೆ ರಾಧೆಯು ಮಾತ್ರ ಕೃಷ್ಣವಿಯೋಗದಿಂದ ಮೂರ್ಛಿತಳಾಗಿದ್ದಳು. ಎಚ್ಚರವನ್ನೇ ಹೊಂದಿರಲಿಲ್ಲ. ಅದನ್ನು ಕಂಡು ಗೋಪಿಯರು ಆ ರಾಧೆಯನ್ನು ಎಚ್ಚರಗೊಳಿಸುವಂತೆ ಕೃಷ್ಣನನ್ನು ಪ್ರಾರ್ಥಿಸಿದರು. ಆಗ ಆತನು ತನ್ನ ಕೊಳಲನ್ನು ಊದತೊಡಗಿದನು.

ನೋತ್ಥಿತಾಂ ರಾಧಿಕಾಂ ದೃಷ್ಟ್ವಾ ಶ್ರೀರಾಧಾಂ ವಲ್ಲಭೋ ಹರಿಃ ।
ತಸ್ಯೈ ಸಂಶ್ರಾವಯಾಮಾಸ ವೇಣುಗೀತಂ ಪುನಃ ಪುನಃ ॥ ೩ ॥

ತತಃ ಸಮುತ್ಥಿತಾ ರಾಧಾ ಸ್ಮೃತ್ವಾ ದುಃಖಂ ವಿಯೋಗಜಂ ।
ಬಭೂವ ಮೂರ್ಛಿತಾ ರಾಜನ್ಮಾಧವಸ್ಯ ಪ್ರಪಶ್ಯತಃ ॥ ೪ ॥

ತತಃ ಕೃಷ್ಣಸ್ಯ ವಚನಾತ್ಸದ್ಯಶ್ಚಂದ್ರಾನನಾ ಸಖೀ ।
ಚಂದ್ರಾವಲೀ ಪ್ರತ್ಯುವಾಚ ಪ್ರಸನ್ನಾ ಕೃಷ್ಣವೇಣುನಾ ॥ ೫ ॥

॥ ಚಂದ್ರಾನನೋವಾಚ ॥

ಕೃಷ್ಣಚಂದ್ರಃ ಪುರಾ ನಿರ್ಗತೋ ಮಾನತೋ
ಗತಃ ಸೋಽಪಿ ರಾಧೇ ಯುಗಾಂತೇ ಪುನಃ ।
ನಾಶಯನ್ಸರ್ವದುಃಖಾನಿ ತೇ ಸನ್ನಿಧೌ
ಸಂಜಗೌ ವೇಣುನಾ ದೇವಕೀನಂದನಃ ॥ ೬ ॥

---

೩. ಆದರೂ ತನ್ನ ಪ್ರಿಯೆಯಾದ ಆ ರಾಸೇಶ್ವರಿಯು ಮೂರ್ಛೆಯಿಂದೆಚ್ಚರಗೊಳ್ಳದಿರುವುದನ್ನು ಕಂಡು ಆ ರಾಧಾರಮಣನು ಮತ್ತೆ ಮತ್ತೆ ಇಂಪಾಗಿ ಅವಳ ಬಳಿ ನುಡಿಸತೊಡಗಿದನು.

೪. ಆಗ ರಾಧೆಯು ಮೂರ್ಛೆಯಿಂದೆಚ್ಚತ್ತಳು, ಆದರೆ ತಾನು ಹಿಂದೆ ಅನುಭವಿಸಿದ ವಿಯೋಗದುಃಖವು ನೆನಪಿಗೆ ಬರುತ್ತಲೇ ಆಕೆಯು ಮತ್ತೊಮ್ಮೆ ಕೃಷ್ಣನು ನೋಡುತ್ತಿರುವಂತೆಯೇ ಮೂರ್ಛೆಯನ್ನು ಹೊಂದಿದಳು.

೫. ಆಗ ಅವಳ ಸಖಿಯಾದ ಚಂದ್ರಾನನೆಯೆಂಬುವಳು ಶ್ರೀಕೃಷ್ಣನ ಮಾತಿನಂತೆ ಕೂಡಲೇ ಆ ರಾಧೆಯನ್ನು ಎಚ್ಚರಗೊಳಿಸಲು ಈರೀತಿಯಾಗಿ ನುಡಿದಳು.

೬. 'ಎಲೆ ರಾಧೆ! ಈ ಕೃಷ್ಣಚಂದ್ರನು ಪ್ರಣಯದಿಂದ ನಿಷ್ಕಾರಣವಾದ ಕೋಪವನ್ನು ತಳೆದು ಮುಂಚೆ ನಮ್ಮನ್ನು ಬಿಟ್ಟು ಕಣ್ಮರೆಯಾಗಿಬಿಟ್ಟಿದ್ದನಲ್ಲವೇ? ಅದೇ ಕೃಷ್ಣನು ಯುಗಸದೃಶವಾದ ಈ ವಿರಹದ ಅಂತ್ಯದಲ್ಲಿ ನಮ್ಮೆಲ್ಲರ ಸಕಲ ದುಃಖಗಳನ್ನೂ ನಾಶಗೊಳಿಸುತ್ತಾ ನಿನ್ನ ಬಳಿಯಲ್ಲೇ ಕುಳಿತು ಕೊಳಲನ್ನು ನುಡಿಸುತ್ತಿರುವನು.

ಝುಂಗಝುಂಗೇ ನಿನಾದಂ ಮೃದಂಗೇ ಕಲಂ
ವಾದ್ಯಮಾನೇ ಸುರಸ್ತ್ರೀಜನೈಃ ಸೇವಿತಃ ।
ರಾಸರಮ್ಯಾಂಗಣೇ ನೃತ್ಯಕೃನ್ಮಾಧವಃ
ಸಂಜಗೌ ವೇಣುನಾ ದೇವಕೀನಂದನಃ ॥ ೭ ॥

ಚಾರುಚಾಮೀಕರಾಭಾಸಿವಾಸಾ ವಿಭು-
ರ್ವೈಜಯಂತೀಭರಾಭಾಸಿತೋರಸ್ಥಲಃ ।
ನಂದವೃಂದಾವನೇ ಗೋಪಿಕಾಮಧ್ಯಗಃ
ಸಂಜಗೌ ವೇಣುನಾ ದೇವಕೀನಂದನಃ ॥ ೮ ॥

ಚಾರುಚಂದ್ರಾವಲೀಲೋಚನಾಚುಂಬಿತೋ
ಗೋಪಗೋವೃಂದಗೋಪಾಲಿಕಾವಲ್ಲಭಃ ।
ಕಂಸವಂಶಾಟವೀದಾಹದಾವಾನಲಃ
ಸಂಜಗೌ ವೇಣುನಾ ದೇವಕೀನಂದನಃ ॥ ೯ ॥

---

೭. ಹಿಂದೆ ರಾಸಲೀಲೆಯಲ್ಲಿ ದೇವಸ್ತ್ರೀಯರು ಝಂಗ್ ಝಂಗ್ ಎಂದು ಮೃದಂಗವನ್ನು ಬಾರಿಸುತ್ತಾ ಸೇವಿಸುತ್ತಿರಲು ನರ್ತನವನ್ನು ಮಾಡಿದ ಆ ದೇವಕೀನಂದನನು ನಿನ್ನ ಬಳಿ ಕೊಳಲನ್ನು ಬಾಜಿಸುತ್ತಿರುವನು.

೮. ಚಿನ್ನದಂತೆ ಮುದ್ದಾಗಿ ಹೊಳೆಯುವ ಪೀತಾಂಬರದಿಂದಲೂ, ವೈಜಯಂತೀ ಮಾಲಿಕೆಯಿಂದ ಅಲಂಕೃತವಾದ ವಕ್ಷಸ್ಥಲದಿಂದಲೂ ಮೆರೆಯುತ್ತಾ ವೃಂದಾವನದಲ್ಲಿ ಗೋಪಿಯರ ನಡುವೆ ವಿಹರಿಸಿದ ಆ ಶ್ರೀಕೃಷ್ಣನು ಕೊಳಲನ್ನು ಊದುತ್ತಿರುವನು.

೯. ಚಂದ್ರಾವಲಿಯ ಮುದ್ದಾದ ನಯನಗಳಿಂದ ನೋಡಲ್ಪಡುವವನೂ, ಗೋಧನಕ್ಕೂ ಗೋಪಗೋಪಿಯರಿಗೂ ಪರಮ ಪ್ರೇಮಾಸ್ಪದನೂ, ಕಂಸನೆಂಬ ಬಿದಿರುಮೆಳೆಗೆ ಕಾಡುಕಿಚ್ಚಾದವನೂ ಆದ ಆ ದೇವಕೀನಂದನನು ಇಂಪಾಗಿ ಕೊಳಲೂದುತ್ತಿರುವನು.

ನಾಲಿಕಾತಾಲಿಕಾತಾಲಲೀಲಾಲಯಾ-
ಸಂಗಸಂದರ್ಶಿತಭ್ರೂಲತಾವಿಭ್ರಮಃ ।
ಗೋಪಿಕಾಗೀತದತ್ತಾವಧಾನಸ್ಸ್ವಯಂ
ಸಂಜಗೌ ವೇಣುನಾ ದೇವಕೀನಂದನಃ ॥ ೧೦ ॥

ಮೌಲಿಮಾಲಾಂಗದೈಃ ಕಿಂಕಿಣೀ ಕುಂಡಲೈ-
ರ್ಭೂಷಿತೋ ನಂದನೋ ನಂದರಾಜಸ್ಯ ಚ ।
ಪ್ರೀತಿಕೃತ್ಸುಂದರೋ ದೇವಿ ಪ್ರೀತ್ಯಾ ತವ
ಸಂಜಗೌ ವೇಣುನಾ ದೇವಕೀನಂದನಃ ॥ ೧೧ ॥

ಪಾರಿಜಾತಂ ಸಮುದ್ಧೃತ್ಯ ರಾಧಾವರೋ
ರೋಪಯಾಮಾಸ ಭಾಮಾಭಯಾದಂಗಣೇ ।
ಬಲ್ಲವೀವೃಂದವೃಂದಾರಿಕಾಕಾಮುಕಃ
ಸಂಜಗೌ ವೇಣುನಾ ದೇವಕೀನಂದನಃ ॥ ೧೨ ॥

---

೧೦. ಸುತ್ತಲೂ ನಿಂತಿರುವ ಗೋಪ ಬಾಲೆಯರು ಹಾಕುತ್ತಿರುವ ಚಪ್ಪಾಳೆ, ತಾಳ ಮೊದಲಾದುವುಗಳ ಲಯಕ್ಕೆ ಅನುಗುಣವಾಗಿ ಹುಬ್ಬನ್ನು ಕೊಂಕಿಸುತ್ತಾ ಗೋಪಾಂಗನೆಯರ ಗೀತದಲ್ಲಿ ತಲ್ಲೀನನಾದ ಆ ಶ್ರೀಕೃಷ್ಣನೇ ಸಾಕ್ಷಾತ್ತಾಗಿ ನಿನ್ನ ಬಳಿ ಕೊಳಲನ್ನು ಬಾಜಿಸುತ್ತಿರುವನು.

೧೧. ಎಲೌ ದೇವಿ! ಆ ಸುಂದರನಾದ ನಂದನಂದನನು ತಲೆಯಲ್ಲಿ ಕಿರೀಟವನ್ನೂ, ಕೊರಳಲ್ಲಿ ಹಾರಗಳನ್ನೂ, ತೋಳುಗಳಲ್ಲಿ ತೋಳ್ಬಳೆಗಳನ್ನೂ, ಉಡಿಯಲ್ಲಿ ಕಿರುಗೆಜ್ಜೆಗಳನ್ನೂ, ಕಿವಿಯಲ್ಲಿ ಕುಂಡಲಗಳನ್ನೂ ತೊಟ್ಟು ಸಿಂಗರವಾಗಿ ಎಲ್ಲರಿಗೂ ಪ್ರೀತಿಯನ್ನುಂಟುಮಾಡುತ್ತಾ ನಿನ್ನಮೇಲಿನ ಪ್ರೀತಿಯಿಂದ ಬಳಿಯಲ್ಲಿಯೇ ಕುಳಿತು ಕೊಳಲು ನುಡಿಸುತ್ತಿರುವನು.

೧೨. ಯಾವಾಗಲೂ ಬಿಗುಮಾನದಿಂದಲೇ ಇರುವ ಆ ಸತ್ಯಭಾಮೆಗೆ ಹೆದರಿ ಅವಳ ಮಾತಿನಂತೆ ದೇವಲೋಕದಿಂದ ಪಾರಿಜಾತವನ್ನು ತಂದು ಅವಳ ಮನೆಯಂಗಳದಲ್ಲಿ ನೆಟ್ಟ ಆ ಗೋಪಾಂಗನಾಕಾಮುಕನು ಮುರಲಿಯನ್ನು ನುಡಿಸುತ್ತಿರುವನು.

ಋಕ್ಷರಾಜಂ ವಿನಿರ್ಜಿತ್ಯ ನೀತ್ವಾ ಮಣಿಂ
ಸಂದದೌ ಭೀತವದ್ಭೂಮಿನಾಥಾಯ ಚ ।
ಸೋಽಪಿ ರಾಸೇ ಸಮಾಗತ್ಯ ರಾಸೇಶ್ವರೋ
ಸಂಜಗೌ ವೇಣುನಾ ದೇವಕೀನಂದನಃ ॥ ೧೩ ॥

॥ ಗರ್ಗ ಉವಾಚ ॥

ಇತಿ ಶ್ರುತ್ವಾ ರಾಧಿಕಾ ತು ಮಹಿಮಾಂ ವೇಣುವಾದಿನಃ ।
ಪ್ರಸನ್ನಾ ಹಿ ಸಮುತ್ಥಾಯ ಪರಿರೇಭೇ ಪ್ರಿಯಂ ಪ್ರಿಯಾ ॥ ೧೪ ॥

ವೃಂದಾವನೇಶೋ ಗೋವಿಂದೋ ರೇಮೇ ವೃಂದಾವನೇ ವನೇ ।
ವೃಂದಾವನನಿವಾಸಿನ್ಯಾ ಪಶ್ಯಸ್ವೃಂದಾವನದ್ರುಮಾನ್ ॥ ೧೫ ॥

ತತಃ ಕೃಷ್ಣಂ ಚ ಜಗೃಹುಃ ಸರ್ವತೋ ವ್ರಜಯೋಷಿತಃ ।
ವರ್ಷಾಕಾಲೇ ನೃಪಶ್ರೇಷ್ಠ ಸೌದಾಮಿನ್ಯೋ ಯಥಾ ಘನಂ ॥ ೧೬ ॥

---

೧೩. ಎಲೆ ರಾಧೆ! ಹಿಂದೆ ಋಕ್ಷರಾಜನಾದ ಜಾಂಬವಂತನನ್ನು ಗೆದು ತಂದ ಸ್ಯಮಂತಕಮಣಿಯನ್ನು ತಂದು ಸಾಮಾನ್ಯ ಮನುಷ್ಯನಂತೆ ಭೀತನಾಗಿ ಪ್ರಭುವಾದ ಉಗ್ರಸೇನನಿಗೊಪ್ಪಿಸಿದ ಆ ರಾಸೇಶ್ವರನೇ ನಿನ್ನ ಬಳಿಯಲ್ಲಿ ಕೊಳಲನ್ನು ಊದುತ್ತಿರುವನು ಎಂದಳು.

೧೪. ಓ ರಾಜೇಂದ್ರ! ಈರೀತಿ ಚಂದ್ರಾನನೆಯು ವರ್ಣಿಸಿದ ಶ್ರೀಕೃಷ್ಣನ ಮಹಿಮೆಯನ್ನು ಆಲಿಸಿ ಆ ರಾಧೆಯು ಮೂರ್ಛೆಯಿಂದ ತಿಳಿದೆದ್ದು ಮಹಾ ಸಂತೋಷದಿಂದ ತನ್ನ ಪ್ರಿಯನಾದ ಆ ರಾಸೇಶ್ವರನನ್ನು ಆಲಿಂಗಿಸಿದಳು.

೧೫. ಬಳಿಕ ವೃಂದಾವನಕ್ಕೆ ಅಧಿಪತಿಯಾದ ಆ ಶ್ರೀಕೃಷ್ಣನು ವೃಂದಾವನೇಶ್ವರಿಯಾದ ರಾಧೆಯೊಡಗೂಡಿ ವೃಂದಾವನದಲ್ಲಿ ಬೆಳೆದ ಮರಗಳನ್ನು ನೋಡುತ್ತಾ ಆ ವೃಂದಾವನದಲ್ಲೆಲ್ಲಾ ವಿಹರಿಸಿದನು.

೧೬. ಎಲೆ ನೃಪವರ್ಯ! ಅನಂತರ ಆ ಗೋಪಾಂಗನೆಯರು ವರ್ಷಾಕಾಲಗಳಲ್ಲಿ ಮೋಡಗಳನ್ನು ಮುತ್ತಿಕೊಳ್ಳುವ ಮಿಂಚುಗಳಂತೆ ಆ ಕೃಷ್ಣನನ್ನು ಸುತ್ತಲೂ ಬಳಸಿ ನಿಂತರು.

ಯಾವತೀಸ್ತತ್ರ ಗೋಪ್ಯಶ್ಚ ತಾವದ್ರೂಪಧರೋ ಹರಿಃ |
ಯಮುನಾಪುಲಿನಂ ರಾಜಂಸ್ತಾಭಿಃ ಸಾಕಂ ಸಮಾಯಯೌ || ೧೭ ||

ಬಭೂವುರ್ಮುದಿತಾ ನಾರ್ಯೋ ಯಥಾ ಚ ಶ್ರುತಯಃ ಪುರಾ |
ಸ್ವವಸ್ತ್ರೈಃ ಕೃಷ್ಣಚಂದ್ರಾಯ ಹ್ಯಾಸನಂ ತಾ ಅಚೀಕ್ಲೃಪನ್ || ೧೮ ||

ಶ್ರೀರಾಧಾರಮಣಸ್ತಸ್ಮಿನ್ನಾಸನೇ ಸಹ ರಾಧಯಾ !
ನಿಷಸಾದ ಹ್ಯಹೋ ರಾಜಂಸ್ತಾಭಿರ್ಭಕ್ತ್ಯಾ ವಶೀಕೃತಃ || ೧೯ ||

ಗೋಲೋಕೇ ಯಾದೃಶಂ ರೂಪಂ ದರ್ಶಯಾಮಾಸ ತಾದೃಶಂ |
ಗೋಪೀನಾಂ ರಾಧಯಾ ಸಾರ್ಧಂ ಕೃಷ್ಣಂ ತ್ರೈಲೋಕ್ಯಮೋಹನಂ || ೨೦ ||

---

೧೭. ಆಗ ಆ ಶ್ರೀಕೃಷ್ಣನು ಆ ಗೋಪಿಯರು ಎಷ್ಟುಮಂದಿಯಿದ್ದರೋ ಅಷ್ಟು ರೂಪಗಳನ್ನು ಧರಿಸಿ ಅವರೆಲ್ಲರೊಡನೆ ಯಮುನಾನದಿಯ ಮರುಳು ದಿಣ್ಣೆಯ ಬಳಿಗೆ ಬಂದನು.

೧೮. ಆಗ ಆ ಗೋಪಿಯರೆಲ್ಲರೂ ಪರಮಪುರುಷನ ಸ್ವರೂಪವನ್ನು ವಿವರಿಸುವ ಶ್ರುತಿಗಳಂತೆ ಪರಮಾನಂದವನ್ನು ಪಡೆದರು. ಆಗವರು ತಮ್ಮ ದುಕೂಲಗಳನ್ನೇ ಹಾಸಿ ಆ ಕೃಷ್ಣನಿಗೆ ಆಸನವನ್ನು ಸಿದ್ಧಗೊಳಿಸಿದರು.

೧೯. ಓ ರಾಜೇಂದ್ರ ! ಆ ಗೋಪಿಯರ ಭಕ್ತಿಯಿಂದ ವಶೀಕೃತನಾದ ಆ ರಾಧಾಕಾಂತನು ರಾಧೆಯೊಡನೆ ಅವರು ಇತ್ತ ಆಸನದಮೇಲೆಯೇ ಕುಳಿತುಕೊಂಡನು.

೨೦. ಅನಂತರ ತನ್ನ ಪರಮಧಾಮವಾದ ಗೋಲೋಕದಲ್ಲಿ ರಾಧೆಯೊಂದಿಗೆ ತನಗೆ ಯಾವ ದಿವ್ಯರೂಪವು ಇರುವುದೋ ಅಂತಹ ಮೂರು ಲೋಕಗಳನ್ನೂ ಮೋಹಗೊಳಿಸುವ ಕಪ್ಪಾದ ದೇಹ ಕಾಂತಿಯಿಂದ ಕೂಡಿದ ಆ ಮಂಗಲರೂಪವನ್ನು ಗೋಪಿಯರಿಗೆ ತೋರ್ಪಡಿಸಿದನು.

ದೃಷ್ಟ್ವಾ ಗೋಕುಲಚಂದ್ರಸ್ಯ ಸುರೂಪಂ ಪರಮಾದ್ಭುತಂ ।
ಸ್ವಾತ್ಮಾನಂ ನಾವಿದನ್ನೋಽಪ್ಯೋ ಬ್ರಹ್ಮಾನಂದೇನ ನಿರ್ವೃತಾಃ ॥ ೨೧ ॥

ಸ್ಥಲೇ ಕೃತ್ವಾ ವಿಹಾರಂ ತು ವಿವೇಶ ಯಮುನಾಜಲಂ ।
ತಾಭಿರ್ಭಕ್ತ್ಯಾ ವಶೀಭೂತೋ ಗೋಪೀಭಿಃ ಸಹ ರಾಧಯಾ ॥ ೨೨ ॥

ವಾರಾಂ ವಿಹಾರಂ ಭಗವಾನ್ ಸ್ತ್ರೀಭಿಃ ಸಾರ್ಧಂ ಚಕಾರ ಹ ।
ಮಂದಾಕಿನ್ಯಾಂ ಯಥಾ ಶಕ್ರೋ ಹ್ಯಪ್ಸರೋಭಿರ್ವೃತೋ ದಿವಿ ॥ ೨೩ ॥

ಮಾಧವೋ ಮಾಧವೀಂ ರಾಜನ್ಮಾಧವೀ ಮಾಧವಂ ಜಲೇ ।
ಅನ್ಯೋನ್ಯಂ ತೌ ಸಿಷಿಚತುಃ ಸಲಿಲೇ ಸಲಿಲೈಸ್ತ್ವರಂ ॥ ೨೪ ॥

---

೨೧. ಗೋಕುಲಚಂದ್ರನಾದ ಶ್ರೀಕೃಷ್ಣನ ಪರಮಾದ್ಭುತವಾದ ಆ ದಿವ್ಯ ರೂಪವನ್ನು ಕಂಡು ಆ ಗೋಪಿಯರೆಲ್ಲರೂ ಪರಬ್ರಹ್ಮಸಾಕ್ಷಾತ್ಕಾರದಿಂದುಂಟಾಗುವ ಆನಂದಾತಿಶಯವನ್ನು ಪಡೆದವರಾಗಿ ತಮ್ಮನ್ನು ತಾವೇ ಅರಿಯದಂತಾದರು.

೨೨. ಅನಂತರ ಆ ಗೋಪಿಯರ ಭಕ್ತಿಗೆ ವಶೀಭೂತನಾದ ಶ್ರೀಕೃಷ್ಣನು ರಾಧೆಯೊಡನೆಯೂ, ಗೋಪಿಯರೊಡನೆಯೂ ಸ್ಥಲವಿಹಾರವನ್ನು ಮುಗಿಸಿ ಜಲವಿಹಾರದ ಸಲುವಾಗಿ ಯಮುನಾನದಿಗೆ ಇಳಿದನು.

೨೩. ಬಳಿಕ ಆ ಭಗವಂತನು ಗೋಪಸ್ತ್ರೀಯರೊಡನೆ ಕಲೆತು ಅಂತರಿಕ್ಷದಲ್ಲಿ ಹರಿಯುವ ಗಂಗಾನದಿಯಲ್ಲಿ ಇಂದ್ರನು ಅಪ್ಸರೆಯರೊಡನೆ ವಿಹರಿಸುವಂತೆ ಜಲವಿಹಾರವನ್ನು ಮಾಡಿದನು.

೨೪. ಓ ರಾಜೇಂದ್ರ! ಯಮುನಾನದಿಯ ನೀರಿನಲ್ಲಿಳಿದ ಆ ಮಾಧವನು (ಕೃಷ್ಣ) ಮಾಧವಿ (ರಾಧೆ) ಯನ್ನೂ, ಮಾಧವಿಯು ಮಾಧವನನ್ನೂ ಪರಸ್ಪರವಾಗಿ ನೀರಿನಿಂದ ಎರಚಾಡಿದರು.

ಕಬರೀಕೇಶಪಾಶಾಭ್ಯಾಂ ಪ್ರಚ್ಯುತೈಃ ಕುಸುಮೈರ್ಬಭೌ ।
ಯಮುನಾ ಚಿತ್ರವರ್ಣೈಶ್ಚ ಯಥೋಷ್ಣಿಜ್ಮುದ್ರಿತಾ ನೃಪ ॥ ೨೫ ॥

ವಿದ್ಯಾಧರ್ಯೋ ದೇವಪತ್ನ್ಯಃ ಪುಷ್ಪವರ್ಷಂ ಪ್ರಚಕ್ರಿರೇ ।
ಪ್ರಶ್ಲಥದ್ವಸ್ತ್ರನೀವ್ಯಾಸ್ತಾ ಮೋಹಂ ಪ್ರಾಪ್ತಾಃ ಸ್ಮರಾತುರಾಃ ॥ ೨೬ ॥

ಅಥ ಕೃಷ್ಣೋ ವಾರಿ ಲೀಲಾಂ ಕೃತ್ವಾ ವೈ ಲೀಲಯಾ ಯುತಃ ।
ಜಲಾನ್ನಿಷ್ಕ್ರಮ್ಯ ರಾಜೇಂದ್ರ ಗಿರಿಂ ಗೋವರ್ಧನಂ ಯಯೌ ॥ ೨೭ ॥

ಅನುಜಗ್ಮುರ್ಗೋಪಿಕಾಸ್ತಂ ಸಹಚರ್ಯೋ ನೃಪೇಶ್ವರ ।
ಕಾಶ್ಚಿದ್ವ್ಯಜನಹಸ್ತಾಶ್ಚ ಕಾಶ್ಚಿಚ್ಚಾಮರವಾಹಕಾಃ । ॥ ೨೮ ॥

---

೨೫. ಆಗ ಅವರ ಮುಡಿಯಿಂದಲೂ, ತುರುಬಿನಿಂದಲೂ, ಉದುರಿದ ಬಗೆಬಗೆಯ ಹೂವುಗಳಿಂದಲೂ, ಕದರಿದ ನಾನಾವಿಧವಾದ ಬಣ್ಣಗಳಿಂದಲೂ ಆ ಯಮುನಾನದಿಯು ಕಾಂತಿಯಿಂದ ಮೆರೆಯುತ್ತಾ ಕಂಗೊಳಿಸಿತು.

೨೬. ಆಗ ಆ ಜಲವಿಹಾರವನ್ನು ಮೇಲೆ ನಿಂತು ನೋಡುತ್ತಿದ್ದ ವಿದ್ಯಾಧರಿಯರೂ ಇತರ ದೇವಾಂಗನೆಯರೂ ಪುಷ್ಪವರ್ಷವನ್ನು ಸುರಿಸಿದರಲ್ಲದೆ ತಾವೂ ಸಹ ಮದನ ವಿಕಾರಕ್ಕೊಳಗಾಗಿ ಉಟ್ಟಿರುವ ಬಟ್ಟೆಯು ಸಡಿಲವಾಗಿ ಜಾರುತ್ತಿದ್ದರೂ ತಿಳಿಯದೆ ಇರುವಷ್ಟು ಮೋಹಾವಿಷ್ಟರಾದರು.

೨೭. ಓ ರಾಜೇಂದ್ರ! ಆ ಶ್ರೀಕೃಷ್ಣನು ಈರೀತಿ ಜಲವಿಹಾರವನ್ನು ಮಾಡಿದನಂತರ ನೀರಿನಿಂದ ಹೊರಕ್ಕೆ ಬಂದು ಗೋವರ್ಧನಪರ್ವತದ ಕಡೆಗೆ ವಿಲಾಸದಿಂದ ಹೊರಟನು.

೨೮. ಆಗ ಆತನನ್ನು ಸಹಚರಿಯರಾದ ಗೋಪಿಯರು ಮೆಲ್ಲಮೆಲ್ಲನೆ ಹಿಂಬಾಲಿಸಿದರು. ಅವರಲ್ಲಿ ಕೆಲವರು ಬೀಸಣಿಗೆಯನ್ನು ಹಿಡಿದಿದ್ದರು. ಕೆಲವರು ಚಾಮರಗಳನ್ನು ಹಿಡಿದಿದ್ದರು.

ಕಾಶ್ಚಿತ್ತಾಂಬೂಲಹಸ್ತಾಶ್ಚ ಕಾಶ್ಚಿದ್ದರ್ಪಣವಾಹಕಾಃ |
ಕಾಶ್ಚಿದ್ಭೂಷಣಹಸ್ತಾಶ್ಚ ಕಾಶ್ಚಿತ್ಕುಸುಮವಾಹಕಾಃ || ೨೯ ||

ಕಾಶ್ಚಿಚ್ಚಂದನಹಸ್ತಾಶ್ಚ ಕಾಶ್ಚಿದ್ಭಾಜನವಾಹಕಾಃ |
ಕಾಶ್ಚಿದ್ಯಾವಕಹಸ್ತಾಶ್ಚ ಕಾಶ್ಚಿದಂಬರವಾಹಕಾಃ || ೩೦ ||

ಕಾಶ್ಚಿನ್ಮೃದಂಗಹಸ್ತಾಶ್ಚ ಕಾಶ್ಚಿತ್ಕಾಂಸ್ಯಧರಾಶ್ಚ ವೈ |
ಮುರಯಷ್ಟಿಧರಾಃ ಕಾಶ್ಚಿತ್ಕಾಶ್ಚಿದ್ವೀಣಾಧರಾಃ ಪರಾಃ || ೩೧ ||

ಕರತಾಲಕರಾಃ ಕಾಶ್ಚಿತ್ಕಾಶ್ಚಿದ್ಗಾನಪರಾಯಣಾಃ |
ಷಟ್ತ್ರಿಂಶದ್ರಾಗರಾಗಿಣ್ಯೋ ವ್ರಜಸ್ತ್ರೀರೂಪಧಾರಕಾಃ || ೩೨ ||

ಗೋಲೋಕಾದ್ಭಾರತೇ ಪೂರ್ವಮಾಗತಾ ರಾಧಯಾ ಸಹ |
ಜಗುಸ್ತಾ ನನೃತುಸ್ತತ್ರ ಶ್ರೀರಾಧೇಶ್ವರಸನ್ನಿಧೌ || ೩೩ ||

---

೨೯. ಕೆಲವರು ತಾಂಬೂಲವನ್ನೂ, ಕೆಲವರು ಕನ್ನಡಿಯನ್ನೂ ಕೈಲಿ ಧರಿಸಿದ್ದರು. ಕೆಲವರು ಒಡವೆಗಳನ್ನೂ, ಮತ್ತೆ ಕೆಲವರು ಹೂಗಳನ್ನು ತಳೆದಿದ್ದರು.

೩೦. ಕೆಲವರು ತೊಡೆಯುವ ಗಂಧವನ್ನೂ, ಕೆಲವರು ಪಾನಪಾತ್ರಾದಿ ಗಳನ್ನೂ, ಇನ್ನು ಕೆಲವರು ಅರಗನ್ನೂ, ಮತ್ತೆ ಕೆಲವರು ದುಕೂಲಗಳನ್ನೂ ಹಿಡಿದಿದ್ದರು.

೩೧. ಕೆಲಮಂದಿ ಗೋಪಿಯರು ಮೃದಂಗವನ್ನು ಬಾರಿಸುತ್ತಿದ್ದರು. ಕೆಲವು ಗೋಪಾಂಗನೆಯರು ಕಂಚಿನ ತಾಳಗಳನ್ನು ತಟ್ಟುತ್ತಾ ದನಿಗೈಯ್ಯು ತ್ತಿದ್ದರು. ಇನ್ನು ಕೆಲವು ಗೋಪಿಯರು ಮುರವೆಂಬ ವಾದ್ಯವಿಶೇಷವನ್ನು ಬಾಜಿಸುತ್ತಿದ್ದರು. ಮತ್ತೆ ಕೆಲವು ಗೋಪಿಯರು ವೀಣೆಯನ್ನು ನುಡಿಸುತ್ತಿದ್ದರು.

೩೨-೩೩. ಕೆಲವಗು ಕೈ ಚಪ್ಪಾಳೆ ತಟ್ಟುತ್ತಿದ್ದರು. ಮತ್ತೆ ಕೆಲವರು ಇಂಪಾಗಿ ಹಾಡುತ್ತಿದ್ದರು. ಓ ರಾಜೇಂದ್ರ ! ಹಿಂದೆ ರಾಧೆಯೊಡನೆ ಗೋಲೋಕ ದಿಂದ ಭೂವಿಗೆ ಬಂದಿದ್ದ ಮೂವತ್ತಾರು ರಾಗ ರಾಗಿಣಿಯರು ಗೋಪಾಂಗನೆ ಯರ ವೇಷವನ್ನು ಧರಿಸಿ ಆ ರಾಸೇಶ್ವರನ ಮುಂದೆ ಗಾನಮಾಡುತ್ತಾ ನರ್ತಿಸತೊಡಗಿದರು.

ನನರ್ತ ಮಧ್ಯೇ ತಾಸಾಂ ಚ ಕೃಷ್ಣೋ ಮದನಮೋಹನಃ ।
ಪ್ರಗಾಯನ್ವೇಣುನಾ ಗೀತಂ ತ್ರಿಲೋಕೀಂ ಮೋಹಯನ್ಹರಿಃ ॥ ೩೪ ॥

ವಾದಿತ್ರೈಃ ಕಿಂಕಿಣೀಭಿಶ್ಚ ವಲಯನೂಪುರಕಂಕಣೈಃ ।
ಗೀತೈರ್ನಿರ್ಮಿತಶಬ್ದೋಽಭೂತ್ತುಮುಲೋ ರಾಸಮಂಡಲೇ ॥ ೩೫ ॥

ದೇವಾಶ್ಚ ದೇವಪತ್ನ್ಯಶ್ಚ ರಾಸಂ ದೃಷ್ಟ್ವಾ ಹರೇರಪಿ ।
ಬಭೂವುರ್ಮೂರ್ಛಿತಾ ರಾಜನ್ ಗಮನೇ ಸ್ಮರಪೀಡಿತಾಃ ॥ ೩೬ ॥

ಚಂದ್ರಿಕಾಯಾಂ ತು ಚಂದ್ರಸ್ಯ ಚತುರಶ್ಚಂಚಲಶ್ಚಲನ್ ।
ಚಂದ್ರಾವಲ್ಯಾ ಬಭೌ ಚೈವ ಘನಶ್ಚಂಚಲ ಏವ ಚ ॥ ೩೭ ॥

---

೩೪. ಆಗ ಮನ್ಮಥನನ್ನೂ ಮೋಹಗೊಳಿಸುವಂತಹ ರೂಪವುಳ್ಳ ಆ ಶ್ರೀಕೃಷ್ಣನು ಮೂರು ಲೋಕಗಳೂ ಆನಂದದಿಂದ ಮೈಮರೆವಂತೆ ಇಂಪಾಗಿ ಕೊಳಲನ್ನು ನುಡಿಸುತ್ತಾ ಆ ವ್ರಜವಿಲಾಸಿನಿಯರ ನಡುವೆ ನರ್ತನ ಮಾಡಿದನು.

೩೫. ಆಗ ಆ ರಾಸಮಂಡಲದಲ್ಲಿ ಬಾರಿಸುತ್ತಿರುವ (ವಾದಿತ್ರ) ವೀಣಾ, ವೇಣು, ಮೃದಂಗ ತಾಲಾದಿ ವಾದ್ಯಗಳಿಂದಲೂ, ಅಲುಗಾಡುವ ಕಿರುಗೆಜ್ಜೆಗಳಿಂದಲೂ ಹಾಡುತ್ತಿರುವ ಗೀತಗಳಿಂದಲೂ ಝುನ ಝುನ ಎಂದು ಸದ್ದು ಮಾಡುವ ಕೈ ಬಳೆಗಳಿಂದಲೂ, ಕಾಲ್ಗಡಗಗಳಿಂದಲೂ ಭಾರಿಯಾದ ಕೋಲಾಹಲವುಂಟಾಯಿತು.

೩೬. ಓ ರಾಜೇಂದ್ರ! ಆಗ ಆಕಾಶದಲ್ಲಿ ನಿಂತು ಶ್ರೀಕೃಷ್ಣನ ರಾಸ ವಿಹಾರವನ್ನು ನೋಡುತ್ತಿದ್ದ ದೇವತೆಗಳೂ, ದೇವಾಂಗನೆಯರೂ ಮದನ ವಿಕಾರಕ್ಕೀಡಾಗಿ ಮೈಮರೆತು ಮೂರ್ಛಿತರಾದರು.

೩೭. ಚತುರನಾದ ಆ ಶ್ರೀಹರಿಯು ತುಂಬುಬೆಳದಿಂಗಳಿನ ಆ ರಾತ್ರಿಯಲ್ಲಿ ಚಂದ್ರಾವಳಿಯೆಂಬ ವಿಖ್ಯಾತಳಾದ ಆ ರಾಧೆಯೊಡನೆ ನಿಂತಲ್ಲಿ ನಿಲ್ಲದೆ ವಿಹರಿಸುತ್ತಾ ಮಿಂಚಿನಿಂದೊಡಗೂಡಿದ ಕಾರ್ಮೋಡದಂತೆ ಕಂಗೊಳಿಸಿದನು.

ರಾಧಾಯಾಸ್ತತ್ರ ಶೃಂಗಾರಂ ಸ್ರಗ್ಭಿರ್ಯಾವಕಕಜ್ಜಲೈಃ ।
ಚಕ್ರೇ ಕಮಲಪತ್ರಾದ್ಯೈರ್ಗಿರೌ ಗಿರಿಧರೋ ಮಹಾನ್ ॥ ೩೮ ॥

ಕುಂಕುಮಾಗುರುಕಸ್ತೂರೀಚಂದನಾದ್ಯೈಶ್ಚ ರಾಧಿಕಾ ।
ಚಕ್ರೇ ಕಮಲಪತ್ರಂ ವೈ ಶ್ರೀಕೃಷ್ಣಸ್ಯಾನನೇ ವರಂ ॥ ೩೯ ॥

ತತಶ್ಚ ಸಸ್ಮಿತಾ ರಾಧಾ ಸಸ್ಮಿತಂ ಭಗವನ್ಮುಖಂ ।
ಪಶ್ಯಂತೀ ನಾಗವಲ್ಲ್ಯಾಶ್ಚ ವೀಟಕಂ ಪ್ರದದೌ ಮುದಾ ॥ ೪೦ ॥

ಪ್ರಿಯಾ ಪ್ರದತ್ತಂ ತಾಂಬೂಲಂ ಬುಭುಜೇ ನಂದನಂದನಃ ।
ಕೃಷ್ಣದತ್ತಂ ಚ ತಾಂಬೂಲಂ ಚಖಾದ ರಾಧಿಕಾ ಮುದಾ ॥ ೪೧ ॥

ಕೃಷ್ಣಚರ್ವಿತತಾಂಬೂಲಂ ನೀತ್ವಾ ರಾಧಾ ಬಲಾತ್ಪ್ರನಃ ।
ಜಘಾಸ ಭಕ್ತ್ಯಾ ಸಾ ಶೀಘ್ರಂ ಸತೀ ಪತಿಪರಾಯಣಾ ॥ ೪೨ ॥

---

೩೮. ಆಗ ಆ ಗೋವರ್ಧನಗಿರಿಧಾರಿಯು ಬಗೆಬಗೆಯ ಪುಷ್ಪಮಾಲಿಕೆಗಳಿಂದಲೂ, ಅಗರು, ಕಾಡಿಗೆ ಕಮಲ ಕುಸುಮ ಮೊದಲಾದುವುಗಳಿಂದಲೂ ಆ ರಾಧೆಯನ್ನು ಸಿಂಗರಿಸಿದನು.

೩೯. ಅದರಂತೆಯೇ ಆ ರಾಧಿಕೆಯೂ ಸಹ ಕುಂಕುಮ, ಅಗುರು, ಕಸ್ತೂರಿ, ಚಂದನ ಮೊದಲಾದುವುಗಳಿಂದ ಶ್ರೀಕೃಷ್ಣನ ಮುಖದಲ್ಲಿ ಮುದ್ದಾಗಿ ಕಮಲದಂತೆ ಚಿತ್ರಿಸಿ ಬರೆದಳು.

೪೦. ಬಳಿಕ ಸಂತುಷ್ಟಳಾದ ಆ ರಾಧೆಯು ನಗುನಗುತ್ತಾ ಮಂದಹಾಸದಿಂದ ಮಧುರವಾದ ಆ ಭಗವಂತನ ಮುಖವನ್ನು ನೋಡುತ್ತಾ ವೀಳ್ಯವನ್ನು ಬಾಯೊಳಗಿಟ್ಟಳು.

೪೧. ಈರೀತಿ ತನ್ನ ಪ್ರಿಯೆಯು ಇತ್ತ ತಾಂಬೂಲವನ್ನು ಆ ನಂದನಂದನನು ಸಂತಸದಿಂದ ಸವಿದನು. ಆ ರಾಧಿಕೆಯೂ ಸಹ ತನ್ನ ಪ್ರಿಯನಿತ್ತ ತಾಂಬೂಲವನ್ನು ಸಂತೋಷದಿಂದ ಮೆಲ್ಲಿದಳು.

೪೨. ಬಳಿಕ ಪತಿವ್ರತಾಶಿರೋಮಣಿಯಾದ ಆ ರಾಸೇಶ್ವರಿಯು ಕೃಷ್ಣನು ಬೇಡವೆಂದರೂ ಬಿಡದೆ ಬಲಾತ್ಕಾರದಿಂದ ಅವನಗಿದಿದ್ದ ತಾಂಬೂಲವನ್ನು ಕಿತ್ತುಕೊಂಡು ಭಕ್ತಿಯಿಂದ ಆ ತಂಬುಲವನ್ನು ಸೇವಿಸಿದಳು.

ಪ್ರಿಯಾಚರ್ವಿತತಾಂಬೂಲಂ ಯಯಾಚೇ ಭಗವಾನ್ ಹರಿಃ ।
ರಾಧಾ ದದೌ ನ ತಂ ಭೀತಾ ಪಪಾತ ತತ್ಪದಾಂಬುಜೇ ॥ ೪೩ ॥

ಪದ್ಮಾ ಪದ್ಮಾವತೀ ನಂದೀ ಆನಂದೀ ಸುಖದಾಯಿನೀ ।
ಚಂದ್ರಾವಲೀ ಚಂದ್ರಕಲಾ ವಂದ್ಯಾ ಹ್ಯೇತಾ ಹರಿಪ್ರಿಯಾಃ ॥ ೪೪ ॥

ವೃಂದಾವನೇ ಹರಿಸ್ತಾಭಿರ್ವಸಂತರ್ತುಪ್ರಪೂರಿತೇ ।
ನಾನಾಪ್ರಕಾರಂ ಶೃಂಗಾರಂ ಸ ಚಕಾರ ಮನೋಜವತ್ ॥ ೪೫ ॥

ಕಾಶ್ಚಿತ್ಪಿಬಂತಿ ಗೋಪ್ಯಸ್ತು ಶ್ರೀಕೃಷ್ಣಸ್ಯಾಧರಾಮೃತಂ ।
ಕಾಶ್ಚಿದಾಲಿಂಗನಂ ಚಕ್ರುಃ ಕೃಷ್ಣಸ್ಯ ಪರಮಾತ್ಮನಃ ॥ ೪೬ ॥

---

೪೩. ಆಗ ಭಗವಂತನಾದ ಶ್ರೀಕೃಷ್ಣನು ರಾಧೆಯು ಸವಿದ ತಂಬುಲವನ್ನು ಕೊಡುವಂತೆ ಪ್ರಾರ್ಥಿಸಿದನು. ಆಗ ಆ ರಾಧೆಯು ಅದನ್ನು ಅಪರಾಧವೆಂದು ಬಗೆದು ಹೆದರಿಕೆಯಿಂದ ತಂಬುಲವನ್ನು ಕೊಡದೆ ಅವನ ಚರಣಕಮಲಗಳ ಮೇಲೆ ತಲೆಯಿಟ್ಟು ನಮಸ್ಕರಿಸಿದಳು.

೪೪. ಓ ರಾಜೇಂದ್ರ! ಪದ್ಮಾ, ಪದ್ಮಾವತಿ, ನಂದಿ, ಆನಂದಿ, ಸುಖದಾಯಿನಿ, ಚಂದ್ರಾವಲಿ, ಚಂದ್ರಕಲಾ ಎಂಬುವರು ಶ್ರೀಕೃಷ್ಣನ ಪ್ರಿಯ ಸಖಿಯರು. ಇವರೆಲ್ಲರೂ ವಂದನಾರ್ಹರು.

೪೫. ಆ ಹೇಮಂತದಲ್ಲಿಯೂ ಸಹ ವಸಂತಋತುವಿನ ಸೌಭಾಗ್ಯವನ್ನು ತಳೆದಿರುವ ಆ ವೃಂದಾವನದಲ್ಲಿ ತನ್ನ ಪ್ರಿಯ ಸಖಿಯರೊಡನೆ ಆ ಶ್ರೀಹರಿಯು ಮನ್ಮಥನಂತೆ ನಾನಾವಿಧವಾದ ಶೃಂಗಾರ ಲೀಲೆಗಳನ್ನು ತೋರ್ಪಡಿಸಿದನು.

೪೬. ಆಗ ಕೆಲವಂದಿ ಗೋಪಿಯರು ಆ ಶ್ರೀಕೃಷ್ಣನ ಮಧುರವಾದ ಅಧರಾಮೃತವನ್ನು ಪಾನಮಾಡಿದರು. ಮತ್ತೆ ಕೆಲವು ಗೋಪಿಯರು ಆ ಪರಮಾತ್ಮನನ್ನು ಆನಂದದಿಂದ ಆಲಂಗಿಸಿದರು.

ತತಃ ಕೃಷ್ಣಸ್ತು ಭಗವಾನ್ ಗೋಪೀನಾಂ ಕುಚಕುಂಕುಮೈಃ ।
ಸುವರ್ಣವರ್ಣೋ ಭೂತ್ವಾ ವೈ ರೇಜೇ ಮದನಮೋಹನಃ ॥ ೪೭ ॥

ಪುನರ್ಗೋಪೀಜನೈಸ್ಸಾರ್ಧಂ ಶ್ರೀಗೋಪೀಜನವಲ್ಲಭಃ ।
ರಾಸಂ ಚಕಾರ ರಾಜೇಂದ್ರ ಸುಂದರೇ ಕದಲೀವನೇ ॥ ೪೮ ॥

ಏವಂ ಹೇಮಂತರಜನೀ ಗೋಪೀನಾಂ ರಾಸಮಂಡಲೇ ।
ವ್ಯತೀತಾ ಕ್ಷಣವದ್ರಾಜನ್ ನಿತ್ಯಾನಂದೇನ ತತ್ರ ವೈ ॥ ೪೯ ॥

ಅಥ ನಂದಸ್ಯ ಸದನಂ ರಾಸಂ ಕೃತ್ವಾ ಯಯೌ ಹರಿಃ ।
ವೃಷಭಾನುಪುರಂ ರಾಧಾ ತಥಾ ಗೋಪ್ಯೋ ಗೃಹಾನ್ಯಯುಃ ॥ ೫೦ ॥

---

೪೭. ಈ ರೀತಿಯಾಗಿ ವಿಹರಿಸುತ್ತಾ ಭಗವಂತನಾದ ಆ ಶ್ರೀಕೃಷ್ಣನು ಗೋಪಾಂಗನೆಯರ ಸ್ತನಮಂಡಲಗಳಲ್ಲಿ ಲಿಪ್ತವಾಗಿರುವ ಕೇಸರಿ ಮೊದಲಾದ ಅನುಲೇಪನಗಳಿಂದ ತೊಡೆಯಲ್ಪಟ್ಟವನಾಗಿ, ಸ್ವಾಭಾವಿಕವಾಗಿ ತನ್ನ ಶ್ಯಾಮಲ ವರ್ಣವು ತೋರದಂತೆ ಚಿನ್ನದ ಬಣ್ಣದಂತೆ ಹೊಳೆಯುತ್ತಾ ಮನ್ಮಥನಿಗೂ ಮೋಹವನ್ನುಂಟುಮಾಡುವಂತೆ ಶೋಭಿಸಿದನು.

೪೮. ಓ ರಾಜೇಂದ್ರ! ಆ ಗೋಪಾಂಗನೆಯರಿಗೆ ಪರಮ ಪ್ರೇಮಾಸ್ಪದನಾದ ಶ್ರೀಹರಿಯು ಅವರೆಲ್ಲರೊಡನೆ ಕಲೆತು ಮತ್ತೊಮ್ಮೆ ಸುಂದರವಾದ ಕದಲಿಕಾವನದಲ್ಲಿ ರಾಸಲೀಲೆಯನ್ನು ತೋರ್ಪಡಿಸಿದನು.

೪೯. ಓ ರಾಜೇಂದ್ರ! ಈರೀತಿಯಾಗಿ ಪರಮಾನಂದಸ್ವರೂಪನಾದ ಆ ರಾಸೇಶ್ವರನೊಡನೆ ಮಹಾನಂದದಿಂದ ವಿಹರಿಸುತ್ತಾ ಆ ಗೋಪಿಯರು ಹೇಮಂತಋತುವಿನ ಆ ಪೂರ್ಣಿಮಾರಾತ್ರಿಯೆಲ್ಲವನ್ನೂ ಕ್ಷಣಮಾತ್ರದಂತೆ ಕಳೆದುಬಿಟ್ಟರು.

೫೦. ಅನಂತರ ನಂದ ನಂದನನು ರಾಸಲೀಲೆಯನ್ನು ಮುಗಿಸಿ ನಂದನ ಮನೆಗೆ ತೆರಳಿದನು. ರಾಧೆಯು ವೃಷಭಾನುವಿನ ನಿವಾಸವನ್ನು ಸೇರಿದಳು. ಗೋಪಿಯರು ತಮ್ಮ ತಮ್ಮ ಮನೆಗೆ ಹೊರಟುಹೋದರು.

ನ ಜಾನಂತಿ ವ್ರಜೇ ಗೋಪಾ ರಾಸವಾರ್ತಾಂ ಹರೇರಪಿ |
ಸ್ವಾನ್ಸ್ವಾನ್ದಾರಾನ್ಸ್ವಪಾರ್ಶ್ವಸ್ಥಾನ್ಮನ್ಯಮಾನಾ ನೃಪೇಶ್ವರ || ೫೧ ||

ಇದಂ ಶೃಂಗಾರಚರಿತಂ ರಾಧಾಮಾಧವಯೋಃ ಪರಂ |
ಯೇ ಪಠಂತಿ ಪ್ರಶೃಣ್ವಂತಿ ತೇ ವ್ರಜಿಷ್ಯಂತಿ ಚಾಕ್ಷರಂ || ೫೨ ||

ಇತಿ ಶ್ರೀ ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ರಾಸಕ್ರೀಡಾಸಂಪೂರ್ತಿರ್ನಾಮ
ಷಟ್ಚತ್ವಾರಿಂಶೋಽಧ್ಯಾಯಃ

---

೫೧. ಎಲೈ ವಜ್ರನಾಭಿರಾಜನೆ! ಆ ಶ್ರೀಕೃಷ್ಣನು ಗೋಕುಲದಲ್ಲಿ ರಾಸಲೀಲೆಯನ್ನು ಆಡಿದನೆಂಬ ಸುದ್ದಿಯು ಯಾರಿಗೂ ತಿಳಿಯಲೇ ಇಲ್ಲ. ಏಕೆಂದರೆ ಆ ಗೋಪರೆಲ್ಲರೂ ತಮ್ಮ ತಮ್ಮ ಪತ್ನಿಯರು ತಮ್ಮ ತಮ್ಮ ಪಕ್ಕದಲ್ಲಿಯೇ ಇದ್ದರೆಂದು ಭಾವಿಸಿದ್ದರು.

೫೨. ಓ ರಾಜೇಂದ್ರ! ಈ ಶ್ರೇಷ್ಠವಾದ ರಾಧಾಮಾಧವರ ಶೃಂಗಾರ ಚರಿತವನ್ನು ಯಾರು ಓದುವರೋ, ಯಾರು ಆಲಿಸುವರೋ ಅವರೆಲ್ಲರೂ ಶಾಶ್ವತವಾದ ಆ ಪರಬ್ರಹ್ಮವನ್ನೇ ಹೊಂದುವರು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತ್ರದಲ್ಲಿ ರಾಸಕ್ರೀಡಾ ಸಮಾಪ್ತಿಯೆಂಬ
ನಲವತ್ತಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಸಪ್ತಚತ್ವಾರಿಂಶೋಽಧ್ಯಾಯಃ

|| ಗರ್ಗ ಉವಾಚ ||

ಇದಂ ಕೃಷ್ಣಸ್ಯ ಚರಿತಂ ಗುಪ್ತಂ ಶಾಸ್ತ್ರೇಷು ವರ್ಣಿತಂ |
ಮಯಾ ತವಾಗ್ರೇ ರಾಜೇಂದ್ರ ಅಥಾನ್ಯಚ್ಛೃಣು ವಿಸ್ತರಾತ್ || ೧ ||

ಏವಂ ಸ್ಥಿತ್ವಾ ದಿನಾನ್ಯಷ್ಟೌ ಶ್ರೀಕೃಷ್ಣೋ ನಂದಪತ್ತನೇ |
ಆನಂದಂ ಪ್ರದದುರ್ನೃಣಾಂ ಪುನರ್ಗಂತುಂ ಮನೋ ದಧೇ || ೨ ||

ನಲವತ್ತೇಳನೆಯ ಅಧ್ಯಾಯವು

೧. ಗರ್ಗಮಹರ್ಷಿಯು ಹೇಳತೊಡಗಿದನು—ಓ ರಾಜೇಂದ್ರ! ಈ ಶ್ರೀಕೃಷ್ಣಚರಿತವು ಮಹಾ ರಹಸ್ಯವಾದುದೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದು. ಇದನ್ನು ನಾನು ನಿನಗೆ ತಿಳಿಸಿರುವೆನು. ಇನ್ನುಮುಂದೆ ಮತ್ತೊಂದು ಚರಿತ್ರವನ್ನು ವಿಸ್ತಾರವಾಗಿ ವರ್ಣಿಸುವೆನು, ಕೇಳು.

೨. ಈ ರೀತಿಯಾಗಿ ಶ್ರೀಕೃಷ್ಣನು ಎಲ್ಲರಿಗೂ ಸಂತೋಷವನ್ನುಂಟುಮಾಡುತ್ತಾ ಆ ನಂದಗೋಕುಲದಲ್ಲಿ ಎಂಟು ದಿವಸಗಳಿದ್ದು. ಬಳಿಕ ಮುಂದೆ ಹೊರಡಲು ನಿಶ್ಚಯಿಸಿದನು,

ಯಶೋಮತೀ ಕೃಷ್ಣಮಾತಾ ಪ್ರಾಣೇಭ್ಯೋಽಪಿ ಪ್ರಿಯಂ ಸುತಂ ।
ಗಂತುಮಭ್ಯುದಿತಂ ದೃಷ್ಟ್ವಾ ರುರೋದೋಚ್ಚೈರ್ಯಥಾ ಪುರಾ ॥ ೩ ॥

ರುರುದುಸ್ತತ್ರ ಗೋಪ್ಯಶ್ಚ ಬಾಷ್ಪಪರ್ಯಾಕುಲೇಕ್ಷಣಾಃ ।
ಸ್ಮರಂತ್ಯಃ ಪೂರ್ವದುಃಖಾನಿ ಗೇಹೇ ಗೇಹೇ ನೃಪೇಶ್ವರ ॥ ೪ ॥

ಯಾವತ್ಯೋ ವ್ರಜನಾರ್ಯಶ್ಚ ತಾವದ್ರೂಪಧರೋ ಹರಿಃ ।
ಪೃಥಗಾಶ್ವಾಸಯಾಮಾಸ ತಥಾ ರಾಧಾಂ ಸ ಕೋವಿದಃ ॥ ೫ ॥

ಮಾತರಂ ಪ್ರಾಹ ಭಗವಾನ್ ಮಾತಃ ಶೋಕಂ ತು ಮಾ ಕುರು ।
ಶೀಘ್ರಮತ್ರಾಗಮಿಷ್ಯಾಮಿ ಕಾರಯಿತ್ವಾ ಕ್ರತೂತ್ತಮಂ ॥ ೬ ॥

---

೩. ಆಗ ತನ್ನ ಪ್ರಾಣಗಳಿಗಿಂತಲೂ ಹೆಚ್ಚೆಂದು ಭಾವಿಸಿರುವ ಪ್ರಿಯ ಪುತ್ರನಾದ ಶ್ರೀಕೃಷ್ಣನು ಪ್ರಯಾಣ ಸನ್ನದ್ಧನಾಗಿರುವುದನ್ನು ಕಂಡು ಅವನ ಸಾಕುತಾಯಿಯಾದ ಯಶೋದೆಯು ಹಿಂದೊಮ್ಮೆ ಶ್ರೀಕೃಷ್ಣನು ತನ್ನನ್ನು ಬಿಟ್ಟು ಹೊರಟಾಗ ಅತ್ತಿದ್ದಂತೆ ಗಟ್ಟಿಯಾಗಿ ಅಳತೊಡಗಿದಳು.

೪. ಓ ರಾಜೇಂದ್ರ ! ಅಷ್ಟೇ ಅಲ್ಲದೆ ಆ ಗೋಕುಲದ ಮನೆ ಮನೆಯಲ್ಲೆಲ್ಲಾ ಹಿಂದೆ ಕೃಷ್ಣನನ್ನಗಲಿದಾಗ ಅನುಭವಿಸಿದ್ದ ಸಂಕಟವನ್ನು ನೆನೆದು ಪ್ರತಿಯೊಬ್ಬ ಗೋಪಿಯೂ ಕಂಬನಿದುಂಬಿ ಅಳಲಾರಂಭಿಸಿದಳು.

೫. ಆಗ ಆ ಶ್ರೀಕೃಷ್ಣನು ಗೋಕುಲದಲ್ಲಿ ಎಷ್ಟು ಗೋಪಿಯರಿದ್ದರೋ ಅಷ್ಟು ರೂಪಗಳನ್ನು ಧರಿಸಿ ಪ್ರತ್ಯೇಕವಾಗಿ ಪ್ರತಿಯೊಬ್ಬ ಗೋಪಿಯನ್ನೂ ಸಂತೈಸಿದುದಲ್ಲದೆ ತನ್ನ ಪ್ರಿಯಕಾಂತೆಯಾದ ರಾಧೆಯನ್ನೂ ಸಮಾಧಾನ ಪಡಿಸಿದನು.

೬. ಬಳಿಕ ತನ್ನ ತಾಯಿಯನ್ನು ಕುರಿತು, ಅಮ್ಮಾ ! ಅಳಬೇಡ. ಈ ಅಶ್ವಮೇಧಯಾಗವನ್ನು ಮಾಡಿಸಿದನಂತರ ಕೂಡಲೇ ಇಲ್ಲಿಗೆ ಬರುವೆನು.

ತ್ವಂ ನ ಮನ್ಯಸೇ ಚೇನ್ಮಾತರ್ನಿತ್ಯಂ ದ್ರಕ್ಷ್ಯಸಿ ಚಾಂತಿಕೇ ।
ಪುತ್ರರೂಪಂ ಚ ಮಾಂ ಭಕ್ತ್ಯಾ ಕೃತಾಂತಭಯಭಂಜನಂ ॥ ೭ ॥

ಏವಂ ತಾಂ ತು ಸಮಾಶ್ವಾಸ್ಯ ನಿಷ್ಕ್ರಮ್ಯ ಸದನಾದ್ಧರಿಃ ।
ಗೋಪೈರ್ಯುಕ್ತೋsಶ್ರುಪೂರ್ಣಾಕ್ಷಃ ಪೌತ್ರಸೇನಾಂ ಜಗಾಮ ಹ ॥ ೮ ॥

ಗತ್ವಾನಿರುದ್ಧಸೇನಾಯಾಂ ಯಾದವಾನ್ ಹಯಮೋಚನೇ ।
ದದಾವಾಜ್ಞಾಂ ನೃಪಶ್ರೇಷ್ಠ ಸಾಕ್ಷಾನ್ನಾರಾಯಣೋ ಹರಿಃ ॥ ೯ ॥

ನೋದಿತಃ ಕೃಷ್ಣಚಂದ್ರೇಣ ಹಯಂ ಸಂಪೂಜ್ಯ ಯತ್ನತಃ ।
ಪುನರ್ಮುಮೋಚ ತತ್ಪೌತ್ರೋ ವಿಜಯಾರ್ಥೇ ಹಿ ಪೂರ್ವವತ್ ॥ ೧೦ ॥

---

೭. ಹಾಗೆ ನೀನೊಪ್ಪದಿದ್ದ ಪಕ್ಷಕ್ಕೆ ಪ್ರತಿನಿತ್ಯವೂ ನಾನು ನಿನ್ನ ಬಳಿಯಲ್ಲಿಯೇ ಪುತ್ರರೂಪದಿಂದ ಗೋಚರನಾಗಿರುವೆನು. ಈ ನನ್ನ ರೂಪವನ್ನು ಭಜಿಸಿದವರಿಗೆ ಯಮನೂ ಸಹ ಭಯವನ್ನುಂಟುಮಾಡಲಾರನು.

೮. ಎಂಬುದಾಗಿ ನುಡಿದು ಆ ಯಶೋಧೆಯನ್ನು ಸಮಾಧಾನಗೊಳಿಸಿದ ನಂತರ ನಂದನಿವಾಸದಿಂದ ಹೊರಕ್ಕೆ ಬಂದು ತನ್ನನ್ನು ಅಗಲಲಾರದೆ ದುಃಖಿಸುತ್ತಾ ಹಿಂಬಾಲಿಸುತ್ತಿರುವ ಗೋಪರೊಡನೆ ತಾನೂ ದುಃಖಪಡುತ್ತಾ (ಕಂಬನಿದುಂಬಿ) ತನ್ನ ಮೊಮ್ಮಗನಾದ ಅನಿರುದ್ಧನ ಸೇನೆಯಿದ್ದಲ್ಲಿಗೆ ಬಂದನು.

೯. ಎಲೈ ನೃಪಶ್ರೇಷ್ಠನೇ! ಸಾಕ್ಷಾನ್ನಾರಾಯಣನ ಪರಸ್ವರೂಪನಾದ ಆ ಶ್ರೀಕೃಷ್ಣನು ಆ ಸೇನೆಯನ್ನು ಸೇರಿದಕೂಡಲೇ ಕುದುರೆಯನ್ನು ಮುಂದೆ ಬಿಡುವಂತೆ ಯಾದವರಿಗೆ ಅಪ್ಪಣೆಯಿತ್ತನು.

೧೦. ಈರೀತಿ ತನ್ನ ಪಿತಾಮಹನಾದ ಶ್ರೀಕೃಷ್ಣನ ಆಜ್ಞೆಯಾಗುತ್ತಲೇ ಅನಿರುದ್ಧನು ಆ ಯಜ್ಞಾಶ್ವವನ್ನು ವಿಧಿವತ್ತಾಗಿ ಪೂಜಿಸಿ ಮೊದಲಿನಂತೆ ದಿಗ್ವಿಜಯಕ್ಕಾಗಿ ಬಿಟ್ಟನು.

ಯಾದವಾಶ್ಚಾನಿರುದ್ಧಾದ್ಯಾ ನಂದಂ ನತ್ವಾಶ್ರುಪೂರಿತಾಃ ।
ಗಂತುಮಾರುರುಹುಸ್ಸರ್ವೇ ವಾಹನಾನಿ ಚ ಕೃಚ್ಛ್ರತಃ ॥ ೧೧ ॥

ಕೃಷ್ಣಾಕಾರಾನ್ಕೃಷ್ಣಪುತ್ರಾನ್ ಕೃಷ್ಣಪೌತ್ರಾಂಶ್ಚ ಸುಂದರಾನ್ ।
ಗಂತುಮಭ್ಯುದಿತಾನ್ಸರ್ವಾನ್ ಕೃಷ್ಣೇನ ಸಹಿತಾನ್ಯದೂನ್ ॥ ೧೨ ॥

ದೃಷ್ಟ್ವಾ ತೇ ರುರುದುರ್ಗೋಪಾ ಗೋವಿಂದವಿರಹಾತುರಾಃ ।
ಸ್ಮರಂತಃ ಪೂರ್ವದುಃಖಾನಿ ಶುಷ್ಕಕಂಠೋಷ್ಠತಾಲುಕಾಃ ॥ ೧೩ ॥

ರುರೋದ ನಂದರಾಜೋಽಪಿ ಬಾಷ್ಪವ್ಯಾಕುಲಲೋಚನಃ ।
ನ ಕಿಂಚಿದೂಚೇ ದುಃಖಾರ್ತೋ ಮುಖೇನ ಪರಿಶುಷ್ಯತಾ ॥ ೧೪ ॥

ಸರ್ವಾನಾಶ್ವಾಸಯಾಮಾಸ ಕೃಷ್ಣೋಽಪ್ಯಶ್ರುಪರಿಪ್ಲುತಃ ।
ಆಯಾಸ್ಯ ಇತಿ ವಾಕ್ಯೈಶ್ಚ ಮಿಲಿತ್ವಾ ತು ಪೃಥಕ್ಪೃಥಕ್ ॥ ೧೫ ॥

---

೧೧. ಅನಂತರ ಅನಿರುದ್ಧ ಮೊದಲಾದ ಯಾದವರು ನಂದನನ್ನು ನಮಸ್ಕರಿಸಿ ಆ ಪ್ರಿಯಬಾಂಧವರನ್ನಗಲಬೇಕೆಂಬ ವ್ಯಥೆಯಿಂದ ಕಂಬನಿದುಂಬಿದವರಾಗಿ ಬಹು ಕಷ್ಟದಿಂದ ತಮ್ಮ ತಮ್ಮ ರಥಗಳನ್ನು ಹತ್ತಿ ಹೊರಡಲನುವಾದರು.

೧೨-೧೩. ಆಗ ಶ್ರೀಕೃಷ್ಣನನ್ನಗಲಲಾರದೆ ತಲ್ಲಣಿಸುತ್ತಾ ಹಿಂದೆ ತಾವು ಅನುಭವಿಸಿದ್ದ ದುಃಖಗಳೆಲ್ಲವನ್ನೂ ನೆನೆನೆನೆದು ಗಂಟಲು, ತುಟಿ, ದವಡೆಗಳೆಲ್ಲವೂ ಒಣಗಿಹೋಗಿರುವ ಗೋಪರೆಲ್ಲರೂ ಕೃಷ್ಣನಂತೆಯೇ ಸುಂದರವಾದ ಆಕೃತಿಯುಳ್ಳ ಆ ಕೃಷ್ಣನ ಪುತ್ರರೂ ಪೌತ್ರರೂ ರಥಗಳನ್ನೇರಿ ಹೊರಡಲನುವಾಗಿರುವುದನ್ನು ಕಂಡು ಅಳಲಾರಂಭಿಸಿದರು.

೧೪. ಆಗ ನಂದಗೋಪನೂ ಸಹ ಕಣ್ಣೀರು ತುಂಬಿದವನಾಗಿ ಅತ್ತುಬಿಟ್ಟನು. ಅವನಿಗೆ ದುಃಖದಿಂದ ಬಾಯೊಣಗಿಹೋಗಿ ಒಂದು ಮಾತನ್ನೂ ಆಡುವುದಕ್ಕೆ ಸಾಧ್ಯವಾಗಲಿಲ್ಲ.

೧೫. ಅನಂತರ ಶ್ರೀಕೃಷ್ಣನೂ ಸಹ ಕಂಬನಿದುಂಬಿದವನಾಗಿ ಪ್ರತ್ಯೇಕವಾಗಿ ಪ್ರತಿಯೊಬ್ಬರ ಬಳಿಗೂ 'ಹೋಗಿ ಬರುವೆನು, ಹೋಗಿ ಬರುವೆನು' ಎಂದು ನುಡಿದು ಎಲ್ಲರನ್ನೂ ಸಂತೈಸಿದನು.

ಚೈತ್ರಮಾಸೇ ಯದಾ ಯಜ್ಞೋ ದ್ವಾರಕಾಯಾಂ ಭವಿಷ್ಯತಿ |
ಆಹ್ವಯಿಷ್ಯಾಮಿ ಗೋಪಾಲಾ ಯುಷ್ಮಾನ್ಸರ್ವಾನ್ನ ಸಂಶಯಃ || ೧೬ ||

ಗೋಪಾಲಾ ಗೋಕುಲೇ ನಿತ್ಯಂ ಗೋಪಾಲಂ ಮಾಂ ಹಿ ದ್ರಕ್ಷ್ಯಥ |
ತಸ್ಮಾನ್ನಿವಾಸಂ ಕುರುತ ಅತ್ರೈವ ವ್ರಜಮಂಡಲೇ || ೧೭ ||

ಏವಮಾಶ್ವಾಸ್ಯ ತೈರ್ದತ್ತಂ ಪಾರಿಬರ್ಹಂ ಪ್ರಗೃಹ್ಯ ಚ |
ನಂದಂ ನತ್ವಾ ರಥೇ ಸ್ಥಿತ್ವಾ ಪ್ರಾಯಾದ್ವೃಷ್ಣಿವರೈರ್ಹರಿಃ || ೧೮ ||

ನಂದಾದ್ಯಾ ದುಃಖಿತಾ ಗೋಪಾಃ ಕೃಷ್ಣಸ್ಯ ಚರಣಾಂಬುಜೇ |
ಕ್ಷಿಪ್ತಂ ಮನಃ ಪುನರ್ಹರ್ತುಮನೀಶಾ ಗೋಕುಲಂ ಯಯುಃ || ೧೯ ||

೧೬-೧೭. ಎಲೈ ಗೋಪರಿರಾ! ಬರುವ ಚೈತ್ರಮಾಸದಲ್ಲಿ ದ್ವಾರಕೆಯಲ್ಲಿ ಅಶ್ವಮೇಧಯಜ್ಞವು ಬೆಳೆಯುವುದು. ಆ ಸಮಯಕ್ಕೆ ಸರಿಯಾಗಿ ನೀವೆಲ್ಲರೂ ಅಲ್ಲಿಗೆ ಖಂಡಿತವಾಗಿ ಬರುವಂತೆ ನಿಮ್ಮನ್ನು ಆಹ್ವಾನಿಸುವೆನು. ಎಲೈ ಗೋಪಾಲಕರಿರಾ! ನೀವೀವ್ರಜಮಂಡಲದಲ್ಲಿಯೇ ವಾಸಮಾಡಿರಿ. ನಾನು ಇಲ್ಲಿ ನಿಮಗೆ ಪ್ರತಿನಿತ್ಯವೂ ಗೋಪಾಲ ರೂಪದಿಂದಲೇ ದರ್ಶನವನ್ನೀಯುವೆನು.

೧೮. ಹೀಗೆಂದು ಹೇಳಿ ಶ್ರೀಕೃಷ್ಣನು ಅವರೆಲ್ಲರನ್ನೂ ಸಂತೈಸಿದ ಬಳಿಕ ಅವರಿತ್ತ ಉಡುಗೊರೆಗಳನ್ನು ಸ್ವೀಕರಿಸಿ ನಂದಗೋಪನಿಗೆ ನಮಸ್ಕಾರವನ್ನು ಮಾಡಿ ವೃಷ್ಣಿ ಮೊದಲಾದ ಯಾದವರೊಡನೆ ರಥದಲ್ಲಿ ಕುಳಿತು ಪ್ರಯಾಣ ಮಾಡಿದನು.

೧೯. ಅನಂತರ ಶ್ರೀಕೃಷ್ಣನ ಚರಣಕಮಲಗಳಲ್ಲೇ ನೆಟ್ಟುಹೋದ ಮನಸ್ಸುಳ್ಳ ನಂದಗೋಪ ಮೊದಲಾದವರು ತಮ್ಮ ಆ ಮನಸ್ಸನ್ನು ಹಿಂದಿರುಗಿಸಲು ಸಾಧ್ಯವಿಲ್ಲದೆ ಹೇಗೋ ಗೋಕುಲಕ್ಕೆ ಹೊರಟರು.

ಗೋಪಾ ಗೋಪ್ಯಶ್ಚ ಶ್ರೀಕೃಷ್ಣಂ ಪ್ರೇಮಮಗ್ನಾಶ್ಚ ನಿತ್ಯಶಃ ।
ಸಮೀಪೇ ನೃಪ ಪಶ್ಯಂತಿ ಯೋಗಿನಾಮಪಿ ದುರ್ಲಭಂ ॥ ೨೦ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧ
ಚರಿತ್ರೇ ಸುಮೇರೌ ವ್ರಜಾದನ್ಯತ್ರ ಗಮನಂ ನಾಮ
ಸಪ್ತಚತ್ವಾರಿಂಶೋಽಧ್ಯಾಯಃ

---

೨೦. ಎಲೈ ವಜ್ರನಾಭಿರಾಜನೇ! ಶ್ರೀಕೃಷ್ಣನ ಪ್ರೇಮದಲ್ಲೇ ಮುಳುಗಿ ಹೋಗಿರುವ ಆ ಅರಿಯದ ಗೋಪ ಗೋಪಿಯರು ಯೋಗಿಗಳಿಗೂ ದುರ್ಲಭನಾದ ಆ ಪರಮಪುರುಷನನ್ನು ಪ್ರತಿನಿತ್ಯವೂ ತಮ್ಮ ಬಳಿಯಲ್ಲೇ ಸಂದರ್ಶಿಸುತ್ತಿರುವರು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತ್ರದಲ್ಲಿ ಶ್ರೀಕೃಷ್ಣನು ಗೋಕುಲವನ್ನು ಬಿಟ್ಟು ಮುಂದೆ ತೆರಳಿದ
ನೆಂಬ ನಲವತ್ತೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಅಷ್ಟಚತ್ವಾರಿಂಶೋಽಧ್ಯಾಯಃ

|| ಗರ್ಗ ಉವಾಚ ||

ಕೃಷ್ಣಾಂ ಸಮುತ್ತೀರ್ಯ ತತಃ ಪ್ರಪಶ್ಯನ್
ಜಗಾಮ ವಾಜೀ ಕುರುಪತ್ತನಂ ಚ |
ಕರೋತಿ ರಾಜ್ಯಂ ನೃಪಚಕ್ರವರ್ತೀ
ವೈಚಿತ್ರವೀರ್ಯೋ ಬಲವಾನ್ ಹಿ ಯತ್ರ || ೧ ||

ತತೋ ದದರ್ಶ ತುರಗಃ ಕೌರವಾಣಾಂ ಪುರಂ ವರಂ |
ನಾನಾಚೋಪವನೈರ್ಯುಕ್ತಂ ತಡಾಗೈಶ್ಚ ಸರೋವರೈಃ || ೨ ||

ನಲವತ್ತೆಂಟನೆಯ ಅಧ್ಯಾಯವು

೧. ಗರ್ಗಮಹರ್ಷಿಯು ಹೇಳತೊಡಗಿದನು—ಬಳಿಕ ಆ ಯಜ್ಞಾಶ್ವವು ಯಮುನಾನದಿಯನ್ನು ದಾಟಿ ಕುರುಚಕ್ರವರ್ತಿಯಾದ ಧೃತರಾಷ್ಟ್ರನು ಆಳುತ್ತಿದ್ದ ರಾಜ್ಯದಲ್ಲಿ ಆಯಾ ಪ್ರದೇಶಗಳನ್ನು ನೋಡುತ್ತಾ ಕೌರವರ ರಾಜಧಾನಿಯ ಬಳಿಗೆ ಬಂದಿತು.

೨-೩. ಅನಂತರ ಆ ಕುದುರೆಯು ಅನೇಕ ಉಪವನಗಳಿಂದಲೂ ಕೃತ್ರಿಮವಾದ ತಟಾಕಗಳಿಂದಲೂ ಸರಸ್ಸುಗಳಿಂದಲೂ ಶೋಭಿಸುತ್ತಾ ಶತ್ರುರಾಜರಾರಿಗೂ ಪ್ರವೇಶಿಸಲು ಸಾಧ್ಯವಿಲ್ಲದಂತೆ ಆಳವಾಗಿ ಹರಿಯುತ್ತಿರುವ

ದುರ್ಗೇಣ ಗಂಗಯಾ ಯುಕ್ತಂ ತಥಾ ಪರಿಖಯಾ ನೃಪ ।
ಸುವರ್ಣರೌಪ್ಯಸದನೈರ್ಮಹಾಶೂರಜನೈರ್ವೃತಂ ॥ ೩ ॥

ಸುಯೋಧನಸ್ತತ್ರ ಪುರಾದ್ವಿನಿರ್ಗತೋ
ಹಂತುಂ ಮೃಗಾನ್ವೈ ವನಗೋಚರಾನ್ನೃಪ ।
ದದರ್ಶ ಯಜ್ಞಸ್ಯ ಹಯಂ ಸಪತ್ರಕಂ
ರಥಸ್ಥಿತೋ ವೀರಜನೈರ್ವಿಭೂಷಿತಃ ॥ ೪ ॥

ದೃಷ್ಟ್ವಾ ತುರಂಗಮಂ ಪ್ರೀತೋ ಸ್ವರಥಾದವತೀರ್ಯ ಚ ।
ಮಾನೀ ದುರ್ಯೋಧನೋ ರಾಜಂಸ್ತ್ವರಂ ಜಗ್ರಾಹ ಲೀಲಯಾ ॥ ೫ ॥

ಕರ್ಣಭೀಷ್ಮಕೃಪದ್ರೋಣಭೂರಿದುಃಶಾಸನಾದಿಭಿಃ ।
ಯುಕ್ತಸ್ತದ್ಭಾಲಪತ್ರಂ ಚ ವಾಚಯಾಮಾಸ ಹರ್ಷಿತಃ ॥ ೬ ॥

ಗಂಗಾನದಿಯನ್ನೇ ಕಂದಕವನ್ನಾಗಿ ಪಡೆದು ಚಿನ್ನದಿಂದಲೂ, ಬೆಳ್ಳಿಯಿಂದಲೂ ನಿರ್ಮಿಸಿದ ಉಪ್ಪರಿಗೆಗಳಿಂದಲೂ ಮಹಾಶೂರರಾದ ಜನರಿಂದಲೂ ನಿಬಿಡವಾಗಿರುವ ಕೌರವರಾಜಧಾನಿಯಾದ ಹಸ್ತಿನಾವತಿಯನ್ನು ಕಂಡಿತು.

೪. ಓ ರಾಜೇಂದ್ರ! ಆ ಸಮಯಕ್ಕೆ ಸರಿಯಾಗಿ ದುರ್ಯೋಧನನು ಬೇಟೆಯಾಡಬೇಕೆಂದು ಬಯಸಿ ಶೂರರಾದ ಪರಿಜನರೊಡನೆ ಕೂಡಿ ರಥವನ್ನೇರಿ ಹೊರಟುಬರುತ್ತಾ ಪಟ್ಟಣದ ಹೊರಗೆ ಯಜ್ಞಾಶ್ವವು ನಿಂತಿರುವುದನ್ನು ನೋಡಿದನು.

೫. ಅಭಿಮಾನಿಶಾಲಿಯಾದ ಆ ದುರ್ಯೋಧನನು ಕುದುರೆಯನ್ನು ಕಾಣುತ್ತಲೇ ಮಹಾ ಸಂತೋಷವನ್ನು ತಾಳಿ ರಥದಿಂದ ಕೆಳಗಿಳಿದು ಲೀಲಾಜಾಲವಾಗಿ ತಟಕ್ಕನೆ ಆ ಕುದುರೆಯನ್ನು ಹಿಡಿದುಕೊಂಡನು.

೬. ಆಗ ಆವನ ಜೊತೆಯಲ್ಲಿ ಕರ್ಣ, ಭೀಷ್ಮ, ಕೃಪ, ದ್ರೋಣ, ಭೂರಿಶ್ರವ, ದುಃಶಾಸನ ಮೊದಲಾದ ಕುರುವೀರರಿದ್ದರು. ಓ ರಾಜೇಂದ್ರ ಬಳಿಕ ಆ ಕುದುರೆಯು ಹಣೆಯಲ್ಲಿ ಕಟ್ಟಿದ್ದ ಪತ್ರಿಕೆಯನ್ನು ಹರ್ಷದಿಂದ ಓದಿದನು.

ಚಂದ್ರವಂಶೇ ಯದುಕುಲ ಉಗ್ರಸೇನೋ ವಿರಾಜತೇ ।
ಇಂದ್ರಾದಯಸ್ಸುರಗಣಾ ಯಸ್ಯಾದೇಶಾನುವರ್ತಿನಃ ॥ ೭ ॥

ಸಹಾಯೋ ಯಸ್ಯ ಭಗವಾನ್ ಶ್ರೀಕೃಷ್ಣೋ ಭಕ್ತಪಾಲಕಃ ।
ಅಸ್ತಿ ವೈ ದ್ವಾರಕಾಪುರ್ಯಾಂ ತದ್ಭಕ್ತ್ಯಾ ನಿವಸನ್ ಹರಿಃ ॥ ೮ ॥

ತದ್ವಾಕ್ಯಾದ್ಧಹಮೇಧಂ ಸ ಉಗ್ರಸೇನೋ ನೃಪೇಶ್ವರಃ ।
ಚಕ್ರವರ್ತೀ ಹಠಾದ್ಯಜ್ಞಂ ಸ್ವಯಶೋಽರ್ಥೀ ಕರೋತಿ ಹಿ ॥ ೯ ॥

ಮೋಚಿತಸ್ತೇನ ತುರಗೋ ಹಯಾನಾಂ ಪ್ರವರಃ ಶುಭಃ ।
ತದ್ರಕ್ಷಕಃ ಕೃಷ್ಣಪೌತ್ರೋಽನಿರುದ್ಧೋ ವೃಕದೈತ್ಯಹಾ ॥ ೧೦ ॥

---

೭. ಅದರಲ್ಲಿ ಈರೀತಿ ಬರೆದಿದ್ದಿತು—ಚಂದ್ರವಂಶೋತ್ಪನ್ನನೂ, ಯದುಕುಲಸಂಜಾತನೂ, ಆದ ಉಗ್ರಸೇನನೆಂಬ ರಾಜನು ವಿರಾಜಿಸುತ್ತಿರುವನು. ಆತನ ಅಪ್ಪಣೆಯನ್ನು ಇಂದ್ರಾದಿ ದೇವತೆಗಳೂ ಸಹ ಮೀರಲಾರದೆ ಅದರಂತೆ ನಡೆಯುತ್ತಿರುವರು.

೮. ಭಕ್ತಜನಪರಿಪಾಲಕನಾದ ಭಗವಾನ್ ಶ್ರೀಕೃಷ್ಣನು ಆ ಉಗ್ರಸೇನನ ಭಕ್ತಿಗೆ ಮೆಚ್ಚಿ ದ್ವಾರಕಾನಗರದಲ್ಲಿಯೇ ವಾಸವಾಗಿರುತ್ತಾ ಅವನಿಗೆ ಬೆಂಬಲವಾಗಿ ನಿಂತು ಇರುವನು.

೯. ಆ ಶ್ರೀಕೃಷ್ಣನ ಮಾತಿನಂತೆಯೇ ಚಕ್ರವರ್ತಿಯಾದ ಉಗ್ರಸೇನನು ಯಶಸ್ಸನ್ನು ಸಂಪಾದಿಸುವ ಸಲುವಾಗಿ ಅಶ್ವಮೇಧಯಾಗವನ್ನು ಮಾಡತೊಡಗಿರುವನು.

೧೦. ಉತ್ತಮ ಲಕ್ಷಣಗಳಿಂದ ಕೂಡಿದ ಈ ಹಯವು ಆ ಉಗ್ರಸೇನನಿಂದ ಬಿಡಲ್ಪಟ್ಟಿರುವುದು. ವೃಕನೆಂಬ ದೈತ್ಯನನ್ನು ಕೊಂದ ಕೃಷ್ಣನ ಮೊಮ್ಮಗನಾದ ಅನಿರುದ್ಧನು ಇದಕ್ಕೆ ಸಂರಕ್ಷಕನಾಗಿ ಬಂದಿರುವನು.

ಗಜಾಶ್ವರಥವೀರಾಣಾಂ ಸೇನಾಸಂಘಸಮನ್ವಿತಃ ।
ರಾಜಾನೋ ಯೇ ಕರಿಷ್ಯಂತಿ ರಾಜ್ಯಂ ಕೌ ಶೂರಮಾನಿನಃ ॥ ೧೧ ॥

ತೇ ಗೃಹ್ಣಂತು ಯಜ್ಞಹಯಂ ಸ್ವಬಲಾತ್ಪತ್ರಶೋಭಿತಂ ।
ತಂ ಮೋಚಯತಿ ಧರ್ಮಾತ್ಮಾ ಗೃಹೀತಂ ಚ ಹಯಂ ನೃಪೈಃ ॥ ೧೨ ॥

ಸ್ವಬಾಹುಬಲವೀರ್ಯೇಣಾನಿರುದ್ಧೋ ಲೀಲಯಾ ಹಠಾತ್ ।
ತಸ್ಯಾನ್ಯಥಾ ಚ ಪದಯೋಃ ಪತಿತ್ವಾ ಯಾಂತು ಧನ್ವಿನಃ ॥ ೧೩ ॥

॥ ಗರ್ಗ ಉವಾಚ ॥

ತತ್ಪತ್ರಂ ವಾಚಯಿತ್ವೈವಂ ಕೌರವಾಸ್ತೇ ತು ಶತ್ರವಃ ।
ಊಚುಃ ಪರಸ್ಪರಂ ಕ್ರುದ್ಧಾ ಮಾನಿನೋ ರಕ್ತಲೋಚನಾಃ ॥ ೧೪ ॥

---

೧೧. ಆವನನ್ನು ಕುದುರೆ, ಆನೆ, ರಥ, ವೀರರಾದ ಭಟರು ಇವರಿಂದ ತುಂಬಿರುವ ಸೈನ್ಯಗಳು ಗುಂಪು ಗುಂಪಾಗಿ ಬೆಂಗಾವಲಾಗಿ ಹಿಂಬಾಲಿಸುತ್ತಿರುವುವು. ಈ ಭೂಮಿಯಲ್ಲಿ ಯಾವ ಯಾವ ರಾಜರು ತಾವೊಬ್ಬರೇ ಶೂರರೆಂದು ಭಾವಿಸಿ ಆಡಳಿತವನ್ನು ನಡೆಸುತ್ತಿರುವರೋ

೧೨. ಅಂತಹ ರಾಜರು ಮಾತ್ರ ಈ ಪತ್ರಿಕೆಯನ್ನು ಕಟ್ಟಿರುವ ಯಜ್ಞಾಶ್ವವನ್ನು ಕಟ್ಟಿಹಾಕಬಹುದು. ಆರೀತಿ ಕಟ್ಟಿಹಾಕಿದರೆ ಅದನ್ನು ಧರ್ಮಾತ್ಮನಾದ ಈ ಅನಿರುದ್ಧನು

೧೩. ತನ್ನ ಬಾಹುಬಲದಿಂದಲೂ, ಸಾಹಸದಿಂದಲೂ, ಲೀಲಾಜಾಲವಾಗಿ ಆ ರಾಜರೊಪ್ಪದಿದ್ದರೂ ಬಿಡದೆ ಬಿಡಿಸಿಕೊಂಡು ಬರುವನು. ಆರೀತಿ ಕೈಮಾಡಲಾಗದ ಬಿಲ್ಲಾಳುಗಳು ಅವನ ಕಾಲ್ಗಳಿಗೆ ಬಿದ್ದು ಶರಣಾಗತರಾಗಬೇಕು.

೧೪. ಓ ರಾಜೇಂದ್ರ! ಈರೀತಿಯಾಗಿ ಬರೆದಿರುವ ಆ ಪತ್ರಿಕೆಯನ್ನು ಓದುತ್ತಲೇ ಯಾದವರಿಗೆ ಶತ್ರುಗಳಾದ ಆ ಗರ್ವಿಷ್ಠ ಕೌರವರು ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವರಾಗಿ ತಮ್ಮ ತಮ್ಮಲ್ಲಿ ಈರೀತಿ ಮಾತನಾಡಿಕೊಂಡರು.

|| ಕೌರವಾ ಊಚುಃ ||

ಅಹೋ ಕಿಂ ಲಿಖಿತಂ ಧೃಷ್ಟೈರ್ಭಾಲಪತ್ರೇ ಹಯಸ್ಯ ಚ |
ನ ಸಂತಿ ಕಿಂ ಹಿ ರಾಜಾನೋ ಯಾದವಾನಾಂ ಚ ಸಂಮುಖೇ || ೧೫ ||

ರಾಜಸೂಯೇ ಪುರಾಸ್ಮಾಭಿರ್ಯಾದವಾ ಯೇ ವಿನಿರ್ಜಿತಾಃ |
ಹಯಮೇಧಂ ಕರಿಷ್ಯಂತಿ ಪುನಸ್ತೇ ಗತಬುದ್ಧಯಃ || ೧೬ ||

ತಸ್ಮಾತ್ಸರ್ವಾನ್ವಿಜೇಷ್ಯಾಮೋ ನ ದಾಸ್ಯಾಮಸ್ತುರಂಗಮಂ |
ಪಶ್ಚಾದ್ವಯಂ ಕರಿಷ್ಯಾಮೋ ಹಯಮೇಧಂ ಕ್ರತೂತ್ತಮಂ || ೧೭ ||

ಕ ಉಗ್ರಸೇನಃ ಕಃ ಕೃಷ್ಣಃ ಹಯರಕ್ಷಾಕರಸ್ತು ಕಃ |
ಯಾದವೈಸ್ಸಹಿತಾ ಹ್ಯೇತೇ ಕಿಂ ಕರಿಷ್ಯಂತಿ ಪೌರುಷಂ || ೧೮ ||

---

೧೫. "ಅಬ್ಬಾ! ಈ ದುಷ್ಟರು ಕುದುರೆಯ ಹಣೆಗೆ ಕಟ್ಟಿರುವ ಈ ಪತ್ರಿಕೆಯಲ್ಲಿ ಏನು ಹೀನಾಯವಾಗಿ ಬರೆದಿರುವರು? ಯಾದವರೆದುರಾಗಿ ನಿಲ್ಲುವ ರಾಜರು ಈ ಭೂಮಂಡಲದಲ್ಲಿ ಯಾರೂ ಇಲ್ಲವೇ?"

೧೬. ಹಿಂದೆ ಇದೇ ಯಾದವರು ನಾವು ರಾಜಸೂಯವಾಡಿದಾಗ ಸೋತುಬಿಟ್ಟದ್ದರು. ಆದರೂ ತಿಳುವಳಿಕೆಯಿಲ್ಲದೆ ಈಗ ತಾವು ಅಶ್ವಮೇಧ ಯಾಗವನ್ನು ಮಾಡಬೇಕೆಂದಿರುವರು.

೧೭. ಆದುದರಿಂದ ಈ ಅವಿವೇಕಿಗಳಾದ ಯಾದವರೆಲ್ಲರನ್ನೂ ಗೆದ್ದು ಬಿಡೋಣ! ಕುದುರೆಯನ್ನು ಎಂದಿಗೂ ಒಪ್ಪಿಸದಿರೋಣ! ಅನಂತರ ನಾವೇ ಯಾಗಶ್ರೇಷ್ಠವಾದ ಆ ಅಶ್ವಮೇಧವನ್ನು ಮಾಡೋಣ.

೧೮. ಆ ಉಗ್ರಸೇನನು ಯಾರು? ಕೃಷ್ಣನು ಯಾರು? ಕುದುರೆಯ ಸಂರಕ್ಷಕನು ಯಾರು? ಇವರು ತಮ್ಮ ಜೊತೆಯುಲ್ಲಿ ಯಾದವರನ್ನೆಲ್ಲಾ ಕರೆದು ಕೊಂಡು ಬಂದರೂ ನಮ್ಮ ಮೇಲೆ ಏನು ಪೌರುಷವನ್ನು ತೋರುವರು?

ಕೃಷ್ಣಾದ್ಯಾ ಯಾದವಾಸ್ಸರ್ವೇ ವಿಹಾಯ ಮಥುರಾಂ ಪುರೀಂ ।
ಗತಾಃ ಸಮುದ್ರಂ ಶರಣಂ ಯುದ್ಧಂ ತ್ಯಕ್ತ್ವಾ ಭಯಾಚ್ಚ ನಃ ॥ ೧೯ ॥
ರಾಜ್ಯಂ ದತ್ತಂ ಪುರಾ ಹ್ಯೇಷಾಮಸ್ಮಾಭಿಶ್ಚ ಕೃಪಾನ್ವಿತೈಃ ।
ಕೃತಘ್ನಾಸ್ತೇ ಚ ಮನ್ಯಂತೇ ಸ್ವಾತ್ಮಾನಂ ಚಕ್ರವರ್ತಿನಂ ॥ ೨೦ ॥
ಪಾಂಡವಾನಾಂ ಚ ಸನ್ಮಾನಾದ್ಯಾದವಾ ನ ಹಿ ಮಾರಿತಾಃ ।
ನಿಷ್ಕಾಸಿತಾಶ್ಚ ತೇಽಸ್ಮಾಭಿಃ ಪಾಂಡವಾ ಶತ್ರವಃ ಕಿಲ ॥ ೨೧ ॥
ಯದೂನದ್ಯ ವಿನಿರ್ಜಿತ್ಯ ಸಂಗ್ರಾಮೇ ಚ ಪಲಾಯಿತಾನ್ ।
ದರ್ಶಯಾಮಶ್ಚಾಹುಕಾಯ ಸಹಸಾ ಚಕ್ರವರ್ತಿತಾಂ ॥ ೨೨ ॥
ಏವಂ ಶ್ರೀಕೃಷ್ಣವಿಮುಖಾ ವಾಚಃ ಸರ್ವೇ ವದಂತಿ ಹಿ ।
ದೃಪ್ತಾಸ್ತೇ ಕೌರವಾ ರಾಜನ್ ಶ್ರಿಯಾ ರಾಜವಿಭೂತಿಭಿಃ ॥ ೨೩ ॥

---

೧೯. ಈ ಕೃಷ್ಣ ಮೊದಲಾದ ಯಾದವರೆಲ್ಲರೂ ನಮ್ಮ ಹೆದರಿಕೆಯಿಂದಲೇ ಯುದ್ಧವನ್ನೂ ಮಾಡಲಾರದೆ ಮಥುರಾಪಟ್ಟಣವನ್ನು ಬಿಟ್ಟು ಸಮುದ್ರಕ್ಕೆ ಓಡಿಹೋಗಿ ಅಲ್ಲಿ ಮನೆಮಾಡಿಕೊಂಡಿರುವರು.

೨೦. ಅಯ್ಯೋ ಪಾಪ! ಎಂದು ನಾವೇ ಇವರ ಮೇಲೆ ಕೃಪೆಯಿಟ್ಟು ಹಿಂದೆ ಇವರಿಗೆ ರಾಜ್ಯವನ್ನು ಕೊಟ್ಟಿದ್ದೆವು. ಆದರೆ ಈ ಕೃತಘ್ನರು ತಾವೇ ಚಕ್ರವರ್ತಿಗಳೆಂದು ಬಗೆದಿರುವರು.

೨೧. ಪಾಂಡವರು ಇವರಿಗೆ ಸನ್ಮಾನವನ್ನು ಮಾಡುತ್ತಿದ್ದರಿಂದೇ ನಾವು ಆಗ ಇವರನ್ನು ಕೊಲ್ಲದೆ ಬಿಟ್ಟೆವು. ಈಗಲಂತೂ ಆ ಪಾಂಡವರು ನಮ್ಮ ವೈರಿಗಳಾಗಿಬಿಟ್ಟುದರಿಂದ ರಾಜ್ಯದಿಂದಾಚೆಗೆ ಹೊರದೂಡಲ್ಪಟ್ಟಿರುವರು.

೨೨. ಹಿಂದೆ ಯುದ್ಧದಲ್ಲಿ ನಿಲ್ಲಲಾರದೆ ಸೋತು ಓಡಿಹೋಗಿದ್ದ ಈ ಯಾದವರನ್ನು ಇಂದು ಸೋಲಿಸಿ ತಟ್ಟನೆ ಆ ಆಹುಕನಿಗೆ (ಉಗ್ರಸೇನನಿಗೆ) ಚಕ್ರವರ್ತಿಗಳು ಯಾರೆಂಬುದನ್ನು ತೋರಿಸೋಣವಂತೆ.

೨೩. ಎಂಬುದಾಗಿ ಆ ಕೌರವರು ಐಶ್ವರ್ಯಮದದಿಂದಲೂ ರಾಜ್ಯವೈಭವದಿಂದಲೂ ಕುರುಡರಾಗಿ ಹಿಂದುಮುಂದರಿಯದೆ ಶ್ರೀಕೃಷ್ಣನನ್ನು ಲಕ್ಷ್ಯಕ್ಕೇ ತಾರದೆ ಮಾತನಾಡಿಕೊಂಡರು.

ತತಶ್ಚ ಜಗೃಹುಸ್ಸರ್ವೇ ನಾನಾಶಸ್ತ್ರಾಣಿ ವೇಗತಃ ।
ಹಯಂ ಪ್ರವೇಶಯಾಮಾಸುಃ ಪುರೇ ತತ್ರ ತು ಸಂಸ್ಥಿತಾಃ ॥ ೨೪ ॥

ಗತೇ ಚ ತುರಗೇ ದೂರಂ ಸಾಂಬಃ ಕೃಷ್ಣೇನ ನೋದಿತಃ ।
ತ್ವರಂ ಕೃಷ್ಣಾಂ ಸಮುತ್ತೀರ್ಯ ಗಂಭೀರಾಂ ಮಾರ್ಗದಾಯಿನೀಂ ॥ ೨೫ ॥

ಅಕ್ಷೌಹಿಣೀಭಿರ್ದಶಭಿಃ ಪೃಷ್ಠತೋ ದಂಶಿತೋ ರುಷಾ ।
ಹಸ್ತಿನಾಪುರಮಕ್ರೂರಯುಯುಧಾನಾದಿಭಿರ್ಯಯೌ ॥ ೨೬ ॥

ಏವಂ ತೇ ಯಾದವಾಸ್ಸರ್ವೇ ಹಸ್ತಿನಾಪುರಸನ್ನಿಧೌ ।
ಆಯಾತಾ ಹಯಹರ್ತೄಂಶ್ಚ ಕೌರವಾನ್ದದೃಶುಃ ಸ್ಥಿತಾನ್ ॥ ೨೭ ॥

ಊಚುಸ್ತೇ ವೀಕ್ಷ್ಯ ಬಲಿನೋ ಲೋಕದ್ವಯಜಿಗೀಷವಃ ।
ತಾನ್ಸರ್ವಾಂಶ್ಚ ತೃಣೀಕೃತ್ಯ ಯಾದವಾಃ ಕೃಷ್ಣದೇವತಾಃ ॥ ೨೮ ॥

---

೨೪. ಆಗವರೆಲ್ಲರೂ ಬೇಗಬೇಗನೆ ನಾನಾವಿಧವಾದ ಆಯುಧಗಳೆಲ್ಲವನ್ನೂ ಧರಿಸುದುದಲ್ಲದೆ ಕುದುರೆಯನ್ನು ಊರೊಳಗೆ ಕಟ್ಟಿಹಾಕಿ ತಾವು ಯುದ್ಧಸನ್ನದ್ಧರಾದರು.

೨೫-೨೬. ಕುದುರೆಯು ಈರೀತಿ ಕಣ್ಮರೆಯಾಗುತ್ತಲೇ ಶ್ರೀಕೃಷ್ಣನಿಂದ ಆಜ್ಞಪ್ತನಾದ ಸಾಂಬನು ಬೇಗನೆ ಕವಚವನ್ನು ತೊಟ್ಟು ಅಕ್ರೂರ, ಯುಯುಧಾನ ಮೊದಲಾದ ಯದುವೀರರೊಡನೆಯೂ, ತನ್ನ ಹಿಂದುಗಡೆ ಬೆಂಗಾವಲಾಗಿ ಬರುವ ಹತ್ತು ಅಕ್ಷೋಹಿಣೀ ಸೇನೆಯೊಡನೆಯೂ ಕಲೆತು ಬಹು ಆಳವಾಗಿದ್ದರೂ ತನಗೋಸ್ಕರ ದಾರಿಬಿಟ್ಟ ಯಮುನಾನದಿಯನ್ನು ದಾಟಿ ಕೋಪದಿಂದ ಹಸ್ತಿನಾವತಿಯಕಡೆಗೆ ಹೊರಟನು.

೨೭. ಈರೀತಿ ಹೊರಟುಬಂದ ಆ ಯಾದವರೆಲ್ಲರೂ ತಮ್ಮ ಯಜ್ಞಾಶ್ವವನ್ನು ಆಪಹರಿಸಿದ ಕೌರವರು ಹಸ್ತಿನಾವತಿಯ ಬಳಿ ನಿಂತಿರುವುದನ್ನು ಕಂಡರು.

೨೮. ಅವರನ್ನು ಕಂಡಕೂಡಲೇ ಕೃಷ್ಣನೇ ಪರದೈವವೆಂದು ನಂಬಿರುವ ಆ ಯಾದವರು ಎರಡು ಲೋಕಗಳನ್ನೂ ಗೆದ್ದುಬಿಡುವೆವೆಂಬ ಉತ್ಸಾಹದಿಂದ ಮೆರೆಯುತ್ತಾ ಬಲಾಢ್ಯರಾದ ಆ ಕುರುವೀರರನ್ನೂ ಲಕ್ಷ್ಯಮಾಡದೆ ಈರೀತಿ ನುಡಿದರು :—

ಅಹೋ ಬಬಂಧ ಕಶ್ಚಾಶ್ವಂ ಕಸ್ಯ ಹೃಷ್ಟಃ ಕೃತಾಂತರಾಟ್ ।
ಪ್ರಾಪ್ಸ್ಯತೇ ಕಸ್ತು ಸಂಗ್ರಾಮೇ ನಾರಾಚೈಃ ಪರಮಾಂ ವ್ಯಥಾಂ ॥ ೨೯ ॥

ಅಹೋ ನೈ ಕಿಂ ನ ಜಾನಂತಿ ವೃಷ್ಣೀಂದ್ರಂ ಚಕ್ರವರ್ತಿನಂ ।
ಉಗ್ರಸೇನಂ ರಾಜರಾಜಂ ದೇವದಾನವವಂದಿತಂ ॥ ೩೦ ॥

ರಾಜಸೂಯಸ್ಯ ಕರ್ತಾರಮದ್ವಿತೀಯಂ ನೃಪೇಶ್ವರಂ ।
ನೃಪಾಃ ಸ್ವಾತ್ಮವಿನಾಶಾಯ ಗೃಹ್ಣಂತಿ ತುರಗಂ ತತಃ ॥ ೩೧ ॥

ಹೇಮಾಂಗದಶ್ಚಂದ್ರನೀಲೋ ಬಕೋ ಭೀಷಣ ಏವ ಚ ।
ಬಲ್ವಲಶ್ಚ ನೃಪಾಸ್ಸರ್ವೇ ರಣೇಽಸ್ಮಾಭಿರ್ವಿನಿರ್ಜಿತಾಃ ॥ ೩೨ ॥

---

೨೯. ಓಹೋ! ಯಾವನು ಈ ಕುದುರೆಯನ್ನು ಕಟ್ಟಿಹಾಕಿರುವನು? ಯಾರ ವಿಷಯದಲ್ಲಿ ಇಂದು ಯಮನು ಉತ್ಸುಕತೆಯನ್ನು ತೋರುತ್ತಿರುವನು? ಯಾವನು ಈದಿನ ಯುದ್ಧದಲ್ಲಿ ನಮ್ಮ ಬಾಣಗಳಿಗೆ ಮರ್ಮಾಂತಕವಾದ ವೇದನೆಯನ್ನು ಪಡೆಯಬೇಕೆಂದು ಆಶಿಸಿರುವನು?

೩೦. ಓಹೋ! ದೇವತೆಗಳಿಂದಲೂ, ದಾನವರಿಂದಲೂ ವಂದಿಸಲ್ಪಡುವವನೂ, ಚಕ್ರವರ್ತಿಯೂ, ವೃಷ್ಣಿಕುಲತಿಲಕನೂ ಆದ ಉಗ್ರಸೇನನನ್ನು ಯಾರೂ ಅರಿಯರೇನು?

೩೧. ಈ ಭೂಮಂಡಲದಲ್ಲಿ ತನಗೆ ಸರಿಸಮಾನರಾರೂ ಇಲ್ಲದಂತಹ ರಾಜಸೂಯಯಾಗಕರ್ತೃವಾದ ಆ ರಾಜರಾಜನನ್ನು ಲಕ್ಷ್ಯಮಾಡದೆ ಯಜ್ಞಾಶ್ವವನ್ನು ಹಿಡಿದು ಕಟ್ಟಿದವರು ತಮಗೆ ವಿನಾಶವನ್ನೇ ಬರಮಾಡಿಕೊಂಡಿರುವರು.

೩೨. ಹೇಮಾಂಗದ, ಇಂದ್ರನೀಲ, ಬಕ, ಭೀಷಣ, ವಲ್ವಲ ಮೊದಲಾದ ಅನೇಕ ರಾಜರು ಯುದ್ಧದಲ್ಲಿ ನಮಗೆದುರಾಗಿ ನಿಲ್ಲಲಾರದೆ ಸೋತು ಹೋಗಿರುವರು ಎಂದರು.

ಇತಿ ಶ್ರುತ್ವಾ ಕೌರವಾಸ್ತೇ ಕ್ರೋಧಪ್ರಸ್ಫುರಿತಾಧರಾಃ ।
ಪ್ರತ್ಯೂಚುಸ್ತಾನ್ಹಿ ಪಶ್ಯಂತಸ್ತಿರಶ್ಚೀನೈಶ್ಚ ಚಕ್ಷುಭಿಃ ॥ ೩೩ ॥

॥ ಕೌರವಾನುಗಾ ಊಚುಃ ॥

ಗೃಹೀತಸ್ತುರಗೋಽಸ್ಮಾಭಿರ್ಯೂಯಂ ಕಿಂ ತು ಕರಿಷ್ಯಥ ।
ಯುಷ್ಮಾನ್ಸರ್ವಾನ್ನಯಿಷ್ಯಾಮಃ ಸಾಯಕೈರ್ಯಮಸಾದನಂ ॥ ೩೪ ॥

ಉಗ್ರಸೇನಃ ಕತಿದಿನೈ ರಾಜ್ಯಂ ಲಬ್ಧ್ವಾ ತು ಕೃಷ್ಣತಃ ।
ಮಾನಂ ಕರೋತಿ ತಂ ಬಧ್ವಾ ರಾಜ್ಯಂ ಕುರ್ಮೋ ವಯಂ ಕಿಲ ॥ ೩೫ ॥

ಅನಿರುದ್ಧಸ್ತು ಕುತ್ರಾಸ್ತೇ ಹ್ಯಸ್ಮಾಕಂ ಚ ಭಯೋದ್ಗತಃ ।
ವದತೈನಂ ಶರೈರ್ಯುದ್ಧೇ ಪೂಜಯಾಮೋ ನ ಸಂಶಯಃ ॥ ೩೬ ॥

---

೩೩. ಈರೀತಿ ನುಡಿದ ಯಾದವವೀರರ ಮಾತುಗಳನ್ನು ಕೇಳುತ್ತಲೇ ಕುರುವೀರರ ತುಟಿಗಳು ಕೋಪದಿಂದ ಅಲುಗತೊಡಗಿದುವು. ಆಗವರು ಯಾದವರನ್ನು ತಿರಸ್ಕಾರದಿಂದ ಕಡೆಯಾಗಿ ಕಾಣುತ್ತಾ ಇಂತೆಂದರು.

೩೪. ನಾವೇ ಕುದುರೆಯನ್ನು ಕಟ್ಟಿಹಾಕಿರುವೆವು. ನೀವೀಗ ಏನು ಮಾಡಬಲ್ಲಿರಿ? ನಿಮ್ಮೆಲ್ಲರನ್ನೂ ನಮ್ಮ ಬಾಣಗಳಿಂದ ಕೂಡಲೇ ಯಮನ ಪಟ್ಟಣಕ್ಕೆ ಕಳುಹಿಸುವೆವು.

೩೫. ಕೃಷ್ಣನ ಬಲದಿಂದಲ್ಲವೇ ಉಗ್ರಸೇನನು ರಾಜ್ಯವನ್ನು ಪಡೆದು ಗೌರವಾನ್ವಿತನಾಗಿರುವುದು? ಇದೂ ಎಷ್ಟು ದಿವಸದಿಂದೀಚೆಗೆ? ಈ ಉಗ್ರ ಸೇನನನ್ನೀಗ ಸೆರೆಹಿಡಿದು ನಾವೇ ರಾಜ್ಯವಾಳುವೆವು.

೩೬. ಹಿಂದೆ ನಮಗೆ ಹೆದರಿಕೊಂಡು ಓಡಿಹೋಗಿದ್ದನಲ್ಲಾ! ಆ ಅನಿ ರುದ್ಧನು ಈಗ ಎಲ್ಲಿರುವನು? ನಾವವನನ್ನು ಬಾಣಗಳಿಂದ ಖಂಡಿತವಾಗಿಯೂ ಪೂಜೆಮಾಡುವೆವೆಂಬ ಸಂಗತಿಯನ್ನು ಅವನಿಗೆ ತಿಳಿಸಿರಿ ಎಂದನು.

॥ ಗರ್ಗ ಉವಾಚ ॥

ಇತಿ ತೇಷಾಂ ವಚಃ ಶ್ರುತ್ವಾ ಯಾದವಾಃ ಕ್ರೋಧಮೂರ್ಛಿತಾಃ ।
ಚಿಕ್ಷಿಪುಃ ಸಾಯಕಾಂಶ್ಚಾಪೈಃ ಕೌರವಾಣಾಂ ಮುಖೇಷು ಚ ॥ ೩೭ ॥

ಕೇಚಿದ್ವಭೂವುರ್ಬಾಣೈಶ್ಚ ಛಿನ್ನಜಿಹ್ವಾಶ್ಚ ಕೌರವಾಃ ।
ಭಗ್ನದಂತಾಶ್ಛಿನ್ನಮುಖಾ ವಮಂತೋ ರುಧಿರಂ ಬಹು ॥ ೩೮ ॥

ದುರ್ಯೋಧನಂ ಛಿನ್ನಮುಖಾ ನಿಹತಾಸ್ತೇ ಯಯುರ್ದ್ರುತಂ ।
ಪೃಷ್ಟಾಸ್ತೇ ಕಥಯಾಮಾಸುರ್ಯಾದವೈಃ ಪ್ರಕೃತಂ ಚ ತತ್ ॥ ೩೯ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ಕೌರವೈಃ ಶ್ಯಾಮಕರ್ಣಗ್ರಹಣಂ ನಾಮಾ-
ಷ್ಟಚತ್ವಾರಿಂಶೋಽಧ್ಯಾಯಃ

---

೩೭. ರಾಜೇಂದ್ರ! ಹೀಗೆಂದು ಆ ಕೌರವರು ನುಡಿಯುತ್ತಲೇ ಯಾದವರಿಗೆ ಕೋಪವುಕ್ಕೇರಿತು. ಕೂಡಲೆ ಅವರು ಬಿಲ್ಲುಗಳಲ್ಲಿ ಬಾಣಗಳನ್ನು ಹೂಡಿ ಆ ಕೌರವರ ಬಾಯ್ಗಳಿಗೆ ಗುರಿಯಿಟ್ಟು ಹೊಡೆದರು.

೩೮. ಕೂಡಲೇ ಆ ಕೌರವರಲ್ಲಿ ಕೆಲವರಿಗೆ ನಾಲಗೆಗಳು ಕತ್ತರಿಸಿಹೋದುವು. ಕೆಲವರಿಗೆ ಹಲ್ಲುಗಳು ಮುರಿದುಹೋದುವು. ಕೆಲವರಿಗೆ ಮುಖವು ಕಿತ್ತುಹೋಯಿತು, ಕೆಲವರಿಗೆ ರಕ್ತರಕ್ತವೇ ವಾಂತಿಯಾಗತೊಡಗಿತು.

೩೯. ಈರೀತಿ ಮುಖವು ಕಿತ್ತು ಭವಣೆಹೊಂದಿದ ಕೌರವರು ಬೇಗನೆ ದುರ್ಯೋಧನನ ಬಳಿಗೆ ಓಡಿಹೋಗಿ, ಅವನಿದೇನೆಂದು ಕೇಳಲು ಯಾದವರು ಮಾಡಿದ ಕೃತ್ಯವನ್ನು ತಿಳಿಸಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತದಲ್ಲಿ ಕೌರವರ ಶ್ಯಾಮಕರ್ಣ (ಯಜ್ಞಾಶ್ವ) ಗ್ರಹಣವೆಂಬ
ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

—

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕೋನಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ದುರ್ಯೋಧನಃ ಸ್ವವೀರಾಣಾಂ ಭೀಷ್ಮದ್ರೋಣಕೃಪಾದಿಭಿಃ ।
ದೃಷ್ಟ್ವಾ ಮುಖಾನಿ ಭಗ್ನಾನಿ ಕೋಪಂ ಕೃತ್ವೇದಮಬ್ರವೀತ್ ॥ ೧ ॥

ಅಹೋ ವೈ ಯಾದವಾಸ್ತುಚ್ಛಾ ಆಗತಾ ಮೃತ್ಯುಸಂಮುಖೇ ।
ಕಿಂ ನ ಜಾನಂತಿ ತೇ ಮೂಢಾ ಧೃತರಾಷ್ಟ್ರಬಲಂ ಮಹತ್ ॥ ೨ ॥

ನಲವತ್ತೊಂಭತ್ತನೆಯ ಅಧ್ಯಾಯವು

೧. ರಾಜೇಂದ್ರ! ಕೇಳು, ಈರೀತಿ ತನ್ನ ಕಡೆಯ ವೀರರು ಮುಖವೆಲ್ಲ ಮುರಿದುಕೊಂಡು ಬಂದಿರುವುದನ್ನು ಭೀಷ್ಮ, ದ್ರೋಣ, ಕೃಪ ಮೊದಲಾದ ವೀರಾಗ್ರಣಿಗಳೊಡನೆ ಕುಳಿತಿದ್ದ ದುರ್ಯೋಧನನು ಕಾಣುತ್ತಲೇ ಬಹಳ ಕೋಪವನ್ನು ತಾಳಿ ಈರೀತಿ ನುಡಿದನು-

೨. ಅಬ್ಬಾ! ಏನಾಶ್ಚರ್ಯ! ಈ ನೀಚರಾದ ಯಾದವರು ಮೃತ್ಯುಮುಖಕ್ಕೆ ತಾವಾಗಿ ಪ್ರವೇಶಿಸಲು ಬಂದಿರುವರು. ಈ ಬುದ್ಧಿಹೀನರಿಗೆ ಬಲಾಢ್ಯವಾದ ಧೃತರಾಷ್ಟ್ರನ ಅಪಾರ ಸೇನೆಯು ಇರುವುದು ಗೊತ್ತಿಲ್ಲವೇ?

ಇತ್ಯುಕ್ತ್ವಾ ಪ್ರೇಷಯಾಮಾಸುಃ ಸ್ವಾಂ ಸೇನಾಂ ಚತುರಂಗಿಣೀಂ ।
ಗಜಾಶ್ವರಥವೀರೈಶ್ಚ ಯುಕ್ತಾಂ ಯುದ್ಧೇ ಚ ಯಾದವಾನ್ ॥ ೩ ॥

ಸಾ ಚಚಾಲ ಮಹಾಸೇನಾ ಕಂಪಯಂತೀ ಮಹೀತಲಂ ।
ಅಕ್ಷೌಹಿಣೀಭಿರ್ದಶಭಿಸ್ತ್ರಾಸಯಂತೀ ಬಲಾದ್ರಿಪೂನ್ ॥ ೪ ॥

ಆಯಾಂತೀಂ ತಾಂ ತತೋ ದೃಷ್ಟ್ವಾ ಸಾಂಬೋ ಜಾಂಬವತೀಸುತಃ ।
ಸ್ವಾಂ ಸೇನಾಂ ನೋದಯಾಮಾಸ ಹರ್ಷಾದ್ವೀರೈರ್ವಿಭೂಷಿತಃ ॥ ೫ ॥

ತತಶ್ಚ ಕೌರವಾಸ್ಸರ್ವೇ ರಕ್ಷಣಾರ್ಥಂ ತು ಸ್ವಾತ್ಮನಃ ।
ಕ್ರೌಂಚವ್ಯೂಹಂ ವಿನಿರ್ಮಾಯ ತತ್ರ ಸರ್ವೇ ಹಿ ಸಂಸ್ಥಿತಾಃ ॥ ೬ ॥

---

೩. ಹೀಗೆಂದು ನುಡಿದು ಆನೆ, ಕುದುರೆ, ತೇರು ಕಾಲಾಳುಗಳೆಂಬ ಚತುರಂಗ ಸಮೇತವಾದ ಸೇನೆಯನ್ನು ಯದುವೀರರ ಮೇಲೆ ಸೆಣಸಹೋಗುವಂತೆ ಕಳಿಸಿದನು.

೪. ಹತ್ತು ಅಕ್ಷೋಹಿಣಿಗಳಿಂದ ಕೂಡಿದ ಆ ಭಾರಿ ಸೇನೆಯು ಶತ್ರುಗಳಿಗೆ ಎದೆಯು ನಡುಕವಾಗುವಂತೆ ಭೂಮಿಯನ್ನು ನಡುಗಿಸುತ್ತಾ ಹೊರಟಿತು.

೫. ಈರೀತಿ ಕುರುಸೇನೆಯು ಬರುತ್ತಿರುವುದನ್ನು ಕಂಡು ಜಾಂಬವತಿಯ ಪುತ್ರನಾದ ಸಾಂಬನು ಮಹಾಸಂತೋಷವನ್ನು ತಾಳಿ ತನ್ನ ಕಡೆಯ ವೀರರೊಡನೆ ಕಲೆತು ತನ್ನ ಸೇನೆಯನ್ನು ಅದಕ್ಕೆ ಎದುರಾಗುವಂತೆ ಅಪ್ಪಣೆಯಿತ್ತನು.

೬. ಬಳಿಕ ಆ ಕೌರವರು ತಮ್ಮ ಸಂರಕ್ಷಣೆಗಾಗಿ ಕ್ರೌಂಚಾಕಾರವಾಗಿ ಸೇನೆಯನ್ನು ನಿಲ್ಲಿಸಿ ಎಲ್ಲರೂ ಅದರೊಳಗೆ ಸುರಕ್ಷಿತರಾಗಿ ನಿಂತರು.

ಆಸೀತ್ತಸ್ಯ ಮುಖೇ ಭೀಷ್ಮೋ ಗ್ರೀವಾಯಾಂ ದ್ರೋಣ ಏವ ಚ ।
ಪಕ್ಷಯೋಃ ಕರ್ಣಶಕುನೀ ತಸ್ಯ ಪುಚ್ಛೇ ಸುಯೋಧನಃ ॥ ೭ ॥

ಮಧ್ಯೇ ತಸ್ಯ ಮಹಾಸೇನಾ ಚತುರಂಗಬಲೈರ್ಯುತಾ ।
ಕೃತಂ ಹಿ ದದೃಶುರ್ವ್ಯೂಹಂ ಕ್ರೌಂಚಂ ವೈ ಶತ್ರುದುರ್ಜಯಂ ॥ ೮ ॥

ಕ್ರೌಂಚವ್ಯೂಹಂ ತತ್ರ ದೃಷ್ಟ್ವಾ ಯಾದವೋ ಯುದ್ಧಶಂಕಿತಾಃ ।
ಊಚುರ್ಹೇ ಸಾಂಬ ತ್ವಮಪಿ ಕುರು ವ್ಯೂಹಂ ಪ್ರಯತ್ನತಃ ॥ ೯ ॥

ಇತಿ ತೇಷಾಂ ವಚಃ ಶ್ರುತ್ವಾ ಸಾಂಬಃ ಸಂಗ್ರಾಮಕೋವಿದಃ ।
ನ ಚಕಾರ ರಣೇ ವ್ಯೂಹಂ ಕೌರವಾನಗಣಯ್ಯ ಚ ॥ ೧೦ ॥

---

೭. ಆ ಕ್ರೌಂಚವ್ಯೂಹದ ಮುಖಭಾಗದಲ್ಲಿ ಭೀಷ್ಮನು ನಿಂತನು. ಕಂಠ ಪ್ರದೇಶದಲ್ಲಿ ದ್ರೋಣಾಚಾರ್ಯರು ನಿಂತರು, ರೆಕ್ಕೆಗಳೆರಡರಲ್ಲಿ ಒಂದು ಕಡೆ ಕರ್ಣನೂ, ಮತ್ತೊಂದು ಕಡೆ ಶಕುನಿಯೂ ನಿಂತರು. ಪುಚ್ಛದ ಭಾಗದಲ್ಲಿ ದುರ್ಯೋಧನನು ನಿಂತನು.

೮. ಈ ವೀರಾಗ್ರಣಿಗಳ ನಡುವೆ ಚತುರಂಗಸಮೇತವಾದ ಆ ಮಹಾ ಸೇನೆಯು ಸುರಕ್ಷಿತವಾಗಿ ನಿಂತಿತು. ಈರೀತಿ ಶತ್ರುಗಳಾರಿಗೂ ಗೆಲ್ಲಲು ಸಾಧ್ಯ ವಿಲ್ಲದಂತೆ ಕ್ರೌಂಚವ್ಯೂಹವು ನಿರ್ಮಿತವಾದುದನ್ನು ಆ ಯದುವೀರರು ಕಂಡರು.

೯. ಆಗವರು ಯುದ್ಧದಲ್ಲಿ ಏನಾಗುವುದೋ ಎಂಬ ಶಂಕೆಗೊಳಗಾಗಿ ಸಾಂಬನನ್ನು ಕುರಿತು ನೀನು ಕೂಡ ನಮ್ಮ ಸೇನೆಯನ್ನು ವ್ಯೂಹಾಕಾರವಾಗಿ ನಿಲ್ಲಿಸೆಂದು ಹೇಳಿದರು.

೧೦. ಅವರ ಮಾತನ್ನು ಕೇಳುತ್ತಲೇ ಯುದ್ಧವಿಶಾರದನಾದ ಆ ಸಾಂಬನು ಆ ಕೌರವರನ್ನು ಲಕ್ಷ್ಯಕ್ಕೆ ತಾರದೆ ತನ್ನ ಸೇನೆಯನ್ನು ಯಾವೊಂದು ವ್ಯೂಹಾಕಾರವಾಗಿಯೂ ನಿಲ್ಲಿಸಲಿಲ್ಲ.

ಯುದ್ಧಂ ಕರ್ತುಂ ಪ್ರಚಲಿತೇ ತೇ ದ್ವೇ ಸೇನೇ ಯದಾ ನೃಪ ।
ತದಾ ಮುಹೂರ್ತಪರ್ಯಂತಂ ಚಕಂಪೇ ವಸುಧಾ ಭೃಶಂ ॥ ೧೧ ॥

ಜಘ್ನುರ್ಭೇರ್ಯಶ್ಚ ಶಂಖಾಶ್ಚ ಹ್ಯುಭಯೋಃ ಸೇನಯೋಸ್ತದಾ ।
ಟಂಕಾರಾಶ್ಚೈವ ಚಾಪಾನಾಂ ಶ್ರೂಯಂತೇ ತತ್ರ ತತ್ರ ಹ ॥ ೧೨ ॥

ಗರ್ಜಂತಿ ದಂತಿನಸ್ತತ್ರ ಹಯಾ ಹೇಷಂತಿ ತತ್ರ ಹ ।
ಶಬ್ದಂ ಶೂರಾಃ ಪ್ರಕುರ್ವಂತಿ ನದಂತಿ ರಥನೇಮಯಃ ॥ ೧೩ ॥

ಸೈನ್ಯಪಾದರಜೋಭಿಶ್ಚ ಹ್ಯಂಧಕಾರೋsಭವದ್ರಣೇ ।
ಮಲಿನಂ ಗಗನಂ ಭೂತ್ವಾ ಸೂರ್ಯಸ್ತತ್ರ ನ ದೃಶ್ಯತೇ ॥ ೧೪ ॥

---

೧೧. ಓ ರಾಜೇಂದ್ರ ! ಯಾವಾಗ ಆ ಎರಡು ಸೇನೆಗಳೂ ಹೋರಾಡಲು ಮೊದಲುಮಾಡಿದುವೋ ಆಗ ಭೂಮಿಯು ಒಂದು ಮುಹೂರ್ತಕಾಲದವರೆಗೆ ಗಡಗಡನೆ ನಡುಗಿಹೋಯಿತು.

೧೨. ಆಗ ಎರಡು ಕಡೆಯ ಸೇನೆಗಳವರೂ ಭೇರಿಗಳನ್ನೂ ಬಾರಿಸಿದರು; ಶಂಖಗಳನ್ನೂ ಊದಿದರು; ಆ ಸೇನೆಯಲ್ಲಿ ಎಲ್ಲಿ ನೋಡಿದರೂ ಬಿಲ್ಲಿನ ಹೆದೆಯ ಝೇಂಕಾರವು ಕೇಳಿಸತೊಡಗಿತು.

೧೩. ಆನೆಗಳು ಘೀಂಕಾರಮಾಡತೊಡಗಿದುವು. ಕುದುರೆಗಳು ಕೆನೆಯ ಹತ್ತಿದವು, ಶೂರರು ವೀರನಾದಗಳನ್ನು ಮಾಡತೊಡಗಿದರು, ರಥಚಕ್ರಗಳು ಕಿರ್ರನೆ ಮೊರೆಯತೊಡಗಿದುವು.

೧೪. ಆ ಸಮಯದಲ್ಲಿ ಪದಾತಿಗಳ ಕಾಲುಗಳಿಂದೆದ್ದ ಧೂಳು ಮುಸುಕಿಕೊಂಡು ಕತ್ತಲಾಯಿತು. ಆ ಧೂಳಿನಿಂದ ಆಕಾಶವೆಲ್ಲವೂ ಮಂಕು ಕವಿಯಿತಲ್ಲದೆ ಸೂರ್ಯನೂ ಕಣ್ಣಿಗೆ ಕಾಣದಂತಾದನು.

ಉಭಯೋಃ ಸೇನಯೋರ್ಯುದ್ಧಂ ತತಃ ಸಮಭವದ್ಭೃಶಂ ।
ಬಾಣೈರ್ಗದಾಭಿಃ ಪರಿಘೈಃ ಶತಘ್ನೀಭಿಶ್ಚ ಶಕ್ತಿಭಿಃ ॥ ೧೫ ॥

ಪರಸ್ಪರಂ ತೇ ಯುಯುಧುರಾಹವೇ ನಿಶಿತೈಃ ಶರೈಃ ।
ಗಜಾ ಗಜೈ ರಥಾ ರಥೈ ರ್ಹಯಾ ಹಯೈರ್ನರಾ ನರೈಃ ॥ ೧೬ ॥

ಶರಾಂಧಕಾರೇ ಸಂಜಾತೇ ಸಾಂಬೋ ಬಾಣೈರ್ಧನುರ್ಧರಃ ।
ರಣೇ ಭೀಷ್ಮೇಣ ಯುಯುಧೇಽಕ್ರೂರಃ ಕರ್ಣೇನ ತತ್ರ ಚ ॥ ೧೭ ॥

ಯುಯುಧಾನಃ ಶಕುನಿನಾ ದ್ರೋಣಾಚಾರ್ಯೇಣ ಸಾರಣಃ ।
ದುರ್ಯೋಧನೇನ ಸಂಗ್ರಾಮೇ ಸಾತ್ಯಕಿಃ ಶೀಘ್ರಮೇವ ಚ ॥ ೧೮ ॥

---

೧೫. ಅನಂತರ ಆ ಕುರುಯಾದವಸೇನೆಗಳಿಗೆ ಬಾಣಗಳಿಂದಲೂ, ಗದೆಗಳಿಂದಲೂ, ಪರಿಘಗಳಿಂದಲೂ, ಶತಘ್ನಿಗಳಿಂದಲೂ, ಶಕ್ತಿಗಳಿಂದಲೂ ಮಹತ್ತರವಾದ ಯುದ್ಧವು ಆರಂಭವಾಯಿತು.

೧೬. ಆಗಾಯುದ್ಧದಲ್ಲಿ ಪರಸ್ಪರ ಬಾಣಗಳಿಂದ ಹೋರಾಡಿದುದಲ್ಲದೆ, ಆನೆಗಳು ಆನೆಗಳೊಡನೆಯೂ, ತೇರುಗಳು ತೇರುಗಳೊಂದಿಗೂ, ಕುದುರೆಗಳು ಕುದುರೆಗಳೊಡನೆಯೂ, ಕಾಲಾಳುಗಳು ಕಾಲಾಳುಗಳೊಂದಿಗೂ ಬಲವಾಗಿ ಹೋರಾಡಿದರು.

೧೭. ಆಗ ವೀರರ ಬಾಣವರ್ಷದಿಂದ ಸೂರ್ಯನು ಕಾಣದಂತಾಗಿ ಕತ್ತಲು ಮುಸುಕಿಕೊಂಡಿತು. ಆಗ ಧನುರ್ಧಾರಿಯಾದ ಸಾಂಬನು ಭೀಷ್ಮನೊಂದಿಗೂ, ಅಕ್ರೂರನು ಕರ್ಣನೊಂದಿಗೂ ಬಾಣಗಳಿಂದ ಹೋರಾಡಿದರು.

೧೮. ಅದೇ ರೀತಿ ಯುಯುಧಾನನು ಶಕುನಿಯೊಡನೆಯೂ, ಸಾರಣನು ದ್ರೋಣಾಚಾರ್ಯನೊಂದಿಗೂ ಸಾತ್ಯಕಿಯು ದುರ್ಯೋಧನನೊಡನೆಯೂ ಸೆಣಸ ತೊಡಗಿದರು.

ಬಲೀ ದುಃಶಾಸನೇನಾಪಿ ಕೃತವರ್ಮಾ ತು ಭೂರಿಣಾ |
ಏವಂ ಪರಸ್ಪರಂ ಹ್ಯಾಸೀತ್ಸಂಗ್ರಾಮೋ ಭಯಕಾರಕಃ || ೧೯ ||

ತತಃ ಸಾಂಬಸ್ತು ಸಂಕ್ರುದ್ಧಃ ಸಜ್ಜಂ ಕೃತ್ವಾ ಧನುರ್ದೃಢಂ |
ಟಂಕಾರಯಾಮಾಸ ತದಾ ಶೂರಾಣಾಂ ಕಂಪಯನ್ ಹೃದಿ || ೨೦ ||

ಶ್ರೀಕೃಷ್ಣಂ ಪ್ರಥಮಂ ನತ್ವಾ ಮುಮೋಚ ಸಾಯಕಾನ್ದಶ |
ತಾನಾಗತಾಞ್ಛರಾನ್ ಭೀಷ್ಮಶ್ಚಿಚ್ಛೇದ ಸ್ವಶರೈರಪಿ || ೨೧ ||

ರಣೇ ಸಾಂಬಃ ಪುನಸ್ತಸ್ಯ ಕವಚೇ ಸಾಯಕಾನ್ ದಶ |
ನಿಚಖಾನ ಸ್ವರ್ಣಮಯಾನ್ನಾದಂ ಕೃತ್ವಾ ತು ಸಿಂಹವತ್ || ೨೨ ||

---

೧೯. ಅದರಂತೆ ಬಲಿಯೆಂಬ ಯದುವೀರನು ದುಃಶಾಸನನೊಡನೆಯೂ ಕೃತವರ್ಮನು ಭೂರಿಶ್ರವನೊಂದಿಗೂ ಕಾಳಗವಾಡಿದರು. ಈ ರೀತಿಯಾಗಿ ಆ ಯುದ್ಧವು ಎಲ್ಲರಿಗೂ ಭಯವನ್ನು ಹುಟ್ಟಿಸುವಂತೆ ಜೋರಾಗಿ ನಡೆಯಿತು.

೨೦. ಅನಂತರ ಕುಪಿತನಾದ ಸಾಂಬನು ಶೂರರ ಹೃದಯವೂ ನಡುಗಿ ಹೋಗುವಂತೆ ಬಿಲ್ಲನ್ನು ಬಲವಾಗಿ ಹೆದೆಯೇರಿಸಿ ಝೇಂಕಾರ (ಟಂಕಾರ) ಮಾಡಿದನು.

೨೧. ಬಳಿಕ ಮೊದಲು ಹೃದಯದಲ್ಲಿ ಶ್ರೀಕೃಷ್ಣನಿಗೆ ನಮಸ್ಕಾರಮಾಡಿ ನಂತರ ಹತ್ತು ಬಾಣಗಳನ್ನು ತೆಗೆದುಕೊಂಡು ಭೀಷ್ಮನ ಮೇಲೆ ಬಿಟ್ಟನು. ಆ ಭೀಷ್ಮನು ಅವುಗಳು ಇನ್ನೂ ಬರುತ್ತಿರುವಂತೆಯೇ ತನ್ನ ಬಾಣಗಳಿಂದ ಕತ್ತರಿಸಿ ಕೆಡಹಿದನು.

೨೨. ಅದನ್ನು ಕಂಡು ಕುಪಿತನಾದ ಸಾಂಬನು ಮತ್ತೆ ಪೂರ್ಣಮಯವಾದ ಹತ್ತು ಬಾಣಗಳನ್ನು ತೆಗೆದುಕೊಂಡು ಸಿಂಹನಾದವನ್ನು ಮಾಡುತ್ತಾ ಭೀಷ್ಮಾಚಾರ್ಯನ ಕವಚದಲ್ಲಿ ನಾಟಿಕೊಳ್ಳುವಂತೆ ಹೊಡೆದನು,

ಚತುರ್ಭಿಸ್ಸಾಯಕೈಸ್ತಸ್ಯ ನಿಜಘ್ನೇ ಚತುರೋ ಹಯಾನ್ ।
ಚಿಚ್ಛೇದ ಬಾಣೈರ್ದಶಭಿಸ್ತತ್ಕೋದಂಡಂ ಗುಣಾನ್ವಿತಂ ॥ ೨೩ ॥

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಉತ್ಥಾಯ ಭೀಷ್ಮಃ ಸಹಸಾ ಗದಾಂ ಜಗ್ರಾಹ ರೋಷತಃ ॥ ೨೪ ॥

ಸಾಂಬಃ ಪ್ರಾಹ ತ್ವಯಾ ಸಾರ್ಧಂ ಕಥಂ ಯುದ್ಧಂ ಕರೋಮ್ಯಹಂ ।
ಪದಾತಿನಾ ರಥಂ ಚಾನ್ಯಂ ತುಭ್ಯಂ ದಾಸ್ಯಾಮಿ ಸಂಯುಗೇ ॥ ೨೫ ॥

ಸಶಸ್ತ್ರಂ ಸ್ಯಂದನಂ ಯುದ್ಧೇ ತ್ವಂ ಗೃಹಾಣ ಕುರೂದ್ವಹ ।
ಜಯ ಮಾಂ ನಿಸ್ತ್ರಪಂ ಮೂಢಂ ವೃದ್ಧಸ್ತ್ವಂ ಪೂಜ್ಯ ಏವ ಚ ॥ ೨೬ ॥

---

೨೩. ಮತ್ತೆ ನಾಲ್ಕು ಬಾಣಗಳಿಂದ ಆ ಭೀಷ್ಮನ ನಾಲ್ಕು ಕುದುರೆಗಳನ್ನೂ ಕೊಂದುದಲ್ಲದೆ ಹತ್ತು ಬಾಣಗಳಿಂದ ಅವನ ಬಿಲ್ಲನ್ನು ಹೆದೆಯ ಸಮೇತವಾಗಿ ಕತ್ತರಿಸಿಬಿಟ್ಟನು.

೨೪. ಈ ರೀತಿಯಾಗಿ ತನ್ನ ಬಿಲ್ಲು ಕತ್ತರಿಸಿ ರಥವು ಮುರಿದುಹೋಗಿ ಕುದುರೆಗಳೂ ಸಾರಥಿಯೂ ಸತ್ತುಹೋದುದನ್ನು ಕಂಡು ಕುಪಿತನಾದ ಭೀಷ್ಮನು ತಟ್ಟನೆದ್ದು ಗದೆಯನ್ನು ಹಿಡಿದು ಮುಂದೆ ಬಂದನು.

೨೫ ಆಗ ಸಾಂಬನು ಭೀಷ್ಮನನ್ನು ಕುರಿತು ಪಾದಚಾರಿಯಾದ ನಿನ್ನೊಂದಿಗೆ ಹೇಗೆ ಯುದ್ಧವನ್ನು ಮಾಡಲಿ? ನಿನಗೆ ಬೇರೆಂದು ರಥವನ್ನು ತರಿಸಿಕೊಡುವೆನು.

೨೬. ಓ ಕುರುಕುಲಶ್ರೇಷ್ಠ! ತರುವಾಯ ಆಯುಧಗಳಿಂದ ಸಜ್ಜಿತವಾದ ಆ ರಥವನ್ನೇರಿ ಕುಳಿತು, ವೃದ್ಧನೂ ಪೂಜ್ಯನೂ ಆದ ನಿನ್ನೊಡನೆ ನಾಚಿಕೆಯಿಲ್ಲದೆ ಯುದ್ಧಮಾಡುತ್ತಿರುವ ಮಂದಬುದ್ಧಿಯಾದ ನನ್ನನ್ನು ಗೆಲ್ಲುವೆಯಂತೆ.

ಸ ಉವಾಚ ತತಃ ಸಾಂಬಂ ಕ್ರೋಧಾತ್ಪ್ರಸ್ಫುರಿತಾಧರಃ |
ದಂತಾನ್ದಂತೈರ್ಲಿಹನ್ನೋಷ್ಠಂ ಜಿಹ್ವಯಾ ರಕ್ತಲೋಚನಃ || ೨೭ ||

ತ್ವದ್ದತ್ತೇ ಸ್ಯಂದನೇ ಸ್ಥಿತ್ವಾ ಯದಾ ಯುದ್ಧಂ ಕರೋಮ್ಯಹಂ |
ತದಾ ಭವತಿ ಮೇಽಕೀರ್ತಿಃ ಪಾಪಂ ನಿರಯಮೇವ ಚ || ೨೮ ||

ಪ್ರತಿಗ್ರಹಪರಾ ವಿಪ್ರಾ ದಾತಾರಶ್ಚ ವಯಂ ಸ್ಮೃತಾಃ |
ದತ್ತಂ ರಾಜ್ಯಂ ಯದುಭ್ಯಶ್ಚ ಪುರಾಸ್ಮಾಭಿಃ ಕೃಪಾಲುಭಿಃ || ೨೯ ||

ಶ್ರುತ್ವಾ ತದ್ವಚನಂ ಸಾಂಬಃ ಪ್ರತ್ಯುವಾಚ ರುಷಾನ್ವಿತಃ |
ಭಯಾದ್ರಾಜ್ಯಂ ಪ್ರದಾಸ್ಯಂತಿ ರಾಜಾನೋ ಮಂಡಲೇಶ್ವರಾಃ || ೩೦ ||

---

೨೭. ಎಂದು ನುಡಿಯಲು ಆ ಭೀಷ್ಮನು ಮಿತಿಮೀರಿದ ಕೋಪದಿಂದ ತುಟಿಗಳು ಅಲುಗುತ್ತಿರಲು ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ ನಾಲಿಗೆ ಯಿಂದ ತುಟಿಗಳನ್ನು ಸವರಿಕೊಳ್ಳುತ್ತಾ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಆ ಸಾಂಬನನ್ನು ಕುರಿತು,

೨೮. ನೀನಿತ್ತ ತೇರಿನಲ್ಲಿ ಕುಳಿತು ನಾನು ಯುದ್ಧಮಾಡಿದ್ದೇ ಆದರೆ ನನಗೆ ಅಪಕೀರ್ತಿಯುಂಟಾಗುವುದಲ್ಲದೆ ಮಹಾಪಾಪವೂ ಅದರಿಂದ ನರಕವೂ ಸಂಘಟಿಸುವುದು.

೨೯. ವಿಪ್ರರೊಬ್ಬರೇ ಕೊಟ್ಟ ವಸ್ತುವನ್ನು ಪ್ರತಿಗ್ರಹಿಸತಕ್ಕವರು. ನಾವು ದಾತೃಗಳೆನಿಸಿಕೊಂಡಿರುವೆವು. ಹಿಂದೆ ನಾವು ನಿಮ್ಮ ಮೇಲೆ ಕನಿಕರ ವಿಟ್ಟು ರಾಜ್ಯವನ್ನು ಇತ್ತಿರುವೆವೆಂಬುದು ತಿಳಿಯದೇ ? ಎಂದನು.

೩೦-೩೧. ಈ ಮಾತನ್ನು ಕೇಳಿ ಸಾಂಬನು ಭೂಮಂಡಲವೆಲ್ಲವನ್ನೂ ಆಳತಕ್ಕಂತಹ ಸಮರ್ಥನಾದ ಚಕ್ರವರ್ತಿಯೊಬ್ಬನಿರುವುದನ್ನು ಕಂಡಿದ್ದೇ ಆದರೆ ಮಾಂಡಲಿಕರಾದ ಸಣ್ಣ ಪುಟ್ಟ ರಾಜರು ಹೆದರಿಕೆಯಿಂದ ತಮ್ಮ ರಾಜ್ಯವನ್ನು

ನಿರೀಕ್ಷ್ಯ ಭೂಮೌ ಶಾಸ್ತಾರಂ ಸಂಸ್ಥಿತಂ ಚಕ್ರವರ್ತಿನಂ ।
ಇತ್ಯೇವಂ ವಾಕ್ಯಮಾಕರ್ಣ್ಯ ಭೀಷ್ಮಃ ಶೂರಶಿರೋಮಣಿಃ ॥ ೩೧ ॥

ಜಘಾನ ಗದಯಾ ಗುರ್ವ್ಯಾ ಸಾಂಬವಕ್ಷಃಸ್ಥಲೇ ನೃಪ ।
ಗದಾಪ್ರಹಾರವ್ಯಥಿತಃ ಸಾಂಬಃ ಸಂಮೂರ್ಛಿತೋಽಭವತ್ ॥ ೩೨ ॥

ಸಾರಥಿಸ್ತಂ ರಥೇ ಕೃತ್ವಾಪೋವಾಹ ಶಂಕಿತೋ ರಣಾತ್ ।
ಕೋಲಾಹಲಸ್ತದೈವಾಸೀದ್ಯದುಸೈನ್ಯೇ ನೃಪೇಶ್ವರ ॥ ೩೩ ॥

ಭೀಷ್ಮೋಽನ್ಯಂ ರಥಮಾರುಹ್ಯ ದಂಶಿತಃ ಸ ಶರಾಸನಃ ।
ಯಯೌ ಸುಯೋಧನಂ ಶೀಘ್ರಂ ಯಾದವಾನ್ಮಾರಯನ್ಪಥಿ ॥ ೩೪ ॥

ಕೊಟ್ಟೀ ಕೊಡುವರು ಎಂದು ಮರುನುಡಿದನು. ಹೀಗೆ ಅವನಾಡಿದ ಮಾತುಗಳನ್ನು ಕೇಳಿ ಶೂರಶಿಖಾಮಣಿಯಾದ ಭೀಷ್ಮನು ಕೈಲಿಹಿಡಿದಿದ್ದ

೩೨. ಭಾರಿಯಾದ ಗದೆಯಿಂದ ಸಾಂಬನ ಎದೆಯಮೇಲೆ ಬೀಸಿ ಹೊಡೆದನು. ಆ ಏಟನ್ನು ತಡೆಯಲಾರದೆ ಸಾಂಬನು ಮೂರ್ಛೆಹೊಂದಿ ಬಿದ್ದುಬಿಟ್ಟನು.

೩೩. ಆಗ ಸಾಂಬನ ಸಾರಥಿಯು ಇನ್ನೇನಾಗುವುದೋ ಎಂಬ ಹೆದರಿಕೆಯಿಂದ ತನ್ನ ಸ್ವಾಮಿಯನ್ನು ಆ ಯುದ್ಧರಂಗದಿಂದ ಮತ್ತೊಂದೆಡೆಗೆ ದೂರವಾಗಿ ಕರೆತಂದುಬಿಟ್ಟನು. ಓ ರಾಜೇಂದ್ರ ! ಆಗ ಯಾದವಸೈನ್ಯದಲ್ಲಿ ಭಾರಿ ಗದ್ದಲವುಂಟಾಯಿತು.

೩೪. ಅನಂತರ ಭೀಷ್ಮನು ಬೇರೊಂದು ತೇರನ್ನೇರಿ ಕುಳಿತು ಹೊಸ ಕವಚವನ್ನು ತೊಟ್ಟು ಬೇರೊಂದು ಬಿಲ್ಲನ್ನು ಹಿಡಿದು ಎದುರಿಗೆ ಸಿಕ್ಕಿದ ಯಾದವರನ್ನೆಲ್ಲ ಕೊಲ್ಲುತ್ತಾ ಬೇಗಬೇಗನೆ ದುರ್ಯೋಧನನಿದ್ದ ಕಡೆಗೆ ಹೊರಟು ಬರುತ್ತಿದ್ದನು.

ಸಂಗ್ರಾಮೋ ತತ್ರ ರಾಜೇಂದ್ರ ಸಾತ್ಯಕಿಶ್ಚ ಸುಯೋಧನಂ ।
ಚಕ್ರೇ ಬಾಣೈಶ್ಚ ವಿರಥಂ ಗೃಧ್ರಪಕ್ಷೈಃ ಸ್ಫುರತ್ಪ್ರಭೈಃ ॥ ೩೫ ॥

ವಿರಥೋಽಪಿ ರಥಂ ಚಾನ್ಯಂ ಸ ಸಮಾರುಹ್ಯ ವೇಗತಃ ।
ತಂ ಶತ್ರುಂ ವಿರಥಂ ಚಕ್ರೇ ಶರೈರಾಶೀವಿಷೋಪಮೈಃ ॥ ೩೬ ॥

ಸ ಚಾನ್ಯಂ ರಥಮಾರುಹ್ಯ ಸಾತ್ಯಕಿಃ ಶೀಘ್ರವಿಕ್ರಮಃ ।
ಬಾಣೇನೈಕೇನ ತದ್ಯಾನಂ ಚಿಕ್ಷೇಪ ನೃಪ ಯೋಜನಂ ॥ ೩೭ ॥

ರಥಃ ಪಪಾತ ಭೂಮಧ್ಯೇ ಸಸೂತಃ ಸತುರಂಗಮಃ ।
ಅಂಗಾರವದ್ವಿಶೀರ್ಣೋಽಭೂನ್ಮೂರ್ಛಿತೋಽಭೂತ್ಸುಯೋಧನಃ ॥ ೩೮ ॥

---

೩೫. ಓ ರಾಜೇಂದ್ರ ! ಅತ್ತಲಾಗಿ ಸಾತ್ಯಕಿಗೂ ದುರ್ಯೋಧನನಿಗೂ ಯುದ್ಧವು ಜರುಗುತ್ತಿತ್ತಷ್ಟೆ ! ಆ ಯುದ್ಧದಲ್ಲಿ ಸಾತ್ಯಕಿಯು ಹದ್ದಿನ ಗರಿಗಳನ್ನು ಕಟ್ಟಿದ್ದ ಹೊಳೆಯುತ್ತಿರುವ ಬಾಣಗಳಿಂದ ಆ ದುರ್ಯೋಧನನ ತೇರನ್ನು ನಾಶಪಡಿಸಿದನು.

೩೬. ಆ ದುರ್ಯೋಧನನು ತನ್ನ ರಥವು ಮುರಿದುಹೋದರೂ ಲೆಕ್ಕಿಸದೆ ಬೇರೊಂದು ರಥವನ್ನೇರಿ ಕುಳಿತು ತನ್ನ ಶತ್ರುವಾದ ಸಾತ್ಯಕಿಯು ಕುಳಿತಿದ್ದ ರಥವನ್ನು ಹಾವಿನಂತೆ ಕ್ರೂರವಾದ ಬಾಣಗಳಿಂದ ತುಂಡುತುಂಡು ಮಾಡಿದನು.

೩೭. ಶೀಘ್ರಪರಾಕ್ರಮಿಯಾದ ಆ ಸಾತ್ಯಕಿಯೂ ಅಷ್ಟೇ ಬೇಗನೆ ಬೇರೊಂದು ತೇರನ್ನು ಹತ್ತಿ ಕುಳಿತು ಒಂದೇ ಒಂದು ಬಾಣದಿಂದ ಆ ದುರ್ಯೋಧನನ ರಥವನ್ನು ಒಂದು ಯೋಜನದಷ್ಟು ಹಿಂದಕ್ಕೆ ಅಟ್ಟಿದನು.

೩೮. ಓ ರಾಜೇಂದ್ರ ! ಆಗ ಆ ದುರ್ಯೋಧನನ ರಥವು ಸಾರಥಿಯೊಡನೆಯೂ ಕುದುರೆಗಳೊಡನೆಯೂ ಸಮೇತವಾಗಿ ಮೇಲಿನಿಂದ ಬಿದ್ದ ಬೆಂಕಿಯ ಕೆಂಡದಂತೆ ನೆಲದಮೇಲೆ ಬಿದ್ದು ಪುಡಿಪುಡಿಯಾಗಿ ಹೋಯಿತು. ದುರ್ಯೋಧನನೂ ಮೂರ್ಛಾಕ್ರಾಂತನಾದನು.

ತದಾ ದ್ರೋಣಸ್ತು ಸಂಕ್ರುದ್ಧೋ ಬಾಣೇನಾಗ್ನಿಮಯೇನ ಚ ।
ಜಘಾನ ಸಾತ್ಯಕಿಂ ಯುದ್ಧೇ ಸ್ವಶತ್ರುಂ ತು ವಿಹಾಯ ವೈ ॥ ೩೯ ॥

ರಥಸ್ತು ತಸ್ಯ ದಗ್ಧೋಽಭೂತ್ಸತುರಂಗಃ ಸಸಾರಥಿಃ ।
ಅಭವನ್ಮೂರ್ಛಿತಃ ಸೋಽಪಿ ದಗ್ಧಾಂಗೋ ಬಾಣಜ್ವಾಲಯಾ ॥ ೪೦ ॥

ಕೃತವರ್ಮಾ ತತಃ ಕ್ರುದ್ಧೋ ಭೂರಿಂ ಜಿತ್ವಾ ರಣಾಂಗಣೇ ।
ಆಜಗಾಮ ನದನ್ರಾಜನ್ ದ್ರೋಣಃ ಪರಿರುಷಾನ್ವಿತಃ ॥ ೪೧ ॥

ಸ ಗತ್ವಾ ಪ್ರಧನೇ ರೋಷಾದ್ದ್ರೋಣಾಚಾರ್ಯಂ ಶರೈರಪಿ ।
ಚಕ್ರೇ ಪದಾತಿನಂ ವೀರೋ ನಿಃಶ್ಯಸ್ತ್ರಂ ಭಿನ್ನಕಂಚುಕಂ ॥ ೪೨ ॥

ತತಃ ಕರ್ಣಸ್ತು ಸಂಕ್ರುದ್ಧೋ ತ್ಯಕ್ತ್ವಾ ಕ್ರೂರಂ ರಣಾಂಗಣೇ ।
ತತಾಡ ಕೃತವರ್ಮಾಣಂ ಶಕ್ತ್ಯಾ ಶಕ್ತೀವ ತಾರಕಂ ॥ ೪೩ ॥

---

೩೯. ಇದನ್ನು ನೋಡಿದ ದ್ರೋಣಾಚಾರ್ಯನು ಮಹಾಕೋಪವನ್ನು ತಾಳಿ ತಾನು ಯುದ್ಧಮಾಡುತ್ತಿದ್ದ ಶತ್ರುವನ್ನು ಬಿಟ್ಟು ಆಗ್ನೇಯಾಸ್ತ್ರದಿಂದ ಆ ಸಾತ್ಯಕಿಯನ್ನು ಪ್ರಹರಿಸಿದನು.

೪೦. ಆಗ ಆ ಸಾತ್ಯಕಿಯ ರಥವು ಸಾರಥಿ ಮತ್ತು ಕುದುರೆಗಳೊಡನೆ ಸುಟ್ಟು ಬೂದಿಯಾಗಿ ಹೋಯಿತು. ಆ ಸಾತ್ಯಕಿಯೂ ಸಹ ಬಾಣಜ್ವಾಲೆಯಿಂದ ಮೈಯೆಲ್ಲವೂ ಸುಟ್ಟುಹೋಗಿ ಮೂರ್ಛಿತನಾಗಿಬಿಟ್ಟನು.

೪೧. ಅನಂತರ ಯದುವೀರನಾದ ಕೃತವರ್ಮನು ಭೂರಿಶ್ರವನನ್ನು ಯುದ್ಧದಲ್ಲಿ ಸೋಲಿಸಿಬಿಟ್ಟು ದ್ರೋಣನಮೇಲೆ ಕೋಪವನ್ನು ತಾಳಿ ಸಿಂಹನಾದವನ್ನು ಮಾಡುತ್ತಾ ಅವನಿದ್ದಲ್ಲಿಗೆ ಬಂದನು.

೪೨. ಓ ರಾಜೇಂದ್ರ! ಕುಪಿತನಾದ ಆ ಕೃತವರ್ಮನು ಬಾಣವರ್ಷದಿಂದ ಆ ದ್ರೋಣನನ್ನು ಪದಾತಿಯನ್ನಾಗಿ (ರಥವಿಹೀನನನ್ನಾಗಿ) ಮಾಡಿದುದಲ್ಲದೆ ಅವನ ಬಿಲ್ಲನ್ನೂ ಕವಚವನ್ನೂ ಕತ್ತರಿಸಿಬಿಟ್ಟನು.

೪೩. ಅದನ್ನು ನೋಡಿದ ಕರ್ಣನು ಅಕ್ರೂರನೊಡನೆ ಯುದ್ಧ ಮಾಡುವುದನ್ನು ಬಿಟ್ಟು ಮಹಾಕೋಪದಿಂದ ಕೈಯಲ್ಲಿ ಶಕ್ತ್ಯಾಯುಧವನ್ನು

ಸಾ ಶಕ್ತಿಸ್ತತ್ರಸುಂ ಭಿತ್ವಾ ವಿವೇಶ ಧರಣೀತಲೇ ।
ನಿರ್ಭಿನ್ನಹೃದಯೋ ಭೂತ್ವಾ ಕೃತವರ್ಮಾ ಪಪಾತ ಹ ॥ ೪೪ ॥

ಯುಯುಧಾನಸ್ತತಃ ಕೋಪಾನ್ನಿಷ್ಕೃತ್ಯ ಶಕುನಿಂ ಮೃಧೇ ।
ಕರ್ಣಸ್ಯೋಪರಿ ರಾಜೇಂದ್ರ ಹ್ಯಾಜಗಾಮ ರಥೇನ ಚ ॥ ೪೫ ॥

ಗತ್ವಾ ಶರಾಸನೇನಾಪಿ ಮುಮುಚೇ ಸಾಯಕಾನ್ದಶ ।
ವೀಕ್ಷ್ಯ ತಾನಾಗತಾನ್ಕರ್ಣೋ ನಿಜಘಾನ ಸ್ವಸಾಯಕೈಃ ॥ ೪೬ ॥

ಸಂಘೃಷ್ಟಾಸ್ತತ್ರ ಸಂಗ್ರಾಮೇ ತಯೋರ್ಬಾಣಾಃ ಪರಸ್ಪರಂ ।
ವಿಸ್ಫುಲಿಂಗಾನ್ಕ್ಷರಂತಸ್ತೇ ಭ್ರಮುಂತೇಽಲಾತಚಕ್ರವತ್ ॥ ೪೭ ॥

ಹಿಡಿದು ಕುಮಾರಸ್ವಾಮಿಯು ತಾರಕಾಸುರನನ್ನು ಸಂಹರಿಸಿದಂತೆ ಆ ಕೃತವರ್ಮನನ್ನು ಪ್ರಹರಿಸಿದನು.

೪೪. ಕೂಡಲೇ ಆ ಶಕ್ತಿಯು ಕೃತವರ್ಮನ ಹೃದಯವನ್ನು ಭೇದಿಸಿಕೊಂಡು ಭೂಮಿಯಲ್ಲಿ ಪ್ರವೇಶಿಸಿಬಿಟ್ಟಿತು. ಆಗ ಕೃತವರ್ಮನು ಎದೆಯು ಛಿದ್ರ ಛಿದ್ರವಾಗಿ ಹೋಗಿ ನೆಲದಮೇಲೆ ಬಿದ್ದುಬಿಟ್ಟನು.

೪೫. ಅನಂತರ ಯುಯುಧಾನನು ತನ್ನೊಡನೆ ಹೋರಾಡುತ್ತಿದ್ದ ಶಕುನಿಯನ್ನು ಸೋಲಿಸಿ ಜಯಶೀಲನಾಗಿ ಮೆರೆಯುತ್ತಿದ್ದ ಕರ್ಣನಿದ್ದ ಕಡೆಗೆ ರಥವನ್ನೇರಿ ಬಂದನು.

೪೬. ಬಳಿಕ ಬಿಲ್ಲಿನಲ್ಲಿ ಹತ್ತು ಬಾಣಗಳನ್ನು ಹೂಡಿ ಆ ಕರ್ಣನ ಮೇಲೆ ಬೀಸಿ ಹೊಡೆದನು. ಅವು ಬರುತ್ತಿರುವಂತೆಯೇ ಆ ಕರ್ಣನೂ ಸಹ ತನ್ನ ಬಾಣಗಳಿಂದ ಅವನ್ನು ಕತ್ತರಿಸಿಬಿಟ್ಟನು.

೪೭. ಓ ರಾಜೇಂದ್ರ! ಅವರಿಬ್ಬರ ಸಂಗ್ರಾಮದಲ್ಲಿ ಪರಸ್ಪರವಾಗಿ ಸುರಿಮಳೆಗರೆದ ಬಾಣಗಳು ಬೆಂಕಿಯ ಕಿಡಿಗಳನ್ನು ಕಾರುತ್ತಾ ಕೊಳ್ಳಿಗಳಂತೆ ಸುತ್ತಾಡುತ್ತಿದ್ದುವು.

ಯುಯುಧಾನಸ್ತತಃ ಕೋಪಾತ್ಕರ್ಣಸ್ಯ ಜಗತೀಪತೇ ।
ಜಘಾನ ಕವಚೇ ಬಾಣಾನ್ ಕಾಕಪಕ್ಷಯುತಾನ್ ಶಿತಾನ್ ॥ ೪೮ ॥

ತೇ ಶರಾಃ ಕರ್ಣಕವಚೇ ನ ಲಗ್ನಾಃ ಪತಿತಾ ಭುವಿ ।
ರಾಜನ್ ಪಾಪಸ್ಯ ಕರ್ತಾರೋ ನ ಸ್ವರ್ಗೇ ನಿರಯೋ ಯಥಾ ॥ ೪೯ ॥

ತತಃ ಪ್ರಹಸ್ಯ ಕರ್ಣಸ್ತು ಯುಯುಧಾನಂ ತು ವಿಸ್ಮಿತಂ ।
ಚಕಾರ ವಿರಥಂ ಯುದ್ಧೇ ಶರೈರ್ನಾನಾಸ್ತ್ರಯೋಜಿತೈಃ ॥ ೫೦ ॥

ದುಃಶಾಸನಂ ಬಲಿಂ ಚೈವ ಕೃತ್ವಾ ಯುದ್ಧೇ ವಿಮೂರ್ಛಿತಂ ।
ಆಯಯೌ ಸಂಯುಗೇ ಕರ್ಣಂ ರಥೇನಾನಲವರ್ಚಸಾ ॥ ೫೧ ॥

ಆಗತಂ ಬಲಿನಂ ದೃಷ್ಟ್ವಾ ಕರ್ಣೋ ಭಾಸ್ಕರನಂದನಃ ।
ಪವನಾಸ್ತ್ರೇಣ ಬಾಣೇನ ತಂ ಚಿಕ್ಷೇಪ ಸವಾಹನಂ ॥ ೫೨ ॥

೪೮-೪೯. ಎಲೈ ನರಪತಿಯೇ! ಅನಂತರ ಕುಪಿತನಾದ ಯುಯುಧಾನನು ಕಾಗೆಯ ಗರಿಗಳನ್ನು ಕಟ್ಟಿರುವ ಚೂಪಾದ ಬಾಣಗಳನ್ನು ಬಿಡಲು ಅವು ಕರ್ಣನ ಕವಚದಲ್ಲಿ ನಾಟದೆ ನೆಲದಮೇಲೆ ಬಿದ್ದುಹೋದುವು.

೫೦. ಆಗ ಕರ್ಣನು, ಬೆರಗಾಗಿ ಸುಮ್ಮನೆ ನಿಂತಿದ್ದ ಆ ಯುಯುಧಾನನನ್ನು ಕಂಡು ಗಟ್ಟಿಯಾಗಿ ನಗುತ್ತಾ ನಾನಾವಿಧವಾದ ಮಂತ್ರಗಳಿಂದ ಅಭಿಮಂತ್ರಿಸಲ್ಪಟ್ಟ ಬಾಣಗಳನ್ನು ಪ್ರಯೋಗಿಸಿ ಅವನನ್ನು ರಥವಿಹೀನನನ್ನಾಗಿ ಮಾಡಿದನು.

೫೧. ಅತ್ತಲಾಗಿ ಬಲಿಯೆಂಬ ಯಾದವವೀರನು ತನ್ನೊಡನೆ ಸೆಣಸುತ್ತಿದ್ದ ದುಶ್ಶಾಸನನನ್ನು ಮೂರ್ಛೆಗೀಡುಮಾಡಿ ಅಗ್ನಿಯಂತೆ ಜ್ವಲಿಸುತ್ತಿರುವ ರಥವನ್ನೇರಿ ಕುಳಿತು ಕರ್ಣನಿದ್ದ ಕಡೆಗೆ ಬಂದನು.

೫೨. ಸೂರ್ಯಪುತ್ರನಾದ ಆ ಕರ್ಣನು ಬಲಿಯು ತನ್ನ ಕಡೆಗೆ ಬಂದುದನ್ನು ಕಂಡು ವಾಯವ್ಯಾಸ್ತ್ರದಿಂದ ಅವನು ಕುಳಿತಿದ್ದ ತೇರಿನೊಂದಿಗೆ ಅವನನ್ನು ದೂರವಾಗಿ ಎಸೆದುಬಿಟ್ಟನು.

ಪಪಾತ ಯೋಜನೇ ಸೋಽಪಿ ಸಾಂಬಸ್ತತ್ರಾಗಮತ್ಪುನಃ ।
ಅಂಧಕಾರಂ ಶರೈಃ ಕುರ್ವನ್ ಕೌರವಾನ್ಮಾರಯನ್ ರುಷಾ ॥ ೫೩ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ಯದುಕುರುಸಂಗ್ರಾಮವರ್ಣನಂ ನಾಮೈಕೋನ
ಪಂಚಾಶತ್ತಮೋಽಧ್ಯಾಯಃ

---

೫೩. ಆಗ ಆ ಬಲಿಯ ರಥವು ಒಂದು ಯೋಜನದೂರದಲ್ಲಿ ಹೋಗಿ ಬಿದ್ದುಬಿಟ್ಟಿತು. ಅಷ್ಟುಹೊತ್ತಿಗೆ ಮೂರ್ಛೆಯಿಂದ ತಿಳಿದೆದ್ದ ಸಾಂಬನು ಮತ್ತೆ ಶರವರ್ಷದಿಂದ ಕತ್ತಲೆಯನ್ನು ಕವಿಸುತ್ತಾ ಕೋಪದಿಂದ ಎದುರಿಗೆ ಸಿಕ್ಕಿದ ಕೌರವರನ್ನು ಕೊಲ್ಲುತ್ತಾ ಅಲ್ಲಿಗೆ ಬಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತ್ರದಲ್ಲಿ ಯದು ಕೌರವ ಸಂಗ್ರಾಮ ವರ್ಣನವೆಂಬ
ನಲವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ತದೈವ ವೃಷ್ಣಯಃ ಸರ್ವೇ ಭೋಜವೃಷ್ಣ್ಯಂಧಕಾದಯಃ ।
ಮಾಥುರಾಃ ಶೂರಸೇನಾದ್ಯಾಃ ಸಮುತ್ತೇರುರ್ಯಮಸ್ವಸಾಂ ॥ ೧ ॥

ರಜೋಭಿಶ್ಚ ನಭೋ ವ್ಯಾಪ್ತಂ ಕುರ್ವಂತಶ್ಚ ಮಹೀತಲಂ ।
ಚಾಲಯಂತಶ್ಚ ಬಲಿನೋ ಮಹಾಸಂಗ್ರಾಮಕರ್ಕಶಾಃ ॥ ೨ ॥

ವಿಲೋಕಯಂತಸ್ತುರಗಂ ಸರ್ವತಸ್ತೇ ಮಹಾಬಲಾಃ ।
ಆಜಗ್ಮುಶ್ಚಾನಿರುದ್ಧಾದ್ಯಾಃ ಶ್ರೀಕೃಷ್ಣಾದ್ಯಾ ನೃಪೇಶ್ವರ ॥ ೩ ॥

ಐವತ್ತನೆಯ ಅಧ್ಯಾಯವು

೧-೩. ಓ ರಾಜೇಂದ್ರ ! ಅಷ್ಟು ಹೊತ್ತಿಗೆ ಸರಿಯಾಗಿ ಮಹಾಬಲಾಢ್ಯರಾದ ಭೋಜರೂ, ವೃಷ್ಣಿಗಳೂ, ಅಂಧಕರೂ, ಮಾಥುರರೂ, ಶೂರಸೇನಾದಿಗಳೂ ಅನಿರುದ್ಧನನ್ನೂ, ಶ್ರೀಕೃಷ್ಣನನ್ನೂ ಮುಂದಿಟ್ಟುಕೊಂಡು ಯಮುನಾನದಿಯನ್ನು ದಾಟಿ ಕುದುರೆಯು ಎಲ್ಲಿದೆಯೆಂದು ಅತ್ತಿತ್ತ ನೋಡುತ್ತಾ, ಧೂಳಿನಿಂದ ಆಕಾಶವನ್ನು ಮುಚ್ಚುತ್ತಾ, ನೆಲವನ್ನು ನಡುಗಿಸುತ್ತಾ ಯುದ್ಧಭೂಮಿಯ ಕಡೆಗೆ ಬಂದರು.

ವೃಷ್ಣಯಸ್ತತ್ರ ಯುದ್ಧಸ್ಯ ಮಹಾಘೋಷಂ ಭಯಂಕರಂ ।
ಶರಾಸನಾನಾಂ ಟಂಕಾರಂ ಶತಘ್ನೀನಾಂ ರವಂ ತಥಾ ॥ ೪ ॥

ಶೂರಾಣಾಂ ಗರ್ಜನಂ ಚೈವ ಶಸ್ತ್ರಾಣಾಂ ಚಟಚಟಂ ತಥಾ ।
ಕೋಲಾಹಲಂ ಚ ಹಾಃಕಾರಂ ಶ್ರುತ್ವಾ ತೇ ವಿಸ್ಮಯಂ ಯಯುಃ ॥ ೫ ॥

ಮತ್ವಾ ತೇ ಯುದ್ಧಮಾಸೀದ್ವೈ ಯಾದವಾನಾಂ ಚ ಕೌರವೈಃ ।
ಶಂಕಿತಾ ಅನಿರುದ್ಧಾದ್ಯಾಃ ಕೃಷ್ಣಾದ್ಯಾ ಆಯಯುರ್ದ್ರುತಂ ॥ ೬ ॥

ಶ್ರೀಕೃಷ್ಣಮಾಗತಂ ದೃಷ್ಟ್ವಾನಿರುದ್ಧಾದ್ಯೈಸ್ಸಮನ್ವಿತಂ ।
ಸಸೈನ್ಯಂ ಚ ಸಹಾಯಾರ್ಥಂ ನೇಮುಃ ಸಾಂಬಾದಯೋ ನೃಪ ॥ ೭ ॥

ಕೃಷ್ಣೇ ಸಮಾಗತೇ ನೇದುರ್ಭೇರ್ಯಃ ಶಂಖಾಶ್ಚ ಗೋಮುಖಾಃ ।
ಪುಷ್ಪವರ್ಷಂ ಜಯಾರಾವಂ ದೇವಾಶ್ಚಕ್ರುಶ್ಚ ಯಾದವಾಃ ॥ ೮ ॥

೪-೫. ಅವರಿಗೆ ದೂರದಲ್ಲಿಯೇ ಯುದ್ಧದ ಕೋಲಾಹಲವೂ, ಬಿಲ್ಲುಗಳ ಟಂಕಾರವೂ, ಶತಘ್ನಿಗಳ (ಪಿರಂಗಿಗಳ) ಗುಡುಗಾಟವೂ, ಶೂರರ ಸಿಂಹ ಗರ್ಜನೆಯೂ, ಆಯುಧಗಳ ಪರಸ್ಪರ ಸಂಘರ್ಷದಿಂದುಂಟಾದ ಚಟ ಚಟ ಎಂಬ ಶಬ್ದವೂ, ನಡು ನಡುವೆ ಹಾಹಾಕಾರವೂ ಕೇಳಬಂದು ಅವರನ್ನು ಆಶ್ಚರ್ಯ ದಿಂದ ಚಕಿತರನ್ನಾಗಿ ಮಾಡಿತು.

೬. ಆಗ ಕೃಷ್ಣ, ಅನಿರುದ್ಧ ಮುಂತಾದ ಯಾದವರು, ಕೌರವರಿಗೂ ಯಾದವರಿಗೂ ಯುದ್ಧವು ಜರುಗುತ್ತಿದೆಯೆಂದು ಭಾವಿಸಿ ಕಳವಳ ಹೊಂದಿದವ ರಾಗಿ ಬೇಗ ಬೇಗ ಬಂದರು.

೭. ಓ ರಾಜಾ! ಆಗ ಯುದ್ಧಭೂಮಿಯಲ್ಲಿದ್ದ ಸಾಂಬಾದಿ ಯಾದವರು ತಮ್ಮ ಸಹಾಯಕ್ಕಾಗಿ ಶ್ರೀಕೃಷ್ಣನು ಅನಿರುದ್ಧಾದಿ ವೀರರೊಡನೆ ಬಂದುದನ್ನು ಕಂಡು ಸಂತೋಷದಿಂದ ನಮಸ್ಕರಿಸಿದರು.

೮. ಮತ್ತು ಭೇರಿಗಳನ್ನೂ, ಶಂಖಗಳನ್ನೂ, ಗೋಮುಖವೆಂಬ ವಾದ್ಯ ವನ್ನೂ ಬಾರಿಸಿದುದಲ್ಲದೆ, ದೇವತೆಗಳೊಂದಿಗೆ ತಾವೂ ಹೂವಿನ ಮಳೆಯನ್ನು ಕರೆಯುತ್ತಾ ಜಯಜಯಧ್ವನಿಯನ್ನು ಮಾಡಿದರು.

ದೃಷ್ಟ್ವಾನಿರುದ್ಧಂ ಪ್ರಧನೇ ಸಮಾಗತಂ
ಹ್ಯಕ್ಷೌಹಿಣೀಭಿಃ ಶತಭಿಃ ಪರೀವೃತಂ ।
ಪ್ರಚಾಲಯಂತಂ ವಸುಧಾಂ ಮಹಾಬಲಂ
ವಿದುದ್ರುವುಸ್ತೇ ತು ಭಯಾಚ್ಚ ಕೌರವಾಃ ॥ ೯ ॥

ಪ್ರಲಯಾಬ್ಧಿಸಮಂ ಸೈನ್ಯಮಂಧಕಾನಾಂ ವಿಲೋಕ್ಯ ಚ ।
ಭೀತಾಶ್ಚ ದುದ್ರುವುರ್ವೈಶ್ಯಾ ಗೇಹೇ ಗೇಹೇ ಕೃತಾರ್ಗಲಾಃ ॥ ೧೦ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ವೃಷಲಾಃ ಸ್ತ್ರೀಜನಾಸ್ತಥಾ ।
ದುರ್ಯೋಧನಂ ಶಪಂತಶ್ಚ ರುರುದುರ್ನಿರ್ಗತಾ ಗೃಹಾತ್ ॥ ೧೧ ॥

ತತೋ ವಿಹಾಯ ಮೂರ್ಛಾಂ ವೈ ಮೃಧೇ ದುಃಶಾಸನಾಗ್ರಜಃ ।
ಸದ್ಯಃ ಸುಪ್ತ ಇವೋತ್ತಸ್ಥೌ ಯದುಸೈನ್ಯಂ ದದರ್ಶ ಹ ॥ ೧೨ ॥

---

೯. ಆಗ ಸಾಂಬಾದಿಗಳ ಸಹಾಯಕ್ಕಾಗಿ ಮಹಾ ಬಲಾಢ್ಯವಾದ ಒಂದು ನೂರು ಅಕ್ಷೋಹಿಣೀ ಸೇನೆಯೊಡನೆ ಭೂಮಿಯು ನಡುಗುವಂತೆ ಅನಿರುದ್ಧನು ಬಂದುದನ್ನು ಕಂಡು ಕೌರವರು ಹೆದರಿಕೆಯಿಂದ ಓಡಿಹೋದರು.

೧೦. ಪ್ರಳಯಕಾಲದ ಸಮುದ್ರದಂತೆ ಮೇರೆ ಮೀರಿ ಬರುತ್ತಿದ್ದ ಆ ಅಂಧಕರ ಸೇನೆಯನ್ನು ಕಂಡು ಹಸ್ತಿನಾವತಿಯಲ್ಲಿದ್ದ ವೈಶ್ಯರು ಹೆದರಿಕೆಯಿಂದ ತಮ್ಮ ತಮ್ಮ ಮನೆಯ ಬಾಗಿಲಿಗೆ ಅಗುಳಿಹಾಕಿ ಓಡಿಹೋಗಲಾರಂಭಿಸಿದರು.

೧೧. ಆಗ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಹೆಂಗುಸರೂ ದುರ್ಯೋಧನನನ್ನು ಬೈಯುತ್ತಾ ಮನೆಯಿಂದ ಈಚೆಗೆ ಬಂದು ಅಳಲಾರಂಭಿಸಿದರು.

೧೨. ಅಷ್ಟುಹೊತ್ತಿಗೆ ರಣಾಂಗಣದಲ್ಲಿ ಮೂರ್ಛೆಯಿಂದ ತಿಳಿದೆಚ್ಚೆತ್ತ ದುರ್ಯೋಧನನು ನಿದ್ರೆಯಿಂದ ಎಚ್ಚರ ಹೊಂದಿದವನಂತೆ ಎದ್ದುನಿಂತಕೂಡಲೇ ಆ ಯದು ಸೈನ್ಯವನ್ನು ಕಂಡನು.

ದೃಷ್ಟ್ವಾ ಭಯಂಕರಾಂ ಸೇನಾಂ ಯಾದವಾನಾಂ ಸುಯೋಧನಃ ।
ಸ್ವಪುರಂ ಶಂಕಿತೋ ಭೂತ್ವಾ ಪದ್ಭ್ಯಾಂ ಭೀತಸ್ತ್ವರಂ ಯಯೌ ॥ ೧೩ ॥

ಕರ್ಣಭೀಷ್ಮಕೃಪದ್ರೋಣಭೂರಿದುರ್ಯೋಧನಾದಯಃ ।
ಸಭಾಯಾಂ ಧೃತರಾಷ್ಟ್ರಂ ವೈ ನತ್ವಾ ಸರ್ವಮವರ್ಣಯನ್ ॥ ೧೪ ॥

ಸ್ವಾನಾಂ ಪರಾಜಯಂ ಶ್ರುತ್ವಾ ಯಾದವಾನಾಂ ಜಯಂ ತಥಾ ।
ಕೃಷ್ಣಸ್ಯಾಗಮನಂ ಚೈವ ನೃಪೋ ವಿದುರಮಬ್ರವೀತ್ ॥ ೧೫ ॥

॥ ಧೃತರಾಷ್ಟ್ರ ಉವಾಚ ॥
ಅಕ್ಷೌಹಿಣೀಶತಯುತೇ ವಾಸುದೇವೇ ಸಮಾಗತೇ ।
ಕುಪಿತೇಽದ್ಯ ವಯಂ ವೀರ ಕರಿಷ್ಯಾಮಶ್ಚ ಕಿಂ ವದ ॥ ೧೬ ॥

---

೧೩. ನೋಡಿದರೆ ಹೆದರಿಕೆ ಹುಟ್ಟಿಸುವಂತಿದ್ದ ಆ ಯದುಸೇನೆಯನ್ನು ಕಾಣುತ್ತಲೇ ಆ ದುರ್ಯೋಧನನು ಹೆದರಿಕೆಯಿಂದ ತಲ್ಲಣಿಸುತ್ತಾ ತೇರು ಮೊದಲಾದುವುಗಳೊಂದನ್ನೂ ಬಯಸದೆ ಬರಿಯ ಕಾಲುಗಳಿಂದಲೇ ಓಡಿಹೋಗಿ ಬೇಗನೆ ತನ್ನ ಊರನ್ನು ಸೇರಿಕೊಂಡನು.

೧೪. ಆಗ ಕರ್ಣ, ಭೀಷ್ಮ, ದ್ರೋಣ, ಕೃಪ, ಭೂರಿಶ್ರವಸ್ಸು, ದುರ್ಯೋಧನ ಮೊದಲಾದ ಕುರುವೀರರು ರಾಜಸಭೆಯಲ್ಲಿ ಕುಳಿತಿದ್ದ ಧೃತರಾಷ್ಟ್ರನಿಗೆ ಯುದ್ಧವಾರ್ತೆಯೆಲ್ಲವನ್ನೂ ತಿಳಿಸಿದರು.

೧೫. ಆ ಧೃತರಾಷ್ಟ್ರನು ತನ್ನ ಕಡೆಯುವರು ಸೋತು ಬಂದುದನ್ನೂ, ಯಾದವರು ಜಯಶಾಲಿಗಳಾದುದನ್ನೂ ಮತ್ತು ಕೃಷ್ಣನು ಸಹಾಯಕನಾಗಿ ಬಂದುದನ್ನೂ ಕೇಳಿ ವಿದುರನನ್ನು ಕುರಿತು—

೧೬. 'ಓ ವಿದುರಾ! ನೂರು ಅಕ್ಷೋಹಿಣೀಸೇನೆಗಳೊಡನೆ ಶ್ರೀಕೃಷ್ಣನು ಕುಪಿತನಾಗಿ ಬಂದಿರುವನಲ್ಲವೆ? ಈಗ ನಾವೇನು ಮಾಡಬೇಕು? ತಿಳಿಸು' ಎಂದನು.

ನೃಪಸ್ಯ ವಚನಂ ಶ್ರುತ್ವಾ ಪ್ರಹಸ್ಯ ವಿದುರೋಽಬ್ರವೀತ್ ।

॥ ವಿದುರ ಉವಾಚ ॥

ಪುರಾ ರಾಮೇಣ ಚೈಕೇನ ಕುಪಿತೇನ ಗಜಾಹ್ವಯಂ ।
ವಿಕರ್ಷಿತಂ ಚ ಗಂಗಾಯಾಂ ತಸ್ಯ ಭ್ರಾತಾ ಹಿ ಚಾಗತಃ ।
ಹೃತ್ಕಂಜಕೋಶಾದ್ದೇವಕ್ಯಾಂ ಜಾತೋ ಯಃ ಸ ಹರಿರ್ನೃಪ ॥ ೧೭ ॥

ಯೇನ ವೈ ಸಂಯುಗೇ ರಾಜನ್ ಕಂಸಾದ್ಯಾಃ ಶಕುನಾದಯಃ ।
ಮಾರಿತಾ ಬಹವೋ ದೈತ್ಯಾ ನಿರ್ಜಿತಾಶ್ಚ ನೃಪಾಃ ಸುರಾಃ ॥ ೧೮ ॥

ತಸ್ಮಾದ್ಯುದ್ಧಸ್ಯ ಸಮಯೋ ನಾಸ್ತಿ ರಾಜನ್ ವಿಲೋಕಯ ।
ಕೌರವೈಃ ಶ್ಯಾಮಕರ್ಣಂ ತು ಕೃಷ್ಣಾಯ ದಾತುಮರ್ಹಸಿ ॥ ೧೯ ॥

---

೧೭. ಆಗ ವಿದುರನು ಧೃತರಾಷ್ಟ್ರನ ಮಾತಿಗೆ ನಗುತ್ತಾ ಅವನ ನ್ನಿಂತೆಂದನು. "ಹಿಂದೆ ಕೋಪಾಕ್ರಾಂತನಾದ ಬಲರಾಮನೊಬ್ಬನೇ ಈ ಹಸ್ತಿನಾವತಿಯನ್ನು ನೇಗಿಲಿನಿಂದ ಗಂಗೆಯೊಳಕ್ಕೆ ಎಳೆದುಬಿಟ್ಟರಲಿಲ್ಲವೇ? ಆ ಬಲರಾಮನ ತಮ್ಮನೇ ಈಗ ಬಂದಿರುವವನು. ಸಕಲ ಜೀವರ ಹೃದಯ ಪದ್ಮಗಳಲ್ಲಿ ನೆಲಸಿರುವ ಆ ಶ್ರೀಹರಿಯೇ ದೇವಕಿಯ ಗರ್ಭದಲ್ಲಿ ಶ್ರೀಕೃಷ್ಣರೂಪ ದಿಂದ ಅವತರಿಸಿರುವನು.

೧೮. ಓ ರಾಜೇಂದ್ರ! ಈ ಕೃಷ್ಣನೇ ಕಂಸ ಮೊದಲಾದ ದುಷ್ಟ ಕ್ಷತ್ರಿಯರನ್ನೂ, ಶಕುನಿ ಮೊದಲಾದ ದೈತ್ಯರನ್ನೂ ಯುದ್ಧದಲ್ಲಿ ಕೊಂದಿರುವು ನಲ್ಲದೆ, ಅನೇಕ ಮಂದಿ ರಾಜರನ್ನೂ ದೇವತೆಗಳನ್ನೂ ಗೆದ್ದಿರುವನು.

೧೯. ಆದುದರಿಂದ ಕೃಷ್ಣನೊಡನೆ ಯುದ್ಧಮಾಡಲು ಕೌರವರಿಗೆ ಇದು ಸಮಯವಲ್ಲ. ಕಪ್ಪಾದ ಕಿವಿಗಳಿಂದ ಕೂಡಿದ ಈ ಯಜ್ಞಾಶ್ವವನ್ನು ಕೃಷ್ಣ ನಿಗೆ ಒಪ್ಪಿಸಿಬಿಡುವುದೇ ಉಚಿತವಾದುದು.

ಮಾ ಭೂತ್ಕುರೂಣಾಂ ವೃಷ್ಣೀನಾಂ ಕಲಹೋ ನಾಶಕಾರಕಃ ।
ಏವಂ ರಾಜಾ ಬೋಧಿತಸ್ತು ವಿದುರೇಣಾನುಜೇನ ವೈ ॥ ೨೦ ॥

ಉವಾಚ ಕೌರವಾನ್ ಪ್ರಾಜ್ಞೋ ದೇಶಕಾಲೋಚಿತಂ ವಚಃ ।
॥ ಧೃತರಾಷ್ಟ್ರ ಉವಾಚ ॥
ಗತ್ವಾ ಕೃಷ್ಣಸ್ಯ ನಿಕಟೇ ತುರಗಂ ದಾತುಮರ್ಹಥ ॥ ೨೧ ॥

ಸಂಮುಖೇ ದೇವದೇವಸ್ಯ ಯುದ್ಧಂ ಕರ್ತುಂ ಚ ನಾರ್ಹಥ ।
ಯಾದವಾನಾಂ ಸಹಾಯಾರ್ಥಮಾಗತಂ ಕುಪಿತಂ ಹರಿಂ ॥ ೨೨ ॥

ಯೂಯಂ ಪ್ರಸನ್ನಂ ಕುರುತ ಗತ್ವಾ ತನ್ನಿಕಟಂ ಶನೈಃ ।
ಕೌರವೇಂದ್ರಸ್ಯ ವಚನಂ ಕೌರವಾಸ್ತೇ ನಿಶಮ್ಯ ಚ ॥ ೨೩ ॥

ವಿವಿಧಾನುಪಚಾರಾಂಶ್ಚ ಗಂಧಾಕ್ಷತಯುತಾನ್ಕಿಲ ।
ಗೃಹೀತ್ವಾ ದಿವ್ಯವಸ್ತ್ರಾಣಿ ರತ್ನಾನಿ ವಿವಿಧಾನಿ ಚ ॥ ೨೪ ॥

---

೨೦. ನಾಶಹೇತುವಾದ ಈ ಕುರುಯಾದವ ಯುದ್ಧವು ಇಲ್ಲಿಗೇ ನಿಂತುಹೋಗಲಿ ಎಂಬನು. ಹೀಗೆ ತನ್ನ ತಮ್ಮನಾದ ವಿದುರನು ಬೋಧಿಸಿದುದನ್ನು ಕೇಳಿ—

೨೧. ಪ್ರಾಜ್ಞನಾದ ಆ ಧೃತರಾಷ್ಟ್ರನು ಕೌರವರನ್ನು ಕುರಿತು ಕಾಲದೇಶಗಳಿಗೆ ಉಚಿತವಾದಂತಹ ಮಾತನ್ನಾಡಿದನು — ನೀವೀಗಲೇ ಕೃಷ್ಣನ ಬಳಿಗೆ ಹೋಗಿ ಯಜ್ಞಾಶ್ವವನ್ನು ಒಪ್ಪಿಸಿಬಿಡಿ.

೨೨-೨೩. ದೇವತೆಗಳಿಗೂ ಪ್ರಭುವಾದ ಆ ಕೃಷ್ಣನಿಗೆದುರಾಗಿ ಯುದ್ಧವನ್ನು ಮಾಡಲು ನಿಮ್ಮಿಂದ ಸಾಧ್ಯವಿಲ್ಲ. ನೀವು ಬೇಗನೆ (ಆತನ) ಬಳಿಗೆ ಹೋಗಿ ಕೋಪದಿಂದ ತನ್ನ ಕಡೆಯ ಯಾದವರ ಸಹಾಯಕ್ಕೆ ಬಂದಿರುವ ಆ ಶ್ರೀಕೃಷ್ಣನನ್ನು ಪ್ರಸನ್ನನನ್ನಾಗಿ ಮಾಡಿರಿ. ಈ ರೀತಿಯಾಗಿ ಕೌರವಾದಿಪತಿಯಾದ ಧೃತರಾಷ್ಟ್ರನು ಆಡಿದ ಮಾತನ್ನು ಕೇಳಿ—

೨೪-೨೫. ಆ ವೀರರೆಲ್ಲರೂ ಮುಂದೇನಾಗುವುದೋ ಎಂಬ ಹೆದರಿಕೆಯಿಂದ ಮನಸ್ಸಿನಲ್ಲಿ ತಲ್ಲಣಿಸುತ್ತಾ ಗಂಧ, ಅಕ್ಷತೆ ಮೊದಲಾದುವುಗಳಿಂದ

ವದಂತಃ ಪುಣ್ಯನಾಮಾನಿ ರಾಮಕೇಶವಯೋರ್ಮುದಾ ।
ಪದ್ಭಿರ್ವಿನಿರ್ಯಯುಃ ಸರ್ವೇ ಕೃಷ್ಣಂ ದ್ರಷ್ಟುಂ ಭಯಾನ್ವಿತಾಃ ॥ ೨೫ ॥
ಆಗತಾನ್ಕೌರವಾನ್ದೃಷ್ಟ್ವಾ ಯಾದವಾಃ ಕ್ರೋಧಪೂರಿತಾಃ ।
ನಾನಾಶಸ್ತ್ರಾಣಿ ಜಗೃಹುಸ್ತತ್ರ ಯುದ್ಧಾಯ ವೇಗತಃ ॥ ೨೬ ॥
ಊಚುಸ್ತಾನ್ಕೌರವಾಸ್ಸರ್ವೇ ವಯಂ ಯುದ್ಧಾಯ ನಾಗತಾಃ ।
ಕರಿಷ್ಯಾಮಶ್ಚ ಕೃಷ್ಣಸ್ಯ ದರ್ಶನಂ ದುಃಖನಾಶನಂ ॥ ೨೭ ॥
ಇತಿ ತೇಷಾಂ ವಚಃ ಶ್ರುತ್ವಾ ಯಾದವಾ ವಿಸ್ಮಯಂ ಗತಾಃ ।
ಕೃಷ್ಣಾಯ ಕಥಯಾಮಾಸುಃ ಕೌರವಾಣಾಂ ವಿಚೇಷ್ಟಿತಂ ॥ ೨೮ ॥
ತತಃ ಕೃಷ್ಣಸ್ಯ ವಚಸಾ ಕೌರವಾನ್ಯದುಸತ್ತಮಾಃ ।
ಆಹ್ವಯಾಮಾಸುಸ್ತೇ ಪ್ರೀತಾ ನಿಃಶಸ್ತ್ರಾನಾಗತಾನ್ನೃಪ ॥ ೨೯ ॥

ಕೂಡಿದ ಬಗೆ ಬಗೆಯ ಪೂಜಾ ಸಾಮಗ್ರಿಗಳನ್ನೂ, ದಿವ್ಯವಾದ ವಸ್ತ್ರಗಳನ್ನೂ, ನಾನಾವಿಧವಾದ ರತ್ನಗಳನ್ನೂ ತೆಗೆದುಕೊಂಡು ಕೃಷ್ಣ ಬಲರಾಮರ ಪಾವನವಾದ ನಾಮಗಳನ್ನು ಬಾಯಲ್ಲಿ ಉಚ್ಚರಿಸುತ್ತಾ ಕಾಲ್ನಡಿಗೆಯಿಂದಲೇ ಕೃಷ್ಣನನ್ನು ಸಂದರ್ಶಿಸಲು ಹೊರಟರು.

೨೬. ಆ ಕೌರವರು ಬರುತ್ತಿರುವುದನ್ನು ಕಾಣುತ್ತಲೇ ಯಾದವರಿಗೆ ಕ್ರೋಧವು ಮಿತಿಮೀರಿ ಬೇಗಬೇಗನೆ ನಾನಾವಿಧವಾದ ಶಸ್ತ್ರಗಳನ್ನು ಧರಿಸಿ ಯುದ್ಧಕ್ಕೆ ಸಿದ್ಧರಾದರು.

೨೭. ಯಾದವರ ಈ ಯುದ್ಧ ಸನ್ನಾಹವನ್ನು ಕಂಡು ಕೌರವರು 'ನಾವು ಯುದ್ಧಕ್ಕೋಸ್ಕರ ಬಂದಿಲ್ಲ. ದುಃಖನಿವಾರಕವಾದ ಶ್ರೀಕೃಷ್ಣನ ಸಂದರ್ಶನವನ್ನು ಮಾಡಬೇಕೆಂದು ಬಂದಿದ್ದೇವೆ' ಎಂದರು.

೨೮. ಈ ಮಾತನ್ನು ಕೇಳುತ್ತಲೇ ಆ ಯಾದವರು ಬೆರಗಾಗಿ ಕೌರವರ ಈ ಹೊಸ ನಡವಳಿಕೆಯನ್ನು ಕೃಷ್ಣನಿಗೆ ಬಿನ್ನವಿಸಿದರು.

೨೯. ಓ ರಾಜೇಂದ್ರ! ಅನಂತರ ಶ್ರೀಕೃಷ್ಣನ ಮಾತಿನಂತೆ ಆ ಯದುವೀರರು ಶಸ್ತ್ರಾಸ್ತ್ರಗಳಾವುದನ್ನೂ ಧರಿಸದೆ ಬರಿಗೈಲಿ ಬಂದಿರುವ ಆ ಕೌರವರನ್ನು ಪ್ರೀತಿಯಿಂದ, ಬರುವಂತೆ ಕರೆದರು.

ಆಹೂತಾಸ್ತೇ ತು ಹರಿಣಾ ಗತ್ವಾ ಶ್ರೀಕೃಷ್ಣಸನ್ನಿಧೌ ।
ಲಜ್ಜಯಾವಾಙ್ಮುಖಾಃ ಸರ್ವೇ ಪ್ರಣಮ್ಯೋಚುಃ ಪೃಥಕ್ಪೃಥಕ್ ॥ ೩೦ ॥

ಪೂರ್ವಂ ದ್ರೋಣ ಉವಾಚಾಥ ಕೃಷ್ಣ ಭದ್ರ ಜಗತ್ಪತೇ ।
ರಕ್ಷ ಮಾಂ ಕೌರವಾನ್ ರಕ್ಷ ಮಾಯಯಾ ತವ ಮೋಹಿತಾನ್ ॥ ೩೧ ॥

॥ ಕೃಪಾಚಾರ್ಯ ಉವಾಚ ॥

ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ
ಮತ್ಪ್ರಾರ್ಥನೀಯ ಮದನುಗ್ರಹ ಏಷ ಏವ ।
ತ್ವದ್ಭೃತ್ಯಭೃತ್ಯಪರಿಚಾರಕಭೃತ್ಯಭೃತ್ಯ-
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ ॥ ೩೨ ॥

---

೩೦. ಕೃಷ್ಣನಿಂದ ಆಹೂತರಾದ ಆ ಕೌರವರು ತಾವೆಸಗಿದ ದುಷ್ಕಾರ್ಯಕ್ಕೆ ನಾಚಿ, ಕೃಷ್ಣನ ಬಳಿ ತಲೆಯನ್ನು ತಗ್ಗಿಸಿಕೊಂಡೇ ಪ್ರತ್ಯೇಕವಾಗಿ ಪ್ರತಿಯೊಬ್ಬರೂ ನಮಸ್ಕರಿಸಿ ಈರೀತಿ ನುಡಿದರು.

೩೧. ಮೊದಲು ದ್ರೋಣಾಚಾರ್ಯನು ಇಂತೆಂದು ಪ್ರಾರ್ಥಿಸಿದನು— 'ಓ ಮಂಗಲ ಸ್ವರೂಪ ! ಜಗತ್ಪತೇ ! ನಿನ್ನ ಮಾಯೆಗೆ ವಶರಾಗಿ ವಿವೇಕಹೀನರಾಗಿ ವರ್ತಿಸಿದ ನನ್ನನ್ನೂ, ಕೌರವರನ್ನೂ ಕಾಪಾಡು.'

೩೨. ಬಳಿಕ ಕೃಪಾಚಾರ್ಯನು ' ಎಲೈ ಮಧುಕೈಟಭ ಸಂಹಾರಿಯೇ! ನಿನ್ನ ಭೃತ್ಯರು ಯಾರಿರುವರೋ ಆ ಭೃತ್ಯರಿಗೆ ಮತ್ತಾರು ಭೃತ್ಯರಾಗಿರುವರೋ, ಅಂಥವರನ್ನೂ ಯಾರು ಪರಿಚರಣ (ಸೇವೆ) ಮಾಡುತ್ತಲಿರುವರೋ ಅಂತಹ ಪರಿಚಾರಕರಿಗೆ ಯಾರು ಸೇವಕರೋ, ಆ ಸೇವಕರನ್ನು ಯಾರು ಶುಶ್ರೂಷೆ ಮಾಡುವರೋ ಅವರನ್ನೂ ಯಾರು ಆರಾಧಿಸುವರೋ ಅಂತಹ ಭಾಗವತರಿಗೆ ನಾನು ಸೇವಕನೆಂದು ನೀನು ತಿಳಿದರೆ ಸಾಕು ! ಇದೇ ನಾನು ಜನ್ಮವೆತ್ತಿದ್ದಕ್ಕೆ ಫಲ ! ಇದೇ ನಾನು ಬೇಡತಕ್ಕ ಫಲ ' ಎಂದನು.

|| ಕರ್ಣ ಉವಾಚ ||

ಭಕ್ತಸ್ಯಾರ್ಥೇ ಧನಂ ಕ್ಷೀಣಂ ಸ್ವದಾರಾಗತಯೌವನಂ |
ಸ್ವಾಮಿಕಾರ್ಯೇ ಗತಾಃ ಪ್ರಾಣಾ ಅಂತೇ ತಿಷ್ಠತು ಮಾಧವಃ || ೩೩ ||

|| ಭೂರಿರುವಾಚ ||

ಯಾಚಾಮಹೇ ವರದ ಕಿಂಚಿದನನ್ಯಲಭ್ಯಂ
ನಾಥ ಪ್ರಸೀದ ಸುಮುಖೀ ಯದಿ ದಿವ್ಯದೃಷ್ಟಿಃ |
ಅಸ್ಮಾಭಿರಂಜಲಿರಯಂ ವಿವಶೈರ್ವಿಬದ್ಧ
ಏಷ್ಯೆವ ಮೇ ಭವತು ದೇವ ಭವಾಂತರೇಽಪಿ || ೩೪ ||

|| ದುರ್ಯೋಧನ ಉವಾಚ ||

ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ
ಜಾನಾಮಿ ಪಾಪಂ ನ ಚ ಮೇ ನಿವೃತ್ತಿಃ |
ಕೇನಾಪಿ ದೇವೇನ ಹೃದಿ ಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ || ೩೫ ||

---

೩೩. ಬಳಿಕ ಕರ್ಣನು ಇಂತು ಪ್ರಾರ್ಥಿಸಿದನು—ಓ ಮಾಧವ! ಕೇಳಿದವರ ಇಷ್ಟಾರ್ಥವನ್ನು ನೆರವೇರಿಸುವುದರಲ್ಲಿಯೇ ನನ್ನ ಧನವು ವಿನಿಯೋಗವಾಗಲಿ! ಕೈ ಹಿಡಿದ ಹೆಂಡತಿಯ ಉಪಭೋಗದಲ್ಲೇ ನನ್ನ ಯೌವನವು ಸಂತೃಪ್ತಿಯನ್ನು ಪಡೆಯುವಂತಾಗಲಿ! ಸ್ವಾಮಿಕಾರ್ಯದಲ್ಲೇ ನನ್ನ ಪ್ರಾಣಗಳು ಕೊನೆಯನ್ನು ಹೊಂದಲಿ! ಆ ಅಂತ್ಯ ಸಮಯದಲ್ಲಿ ನೀನೇ ನನ್ನ ಮನಸ್ಸಿನಲ್ಲಿ ನೆಲಸುವಂತಾಗಲಿ!

೩೪. ಅನಂತರ ಭೂರಿಶ್ರವನು 'ಓ ವರದಾಯಕ! ನಿನ್ನ ದಿವ್ಯವಾದ ದೃಷ್ಟಿಯು ನಮ್ಮ ಮೇಲೆ ಅನುಗ್ರಹವನ್ನು ಬೀರುವುದಾದರೆ ನಾನು ಒಂದು ವರವನ್ನು—ಅದು ಮತ್ತಾರಿಂದಲೂ ದೊರೆಯಲು ಸಾಧ್ಯವಿಲ್ಲದುದು—ಪ್ರಾರ್ಥಿಸುವೆನು. (ಅದೇನೆಂದರೆ—) 'ನೀನು ನಮ್ಮಲ್ಲಿ ಪ್ರಸನ್ನನಾಗು' ಎಂಬುದೇ ಓ ದೇವಾ! ವಿವಶರಾದ ನಾವು ಕೈಮುಗಿದು ಬೇಡುವೆವು. ಈ ಒಂದು ವರವೇ ಮುಂದಿನ ಜನ್ಮಗಳಲ್ಲೂ ನಮಗೆ ದೊರೆಯಲಿ' ಎಂದು ಬೇಡಿದನು.

೩೫. ಆಮೇಲೆ ದುರ್ಯೋಧನನು 'ಓ ದೇವಾ! ಧರ್ಮವಿಂತಹುದೆಂದು ಬಲ್ಲೆನು. ಆದರೆ ಅದರಲ್ಲಿ ನನಗೆ ಆಸಕ್ತಿಯಿಲ್ಲ. ಪಾಪಕಾರ್ಯ

ಯಂತ್ರಸ್ಯ ಗುಣದೋಷೇಣ ಕ್ಷಮ್ಯತಾಂ ಮಧುಸೂದನ ।
ಅಹಂ ಯಂತ್ರೋ ಭವಾನ್ಯಂತ್ರೀ ಮಮ ದೋಷೋ ನ ದೀಯತಾಂ ೩೬॥

॥ ಭೀಷ್ಮ ಉವಾಚ ॥

ರಾಗಾಂಧಗೋಪೀಜನಚುಂಬಿತಾಭ್ಯಾಂ
ಯೋಗೀಂದ್ರಭೋಗೀಂದ್ರನಿಷೇವಿತಾಭ್ಯಾಂ ।
ಆತಾಮ್ರಪಂಕೇರುಹಕೋಮಲಾಭ್ಯಾಂ
ಚಾಭ್ಯಾಂ ಪದಾಭ್ಯಾಮಯಮಂಜಲಿರ್ಮೇ ॥ ೩೭ ॥

॥ ವಿದುರ ಉವಾಚ ॥

ಅಸ್ತೀತಿ ವಿಕ್ರಯಕೃತಾಂ ಸುಕೃತಾನಿ ತಾನಿ
ಯೇ ಬ್ರಹ್ಮ ಜಾಲಮಿವ ತತ್ಪರಿಪಾಲಯಂತಿ ।
ಯದ್ದೈತ್ಯದೇವಮುನಿಭಿರ್ಮನಸಾಪ್ಯಗಮ್ಯಂ
ಯನ್ನೇತಿ ನೇತಿ ಚ ವದನ್ನಹಿ ವೇದವೇದಃ ॥ ೩೮ ॥

ವಾವುದೆಂಬುದನ್ನು ಬಲ್ಲೆನು. ಆದರೂ ಅದರಿಂದ ನಿವೃತ್ತನಾಗಲು ನನ್ನ ಕೈಲಿ ಸಾಧ್ಯವಿಲ್ಲವಾಗಿದೆ. ನನ್ನ ಹೃದಯಾಂತರಾಳದಲ್ಲಿ ಚೈತನ್ಯರೂಪದಿಂದ ಕಂಗೊಳಿಸುವ ಆ ಸ್ವಾಮಿಯು ಯಾವರೀತಿ ನನ್ನನ್ನು ಪ್ರೇರೇಪಿಸುವನೋ ಅದೇ ರೀತಿ ನಡೆಯುವೆನು.

೩೬. ಯಂತ್ರದ ಗುಣವನ್ನಾಗಲಿ ದೋಷವನ್ನಾಗಲಿ ಪರಿಗಣಿಸ ಬಾರದು. ಆ ದೋಷವು ಕ್ಷಮ್ಯವಾದುದು. ಓ ಮಧುಸೂಧನ! ನಾನು ಯಂತ್ರ! ನೀನು ಅದನ್ನು ನಡೆಸುವ ಯಂತ್ರಿ! ಆದುದರಿಂದ ಯಂತ್ರಭೂತ ನಾದ ನನಗೆ ದೋಷವೇನೂ ಇಲ್ಲ ಎಂದನು.

೩೭. ಬಳಿಕ ಭೀಷ್ಮಾಚಾರ್ಯನು ಈರೀತಿ ಪ್ರಾರ್ಥಿಸಿದನು—' ಅನು ರಾಗಾತಿಶಯದಿಂದ ವೈಮರೆತ ಗೋಪಾಂಗನೆಯರಿಂದ ಚುಂಬಿತವಾದುದೂ, ಮಹಾಯೋಗಿಗಳಿಂದಲೂ, ಭೋಗೀಂದ್ರನಾದ ಆದಿಶೇಷನಿಂದಲೂ ಸೇವಿಸ ಲ್ಪಟ್ಟುದೂ, ಕೆಂದಾವರೆಯಂತೆ ಕೆಂಪಾಗಿಯೂ, ಕೋಮಲವಾಗಿಯೂ ಇರು ವಂಥದೂ ಆದ ಈ ಪಾದಯುಗಲಕ್ಕೆ ನನ್ನೀ ಅಂಜಲಿಯನ್ನು ಅರ್ಪಿಸುವೆನು.

೩೮. ಅನಂತರ ವಿದುರನು ಇಂತೆಂದನು—ಯಾವುದನ್ನು ದೇವತೆ ಗಳೂ, ದೈತ್ಯರೂ, ಮಹರ್ಷಿಗಳೂ ಮನಸ್ಸಿನಿಂದಲೂ, ಪರಿಭಾವಿಸಲಾರರೋ.

|| ಗರ್ಗ ಉವಾಚ ||

ಏವಂ ಸಂಪ್ರಾರ್ಥಿತಃ ಕೃಷ್ಣೋ ಕೌರವ್ಯೈಃ ಶರಣಾಗತೈಃ |
ಪ್ರೀತಃ ಪ್ರತ್ಯಾಹ ತಾನ್ರಾಜನ್ಮೇಘನಿಹ್ರಾದಯಾ ಗಿರಾ || ೩೯ ||

|| ಶ್ರೀಕೃಷ್ಣ ಉವಾಚ ||

ಆರ್ಯಾಃ ಶೃಣುತ ಮದ್ವಾಕ್ಯಮಹಮಾಗತವಾನ್ಯತಃ |
ಯುದ್ಧಂ ವಾರಯಿತುಂ ಚಾತ್ರ ನಾರದೇನ ಪ್ರಚೋದಿತಃ || ೪೦ ||

ನ ಮನ್ಯಂತಿ ಮಮಾಜ್ಞಾಂ ವೈ ಮತ್ಪುತ್ರಾಶ್ಚ ನಿರಂಕುಶಾಃ |
ದೀರ್ಘಾಣಾಂ ಚ ಪ್ರಕುರ್ವಂತಿ ಹ್ಯಪರಾಧಂ ಚ ದೂಷಣಂ || ೪೧ ||

ಯಾವ ವಸ್ತುವನ್ನು-ವೇದವು-ಅಚೇತನವಾದುದಾವುದೂ ಆ ಪರಬ್ರಹ್ಮವಲ್ಲ ವೆಂಬರ್ಥವನ್ನು ಕೊಡುವ ನೇತಿ ನೇತಿ ಎಂಬ ವಾಕ್ಯಗಳನ್ನುದಹರಿಸುತ್ತಾ ಇರುವುದಾದರೂ ತಾನೇ ನೈಜ ಸ್ವರೂಪವನ್ನರಿಯದೆ ಇರುವುದೋ-ಅಂತಹ ಆ ಪರಬ್ರಹ್ಮ ವಸ್ತುವನ್ನು ಎಳೆಯ ಹುಡುಗನಂತೆ ಭಾವಿಸಿ ಪರಿಪಾಲಿಸುತ್ತಿರುವ ಆ ಗೋಪಾಲಕರ (ಬಾಲಕೃಷ್ಣನನ್ನು ಸಾಕಿದ ಗೋಪರ) ಪುಣ್ಯವೇ ಪುಣ್ಯವು.

೩೯. ಎಲೈ ರಾಜೇಂದ್ರ! ಈರೀತಿ ಶರಣಾಗತರಾದ ಆ ಕೌರವರಿಂದ ಪ್ರಾರ್ಥಿಸಲ್ಪಟ್ಟ ಶ್ರೀಕೃಷ್ಣನು ಸುಪ್ರೀತನಾಗಿ ಮೇಘದ ಮೊಳಗಿನಂತೆ ತುಂಬಿದ ದನಿಯಿಂದ ಅವರನ್ನು ಕುರಿತು—

೪೦. 'ಎಲೈ ಪೂಜ್ಯರೇ! ನನ್ನ ಮಾತನ್ನು ಕೇಳಿರಿ. ಯಾದವರಿಗೂ, ನಿಮಗೂ ಯುದ್ಧವಾಗುತ್ತಿದೆಯೆಂಬ ಸುದ್ದಿಯನ್ನು ನಾರದಮಹರ್ಷಿಗಳ ಮುಖದಿಂದ ಅರಿತ ಕೂಡಲೇ ನಾನು ಈ ಯುದ್ಧವನ್ನು ನಿಲ್ಲಿಸಬೇಕೆಂದೇ ಇಲ್ಲಿಗೆ ಬಂದೆನು'

೪೧. ಅಂಕೆ ಶಿಕ್ಷೆಯಿಲ್ಲದ ಈ ಹುಡುಗರು ನನ್ನ ಮಾತನ್ನು ನಡೆಸುವುದಿಲ್ಲ. ಅಷ್ಟೇ ಅಲ್ಲದೆ ಪೂಜ್ಯರೆಂಬುದನ್ನೂ ಗಮನಿಸದೆ ನಿಮ್ಮಂಥವರ ವಿಷಯದಲ್ಲಿ ತಪ್ಪನ್ನೂ ನಿಂದೆಯನ್ನೂ ಮಾಡುತ್ತಿರುವರು.

ಯೂಯಂ ಧನ್ಯಾಶ್ಚ ಮಾನ್ಯಾಶ್ಚ ಮಿಲನಾರ್ಥಂ ಸಮಾಗತಾಃ |
ಮತ್ಪುತ್ರೈಶ್ಚ ಕೃತಂ ಯದ್ವೈ ತತ್ಸರ್ವಂ ಕ್ಷಂತುಮರ್ಹಥ || ೪೨ ||

ಉಗ್ರಸೇನಹಯಂ ವೀರಾಃ ಕೃಪಯಾ ಚ ವಿಮುಚ್ಯತಾಂ |
ಪಾಲನಾರ್ಥಂ ತು ತಸ್ಯಾಽಪಿ ಯೂಯಂ ಗಚ್ಛತ ಗಚ್ಛತ || ೪೩ ||

ಯಾದವಾಃ ಕೌರವಾ ಮಿತ್ರಾಃ ಕಲಹಂ ತು ಪರಸ್ಪರಂ |
ಪ್ರಕರ್ತುಂ ನೈವ ಚಾರ್ಹಂತಿ ಪೂರ್ವಪ್ರೇಮ ವಿಲೋಕ್ಯ ಚ || ೪೪ ||

ಏವಂ ತೇ ಕೃಷ್ಣದೇವೇನ ಮಿಷ್ಟವಾಕ್ಯೈಶ್ಚ ತೋಷಿತಾಃ |
ತುರಗಂ ಚ ದದುಃ ಪ್ರೀತಾಃ ಪಾರಿಬರ್ಹೇಣ ಸಂಯುತಂ || ೪೫ ||

---

೪೨. ನೀವೇ ಧನ್ಯರು. ಗೌರವಾರ್ಹರು. ಏಕೆಂದರೆ ನಮ್ಮೊಡನೆ ಸ್ನೇಹದಿಂದ ವರ್ತಿಸಲು ಬಂದಿರುವಿರಿ. ನನ್ನೀ ಮಕ್ಕಳು ಮಾಡಿದ ಅಪರಾಧವೆಲ್ಲವನ್ನೂ ಕ್ಷಮಿಸಿರಿ.

೪೩. ಎಲೈ ವೀರರಿರಾ! ಕೃಪೆಯಿಟ್ಟು ಉಗ್ರಸೇನನ ಯಜ್ಞಾಶ್ವವನ್ನು ಬಿಟ್ಟು ಬಿಡಿರಿ. ಮತ್ತು ಅದರ ಸಂರಕ್ಷಣೆಗಾಗಿ ನೀವೂ ನಮ್ಮ ಜೊತೆಯಲ್ಲಿಯೇ ಬನ್ನಿರಿ.

೪೪. ಯಾದವರೂ, ಕೌರವರೂ ಎಂದೆಂದಿಗೂ ಸ್ನೇಹಿತರೇ! ಹೀಗಿರುವಲ್ಲಿ ನಿಮ್ಮ ಪೂರ್ವಸ್ನೇಹವನ್ನು ಮರೆತು ಪರಸ್ಪರ ಯುದ್ಧವನ್ನು ಆರಂಭಿಸುವುದು ತರವಲ್ಲ ಎಂದು ನುಡಿದನು.

೪೫. ಓ ರಾಜೇಂದ್ರ! ಈರೀತಿ ಶ್ರೀಕೃಷ್ಣನು ಮಧುರವಾದ ಪ್ರಿಯವಾಕ್ಯಗಳೆನ್ನಾಡಲು ಆ ಕೌರವರು ಸಂತೋಷವನ್ನು ತಾಳಿ ಕಪ್ಪ ಕಾಣಿಕೆಗಳೊಂದಿಗೆ ಯಜ್ಞಾಶ್ವವನ್ನು ಒಪ್ಪಿಸಿದರು.

ದತ್ವಾ ತುರಂಗಮಂ ಸರ್ವೇ ಕೌರವಾಃ ಖಿನ್ನಮಾನಸಾಃ ।
ಸ್ವಪುರಂ ವಿವಿಶೂ ರಾಜನ್ ಭೀಷ್ಮೋ ಗಂತುಂ ಮನೋ ದಧೇ ॥ ೪೬ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧ
ಚರಿತ್ರೇ ಸುಮೇರೌ ಹಸ್ತಿನಾಪುರವಿಜಯೋ ನಾಮ
ಪಂಚಾಶತ್ತಮೋಽಧ್ಯಾಯಃ

---

೪೬. ಅನಂತರ ಆ ಕೌರವರೆಲ್ಲರೂ ತಮ್ಮ ಶೌರ್ಯವು ಈರೀತಿ ಸಾಗದೆ ಹೋದುದರಿಂದ ಖಿನ್ನಮನಸ್ಕರಾಗಿ ಹಸ್ತಿನಾವತಿಗೆ ತೆರಳಿದರು. ಆದರೆ ಭೀಷ್ಮಾಚಾರ್ಯನು ಮಾತ್ರ ಯಾದವರೊಂದಿಗೆ ಹೊರಡಲು ಮನಸ್ಸು ಮಾಡಿದನು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುವೆಂಬ ಹಯಮೇಧ
ಚರಿತ್ರದಲ್ಲಿ ಹಸ್ತಿನಾಪುರ ವಿಜಯವೆಂಬ
ಐವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ಕೃಷ್ಣಸ್ತು ಭಗವಾನ್ಯಾದವಾನಾಂ ಚ ಪಾಲನಂ ।
ಕೃತ್ವಾ ಮಿಲಿತ್ವಾ ಪ್ರಯಯೌ ರಥೇನಾಪಿ ಕುಶಸ್ಥಲೀ ॥ ೧ ॥

ಕೃಷ್ಣೇ ಗತೇಽನಿರುದ್ಧಸ್ತು ಹಯಂ ಸಂಪೂಜ್ಯ ಯತ್ನತಃ ।
ಬಂಧನಾನ್ಮೋಚಯಾಮಾಸ ವಿಜಯಾರ್ಥೇ ನೃಪೇಶ್ವರ ॥ ೨ ॥

ಮುಕ್ತಸ್ತುರಂಗಃ ಪ್ರಯಯೌ ದೇಶಾನ್ದೇಶಾನ್ವಿಲೋಕಯನ್ ।
ಪೃಷ್ಠತಸ್ತಸ್ಯ ರಾಜೇಂದ್ರ ತ್ವರಂ ಜಗ್ಮುಶ್ಚ ವೃಷ್ಣಯಃ ॥ ೩ ॥

ಐವತ್ತೊಂದನೆಯ ಅಧ್ಯಾಯವು

೧. ಗರ್ಗಮಹರ್ಷಿಯು ಹೇಳತೊಡಗಿದನು—ಓ ರಾಜೇಂದ್ರ! ಈರೀತಿಯಾಗಿ ಆ ಶ್ರೀಕೃಷ್ಣನು ಯಾದವರನ್ನು ಸಂರಕ್ಷಿಸಿದ ಬಳಿಕ ರಥವನ್ನೇರಿ ಕುಶಸ್ಥಲಿ (ದ್ವಾರಕೆ) ಗೆ ಹೊರಟು ಹೋದನು.

೨. ಬಳಿಕ ಅನಿರುದ್ಧನು ಯಜ್ಞಾಶ್ವವನ್ನು ವಿಧಿವತ್ತಾಗಿ ಪೂಜಿಸಿ ದಿಗ್ವಿಜಯಕ್ಕೋಸ್ಕರವಾಗಿ ಮತ್ತೆ ಕಟ್ಟು ಕಳಚಿ ಹೊರಕ್ಕೆ ಬಿಟ್ಟನು.

೩. ಈರೀತಿ ಅನಿರುದ್ಧನಿಂದ ಬಿಡಲ್ಪಟ್ಟ ಆ ಯಜ್ಞಾಶ್ವವು ದಾರಿಯಲ್ಲಿ ಅನೇಕ ದೇಶಗಳನ್ನು ನೋಡುತ್ತಾ ಮುಂದುವರಿಯಿತು. ಅದರ ಹಿಂದೆಯೇ ಯಾದವರೂ (ವೃಷ್ಣಿಗಳು) ಹಿಂಬಾಲಿಸಿ ಹೊರಟರು.

ದುರ್ಯೋಧನಂ ಜಿತಂ ಶ್ರುತ್ವಾ ಭೂಪಭೂಪಾಸ್ತುರಂಗಮಂ ।
ಪ್ರಾಪ್ತಂ ನ ಜಗೃಹೂ ರಾಷ್ಟ್ರೇ ಕೃಷ್ಣಸ್ಯ ಬಲಿನೋ ಭಯಾತ್ ॥ ೪ ॥

ಅಥಾವ್ರಜತ್ತುರಂಗೋಽಯಂ ಶೃಣ್ವನ್ಪಶ್ಯನ್ನಿತಸ್ತತಃ ।
ಸಂಪ್ರಾಪ್ತೋಽಭೂದ್ದ್ವೈತವನೇ ಯತ್ರ ರಾಜಾ ಯುಧಿಷ್ಠಿರಃ ॥ ೫ ॥

ಭ್ರಾತೃಭಿರ್ಭಾರ್ಯಯಾ ಸಾರ್ಧಂ ವನವಾಸಂ ಕರೋತಿ ಹಿ ।
ತಸ್ಮಿನ್ವನೇ ಭೀಮಸೇನೇ ವನದ್ವಿಪಗಣೈಸ್ಸಹ ॥ ೬ ॥

ನಿತ್ಯಂ ಕರೋತಿ ಕ್ರೀಡಾಂ ವೈ ಬಾಲಃ ಕ್ರೀಡನಕೈರಿವ ।
ದದರ್ಶ ತುರಗಂ ತತ್ರ ತಂ ವನಂ ಗಹ್ವರಂ ಮಹತ್ ॥ ೭ ॥

---

೪. ಓ ರಾಜೇಂದ್ರ ! ಆ ಯಜ್ಞಾಶ್ವವು ನಡೆದುಹೋದ ಆಯಾ ರಾಜ್ಯದ ರಾಜರೆಲ್ಲರೂ ದುರ್ಯೋಧನನೂ ಸೋತುಹೋದ ಸಂಗತಿಯನ್ನು ಕೇಳಿದ್ದುದರಿಂದ ಆ ಯಜ್ಞಾಶ್ವವು ತಮ್ಮ ರಾಜ್ಯದೊಳಗೆ ಬಂದಿದ್ದರೂ ಸಹ ಕೃಷ್ಣನ ಪರಾಕ್ರಮಕ್ಕೆ ಹೆದರಿ ಅದನ್ನು ಕಟ್ಟಿಹಾಕಲಿಲ್ಲ.

೫. ಅನಂತರ ಆ ಕುದುರೆಯು ಇತ್ತ ಅತ್ತ ನೋಡುತ್ತಾ ಅಲ್ಲಲ್ಲಿ ಕೇಳಿಬರುವ ವಿವಿಧ ಧ್ವನಿಗಳನ್ನು ಆಲಿಸುತ್ತಾ ಧರ್ಮರಾಜನು ವಾಸಿಸುತ್ತಾ ಇದ್ದ ದ್ವೈತವನಕ್ಕೆ ಬಂದಿತು.

೬-೭. ಆ ದ್ವೈತವನದಲ್ಲಿ ಯುಧಿಷ್ಠಿರನು ತನ್ನ ಸಹೋದರರೊಡನೆಯೂ, ಭಾರ್ಯೆಯೊಡನೆಯೂ ವಾಸವಾಗಿರುತ್ತಿದ್ದನು. ಆ ವನದಲ್ಲಿ ಭೀಮಸೇನನು ಪ್ರತಿನಿತ್ಯವೂ ಕಾಡಾನೆಗಳ ಹಿಂಡುಗಳೊಡನೆ ಎಳೆಹುಡುಗನು ಆಟದ ಸಾಮಾನುಗಳೊಡನಾಡುವಂತೆ ಆಟವಾಡುತ್ತಿರುವನು. ಹೀಗಿರಲು ಒಂದು ದಿನ ಆ ಭೀಮಸೇನನು ಉಗ್ರಸೇನನ ಯಜ್ಞಾಶ್ವವು ದಟ್ಟವಾದ ಕಗ್ಗಾಡಿಗೆ ಪ್ರವೇಶಿಸಿದುದನ್ನು ಕಂಡನು.

ನ್ಯಗ್ರೋಧಾಶ್ವತ್ಥಬಿಲ್ವೈಶ್ಚ ಖರ್ಜೂರಪನಸೈಸ್ತಥಾ ।
ಬಕುಲೈಃ ಸಪ್ತಪರ್ಣೈಶ್ಚ ತಿಂದುಕೈಸ್ತಿಲಕೈರಪಿ ॥ ೮ ॥

ಶಾಲೈಸ್ತಾಲೈಸ್ತಮಾಲೈಶ್ಚ ಬದರೀಲೋಧ್ರಪಾಟಲೈಃ ।
ಬಬ್ಬೂರಶಾಲ್ಮಲೀವೇಣುಪಲಾಶಾದಿಭಿರನ್ವಿತಂ ॥ ೯ ॥

ಆಗತಂ ಘೋಟಕಂ ದೃಷ್ಟ್ವಾ ದುರ್ಜರೇ ನಿರ್ಜನೇ ವನೇ ।
ವರಾಹಮೃಗಶಾರ್ದೂಲವೃಕಸರ್ಪಗಣೈರ್ಯುತೇ ॥ ೧೦ ॥

ಝಿಲ್ಲೀಝುಂಕಾರಸಂಯುಕ್ತೇ ಗೃಧ್ರಚಿಲ್ಲಾದಿಭಿರ್ಯುತೇ ।
ವೃತೇ ತಥಾ ಭುಜಂಗೈಶ್ಚ ವಲ್ಮೀಕಾದರ್ಧನಿಃಸೃತೈಃ ॥ ೧೧ ॥

ಶೃಗಾಲಮರ್ಕಮಹಿಷಗವಯಾದಿಭಿರನ್ವಿತೇ ।
ನೀಲಗೋಗಜಭಾಲೂಕಮಾರ್ಜಾರೈರ್ವನಮಾನುಷೈಃ ॥ ೧೨ ॥

೮-೯. ಆ ಕಾಡು ಆಲ, ಅರಳಿ, ಬಿಲ್ವ, ಖರ್ಜೂರ, ಹಲಸು, ಪಗಡೆ, ಏಳೆಲೆ ಬಾಳೆ, ತಿಂದುಕ, ತಿಲಕ, ಶಾಲವೃಕ್ಷ, (ಸರ್ಜೆ) ತಾಳೆಮರ, ಹೊಂಗೆ, ಎಲಚಿ, ಬಾಳೆ, ಪಾದರಿ, ಬಬ್ಬುಳಿ, ಬೂರುಗ, ಬಿದಿರು, ಮುತ್ತುಗ ವೊದಲಾದ ಭಾರಿ ಭಾರಿ ಮರಗಳಿಂದ ದಟ್ಟವಾಗಿರುವುದು.

೧೦-೧೨. ಮತ್ತು ಆ ಕಗ್ಗಾಡು ಜನವಿಹೀನವಾಗಿರುತ್ತಾ ಕಾಡುಹಂದಿ, ಜಿಂಕೆ, ಹುಲಿ, ತೋಳ, ಹೆಬ್ಬಾವು, ನರಿ, ಕೋತಿ, ಕಾಡುಕೋಣ. ಗವಯ, (ಕಡವೆ) ಕಪ್ಪುಹಸು, ಆನೆ, ಕರಡಿ, ಕಾಡುಬೆಕ್ಕು, ಕಾಡುಮನುಷ್ಯ ವೊದಲಾದ ಕ್ರೂರಪ್ರಾಣಿಗಳಿಂದಲೂ, ಸಾಧು ಮೃಗಗಳಿಂದಲೂ ನಿಬಿಡವಾಗಿರುವುದು. ಅಲ್ಲಿ ಜೀರುಂಡೆಗಳು ಸರ್ವದಾ "ಝಿಯಯ್" ಎಂದು ಸದ್ದುಮಾಡುತ್ತಿರುವುವು. ಹದ್ದುಗಳೂ, ರಣಹದ್ದುಗಳೂ ಹಾರಾಡುತ್ತಿರುವುವು. ಭಾರಿಯಾದ ಹಾವುಗಳು ಹುತ್ತದಿಂದ ಹೊರಗೆ ಅರ್ಧರ್ಧವಾಗಿ ಹೊರಡುತ್ತಿರುವುವು. ಹೀಗೆ ಭಯಂಕರ ವಾಗಿರುವ ಆ ಕಗ್ಗಾಡಿನಲ್ಲಿ ಕುದುರೆಯೊಂದು ಬಂದುದನ್ನು ಕರಡು ಪರಾಕ್ರಮ

ಯುಕ್ತೇ ಭಯಂಕರೇ ರಾಜನ್ ಭೀಮೋ ಭೀಮಪರಾಕ್ರಮಃ ।
ಅಶ್ವಂ ಜಗ್ರಾಹ ಕೇಶೇಷು ಸಪತ್ರಂ ನೃಪ ಲೀಲಯಾ ॥ ೧೩ ॥

ಕೇನೋತ್ಸೃಷ್ಟಂ ವದನ್ವಾಕ್ಯಂ ಸ್ವಾಶ್ರಮಂ ಪ್ರಯಯೌ ಶನೈಃ ।
ತದೈವ ಚಾನಿರುದ್ಧಾದ್ಯಾ ಆಜಗ್ಮುಃ ಸರ್ವಯಾದವಾಃ ॥ ೧೪ ॥

ಪಶ್ಯಂತೋ ಯಜ್ಞಗಂಧರ್ವಮರಣ್ಯೇ ನೃಪ ಕೃಚ್ಛ್ರತಃ ।
ದೃಷ್ಟ್ವಾ ಗೃಹೀತಂ ತುರಗಮೂಚುಸ್ತೇ ತು ಪರಸ್ಪರಂ ॥ ೧೫ ॥

ಅಹೋ ವನಚರೋ ಹ್ಯೇಷ ದೃಶ್ಯತೇ ಭೀಮಸೇನವತ್ ।
ಬೃಹದ್ಬಾಹುರ್ಮಹಾಪುಷ್ಟೋ ಮಹೋಚ್ಚೋ ರಕ್ತಲೋಚನಃ ॥ ೧೬ ॥

ಶಾಲಿಯಾದ ಆ ಭೀಮನು ಲೀಲಾಜಾಲವಾಗಿ ಅದರ ಕೇಸರಕ್ಕೆ ಕೈಹಾಕಿ ಹಿಡಿದುಬಿಟ್ಟನು. ಬಳಿಕ—

೧೪. ಈ ಕುದುರೆಯನ್ನು ಬಿಟ್ಟವರಾರೆಂದು ಹೇಳಿಕೊಳ್ಳುತ್ತಾ ನಿಧಾನವಾಗಿ ತನ್ನ ಆಶ್ರಮದಕಡೆಗೆ ಹೊರಟನು. ಅಷ್ಟುಹೊತ್ತಿಗೆ ಸರಿಯಾಗಿ ಅನಿರುದ್ಧ ಮೊದಲಾದಿ ಯಾದವರೆಲ್ಲರೂ ಅಲ್ಲಿಗೆ ಬಂದರು.

೧೫. ಓ ರಾಜೇಂದ್ರ ! ಆ ಯಾದವರು ಕಾಡಿನಲ್ಲಿ ಯಜ್ಞಾಶ್ವವು ಎಲ್ಲಿ ಹೋಯಿತೋ ಎಂದು ಬಹುಕಷ್ಟದಿಂದ ಹುಡುಕುತ್ತಾ ಅಲ್ಲಿಗೆ ಬಂದಿದ್ದರು. ಭೀಮನು ಅದನ್ನು ಹಿಡಿದಿರುವುದನ್ನು ಕಂಡು ಅವರು ತಮ್ಮತಮ್ಮಲ್ಲಿಯೇ ಈ ರೀತಿ ಮಾತನಾಡಿಕೊಂಡರು.

೧೬. ಈ ವನೇಚರನು ಯಾರು? ನೋಡಿದರೆ ಭೀಮಸೇನನಂತಿರುವನು, ಅವನಂತೆಯೇ ಇವನಿಗೂ ಭಾರಿ ಭಾರಿ ತೋಳುಗಳು, ಚೆನ್ನಾಗಿ ಬೆಳೆದ ಮಾಂಸಲವಾದ ದೇಹ' ಎತ್ತರವಾದ ಆಕೃತಿ, ಇಂಪಾದ ಕಣ್ಣು,

ಮಹಾಗೌರಃ ಕೃಚ್ಛ್ರಧರೋ ಧೂಲಿಲಿಪ್ತೋ ಗದಾಧರಃ ।
ಇತ್ಥಂ ಬ್ರುವಂತಸ್ತೇ ಸರ್ವೇ ಪುನರೂಚುಶ್ಚ ತಂ ಜನಂ ॥ ೧೭ ॥

ಕಸ್ತ್ವಂ ಶ್ರೀರಾಜರಾಜಸ್ಯ ಹಯಂ ನೀತ್ವಾ ಕ್ವ ಯಾಸ್ಯಸಿ ।
ತಸ್ಮಾನ್ಮೋಚಯ ಶೀಘ್ರಂ ತ್ವಾಂ ನ ಚೇದ್ಧನ್ಮೋ ಶಿಲೀಮುಖೈಃ ॥ ೧೮ ॥

ಇತಿ ತದ್ವಾಕ್ಯಮಾಕರ್ಣ್ಯ ಹಯಂ ಬಧ್ವಾ ಚ ಗಹ್ವರೇ ।
ಜಗ್ರಾಹ ಸ್ವಗದಾಂ ಗುರ್ವೀಂ ಭರಾಯುತಸಮನ್ವಿತಾಂ ॥ ೧೯ ॥

ತಯಾ ಜಘಾನ ಸಂಗ್ರಾಮೇ ಯಾದವಾನ್ಭೀಮವಿಕ್ರಮಃ ।
ನಿಪೇತುರ್ವೃಷ್ಣಯಸ್ತತ್ರ ಭೀಮೇನ ನಿಹತಾಶ್ಚ ಯೇ ॥ ೨೦ ॥

---

೧೭. ಅಚ್ಚಬಿಳಿಯ ಮೈಬಣ್ಣ, ಅದೇ ತೆರನಾದ ಸಾಹಸಕಾರ್ಯಗಳಲ್ಲಿ ಆಸಕ್ತಿ, ಅದೇ ಧೂಳೀಧೂಸರವಾದ ಮೈ, ಅದೇರೀತಿ ಕೈಲಿ ಹಿಡಿದಿರುವ ಗದೆ, ಇವೆಲ್ಲವೂ ಇರುವುವು. ಎಂದು ಮುಂತಾಗಿ ಮಾತನಾಡಿಕೊಂಡು ನಂತರ ಅವನನ್ನು ಕುರಿತು ಇಂತೆಂದು ನುಡಿದರು :—

೧೮. ನೀನಾರು? ಇದು ರಾಜರಾಜನಾದ ಉಗ್ರಸೇನನ ಯಜ್ಞಾಶ್ವವು. ಇದನ್ನು ಹಿಡಿದುಕೊಂಡು ಎಲ್ಲಿಗೆ ಹೋಗುತ್ತಿರುವೆ? ಬೇಗನೇ ಈ ಕುದುರೆಯನ್ನು ಕಟ್ಟಿನಿಂದ ಕಳಚಿ ಬಿಟ್ಟುಬಿಡು. ಇಲ್ಲದಿದ್ದರೆ ನಿನ್ನನ್ನು ನಮ್ಮ ಬಾಣಗಳಿಂದ ಕೊಂದುಬಿಡುವೆವು ಎಂದರು.

೧೯. ಓ ರಾಜೇಂದ್ರ, ಈರೀತಿ ಆ ಯಾದವರು ನುಡಿದ ಮಾತನ್ನು ಕೇಳುತ್ತಲೇ ಆ ಭೀಮನು ಯಜ್ಞಾಶ್ವವನ್ನು ಗುಹೆಯೊಂದರಲ್ಲಿ ಬಿಗಿದುಕಟ್ಟಿ, ಹತ್ತುಸಾವಿರ ಭಾರಗಳಷ್ಟು ತೂಕವುಳ್ಳ ತನ್ನ ಭಾರಿ ಗದೆಯನ್ನು ಹಿಡಿದು ನಿಂತನು. (ಒಂದು ಭಾರವೆಂದರೆ ಆರೋಗ್ಯ ದೃಢಕಾಯನಾದ ಪುರುಷನು ಎತ್ತಬಹುದಾದಷ್ಟು ಹೊರೆ).

೨೦. ಶತ್ರುಗಳಿಗೆ ಹೆದರಿಕೆಯನ್ನು ಹುಟ್ಟಿಸುವಂತಹ ಪರಾಕ್ರಮವುಳ್ಳ ಆ ಭೀಮನು ತನ್ನೊಡನೆ ಸೆಣಸಲು ಬಂದ ಯಾದವರನ್ನು ಆ ಗದೆಯಿಂದ ಅಪ್ಪಳಿಸತೊಡಗಿದನು. ಆ ಗದಾಪ್ರಹಾರಕ್ಕೀಡಾದ ಯಾದವರೆಲ್ಲರೂ ಕೆಳಗೆ ಬಿದ್ದುಹೋದರು.

ಅನಿರುದ್ಧಸ್ತತಃ ಕ್ರುದ್ಧೋ ದೃಷ್ಟ್ವಾ ತಸ್ಯ ಪರಾಕ್ರಮಂ ।
ಸಹಸ್ರವಾರಣಾನ್ಮತ್ತಾನ್ನೋದಯಾಮಾಸ ಶತ್ರವೇ ॥ ೨೧ ॥

ತತಃ ಸ ದಿಗ್ಗಜೈಃ ಸೋऽಪಿ ಭೂಭೃಚ್ಛಿಖರಸನ್ನಿಭೈಃ ।
ಪಾತಿತೋ ಧರಣೀಪೃಷ್ಠೇ ವಿಷಾಣೈರವಪೀಡ್ಯತೇ ॥ ೨೨ ॥

ತತೋ ಭೀಮಃ ಸಮುತ್ಥಾಯ ಕ್ರೋಧಾತ್ಪ್ರಸ್ಫುರಿತಾಧರಃ ।
ಮತ್ತಾನ್ಗಜಾಞ್ಜಘಾನಾಥ ಗದಯಾ ವಜ್ರಕಲ್ಪಯಾ ॥ ೨೩ ॥

ಕಾಂಶ್ಚಿಚ್ಚಿಕ್ಷೇಪ ಗಗನೇ ಕಾಂಶ್ಚಿದ್ಭೂಮೌ ವ್ಯಪೋಥಯೇತ್ ।
ಕಾಂಶ್ಚಿನ್ಮಮರ್ದ ಪಾದಾಭ್ಯಾಂ ಗಜಾನ್ಕಾಂಶ್ಚಿದ್ಗಜೇಷು ಚ ॥ ೨೪ ॥

ತತಶ್ಚ ದುದ್ರುವುಃ ಸರ್ವೇ ವಾರಣಾ ಭಯವಿಹ್ವಲಾಃ ।
ತದಾ ಜಗಾಮ ಸಂಕ್ರುದ್ಧೋ ಗದಸ್ತತ್ರ ಗದಾಧರಃ ॥ ೨೫ ॥

---

೨೧. ಅನಂತರ ಅನಿರುದ್ಧನು ಆ ಭೀಮನ ಪರಾಕ್ರಮವನ್ನು ನೋಡಿ ಕುಪಿತನಾಗಿ ಮದಿಸಿದ ಸಾವಿರ ಆನೆಗಳನ್ನು ಅವನಮೇಲೆ ನುಗ್ಗಿಸಿದನು.

೨೨. ಪರ್ವತದ ಶಿಖರಗಳಂತೆ ಭಾರಿ ಆಕಾರವುಳ್ಳ ಆ ಮದ್ದಾನೆಗಳು ಭೀಮನಮೇಲೆ ಒಟ್ಟಾಗಿ ನುಗ್ಗಿ ಅವನನ್ನು ಕೆಳಕ್ಕೆ ಕೆಡವಿ ಕೊಂಬುಗಳಿಂದ ತಿವಿಯತೊಡಗಿದವು.

೨೩. ಸ್ವಲ್ಪಹೊತ್ತಿನಲ್ಲಿಯೇ ಭೀಮನು ಮೇಲಕ್ಕೆದ್ದು ನಿಂತು ಮಹಾ ಕೋಪದಿಂದ ತುಟಿಗಳನ್ನು ಅಲುಗಿಸುತ್ತಾ ವಜ್ರಾಯುಧಕ್ಕೆಣೆಯಾದ ತನ್ನ ಗದೆ ಯಿಂದ ಆ ಮದ್ದಾನೆಗಳನ್ನು ಸದೆಬಡಿದನು.

೨೪. ಕೆಲವು ಆನೆಗಳನ್ನು ಆಕಾಶಕ್ಕೆಸೆದು ಕೆಲವು ಆನೆಗಳನ್ನು ನೆಲದ ಮೇಲೆ ನುರಿದುಬಿಟ್ಟನು. ಕೆಲವನ್ನು ಕಾಲುಗಳಿಂದ ತುಳಿದು ಅಜ್ಜಿಬಜ್ಜಿಮಾ ಡಿದನು. ಮತ್ತೆ ಕೆಲವುಗಳನ್ನು ಆನೆಗಳಿಂದಲೇ ಬಡಿದು ಕೊಂದನು.

೨೫. ಆಗ ಆ ಮದ್ದಾನೆಗಳೆಲ್ಲವೂ ಭಯದಿಂದ ತತ್ತಳಿಸುತ್ತಾ ಕಾಲಿಗೆ ಬುದ್ಧಿಹೇಳಿದುವು. ಆಗ ಗದನೆಂಬ ಯಾದವನು ಕೈಯಲ್ಲಿ ಗದೆಯನ್ನು ಹಿಡಿದು ಕೋಪದಿಂದ ನುಗ್ಗಿಬಂದನು.

ಗತ್ವಾ ತತ್ಸನ್ನಿಧೌ ಸೋಽಪಿ ಜ್ಞಾತ್ವಾ ಭೀಮಂ ತು ಶಂಕಿತಃ ।
ಉವಾಚ ನತ್ವಾ ಹೇ ವೀರ ಕಸ್ತ್ವಂ ವದ ಮಮಾಗ್ರತಃ ॥ ೨೬ ॥

ಸೋಽಬ್ರವೀದ್ಭೀಮಸೇನೋಽಹಂ ಜಿತ್ವಾ ದ್ಯೂತೇನ ಹೇ ಗದ ।
ದುರ್ಯೋಧನೇನ ರಿಪುಣಾ ಪುರಾ ನಿಷ್ಕಾಸಿತಾ ವಯಂ ॥ ೨೭ ॥

ಅತ್ರ ಸ್ಥಾನಾದ್ಯೋಜನೇ ತು ಭ್ರಾತೃಭಿಶ್ಚ ಯುಧಿಷ್ಠಿರಃ ।
ಕರೋತಿ ವನವಾಸಂ ವೈ ಹ್ಯಹೋ ದೇವಸ್ಯ ಮಾಯಯಾ ॥ ೨೮ ॥

ವನೇ ವರ್ಷಾ ಗತಾಶ್ಚಾಷ್ಟೌ ಚತ್ವಾರಸ್ತ್ವವಶೇಷಿತಾಃ ।
ವರ್ಷಮಾತ್ರಂ ಕರಿಷ್ಯಾಮೋಽಜ್ಞಾತವಾಸಂ ವಯಂ ಪುನಃ ॥ ೨೯ ॥

ಅರ್ಜುನಸ್ತು ಗತಃ ಸ್ವರ್ಗಮಾಹೂತೋ ವಾಸವೇನ ಚ ।
ಅಹಂ ನ ಜಾನೇ ತು ಕದಾಽಽಗಮಿಷ್ಯತಿ ಮಹೀತಲೇ ॥ ೩೦ ॥

---

೨೬. ಆ ಗದನು ಭೀಮನ ಬಳಿಗೆ ಬರುತ್ತಲೇ ಇವನೇ ಭೀಮನೆಂದು ಗುರುತುಹಿಡಿದು ಶಂಕಾಕುಲನಾಗಿ ನಮಸ್ಕರಿಸಿ, "ಎಲೈ ವೀರನೇ ನೀನಾರು? ನನಗೆ ಹೇಳು?" ಎಂದು ಪ್ರಶ್ನಿಸಿದನು.

೨೭. ಆದಕ್ಕಾ ಭೀಮಸೇನನು ಅಯ್ಯಾ ಗದನೇ! ಕೇಳು. ನಮ್ಮ ಶತ್ರುವಾದ ದುರ್ಯೋಧನನು ನಮ್ಮನ್ನು ಜೂಜಿನಲ್ಲಿ ಗೆದ್ದು ಊರಿನಿಂದ ಹೊರಗೆ ಅಟ್ಟಿದನು.

೨೮. ಬಳಿಕ ಅಣ್ಣನಾದ ಯುಧಿಷ್ಠರನು ನಮ್ಮೆಲ್ಲರೊಡನೆ ಹೊರಟು ಬಂದು ಇಲ್ಲಿಗೆ ಒಂದು ಯೋಜನದೂರದಲ್ಲಿ ಅರಣ್ಯವಾಸವನ್ನು ಮಾಡುತ್ತಿರುವನು. ದೈವಮಾಯೆಗೆ ಒಳಗಾಗದವರು ಯಾರು ?

೨೯. ನಾವು ಈ ಕಾಡಿಗೆ ಬಂದು ಎಂಟು ವರ್ಷಗಳು ಕಳೆದುಹೋದುವು. ಇನ್ನು ನಾಲ್ಕು ವರ್ಷಗಳು ಉಳಿದಿವೆ. ಇದು ಮುಗಿದಮೇಲೆ ನಾವು ಮತ್ತೊಂದು ವರ್ಷ ಯಾರಿಗೂ ತಿಳಿಯದಂತೆ ಅಜ್ಞಾತವಾಸ ಮಾಡಬೇಕು.

೩೦. ಈಗ ಅರ್ಜುನನು ಕೂಡ ಇಂದ್ರನ ಆಹ್ವಾನದಂತೆ ಸ್ವರ್ಗಕ್ಕೆ ತೆರಳಿರುವನು. ಮರಳಿ ಅವನು ಈ ಭೂಮಿಗೆ ಯಾವಾಗ ಬರುವನೋ! ಅದೂ ನನಗೆ ತಿಳಿಯದು.

ಗದ ತ್ವಂ ತು ಯದೂನಾಂ ಚ ಕುಶಲಂ ಕಥಯಸ್ವ ನಃ ।
ತುರಗಃ ಕಸ್ಯ ಭೂಪಸ್ಯ ಕಿಮರ್ಥಂ ಯೂಯಮಾಗತಾಃ ॥ ೩೧ ॥

ಇತ್ಯುಕ್ತ್ವಾ ಭೀಮಸೇನಸ್ತು ರುರೋದಾಶ್ರುಪರಿಪ್ಲುತಃ ।
ದುರ್ಯೋಧನಕೃತಾನ್ಕ್ಲೇಶಾನ್ ಸಂಸ್ಮರನ್ ದುಃಖಪೂರಿತಃ ॥ ೩೨ ॥

ಇತಿ ಶ್ರುತ್ವಾ ಸ ತದ್ವಾಕ್ಯಂ ತಂ ಸಮಾಶ್ವಸ್ಯ ದುಃಖಿತಃ ।
ಭೀಮಾಯ ಕಥಯಾಮಾಸ ವಾರ್ತಾಂ ಸರ್ವಾಂ ಚ ವಿಸ್ತರಾತ್ ॥ ೩೩ ॥

ಶ್ರುತ್ವಾ ಭೀಮಸ್ತು ಮುದಿತೋಽನಿರುದ್ಧಾದ್ಯೈರ್ಯದೂತ್ತಮೈಃ ।
ಸಮನ್ವಿತಸ್ತು ಪ್ರಯಯೌ ಧರ್ಮಪುತ್ರಸ್ಯ ಸನ್ನಿಧೌ ॥ ೩೪ ॥

ಆಗತಾನ್ಯಾದವಾನ್ಶ್ರುತ್ವಾಜಾತಶತ್ರುಃ ಪ್ರಹರ್ಷಿತಃ ।
ಆನೇತುಂ ನಿರ್ಯಯೌ ರಾಜನ್ನಕುಲಾದ್ಯೈಃ ಸಮನ್ವಿತಃ ॥ ೩೫ ॥

---

೩೧. ಎಲೈ ಗದನೇ! ನೀನು ನಮಗೆ ಯಾದವರ ಕ್ಷೇಮಸಮಾಚಾರವನ್ನು ತಿಳಿಸು. ಈ ಕುದುರೆಯು ಯಾವ ರಾಜನದು? ಇದರ ಹಿಂದೆ ನೀವು ಏತಕ್ಕೆ ಬಂದಿರುವಿರಿ? ಎಂದು ನುಡಿದು—

೩೨. ದುರ್ಯೋಧನನು ತಮಗೆ ಕೊಟ್ಟ ಕಷ್ಟಗಳೆಲ್ಲವನ್ನೂ ನೆನೆನೆನೆದು ದುಃಖದಿಂದ ಕಣ್ಣೀರು ಸುರಿಸುತ್ತಾ ಅತ್ತುಬಿಟ್ಟನು.

೩೩. ಭೀಮನಾಡಿದ ಮಾತನ್ನು ಕೇಳಿ, ಆ ಗದನು ತಾನೂ ವ್ಯಥೆಪಟ್ಟು ಅವನನ್ನು ಸಂತೈಸಿ ತಾನು ಬಂದಿರುವ ಸಂಗತಿಯೆಲ್ಲವನ್ನೂ ವಿಸ್ತಾರವಾಗಿ ತಿಳಿಸಿದನು.

೩೪. ಅದನ್ನು ಕೇಳುತ್ತಲೇ ಭೀಮಸೇನನು ಮಹಾಸಂತೋಷವನ್ನು ತಾಳಿ ಅನಿರುದ್ಧ ಮೊದಲಾದ ಯಾದವವೀರರೊಡನೆ ಯುಧಿಷ್ಠಿರನಿದ್ದ ಬಳಿಗೆ ಹೊರಟನು.

೩೫. ಓ ರಾಜೇಂದ್ರ, ಯಾದವರು ಬಂದರೆಂಬ ಸುದ್ದಿಯನ್ನು ಕೇಳಿದೊಡನೆಯೇ ಆ ಅಜಾತಶತ್ರುವು ಪರಮಸಂತೋಷದಿಂದ ನಕುಲಾದಿಗಳೊಡನೆ ಅವರನ್ನು ಕರೆತರಲು ಹೊರಟನು.

ನೇಮುಸ್ತಂ ಯಾದವಾಃ ಸರ್ವೇ ಸೋऽಪಿ ದತ್ವಾ ವರಾಶಿಷಂ ।
ನಿವಾಸಯಾಮಾಸ ಮುದಾ ಸರ್ವಾನ್ದ್ವೈತವನೇ ನೃಪ ॥ ೩೬ ॥

ಆಗತೇಭ್ಯಶ್ಚ ಸರ್ವೇಭ್ಯೋ ಯಥಾಯೋಗ್ಯಂ ಯಥಾರುಚಿ ।
ಪ್ರದದೌ ಭೋಜನಂ ರಾಜಾ ಸ್ಥಾಲ್ಯಾ ಭಾಸ್ಕರದತ್ತಯಾ ॥ ೩೭ ॥

ಉಷಿತ್ವಾ ರಜನೀಮೇಕಾಂ ಪ್ರಭಾತೇ ಕಾರ್ಷ್ಣಿನಂದನಃ ।
ಕೃತೋರ್ನಿಮಂತ್ರಣಂ ದತ್ವಾ ಪಾಂಡವೇಭ್ಯಃ ಪರಂತಪ ॥ ೩೮ ॥

ಯಾದವೈಃ ಸಹಿತಾ ಶೀಘ್ರಂ ಮೋಚಯಿತ್ವಾ ತುರಂಗಮಂ ।
ಯಯೌ ಸಾರಸ್ವತಾನ್ದೇಶಾನ್ ತುರಗಸ್ಯ ಚ ಪೃಷ್ಠತಃ ॥ ೩೯ ॥

ಅಶೂರಾಂಶ್ಚ ಬಹೂನ್ದೇಶಾನ್ ತ್ಯಕ್ತ್ವಾ ತುರಗರಾಟ್ತತಃ ।
ಸ್ವೇಚ್ಛಯಾ ವಿಚರನ್ಪ್ರಾಜನ್ಯಯೌ ಕೌಂತಲಕಂ ಪುರಂ ॥ ೪೦ ॥

---

೩೬. ಆ ಯಾದವರೆಲ್ಲರೂ ಅಜಾತಶತ್ರುವನ್ನು ಕಂಡಕೂಡಲೇ ನಮಸ್ಕರಿಸಿದರು. ಧರ್ಮಪುತ್ರನು ಅವರೆಲ್ಲರನ್ನೂ ಆಶೀರ್ವಾದಿಸಿದನಂತರ ಅವರೆಲ್ಲರನ್ನೂ ದ್ವೈತವನದ ತನ್ನ ನಿವಾಸದಲ್ಲಿ ಇಳಿಸಿದನು.

೩೭. ಅನಂತರ ಸೂರ್ಯನು ಅನುಗ್ರಹಿಸಿದ ಅಕ್ಷಯಪಾತ್ರೆಯಿಂದ ಆಗಂತುಕರಾದ ಆ ಯಾದವರಿಗೆ ಉಚಿತವೂ, ರುಚಿಕರವೂ ಆದಂತಹ ಭೋಜನವನ್ನು ಒದಗಿಸಿ ಉಪಚರಿಸಿದನು. ಬಳಿಕ—

೩೮. ಪ್ರದ್ಯುಮ್ನಪುತ್ರನಾದ ಆ ಅನಿರುದ್ಧನು ಆ ರಾತ್ರಿಯೆಲ್ಲವನ್ನೂ ಅಲ್ಲಿಯೇ ಕಳೆದು ಬೆಳಗಾಗುತ್ತಲೇ ಪಾಂಡವರೆಲ್ಲರನ್ನೂ ಯಜ್ಞಕ್ಕೆ ಬರುವಂತೆ ಆಹ್ವಾನಿಸಿ—

೩೯. ಕುದುರೆಯನ್ನು ಬಿಡಿಸಿಕೊಂಡು ಅದನ್ನೇ ಹಿಂಬಾಲಿಸುತ್ತಾ ಯಾದವಸೇನೆಯೊಡನೆ ಬೇಗಬೇಗನೆ ಸರಸ್ವತೀನದಿಯ ತೀರದಲ್ಲಿದ್ದ ದೇಶಗಳ ಕಡೆ ಹೊರಟನು.

೪೦. ಅನಂತರ ಆ ಯಜ್ಞಾಶ್ವವು ಸ್ವೇಚ್ಛೆಯಾಗಿ ಸಂಚರಿಸುತ್ತಾ ಶೂರರಾದ ಜನರಿಲ್ಲದ ಅನೇಕ ದೇಶಗಳನ್ನು ಧಾಟಿ ಕೊನೆಗೆ ಶಕುಂತಲನಗರವನ್ನು ಪ್ರವೇಶಿಸಿತು.

ತಸ್ಮಿನ್ಪುರೇ ಮಹಾರಾಜ ಚಂದ್ರಹಾಸಶ್ಚ ವೈಷ್ಣವಃ ।
ಪಾಲಿತೋ ಯಃ ಕುಲಿಂದೇನ ಕೇರಲಾಧಿಪತೇಃ ಸುತಃ ॥ ೪೧ ॥

ಕೃಷ್ಣದೇವಪ್ರಸಾದೇನ ರಾಜ್ಯಂ ತತ್ರ ಕರೋತಿ ಹಿ ।
ಕಥಾಸ್ತಸ್ಯಾಽಪಿ ಭಕ್ತಸ್ಯ ರಾಜನ್ ಜೈಮಿನಿಭಾರತೇ ॥ ೪೨ ॥

ಅರ್ಜುನಾಗ್ರೇ ವಿಸ್ತರಾದ್ವೈ ನಾರದೇನ ತು ವರ್ಣಿತಾಃ ।
ತಸ್ಮಿನ್ಪುರೇ ನರಾಃ ಸರ್ವೇ ಕೃಷ್ಣಭಕ್ತಾ ವಸಂತಿ ಹಿ ॥ ೪೩ ॥

ಬ್ರಹ್ಮಣ್ಯಾಃ ಪುಣ್ಯಕರ್ತಾರಃ ಪರದಾರಪರಾಙ್ಮುಖಾಃ ।
ಸ್ವದಾರನಿರತಾಃ ಸರ್ವೇ ಕೃಷ್ಣಪೂಜನತತ್ಪರಾಃ ॥ ೪೪ ॥

ಗೋವಿಂದಗಾಥಾಂ ಶೃಣ್ವಂತಿ ಪುರಾಣಾನಿ ತಥೈವ ಚ ।
ಜಪಂತಿ ತತ್ರ ನಾಮಾನಿ ರಾಧಾಮಾಧವಯೋರ್ಮುದಾ ॥ ೪೫ ॥

---

೪೧. ಓ ಮಹಾರಾಜ! ಆ ನಗರದಲ್ಲಿ ಕೇರಳದೇಶಾಧಿಪತಿಯಮಗನೂ ಕುಲಿಂದನೆಂಬುವನಿಂದ 'ಸಾಕಲ್ಪಟ್ಟವನೂ, ವಿಷ್ಣುಭಕ್ತಾಗ್ರಣಿಯೂ ಆದ ಚಂದ್ರಹಾಸನೆಂಬುವನು,

೪೨-೪೩. ಶ್ರೀಕೃಷನ ಅನುಗ್ರಹಧಿಂದ ರಾಜ್ಯಭಾರವನ್ನು ಮಾಡುತ್ತಿರುವನು. ರಾಜೇಂದ್ರ, ಆ ಭಕ್ತಶ್ರೇಷ್ಠನ ಚರಿತ್ರವನ್ನು ನಾರದನು ಅರ್ಜುನನಿಗೆ ವಿಸ್ತಾರವಾಗಿ ಹೇಳಿದನೆಂದು ಜೈಮಿನಿಭಾರತದಲ್ಲಿ ವರ್ಣಿತವಾಗಿರುವುದು. ಆ ಊರಿನಲ್ಲಿ ವಾಸಮಾಡುವ ಪ್ರತಿಯೊಬ್ಬ ಮಾನವನೂ ವಿಷ್ಣುಭಕ್ತನು.

೪೪. ಅವರೆಲ್ಲರೂ ಬ್ರಹ್ಮಜ್ಞಾನಿಗಳು. ತಂತಮ್ಮ ಪತ್ನಿಯರಲ್ಲೇ ಆಸಕ್ತರಾದವರು. ಸರ್ವದಾ ಕೃಷ್ಣಾರ್ಚನೆಯಲ್ಲಿಯೇ ತೊಡಗಿರುವವರು.

೪೫. ಆ ಪಟ್ಟಣಿಗರು ಸರ್ವದಾ ಶ್ರೀಕೃಷ್ಣನ ಚರಿತ್ರಗಳನ್ನೂ ಪುರಾಣಗಳನ್ನೂ ಆಲಿಸುತ್ತಿರುವರು. ರಾಧಾಮಾಧವರ ನಾಮಗಳನ್ನು ಸಂತೋಷದಿಂದ ಜಪಿಸುತ್ತಿರುವರು.

ತುಲಸೀಮಾಲಿಕಾಭಿಶ್ಚ ಹ್ಯೂರ್ಧ್ವಪುಂಡ್ರಧರಾ ದ್ವಿಜಾಃ ।
ಗೋಪೀಚಂದನಕಾಶ್ಮೀರೈರ್ಹರಿಮಂದಿರಚರ್ಚಿತಾಃ ॥ ೪೬ ॥

ಶ್ಯಾಮಬಿಂದುಧರಾಃ ಸರ್ವೇ ಶ್ರೀಧರಾಃ ಕೇಚಿದೇವ ಹಿ ।
ತಿಲಕೈರ್ದ್ವಾದಶೈರ್ಯುಕ್ತಾ ಅಷ್ಟಮುದ್ರಾಧರಾಃ ಪರಾಃ ॥ ೪೭ ॥

ಗೃಹಸ್ಥಾಃ ಶೀತಲಾಂ ಮುದ್ರಾಂ ಗೋಪೀಚಂದನಸಂಯುತಾಂ ।
ನಿತ್ಯಂ ವಿಪ್ರಾದಯೋ ವರ್ಣಾ ಪ್ರಭಾತೇ ಧಾರಯಂತಿ ಹಿ ॥ ೪೮ ॥

ಅಗ್ನಿಸಂಸ್ಕರಣಾರ್ಥಂ ತು ವಿರಕ್ತಾಃ ಕೇಚಿದೇವ ಹಿ ।
ತಪ್ತಮುದ್ರಾ ಧಾರಯಂತಿ ಕೇಚಿತ್ಸಂನ್ಯಾಸಿನಸ್ತಥಾ ॥ ೪೯ ॥

---

೪೬. ಅಲ್ಲಿಯ ದ್ವಿಜರು ತುಲಸಿಯ ಸರಗಳನ್ನು ಹಾಕಿಕೊಂಡಿರುವರಲ್ಲದೆ, ಊರ್ಧ್ವಪುಂಡ್ರಗಳನ್ನೂ ಧರಿಸಿರುವರು. ಮತ್ತೂ ಗೋಪೀಚಂದನ, ಕೇಸರಿ ಇವುಗಳನ್ನು ಅರೆದು ಅವುಗಳಿಂದ ವಿಷ್ಣುಮಂದಿರದ ಆಕಾರದಲ್ಲಿ ಮೈಮೇಲೆ ಲೇಪಿಸಿಕೊಂಡಿರುವರು.

೪೭. ಅಲ್ಲದೆ ಅವುಗಳ ನಡುವೆ ಎಲ್ಲರೂ ಕಪ್ಪಾದ ಬಿಂದುಗಳನ್ನು ಹಚ್ಚಿಕೊಂಡಿರುವರು. ಕೆಲವರು ಮಾತ್ರ ಶ್ರೀಚೂರ್ಣವನ್ನು ಧರಿಸಿರುವರು. ಕೆಲವರು ಹನ್ನೆರಡು ತಿಲಕಗಳನ್ನೂ, ಇನ್ನಿತರರು ಎಂಟು ಮುದ್ರೆಗಳನ್ನೂ ಧರಿಸಿರುವರು.

೪೮. ಗೃಹಸ್ಥಾಶ್ರಮಿಗಳಾದ ಬ್ರಾಹ್ಮಣಾದಿ ಚತುರ್ವರ್ಣದವರು ಬೆಳಗ್ಗೆ ಶೀತಲವಾದ ಗೋಪೀಚಂದನದ ಮುದ್ರೆಯನ್ನು ಹಾಕುವರು.

೪೯. ವಿರಕ್ತರಾದ ಕೆಲವು ಮಂದಿ ಮಾತ್ರ ಅಗ್ನಿಸಂಸ್ಕಾರವೂ ಆಗಲೆಂದು ತಪ್ತಮುದ್ರೆಗಳನ್ನು ಧರಿಸಿರುವರು. ಅದೇರೀತಿ ಸನ್ಯಾಸಿಗಳೂ ಸಹ ತಪ್ತಮುದ್ರಾಧಾರಣ ಮಾಡುವರು.

ತಸ್ಮಿನ್ಪುರೇ ಹಯಃ ಪಶ್ಯನ್ ಪ್ರಾಪ್ತೋಽಭೂದ್ರಾಜಮಂದಿರೇ ।
ಯತ್ರ ರಾಜತಿ ರಾಜಾ ತು ಚಂದ್ರಹಾಸಶ್ಚ ಚಂದ್ರವತ್ ॥ ೫೦ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ಕೌಂತಲಪುರಗಮನಂ ನಾಮ
ಏಕಪಂಚಾಶತ್ತಮೋಽಧ್ಯಾಯಃ

---

೫೦. ಇಂತಹ ವೈಷ್ಣವೋತ್ತಮರಿಂದ ತುಂಬಿದ ಆ ಪಟ್ಟಣವನ್ನು ಯಜ್ಞಾಶ್ವವು ಪ್ರವೇಶಿಸಿ ಅತ್ತಿತ್ತ ನೋಡುತ್ತಾ ಚಂದ್ರನಂತೆ ಪ್ರಕಾಶಿಸುತ್ತಿರುವ ಆ ಚಂದ್ರಹಾಸನು ವಾಸಮಾಡುವ ರಾಜಮಂದಿರವನ್ನು ಪ್ರವೇಶಿಸಿತು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ಕುಂತಲಪುರಗಮನವೆಂಬ ಐವತ್ತೊಂದನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ದ್ವಿಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ಸಮಾಗತಂ ಯಜ್ಞಹಯಂ ವಿಲೋಕ್ಯ
ಶ್ರೀಚಂದ್ರಹಾಸೋ ವ್ರಜಚಂದ್ರದಾಸಃ ।
ಸದ್ಯೋ ಗೃಹೀತ್ವಾ ಕಿಲ ತಸ್ಯ ಪತ್ರಂ
ಸ ವಾಚಯಾಮಾಸ ತದೈವ ಹೃಷ್ಟಃ ॥ ೧ ॥

ತತ್ಪತ್ರಂ ವಾಚಯಿತ್ವಾಹ ಮಹಾಭಾಗವತೋ ನೃಪ ।
ಅಹೋ ಪಶ್ಯಾಮಿ ನೇತ್ರಾಭ್ಯಾಂ ಪೌತ್ರಂ ಶ್ರೀಪರಮಾತ್ಮನಃ ॥ ೨ ॥

ಐವತ್ತೆರಡನೆಯ ಅಧ್ಯಾಯವು

೧. ಓ ರಾಜೇಂದ್ರ ! ಗೋಕುಲಚಂದ್ರನಾದ ಶ್ರೀಕೃಷ್ಣನ ಪರಮಭಕ್ತನಾದ ಆ ಚಂದ್ರಹಾಸನು ತನ್ನರಮನೆಗೆ ಯಾವುದೋ ಯಜ್ಞಾಶ್ವವು ಪ್ರವೇಶಿಸಿದುದನ್ನು ಕಂಡು ಕೂಡಲೇ ಹಿಡಿತರಿಸಿ ಅದರ ಹಣೆಯಲ್ಲಿದ್ದ ಪತ್ರಿಕೆಯನ್ನು ಓದಿದನು.

೨-೩. ಅದನ್ನೋದಿದ ಕೂಡಲೇ ಭಾಗವತೋತ್ತಮನಾದ ಆ ಚಂದ್ರಹಾಸನು ತನ್ನೊಳಗೆ ಇಂತು ಮಾತನಾಡಿಕೊಂಡನು. ಹಿಂದೆ ನಾನು ಎಂತಹ

ಕೇನ ಪುಣ್ಯೇನ ಪೂರ್ವೇಣ ಕೃಷ್ಣತುಲ್ಯಂ ಯದೂತ್ತಮಂ ।
ಮಯಾ ನ ದೃಷ್ಟಃ ಶ್ರೀಕೃಷ್ಣೋ ಮಾಯಾಮಾನುಷವಿಗ್ರಹಃ ॥ ೩ ॥

ಸಹಿತಃ ಕಾರ್ಷ್ಣಿಜೇನಾಹಂ ತಸ್ಮಾದ್ಗಚ್ಛಾಮಿ ದ್ವಾರಕಾಂ ।
ತತ್ರ ಪಶ್ಯಾಮಿ ಶ್ರೀಕೃಷ್ಣಂ ಬಲಂ ಪ್ರದ್ಯುಮ್ನಮೇವ ಚ ॥ ೪ ॥

ಉಗ್ರಸೇನಂ ಮಹಾರಾಜಂ ಶ್ರೀಕೃಷ್ಣೇನಾಪಿ ಪೂಜಿತಂ ।
ಇತ್ಯುಕ್ತ್ವಾ ನಿರ್ಯಯೌ ರಾಜಾ ಹ್ಯನಿರುದ್ಧಂ ವಿಲೋಕಿತುಂ ॥ ೫ ॥

ಗೃಹೀತ್ವಾ ಚೋಪಚಾರಾಂಶ್ಚ ಗಂಧಪುಷ್ಪಾಕ್ಷತಾದಿಕಾನ್ ।
ದಿವ್ಯವಸ್ತ್ರಾಣಿ ರತ್ನಾನಿ ಗೃಹೀತ್ವಾ ತುರಗಂ ಚ ಸಃ ॥ ೬ ॥

ಪುಣ್ಯವನ್ನು ಮಾಡಿರುವೆನು? ಏಕೆಂದರೆ, ಈ ದಿನ ಪರಮಪುರುಷನಾದ ಶ್ರೀಕೃಷ್ಣನ ಮೊಮ್ಮಗನೂ, ಅವನಿಗೆ ಸಮಾನನೂ ಆದ ಯಾದವಶ್ರೇಷ್ಠನನ್ನು ಕಾಣುವೆನು.

೪. ಆದರೆ ಮಾತ್ರ ಲೀಲೆಯಿಂದ ಮಾನವಶರೀರವನ್ನು ಧರಿಸಿರುವ ಆ ಪರಮಪುರುಷನನ್ನು ನಾನು ಕಾಣೆನು. ಆದುದರಿಂದ ನಾನು ಪ್ರದ್ಯುಮ್ನಪುತ್ರನಾದ ಈ ಅನಿರುದ್ಧನೊಡನೆ ದ್ವಾರಕೆಗೆ ಹೋಗಿ ಅಲ್ಲಿ ಶ್ರೀಕೃಷ್ಣನನ್ನೂ ಬಲರಾಮನನ್ನೂ ಪ್ರದ್ಯುಮ್ನನನ್ನೂ ಸಂದರ್ಶಿಸುವೆನಲ್ಲದೆ—

೫. ಆ ಶ್ರೀಕೃಷ್ಣನಿಂದಲೂ ಪೂಜಿಸಲ್ಪಡುವ ಉಗ್ರಸೇನಮಹಾರಾಜನನ್ನೂ ಸಂದರ್ಶಿಸುವೆನು. ಎಂದು ತನ್ನಲ್ಲಿಯೇ ನುಡಿದುಕೊಂಡು ಅನಿರುದ್ಧನನ್ನು ಕಾಣಲು ತಾನೇ ಹೊರಟನು.

೬-೭. ಓ ರಾಜೇಂದ್ರ! ಆ ಚಂದ್ರಹಾಸನು ಗಂಧ, ಹೂವು, ಅಕ್ಷತೆ ಮೊದಲಾದ ಪೂಜಾಸಾಮಗ್ರಿಗಳನ್ನೂ, ದಿವ್ಯವಾದ ವಸ್ತ್ರಗಳನ್ನೂ, ಬೆಲೆಬಾಳುವ ರತ್ನಗಳನ್ನೂ ತೆಗೆದುಕೊಂಡು ಆ ಯಜ್ಞಾಶ್ವವನ್ನೂ ಜೊತೆಯಲ್ಲಿ ಕರೆದುಕೊಂಡು ಹೂವಿನಸರಗಳಿಂದಲೂ ತಿಲಕಗಳಿಂದಲೂ ಅಲಂಕೃತರಾದ ಪಟ್ಟಣಿಗ

ಸರ್ವೈಃ ಪುರಜನೈಃ ಸಾರ್ಧಂ ಮಾಲಾ ತಿಲಕಶೋಭಿತೈಃ ।
ಗೀತವಾದಿತ್ರಘೋಷೈಶ್ಚ ಪದ್ಭ್ಯಾಂ ರಾಜಾ ಜಗಾಮ ಹ ॥ ೭ ॥

ಆಗತಂ ತಂ ನೃಪಂ ದೃಷ್ಟ್ವಾ ನಾಗರೈಃ ಸಹಿತಂ ನೃಪ ।
ಅನಿರುದ್ಧೋ ಮುದಾ ಯುಕ್ತೋ ಮಂತ್ರಿಣಂ ಚೇದಮಬ್ರವೀತ್ ॥ ೮ ॥

॥ ಅನಿರುದ್ಧ ಉವಾಚ ॥

ಕೋಽಯಂ ರಾಜಾ ಮಹಾಮಂತ್ರಿನ್ ಸರ್ವೈಃ ಪುರಜನೈಃ ಸಹ ।
ಆಗತೋ ಮಿಲನಾರ್ಥಂ ವಾ ತಸ್ಯ ವಾರ್ತಾಂ ವದಸ್ವ ನಃ ॥ ೯ ॥

॥ ಉದ್ಧವ ಉವಾಚ ॥

ನೃಪೋಽಯಂ ಚಂದ್ರಹಾಸಾಖ್ಯೋ ಕೇರಲಾಧಿಪತೇಃ ಸುತಃ ।
ಮೃತಯೋರ್ಮಾತಾಪಿತ್ರೋಶ್ಚ ಕುಲಿಂದೇನಾನುಪಾಲಿತಃ ॥ ೧೦ ॥

ರೊಡನೆ ಮಂಗಲಗೀತೆಗಳಿಂದಲೂ, ವಾದ್ಯಘೋಷಗಳಿಂದಲೂ, ಕೂಡಿ ಬರಿಯ ಕಾಲ್ನಡಿಗೆಯಲ್ಲೇ ಅನಿರುದ್ಧನಬಳಿಗೆ ಹೋದನು.

೮. ಎಲೈ ರಾಜನೇ! ಈರೀತಿ ತನ್ನ ಪುರಜನರೊಂದಿಗೆ ಬರುತ್ತಿರುವ ಆ ಚಂದ್ರಹಾಸನನ್ನು ಕಂಡು ಅನಿರುದ್ಧನು ಆನಂದಭರಿತನಾಗಿ ತನ್ನ ಮಂತ್ರಿಯಾದ ಉದ್ಧವನನ್ನು ಕುರಿತು—

೯. ಎಲೈ ಮಂತ್ರಿಶ್ರೇಷ್ಠನೇ! ತನ್ನ ಪಟ್ಟಣಿಗರೊಡನೆ ನಮ್ಮನ್ನು ಕಾಣಲು ಬರುತ್ತಿರುವ ಈ ರಾಜನಾರು? ಈತನ ವಿಷಯವೆಲ್ಲವನ್ನೂ ನಮಗೆ ತಿಳಿಸು ಎಂದು ಪ್ರಶ್ನೆಮಾಡಲು ಆ ಉದ್ಧವನಿಂತೆಂದನು :—

೧೦. ಈ ಅರಸನು ಚಂದ್ರಹಾಸನೆಂಬುವನು. ಕೇರಲದೇಶದ ದೊರೆಯೇ ಈತನ ತಂದೆಯು. ಬಾಲ್ಯದಲ್ಲಿಯೇ ತಾಯಿತಂದೆಗಳು ಸತ್ತುಹೋಗಲು ಕುಲಿಂದಕನೆಂಬುವನು ಈತನನ್ನು ಸಾಕಿದನು.

ಆಬಾಲ್ಯಾತ್ಕೃಷ್ಣಚಂದ್ರಸ್ಯ ಭಕ್ತಸ್ತೇನಾಪಿ ರಕ್ಷಿತಃ ।
ದುಷ್ಟಬುದ್ಧೇಃ ಪ್ರಧಾನಸ್ಯ ಸುತಾಂ ಯಃ ಪರಿಣೀತವಾನ್ ॥ ೧೧ ॥
ಯಸ್ಮೈ ಕುಂತಲಕೋ ರಾಜಾ ರಾಜ್ಯಂ ದತ್ವಾ ವನಂ ಯಯೌ ।
ತಸ್ಯಾಖ್ಯಾನಂ ದ್ವಾರಕಾಯಾಂ ಮಯಾ ಕೃಷ್ಣಮುಖಾಚ್ಛ್ರುತಂ ॥ ೧೨ ॥
ಯಸ್ಮೈ ಸ್ವದರ್ಶನಂ ದಾತುಂ ಶ್ರೀಕೃಷ್ಣೋಽತ್ರಾಗಮಿಷ್ಯತಿ ।
ಉದ್ಧವಸ್ಯ ವಚಃ ಶ್ರುತ್ವಾ ವಿಸ್ಮಿತೋಽಭೂದ್ಯದೂತ್ತಮಃ ॥ ೧೩ ॥
ಗತ್ವಾನಿರುದ್ಧನಿಕಟೇ ಚಂದ್ರಹಾಸೋ ಜನೈರ್ವೃತಃ ।
ಶ್ಯಾಮಕರ್ಣಂ ದದೌ ಪ್ರೀತೋ ಧನಾನಿ ಬಹುಶಸ್ತಥಾ ॥ ೧೪ ॥
ಗಜಾನಾಮರ್ಧಲಕ್ಷಂ ಚ ರಥಾನಾಂ ಲಕ್ಷಮೇವ ಚ ।
ತುರಗಾಣಾಮೇಕಕೋಟಿಂ ಮುದ್ರಾಣಾಂ ಹಿ ಸಹಸ್ರಕಂ ॥ ೧೫ ॥

---

೧೧. ಹುಡುಗನಾಗಿರುವಾಗಲಿಂದಲೂ ಈತನು ಕೃಷ್ಣನ ಭಕ್ತನಾಗಿರುವುದರಿಂದ ಆ ಪರಮಾತ್ಮನೂ ಈತನನ್ನು ಸಂರಕ್ಷಿಸಿದನು. ಈ ಚಂದ್ರಹಾಸನು ಮಂತ್ರಿಯಾದ ದುಷ್ಟಬುದ್ಧಿಯ ಮಗಳಾದ ವಿಷೆಯನ್ನು ಮದುವೆಯಾಗಿರುವನು.

೧೨. ಈತನಿಗೆ ಕುಂತಲದೇಶದ ಅರಸು ರಾಜ್ಯಭಾರವನ್ನೊಪ್ಪಿಸಿ ತಾನು ಕಾಡಿಗೆ ಹೊರಟುಹೋದನು. ಓ ಯಾದವ! ನಾನು ಈ ಕಥೆಯೆಲ್ಲವನ್ನೂ ದ್ವಾರಕೆಯಲ್ಲಿ ಶ್ರೀಕೃಷ್ಣನ ಬಾಯಿಂದಲೇ ಕೇಳಿರುವೆನು.

೧೩. ಈ ಚಂದ್ರಹಾಸನಿಗೆ ಸಂದರ್ಶನವನ್ನೀಯಲೆಂದೇ ಶ್ರೀಕೃಷ್ಣನು ಮುಂದೆ ಇಲ್ಲಿಗೆ ಬರುವವನಾಗಿರುವನು ಎಂದನು. ಉದ್ಧವನು ಹೇಳಿದ ಈ ಮಾತನ್ನು ಕೇಳಿ ಆ ಅನಿರುದ್ಧನು ಆಶ್ಚರ್ಯಪರವಶನಾದನು.

೧೪. ಅಷ್ಟುಹೊತ್ತಿಗೆ ಚಂದ್ರಹಾಸನು ಪುರಜನರೊಂದಿಗೆ ಅನಿರುದ್ಧನ ಬಳಿಗೆ ಬಂದು ಕಪ್ಪಾದ ಕಿವಿಯುಳ್ಳ ಯಜ್ಞಾಶ್ವವನ್ನು ಒಪ್ಪಿಸಿದುದಲ್ಲದೆ ಬೇಕಾದಷ್ಟು ಹಣವನ್ನೂ ಇತ್ತನು.

೧೫. ಅಷ್ಟೇ ಅಲ್ಲದೆ, ಐವತ್ತುಸಾವಿರ ಆನೆಗಳನ್ನೂ, ಒಂದು ಲಕ್ಷ ತೇರುಗಳನ್ನೂ, ಒಂದು ಕೋಟಿ ಕುದುರೆಗಳನ್ನೂ, ಒಂದುಸಾವಿರ ಮುದ್ರೆ (ಆಗಿನಕಾಲದಲ್ಲಿ ವ್ಯವಹಾರದಲ್ಲಿದ್ದ ನಾಣ್ಯ) ಗಳನ್ನೂ ಒಪ್ಪಿಸಿದನು.

ಗವಯಾನಾಂ ಸಹಸ್ರಂ ಚ ಶಿಬಿಕಾನಾಂ ಸಹಸ್ರಕಂ ।
ಧೇನೂನಾಂ ದಶಲಕ್ಷಂ ಚ ಶಿಂಜಾನಾಮಯುತಂ ತಥಾ ॥ ೧೬ ॥

ಏಕಕೋಟಿಸುವರ್ಣಾನಾಂ ರೌಪ್ಯಾನಾಂ ಚ ಚತುರ್ಗುಣಂ ।
ಲಕ್ಷಮಾಭರಣಾನಾಂ ಚ ಮಾಧವಾಯ ದದೌ ನೃಪಃ ॥ ೧೭ ॥

॥ ಚಂದ್ರಹಾಸ ಉವಾಚ ॥

ನಮೋಽನಿರುದ್ಧಾಯ ಸುರೋತ್ತಮಾಯ
ಶ್ರೀಕೃಷ್ಣಪೌತ್ರಾಯ ಜನೇಶ್ವರಾಯ ।
ಪ್ರದ್ಯುಮ್ನಪುತ್ರಾಯ ಯದೂತ್ತಮಾಯ
ದೇವಾಯ ಪೂರ್ಣಾಯ ನಮಃ ಪರಾಯ ॥ ೧೮ ॥

ಇತಿ ಭಕ್ತವಚಃ ಶ್ರುತ್ವಾ ಪ್ರಸನ್ನೋ ಮದನಾತ್ಮಜಃ ।
ಸಂಶ್ಲಾಘ್ಯ ಪ್ರದದೌ ತಸ್ಮೈ ಪ್ರದೀಪ್ತಾಂ ರತ್ನಮಾಲಿಕಾಂ ॥ ೧೯ ॥

---

೧೬. ಅನಂತರ ಒಂದುಸಾವಿರ ಗವಯವೆಂಬ ಪಶುಗಳನ್ನೂ, ಸಾವಿರ ಪಲ್ಲಕ್ಕಿಗಳನ್ನೂ, ಹತ್ತುಲಕ್ಷ ಗೋವುಗಳನ್ನೂ, ಹತ್ತುಸಾವಿರ ಶಿಂಜಗಳನ್ನೂ ಕಾಣಿಕೆಯಾಗಿತ್ತನು.

೧೭. ಮತ್ತು ಒಂದುಕೋಟಿ ಚಿನ್ನದ ನಾಣ್ಯಗಳನ್ನೂ, ನಾಲ್ಕುಕೋಟಿ ಬೆಳ್ಳಿಯ ನಾಣ್ಯಗಳನ್ನೂ, ಒಂದುಲಕ್ಷ ಆಭರಣಗಳನ್ನೂ ಕೃಷ್ಣನಿಗೆಂದು ಪ್ರತ್ಯೇಕವಾಗಿ ಇತ್ತನು.

೧೮. ಬಳಿಕ ಆ ಚಂದ್ರಹಾಸನು "ಸುರಶ್ರೇಷ್ಠನಾದ ಅನಿರುದ್ಧನಿಗೆ ನಮಸ್ಕಾರವು. ಶ್ರೀಕೃಷ್ಣನ ಪೌತ್ರನಾದ ಜನಾಧಿಪತಿಗೆ ನಮಸ್ಕಾರವು. ಪ್ರದ್ಯುಮ್ನಪುತ್ರನಾದ ಯದುಶ್ರೇಷ್ಠನಿಗೆ ನಮಸ್ಕಾರವು. ಪರಿಪೂರ್ಣನೂ, ಶ್ರೇಷ್ಠನೂ ಆದ ದೇವನಿಗೆ ನಮಸ್ಕಾರವು." ಎಂದು ಸ್ತುತಿಸಿದನು.

೧೯. ಈರೀತಿಯಾಗಿ ಭಕ್ತನಾದ ಆ ಚಂದ್ರಹಾಸನು ಸ್ತುತಿಸಿದುದನ್ನು ಕೇಳಿ ಪ್ರಸನ್ನನಾದ ಪ್ರದ್ಯುಮ್ನಕುಮಾರನು ಆತನನ್ನು ಶ್ಲಾಘಿಸಿ ಉಜ್ವಲವಾದ ರತ್ನಹಾರವನ್ನು ಕೊಟ್ಟು ಗೌರವಿಸಿದನು.

ಚಂದ್ರಹಾಸಸ್ತು ರಾಜೇಂದ್ರ ರಾಜ್ಯೇ ಕೃತ್ವಾ ತು ಮಂತ್ರಿಣಂ ।
ಸ್ವಪುರಾದ್ಯಾದವೈಃ ಸಾರ್ಧಂ ಗಂತುಂ ಚಾಲಂ ಮನೋಽಕರೋತ್ ॥೨೦॥

ಉಷಿತ್ವಾ ತತ್ಪುರೇ ಸರ್ವೇ ಹ್ಯೇಕರಾತ್ರಂ ಯದೂತ್ತಮಾಃ ।
ಪ್ರಾತಃಕಾಲೇ ಯಯೂ ರಾಜಂಶ್ಚಂದ್ರಹಾಸೇನ ಸಂಯುತಾಃ ॥ ೨೧ ॥

ಜಗಾಮ ಹ್ಯಗ್ರತಸ್ತೇಭ್ಯೋ ತುರಗಃ ಪತ್ರಶೋಭಿತಃ ।
ತತಃ ಸಪ್ತವತೀಂ ದೃಷ್ಟ್ವಾ ಹ್ಯಾವರ್ತಶತಸಂಕುಲಾಂ ॥ ೨೨ ॥

ತರಂಗೈಸ್ತ್ರುಟಂ ನಿಘ್ನಂತೀಂ ದೀರ್ಘವೇಗಾಂ ದುರತ್ಯಯಾಂ ।
ನೌಕಾಭಿಃ ಸಂಯುತಾಂ ದೃಷ್ಟ್ವಾ ವೀರಃ ಪ್ರದ್ಯುಮ್ನನಂದನಃ ॥ ೨೩ ॥

---

೨೦. ಓ ರಾಜೇಂದ್ರ! ಬಳಿಕ ಆ ಚಂದ್ರಹಾಸನು ತನ್ನ ರಾಜ್ಯವನ್ನು ನೋಡಿಕೊಳ್ಳುವಂತೆ ಮಂತ್ರಿಯನ್ನು ನಿಯಮಿಸಿ ತಾನು ಯಾದವರೊಡನೆ ಹೊರಡಲು ನಿಶ್ಚಯಿಸಿದನು.

೨೧. ಆ ಅನಿರುದ್ಧಾದಿ ಯಾದವರೆಲ್ಲರೂ ಆ ಚಂದ್ರಹಾಸನ ಪಟ್ಟಣದಲ್ಲಿ ಒಂದು ರಾತ್ರಿ ತಂಗಿದ್ದು ಬೆಳಗಾಗುತ್ತಲೇ ಆ ಚಂದ್ರಹಾಸನೊಡನೆ ಮುಂದೆ ಹೊರಟರು.

೨೨. ಅವರ ಮುಂದುಗಡೆ ಹಣೆಯಲ್ಲಿ ಚಿನ್ನದಪಟ್ಟಿಯನ್ನು ಕಟ್ಟಿದ್ದ ಯಜ್ಞಾಶ್ವವು ಹೊರಟಿತು. (ಹಾಗೆ ಒರುತ್ತಿದ್ದಾಗ ಅವರಿಗೆ) ಮಧ್ಯಮಾರ್ಗದಲ್ಲಿ ನೂರಾರು ಸುಳಿಗಳಿಂದ ಕೂಡಿದ ಆಳವಾಗಿರುವ ಸಪ್ತವತೀನದಿಯು ಅಡ್ಡಲಾಗಿ ಸಿಕ್ಕಿತು.

೨೩. ಆ ನದಿಯು ಮಹಾವೇಗದಿಂದ ಹರಿಯುತ್ತಿತ್ತು. ಅದರ ಅಲೆಗಳು ಎರಡುಕಡೆಯ ದಡಗಳನ್ನೂ ಅಪ್ಪಳಿಸುತ್ತಿದ್ದುವು. ಅಲ್ಲಿ ಅಜಾಗರೂಕರಾದವರು ಇಳಿದರೆ ಅವರಿಗೆ ವಿನಾಶವೇ ಉಂಟಾಗುತ್ತಿತ್ತು. ಆದುದರಿಂದ ಅದರ ಬಳಿ ನಾವೆಗಳು ಯಾವಾಗಲೂ ಸಿದ್ಧವಾಗಿರುತ್ತಿದ್ದುವು. ಅದನ್ನು ಕಂಡು ವೀರನಾದ ಪ್ರದ್ಯುಮ್ನಕುಮಾರನು—

ಅಕ್ಷೌಹಿಣೀಶತೆಯುತೋ ಪಾರಂ ಗಂತುಂ ಮನೋ ದಧೇ ।
ಸ ಪೂರ್ವಂ ಗಜಮಾರುಹ್ಯ ಸಾಂಬಾದ್ಯೈಃ ಪರಿವೇಷ್ಟಿತಃ ॥ ೨೪ ॥

ನಾವಂ ತ್ಯಕ್ತ್ವಾ ನೃಪಶ್ರೇಷ್ಠ ಪ್ರವಿವೇಶ ನದೀಜಲೇ ।
ಪ್ರಥಮಂ ಸಲಿಲಂ ತಸ್ಯಾಂ ಸಮಲಂ ಚ ಬಭೂವ ಹ ॥ ೨೫ ॥

ತತಃ ಪಂಕದ್ರವಾ ಭೂಮಿಶ್ಚಿತ್ರಮೇತದ್ಬಭೂವ ಹ ।
ಹಸಂತೋ ಯಾದವಾಃ ಸರ್ವೇ ವಿಸ್ಮಯಂ ಪರಮಂ ಯಯುಃ ॥ ೨೬ ॥

ಅಥ ವ್ರಜಂಸ್ತುರಂಗಸ್ತು ಸ ಜಗಾಮ ಶನೈಃ ಶನೈಃ ।
ನಾರಾಯಣಸರೋ ಯತ್ರ ಮಧ್ಯೇ ಸಿಂಧುಸಮುದ್ರಯೋಃ ॥ ೨೭ ॥

ಪಪೌ ತೀರ್ಥಜಲಂ ತತ್ರ ತುರಗಶ್ಚ ತೃಷಾತುರಃ ।
ತತಸ್ತತ್ರಾಯಯುಃ ಸರ್ವೇಽನಿರುದ್ಧಾದ್ಯಾ ಯದೂತ್ತಮಾಃ ॥ ೨೮ ॥

೨೪-೨೫. ತನ್ನ ನೂರು ಅಕ್ಷೋಹಿಣೀ ಸೇನೆಯೊಂದಿಗೆ ಆಚೆಯಕಡೆಯ ಕರೆಯನ್ನು ಸೇರಬೇಕೆಂದು ನಿರ್ಧರಿಸಿ ಮೊತ್ತಮೊದಲು ತಾನೇ ಸಾಂಬ ಮೊದಲಾದ ಯಾದವರೊಡನೆ ನಾವೆಯನ್ನೇರದೆ ಆನೆಯೊಂದನ್ನು ಹತ್ತಿಕುಳಿತು ನದಿಯನ್ನು ದಾಟಲು ಇಳಿದನು ಓ ರಾಜೇಂದ್ರ ! ಮೊದಲು (ಆಗ ನಡೆದ ಒಂದು ವಿಚಿತ್ರಸಂಗತಿಯನ್ನು ಕೇಳು) ಶುದ್ಧವಾಗಿ ಹರಿಯುತ್ತಿದ್ದ ಆ ನದಿಯ ನೀರು ಕ್ರಮವಾಗಿ ಮಲಿನವಾಗ ತೊಡಗಿತು.

೨೬. ಬಳಿಕ ಬರಬರುತ್ತಾ ಕೆಸರಿನಂತಾಗಿ ಕೊನೆಗೆ ಗಟ್ಟಿಯಾದ ಭೂಮಿಯಂತಾಗಿಬಿಟ್ಟಿತು. ಇದನ್ನು ಕಂಡು ಆ ಯಾದವರೆಲ್ಲರೂ ನಗುತ್ತಾ ಪರಮಾಶ್ಚರ್ಯವನ್ನು ತಾಳಿದರು.

೨೭. ಅನಂತರ ಆ ಕುದುರೆಯು ಮುಂದುವರಿಯುತ್ತಾ ನಿಧಾನವಾಗಿ ಸಿಂಧೂನದಿಗೂ, ಸಮುದ್ರಕ್ಕೂ ನಡುವೆ ಇರುವ ನಾರಾಯಣಸರಸ್ಸಿನ ಬಳಿಗೆ ಬಂದಿತು.

೨೮-೨೯. ಆ ನಾರಾಯಣ ಸರಸ್ಸಿನಲ್ಲಿ ಬಾಯಾರಿಕೆಯಿಂದ ಪೀಡಿತವಾಗಿದ್ದ ಯಜ್ಞಾಶ್ವವು ನೀರನ್ನು ಕುಡಿದು ದಣಿವಾರಿಸಿಕೊಂಡಿತು. ಅಷ್ಟುಹೊ

ಧರ್ಮದ್ವೇಷಕರಾನ್ನೀಚಾನ್ಮ್ಲೇಚ್ಛಾನ್ಜಿತ್ವಾ ಮೃಧಾಂಗಣೇ ।
ದೃಷ್ಟ್ವಾ ತುರಂಗಮಂ ತತ್ರ ಸ್ನಾನಂ ಚಕ್ರುಃ ಸರೋವರೇ ॥ ೨೯ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ದ್ವಿಪಂಚಾಶತ್ತಮೋಽಧ್ಯಾಯಃ

ತ್ರಿಗೆ ಹಿಂದೆ ಬರುತ್ತಿದ್ದ ಅನಿರುದ್ಧಾದಿ ಯಾದವರು ಮಾರ್ಗಮಧ್ಯದಲ್ಲಿ ಯುದ್ಧಕ್ಕೆ ಬಂದ ನೀಚರಾದ ಧರ್ಮದ್ವೇಷಿಗಳಾದ ಮ್ಲೇಚ್ಛರನ್ನು ಜಯಿಸಿ ನಾರಾಯಣ ಸರಸ್ಸಿನ ಬಳಿಗೆ ಬಂದರು. ಅಲ್ಲಿ ಯಜ್ಞಾಶ್ವವು ಇದ್ದುದನ್ನು ಕಂಡು ಸಂತುಷ್ಟರಾಗಿ ಆ ತೀರ್ಥದಲ್ಲಿ ಸ್ನಾನಮಾಡಿದರು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ಐವತ್ತೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ತ್ರಿಪಂಚಾಶತ್ತಮೋಽಧ್ಯಾಯಃ

—

|| ಗರ್ಗ ಉವಾಚ ||

ಪಶ್ಯನ್ನೃಪಾನ್ಮಹಾವೀರಾನುಗ್ರಸೇನತುರಂಗಮಃ |
ವಿಚರನ್ಭಾರತೇ ವರ್ಷೇ ದೇಶಾನನ್ಯಾನ್ಜಗಾಮ ಹ || ೧ ||

ಏವಂ ವಿಚರತಸ್ತಸ್ಯ ಹಯಸ್ಯ ಚ ವಿಶಾಂಪತೇ |
ಆಗತಃ ಫಾಲ್ಗುನೋ ಮಾಸಃ ಸರ್ವೇಷಾಂ ಗೃಹದರ್ಶಿಕಃ || ೨ ||

ಐವತ್ತಮೂರನೆಯ ಅಧ್ಯಾಯವು

೧. ಗರ್ಗಮಹರ್ಷಿಯು ಹೇಳತೊಡಗಿದನು :—ಎಲೈ ರಾಜೇಂದ್ರನೇ, ಕೇಳು. ಈರೀತಿಯಾಗಿ ಆ ಉಗ್ರಸೇನನ ಯಜ್ಞಾಶ್ವವು ಮಹಾಶೂರರಾದ ಅನೇಕಮಂದಿ ರಾಜರನ್ನು ನೋಡುತ್ತಾ ಭಾರತವರ್ಷದಲ್ಲೆಲ್ಲಾ ಸುತ್ತಾಡಿ ಇನ್ನೂ ಇತರ ದೇಶಗಳಲ್ಲಿಯೂ ಸಂಚರಿಸತೊಡಗಿತು.

೨. ಹೀಗೆಯೇ ತಿರುಗುತ್ತಿರಲು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಬೇಕಾಗಿ ಗೊತ್ತಾಗಿದ್ದ ಗಡುವಿನ ಕಾಲವಾದ ಫಾಲ್ಗುಣಮಾಸವು ಪ್ರಾಪ್ತವಾಯಿತು.

ಆಗತಂ ಫಾಲ್ಗುನಂ ದೃಷ್ಟ್ವಾ ಅನಿರುದ್ಧಸ್ತು ಶಂಕಿತಃ ।
ಉವಾಚ ಮಂತ್ರಿಪ್ರವರಮುದ್ಧವಂ ಬುದ್ಧಿಸತ್ತಮಂ ॥ ೩ ॥

॥ ಅನಿರುದ್ಧ ಉವಾಚ ॥

ಚೈತ್ರೇ ಶ್ರೀಯಾದವೇಂದ್ರಸ್ತು ಮಂತ್ರಿನ್ಯಜ್ಞಂ ಕರಿಷ್ಯತಿ ।
ವಯಂ ತು ಕಿಂ ಕರಿಷ್ಯಾಮೋ ದಿವಸಾ ಬಹವೋ ನ ಹಿ ॥ ೪ ॥

ಭೂಮೌ ತುರಂಗಹರ್ತಾರೋ ನೃಪಾಃ ಕೇ ತೇಽವಶೇಷಿತಾಃ ।
ತೇಷಾಂ ಚ ವದ ನಾಮಾನಿ ಮಹ್ಯಂ ಶುಶ್ರೂಷವೇ ತ್ವರಂ ॥ ೫ ॥

॥ ಉದ್ಧವ ಉವಾಚ ॥

ನ ಸಂತಿ ಭೂತಲೇ ಶೂರಾ ಗಗನೇ ಸಂತಿ ವಾ ಹರೇ ।
ತಸ್ಮಾದ್ಯದುಪುರೀಂ ಗಚ್ಛ ಸ್ವರ್ಣದ್ವಾರಾಂ ಚ ದ್ವಾರಕಾಂ ॥ ೬ ॥

---

೩. ಆ ಫಾಲ್ಗುಣಮಾಸವು ಪ್ರಾಪ್ತವಾಯಿತೆಂದು ಅರಿತಕೂಡಲೇ ಅನಿರುದ್ಧನು, ಮಹಾಕುಶಲನೂ. ಮಂತ್ರಿಶ್ರೇಷ್ಠನೂ ಆದ ಉದ್ಧವನನ್ನು ಕುರಿತು ಕಳವಳದಿಂದ

೪. ಎಲೈ ಮಂತ್ರಿಯೇ! ಯಾದವೇಶ್ವರನಾದ ಉಗ್ರಸೇನನು ಚೈತ್ರ ಮಾಸದಲ್ಲಲ್ಲವೆ ಯಜ್ಞವನ್ನು ಮಾಡಲಿರುವುದು? ಈಗ ನಾವೇನು ಮಾಡೋಣ? ಇನ್ನು ಹೆಚ್ಚು ದಿವಸಗಳು ಅವಕಾಶವಿಲ್ಲ.

೫. ಈ ಭೂಮಂಡಲದಲ್ಲಿ ಯಜ್ಞಾಶ್ವವನ್ನು ಕಟ್ಟಬಲ್ಲ ಧೀರರಾದ ರಾಜರು ಯಾರು ಉಳಿದಿರುವರು? ಅವರ ಹೆಸರುಗಳನ್ನು ಕೇಳಬೇಕೆಂದಿರುವೆನು ಹೇಳು ಎಂದು ಪ್ರಶ್ನಿಸಿದನು.

೬. ಆಗ ಉದ್ಧವನು ಎಲೈ ಹರಿಯೇ! ಭೂಮಿಯಲ್ಲಾಗಲಿ, ಅಂತರಿಕ್ಷದಲ್ಲಾಗಲಿ ಅಂತಹ ಶೂರರು ಯಾರೂ ಉಳಿದಿಲ್ಲ; ಆದುದರಿಂದ ಚಿನ್ನದ ಬಾಗಿಲುಗಳಿಂದ ಕಂಗೊಳಿಸುವ ಯದುಗಳ ನಿವಾಸವಾದ ದ್ವಾರಕೆಗೇ ಮರಳಿ ಹಿಂದಿರುಗು ಎಂದನು.

ಇತಿ ತಸ್ಯ ವಚಃ ಶ್ರುತ್ವಾ ಹ್ಯನಿರುದ್ಧಃ ಪ್ರಹರ್ಷಿತಃ ।
ತಸ್ಯಾಪಿ ವಚನಂ ರಾಜನ್ನಶ್ವಾಗ್ರೇ ಪುನರಬ್ರವೀತ್ ॥ ೭ ॥

ಏವಂ ತದ್ವಾಕ್ಯಮಾಕರ್ಣ್ಯ ಸರ್ವಜ್ಞಾತಾ ತುರಂಗಮಃ ।
ಪ್ರಯಯೌ ದ್ವಾರಕಾಂ ಶೀಘ್ರಂ ಕಿಷ್ಕಿಂಧಾಂ ಹನುಮಾನಿವ ॥ ೮ ॥

ತಸ್ಯಾಪಿ ಪೃಷ್ಠತಃ ಶೂರಾ ದುದ್ರುವುಸ್ತೇ ತುರಂಗಮೈಃ ।
ವಾಯುವೇಗೈರ್ಮನೋವೇಗೈರ್ಭಾನುಸಾಂಬಾದಯೋ ನೃಪ ॥ ೯ ॥

ಗೃಹೀತ್ವಾ ತುರಗಂ ಸರ್ವೇ ಬಧ್ವಾ ತಂ ಸ್ವರ್ಣದಾಮಭಿಃ ।
ಸೇನಾಯಾಮಂತರೇ ಕೃತ್ವಾ ಶಂಕಿತಾಃ ಸ್ವಪುರೀಂ ಯಯುಃ ॥ ೧೦ ॥

---

೭. ಈರೀತಿ ಉದ್ಧವನಾಡಿದ ಮಾತನ್ನು ಕೇಳಿ ಸಂತುಷ್ಟನಾದ ಅನಿರುದ್ಧನು ಆ ಮಾತನ್ನು ಯಜ್ಞಾಶ್ವದ ಮುಂದೆ ಮತ್ತೆ ಹೇಳಿದನು.

೮. ಆ ಮಾತನ್ನು ಕೇಳಿದೊಡನೆಯೇ ಎಲ್ಲವನ್ನೂ ಚೆನ್ನಾಗಿ ತಿಳಿಯುವ ಸಾಮರ್ಥ್ಯವುಳ್ಳ ಆ ಯಜ್ಞಾಶ್ವವು ಹನುಮಂತನು ಕಿಷ್ಕಿಂಧೆಗೆ ಹೊರಡುವಂತೆ ದ್ವಾರಕೆಯನ್ನು ಕುರಿತು ಬೇಗನೆ ಹೊರಟಿತು.

೯. ಓ ರಾಜೇಂದ್ರ ! ಆ ಕುದುರೆಯ ಹಿಂದುಗಡೆಯೇ ಸಾಂಬ ಮೊದಲಾದ ಯಾದವರು ವಾಯುವೇಗ, ಮನೋವೇಗಗಳಿಂದ ಧಾವಿಸುವ ಉತ್ತಮಾಶ್ವಗಳನ್ನೇರಿ ಹೊರಟರು.

೧೦. ಆ ವೀರರು ಇನ್ನೇನಾದರೂ ಅಪಘಾತವುಂಟಾದೀತೆಂಬ ಶಂಕೆಯಿಂದ ಆ ಯಜ್ಞಾಶ್ವವನ್ನು ಚಿನ್ನದ ಸರಪಳಿಗಳಿಂದ ಕಟ್ಟಿ ಸೇನೆಯ ನಡುವೆ ಬಿಟ್ಟುಕೊಂಡು ತಮ್ಮ ಊರಿಗೆ ಹೊರಟರು.

ಗೀತವಾದಿತ್ರಘೋಷೈಶ್ಚ ನಾದಯಂತಶ್ಚ ದುಂದುಭೀನ್ ।
ಚಾಲಯಂತಶ್ಚ ಪೃಥಿವೀಂ ತ್ರಾಸಯಂತಃ ಖಲಾನ್ನೃಪಾನ್ ॥ ೧೧ ॥

ವ್ರಜಂತಂ ಯಾದವೈಸ್ಸಾರ್ಧಂ ತುರಗಂ ವೀಕ್ಷ್ಯ ನಾರದಃ ।
ದೂತವತ್ಕಲಹಾರ್ಥಾಯ ಪ್ರಯಯೌ ಶಕ್ರಸನ್ನಿಧಿಂ ॥ ೧೨ ॥

ತಸ್ಯಾಗ್ರೇ ಕಥಯಾಮಾಸ ವಾಜಿವಾರ್ತಾಂ ಸ ವಿಸ್ತರಾತ್ ।
ಶ್ರುತ್ವಾ ಶಕ್ರಸ್ತು ರಾಜೇಂದ್ರ ಹಯಂ ಹರ್ತುಂ ಮನೋ ದಧೇ ॥ ೧೩ ॥

ಆಯಯೌ ಭೂತಲೇ ಶೀಘ್ರಂ ದೃಷ್ಟ್ವಂ ಭೂತ್ವಾ ತಿರೋಹಿತಃ ।
ಅಹೋ ವಿಷ್ಣೋರ್ಮಾಯಯಾ ಚ ಸರ್ವೇ ಮುಹ್ಯಂತಿ ದೇವತಾಃ ॥೧೪॥

---

೧೧. ಆಗವರು ಸಂತೋಷದಿಂದ ಸಂಗೀತವನ್ನು ಹಾಡುತ್ತಲೂ, ವೀಣೆ, ವೇಣು, ಮೃದಂಗ, ತಾಲ ಎಂಬ ನಾಲ್ಕುಬಗೆಯ ವಾದ್ಯಗಳನ್ನೂ, ನಗಾರಿಗಳನ್ನೂ ಬಾರಿಸುತ್ತಲೂ ಇದ್ದರು. ಅವರ ನಡಿಗೆಗೆ ಭೂಮಿಯೂ ನಡುಗಿ ಹೋಗುತ್ತಿತ್ತು. ಆಗ ಅವರನ್ನು ಕಂಡರೆ ದುಷ್ಟರಾಜರಿಗೆ ಎದೆಯ ನಡುಕ ವುಂಟಾಗುತ್ತಿತ್ತು.

೧೨. ಹೀಗೆ ಸಂತುಷ್ಟರಾದ ಆ ಯಾದವರೊಡನೆ ಯಜ್ಞಾಶ್ವವು ಸುರಕ್ಷಿತವಾಗಿ ಮುಂಬರಿಯುತ್ತಿರುವುದನ್ನು ಕಂಡು ಕಲಹಪ್ರಿಯನಾದ ನಾರದನು ಗೂಢಚಾರನಂತೆ ಈ ಸುದ್ದಿಯನ್ನು ತಿಳಿಸಲು ಇಂದ್ರನ ಬಳಿಗೆ ಹೊರಟನು.

೧೩. ಅಲ್ಲಿಗೆ ಹೋಗಿ ಅವನಮುಂದೆ ಆ ಯಜ್ಞಾಶ್ವದ ಸಂಗತಿಯೆಲ್ಲವನ್ನೂ ವಿಸ್ತಾರವಾಗಿ ತಿಳಿಸಿದನು. ಓ ರಾಜಾ, ಇದನ್ನು ಕೇಳಿದೊಡನೆಯೇ ಆ ಕುದುರೆಯನ್ನು ಅಪಹರಿಸಬೇಕೆಂದು ಇಂದ್ರನಿಗೂ ಮನಸ್ಸು ಹುಟ್ಟಿತು.

೧೪. ಅನಂತರ ಆ ಕುದುರೆಯನ್ನು ಕಾಣಬೇಕೆಂದು ಯಾರ ಕಣ್ಣಿಗೂ ಕಾಣದಂತೆ ಅದೃಶ್ಯನಾಗಿ ಬೇಗನೆ ಭೂಮಿಗೆ ಇಳಿದುಬಂದನು ಆಹಾ! ವಿಷ್ಣುಮಾಯೆಯನ್ನು ಏನೆಂದು ಹೇಳೋಣ! ಅದಕ್ಕೆ ಸಕಲ ಪ್ರಾಣಿಗಳೂ, ದೇವತೆಗಳೂ ಸಹ ವಶರಾಗಿ ವಿವೇಕಶೂನ್ಯರಾಗುವರು.

ಕುಬೇರಬ್ರಹ್ಮಶಕ್ರಾದ್ಯಾ ಭೂಜನಾನಾಂ ತು ಕಾ ಕಥಾ ।
ಸ ಗತ್ವಾ ತತ್ರ ವೃಷ್ಣೀನಾಂ ಸೇನಾಂ ಸರ್ವಾಂ ದದರ್ಶ ಹ ॥ ೧೫ ॥

ಪ್ರಲಯಾಬ್ಧಿಸಮಾಂ ರೌದ್ರಾಂ ವೃತಾಂ ಶೂರೈಶ್ಚ ಕೋಟಿಭಿಃ ।
ಯಾದವಾನಾಂ ಮಹಾಸೇನಾಮುದ್ಭಟಾಂ ವೀಕ್ಷ್ಯ ಶಂಕಿತಃ ॥ ೧೬ ॥

ಯಯೌ ಕೃಷ್ಣಭಯಾದ್ರಾಜನ್ ಶೀಘ್ರಂ ಶಕ್ರೋsಮರಾವತೀಂ ।
ಕೃಷ್ಣದೇವಸ್ಯ ಕೃಪಯಾ ಯುದ್ಧಸ್ಯಾಶಾಂ ವಿಸೃಜ್ಯ ಚ ॥ ೧೭ ॥

ಅಥ ವ್ರಜಂತೀ ಚತುರಂಗಣೀಭಿಃ
ಸೇನಾನಿರುದ್ಧಸ್ಯ ಮಹಾತ್ಮನಶ್ಚ ।
ಗಜೈ ರಥೈರ್ವ್ಯ ತುರಗೈರ್ನರೈಶ್ಚ
ರೇಜೇ ಮಘೋನಃ ಪ್ರತನೇವ ಸ್ವರ್ಗೇ ॥ ೧೮ ॥

---

೧೫. ಮಾನವರ ಪಾಡೇನು? ಇರಲಿ. ಇಂದ್ರನು ಅದೃಶ್ಯನಾಗಿ ಭೂಮಿಗೆ ಬಂದನಂತರ ಆ ವೃಷ್ಣಿಸೇನೆಯೆಲ್ಲವನ್ನೂ ಚೆನ್ನಾಗಿ ಪರಿಶೀಲಿಸಿದನು.

೧೬. ರಾಜೇಂದ್ರ, ಪ್ರಳಯಕಾಲದ ಸಮುದ್ರದಂತೆ ಭಯಂಕರವಾಗಿಯೂ, ಕೋಟಿಗಟ್ಟಲೆ ತುಂಬಿ ಕಿಕ್ಕಿರಿದಿರುವ ಶೂರರಾದ ಯಾದವರಿಂದ ಮಹಾಬಲಾಢ್ಯವಾಗಿರುವ ಆ ಭಾರಿ ಸೇನೆಯನ್ನು ಕಂಡೊಡನೆಯೇ ಇಂದ್ರನಿಗೂ ಹೆದರಿಕೆ ಹುಟ್ಟಿತು.

೧೭. ಜೊತೆಗೆ ಕೃಷ್ಣನ ಹೆದರಿಕೆಯೂ ಇದ್ದುದರಿಂದ ಆ ಇಂದ್ರನು ಬಂದದಾರಿ ಹಿಡಿದು ಬೇಗನೆ ಅಮರಾವತಿಗೆ ಹಿಂದಿರುಗಿದನು. ಅವನಿಗೆ ಯುದ್ಧಮಾಡಬೇಕೆಂಬ ಆಸೆಯು ತಪ್ಪಿದ್ದು ಕೃಷ್ಣನ ಕೃಪೆಯಿದ್ದುದರಿಂದಲ್ಲವೇ?

೧೮. ಅನಂತರ ಆನೆ, ಕುದುರೆ, ಕಾಲಾಳು, ತೇರುಗಳೆಂಬ ಚತುರಂಗಗಳಿಂದ ಸಮೇತವಾದ ಆ ಅನಿರುದ್ಧನ ಮಹಾಸೇನೆಯು ದ್ವಾರಕಾಭಿಮುಖವಾಗಿ ಪ್ರಯಾಣಮಾಡುತ್ತಾ ಸ್ವರ್ಗಲೋಕದಲ್ಲಿ ಮುಂಬರಿಯುತ್ತಿರುವ ಇಂದ್ರನಸೇನೆಯಂತೆ ಕಂಗೊಳಿಸಿತು.

ಗಜಾಃ ಸರ್ವೇ ಪೃಥಗ್ಭೂತಾಃ ಪೃಥಗ್ಭೂತಾ ರಥಾಸ್ತಥಾ ।
ಪೃಥಗ್ಭೂತಾ ಸ್ತುರಂಗಾಶ್ಚ ಪೃಥಗ್ಭೂತಾಃ ಪದಾತಯಃ ॥ ೧೯ ॥

ಅನುಜಗ್ಮುರ್ದ್ವಾರಕಾಂತೇ ಹರ್ಷಿತಾಃ ಕೃಷ್ಣಪೋತಕಾಃ ।
ಜಂಬೂದ್ವೀಪಸ್ಯ ಜೇತಾರೋ ಲೋಕದ್ವಯಜಿಗೀಷವಃ ॥ ೨೦ ॥

ಅಗ್ರೇ ವಾಹಂ ಪುರಸ್ಕೃತ್ಯ ವಾದಿತ್ರೈರ್ವಿವಿಧೈರಪಿ ।
ಗೀತನೃತ್ಯಾದಿಭೀ ರಾಜನ್ ಸಂಯುಕ್ತಾಸ್ತೇ ಯದೂತ್ತಮಾಃ ॥ ೨೧ ॥

ಅನಿರುದ್ಧಸ್ತು ಸಾಂಬಾದ್ಯೈ ರಿಂದ್ರನೀಲಾದಿಭಿರ್ನೃಪ ।
ಚಂದ್ರಹಾಸಾದಿಭಿರ್ಭೂಪೈಃ ಸಹಸ್ರೈರಭಿಭೂಷಿತಃ ॥ ೨೨ ॥

---

೧೯. ಆ ಸೇನೆಯಲ್ಲಿ ಆನೆಗಳದೇ ಪ್ರತ್ಯೇಕವಾದ ಒಂದು ಗುಂಪು, ಗುದುರೆಗಳದೇ ಬೇರೆ ಒಂದು ಗುಂಪು. ತೇರುಗಳದೇ ಮತ್ತೊಂದು ಗುಂಪು. ಕಾಲಾಳುಗಳದೇ ಬೇರೊಂದು ಗುಂಪು.

೨೦. ಈ ರೀತಿಯಿರುವ ಆ ಮಹಾಸೇನೆಯನ್ನು ಜಂಬೂದ್ವೀಪವನ್ನೆಲ್ಲಾ ಗೆದ್ದು ಬಂದಿರುವ ಶೂರರೂ ಮತ್ತು ಲೋಕದ್ವಯವನ್ನೂ ಗೆಲ್ಲತಕ್ಕ ಸಾಮರ್ಥ್ಯವುಳ್ಳವರೂ ಆದ ಕೃಷ್ಣಕುಮಾರರು ಮಹಾಸಂತೋಷದಿಂದ ದ್ವಾರಕೆಯವರೆಗೂ ಹಿಂಬಾಲಿಸುತ್ತಾ ಬಂದರು.

೨೧. ಆ ಯದುವೀರರು ಮುಂದೆ ಯಜ್ಞಾಶ್ವವನ್ನು ಬಿಟ್ಟುಕೊಂಡು ನಾನಾವಿಧವಾದ ವಾದಿತ್ರ (ವೀಣಾ-ವೇಣು-ಮೃದಂಗ-ತಾಲಗಳೆಂಬ ನಾಲ್ಕು ಬಗೆಯ ವಾದ್ಯಗಳು) ಗಳನ್ನು ಬಾಜಿಸುತ್ತಲೂ, ಇಂಪಾಗಿ ಹಾಡುತ್ತಲೂ, ನರ್ತನಾದಿಗಳನ್ನು ಮಾಡುತ್ತಲೂ ಸಂತೋಷದಿಂದ ಬರುತ್ತಿದ್ದರು.

೨೨. ಮುಖ್ಯಸೇನಾಪತಿಯಾದ ಆ ಅನಿರುದ್ಧನನ್ನು ಸಾಂಬ ಮೊದಲಾದ ಯಾದವರೂ ಇಂದ್ರನೀಲ ಮೊದಲಾದ ಸಾಹಸದಿಂದ ಸೋಲಿಸಲ್ಪಟ್ಟಿದ್ದ ರಾಜರೂ, ಚಂದ್ರಹಾಸ ಮೊದಲಾದ ಸಾವಿರಾರು ಮಿತ್ರರಾಜರೂ ಸುತ್ತುವರಿದು ಬರುತ್ತಿದ್ದರು.

ಸಾಂಬಸ್ಯಾನುಮತೇನಾಪಿ ಚಾನರ್ತೇ ಸಂಪ್ರವಿಶ್ಯ ಚ |
ಉದ್ಧವಂ ಪ್ರೇಷಯಾಮಾಸ ದ್ವಾರಕಾಂ ಯೋಜನದ್ವಯಾತ್ || ೨೩ ||

ಏವಂ ಪ್ರಣೋದಿತಃ ಸೋಽಪಿ ನತ್ವಾ ರುಕ್ಮವತೀಸುತಂ |
ಶಿಬಿಕಾಂ ಶೀಘ್ರಮಾರುಹ್ಯ ಹರ್ಷಿತಃ ಪ್ರಯಯೌ ಪುರೀಂ || ೨೪ ||

ಯತ್ರಾಸ್ತೇ ಹ್ಯುಗ್ರಸೇನಸ್ತು ಮುನಿಭಿಃ ಪರಿವಾರಿತಃ |
ಶ್ರೇಷ್ಠೇ ಪಿಂಡಾರಕಕ್ಷೇತ್ರೇ ಸಭಾಮಂಡಪಭೂಷಿತೇ || ೨೫ ||

ವಾಸುದೇವಾದಯೋ ಯತ್ರ ರಾಮಕೃಷ್ಣಾದಯೋ ನೃಪ |
ಪ್ರದ್ಯುಮ್ನಾದ್ಯಾಶ್ಚ ಬಲಿನೋ ಯಜ್ಞಂ ರಕ್ಷಂತಿ ನಿತ್ಯಶಃ || ೨೬ ||

ಗತ್ವಾ ನೃಪಸಭಾಂ ತತ್ರ ಯಾದವೇಂದ್ರಂ ಪ್ರಣಮ್ಯ ಚ |
ವಾಸುದೇವಂ ಬಲಂ ಕೃಷ್ಣಂ ಪ್ರದ್ಯುಮ್ನಾದೀನ್ಯದೂತ್ತಮಾನ್ || ೨೭ ||

---

೨೩. ಆ ಅನಿರುದ್ಧನು ಆನರ್ತದೇಶದ ಎಲ್ಲೆಯನ್ನು ದಾಟಿದ ನಂತರ ಸಾಂಬನ ಒಪ್ಪಿಗೆಯನ್ನು ಪಡೆದು ದ್ವಾರಕೆಯು ಇನ್ನೂ ಎರಡುಯೋಜನಗಳಷ್ಟು ದೂರವಿದೆ ಎನ್ನುವಷ್ಟರಲ್ಲಿಯೇ ನಿಂತು ಮಂತ್ರಿಯಾದ ಉದ್ಧವನನ್ನು ಮುಂಚಿತವಾಗಿ ಉಗ್ರಸೇನನ ಬಳಿಗೆ ಕಳುಹಿಸಿಕೊಟ್ಟನು.

೨೪. ಆ ಉದ್ಧವನು ರುಕ್ಮವತೀಪುತ್ರನಾದ ಅನಿರುದ್ಧನನ್ನು ನಮಸ್ಕರಿಸಿ ಸಂತೋಷದಿಂದ ದ್ವಾರಕೆಗೆ ಹೊರಟನು.

೨೫. ರಾಜೇಂದ್ರ! ಆ ದ್ವಾರಕೆಯಲ್ಲಿಯೇ ಉಗ್ರಸೇನಮಹಾರಾಜನು ಮುನಿಜನರೊಡನೆ ಸಭಾಮಂಟಪದಿಂದ ಅಲಂಕೃತವಾದ ಪುಣ್ಯತಮವಾದ ಪಿಂಡಾರಕಕ್ಷೇತ್ರದಲ್ಲಿ ಯಾಗದೀಕ್ಷಿತನಾಗಿ ನೆಲೆಸಿದ್ದನು.

೨೬. ಅಲ್ಲಿ ಪ್ರತಿನಿತ್ಯವೂ ವಸುದೇವನೂ, ಬಲರಾಮನೂ, ಸಾಕ್ಷಾತ್ ಶ್ರೀಕೃಷ್ಣನೂ, ಪ್ರದ್ಯುಮ್ನಾದಿಬಲಾಢ್ಯ ಯಾದವರೂ ಯಜ್ಞವನ್ನು ಸಂರಕ್ಷಿಸುತ್ತಾ ಇರುವರು.

೨೭-೨೮. ಅಲ್ಲಿಗೆ ಉದ್ಧವನು ಹೋದೊಡನೆಯೇ ರಾಜಸಭೆಯಲ್ಲಿ ಮಂಡಿಸಿದ್ದ ಉಗ್ರಸೇನನನ್ನು ನಮಸ್ಕರಿಸಿ ಬಳಿಕ ಅವರವರ ವಯಸ್ಸಿಗೂ,

ಸರ್ವಾನ್ನತ್ವಾ ಯಥಾಯೋಗ್ಯಂ ತೇಷಾಮಗ್ರೇ ಸ ಸಂಸ್ಥಿತಃ ।
ಕಥಯಾಮಾಸ ವೃತ್ತಾಂತಂ ಪೃಷ್ಟಸ್ತೈರ್ಹೃಷ್ಟಮಾನಸೈಃ ॥ ೨೮ ॥

॥ ಉದ್ಧವ ಉವಾಚ ॥

ಆಗತಸ್ತವ ರಾಜೇಂದ್ರ ನಿರ್ವಿಘ್ನೇನ ತುರಂಗಮಃ ।
ಆಗತಾಶ್ಚಾನಿರುದ್ಧಾದ್ಯಾಃ ಕುಶಲೇನ ಯದೂತ್ತಮಾಃ ॥ ೨೯ ॥

ಗೋವಿಂದಸ್ಯಾಪಿ ಕೃಪಯಾ ಚೇಂದ್ರನೀಲಃ ಸಮಾಗತಃ ।
ಹೇಮಾಂಗದಃ ಸುರೂಪಾ ಚ ಹ್ಯಾಗತಾ ಮಂಡಲೇಶ್ವರೀ ॥ ೩೦ ॥

ನಿರ್ಜಿತಸ್ತು ಬಕೋ ಯುದ್ಧೇ ಭೀಷಣೇನ ಸಮನ್ವಿತಃ ।
ಬಿಂದುಶ್ಚೈವಾನುಶಾಲ್ವಶ್ಚ ಸ್ವಪುರಾದ್ದ್ವೌ ಸಮಾಗತೌ ॥ ೩೧ ॥

ಯೋಗ್ಯತೆಗೂ ತಕ್ಕಂತೆ ವಸುದೇವ, ಬಲರಾಮ, ಕೃಷ್ಣ, ಪ್ರದ್ಯುಮ್ನ ಮೊದಲಾದ ಯಾದವರನ್ನು ನಮಸ್ಕರಿಸಿ ಅವರೆದುರು ನಿಂತುಕೊಂಡನು. ಆಗ ಅವರೆಲ್ಲರೂ ಸಂತೋಷದಿಂದ ದಿಗ್ವಿಜಯವೃತ್ತಾಂತವೇನೆಂದು ಪ್ರಶ್ನಿಸಲು ಉದ್ಧವನು ಹೇಳತೊಡಗಿದನು.

೨೯. ಉಗ್ರಸೇನ ರಾಜೇಂದ್ರ! ನೀನು ಬಿಟ್ಟ ಯಜ್ಞಾಶ್ವವು ಯಾವುದೊಂದು ತಡೆಯೂ ಇಲ್ಲದೆ ಸುಖವಾಗಿ ಹಿಂದಿರಿಗಿರುವುದು. ಅನಿರುದ್ಧಾದಿ ಯಾದವರೆಲ್ಲರೂ ಕ್ಷೇಮದಿಂದ ಹಿಂದಿರುಗಿರುವರು.

೩೦. ಶ್ರೀಕೃಷ್ಣನ ಅನುಗ್ರಹದಿಂದ ಇಂದ್ರನೀಲನೂ, ಹೇಮಾಂಗದನೂ ಮಂಡಲೇಶ್ವರಿಯಾದ ಸುರೂಪೆಯೂ ಬಂದಿರುವರು.

೩೧. ಯುದ್ಧದಲ್ಲಿ ಬಕನನ್ನೂ, ಭೀಷಣನನ್ನೂ ಗೆದ್ದುದಾಯಿತು. ಬಿಂದುರಾಜ, ಅನುಶಾಲ್ವನೂ ನಮ್ಮ ಜೊತೆಯಲ್ಲಿಯೇ ಇಲ್ಲಿಗೆ ಬಂದಿರುವರು.

ಉಪದ್ವೀಪೇ ಪಾಂಚಜನ್ಯೇ ಬಲ್ವಲೋ ನಿರ್ಜಿತೋಽಸುರೈಃ ।
ತಸ್ಮಿನ್ಯುದ್ಧೇ ಮಹೇಶೇನ ಹ್ಯನಿರುದ್ಧಸುನಂದನೌ ॥ ೩೨ ॥

ನಿಹತೌ ಚ ರುಷಾಢ್ಯೇನ ಯಾದವಾಶ್ಚೈವ ಮಾರಿತಾಃ ।
ತತ್ರ ಗತ್ವಾ ತ್ವಸೌ ಕೃಷ್ಣೋ ಜೀವಯಾಮಾಸ ಯಾದವಾನ್ ॥ ೩೩ ॥

ತಸ್ಮಾತ್ಕೃಷ್ಣಸ್ಯ ಕೃಪಯಾ ವಯಂ ಸರ್ವೇ ಸಮಾಗತಾಃ ।
ನಿರ್ಜಿತಾಃ ಕೌರವಾಃ ಸರ್ವೇ ಭೀಷ್ಮೋಽಪ್ಯತ್ರ ಸಮಾಗತಃ ॥ ೩೪ ॥

ದೃಷ್ಟ್ವಾ ದ್ವೈತವನೇಽಸ್ಮಾಭಿಃ ಪಾಂಡವಾ ದುಃಖಕರ್ಶಿತಾಃ ।
ವ್ರಜೇ ಗೋಪಗಣಾಶ್ಚೈವ ಕೃಷ್ಣ ವಿಶ್ಲೇಷವಿಹ್ವಲಾಃ ॥ ೩೫ ॥

೩೨-೩೩. ಪಾಂಚಜನ್ಯವೆಂಬ ಉಪದ್ವೀಪದಲ್ಲಿ ಅಸುರಸೇನಾಸಮೇತನಾದ ವಲ್ವಲನನ್ನು ಸೋಲಿಸಿದುದಾಯಿತು. ಆ ಯುದ್ಧದಲ್ಲಿ ವಲ್ವಲನಿಗೆ ಸಹಾಯವಾಗಿ ಬಂದ ಮಹೇಶ್ವರನು ಕೋಪದಿಂದ ಅನಿರುದ್ಧನನ್ನೂ ಸುನಂದನನ್ನೂ ಇತರ ಯಾದವರನ್ನೂ ಸಂಹರಿಸಿಬಿಟ್ಟಿದ್ದನು. ಆದರೆ ಈ ಶ್ರೀಕೃಷ್ಣನು ಅಲ್ಲಿಗೆ ಬಂದು ಆ ಯಾದವರೆಲ್ಲರನ್ನೂ ಬದುಕಿಸಿದನು.

೩೪. ಆದುದರಿಂದ ನಾವೆಲ್ಲರೂ ಈ ಶ್ರೀಕೃಷ್ಣನ ಕೃಪೆಯಿಂದಲೇ ಸುಖವಾಗಿ ಇಲ್ಲಿಗೆ ಬಂದಂತಾಯಿತು. ಮುಂದೆ ಕೌರವರೂ ಸಹ ನಮ್ಮೊಡನೆ ಸೆಣಸಲಾರದೆ ಸೋತುಹೋದರು. ಆ ಕೌರವರ ಕಡೆಯ ಭೀಷ್ಮನೂ ನಮ್ಮೊಡನೆ ಇಲ್ಲಿಗೆ ಬಂದಿರುವನು.

೩೫. ಬಳಿಕ ದ್ವೈತವನದಲ್ಲಿ ದುಃಖದಿಂದ ಕೃಶರಾದ ಪಾಂಡವರನ್ನು ನೋಡಿದೆವು. ಹಾಗೆಯೇ ಗೋಕುಲದಲ್ಲಿ ಕೃಷ್ಣನ ವಿಯೋಗವನ್ನು ತಾಳಲಾರದೆ ತಲ್ಲಣಿಸುತ್ತಿರುವ ಗೋಪರನ್ನೂ ಕಂಡೆವು.

ಆಬಾಲ್ಯಾತ್ಕೃಷ್ಣಭಕ್ತಸ್ತು ಚಂದ್ರಹಾಸಃ ಸಮಾಗತಃ ।
ಭೀತಾಶ್ಚ ಬಹವೋ ಭೂಪಾ ಆಗತಾಸ್ತೇ ಭಯಾತ್ತ್ವ ॥ ೩೬ ॥

॥ ಗರ್ಗ ಉವಾಚ ॥

ಇತಿ ಕೃಷ್ಣಗುಣಾನ್ ಶ್ರುತ್ವಾ ಹ್ಯುದ್ಧವಾದ್ಯಾದವೇಶ್ವರಃ ।
ನ ಕಿಂಚಿದೂಚೇ ಪ್ರೇಮ್ಣಾ ತು ಮಗ್ನಶ್ಚಾನಂದಸಾಗರೇ ॥ ೩೭ ॥

ಮಣಿಹಾರಂ ದದೌ ತಸ್ಮೈ ರತ್ನಾನಿ ಚಾಂಬರಾಣಿ ಚ ।
ಶಿಬಿಕಾವಾರಣರಥಹಯಾದೀನುದ್ಧವಾಯ ಸಃ ॥ ೩೮ ॥

ತತಃ ಕೃಷ್ಣಸ್ತು ಭಗವಾನ್ ಶೀಘ್ರಮುತ್ಥಾಯ ಹರ್ಷಿತಃ ।
ಸಂಖ್ಯಾ ಸಾರ್ಧಂ ಸಭಾಯಾಂ ಚ ಚಕಾರ ಪರಿರಂಭಣಂ ॥ ೩೯ ॥

---

೩೬. ಮತ್ತು ಬಾಲ್ಯದಿಂದಲೂ ಕೃಷ್ಣನ ಭಕ್ತನಾಗಿರುವ ಚಂದ್ರಹಾಸನು ನಮ್ಮೊಡನೆ ಬಂದಿರುವನು. ಓ ರಾಜೇಂದ್ರ! ನಿನ್ನ ಪರಾಕ್ರಮಕ್ಕೆ ಹೆದರಿ ಅನೇಕಮಂದಿ ರಾಜರೂ ಬಂದಿರುವರು.

೩೭. ಎಂದು ಆ ಉದ್ಧವನು ಕುಶಲವಾರ್ತೆಯನ್ನು ತಿಳಿಸಿ ಕೃಷ್ಣನ ಗುಣಗಳನ್ನು ವರ್ಣಿಸಲು ಅದನ್ನು ಕೇಳಿದ ಯಾದವೇಶ್ವರನಾದ ಉಗ್ರಸೇನನು ಮಹಾಸಂತೋಷದಿಂದ ಆನಂದಸಾಗರದಲ್ಲಿ ಮಗ್ನನಾದಂತಾಗಿ ಯಾವ ಮಾತೂ ಆಡಲಾರದೆ ಹೋದನು.

೩೮. ಅನಂತರ ಆ ಉದ್ಧವನಿಗೆ ಮಣಿಯುವಾದ ಹಾರವನ್ನೂ, ಅನೇಕ ರತ್ನಗಳನ್ನೂ, ದಿವ್ಯವಾದ ವಸ್ತ್ರಗಳನ್ನೂ, ಪಲ್ಲಕ್ಕಿ, ರಥ, ಆನೆ, ಕುದುರೆ ಮೊದಲಾದವುಗಳನ್ನೂ ಬಹುಮಾನವಾಗಿತ್ತನು.

೩೯. ಬಳಿಕ ಭಗವಂತನಾದ ಶ್ರೀಕೃಷ್ಣನು ತಾನು ಕುಳಿತಿದ್ದ ಪೀಠದಿಂದ ಮೇಲಕ್ಕೆದ್ದು ಆ ತುಂಬಿದ ಸಭೆಯಲ್ಲಿ ತನ್ನ ಸ್ನೇಹಿತನಾದ ಆ ಉದ್ಧವನನ್ನು ಸಂತೋಷದಿಂದ ಆಲಿಂಗಿಸಿದನು.

ಉಗ್ರಸೇನ ಉವಾಚಾಥ ಗೋವಿಂದಂ ಹರ್ಷಪೂರಿತಃ |
ಆನೇತುಂ ಚಾನಿರುದ್ಧಂ ವೈ ಗಚ್ಛ ಶ್ರೀಕೃಷ್ಣ ಯಾದವೈಃ ॥ ೪೦ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ಉದ್ಧವಾಗಮನಂ ನಾಮ
ತ್ರಿಪಂಚಾಶತ್ತಮೋಽಧ್ಯಾಯಃ

---

೪೦. ಆಮೇಲೆ ಸಂತುಷ್ಟನಾದ ಉಗ್ರಸೇನನು ಶ್ರೀಕೃಷ್ಣನನ್ನು ಕುರಿತು "ಅನಿರುದ್ಧನನ್ನು ಕರೆತರಲು ಯಾದವರೆಲ್ಲರೊಡನೆ ಹೋಗಿಬಾರೆಂದು" ನುಡಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ಉದ್ಧವಾಗಮನವೆಂಬ ಐವತ್ತಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಚತುಃಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ಅಥೋಗ್ರಸೇನವಚನಾದ್ವಸುದೇವಾದಯೋ ನೃಪ ।
ನೇತುಂ ವಿನಿರ್ಯಯುಃ ಸರ್ವೇ ಹ್ಯನಿರುದ್ಧಂ ಸಮಾಗತಂ ॥ ೧ ॥

ಗಜೈ ರಥೈಸ್ತುರಂಗೈಶ್ಚ ಶಿಬಿಕಾಭಿರ್ಯದೂತ್ತಮಾಃ ।
ಶ್ರೀಕೃಷ್ಣಬಲದೇವಾದ್ಯಾಃ ಪ್ರದ್ಯುಮ್ನಾದ್ಯಾ ನೃಪೇಶ್ವರ ॥ ೨ ॥

ಉದ್ಧವಾದ್ಯಾ ಗಜಸ್ಥಾಶ್ಚ ಹಯಂ ದ್ರಷ್ಟುಂ ವಿನಿರ್ಗತಾಃ ।
ದೇವಕೀಪ್ರಮುಖಾ ನಾರ್ಯೋ ಮಾತರಃ ಕೃಷ್ಣರಾಮಯೋಃ ॥ ೩ ॥

ಐವತ್ತನಾಲ್ಕನೆಯ ಅಧ್ಯಾಯವು

೧. ಓ ರಾಜೇಂದ್ರ! ಕೇಳು, ಅನಂತರ ಉಗ್ರಸೇನನ ಅಪ್ಪಣೆಯಂತೆ ಅನಿರುದ್ಧನನ್ನು ಕರೆತರಲು ವಸುದೇವಾದಿ ಯಾದವರು ಹೊರಟರು.

೨. ಅವರೊಡನೆ ಯದುಶ್ರೇಷ್ಠರಾದ ಶ್ರೀಕೃಷ್ಣ, ಬಲರಾಮ, ಪ್ರದ್ಯುಮ್ನ ಮೊದಲಾದವರು ಆನೆ, ಕುದುರೆ, ತೇರು, ಪಲ್ಲಕ್ಕಿ ಮೊದಲಾದ ವಾಹನಗಳನ್ನೇರಿ ಹೊರಟರು.

೩. ಉದ್ಧವಾದಿಗಳಾದ ಇತರ ಯಾದವರೂ ಸಹ ಯಜ್ಞಾಶ್ವವನ್ನು ಸಂದರ್ಶಿಸಲು ಆನೆಗಳನ್ನೇರಿ ಹೊರಟರು. ಅವರಜೊತೆಯಲ್ಲಿ ದೇವಕಿ ಮೊದಲಾದ ಶ್ರೀಕೃಷ್ಣ ಬಲರಾಮರ ತಾಯಿಯರೂ—

ಶಿಬಿಕಾಭಿರ್ವಿಚಿತ್ರಾಭಿರ್ನಿರ್ಯಯೌ ನೃಪಸತ್ತಮ ।
ರುಕ್ಮಿಣೀಸತ್ಯಭಾಮಾದ್ಯಾ ನಾರ್ಯಃ ಕೃಷ್ಣಸ್ಯ ಏವ ಹಿ ॥ ೪ ॥

ಶಿಬಿಕಾಭಿರ್ಯಯುಃ ಸರ್ವಾಃ ಸಹಸ್ರಾಣಿ ಚ ಷೋಡಶ ।
ಲಾಜಾನಾಂ ಮೌಕ್ತಿಕಾನಾಂ ಚ ಕುಸುಮಾನಾಂ ನೃಪೇಶ್ವರ ।
ವರ್ಷಂ ಕರ್ತುಂ ಯಯುಃ ಶೀಘ್ರಂ ಗಜಸ್ಥಾಶ್ಚ ಕುಮಾರಿಕಾಃ ॥ ೫ ॥

ಕಲಶೈರ್ಜಲಹಾರಿಣ್ಯೋ ನಿರ್ಯಯುರ್ಜಲಪೂರಿತೈಃ ।
ಸೌಭಾಗ್ಯವತ್ಯೋ ಬ್ರಾಹ್ಮಣ್ಯೋ ಗಂಧಪುಷ್ಪಾಕ್ಷತಾಂಕುರೈಃ ॥ ೬ ॥

ವರಾಂಗನಾಶ್ಚ ರೂಪಿಣ್ಯೋ ನೃತ್ಯಂ ಕರ್ತುಂ ವಿನಿರ್ಯಯುಃ ।
ಶೋಭಿತಾಃ ಸರ್ವಶೃಂಗಾರೈರ್ಗಾಯಂತ್ಯಶ್ಚ ಗುಣಾನ್ಹರೇಃ ॥ ೭ ॥

---

೪. ರುಕ್ಮಿಣಿ, ಸತ್ಯಭಾಮೆ ಮೊದಲಾದ ಶ್ರೀಕೃಷ್ಣನ ಮಡದಿಯರೂ ಚಿತ್ರವಿಚಿತ್ರಗಳಾದ ಮೇನ ಪಲ್ಲಕ್ಕಿಗಳಲ್ಲಿ ಕುಳಿತು ಹೊರಟರು.

೫. ಇವರೊಂದಿಗೆ ಶ್ರೀಕೃಷ್ಣನ ಹದಿನಾರು ಸಾವಿರ ಮಂದಿ ಅಂತಃಪುರ ಸ್ತ್ರೀಯರು ಶಿಬಿಕೆಗಳನ್ನು (ಮೇನ-ಡೋಲಿ) ಹತ್ತಿ ಹೊರಟರು. ಓ ರಾಜೇಂದ್ರ! ಆಗ ಸಂತೋಷಸೂಚಕವಾಗಿ ಅರಳು, ಮುತ್ತು, ಹೂವುಗಳು ಇವನ್ನು ಎರಚುವ ಸಲುವಾಗಿ ಮದುವೆಯಾಗದ ಕುಮಾರಿಯರು ಆನೆಗಳಮೇಲೆ ಕುಳಿತು ಸಡಗರ ದಿಂದ ಹೊರಟರು.

೬. ಅವರ ಹಿಂದೆ ಜಲವಾಹಿಕೆಯರಾದ ಸ್ತ್ರೀಯರು ಮಂಗಲಾರ್ಥ ವಾದ ಪೂರ್ಣಕುಂಭಗಳನ್ನು ಹಿಡಿದು ಹೊರಟರು. ಅವರ ಹಿಂದುಗಡೆ ಸೌಭಾ ಗ್ಯವತಿಯರಾದ (ಸುಮಂಗಲಿ) ಬ್ರಾಹ್ಮಣಸ್ತ್ರೀಯರು ಗಂಧವನ್ನು, ಪುಷ್ಪಾಕ್ಷತೆಗ ಳನ್ನೂ ಹಿಡಿದು ಹೊರಟರು.

೭. ಅದಕ್ಕೆ ಹಿಂದೆ ರೂಪವತಿಯರಾದ ವೇಶ್ಯಾಸ್ತ್ರೀಯರು ನರ್ತನವನ್ನು ಮಾಡುವುದಕ್ಕೋಸ್ಕರ ಬಗೆಬಗೆಯಾಗಿ ಅಲಂಕಾರವನ್ನು ಮಾಡಿಕೊಂಡು ಶ್ರೀ ಕೃಷ್ಣನ ಗುಣಗಳನ್ನು ಹಾಡುತ್ತಾ ಹೊರಟಿದ್ದರು.

ಶಂಖದುಂದುಭಿನಾದೇನ ಬ್ರಹ್ಮಘೋಷೇಣ ಯಾದವಾಃ ।
ವಾರಣೇಂದ್ರಂ ಪುರಸ್ಕೃತ್ಯ ಗರ್ಗಾದ್ಯೈರ್ಮುನಿಭಿರ್ಯುತಾಃ ॥ ೮ ॥

ವಿಲೋಕಯಂತಃ ಸ್ವಪುರೀಂ ಪತಾಕಾಭಿಶ್ಚ ಮಂಡಿತಾಂ ।
ಸಿಕ್ತಮಾರ್ಗಾಂ ಗಂಧಜಲೈ ರಂಭಾತೋರಣಶೋಭಿತಾಂ ॥ ೯ ॥

ಪ್ರದೀಪ್ತಾಂ ಮಣಿದೀಪ್ತೈಶ್ಚ ವಿತಾನೈರ್ವಿವಿಧೈರಪಿ ।
ದಿವ್ಯನಾರೀನರೈರ್ಯುಕ್ತಾಂ ಸುವರ್ಣಸದನೈರ್ವೃತಾಂ ॥ ೧೦ ॥

ಪಕ್ಷಿಣಾಂ ಕಲಶಬ್ದೇನ ಧೂಮ್ರೇಣಾಗುರುಗಂಧಿನಾ ।
ಶೋಭಿತಾಂ ಕೃಷ್ಣನಗರೀಂ ಶಕ್ರಸ್ಯೇವಾಮರಾವತೀಂ ॥ ೧೧ ॥

---

೮. ಅವರ ಹಿಂದೆ ಗರ್ಗಾದಿ ಮಹರ್ಷಿಗಳೊಡನೆ ಯಾದವರ ಮದ್ದಾನೆಯೊಂದನ್ನು ಮುಂದಿಟ್ಟುಕೊಂಡು ಶಂಖಗಳನ್ನು ಊದುತ್ತಲೂ, ನಗಾರಿಗಳನ್ನು ಬಾರಿಸುತ್ತಲೂ, ವೇದಘೋಷವನ್ನು ಮಾಡುತ್ತಲೂ ಉತ್ಸಾಹದಿಂದ ಬರುತ್ತಿದ್ದರು.

೯. ಅವರೆಲ್ಲರೂ ತಮ್ಮೂರಿನ ವೈಭವವನ್ನು ನೋಡುತ್ತಾ ಬರುತ್ತಿದ್ದರು. ಅಂದು ಪುರಜನರು ಸಂತೋಷದಿಂದ ಎಲ್ಲಕಡೆಗಳಲ್ಲೂ ಧ್ವಜಪಟಗಳನ್ನು ಎತ್ತಿಕಟ್ಟಿದ್ದರು. ರಾಜಮಾರ್ಗಗಳೆಲ್ಲವೂ ಚೆನ್ನಾಗಿ ಧೂಳೇಳದಂತೆ ಗಂಧದ ನೀರಿನಿಂದ ಚುಮುಕಿಸಲ್ಪಟ್ಟಿದ್ದವು. ಮನೆಯ ಬಾಗಿಲುಗಳಮುಂದೆಲ್ಲಾ ಬಾಳೆಯ ಕಂಬಗಳು ನಿಲ್ಲಿಸಲ್ಪಟ್ಟಿದ್ದುವು.

೧೦. ಅಲ್ಲಲ್ಲಿ ಉಜ್ವಲವಾದ ಮಣಿಮಯವಾದ ದೀಪಗಳನ್ನು ಬೆಳಗಿಸುತ್ತಿದ್ದರು. ಅಲ್ಲಲ್ಲಿ ಸೊಗಸಾದ ಬಗೆಬಗೆಯ ಮೇಲ್ಕಟ್ಟುಗಳನ್ನು ಕಟ್ಟಿದ್ದರು. ಆ ನಗರದ ರಾಜಮಾರ್ಗದಲ್ಲಿಯೂ ದಿವ್ಯವಾದ ಸೌಂದರ್ಯದಿಂದೊಪ್ಪುತ್ತಿರುವ ನರನಾರಿಯರು ಕಂಗೊಳಿಸುತ್ತಿದ್ದರು.

೧೧. ಆ ಶ್ರೀಕೃಷ್ಣನ ನಗರಿಯು ಪಕ್ಷಿಗಳ ಇಂಪಾದ ಗಾನದಿಂದಲೂ ಅಗುರುಚಕ್ಕೆಯ ಪರಿಮಳವನ್ನು ಹೊತ್ತು ಬರುತ್ತಿರುವ ಧೂಪದ ಹೊಗೆಯಿಂದಲೂ ಕೂಡಿ ಇಂದ್ರನ ಅಮರಾವತಿಯನ್ನು ಹೋಲುತ್ತಿತ್ತು.

ಇತ್ಥಂ ವಿಲೋಕಯಂತಸ್ತೇ ಪ್ರಾಪ್ತಾಃ ಶೀಘ್ರಂ ಚ ಯಾದವಾಃ ।
ಯತ್ರಾನಿರುದ್ಧಃ ಸಹ ಯೋ ವರ್ತತೇ ಸೇನಯಾ ವೃತಃ ॥ ೧೨ ॥

ತಾನ್ದೃಷ್ಟ್ವಾ ಚಾನಿರುದ್ಧಸ್ತು ಸ್ವರಥಾದವತೀರ್ಯ ಚ ।
ಪುರಸ್ಕೃತ್ಯ ಹಯಂ ಚಾಗ್ರೇ ನೃಪೈಃ ಸಾರ್ಧಂ ಸಮಾಯಯೌ ॥ ೧೩ ॥

ಪೂರ್ವಂ ನತ್ವಾ ಕುಲಾಚಾರ್ಯಂ ವಸುದೇವಂ ಬಲಂ ತಥಾ ।
ಶ್ರೀಕೃಷ್ಣಂ ಪಿತರಂ ಚೈವ ತೇಭ್ಯಶ್ಚಾಶ್ವಂ ದದೌ ಪುನಃ ॥ ೧೪ ॥

ಶುಭಾಶಿಷೋ ದದುಸ್ತೇ ತು ಪ್ರೀತಾಃ ಪ್ರೇಮಪರಿಪ್ಲುತಾಃ ।
ತ್ವಯಾ ಸಾಧು ಕೃತಂ ವತ್ಸ ಸರ್ವಾನ್ ಜಿತ್ವಾರಿಪೂನ್ನೃಪಾನ್ ॥ ೧೫ ॥

---

೧೨. ಇಂತಹ ವೈಭವದಿಂದೊಪ್ಪುತ್ತಿರುವ ಆ ದ್ವಾರಕೆಯನ್ನು ನೋಡುತ್ತಾ ಆ ಯಾದವರು ಅನಿರುದ್ಧನು ಯಜ್ಞಾಶ್ವದೊಡನೆ ತನ್ನ ಸೇನೆಯನ್ನು ಬೀಡುಬಿಟ್ಟಿರುವಲ್ಲಿಗೆ ಬಂದರು.

೧೩. ಅವರನ್ನು ನೋಡಿದ ಕೂಡಲೇ ಅನಿರುದ್ಧನು ತಟ್ಟನೆ ತನ್ನ ತೇರಿನಿಂದ ಇಳಿದು ಯಜ್ಞಾಶ್ವವನ್ನು ಮುಂದಿಟ್ಟುಕೊಂಡು ತನ್ನೊಡನೆ ಬಂದಿದ್ದ ರಾಜರೆಲ್ಲರೊಡನೆ ಅವರಿಗೆದುರಾಗಿ ಬಂದನು.

೧೪. ಅನಂತರ ತನ್ನ ಕುಲಪುರೋಹಿತನಾದ ಗರ್ಗಮುನಿಗೆ ಮೊತ್ತ ಮೊದಲು ನಮಸ್ಕರಿಸಿದನು. ಬಳಿಕ ವಸುದೇವನನ್ನೂ, ಬಲರಾಮ, ಶ್ರೀಕೃಷ್ಣ, ಪ್ರದ್ಯುಮ್ನರನ್ನೂ ಕ್ರಮವಾಗಿ ನಮಸ್ಕರಿಸಿ ಆ ಯಜ್ಞಾಶ್ವವನ್ನು ಅವರಿಗೆ ಒಪ್ಪಿಸಿದನು.

೧೫. ಆಗ ಅವರೆಲ್ಲರೂ ಪ್ರೀತಿಯಿಂದಲೂ ಸಂತೋಷದಿಂದಲೂ ಕೂಡಿದವರಾಗಿ ಆ ಅನಿರುದ್ಧನನ್ನು ಶುಭವಾಕ್ಯಗಳಿಂದ ಆಶೀರ್ವದಿಸಿ ವತ್ಸ! ಅನಿರುದ್ಧ! ಒಳ್ಳೆಯ ಕೆಲಸವನ್ನೇ ಮಾಡಿದೆ. ಶತ್ರುರಾಜರೆಲ್ಲರನ್ನೂ ಗೆದ್ದು—

ಆನಯಾಮಾಸ ತುರಗಂ ಮಧ್ಯೇ ಸಂವತ್ಸರಸ್ಯ ಚ ।
ಇತಿ ತದ್ವಚನಂ ಶ್ರುತ್ವಾಽನಿರುದ್ಧಃ ಪ್ರಾಹ ಮಾಂ ಪುನಃ ॥ ೧೬ ॥

ಕೃಪಯಾ ತವ ವಿಪ್ರೇಂದ್ರ ಮಾರ್ಗೇ ಮಾರ್ಗೇ ಮೃಧೇ ಮೃಧೇ ।
ಬಹುಭಿಃ ಶತ್ರುಭಿಶ್ಚಾಶ್ವೋ ಗೃಹೀತೋಽಪಿ ವಿಮೋಚಿತಃ ॥ ೧೭ ॥

ಗುರೋರನುಗ್ರಹೇಣೈವ ಸುಖೀ ಭವತಿ ಮಾನವಃ ।
ತಸ್ಮಾದ್ಗುರುಂ ಚ ವಿಧಿನಾ ಯಥಾಶಕ್ತ್ಯಾ ಪ್ರಪೂಜಯೇತ್ ॥ ೧೮ ॥

ಭೂಪಾಸ್ತತಃ ಸಮಾಗತ್ಯ ಸಮೀಪೇ ರಾಮಕೃಷ್ಣಯೋಃ ।
ನೇಮುಃ ಪೃಥಕ್ಪೃಥಕ್ಸರ್ವೇ ಪ್ರೀತಾಃ ಪ್ರೇಮಪರಿಪ್ಲುತಾಃ ॥ ೧೯ ॥

---

೧೬. ಒಂದು ಸಂವತ್ಸರದೊಳಗಾಗಿಯೇ ಕುದುರೆಯನ್ನು ಹಿಂದಕ್ಕೆ ಕರೆದುಕೊಂಡು ಬಂದೆ, ಎಂದು ಶ್ಲಾಘಿಸಿದರು. ಓ ರಾಜೇಂದ್ರ! ಈ ಮಾತನ್ನು ಕೇಳಿದೊಡನೆಯೇ ಆ ಅನಿರುದ್ಧನು ಪುರೋಹಿತನಾದ ನನ್ನನ್ನು ಕುರಿತು—

೧೭. ಓ ವಿಪ್ರೇಂದ್ರ! ಈ ಯಜ್ಞಾಶ್ವವು ಸಂಚರಿಸುವಾಗ ದಾರಿಯಲ್ಲಿ ನಡುನಡುವೆ ಅನೇಕಮಂದಿ ಶತ್ರುಗಳು ಇದನ್ನು ಕಟ್ಟಿಹಾಕಿದರು. ಅವರೊಡನೆ ಅನೇಕ ಯುದ್ಧಗಳೂ ಜರುಗಿದುವು. ಆದರೂ ನಿಮ್ಮ ಕೃಪೆಯಿಂದ ಅವುಗಳೆಲ್ಲಾ ಗೆದ್ದು ಯಜ್ಞಾಶ್ವವನ್ನು ಬಿಡಿಸಿಕೊಂಡು ಬಂದೆವು.

೧೮. ಗುರುವಿನ ಅನುಗ್ರಹದಿಂದಲೇನೇ ಮನುಷ್ಯನು ಸುಖವನ್ನು ಹೊಂದುವನು. ಆದುದರಿಂದ (ಮನುಷ್ಯನು) ಗುರುವನ್ನು ಸ್ವಶಕ್ತ್ಯನುಸಾರವಾಗಿ ವಿಧಿವತ್ತಾಗಿ ಸತ್ಕರಿಸಬೇಕು, ಎಂದನು.

೧೯. ಓ ರಾಜೇಂದ್ರ! ಅನಂತರ ಅನಿರುದ್ಧನ ಜೊತೆಯಲ್ಲಿ ಬಂದಿದ್ದ ರಾಜರು ಪ್ರೀತಿಯಿಂದಲೂ ಸಂತೋಷದಿಂದಲೂ ಕೂಡಿದವರಾಗಿ ಬಲರಾಮನಿಗೂ, ಕೃಷ್ಣನಿಗೂ ಬೇರೆಬೇರೆಯಾಗಿ ನಮಸ್ಕರಿಸಿದರು.

ಸರ್ವಾನ್ದೃಷ್ಟ್ವಾ ನತಾನ್ಭೂಪಾನ್ಶ್ರೀಕೃಷ್ಣೋ ಬಲಸಂಯುತಃ ।
ಚಂದ್ರಹಾಸಂ ಚ ಗಾಂಗೇಯಂ ಬಿಂದುಂ ಚೈವಾನುಶಾಲ್ವಕಂ ॥ ೨೦ ॥

ಹೇಮಾಂಗದಂ ಚೇಂದ್ರನೀಲಂ ಪರಿರೇಭೇ ಹರಿರ್ಮುದಾ ।
ಕೃಷ್ಣಭಕ್ತಾತ್ಪರಃ ಕೋಽಪಿ ತಸ್ಮಾದ್ಭೂಮೌ ನ ವಿದ್ಯತೇ ॥ ೨೧ ॥

ತತೋಽನಿರುದ್ಧಂ ಜಯಿನಂ ಸಮಾಗತಂ
ಗಜೇ ಸಮಾರೋಪ್ಯ ಕುಶಸ್ಥಲೀಂ ಯಯೌ ।
ಶೌರಿಃ ಪ್ರಸನ್ನಃ ಕಿಲ ಸರ್ವಯಾದವೈಃ
ಪುತ್ರೈಶ್ಚ ಪೌತ್ರೈರ್ಮುದಿತೈರ್ನೃಪೇಶ್ವರ ॥ ೨೨ ॥

ಪುಷ್ಪಾಣಾಂ ಮಕರಂದಾನಾಂ ವರ್ಷಂ ಚಕ್ರುಃ ಸುರಸ್ತ್ರಿಯಃ ।
ಲಾಜಾನಾಂ ಮೌಕ್ತಿಕಾನಾಂ ಚ ಕುಂಜರಸ್ಥಾಃ ಕುಮಾರಿಕಾಃ ॥ ೨೩ ॥

೨೦-೨೧. ಈರೀತಿ ತನಗೆ ನಮಸ್ಕಾರಮಾಡಿದ ಆ ರಾಜರನ್ನೂ ಕೃಪಾವಲೋಕನದಿಂದ ಅನುಗ್ರಹಿಸಿದ ಬಳಿಕ ಶ್ರೀಕೃಷ್ಣನು ಬಲರಾಮನೊಡನೆ ಚಂದ್ರಹಾಸನನ್ನೂ ಭೀಷ್ಮನನ್ನೂ ಬಿಂದು, ಅನುಶಾಲ್ವ, ಹೇಮಾಂಗದ, ಇಂದ್ರನೀಲನನ್ನೂ ಸಂತೋಷದಿಂದ ಆಲಂಗಿಸಿದನು. ಎಲೈ ಮಹಾರಾಜನೇ, ಕೃಷ್ಣಭಕ್ತನಿಗಿಂತಲೂ ಮೇಲಾದವನು ಈ ಭೂಮಿಯಲ್ಲಿ ಯಾವನಿರುವನು?

೨೨. ಅನಂತರ ಸುಪ್ರೀತನಾದ ಆ ಶ್ರೀಹರಿಯು ಜಯಶೀಲನಾಗಿ ಬಂದ ಅನಿರುದ್ಧನನ್ನು ಆನೆಯಮೇಲೆ ಕುಳ್ಳಿರಿಸಿಕೊಂಡು ಸಂತುಷ್ಟರಾದ ಸಕಲ ಯಾದವರೊಡನೆಯೂ, ಪುತ್ರ ಪೌತ್ರರೊಡನೆಯೂ ಸಮೇತವಾಗಿ ಕುಶಸ್ಥಲಿ (ನೀರಿನಲ್ಲಿರುವ ದ್ವೀಪ-ದ್ವಾರಕೆ) ಗೆ ಹೊರಟನು.

೨೩. ಆಗ ದೇವತಾಸ್ತ್ರೀಯರು ಪುಷ್ಪಗಳನ್ನೂ, ಮಕರಂದವನ್ನೂ ವರ್ಷಿಸಿದರು. ಆನೆಗಳಮೇಲೆ ಕುಳಿತು ಬಂದಿದ್ದ ಕುಮಾರಿಯರು ಮಂಗಲಾರ್ಥವಾದ ಅರಳುಗಳನ್ನೂ, ಮುತ್ತುಗಳನ್ನೂ ಸುರಿಸಿದರು.

ನೃತ್ಯವಾದಿತ್ರಗೀತೇನ ಬ್ರಹ್ಮಘೋಷೇಣ ಶೋಭಿತಾಃ ।
ಪಶ್ಯಂತಃ ಸಿಕ್ತಮಾರ್ಗಾಂ ತಾಂ ಪುರೀಂ ಪಿಂಡಾರಕಂ ಯಯುಃ ॥ ೨೪ ॥

ನೃಪಾಃ ಸರ್ವೇ ಯದೂನಾಂ ಚ ವೈಭವಂ ದೈವದುರ್ಲಭಂ ।
ವಿಲೋಕ್ಯ ವೈಭವಂ ಸ್ವಂ ಸ್ವಂ ಗರ್ಹಯಂತಿ ಚ ವಿಸ್ಮಿತಾಃ ॥ ೨೫ ॥

ಯಜ್ಞಸ್ಥಲಂ ತೇ ದದೃಶುರ್ಧೂಮ್ರೇಣ ಘೃತಗಂಧಿನಾ ।
ವ್ಯಾಪ್ತಂ ಬ್ರಾಹ್ಮಣಘೋಷೇಣ ಹ್ಯಸಿಪತ್ರವ್ರತೇನ ಚ ॥ ೨೬ ॥

ನಿರೀಕ್ಷ್ಯ ತತ್ರ ಭೂಪಾಲಮುಗ್ರಸೇನಂ ಯದೂತ್ತಮಂ ।
ಪುರಂದರಸಮಂ ದಾಂತಂ ಪುಷ್ಟಂ ಗೌರಂ ಸ್ಫುರತ್ಪ್ರಭಂ ॥ ೨೭ ॥

---

೨೪. ಆನಂತರ ಅವರೆಲ್ಲರೂ ರಾಜಮಾರ್ಗಗಳಲ್ಲೆಲ್ಲಾ ಚೆನ್ನಾಗಿ ಧೂಳೇಳದಂತೆ ನೀರೆರಚಲ್ಪಟ್ಟಿದ್ದ ಆ ದ್ವಾರಕಾವತಿಯನ್ನು ನೋಡುತ್ತಾ ನೃತ್ಯಗಳಿಂದಲೂ, ವಾದ್ಯಗಳಿಂದಲೂ, ಮಧುರಗಾನಗಳಿಂದಲೂ, ವೇದಘೋಷಗಳಿಂದಲೂ ಕೂಡಿ ಕಂಗೊಳಿಸುತ್ತಾ ಪಿಂಡಾರಕಕ್ಷೇತ್ರವನ್ನು ಸೇರಿದರು.

೨೫. ಆ ಯಾದವರ ಜೊತೆಯಲ್ಲಿ ಬಂದಿದ್ದ ನಾನಾದೇಶದ ರಾಜರು ದೇವತೆಗಳಿಗೂ ದುರ್ಲಭವೆನಿಸಿದ ಅವರ ವೈಭವವನ್ನು ಕಂಡು ಬೆರಗಾಗಿ ತಮ್ಮ ತಮ್ಮ ವೈಭವಗಳನ್ನು ಹಳಿದುಕೊಂಡರು.

೨೬. ಬಳಿಕ ಅವರು ಆಜ್ಯಗಂಧವನ್ನು ಹೊತ್ತುಬರುತ್ತಿರುವ ಹೊಗೆಯಿಂದಲೂ, ಬ್ರಾಹ್ಮಣರ ವೇದಘೋಷಗಳಿಂದಲೂ, ಕತ್ತಿಯ ಅಲುಗಿನಂತೆ ಕಠಿಣವಾದ ಅಸಿಪತ್ರವ್ರತವೆಂದು ಪ್ರಸಿದ್ಧವಾದ ಬ್ರಹ್ಮಚರ್ಯದಿಂದಲೂ ಕಂಗೊಳಿಸುತ್ತಿರುವ ಯಜ್ಞವಾಟವನ್ನು ಕಂಡರು.

೨೭. ಅಲ್ಲಿ ಜಿತೇಂದ್ರಿಯನೂ, ತುಂಬುದೇಹದವನೂ, ಬಿಳಿಯ ಮೈಬಣ್ಣವುಳ್ಳವನೂ, ಮಹಾತೇಜಶ್ಶಾಲಿಯೂ ಆದ ಉಗ್ರಸೇನ ನರಪತಿಯು ಇಂದ್ರನಂತೆ ಮೆರೆಯುತ್ತಾ ಕುಳಿತಿರುವುದನ್ನು ಕಂಡರು.

ಕುಶಾಸನಸ್ಥಂ ಸುಭಗಂ ನಿಯಮೋ ನ್ಯಸ್ತಭೂಷಣಂ ।
ಸಂಯುಕ್ತಂ ಮೃಗಶೃಂಗೇಣ ಮೃಗಚರ್ಮಣಿ ಭಾರ್ಯಯಾ ॥ ೨೮ ॥
ಕುರ್ವಂತಂ ಪೂಜನಂ ಚಾಗ್ನೇರ್ಘೃತಗಂಧಾಕ್ಷತಾದಿಭಿಃ ।
ಮಂಡಪೇ ಮುನಿಭಿರ್ಯುಕ್ತಂ ಧೂಮ್ರೇಣಾರುಣಲೋಚನಂ ॥ ೨೯ ॥
ತಂ ಸರ್ವೇ ಚಾನಿರುದ್ಧಾದ್ಯಾ ಕೃತ್ವಾಗ್ರೇ ಯಜ್ಞಘೋಟಕಂ ।
ವಾಹನೇಭ್ಯಃ ಸಮುತ್ತೀರ್ಯ ನೇಮುಃ ಪ್ರೀತಾಃ ಪೃಥಕ್ಪೃಥಕ್ ॥ ೩೦ ॥
ತತಃ ಶ್ರೀಯದುರಾಜಸ್ತು ಸರ್ವಾನ್ದೃಷ್ಟ್ವಾ ನೃಪಾನ್ಯದೂನ್ ।
ಸರ್ವೇಷಾಮಾದಧೇ ಮಾನಂ ಯಥಾಯೋಗ್ಯಂ ಯಥಾಬಲಂ ॥ ೩೧ ॥
ಅನಿರುದ್ಧಸ್ತತೋ ನತ್ವಾ ಶೀಘ್ರಂ ಭೂತ್ವಾ ಕೃತಾಂಜಲಿಃ ।
ಸರ್ವೇಷಾಂ ಶೃಣ್ವತಾಂ ಪ್ರಾಹ ಜಂಬೂದ್ವೀಪಪತಿಂ ನೃಪಂ ॥ ೩೨ ॥

೨೮-೨೯. ಸೌಮ್ಯಾಕಾರನಾದ ಆ ಯಾದವೋತ್ತಮನು ನಿಯಮಾರ್ಥವಾಗಿ ಯಾವ ಭೂಷಣಗಳನ್ನೂ ಧರಿಸದೆ ಜಿಂಕೆಯ ಚರ್ಮವನ್ನುಟ್ಟು ಸಾರಂಗದ ಕೊಂಬನ್ನು ಹಿಡಿದು ತನ್ನ ಪತ್ನಿಯೊಡನೆ ದರ್ಭಾಸನದಮೇಲೆ ಕುಳಿತು ಆಜ್ಯದಿಂದಲೂ, ಗಂಧ, ಅಕ್ಷತೆ ಮೊದಲಾದ ದ್ರವ್ಯದಿಂದಲೂ ಯಜ್ಞೇಶ್ವರನನ್ನು ಅರ್ಚಿಸುತ್ತಾ ಮುನಿಗಳ ನಡುವೆ ಆ ಯಾಗಮಂಟಪದಲ್ಲಿ ಮಂಡಿಸಿದ್ದನು. ಆತನ ಕಣ್ಣುಗಳು ಹೋಮಧೂಪದಿಂದ ಕೆಂಪೇರಿದ್ದುವು.

೩೦. ಆತನನ್ನು ಕಂಡೊಡನೆಯೇ ಆ ಅನಿರುದ್ಧಾದಿ ಯಾದವರು ತಮ್ಮ ತಮ್ಮ ವಾಹನಗಳಿಂದಿಳಿದು ಯಜ್ಞಾಶ್ವವನ್ನು ಮುಂದಿಟ್ಟುಕೊಂಡು ಬಂದು ಬೇರೆ ಬೇರೆಯಾಗಿ ಪ್ರತಿಯೊಬ್ಬರೂ ಸಂತೋಷದಿಂದ ನಮಸ್ಕರಿಸಿದರು.

೩೧. ಅನಂತರ ಆ ಯಾದವರಾಜನು ಎಲ್ಲ ಯಾದವರನ್ನೂ, ರಾಜರನ್ನೂ ನೋಡಿ ಅವರವರ ಪರಾಕ್ರಮಗಳಿಗೆ ತಕ್ಕಂತೆ ಉಚಿತವಾದ ಮರ್ಯಾದೆಯನ್ನು ಮಾಡಿದನು.

೩೨. ಬಳಿಕ ಅನಿರುದ್ಧನು ಮತ್ತೊಮ್ಮೆ ನಮಸ್ಕರಿಸಿ, ಕೈಗಳನ್ನು ಮುಗಿದುಕೊಂಡು ಜಂಬೂದ್ವೀಪಕ್ಕೆಲ್ಲಾ ಏಕೈಕಾಧಿಪತಿಯಾದ ಆ ಉಗ್ರಸೇನನನ್ನು ಕುರಿತು ಎಲ್ಲರೂ ಕೇಳುವಂತೆ ಇಂತು ನುಡಿದನು.

॥ ಅನಿರುದ್ಧ ಉವಾಚ ॥

ಏನಂ ಪಶ್ಯ ಮಹಾರಾಜ ಇಂದ್ರನೀಲನೃಪೋತ್ತಮಂ ।
ಪಾದಯೋಃ ಪತಿತಂ ಪ್ರೇಮ್ಣಾ ಸಮುತ್ಥಾಪಯ ದೇವವತ್ ॥ ೩೩ ॥

ಹೇಮಾಂಗದಂ ಚಾನುಶಾಲ್ವಂ ಬಿಂದುಂ ಶ್ರೀಚಂದ್ರಹಾಸಕಂ ।
ಏನಂ ದೇವವ್ರತಂ ಪಶ್ಯ ಚಾಗತಂ ತವ ಸನ್ನಿಧೌ ॥ ೩೪ ॥

ಮಮ ರಕ್ಷಾಕರಂ ಪಶ್ಯ ಸಾಂಬಂ ಜಾಂಬವತೀಸುತಂ
ರುದ್ರೇಣ ನಿಹತಂ ಮಾಂ ಚ ಪಶ್ಯ ಕೃಷ್ಣೇನ ಜೀವಿತಂ ॥ ೩೫ ॥

ತಥಾ ರುದ್ರಹತಂ ಪಶ್ಯ ಜೀವಿತಂ ಚ ಸುನಂದನಂ ।
ಅನ್ಯಾನ್ಪಶ್ಯ ಯದೂನ್ಸರ್ವಾನ್ ಕೃಷ್ಣಸ್ಯ ಕೃಪಯಾಗತಾನ್ ॥ ೩೬ ॥

---

೩೩. ಎಲೈ ಮಹಾರಾಜನೇ! ಕಾಲ್ಗಳಮೇಲೆ ತಲೆಬಾಗಿ ನಮಸ್ಕರಿಸು ತ್ತಿರುವ ಈತನನ್ನು ದೇವರಂತೆ ಪ್ರೀತಿಯಿಂದ ಕೈಹಿಡಿದೆಬ್ಬಿಸು. ಈತನೇ ನೃಪ ಶ್ರೇಷ್ಠನಾದ ಇಂದ್ರನೀಲರಾಜನು.

೩೪. ಇದೋ ! ಈತನು ಜಾಂಬವತೀ ಪುತ್ರನಾದ ಸಾಂಬನು. ಈತನು ಯಾವಾಗಲೂ ನನಗೆ ಬೆಂಗಾವಲಾಗಿದ್ದು ಸಂರಕ್ಷಿಸುತ್ತಾ ಬಂದವನು. ಈತನನ್ನು ನೋಡು. ಮಹೇಶ್ವರನಿಂದ ಸಂಹೃತನಾಗಿದ್ದರೂ ಶ್ರೀಕೃಷ್ಣನ ಅನುಗ್ರಹದಿಂದ ಮತ್ತೆ ಜೀವವನ್ನು ಪಡೆದ ನನ್ನನ್ನೂ ಕೃಪಯಿಂದ ಅವಲೋಕಿಸು !

೩೫. ಇದೋ ಈತನು ಸುನಂದನನು. ಈತನೂ ನನ್ನಂತೆಯೇ ಮಹೇ ಶ್ವರನಿಂದ ಸಂಹರಿಸಲ್ಪಟ್ಟು ಬಳಿಕ ಶ್ರೀಕೃಷ್ಣಾನುಗ್ರಹದಿಂದ ಸುರಕ್ಷಿತವಾಗಿ ಹಿಂದಿ ರುಗಿ ಬಂದವನು. ಈ ಇತರ ಯಾದವರೆಲ್ಲರನ್ನೂ ನೋಡು.

೩೬. ಯಾವುದೊಂದು ತಡೆಯೂ ಇಲ್ಲದೆ ಹಿಂದಿರುಗಿ ಇಲ್ಲಿಗೆ ಬಂದಿ ರುವ ಯಜ್ಞಾಶ್ವವನ್ನು ಪರಿಗ್ರಹಿಸು. ಯುದ್ಧಕ್ಕೋಸ್ಕರವಾಗಿ ನನಗೆ ಇತ್ತಿದ್ದ ಈ ವಿಜಯ ಖಡ್ಗವನ್ನೂ ಒಪ್ಪಿಸಿರುವೆನು! ಸ್ವೀಕರಿಸು. ನಿನಗೆ ನಮಸ್ಕಾರವು ಎಂದನು.

ಗೃಹಾಣ ಯಜ್ಞತುರಗಂ ನಿರ್ವಿಘ್ನೇನ ಸಮಾಗತಂ ।
ದತ್ತಂ ಯದ್ಭಾಯ ನಿಸ್ತ್ರಿಂಶಂ ತಂ ಗೃಹಾಣ ನಮೋऽಸ್ತು ತೇ ॥ ೩೭ ॥

ಇತಿ ತದ್ವಾಕ್ಯಮಾಕರ್ಣ್ಯ ಯದುರಾಜಃ ಪ್ರಹರ್ಷಿತಃ ।
ಸಂಶ್ಲಾಘ್ಯ ತಂ ನೃಪಾಂಶ್ಚೈವ ಯಥಾಯೋಗ್ಯಾಶಿಷಂ ದದೌ ॥ ೩೮ ॥

ಪೂಜಯಿತ್ವಾ ನೃಪಾನ್ಸರ್ವಾಂಸ್ತತೋ ಭೀಷ್ಮಮುವಾಚ ಹ ।
ಏಹಿ ಭೀಷ್ಮ ಮಯಾ ಸಾರ್ಧಂ ಕುರು ತ್ವಂ ಪರಿರಂಭಣಂ ॥ ೩೯ ॥

ಇತ್ಯುಕ್ತ್ವಾ ತಂ ಸಮುತ್ಥಾಯ ಪರಿರೇಭೇ ಯದೂತ್ತಮಃ ।
ತತಸ್ತೇ ದಾನಮಾನಾಭ್ಯಾಂ ಪೂಜಿತಾ ಯದವೋ ನೃಪಾಃ ॥ ೪೦ ॥

ನಿವಾಸಂ ಚಕ್ರಿರೇ ಪ್ರೀತಾ ದ್ವಾರಕಾಯಾಂ ಗೃಹೇ ಗೃಹೇ ।
ತತೋ ದೃಷ್ಟ್ವಾऽನಿರುದ್ಧಂ ವೈ ಪ್ರಾಪ್ತಂ ಸಾಂಬಾದಿಭಿರ್ನೃಪ ॥ ೪೧ ॥

---

೩೭. ಈ ರೀತಿಯಾಗಿ ಅನಿರುದ್ಧನು ಬಿನ್ನವಿಸಿದುದನ್ನು ಕೇಳಿ ಸಂತುಷ್ಟನಾದ ಯದುರಾಜನು ಆತನನ್ನು ಪ್ರಶಂಶಿಸಿ ಇತರ ರಾಜರನ್ನೂ ಶ್ಲಾಘನೆ ಮಾಡಿದುದಲ್ಲದೆ ಅವರೆಲ್ಲರಿಗೂ ಉಚಿತವಾದ ಆಶೀರ್ವಾದ ಮಾಡಿದನು.

೩೮. ಆ ರಾಜರೆಲ್ಲರನ್ನೂ ಸತ್ಕರಿಸಿದ ಬಳಿಕ ಆ ಯಾದವೇಶ್ವರನು ಭೀಷ್ಮವನ್ನು ಕುರಿತು ಎಲೈ ಭೀಷ್ಮನೇ, ಇತ್ತಬಾ! ನನ್ನನ್ನು ಆಲಂಗಿಸು.

೩೯. ಎಂದು ನುಡಿದು ತಾನು ಕುಳಿತಿದ್ದ ಪೀಠದಿಂದೆದ್ದು ಆತನನ್ನು ಆಲಂಗಿಸಿದನು. ಅನಂತರ ಆ ಯಾದವರನ್ನೂ ರಾಜರನ್ನೂ ಪದವಿಗಳಿಂದಲೂ, ಬಹುಮಾನಗಳಿಂದಲೂ ಗೌರವಿಸಿದನು.

೪೦-೪೧. ಬಳಿಕ ಅವರೆಲ್ಲರೂ ಸಂತೋಷದಿಂದ ಆ ದ್ವಾರಕೆಯ ಪ್ರತಿಯೊಂದು ಮನೆಯಲ್ಲೂ ವಾಸಮಾಡತೊಡಗಿದನು. ಓ ರಾಜೇಂದ್ರ! ಅನಂತರ ಸಾಂಬ ಮೊದಲಾದವರೊಡನೆ ಅನಿರುದ್ಧನು ಹಿಂದಿರುಗಿ ಬಂದುದನ್ನು ಕಂಡು ದೇವಕಿ, ರೋಹಿಣಿ ಮೊದಲಾದ ವಸುದೇವನಪತ್ನಿಯರೂ, ರುಕ್ಮಿಣಿ ಮೊದಲಾದ ಶ್ರೀಕೃಷ್ಣನ ಮಡದಿಯರೂ, ರುಕ್ಮವತಿ ಮುಂತಾದ ಪ್ರದ್ಯುಮ್ನ ಸ್ತ್ರೀಯರೂ ಆ ಅನಿರುದ್ಧನನ್ನು ಪ್ರೀತಿಯಿಂಧ ಆಲೀಂಗಿಸಿ ಸಂತೋಷವನ್ನು ತಾಳಿದರು.

ದೇವಕೀ ರೋಹಿಣೀ ಚೈವ ರುಕ್ಮಿಣ್ಯಾದ್ಯಾಃ ಸ್ತ್ರಿಯೋ ವರಾಃ ।
ಅನ್ಯಾಶ್ಚ ರುಕ್ಮವತ್ಯಾದ್ಯಾಃ ಪರಿಷ್ವಜ್ಯ ಮುದಂ ಯಯುಃ ॥ ೪೨ ॥

ಸುರೂಪಾ ರೋಚನಾ ಹ್ಯೂಷಾ ರಾಜನ್ನೇತಾ ಮುದಂ ಗತಾಃ ।
ಸಾಂಬಶ್ಲಾಘಾಂ ತತಃ ಶ್ರುತ್ವಾ ಸುಯೋಧನಸುತಾ ಭೃಶಂ ॥ ೪೩ ॥

ಮುದಂ ಯಯೌ ಸ್ವನೇತ್ರಾಭ್ಯಾಂ ಮುಂಚಂತೀ ಹರ್ಷಜಂ ಜಲಂ ।
ಬಭೂವ ಮಂಗಲಂ ರಾಜನ್ ದ್ವಾರಕಾಯಾಂ ಗೃಹೇ ಗೃಹೇ ।
ಸಸೈನ್ಯೇ ನೃಪಶಾರ್ದೂಲ ಹ್ಯನಿರುದ್ಧೇ ಸಮಾಗತೇ ॥ ೪೪ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ದ್ವಾರಕಾಯಾಂ ತುರಗಾಗಮನಂ ನಾಮ
ಚತುಃಪಂಚಾಶತ್ತಮೋಽಧ್ಯಾಯಃ

೪೨-೪೪. ಈರೀತಿ ತಮ್ಮ ಪ್ರಿಯನ ಅಭ್ಯುದಯವನ್ನು ಕಂಡು ಸುರೂಪೆಯೂ, ರೋಚನೆಯೂ, ಉಷೆಯೂ ಸಂತೋಷಭರಿತರಾದರು. ಅದೇರೀತಿ ಸಾಂಬನ ಪ್ರಶಂಸೆಯನ್ನು ಕೇಳಿದ ದುರ್ಯೋಧನ ಕುಮಾರಿಯೂ ಸಹ ಆನಂದಾಶ್ರುಗಳನ್ನು ಸುರಿಸುತ್ತಾ ಬಹುವಾಗಿ ಸಂತೋಷಿಸಿದಳು. ಓ ರಾಜೇಂದ್ರ! ಆ ಅನಿರುದ್ಧನು ಸೈನ್ಯಸಮೇತನಾಗಿ ಸುರಕ್ಷಿತವಾಗಿ ದ್ವಾರಕೆಗೆ ಹಿಂದಿರುಗಿದುದನ್ನು ಕಂಡು ಆ ನಗರದಲ್ಲಿರುವವರೆಲ್ಲರೂ ಮನೆ ಮನೆಯಲ್ಲೂ ಉತ್ಸವಗಳನ್ನಾಚರಿಸಿದರು, ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತದಲ್ಲಿ ದ್ವಾರಕಾತುರಗಾಗಮನವೆಂಬ ಐವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಪಂಚಪಂಚಾಶತ್ತಮೋಽಧ್ಯಾಯಃ

|| ಗರ್ಗ ಉವಾಚ ||

ಅಥ ವೈ ಮಂಡಪೇ ರಮ್ಯೇ ದ್ವಾರೈರಷ್ಟಭಿರನ್ವಿತೇ ।
ಪತತ್ಪತಾಕೇ ಕುಂಡಾಢ್ಯೇ ಯಾಜ್ಞಿಕೈರಷ್ಟಕೈರ್ಯುತೇ || ೧ ||

ಪಾಲಾಶಜೈರ್ಬಿಲ್ವಜೈಶ್ಚ ತಥಾ ಶ್ಲೇಷ್ಮಾಂತಕೈರ್ನೃಪ ।
ವೇದಿಕಾಭಿಸ್ತಥಾ ಯೂಪೈಶ್ಚಷಾಲೈರಪಿ ಭೂಷಿತೇ || ೨ ||

ಐವತ್ತೈದನೆಯ ಅಧ್ಯಾಯವು

೧. ಎಲೈ ವಜ್ರನಾಭಿರಾಜನೇ! ಆಲಿಸು :—ರಮಣೀಯವಾಗಿ ರಚಿತವಾಗಿದ್ದ ಆ ಯಾಗಶಾಲೆಗೆ ಎಂಟು ಬಾಗಿಲುಗಳು ಇದ್ದುವು. ಅವುಗಳಮೇಲೆಲ್ಲಾ ಧ್ವಜಪಟಗಳು ಗಾಳಿಯಲ್ಲಿ ಹಾರಾಡುತ್ತಿದ್ದುವು. ಒಳಗಡೆ ಸುತ್ತಲೂ ಎಂಟು ಮಂದಿ ಯಾಜ್ಞಿಕರಿಂದೊಡಗೂಡಿದ ಯಜ್ಞಕುಂಡಗಳು ಶೋಭಿಸುತ್ತಿದ್ದುವು.

೨. ಅಲ್ಲದೆ ಅಲ್ಲಲ್ಲಿ ವೇದಿಕೆಗಳೂ, ಪಾಲಾಶ (ಮುತ್ತುಗ) ಬಿಲ್ವ, ಶ್ಲೇಷ್ಮಾತಕ ಮುಂತಾದ ಮರಗಳಿಂದ ಮಾಡಿದ ಯೂಪಗಳೂ, ಆ ಯೂಪಗಳಲ್ಲಿ ಹಾಕಿರುವ ಚಷಾಲಗಳೆಂಬ ಮರದ ಬಳೆಗಳೂ ಅದರ ಅಂದವನ್ನು ಹೆಚ್ಚಿಸುತ್ತಿದ್ದುವು.

ಸ್ರುಕ್ಸ್ರುವರ್ಮಕುಶಮುಸಲೋಲೂಖಲಾದ್ಯೈರ್ವಿಶಾಂ ಪತೇ ।
ಅನ್ಯೈಃ ಸಂಭೃತಸಂಭಾರೈರ್ನಾನಾವಸ್ತುಭಿರನ್ವಿತೇ ॥ ೩ ॥

ಉಗ್ರಸೇನಸ್ತು ರಾಜರ್ಷಿರ್ಋಷಿಭಿರ್ವೇದಪಾರಗೈಃ ।
ಯಾದವೈಶ್ಚಾಮರಾವತ್ಯಾಂ ರೇಜೇ ಶಕ್ರ ಇವಾಮರೈಃ ॥ ೪ ॥

ಆಹೂತಾಃ ಕೃಷ್ಣಚಂದ್ರೇಣ ಗೋಪಾ ನಂದಾದಯಸ್ತಥಾ ।
ವೃಷಭಾನುವರಾದ್ಯಾಶ್ಚ ಶ್ರೀದಾಮಾದ್ಯಾಃ ಸಮಾಯಯುಃ ॥ ೫ ॥

ಯಶೋಮತೀ ರಾಧಿಕಾ ಚ ಹ್ಯನ್ಯಾಃ ಸರ್ವಾ ವ್ರಜಸ್ತ್ರಿಯಃ ।
ದ್ವಾರಕಾಮಾಯಯುಃ ಪ್ರೀತಾಃ ಶಿಬಿಕಾಭೀ ರಥೈರಪಿ ॥ ೬ ॥

---

೩. ಓ ರಾಜೇಂದ್ರ ! ಇದಲ್ಲದೆ ಸ್ರುಕ್ಕು, ಕೃಷ್ಣಾಜಿನ, ದರ್ಭೆ, ವನಕೆ, ಒರಳು ಮೊದಲಾದ ಯಜ್ಞದ್ರವ್ಯಗಳೂ ಇನ್ನೂ ಇತರ ಯಜ್ಞಸಂಭಾರಗಳೂ ಅಲ್ಲಿ ಹೇರಳವಾಗಿದ್ದುವು.

೪. ಇಂತಹ ಆ ಯಜ್ಞವಾಟದಲ್ಲಿ ವೇದಪಾರಗರಾದ ಬ್ರಾಹ್ಮಣರೂ ಯಾದವರೂ ತುಂಬಿದ್ದರು. ಅವರ ನಡುವೆ ರಾಜರ್ಷಿಯಾದ ಉಗ್ರಸೇನನು ಅಮರಾವತಿಯಲ್ಲಿ ದೇವಸಭೆಯ ನಡುವೆ ಕುಳಿತಿರುವ ಇಂದ್ರನಂತೆ ಕಂಗೊಳಿಸುತ್ತಿದ್ದನು.

೫. ಆಗ ಅಲ್ಲಿಗೆ ಕೃಷ್ಣನಿಂದ ಆಹೂತರಾಗಿದ್ದ (ಕರೆಯಲ್ಪಟ್ಟ) ನಂದಗೋಪ, ವೃಷಭಾನು, ಶ್ರೀದಾಮ ಮೊದಲಾದ ಗೋಪಾಲಕರು ಗೋಕುಲದಿಂದ ಬಂದರು.

೬. ಅವರೊಡನೆ ಯಶೋದೆ, ರಾಧೆಯರೂ ಮತ್ತು ಇತರ ಗೋಪಾಂಗನೆಯರೂ ಶಿಬಿಕೆ (ಮೇನ-ಪಲ್ಲಕ್ಕಿ) ಗಳಲ್ಲೂ ರಥಗಳಲ್ಲೂ ಕುಳಿತುಸಂತೋಷದಿಂದ ದ್ವಾರಕೆಗೆ ಬಂದರು.

ಆಹೂತೋ ಧೃತರಾಷ್ಟ್ರಸ್ತು ಕೌರವೈಶ್ಚ ಸುತೈರ್ಯುತಃ ।
ಆಜಗಾಮ ಕುಶಸ್ಥಲ್ಯಾಂ ನೃಪಾಶ್ಚಾನ್ಯೇ ಸಮಾಗತಾಃ ॥ ೭ ॥

ಯುಧಿಷ್ಠಿರೋ ಭೀಮಸೇನಶ್ಚಾರ್ಜುನೋ ನಕುಲಸ್ತಥಾ ।
ಸಹದೇವೋ ವನಾದೇತೇ ಹ್ಯಾಜಗ್ಮುರ್ಭಾರ್ಯಯಾ ಸಹ ॥ ೮ ॥

ಶ್ರೀಕೃಷ್ಣೇನ ಸಮಾಹೂತಾಃ ಪ್ರೇಷಯಿತ್ವಾ ಚ ನಾರದಂ ।
ಶಕ್ರಾದಯೋಽಷ್ಟೌ ದಿಕ್ಪಾಲಾ ವಸವೋ ರವಯಸ್ತಥಾ ॥ ೯ ॥

ಯಜ್ಞೇ ಸನತ್ಕುಮಾರಾಶ್ಚ ರುದ್ರಾಶ್ಚೈಕಾದಶಾಪಿ ಹಿ ।
ಮರುದ್ಗಣಾಶ್ಚ ವೇತಾಲಾ ಗಂಧರ್ವಾಃ ಕಿನ್ನರಾಸ್ತಥಾ ॥ ೧೦ ॥

ವಿಶ್ವೇದೇವಾಶ್ಚ ಸಾಧ್ಯಾಶ್ಚ ಸರ್ವೇ ವಿದ್ಯಾಧರಾಃ ಸ್ಮೃತಾಃ ।
ದೇವಾಶ್ಚ ದೇವಪತ್ನ್ಯಶ್ಚ ಗಂಧರ್ವ್ಯೋಽಪ್ಸರಸಸ್ತಥಾ ॥ ೧೧ ॥

---

೭. ಅದೇರೀತಿ ಆಹ್ವಾನಿಸಲ್ಪಟ್ಟಿದ್ದ ಕೌರವೇಶ್ವರನಾದ ಧೃತರಾಷ್ಟ್ರನು ತನ್ನ ಮಕ್ಕಳಾದ ಕೌರವರೊಡನೆ ಆ ಕುಶಸ್ಥಲಿ (ದ್ವಾರಕೆ) ಗೆ ಬಂದನು. ಅದರಂತೆ ಇನ್ನೂ ಅನೇಕ ಮಂದಿ ರಾಜರು ಬಂದರು.

೮. ಅಂತೆಯೇ ಧರ್ಮರಾಜನು ಭೀಮ, ಅರ್ಜುನ, ನಕುಲ, ಸಹದೇವರೊಡನೆಯೂ, ದ್ರೌಪದಿಯೊಡನೆಯೂ ದ್ವೈತವನದಿಂದ ಅಲ್ಲಿಗೆ ಬಂದನು.

೯-೧೭. ಇತ್ತಲಾಗಿ ನಾರದಮಹರ್ಷಿಯ ಮುಖಾಂತರ ಶ್ರೀಕೃಷ್ಣನಿಂದ ಆಹೂತರಾದ ಇಂದ್ರಾದ್ಯಷ್ಟದಿಕ್ಪಾಲಕರೂ, ಅಷ್ಟವಸುಗಳೂ, ದ್ವಾದಶಾದಿತ್ಯರೂ, ಸನಕ, ಸನಂದಾದಿಗಳೂ, ಏಕಾದಶರುದ್ರರೂ, ಸಪ್ತಮರುತ್ತುಗಳೂ, ವೇತಾಲರೂ, ಗಂಧರ್ವರೂ, ಕಿನ್ನರರೂ, ತ್ರಯೋದಶ ವಿಶ್ವೇದೇವತೆಗಳೂ, ಸಾಧ್ಯರೂ, ವಿದ್ಯಾಧರರೂ, ಇತರ ದೇವತೆಗಳೂ, ಆ ದೇವತೆಗಳ ಪತ್ನಿಯರೂ, ಗಂಧರ್ವಾಂಗನೆಯರೂ, ಅಪ್ಸರಸ್ತ್ರೀಯರೂ, ಶ್ರೀಕೃಷ್ಣನನ್ನು

ಆಜಗ್ಮುರ್ದ್ವಾರಕಾಂ ರಾಜನ್ ಕೃಷ್ಣದರ್ಶನಕಾಂಕ್ಷಯಾ ।
ಕೈಲಾಸಾಚ್ಚ ಸಮಾಹೂತಃ ಸರ್ವಮಂಗಳಯಾ ಶಿವಃ ॥ ೧೨ ॥

ಸುತಲಾದ್ದೈತ್ಯವೃಂದೈಶ್ಚ ಪ್ರಹ್ಲಾದೋ ಬಲಿರೇವ ಚ ।
ವಿಭೀಷಣೋ ಭೀಷಣಶ್ಚ ಮಯೋ ಬಲ್ವಲ ಏವ ಚ ॥ ೧೩ ॥

ಜಾಂಬುವಾನ್ಭಂಷ್ಟ್ರಿಭಿಃ ಸಾರ್ಧಂ ಹನೂಮಾನ್ವಾನರೈರ್ಯುತಃ ।
ಪಕ್ಷಿಭಿಃ ಪಕ್ಷಿರಾಟ್ತತ್ರ ತಥಾ ಸರ್ಪೈಶ್ಚ ವಾಸುಕಿಃ ॥ ೧೪ ॥

ಧೇನುಭಿಃ ಸಹಿತಾ ರಾಜನ್ ಧೇನುರೂಪಧರಾ ಪರಾ ।
ಮೇರುಃ ಶೈಲೈರ್ಹಿಮಗಿರಿರ್ವಟಃ ಸಾಕ್ಷಾದ್ದ್ರುಮೈರ್ವೃತಃ ॥ ೧೫ ॥

ರತ್ನಾಕರಾ ರತ್ನಯುತಾ ನದೀಭಿಃ ಸ್ವರ್ಧುನೀ ತಥಾ ।
ತೀರ್ಥೈಃ ಸರ್ವೈಶ್ಚ ರಾಜೇಂದ್ರ ತೀರ್ಥರಾಜಶ್ಚ ಪುಷ್ಕರಃ ॥ ೧೬ ॥

ಸಂದರ್ಶಿಸಬೇಕೆಂಬಾಸೆಯಿಂದ ದ್ವಾರಕೆಗೆ ಬಂದರು. ಅದರಂತೆಯೇ ಆಹ್ವಾನಿಸಲ್ಪಟ್ಟಿದ್ದ ಶಿವನು ಸರ್ವಮಂಗಲೆಯೊಡನೆ ಕೈಲಾಸದಿಂದ ಬಂದನು.

೧೩. ಅದೇರೀತಿ ಸುತಲದಿಂದ ಪ್ರಹ್ಲಾದ, ಬಲಿ, ವಿಭೀಷಣ, ಮಯ, ವಲ್ವಲ ಮೊದಲಾದ ದೈತ್ಯರು ತಮ್ಮ ಅನುಯಾಯಿಗಳಾದ ಇತರ ದೈತ್ಯವರ್ಗಗಳೊಡನೆ ಅಲ್ಲಿಗೆ ಬಂದರು.

೧೪. ಅದರಂತೆ ಜಾಂಬವಂತನು ಕರಡಿಗಳೊಡನೆಯೂ, ಹನುಮಂತನು ವಾನರರೊಡನೆಯೂ, ಗರುಡನು ಪಕ್ಷಿಗಳೊಡನೆಯೂ, ವಾಸುಕಿಯು ಸರ್ಪಗಳೊಡನೆಯೂ ಬಂದರು.

೧೫-೧೬. ಹಾಗೆಯೇ ಗೋರೂಪಧಾರಿಣಿಯಾದ ಭೂಮಿಯು ಇತರ ಹಸುಗಳೊಂದಿಗೂ, ಮೇರುಪರ್ವತವು ಇತರ ಶೈಲಗಳೊಂದಿಗೂ, ವಟವೃಕ್ಷವು ಸಕಲ ವೃಕ್ಷಜಾತಿಗಳೊಂದಿಗೂ, ಸಾಗರಗಳು ರತ್ನಗಳೊಂದಿಗೂ, ಗಂಗೆಯು ನದಿಗಳೊಂದಿಗೂ, ತೀರ್ಥರಾಜವಾದ ಪುಷ್ಕರವು ಇತರ ತೀರ್ಥಗಳೊಂದಿಗೂ ಅಲ್ಲಿಗೆ ಆಗಮಿಸಿದರು.

ಏತೇ ಸರ್ವೇ ಸಮಾಹೂತಾ ಆಜಗ್ಮುರ್ಮುದಿತಾಃ ಕ್ರತೌ ।
ತತಃ ಕೃಷ್ಣೇನ ಚಾಹೂತಾ ವ್ರಜಭೂಮಿಃ ಸಮಾಗತಾ ॥ ೧೭ ॥

ಕೃಷ್ಣಯಜ್ಞೋತ್ಸವಂ ದ್ರಷ್ಟುಂ ಯಮುನಾ ಶಮನಸ್ವಸಾ ।
ಸರ್ವಾನ್ದೃಷ್ಟ್ವಾಗತಾನ್ಪ್ರೀತೋ ವಾಸಯಾಮಾಸ ಚಾಹುಕಃ ॥ ೧೮ ॥

ಶಿಬಿರೇಷು ಮಂದಿರೇಷು ವಿಮಾನೇಷು ವನೇಷು ಚ ।
ಅಥಾಚಾರ್ಯಃ ಕೃತೋ ವ್ಯಾಸೋ ಬಕದಾಲ್ಭ್ಯೋ ವಿಧಿರ್ಮಯಾ ॥

ಋತ್ವಿಜಶ್ಚ ಕೃತಾ ದಿವ್ಯಾ ಯೇ ವೈ ಪೂರ್ವಂ ನಿಮಂತ್ರಿತಾಃ ।
ಅಥ ಯಜ್ಞೇಽನಿರುದ್ಧಸ್ತು ಶ್ರೀಕೃಷ್ಣಸ್ಯೇಚ್ಛಯಾ ನೃಪ ॥ ೨೦ ॥

---

೧೭. ಓ ರಾಜೇಂದ್ರ! ಇವರೆಲ್ಲರೂ ಶ್ರೀಕೃಷ್ಣನಿಂದ ಕರೆಯಲ್ಪಟ್ಟು ಯಜ್ಞ ಸಂದರ್ಶನಾರ್ಥವಾಗಿ ಬಂದವರು. ಅನಂತರ ಕೃಷ್ಣನು ಆಹ್ವಾನಿಸಿದ್ದ ವ್ರಜಭೂಮಿಯೂ—

೧೮. ಯಮನ ತಂಗಿಯಾದ ಯಮುನೆಯೂ, ಕೃಷ್ಣನ ಯಜ್ಞ ವೈಭವವನ್ನು ಸಂದರ್ಶಿಸಲು ಬಂದರು. ಈರೀತಿ ಆಹ್ವಾನವಿತ್ತವರೆಲ್ಲರೂ ಆಗಮಿಸಿದುದನ್ನು ಕಂಡು ಸುಪ್ರೀತನಾದ ಆಹುಕನು—

೧೯. ಶಿಬಿರಗಳಲ್ಲೂ, ಮಂದಿರಗಳಲ್ಲೂ, ಮೇಲ್ಮಾಳಿಗೆಗಳಲ್ಲೂ, ಉಪವನಗಳಲ್ಲೂ ಅವರಿಗೆಲ್ಲರಿಗೂ ಬಿಡಾರಗಳನ್ನೇರ್ಪಡಿಸಿದನು. ಅನಂತರ ನಾನು (ಗರ್ಗಮುನಿ) ಆ ಯಜ್ಞಕ್ಕೆ ವ್ಯಾಸಮಹರ್ಷಿಯನ್ನು ಆಚಾರ್ಯ ಪುರುಷನನ್ನಾಗಿಯೂ, ಬಕದಾಲ್ಭ್ಯಮುನಿಯನ್ನು ಬ್ರಹ್ಮನನ್ನಾಗಿಯೂ ಇರುವಂತೆ ನೇಮಿಸಿದೆನು.

೨೦. ಇದಕ್ಕೆ ಮುಂಚೆಯೇ ಅಲ್ಲಿಗೆ ಆಹೂತರಾಗಿ ಬಂದಿದ್ದ ಅರ್ಹರಾದವರನ್ನು ಋತ್ವಿಕ್ಕುಗಳನ್ನಾಗಿ ನಿಯಮಿಸಿದೆನು. ಓ ರಾಜೇಂದ್ರ! ಆಗ ಶ್ರೀಕೃಷ್ಣನ ಅಪೇಕ್ಷೆಯಂತೆ—

ವಿಧೇ ರ್ವಿಧೋಶ್ಚ ಸ್ವಸ್ಯಾಽಪಿ ಕೃತ್ವಾ ರೂಪತ್ರಯಂ ಬಭೌ ।
ದೃಷ್ಟ್ವಾ ಲೀಲಾಂ ಕಾರ್ಷ್ಣಿಜಸ್ಯ ದೇವಾಶ್ಚ ಯದವೋ ನೃಪಾಃ ॥ ೨೧ ॥

ವಿಸ್ಮಿತಾಃ ಕಥಯಾಮಾಸುಃ ಕರ್ಣೇ ಕರ್ಣೇ ಪರಸ್ಪರಂ ।
ವ್ಯಾಸಃ ಪ್ರತ್ಯಾಹ ರಾಜಾನಂ ಶೃಣು ಯಾದವಸತ್ತಮ ॥ ೨೨ ॥

ಉಪವಿಷ್ಟಾ ನೃಪಾ ವಿಪ್ರಾ ಯಥಾಸ್ಥಾನೇ ವಿಭಾಗಶಃ ।
ಚತುಃಷಷ್ಟಿರ್ದಂಪತೀನಾಂ ಯಾತು ವೈ ಗೋಮತೀತಟೇ ॥ ೨೩ ॥

ಆಹರ್ತುಂ ಸಲಿಲಂ ತಸ್ಯಾ ಮಯಾದಿಷ್ಟಂ ಯಥೋಚಿತಂ ।
ಅದಿತ್ಯಾ ಕಶ್ಯಪಶ್ಚೈವ ವಸಿಷ್ಠೋಽರುಂಧತೀಯುತಃ ॥ ೨೪ ॥

---

೨೧. ಮೊಮ್ಮಗನಾದ ಅನಿರುದ್ಧನು ಬ್ರಹ್ಮನಂತೆಯೂ, ಚಂದ್ರನಂತೆಯೂ ರೂಪಗಳನ್ನು ಧರಿಸಿದುದಲ್ಲದೆ ತನ್ನ ನಿಜರೂಪದಿಂದಲೂ ಓಡಾಡುತ್ತಾ ಮೂರು ರೂಪಗಳಿಂದ ಕಂಗೊಳಿಸಿದನು.

೨೨. ಪ್ರದ್ಯುಮ್ನಪುತ್ರನಾದ ಅನಿರುದ್ಧನ ಈ ಕೌಶಲವನ್ನು ಕಂಡು ದೇವತೆಗಳೂ, ಯಾದವರೂ, ಇತರ ರಾಜರುಗಳೂ, ಆಶ್ಚರ್ಯಚಕಿತರಾಗಿ ಪರಸ್ಪರ ಈ ಅಂಶವನ್ನು ಒಬ್ಬರ ಕಿವಿಯಲ್ಲಿ ಮತ್ತೊಬ್ಬರು ಹೇಳಿದರು.

೨೩. ಆಗ ವ್ಯಾಸಮಹರ್ಷಿಯು ಉಗ್ರಸೇನನನ್ನು ಕುರಿತು 'ಓ ಯಾದವಶ್ರೇಷ್ಠ! ಕೇಳು. ಇಲ್ಲಿ ಒಂದೊಂದು ಗುಂಪಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಬ್ರಾಹ್ಮಣೋತ್ತಮರೂ, ಕ್ಷತ್ರಿಯಶ್ರೇಷ್ಠರೂ ಕುಳಿತಿರುವರಷ್ಟೆ, ಇವರುಗಳಲ್ಲಿ ಅರವತ್ತುನಾಲ್ಕು ಮಂದಿ ದಂಪತಿಗಳು ಗೋಮತೀನದಿಗೆ ಹೊರಡಲಿ.

೨೪. ಇವರುಗಳು ಅಲ್ಲಿಂದ ನೀರನ್ನು ತರಬೇಕು. ಯಾವ ಯಾವ ದಂಪತಿಗಳು ನೀರನ್ನು ತರಬೇಕೆಂಬುದನ್ನು ಔಚಿತ್ಯವನ್ನರಿತು ತಿಳಿಸುವೆನು. ಕೇಳು. ಅದಿತಿಯೊಂದಿಗೆ ಕಶ್ಯಪನು ಹೊರಡಲಿ. ಅರುಂಧತಿಯೊಡನೆ ವಸಿಷ್ಠನು ನಡೆಯಲಿ.

ದ್ರೋಣಾಚಾರ್ಯಸ್ತು ಕೃಪ್ಯಾ ಚ ಹ್ಯತ್ರಿಶ್ಚೈವಾನುಸೂಯಯಾ ।
ರುಕ್ಮಿಣ್ಯಾ ಕೃಷ್ಣಚಂದ್ರಸ್ತು ರೇವತ್ಯಾ ರಾಮ ಏವ ಚ ॥ ೨೫ ॥

ಮಾಯಾವತ್ಯಾ ಚ ಪ್ರದ್ಯುಮ್ನ ಊಷಯಾ ಕಾರ್ಷ್ಣಿಜಸ್ತಥಾ ।
ಸುಭದ್ರಯಾರ್ಜುನಶ್ಚೈವ ಸಾಂಬೋ ಲಕ್ಷ್ಮಣಯಾ ತಥಾ ॥ ೨೬ ॥

ತಥಾ ಹೇಮಾಂಗದಾದ್ಯಾಶ್ಚ ಯಾಂತು ವೈ ಸ್ವಸ್ವಭಾರ್ಯಯಾ ।
॥ ಗರ್ಗ ಉವಾಚ ॥
ಏವಂ ತೇ ವ್ಯಾಸವಚನಾತ್ಸಪತ್ನೀಕಾ ದ್ವಿಜಾ ನೃಪಾಃ ॥ ೨೭ ॥

ಆನೇತುಂ ಗೋಮತೀತೋಯಂ ಪ್ರಯಯುರ್ಬದ್ಧಪಲ್ಲವಾಃ ।
ದೇವಕೀಂ ರೋಹಿಣೀಂ ಕುಂತೀಂ ಗಾಂಧಾರೀಂ ಚ ಯಶೋಮತೀಂ ॥

ಪುರಸ್ಕೃತ್ಯ ನಿಜಗ್ರಾಹ ಕುಂಭೌ ಭೈಷ್ಮ್ಯಾ ಯುತೋ ಹರಿಃ ।
ತಥಾ ರಾಮಸ್ತು ರೇವತ್ಯಾ ಸಸ್ತ್ರೀಕಾ ಯೇಽಪಿ ಭೂಮಿಪಾಃ ॥ ೨೯ ॥

---

೨೫. ಕೃಪಿಯೊಂದಿಗೆ ದ್ರೋಣಾಚಾರ್ಯನೂ, ಅನುಸೂಯೆಯೊಡನೆ ಅತ್ರಿಯೂ, ರುಕ್ಮಿಣಿಯೊಡನೆ ಕೃಷ್ಣನೂ, ರೇವತಿಯೊಂದಿಗೆ ಬಲರಾಮನೂ ತೆರಳಲಿ.

೨೬. ಇದರಂತೆ ಮಾಯಾವತೀಪ್ರದ್ಯುಮ್ನರೂ, ಉಷೆ ಅನಿರುದ್ಧರೂ, ಸುಭದ್ರಾರ್ಜುನರೂ, ಲಕ್ಷ್ಮಣಾ ಸಾಂಬರೂ ಹೊರಡಲಿ.

೨೭-೨೮. ಅದರಂತೆ ಹೇಮಾಂಗದ ಮೊದಲಾದವರು ತಮ್ಮ ತಮ್ಮ ಪತ್ನಿಯರೊಂದಿಗೆ ತೆರಳಲಿ, ಎಂದನು. ಓ ರಾಜೇಂದ್ರ ! ಈರೀತಿ ವ್ಯಾಸನು ನುಡಿದುದನ್ನು ಕೇಳಿ ಆ ಬ್ರಾಹ್ಮಣರೂ, ಕ್ಷತ್ರಿಯರೂ ತಮ್ಮ ತಮ್ಮ ಪತ್ನಿಯರೊಂದಿಗೆ ಗೋಮತೀನದಿಯ ನೀರನ್ನು ತರಲು ಸಿದ್ಧರಾಗಿ ಹೊರಟರು. ಆಗ ದೇವಕಿ, ರೋಹಿಣಿ, ಕುಂತಿ, ಗಾಂಧಾರಿ, ಯಶೋದೆ ಇವರನ್ನು ಮುಂದಿಟ್ಟುಕೊಂಡು—

೨೯. ಶ್ರೀಕೃಷ್ಣನು ರುಕ್ಮಿಣಿಯೊಡನೆ ನೀರನ್ನು ತರಲು ಕುಂಭಗಳೆರಡನ್ನೂ ತೆಗೆದುಕೊಂಡು ಹೊರಟನು.

ಸುವರ್ಣರೌಪ್ಯಕಲಶೈಃ ಸಪುಷ್ಪೈಶ್ಚ ಸಪಲ್ಲವೈಃ ।
ರುಕ್ಮಿಣ್ಯಾ ಸಹಿತಂ ಯಾತಂ ಕೃಷ್ಣಂ ದೃಷ್ಟ್ವಾ ಸಮಾಗನೋ ॥ ೩೦ ॥

ನಾರದಃ ಕಲಹಂ ಕರ್ತುಂ ಸತ್ಯಭಾಮಾಗೃಹಂ ಯಯೌ ।
ದೃಷ್ಟ್ವಾ ಚೈಕಾಂ ಹರೇರ್ಭಾರ್ಯಾಂ ಸಂಪೃಷ್ಟಃ ಸ ತಯಾಬ್ರವೀತ್ ॥

॥ ನಾರದ ಉವಾಚ ॥

ಆದರಂ ಸದನೇ ನಾಸ್ತಿ ಸತ್ರಾಜಿತಸುತೇ ತವ ।
ಗತಃ ಕೃಷ್ಣಸ್ತು ರುಕ್ಮಿಣ್ಯಾ ಚಾಹರ್ತುಂ ಗೋಮತೀಜಲಂ ॥ ೩೨ ॥

ಬಹುಭಿರ್ಯಾಚಿತಾ ತ್ವಂ ತು ಪಾರಿಜಾತಕಹಾರಿಣೀ ।
ಕೃಷ್ಣಸಂಕಲ್ಪಕರಿಣೀ ಮಣಿಯುಕ್ತಾ ಚ ಮಾನಿನೀ ॥ ೩೩ ॥

೩೦-೩೧. ಆ ಬಿಂದಿಗೆಗಳೆಲ್ಲಾ ಚಿನ್ನದಿಂದಲೂ, ಬೆಳ್ಳಿಯಿಂದಲೂ, ಮಾಡಲ್ಪಟ್ಟಿದ್ದು ಹೂವುಗಳಿಂದಲೂ, ಎಳೆಯ ಚಿಗುರುಗಳಿಂದಲೂ ಅಲಂಕೃತವಾಗಿದ್ದುವು. ರಾಜೇಂದ್ರ! ಆ ಸಮಯದಲ್ಲಿ ಕಲಹಪ್ರಿಯನಾದ ನಾರದಮುನಿಯು, ಕೃಷ್ಣನು ರುಕ್ಮಿಣಿಯೊಡನೆ ನೀರುತರಲು ಗೋಮತೀನದಿಗೆ ತೆರಳಿದುದನ್ನು ಕಂಡು ರಗಳೆಹಚ್ಚಬೇಕೆಂದು ನೇರವಾಗಿ ಸತ್ಯಭಾಮೆಯ ಮನೆಗೆಬಂದನು. ಆ ಸಮಯದಲ್ಲಿ ಅವಳೊಬ್ಬಳೇ ಕುಳಿತಿದ್ದಳು. ನಾರದಮುನಿಯು ಬರುತ್ತಲೇ ಇದೇನೆಂದು ಆಶ್ಚರ್ಯದಿಂದ ಪ್ರಶ್ನಿಸಲು—

೩೨. ಆ ನಾರದಮಹರ್ಷಿಯು ಇಂತು ಉತ್ತರವಿತ್ತನು :—ಎಲೌ ಸತ್ರಾಜಿತಪುತ್ರಿಯೇ! ನಿನ್ನನ್ನು ಈ ಮನೆಯುಲ್ಲಿ ಯಾರೂ ಆದರಿಸುವವರೇ ಇಲ್ಲ, ನಿನ್ನನ್ನು ಬಿಟ್ಟು ಆ ಕೃಷ್ಣನು ರುಕ್ಮಿಣಿಯೊಂದಿಗೆ ತೀರ್ಥಜಲವನ್ನು ತರಲು ಗೋಮತೀನದಿಗೆ ಹೊರಟಿರುವನು.

೩೩. ಎಲೌ ಅಭಿಮಾನಶಾಲಿನಿ! ನೀನೇ ಪಾರಿಜಾತವನ್ನು ಸ್ವರ್ಗದಿಂದ ತಂದವಳಲ್ಲವೇ? ಸ್ಯಮಂತಕಮಣಿಯ ಒಡತಿಯೂ ನೀನೇ (ನಿನ್ನ ಪ್ರಸನ್ನವಾದ ಕಟಾಕ್ಷವೀಕ್ಷಣಾದಿಗಳಿಗೆ ಪಾತ್ರನಾಗಬೇಕಾದರೂ) ಆ ಕೃಷ್ಣನು ನಿನ್ನ ಬಳಿ ಎಷ್ಟೋಬಾರಿ ಪ್ರಾರ್ಥಿಸಬೇಕು. ನಂತರವೇ ಅವನ ಅಭಿಲಾಷೆಯು ನೆರವೇರುತ್ತಿರುವುದು.

ಈದೃಶೀಂ ತ್ವಾಂ ವರಾರೋಹಾಂ ಗರುಡೋಪರಿಗಾಮಿನೀಂ ।
ವಿಹಾಯ ಭೈಷ್ಮ್ಯಾ ಶ್ರೀಕೃಷ್ಣಃ ಶೋಭಾಂ ದ್ರಷ್ಟುಂ ಜಗಾಮ ಹ ॥ ೩೪ ॥

ಯಸ್ಯಾಃ ಪುತ್ರಶ್ಚ ಪ್ರದ್ಯುಮ್ನೋ ಯಸ್ಯಾಃ ಪೌತ್ರೋಽನಿರುದ್ಧಕಃ ।
ಸಾ ದರ್ಶಯತಿ ಭೋ ಮಾತರ್ವಾರ್ತಾಂ ಮಾನಂ ಚ ಗೌರವಂ ॥ ೩೫ ॥

॥ ಗರ್ಗ ಉವಾಚ ॥

ಇತಿ ಶ್ರುತ್ವಾ ಪ್ರಾಣನಾಥಂ ರುಕ್ಮಿಣ್ಯಾ ಸಹಿತಂ ಗತಂ ॥ ೩೬ ॥

ರುರೋದ ದುಃಖಿತಾ ರಾಜನ್ ಸತ್ಯಭಾಮಾ ರುಷಾನ್ವಿತಾ ।
ತದೈವ ಕೃಷ್ಣೋ ಭಗವಾನ್ ಜ್ಞಾತ್ವಾ ನಾರದಚೇಷ್ಟಿತಂ ॥ ೩೭ ॥

---

೩೪. ಹೀಗಿರುವಲ್ಲಿ ಸೌಭಾಗ್ಯಶಾಲಿನಿಯೂ, ಪರಮಪ್ರೀತಿಪಾತ್ರಳೂ, ಸ್ವರ್ಗ ಲೋಕಗಮನಾದಿಗಳಲ್ಲಿ ಗರುಡನನ್ನೇರಿ ಕುಳಿತು ಜೊತೆಗಾರ್ತಿಯಾಗಿ ಬಂದ ಸಾಹಸವಂತೆಯೂ ಆದ ನಿನ್ನನ್ನೇ ತೊರೆದು ಆ ಶ್ರೀಕೃಷ್ಣನು ರುಕ್ಮಿಣಿಯೊಡನೆ ಆ ವೈಭವವೆಲ್ಲವನ್ನೂ ನೋಡಲು ಹೊರಟಿರುವನು.

೩೫. ಅಮ್ಮಾ! ಏನುಹೇಳಲಿ! ಆ ರುಕ್ಮಿಣಿಯು ತಾನೇ ಪ್ರದ್ಯುಮ್ನನ ತಾಯಿಯೆಂದೂ, ಅನಿರುದ್ಧನು ತನ್ನ ಮೊಮ್ಮಗನೇ ಎಂದೂ, ಅಲ್ಲೆಲ್ಲಾ ಹೇಳಿ ಕೊಳ್ಳುತ್ತಾ ತನ್ನ ಕೀರ್ತಿಪ್ರತಿಷ್ಠೆಗಳನ್ನೂ, ಗೌರವವನ್ನೂ ಕೊಚ್ಚಿಕೊಳ್ಳುತ್ತಿರು ವಳು, ಎಂದು ನುಡಿದನು.

೩೬-೩೭. ಓ ರಾಜೇಂದ್ರ! ಈರೀತಿಯಾಗಿ ತನ್ನ ಪ್ರಾಣನಾಥನಾದ ಶ್ರೀಕೃಷ್ಣನು ರುಕ್ಮಿಣಿಯೊಡನೆ ಹೊರಟುಹೋದ ಸಮಾಚಾರವನ್ನು ಕೇಳಿ ಆ ಸತ್ಯಭಾಮೆಯು ದುಃಖದಿಂದಲೂ, ಕೋಪದಿಂದಲೂ ತಲ್ಲಣಿಸುತ್ತಾ ತಡೆಯಲಾ ರದೆ ಅಳಲಾರಂಭಿಸಿದಳು. ಆ ಕ್ಷಣವೇ ಭಗವಂತನಾದ ಶ್ರೀಕೃಷ್ಣನಿಗೆ ನಾರದನ ಕೀಟಲೆಯೆಲ್ಲವೂ ತಿಳಿದುಹೋಯಿತು.

ಸತ್ಯಭಾಮಾಗೃಹಂ ಶೀಘ್ರಂ ರೂಪೇಣೈಕೇನ ಚಾಗಮತ್ ।
ಗತ್ವಾ ಪ್ರತ್ಯಾಹ ವಚನಂ ಸರ್ವಜ್ಞಾತಾ ರಮೇಶ್ವರಃ ॥ ೩೮ ॥

ನ ಗತೋಽಹಂ ಸಮಾಜೇ ವೈ ರುಕ್ಮಿಣ್ಯಾ ಸಹಿತಃ ಪ್ರಿಯೇ ।
ಆಗತೋ ಭೋಜನಂ ಕರ್ತುಂ ಗತೋ ರಾಮಶ್ಚ ಭಾರ್ಯಯಾ ॥ ೩೯ ॥

ಇತಿ ತದ್ವಾಕ್ಯಮಾಕರ್ಣ್ಯ ಸತ್ಯಭಾಮಾ ಮುದಂ ಗತಾ ।
ಭೀತೋ ನಾರದ ಉತ್ಥಾಯ ಗೇಹಂ ಚಾನ್ಯಂ ಜಗಾಮ ಹ ॥ ೪೦ ॥

ಗತ್ವಾ ಜಾಂಬವತೀಗೇಹಂ ತಸ್ಯಾಗ್ರೇ ಸರ್ವಮಬ್ರವೀತ್ ।
ಶ್ರುತ್ವಾ ಹಸಂತೀ ಸಾ ಪ್ರಾಹ ಮೃಷಾ ಮಾ ವದ ಹೇ ಮುನೇ ॥ ೪೧ ॥

ಕರೋತಿ ಶಯನಂ ಗೇಹೇ ಶ್ರೀನಾಥೋ ಭೋಜನಾಂತರೇ ।
ಇತಿ ಶ್ರುತ್ವಾ ಶಂಕಿತಸ್ತು ತ್ವರಂ ನಿರ್ಗತ್ಯ ನಾರದಃ ॥ ೪೨ ॥

---

೩೮. ಒಡನೆಯೇ ಸರ್ವಜ್ಞನಾದ ಆ ಹರಿಯು ತನ್ನ ಬೇರೊಂದು ರೂಪದಿಂದ ಸತ್ಯಭಾಮೆಯ ಮನೆಗೆ ಬಂದು ಅವಳನ್ನು ಕುರಿತು.

೩೯. ಎಲೌ ಪ್ರಿಯೇ! ರುಕ್ಮಿಣಿಯೊಡನೆ ನಾನು ಆ ಗುಂಪಿನಲ್ಲಿ ಹೋಗಲಿಲ್ಲ. ನಾನಿಲ್ಲಿಗೆ ಊಟಕ್ಕೆ ಬಂದಿರುವೆನು. ಬಲರಾಮನು ತನ್ನ ಹೆಂಡತಿಯೊಡನೆ ಆ ಗುಂಪಿನಲ್ಲಿ ಹೋಗಿರುವನು ಎಂದನು.

೪೦. ಅದನ್ನು ಕೇಳುತ್ತಲೇ ಸತ್ಯಭಾಮೆಯು ರೋಷವನ್ನು ಶಾಂತವಾಗಿ ಮಾಡಿ ಆನಂದಿತಳಾದಳು. ಅದನ್ನು ಕಂಡು ನಾರದನಿಗೆ ಹೆದರಿಕೆಯಾಗಿ ಕೂಡಲೇ ಅಲ್ಲಿಂದ ಹೊರಟುಬಿಟ್ಟನು.

೪೧. ಅನಂತರ ಜಾಂಬವತಿಯ ಮನೆಗೆ ಹೋಗಿ ಸತ್ಯಭಾಮೆಗೆ ಹೇಳಿದಂತೆ ಅವಳಿಗೂ ಹೇಳಿದನು. ಅದನ್ನು ಕೇಳಿ ಜಾಂಬವತಿಯು ನಗುತ್ತಾ, ಮಹರ್ಷಿಯೇ! ಸುಳ್ಳೇಕೆ ಹೇಳುವೆ? ಬೇಡ.

೪೨. ಇದೋ ಆ ಶ್ರೀನಾಥನು ಊಟಮಾಡಿ ಸುಖವಾಗಿ ಮಲಗಿರುವನು, ಎಂದಳು. ಅದನ್ನು ಕೇಳುತ್ತಲೇ ನಾರದನು ಚಕಿತನಾಗಿ ಬೇಗನೆ ಅಲ್ಲಿಂದ ಹೊರಟು—

ಮಿತ್ರವಿಂದಾಗೃಹೇ ಗತ್ವಾ ಪ್ರತ್ಯುವಾಚ ವಿಲೋಕಯನ್ ।

॥ ನಾರದ ಉವಾಚ ॥

ನ ಗತಾಸಿ ನೃಪಸ್ಥಾನಂ ಮಾತರ್ಗೇಹೇ ಸ್ಥಿತಾಸಿ ಕಿಂ ॥ ೪೩ ॥

ಆಹರ್ತುಂ ಗೋಮತೀತೋಯಂ ಪ್ರಯಾತಿ ಯತ್ರ ಮಾಧವಃ ।
ಭೈಷ್ಮೀಂ ಸತ್ಯಾಂ ಜಾಂಬವತೀಂ ಸಹ ನೇಷ್ಯತಿ ತತ್ರ ವೈ ॥ ೪೪ ॥

॥ ಮಿತ್ರವಿಂದೋವಾಚ ॥

ಕೇಶವಸ್ಯ ಪ್ರಿಯಾಃ ಸರ್ವಾ ಗಂತಾಸೌ ಯಾಂ ವಿಹಾಯ ಚ ।
ಸಾ ನ ಜೀವತಿ ಕೃಷ್ಣಸ್ತು ಪೌತ್ರಂ ಲಾಲಯತಿ ಗೃಹೇ ॥ ೪೫ ॥

ತತೋ ಮುನಿಃ ಸಮುತ್ಥಾಯ ಸರ್ವಾಣಿ ಮಂದಿರಾಣಿ ಚ ।
ಬಭ್ರಾಮ ಕೃಷ್ಣಭಾರ್ಯಾಣಾಂ ಸಕೃಷ್ಣಾನೀತ್ಯಮನ್ಯತ ॥ ೪೬ ॥

---

೪೩. ಮಿತ್ರವಿಂದೆಯ ಮನೆಗೆ ಹೋಗಿ ಅವಳನ್ನು ನೋಡುತ್ತಾ ಇಂತೆಂದನು :—ಅಮ್ಮಾ ಇದೇನು ? ಏಕೆ ಇಲ್ಲೇ ಇದ್ದುಬಿಟ್ಟಿರುವೆ? ರಾಜ ಮಂದಿರಕ್ಕೆ ಹೋಗಲಿಲ್ಲವೆ ?

೪೪. ಗೋಮತಿಯ ನೀರನ್ನುತರಲು ನಿನ್ನ ಮಾಧವನು ಅಲ್ಲಿಗೆ ಹೊರಟಿರುವುದಲ್ಲದೆ, ರುಕ್ಮಿಣಿಯನ್ನೂ, ಸತ್ಯಭಾಮಾ ಜಾಂಬವತಿಯರನ್ನೂ ಜೊತೆಯಲ್ಲೇ ಕರೆದುಕೊಂಡು ಹೋಗಬೇಕೆಂದಿರುವನು.

೪೫. ಎನ್ನಲು ಆ ಮಿತ್ರವಿಂದೆಯು ನಾರದಮುನಿಯನ್ನು ಕುರಿತು ಕೃಷ್ಣನಿಗೆ ಪ್ರತಿಯೊಬ್ಬ ಪತ್ನಿಯೂ ಪ್ರಿಯಳಾದವಳೇ. ಯಾವಳನ್ನಾದರೂ ಬಿಟ್ಟು ಅವನು ತೆರಳಿದ್ದೇ ಆದರೆ ಅವಳು ಖಂಡಿತ ಬದುಕಲಾರಳು. ಆ ಮಾತು ಇರಲಿ, ಈಗ ಆ ಕೃಷ್ಣನು ಒಳಗೆ ಮೊಮ್ಮಗನನ್ನು ಮುದ್ದಾಡುತ್ತಿರುವನು. ಎಂದಳು.

೪೬. ಅದನ್ನು ಕೇಳಿ ಆ ನಾರದಮಹರ್ಷಿಯು ಅಲ್ಲಿಂದೆದ್ದು ಅದೇರೀತಿ ಆ ಕೃಷ್ಣನ ಪ್ರಿಯೆಯರಿರುವ ಪ್ರತಿಯೊಂದು ಮನೆಗೂ ಹೋಗಿ ಅಲ್ಲಿ ಅವರನ್ನು ಕೀಟಲೆ ಮಾಡಲು ಅಲ್ಲೆಲ್ಲಾ ಕೃಷ್ಣನಿರುವುದು ವ್ಯಕ್ತವಾಯಿತು.

ಪುನರ್ವಿಚಾರ್ಯರ್ದೇವರ್ಷಿರ್ಗೋಪೀನಾಂ ಮಂದಿರಾಣಿ ಚ ।
ಪ್ರಯಯೌ ಕಥಿತುಂ ವಾರ್ತಾಂ ರಾಧಿಕಾಯೈ ಚ ಮಾನದ ॥ ೪೭ ॥

ತತ್ರ ದೀವ್ಯಂತಮಕ್ಷೈಶ್ಚ ರಾಧಯಾ ನಂದನಂದನಂ ।
ಗೋಪೀಭಿಃ ಸಹಿತಂ ವೀಕ್ಷ್ಯ ಋಷಿರ್ಗಂತುಂ ಮನೋ ದಧೇ ॥ ೪೮ ॥

ತದೈವ ಕೃಷ್ಣ ಉತ್ಥಾಯ ಗೃಹೀತ್ವಾ ಪಾಣಿನಾ ಮುನಿಂ ।
ತತ್ರೈವ ಸ್ಥಾಪಯಾಮಾಸ ಪೂಜಯಿತ್ವಾ ಯಥಾವಿಧಿ ॥ ೪೯ ॥

॥ ಶ್ರೀಕೃಷ್ಣ ಉವಾಚ ॥

ಕಿಂ ಕರಿಷ್ಯಸಿ ವಿಪ್ರೇಂದ್ರ ವೃಥಾ ಭ್ರಮಸಿ ಮೋಹತಃ ।
ಗೇಹೇ ಗೇಹೇ ಸ್ವಪತ್ನೀನಾಂ ಮಯಾ ತ್ವಂ ತು ವಿಲೋಕಿತಃ ॥ ೫೦ ॥

---

೪೭. ಓ ರಾಜೇಂದ್ರ ! ಆ ದೇವರ್ಷಿಯು ಇಷ್ಟಕ್ಕೇ ಬಿಡದೆ ಪ್ರತಿಯೊಬ್ಬ ಗೋಪಿಯರ ಮನೆಗೂ ಹೋಗಿ ವಿಚಾರಿಸಿದನು. ಅಲ್ಲಿಯೂ ಕೃಷ್ಣನ್ನು ಕಂಡು, ಕೊನೆಗೆ ರಾಧೆಯನ್ನು ಕೀಟಲೆಮಾಡಲು ಅಲ್ಲಿಗೆ ಹೋದನು.

೪೮. ಅಲ್ಲಿ ಸುನಂದಕುಮಾರನು ರಾಧಿಕೆಯೊಡನೆ ಪಗಡೆಯಾಟವನ್ನು ಆಡುತ್ತಿದ್ದನು. ಅವರಿಬ್ಬರನ್ನು ಸುತ್ತುವರಿದು ಅನೇಕ ಗೋಪಿಯರು ನಿಂತಿದ್ದರು. ಅದನ್ನು ಕಂಡು ಕೂಡಲೇ ಆ ಮುನಿಯು ಹೊರಗೆ ಹೊರಡಲು ಅನುವಾದನು.

೪೯. ಆಗ ಕೃಷ್ಣನು ತಟ್ಟನೆ ಎದ್ದುಬಂದು ಆ ಮಹರ್ಷಿಯನ್ನು ಕೈಹಿಡಿದು ಕರೆದುಕೊಂಡು ಬಂದು ಉತ್ತಮ ಪೀಠದಲ್ಲಿ ಕುಳ್ಳಿರಿಸಿ ವಿಧಿವತ್ತಾಗಿ ಪೂಜೆಮಾಡಿದನು. ಅನಂತರ ಆತನನ್ನು ಕುರಿತು—

೫೦. ಓ ಬ್ರಾಹ್ಮಣೋತ್ತಮಾ ! ಈಗೇನು ಮಾಡುತ್ತೀಯೆ ? ಸುಮ್ಮನೆ ವ್ಯರ್ಥವಾಗಿ ಭ್ರಾಂತಿಯಿಂದ ಅಲೆಯುತ್ತಿರುವೆಯಲ್ಲ? ನಾನು ನಿನ್ನನ್ನು ಪ್ರತಿಯೊಬ್ಬಳಮನೆಯಲ್ಲೂ ನೋಡಿದೆನು.

ಮಯಾ ಧೃತಾನಿ ರೂಪಾಣಿ ತ್ವದ್ಭಯಾದ್ದ್ವಿಜಸತ್ತಮ ।
ನಾಹಂ ದಾಸ್ಯೇ ದಮಂ ತುಭ್ಯಂ ವಿಪ್ರತ್ವಾತ್ಪ್ರಾರ್ಥಯಾಮ್ಯಹಂ ॥ ೫೧ ॥

ಸರ್ವೇಷಾಂ ಚೈವ ದೇವೋಽಹಂ ಮಮ ದೇವಾಶ್ಚ ಬ್ರಾಹ್ಮಣಾಃ ।
ಯೇ ದ್ರುಹ್ಯಂತಿ ದ್ವಿಜಾನ್ಮೂಢಾಃ ಸಂತಿ ತೇ ಮಮ ಶತ್ರವಃ ॥ ೫೨ ॥

ಯೇ ಪೂಜಯಂತಿ ವಿಪ್ರಾಂಶ್ಚ ಮಮ ಭಾವೇನ ಭೂಜನಾಃ ।
ತೇ ಭುಂಜಂತಿ ಸುಖಂ ಚಾತ್ರ ಹ್ಯಂತೇ ಯಾಸ್ಯಂತಿ ಮತ್ಪದಂ ॥ ೫೩ ॥

ಮಾಯಯಾ ಮಮ ಪುರ್ಯಾಂ ತ್ವಂ ಮೋಹಿತಶ್ಚಾಪಿ ಮಾ ಖಿದಃ ।
ಸರ್ವೇ ಮುಹ್ಯಂತಿ ದೇವರ್ಷೇ ಬ್ರಹ್ಮರುದ್ರಾದಯಃ ಸುರಾಃ ॥ ೫೪ ॥

---

೫೧. ಎಲೈ ಋಷಿಶ್ರೇಷ್ಠನೇ? ನಿನ್ನ ಹೆದರಿಕೆಯಿಂದಲೇ ನಾನು ಅನೇಕ ರೂಪಗಳನ್ನು ಧರಿಸಬೇಕಾಯಿತು. ನಾನು ನಿನಗೇನು ಶಿಕ್ಷೆಯನ್ನೂ ಕೊಡಲಾರೆನು. ಆದರೆ ನೀನು ಬ್ರಾಹ್ಮಣನಾದುದರಿಂದ ನಾನೇ ನಿನ್ನನ್ನು ಪ್ರಾರ್ಥಿಸುವೆನು.

೫೨. ನಾನು ಎಲ್ಲರಿಗೂ ದೇವರು! ನಿಜ. ಆದರೆ ನನಗೆ ಬ್ರಾಹ್ಮಣರೇ ದೇವರು. ಯಾರು ಬುದ್ಧಿಯಿಲ್ಲದೆ ಬ್ರಾಹ್ಮಣರ ವಿಷಯದಲ್ಲಿ ದ್ರೋಹವೆಣಿಸುವರೋ ಅವರು ಎಂದೆಂದಿಗೂ ನನಗೆ ಶತ್ರುಗಳಾಗುವರು.

೫೩. ಯಾವ ಮಾನವರು ಆ ಬ್ರಾಹ್ಮಣರನ್ನು ನಾನೇ ಎಂಬುದಾಗಿ ಭಾವಿಸಿ (ಪರಮಾತ್ಮನೆಂದು) ಪೂಜಿಸುವರೋ ಆ ಪುಣ್ಯಾತ್ಮರು ಇಹಲೋಕದಲ್ಲಿ ಸಕಲ ಸುಖಗಳನ್ನೂ ಅನುಭವಿಸಿ ಕೊನೆಗೆ ನನ್ನ ನಿವಾಸವನ್ನು ಸೇರುವರು.

೫೪. ನನ್ನ ಊರಾದ ಈ ದ್ವಾರಕೆಯಲ್ಲೇ ನೀನು ನನ್ನ ಮಾಯೆಗೆ ಒಳಗಾಗಿಬಿಟ್ಟೆಯೆಂದು ಖಿನ್ನನಾಗಬೇಡ, ಎಲೈ ದೇವರ್ಷಿಯೇ! ಬ್ರಹ್ಮರುದ್ರಾದಿಗಳಾಗಿ ಸಕಲರೂ ನನ್ನ ಮಾಯೆಗೊಳಪಟ್ಟು ಭ್ರಾಂತಿಗೀಡಾಗಿರುವರು, ಎಂದನು.

ಇತಿ ತದ್ವಾಕ್ಯಮಾಕರ್ಣ್ಯ ಸಂಸ್ತುತಃ ಸ ಮಹಾಮುನಿಃ |
ಆಯಯೌ ಮಂಡಪಂ ತೂಷ್ಣೀಂ ಭೂತ್ವಾ ಋತ್ವಿಗ್ಜನೈರ್ವೃತೇ || ೫೫ ||

ಅಥ ತೇ ಗೋಮತೀತೀರಂ ಜಗ್ಮುಃ ಕೃಷ್ಣಾದಯೋ ನೃಪಾಃ |
ರುಕ್ಮಿಣ್ಯಾದ್ಯಾಸ್ತ್ರಿಯಶ್ಚೈವ ವಾದಿತ್ರೈರ್ವಿವಿಧೈರಪಿ || ೫೬ ||

ನಾರೀಣಾಂ ಚೈವ ವೃಂದೇನ ಗಾಯಂತೀನಾಂ ಹರೇರ್ಯಶಃ |
ವಲಯಾನಾಂ ನೂಪುರಾಣಾಂ ಶಬ್ದೋಽಭೂನ್ಮಧುರಧ್ವನಿಃ || ೫೭ ||

ಪೂಜಯಿತ್ವಾ ಜಲಸುರಾನ್ವ್ಯಾಸಃ ಸಾರ್ಧಂ ಮಯಾ ಮುನಿಃ |
ಕಲಶಂ ತೋಯಸಂಯುಕ್ತಮನುಸೂಯಾಕರೇ ದದೌ || ೫೮ ||

---

೫೫. ಈರೀತಿಯಾಗಿ ಕೃಷ್ಣನು ನುಡಿದ ಮಾತನ್ನು ಕೇಳಿ ಆ ನಾರದ ಮಹರ್ಷಿಯು ಸುಮ್ಮನಾಗಿ ಆತನಿಂದ ಸತ್ಕೃತನಾಗಿ ಋತ್ವಿಕ್ಕುಗಳು ಮೊದಲಾದ ಜನರಿಂದ ತುಂಬಿದ ಯಜ್ಞಶಾಲೆಗೆ ಹಿಂದಿರುಗಿದನು.

೫೬. ಓ ರಾಜೇಂದ್ರ! ಅನಂತರ ಶ್ರೀಕೃಷ್ಣ ಮೊದಲಾದ ರಾಜರುಗಳೂ, ರುಕ್ಮಿಣೀ ಮೊದಲಾದ ಸ್ತ್ರೀಯರೂ ಭೋರ್ಗರೆಯುತ್ತಿರುವ ನಾನಾವಿಧವಾದ ವಾದ್ಯಗಳೊಡನೆ ಗೋಮತೀನದಿಯ ತೀರಕ್ಕೆ ಆಗಮಿಸಿದರು.

೫೭. ಆಗ ಶ್ರೀಕೃಷ್ಣನ ಮಂಗಲಮಯವಾದ ಚರಿತವನ್ನು (ಕೀರ್ತಿಯನ್ನು) ಸಾಲುಸಾಲಾಗಿ ಗಾನಮಾಡುತ್ತಿರುವ ಸ್ತ್ರೀಯರ ಬಳೆಗಳು ಮತ್ತು ಕಾಲ್ಗಡಗಗಳ ಧ್ವನಿಯು ಮೇಳರಿಸಿ ಬಹು ಮಧುರವಾಗಿ ಕೇಳಬರತೊಡಗಿತು.

೫೮. ಆಗ ವ್ಯಾಸಮಹರ್ಷಿಯು ನನ್ನೊಡನೆ ಜಲಾಭಿಮಾನಿದೇವತೆಗಳನ್ನು ಪೂಜಿಸಿದನು. ಅನಂತರ ತೀರ್ಥೋದಕದಿಂದ ತುಂಬಿದ ಬಿಂದಿಗೆಯನ್ನು ಅತ್ರಿಮುನಿ ಪತ್ನಿಯಾದ ಅನಸೂಯೆಯ ಕೈಗೆ ಕೊಟ್ಟನು.

ತತಶ್ಚ ಜಗೃಹುಃ ಕುಂಭಾನ್ರೇವತ್ಯಾದ್ಯಾಶ್ಚ ಯೋಷಿತಃ ।
ನೋತ್ಥಿತಾಃ ಕಲಶಾಃ ಸರ್ವೇ ಕೋಮಲೈಶ್ಚ ಕರೈರಪಿ ॥ ೫೯ ॥

ಧಾರಯಂತಿ ಕಥಂ ಕುಂಭಂ ಪುಷ್ಪಭಾರೇಣ ಪೀಡಿತಾಃ ।
ತತಶ್ಚ ಜಹಸೂ ರಾಜ್ಞ್ಯೋ ನೃಪಾಣಾಂ ಚ ಪರಸ್ಪರಂ ॥ ೬೦ ॥

ಕಥಂ ಯಾನೋ ಯಜ್ಞವಾಟಮಿತ್ಯೂಚುಃ ಕಲಶೈರ್ವಿನಾ ।
ರುಕ್ಮಿಣ್ಯಾದ್ಯಾಃ ಸ್ತ್ರಿಯಃ ಸರ್ವಾಸ್ತಾ ಊಚುರ್ಮನಸಾ ಹರಿಂ ॥ ೬೧ ॥

ಹೇ ಶ್ರೀಕೃಷ್ಣ ಜಗನ್ನಾಥ ಭಕ್ತಕಷ್ಟವಿನಾಶನ ।
ಸಬಲಸ್ತ್ವಂ ಚಕ್ರಧಾರೀ ಹ್ಯಸ್ಮಾನ್ಪಾಲಯ ಸಂಕಟೇ ॥ ೬೨ ॥

---

೫೯. ಅನಂತರ ರೇವತೀ ಮೊದಲಾದ ಸುವಾಸಿನಿಯರು ಗೋಮತಿಯ ತೀರ್ಥೋದಕದಿಂದ ಪೂರ್ಣವಾದ ಬಿಂದಿಗೆಗಳನ್ನು ತೆಗೆದುಕೊಂಡು ಎತ್ತಲು ಹೋದರು. ಆದರೆ ಆ ಪೂರ್ಣಕಲಶಗಳೊಂದನ್ನೂ ಆ ಸ್ತ್ರೀಯರು ತಮ್ಮ ಕೋಮಲವಾದ ಕೈಗಳಿಂದ ಎತ್ತಲಾರದೆ ಹೋದರು.

೬೦. ಓ ರಾಜೇಂದ್ರ! ಹೂವನ್ನೂ ಒಂದು ಹೊರೆಯಾಗಿ ಭಾವಿಸುವ ಆ ಸುಕುಮಾರಿಯರು ಹೇಗೆ ತಾನೇ ಆ ಪೂರ್ಣಕಲಶಗಳನ್ನು ಹೊರಬಲ್ಲರು? ಆಗ ಆ ರಾಜಪತ್ನಿಯರು ತಮ್ಮ ತಮ್ಮಲ್ಲೇ ತಮ್ಮ ಅಸಹಾಯಕಸ್ಥಿತಿಗಾಗಿ ನಗೆ ತೊಡಗಿದರು. ಬಳಿಕ—

೬೧. ನಾವೀಗ ಕಲಶಗಳನ್ನು ಬಿಟ್ಟು ಬರಿಯ ಕೈಗಳಿಂದ ಹೇಗೆತಾನೇ ಯಾಗಶಾಲೆಗೆ ಹೋಗುವುದು? ಎಂದು ಪೇಚಾಡತೊಡಗಿದರು. ಆಗ ರುಕ್ಮಿಣೀ ಮೊದಲಾದ ಆ ಅಂತಃಪುರ ಸ್ತ್ರೀಯರು ತಮ್ಮ ಮನಸ್ಸಿನಲ್ಲಿಯೇ ಶ್ರೀಕೃಷ್ಣನನ್ನು ಕುರಿತು ಈರೀತಿ ಪ್ರಾರ್ಥಿಸಿದರು.

೬೨. ಓ ಶ್ರೀಕೃಷ್ಣಾ! ಭಕ್ತರ ಕಷ್ಟವನ್ನು ನಿವಾರಿಸುವ ಜಗತ್ಪ್ರಭುವು ನೀನಲ್ಲವೇ? ಹೇ ಚಕ್ರಧರ! ನೀನು ಎಷ್ಟಾದರೂ ಬಲಶಾಲಿ; ಕಷ್ಟದಲ್ಲಿ ಸಿಕ್ಕಿಕೊಳ್ಳುತ್ತಿರುವ ನಮ್ಮನ್ನು ಕಾಪಾಡು!

ಏವಂ ಬ್ರುವಂತ್ಯೋ ಜಗೃಹುಃ ಕಲಶಾನ್ಭಾರವರ್ಜಿತಾನ್ ।
ಸ್ವೇ ಸ್ವೇ ಶಿರಸಿ ಸಂಧಾಯ ಸಂಯುಕ್ತೇ ಮಣಿಮೌಕ್ತಿಕೈಃ ॥ ೬೩ ॥

ಯಜ್ಞವಾಟಂ ಸಮಾಜಗ್ಮುರ್ನಾರ್ಯಃ ಶೀಘ್ರಂ ಸಭರ್ತೃಕಾಃ ।
ಯತ್ರ ಭೇರ್ಯಶ್ಚ ಶಂಖಾದ್ಯಾ ವಾದ್ಯಂತೇ ಪಣವಾದಯಃ ॥ ೬೪ ॥

ಆನೀಯ ಗೋಮತೀತೋಯಂ ಪ್ರಾಪಿತಾಸ್ತತ್ರ ತೇ ನೃಪ ।
ಶ್ಯಾಮಕರ್ಣೇನ ಸಹಿತಾ ಯತ್ರ ವೈ ಯಾದವೇಶ್ವರಃ ॥ ೬೫ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧ
ಚರಿತ್ರೇ ಸುಮೇರೌ ಗೋಮತೀಜಲಾನಯನಂ ನಾಮ
ಪಂಚಪಂಚಾಶತ್ತಮೋಽಧ್ಯಾಯಃ

---

೬೩. ಎಂಬುದಾಗಿ ಅವರು ತಮ್ಮ ಮನಸ್ಸಿನಲ್ಲಿ ಪ್ರಾರ್ಥಿಸುವುದರೊಳಗಾಗಿಯೇ ಆ ಬಿಂದಿಗೆಗಳು ಸ್ವಲ್ಪವೂ ಭಾರವಾಗದೆ ಅವರ ಕೈಗೆ ಬಂದುವು. ಅನಂತರ ವಜ್ರ, ವೈಡೂರ್ಯಾದಿ ರತ್ನಗಳಿಂದಲೂ, ಮುತ್ತುಗಳಿಂದಲೂ ಅಲಂಕೃತವಾದ ತಮ್ಮ ತಮ್ಮ ತಲೆಗಳಮೇಲೆ ಆ ಬಿಂದಿಗೆಗಳನ್ನಿಟ್ಟುಕೊಂಡು—

೬೪. ತಮ್ಮ ತಮ್ಮ ಗಂಡಂದಿರೊಡನೆ ಆ ಸ್ತ್ರೀಯರು ಯಾಗಶಾಲೆಗೆ ಬಂದು ಸೇರಿದರು. ಆಗ ಯಾಗಶಾಲೆಯಲ್ಲಿ ಭೇರಿಗಳನ್ನೂ, ಶಂಖ ಎಂಬ ವಾದ್ಯವಿಶೇಷಗಳನ್ನೂ, ಪಣವವೆಂಬ ಮದ್ದಲೆಯ ಜಾತಿಯ ವಾದ್ಯಗಳನ್ನೂ ಬಾರಿಸುತ್ತಿದ್ದರು.

೬೫. ಈರೀತಿಯಾಗಿ ಕಪ್ಪಾದ ಕಿವಿಯುಳ್ಳ ಆ ಯಜ್ಞಾಶ್ವದೊಡನೆ ಯಾದವೇಶ್ವರನಾದ ಉಗ್ರಸೇನನು ಕುಳಿತಿದ್ದ ಆ ಯಾಗಶಾಲೆಗೆ ಆ ರಾಜರುಗಳೂ, ರಾಜಸ್ತ್ರೀಯರೂ ಗೋಮತೀನದೀಜಲವನ್ನು ತೆಗೆದುಕೊಂಡು ಬಂದರು, ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ಗೋಮತೀಜಲಾನಯನವೆಂಬ ಐವತ್ತೈದನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಷಟ್ಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ಉಗ್ರಸೇನಸ್ಯ ಯಜ್ಞೇ ವೈ ಹಯಮೇಧೇ ಮಹಾತ್ಮನಃ ।
ತಸ್ಯಾಸನ್ಪರಿಚರ್ಯಾಯಾಂ ಬಾಂಧವಾಃ ಪ್ರೇಮಬಂಧನಾಃ ॥ ೧ ॥

ತತಶ್ಚಕಾರ ಯದುರಾಟ್ ನಾನಾಕರ್ಮಸು ಬಾಂಧವಾನ್ ।
ಭೀಮಂ ಮಹಾನಸಾಧ್ಯಕ್ಷಂ ಧರ್ಮಂ ಧರ್ಮಸ್ಯ ಪಾಲನೇ ॥ ೨ ॥

ಐವತ್ತಾರನೆಯ ಅಧ್ಯಾಯವು

೧. ಓ ರಾಜೇಂದ್ರ! ಆಲಿಸು, ಮಹಾತ್ಮನಾದ ಆ ಉಗ್ರಸೇನನ ಅಶ್ವಮೇಧಯಾಗದಲ್ಲಿ ನಿಯಮಿತವಾದ ಆಯಾಯ ಕೆಲಸಗಳನ್ನು ನಿರ್ವಹಿಸಲು ಬಾಂಧವರಾದವರೇ ತಾವಾಗಿ ಪ್ರೀತಿಯಿಂದೊಪ್ಪಿ ನಿಂತರು.

೨. ಅನಂತರ ಆ ಯಾದವೇಶ್ವರನು ತನ್ನ ಬಂಧುಗಳನ್ನು ಬಗೆಬಗೆಯಾದ ಕೆಲಸಗಳಲ್ಲಿ ನಿಯಮಿಸಿದನು. ಭೀಮನನ್ನು ಅಡಿಗೆಯಮನೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವಂತೆ ನೇಮಿಸಿದನು. ಧರ್ಮರಾಜನನ್ನು ಧರ್ಮಕಾರ್ಯಗಳನ್ನು ನೋಡಿಕೊಳ್ಳುವಂತೆ ಆಜ್ಞೆಮಾಡಿದನು.

ಶುಶ್ರೂಷಣೇ ಸತಾಂ ಜಿಷ್ಣುಂ ನಕುಲಂ ದ್ರವ್ಯಸಾಧನೇ ।
ಪೂಜನೇ ಸಹದೇವಂ ಚ ಧನಾಧ್ಯಕ್ಷಂ ಸುಯೋಧನಂ ॥ ೩ ॥

ದಾನೇ ಚ ದಾನಿನಂ ಕರ್ಣಂ ದ್ರೌಪದೀಂ ಪರಿವೇಷಣೇ ।
ರಕ್ಷಾಯಾಂ ಕೃಷ್ಣಪುತ್ರಾನ್ವೈ ಹ್ಯಷ್ಟಾದಶ ಮಹಾರಥಾನ್ ॥ ೪ ॥

ಯುಯುಧಾನಂ ವಿಕರ್ಣಂ ಚ ಹೃದೀಕಂ ವಿದುರಂ ತಥಾ ।
ಅಕ್ರೂರಮುದ್ಧವಂ ಚೈವ ನಾನಾಕರ್ಮಸು ಭೂಪತಿಃ ॥ ೫ ॥

ಕೃತ್ವಾ ಪ್ರತ್ಯಾಹ ಶ್ರೀಕೃಷ್ಣಂ ದೇವ ತ್ವಂ ಕಿಂ ಕರಿಷ್ಯಸಿ ।
ಶ್ರುತ್ವಾ ಕೃಷ್ಣ ಉವಾಚಾಥ ಬ್ರಾಹ್ಮಣಾನಾಂ ಕರೋಮ್ಯಹಂ ॥ ೬ ॥

ಪಾದಪ್ರಕ್ಷಾಲನಂ ರಾಜನ್ನಿಂದ್ರಪ್ರಸ್ಥೇ ಕೃತಂ ಮಯಾ ।
ಇತಿ ಶ್ರುತ್ವಾ ಚ ಬ್ರಹ್ಮಾದ್ಯಾ ಜಹಸುರ್ಭೂಜನಾಸ್ತಥಾ ॥ ೭ ॥

---

೩. ಅದರಂತೆ ಸತ್ಪುರುಷರನ್ನು ಸತ್ಕರಿಸಲು ಅರ್ಜುನನನ್ನೂ, ಹಣ ಕಾಸುಗಳನ್ನು ಒದಗಿಸಲು ನಕುಲನನ್ನೂ, ಪೂಜಾಕಾರ್ಯಗಳಲ್ಲಿ ಸಹದೇವ ನನ್ನೂ ಭಂಡಾರದ ಮೇಲ್ವಿಚಾರಣೆಗಳಿಗೆ ದುರ್ಯೋಧನನನ್ನೂ ನೇಮಿಸಿದನು.

೪. ಮತ್ತು ದಾನಶೂರನಾದ ಕರ್ಣನನ್ನು ದಾನಗಳನ್ನು ಕೊಡುವುದ ರಲ್ಲಿಯೂ, ದ್ರೌಪದಿಯನ್ನು ಬಡಿಸುವುದರಲ್ಲಿಯೂ, ಮಹಾರಥರಾದ ಹದಿನೆಂಟು ಮಂದಿ ಕೃಷ್ಣಪುತ್ರರನ್ನು ರಕ್ಷಣಾಕಾರ್ಯದಲ್ಲಿಯೂ ನೇಮಕ ಮಾಡಿದನು.

೫. ಅದರಂತೆಯೇ ಆ ಉಗ್ರಸೇನನು ಯುಯುಧಾನ, ವಿಕರ್ಣ, ಹೃದೀಕ, ವಿದುರ, ಅಕ್ರೂರ, ಉದ್ಧವರನ್ನು ಇತರ ನಾನಾಕಾರ್ಯಗಳಲ್ಲಿ ನಿಯ ಮಿಸಿದನಂತರ—

೬-೭. ಶ್ರೀಕೃಷ್ಣನನ್ನು ಕುರಿತು, ಓ ದೇವ! ನೀನೇನು ಮಾಡುವೆ? ಎಂದು ಪ್ರಶ್ನಿಸಿದನು. ಆಗ ಕೃಷ್ಣನು, ರಾಜೇಂದ್ರ! ಇಂದ್ರಪ್ರಸ್ಥದಲ್ಲಿ ಮಾಡಿ ದಂತೆ ಇಲ್ಲಿಯೂ ಬ್ರಾಹ್ಮಣರ ಪಾದಪ್ರಕ್ಷಾಲನವನ್ನು ಮಾಡುವೆನು, ಎಂದನು. ಇದನ್ನು ಕೇಳಿ ಬ್ರಹ್ಮಾದಿಗಳೂ, ಭೂಲೋಕ ನಿವಾಸಿಗಳೂ ಆನಂದದಿಂದ ನಗು ಮುಖವನ್ನು ತಾಳಿದರು.

॥ ಗರ್ಗ ಉವಾಚ ॥

ಇತ್ಯುಕ್ತ್ವಾ ಭಗವಾನ್ಸಾಕ್ಷಾದೃಷೀಣಾಂ ಚ ತಪಸ್ವಿನಾಂ ।
ಪಾದಪ್ರಕ್ಷಾಲನಂ ಕೃತ್ವಾ ಸ್ಥಾಪಯಾಮಾಸ ತಾನ್ನೃಪ ॥ ೮ ॥

ಆಸನೇಷೂಪವಿಷ್ಟಾಸ್ತೇ ವಾಸಾಂಸಿ ಪರಿಧಾಯ ಚ ।
ತಿಲಕೈರ್ದ್ವಾದಶೈರ್ಯುಕ್ತಾ ದಿವ್ಯಾಭರಣಭೂಷಿತಾಃ ॥ ೯ ॥

ನಾನಾಮತಾನಾಂ ಮಾಲಾಭಿರ್ಯುಕ್ತಾಃ ಕರ್ಪೂರವೀಟಿಕಾನ್ ।
ಭುಕ್ತ್ವಾ ತೇ ರೇಜಿರೇ ಯಜ್ಞೇ ದೇವಾ ಇವ ಮಹೀಸುರಾಃ ॥ ೧೦ ॥

ತತೋಽರ್ಥಿನೋ ಭಿಕ್ಷವಶ್ಚ ವಿರಕ್ತಾಶ್ಚ ಬುಭುಕ್ಷಿತಾಃ ।
ಕುರ್ವಂತಿ ಯಾಚನಾಂ ಸರ್ವೇ ದೂರದೇಶಾತ್ಸಮಾಗತಾಃ ॥ ೧೧ ॥

ದದಸ್ವಾನ್ನಂ ದದಸ್ವಾನ್ನಂ ದದಸ್ವಾನ್ನಂ ನರೇಶ್ವರ ।
ಉಪಾನಹಶ್ಚ ಪಾತ್ರಾಣಿ ವಸ್ತ್ರಾಣಿ ಕಂಬಲಾನಿ ಚ ॥ ೧೨ ॥

---

೮. ಓ ರಾಜೇಂದ್ರ! ಈ ರೀತಿಯಾಗಿ ನುಡಿದು ಸಾಕ್ಷಾತ್ ಭಗವಂತನಾದ ಆ ಶ್ರೀಕೃಷ್ಣನು ಋಷಿಗಳಿಗೂ, ತಪಸ್ವಿಗಳಿಗೂ ತಾನೇ ಕಾಲುಗಳನ್ನು ತೊಳೆದು ಅವರುಗಳನ್ನು ಪೀಠಗಳಲ್ಲಿ ಕುಳ್ಳಿರಿಸಿದನು.

೯-೧೦. ಆಗ ಆ ಪೀಠಗಳಲ್ಲಿ ಕುಳಿತ ವಿಪ್ರರು ದಿವ್ಯವಾದ ವಸ್ತ್ರಗಳನ್ನು ಉಟ್ಟು, ಹೊದೆದು ಶರೀರದ ಮುಖಾದಿಭಾಗಗಳಲ್ಲಿ ಹನ್ನೆರಡು ತಿಲಕಗಳನ್ನು ತಳೆದು ದಿವ್ಯವಾದ ಆಭರಣಗಳನ್ನು ತೊಟ್ಟು ಬಗೆಬಗೆಯಾದ ಹೂಗಳ ಮಾಲಿಕೆಗಳನ್ನು ಧರಿಸಿ ಕರ್ಪೂರ ಸಹಿತವಾದ ವೀಳೆಯವನ್ನು ಸವಿಯುತ್ತಾ ದೇವತೆಗಳಂತೆ ಮೆರೆಯುತ್ತಿದ್ದರು.

೧೧. ಆಗ ಆ ಯಾಗಶಾಲೆಯಲ್ಲಿ ದೂರದ ನಾನಾದೇಶಗಳಿಂದ ಬಂದಿರುವ ಯಾಚಕರೂ, ಭಿಕ್ಷುಕರೂ, ಬೈರಾಗಿಗಳೂ, ಹಸಿದವರೂ,

೧೨. ಎಲೈ ನರಪತಿಯೇ! ನಮಗೆ ಅನ್ನವನ್ನು ನೀಡು, ಅನ್ನವನ್ನು ಕೊಡು, ಊಟವನ್ನು ಕೊಡು, ಪಾದುಕೆಗಳನ್ನು ಕೊಡು, ಪಾತ್ರೆಗಳನ್ನು ಕೊಡು, ಬಟ್ಟೆಗಳನ್ನು ಕೊಡು, ಎಂದು ತಮತಮಗೆ ಬೇಕಾದುದನ್ನು ಕೇಳತೊಡಗಿದರು.

ಉಗ್ರಸೇನಸ್ಯ ಯಜ್ಞೇ ವೈ ಮುನಿವೃಂದೈರ್ನೃಪೈರ್ವೃತೇ |
ತೇಷಾಂ ತಾಂ ಕರುಣಾಂ ವಾಚಂ ನಿಶಮ್ಯ ಯದುಸತ್ತಮಃ ॥ ೧೩ ॥

ಸುವರ್ಣಂ ರಜತಂ ಚೈವ ವಸ್ತ್ರಾಣಿ ಭಾಜನಾನಿ ಚ |
ಗಜಾಶ್ವರಥಗೋಛತ್ರಶಿಬಿಕಾದೀನಿ ಹರ್ಷಿತಃ ॥ ೧೪ ॥

ಯೇಷಾಂ ಯೇಷಾಂ ಪ್ರಿಯಂ ಯದ್ವೈ ತೇಭ್ಯಸ್ತೇಭ್ಯೋ ದದೌ ನೃಪಃ |
ಉಗ್ರಸೇನಃ ಕೃತಸ್ನಾನಃ ಕ್ರತುಕರ್ಮಣಿ ದೀಕ್ಷಿತಃ ॥ ೧೫ ॥

ಅಸಿಪತ್ರವ್ರತಧರೋ ರುಚಿಮತ್ಯಾ ಬಭೌ ತತಃ |
ವಿಪ್ರವಿಂಶತಿಸಾಹಸ್ರಾ ವೇದಶಾಸ್ತ್ರವಿಶಾರದಾಃ ॥ ೧೬ ॥

೧೩-೧೪. ರಾಜೇಂದ್ರ! ಮಹರ್ಷಿಗಳ ಸಮುದಾಯದಿಂದಲೂ, ರಾಜರುಗಳಿಂದಲೂ ತುಂಬಿದ ಆ ಯಾಗಶಾಲೆಯಲ್ಲಿ ದೀನರಾದ ಆ ಜನರು ಕನಿಕರ ಹುಟ್ಟುವಂತೆ ಮಾತುಗಳನ್ನು ಆಡಿದುದನ್ನು ಕೇಳಿ, ಯದೂತ್ತಮನಾದ ಉಗ್ರಸೇನನು ಚಿನ್ನ, ಬೆಳ್ಳಿಯ ದ್ರವ್ಯಗಳನ್ನೂ, ಬಟ್ಟೆಬರೆಗಳನ್ನೂ, ಪಾತ್ರೆಗಳನ್ನೂ, ಆನೆ, ಕುದುರೆ, ತೇರು, ಗೋವು, ಛತ್ರ, ಮೇನೆ, ಪಲ್ಲಕ್ಕಿ ಮುಂತಾದುವುಗಳನ್ನೂ, ಸಂತೋಷದಿಂದ ಮುಕ್ತಹಸ್ತನಾಗಿ (ಕೈತೊರೆದು ಧಾರಾಳವಾಗಿ) ದಾನ ಮಾಡಿದನು.

೧೫-೧೬. ಯಾರು ಯಾರಿಗೆ ಏನೇನು ಇಷ್ಟವೋ ಅದೆಲ್ಲವನ್ನೂ ದಾನ ಮಾಡಿದ ಬಳಿಕ ಆ ಉಗ್ರಸೇನನು ಮಂಗಳಸ್ನಾನವನ್ನು ಮಾಡಿ ಅಸಿಧಾರಾವ್ರತದಂತೆ ಕಠಿಣವಾದ ಬ್ರಹ್ಮಚರ್ಯವ್ರತವನ್ನು ಅವಲಂಬಿಸಿರುತ್ತಾ ರುಚಿಮತೀಯೆಂಬ ತನ್ನ ಪತ್ನಿಯೊಡನೆ ಯಾಗ ದೀಕ್ಷೆಯನ್ನು ವಹಿಸಿ ಕಂಗೊಳಿಸಿದನು. ಓ ರಾಜೇಂದ್ರ! ಯಾಗಶ್ರೇಷ್ಠವೆನಿಸಿದ ಆ ಅಶ್ವಮೇಧವನ್ನು ವೇದಶಾಸ್ತ್ರಗಳಲ್ಲಿ ವಿಶೇಷವಾದ ಪಾಂಡಿತ್ಯವುಳ್ಳ ವ್ಯಾಸ, ಗರ್ಗ ಮೊದಲಾದ ಇಪ್ಪತ್ತು ಸಾವಿರ ಮಂದಿ ಬ್ರಾಹ್ಮಣರು ಮಾಡಿಸತೊಡಗಿದರು.

ವ್ಯಾಸಗರ್ಗಾದಯಶ್ಚೈವ ಕಾರಯಂತಿ ಕ್ರತೂತ್ತಮಂ ।
ಹಸ್ತಿಶುಂಡಾಸಮಾ ಧಾರಾ ಹ್ಯಗ್ನಿಕುಂಡೇ ಪಪಾತ ಹ ॥ ೧೭ ॥

ಘೃತಸ್ಯ ಚ ನೃಪಶ್ರೇಷ್ಠ ಮುನಿಭಿರ್ಬ್ರಹ್ಮವಾದಿಭಿಃ ।
ತದ್ಯಜ್ಞೇ ಕೃಷ್ಣಕೃಪಯಾ ಹ್ಯನಲೋಽಜೀರ್ಣತಾಂ ಯಯೌ ॥ ೧೮ ॥

ತತಃ ಪ್ರೋವಾಚ ವಹ್ನಿಸ್ತು ಸರ್ವೇಷಾಂ ಶೃಣ್ವತಾಂ ನೃಪಂ ।
ಪ್ರಸನ್ನೋಽಹಂ ಪ್ರಸನ್ನೋಽಹಂ ಪಶುಂ ಮಮ ಪ್ರಯಚ್ಛ ವೈ ॥ ೧೯ ॥

ನಿಶಮ್ಯ ಚಾಗ್ನೇರ್ವಚಸಂ ಸಭಾಯಾಂ
ಶ್ರೀಯಾದವೇಂದ್ರೋ ಮುನಿಭಿಃ ಸಮಂ ಚ ।
ಬದ್ಧಂ ತುರಂಗಂ ತಪನೀಯ ಯೂಪೇ
ಹಿರಣ್ಯದಾಮ್ನಾ ಚ ತಮಾಹ ಭೂಪಃ ॥ ೨೦ ॥

೧೭-೧೮. ಓ ನೃಪಶ್ರೇಷ್ಠ, ಆ ಯಾಗದಲ್ಲಿ ಆನೆಯ ಸೊಂಡಲಿನಷ್ಟು ದಪ್ಪನಾಗಿರುವ ಆಜ್ಯಧಾರೆಯನ್ನು ಬ್ರಹ್ಮವಾದಿ (ವೇದಪಾರಾಯಣ ನಿರತರು) ಗಳಾದ ಮಹರ್ಷಿಗಳು ಯಜ್ಞೇಶ್ವರನಿಗೆ ಹೋಮಮಾಡಿದರು. ಆದರಿಂದ ಆ ಯಾಗದಲ್ಲಿ ಯಜ್ಞೇಶ್ವರನಿಗೆ ಅಜೀರ್ಣವುಂಟಾಯಿತು.

೧೯. ಅನಂತರ ಆ ಯಜ್ಞಪುರುಷನು ಎಲ್ಲರೂ ಕೇಳುವ ಹಾಗೆ ಆ ಉಗ್ರಸೇನನನ್ನು ಕುರಿತು, ಓ ರಾಜೇಂದ್ರ! ನಾನು ಪ್ರಸನ್ನನಾಗಿರುವೆನು. ಸುಪ್ರೀತನಾಗಿರುವೆನು. ಪಶುವನ್ನು ನನಗೆ ನಿವೇದಿಸು, ಎಂದು ಕೇಳಿದನು.

೨೦ ಈರೀತಿ ಯಜ್ಞೇಶ್ವರನಾಡಿದ ಮಾತನ್ನು ಕೇಳಿದ ಕೂಡಲೇ ಆ ಯಾದವೇಂದ್ರನಾದ ಉಗ್ರಸೇನನು ಮಹರ್ಷಿಗಳೊಡನೆ ಚಿನ್ನದಂತೆ ಹೊಳೆಯುತ್ತಿಪ್ಪ ಯೂಪಸ್ತಂಭದಲ್ಲಿ ಚಿನ್ನದ ಸರಪಳಿಗಳಿಂದ ಕಟ್ಟಲ್ಪಟ್ಟಿದ್ದ ಕುದುರೆಯ ಬಳಿಗೆ ಬಂದು ಅದನ್ನುದ್ದೇಶಿಸಿ—

॥ ಉಗ್ರಸೇನ ಉವಾಚ ॥

ಅಗ್ನೇರ್ವಾಕ್ಯಂ ಶೃಣು ಹಯ ಶುದ್ಧಂ ತ್ವಾಂ ಚ ಪಶುಂ ಕ್ರತೋಃ ।
ಭಕ್ಷಯಿಷ್ಯತಿ ವಹ್ನಿಸ್ತು ಘೃತೈಸ್ತೃಪ್ತೋಽಪಿ ಚಾಧ್ವರೇ ॥ ೨೧ ॥

ನೃಪಸ್ಯ ವಚನಂ ಶ್ರುತ್ವಾ ಶ್ಯಾಮಕರ್ಣಸ್ತುರಂಗಮಃ ।
ಕೃಷ್ಣಂ ವಿಲೋಕಯನ್ಪ್ರೀತೋ ಕಂಪಯಾಮಾಸ ಸ್ವಾನನಂ ॥ ೨೨ ॥

ತತೋ ಹಯಮತಂ ಜ್ಞಾತ್ವಾ ವೇದವ್ಯಾಸಃ ಸಮಂ ಮಯಾ ।
ಮಂಡಪೇ ಮುನಿಭಿರ್ಯುಕ್ತೇ ಶ್ರೀಕೃಷ್ಣಾದ್ಯೈರ್ನೃಪೈರ್ವೃತೇ ॥ ೨೩ ॥

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈರ್ಯಜ್ಞದಿದೃಕ್ಷುಭಿಃ ।
ಸ್ತ್ರೀಭಿರ್ಯುತೇ ಪ್ರಲಂಬಘ್ನಂ ಪ್ರಾಹ ದ್ವೈಪಾಯನೋ ಮುನಿಃ ॥ ೨೪ ॥

---

೨೧. ಎಲೈ ಹಯವೇ! ಅಗ್ನಿಯು ನುಡಿದ ಮಾತನ್ನು ಕೇಳು. ಪರಿಶುದ್ಧವಾದ ಯಜ್ಞಪಶುವಾಗಿರುವ ನಿನ್ನನ್ನು ಆ ಯಜ್ಞೇಶ್ವರನು ಆಜ್ಯಧಾರೆಗಳಿಂದ ಸಂತೃಪ್ತನಾಗಿದ್ದರೂ ಭಕ್ಷಿಸಲು ಸಿದ್ಧನಾಗಿರುವನು, ಎಂದು ನುಡಿದನು.

೨೨. ಅದನ್ನು ಕೇಳಿದೊಡನೆಯೇ ಕಪ್ಪಾದ ಕಿವಿಗಳಿಂದ ಕಂಗೊಳಿಸುತ್ತಿರುವ ಆ ಯಜ್ಞಾಶ್ವವು ಕೃಷ್ಣನನ್ನು ನೋಡುತ್ತಾ ಸಂತೋಷದಿಂದ (ಒಪ್ಪಿಗೆಯನ್ನು ಸೂಚಿಸುವಂತೆ) ತನ್ನ ತಲೆಯನ್ನಲ್ಲಾಡಿಸಿತು.

೨೩-೨೪. ಓ ರಾಜೇಂದ್ರ! ಬಳಿಕ ಪೂಜ್ಯರಾದ ಮಹರ್ಷಿಗಳಿಂದಲೂ, ಶ್ರೀಕೃಷ್ಣನೇ ಮೊದಲಾದ ನೃಪಶ್ರೇಷ್ಠರಿಂದಲೂ, ಯಜ್ಞವನ್ನು ನೋಡುವಸಲುವಾಗಿಯೇ ಬಂದಿದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದ ಜನಗಳಿಂದಲೂ, ಸ್ತ್ರೀಯರಿಂದಲೂ ತುಂಬಿದ್ದ ಆ ಯಾಗಮಂಟಪದಲ್ಲಿ ಯಜ್ಞಾಶ್ವದ ಅಭಿಪ್ರಾಯವೇನೆಂಬುದನ್ನು ಬಲ್ಲ ವ್ಯಾಸಮಹರ್ಷಿಯು ನನ್ನೊಡನೆ (ಗರ್ಗಮುನಿ) ಪ್ರಲಂಬಾಸುರ ವಿಧ್ವಂಸಿಯಾದ ಬಲರಾಮನನ್ನು ಕುರಿತು—

॥ ವ್ಯಾಸ ಉವಾಚ ॥

ಉತ್ತಿಷ್ಠ ಬಲಭದ್ರ ತ್ವಂ ಕರವಾಲಂ ಪ್ರಗೃಹ್ಯ ಚ ।
ಛಿಂಧಿ ಕಂ ವಾಜಿನಶ್ಚಾಗ್ನೇಃ ಪ್ರೀತಯೇ ಹ್ಯಧುನಾ ತ್ವರಂ ॥ ೨೫ ॥

ನಿಹತೇ ತುರಗೇ ರಾಮ ಹವನೇ ಚ ಕೃತೇ ಸತಿ ।
ಯಜ್ಞಾವತಾರಃ ಕೃಷ್ಣಸ್ತು ಪ್ರಸನ್ನೋ ಭವತಿ ಕ್ರತೌ ॥ ೨೬ ॥

॥ ಗರ್ಗ ಉವಾಚ ॥

ಏವಂ ವ್ಯಾಸವಚಃ ಶ್ರುತ್ವಾ ಬಲಃ ಖಡ್ಗೇನ ಸತ್ವರಂ ।
ಶಿರೋ ಹಯಸ್ಯ ಚಿಚ್ಛೇದ ತಚ್ಛಿರೋ ಗಗನಂ ಯಯೌ ॥ ೨೭ ॥

ಗತ್ವೋರ್ಧ್ವಂ ನೃಪಶಾರ್ದೂಲ ಲೀನಂ ತದ್ರವಿಮಂಡಲೇ ।
ದೇವದೈತ್ಯನರಾಃ ಸರ್ವೇ ತದ್ದೃಷ್ಟ್ವಾ ವಿಸ್ಮಯಂ ಗತಾಃ ॥ ೨೮ ॥

೨೫-೨೬. ಓ ಬಲಭದ್ರ! ನಿನ್ನ ಕತ್ತಿಯನ್ನು ಹಿಡಿದುಕೊಂಡು ಮೇಲಕ್ಕೆದ್ದೇಳು. ಈಗ ನೀನು ತಡಮಾಡದೆ ಯಜ್ಞೇಶ್ವರನ ಪ್ರೀತಿಗಾಗಿ ಪಶುವಾದೀ ಯಜ್ಞಾಶ್ವದ ಕತ್ತನ್ನು ಕತ್ತರಿಸು. ಓ ರಾಮ! ಈ ಯಜ್ಞಾಶ್ವವನ್ನು ಕೊಂದು ಹೋಮವನ್ನು ಮಾಡಿದರೆ ಯಜ್ಞರೂಪನಾದ ಈ ಶ್ರೀಕೃಷ್ಣನು ಸುಪ್ರೀತನಾಗುವನು, ಎಂದನು.

೨೭. ರಾಜೇಂದ್ರ! ಈರೀತಿಯಾಗಿ ನುಡಿದ ವ್ಯಾಸಮಹರ್ಷಿಯ ಮಾತನ್ನು ಕೇಳಿ, ಆ ಬಲಭದ್ರನು ಕೂಡಲೇ ತನ್ನ ಕತ್ತಿಯನ್ನು ಹಿರಿದು ಆ ಯಜ್ಞಾಶ್ವದ ಶಿರಸ್ಸನ್ನು ಕತ್ತರಿಸಿದನು. ಒಡನೆಯೇ ಆ ತಲೆಯು ಆಕಾಶಕ್ಕೆ ಹಾರಿತು.

೨೮. ಅನಂತರ ಅಲ್ಲಿಂದಲೂ ಮೇಲಕ್ಕೇರಿ ಸೂರ್ಯಮಂಡಲದಲ್ಲಿ ಐಕ್ಯವಾಯಿತು. ಅದನ್ನು ಕಂಡು ದೇವತೆಗಳೂ, ದೈತ್ಯದಾನವರೂ, ಮನುಷ್ಯರೂ ಎಲ್ಲರೂ ಬೆರಗಾಗಿ ಹೋದರು.

ಹಯಸ್ಯ ಹೃದಯೇ ಶೂಲಂ ನಿಜಘಾನ ಹಸನ್ ಹರಿಃ |
ಮಕರಂದಸಮಾ ಧಾರಾ ರಾಜಂಸ್ತತ್ರ ವಿನಿರ್ಗತಾ ॥ ೨೯ ॥

ತತಶ್ಚ ನಿರ್ಗತಾ ಜ್ಯೋತಿಸ್ತುರಗಸ್ಯ ಕಲೇವರಾತ್ |
ಪಶ್ಯತಾಂ ಚೈವ ಸರ್ವೇಷಾಂ ವಿವೇಶ ಮಧುಸೂದನೇ ॥ ೩೦ ॥

ಪಶ್ಚಾದ್ಭೂತ್ವಾ ಚ ಕರ್ಪೂರಶರೀರಂ ಪತಿತಂ ಪಶೋಃ |
ಯತ್ರಾಚ್ಯುತಾ ಯಥಾ ರಾಜನ್ವಿಭೂತಿಃ ಶಂಕರಸ್ಯ ಚ ॥ ೩೧ ॥

ದೃಷ್ಟ್ವಾ ಚ ಕರ್ಪೂರಸಮೂಹಮುದ್ಭುತಂ
ಸಭಾಂ ಸುಗಂಧೇನ ವೃತಾಂ ಚ ದ್ವಾರಕಾಂ |
ವ್ಯಾಸಾದಯಸ್ತೇ ಮುನಯಃ ಪ್ರಹರ್ಷಿತಾ
ಊಚುರ್ನೃಪಂ ವೈ ಕ್ರತುಕರ್ಮಣಿ ಸ್ಥಿತಂ ॥ ೩೨ ॥

---

೨೯. ಆಗ ಶ್ರೀಹರಿಯು ನಗುನಗುತ್ತಾ ಆ ಯಜ್ಞಾಶ್ವದ ಹೃದಯ ಪ್ರದೇಶದಲ್ಲಿ ಶೂಲದಿಂದ ಇರಿಯಲು ಮಕರಂದ (ಹೂವಿನ ರಸ) ದಂತೆ ಧಾರೆಯೊಂದು ಹರಿಯತೊಡಗಿತು.

೩೦. ಅನಂತರ ಆ ಕುದುರೆಯು ಶರೀರದಿಂದ ಜ್ಯೋತಿಯೊಂದು ಹೊರಹೊರಟು ಎಲ್ಲರೂ ನೋಡುತ್ತಿರುವಂತೆಯೇ ಆ ಶ್ರೀಕೃಷ್ಣನಲ್ಲಿ ಪ್ರವೇಶಿಸಿಬಿಟ್ಟಿತು.

೩೧. ಬಳಿಕ ಆ ಯಜ್ಞಪಶುವಿನ ಶರೀರವು ಕರ್ಪೂರವಾಗಿ ಪರಿಣಮಿಸಿ ಶ್ರೀ ಶಂಕರನು ಸಂಚರಿಸುವಾಗ ಉದರುವ ಆತನ ಶರೀರದ ಭಸ್ಮದಂತೆ–ಕೆಳಕ್ಕೆ ಬಿದ್ದುಬಿಟ್ಟಿತು.

೩೨. ಆಗ ಆರೀತಿ ಯಜ್ಞಾಶ್ವವು ಕರ್ಪೂರರಾಶಿಯಾಗಿ ಬಿಟ್ಟುದನ್ನೂ, ಅದರ ಸುವಾಸನೆಯಿಂದ ಆ ಯಾಗಶಾಲೆಯೂ, ದ್ವಾರಕೆಯೂ ಘಮಘಮಿಸುತ್ತಿರುವುದನ್ನೂ ಕಂಡು ಸಂತುಷ್ಟರಾದ ವ್ಯಾಸಾದಿ ಮಹರ್ಷಿಗಳು ಯಾಗದೀಕ್ಷಿತನಾದ ಆ ಉಗ್ರಸೇನನಿಂತೆಂದರು :—

ದಿಷ್ಟ್ಯಾ ತೇ ನೃಪಶಾರ್ದೂಲ ಸಫಲೋಽಭೂತ್ಕ್ರತೂತ್ತಮಃ ।
ಕರ್ಪೂರೇಣಾಪಿ ಹವನಂ ಕರಿಷ್ಯಾಮಶ್ಚ ತ್ವಂ ಕುರು ॥ ೩೩ ॥

ಇತ್ಯುಕ್ತ್ವಾ ಋತ್ವಿಜಃ ಸರ್ವೇ ಯಜ್ಞಕುಂಡೇ ಚ ತತ್ಕ್ಷಣಾತ್ ।
ಘನಸಾರಂ ಹಿ ಜುಹುವುಃ ಪೂರ್ವಂ ಯಜ್ಞೇಶ್ವರಾಯ ಚ ॥ ೩೪ ॥

ಯತ್ರ ಯಜ್ಞೇಶ್ವರಃ ಕೃಷ್ಣಃ ಚತುರ್ವ್ಯೂಹಧರಃ ಪರಃ ।
ರೇಜೇ ಪುತ್ರೈಶ್ಚ ಪೌತ್ರೈಶ್ಚ ತತ್ರ ಕಿಂ ದುರ್ಲಭಂ ನೃಪ ॥ ೩೫ ॥

ತಸ್ಮಿನ್ಯಜ್ಞೇ ಮಹೇಂದ್ರಾಯ ವಚಃ ಪ್ರಕಥಿತಂ ಮಯಾ ।
ಗೃಹಾಣ ಶಕ್ರ ಯಜ್ಞೇಽಸ್ಮಾನ್ ಕರ್ಪೂರಸ್ಯಾಹುತಿಂ ವಿಭೋ ॥ ೩೬ ॥

ಏಹಿ ರಾಜ್ಞಾರ್ಪಿತಾಂ ಚೈನಾಂ ಕಲಾವಗ್ರೇ ಹಿ ದುರ್ಲಭಾಂ ।
ಇತಿ ಶ್ರುತ್ವಾ ಚ ವಚನಂ ಶಕ್ರಃ ಪ್ರೋವಾಚ ಸಸ್ಮಿತಂ ॥ ೩೭ ॥

---

೩೩. ಓ ನೃಪಶ್ರೇಷ್ಠಾ! ಭಲೆ! ಭಲೆ! ಇಂದಿಗೆ ನೀನು ಮಾಡಿದ ಈ ಯಾಗವು ಸಫಲವಾಯಿತು. ಈ ಕರ್ಪೂರದಿಂದ ಯಜ್ಞೇಶ್ವರನಿಗೆ ಹೋಮವನ್ನು ಮಾಡುವೆವು. ಅದರಂತೆ ನೀನೂ ಹೋಮವನ್ನು ಮಾಡು.

೩೪. ಎಂಬುದಾಗಿ ಆ ವ್ಯಾಸನು ನುಡಿದುದನ್ನು ಕೇಳಿ ಕೂಡಲೇ ಋತ್ವಿಕ್ಕುಗಳೆಲ್ಲರೂ ಹೋಮಕುಂಡದಲ್ಲಿ ಯಜ್ಞೇಶ್ವರನಿಗೆ ಆ ಕರ್ಪೂರವನ್ನು ಆಹುತಿಯಾಗಿ ಇತ್ತರು.

೩೫. ಓ ರಾಜೇಂದ್ರ! ಯಜ್ಞಗಳಿಗೆಲ್ಲಾ ಅಧೀಶ್ವರನಾದ ಪರಮ ಪುರುಷನೆನಿಸಿದ ಆ ಶ್ರೀಕೃಷ್ಣನು ಚತುರ್ವ್ಯೂಹಗಳೆಂಬುದಾಗಿ ಕರೆಯಲ್ಪಡುವ ತನ್ನ ನಿಜಾಕೃತಿಯಿಂದಲೂ, ಪ್ರದ್ಯುಮ್ನ, ಅನಿರುದ್ಧ ಸಂಕರ್ಷಣ (ಬಲರಾಮ)ರ ರೂಪದಿಂದಲೂ ಸ್ವಯಂ ತಾನೇ ಆ ಯಾಗಶಾಲೆಯಲ್ಲಿ ಇರುವಾಗ ಯಾವುದು ತಾನೇ ದುರ್ಲಭವೆನಿಸೀತು?

೩೬-೩೭. ಅನಂತರ ನಾನು (ಗರ್ಗಮುನಿ) ಇಂದ್ರನನ್ನು ಕುರಿತು ಓ ಮಹೇಂದ್ರ! ಈ ಯಜ್ಞದಲ್ಲಿ ಕರ್ಪೂರರೂಪವಾದ ಹವಿಸ್ಸನ್ನು ತೆಗೆದುಕೋ! ಈ ಆಹುತಿಯನ್ನು ಉಗ್ರಸೇನರಾಜನು ಪ್ರೀತಿಯಿಂದ ಅರ್ಪಿಸುತ್ತಿರುವನು. ಮುಂದೆ ಕಲಿಯುಗದಲ್ಲಿ ಇದು ನಿನಗೆ ದುರ್ಲಭವಾಗುವುದು, ಎಂದನು. ಅದನ್ನು ಕೇಳಿ ಇಂದ್ರನು ನಗುತ್ತಾ—

ಪುನರ್ಗ್ರಹ್ಣಾಮಿ ಮುನಯೋ ಧರ್ಮರಾಜಕ್ರತೌತ್ತಮೇ |
ಕುಲಕ್ಷಯೇ ಗಜಪುರೇ ಪ್ರದತ್ತಾಮಾಹುತಿಂ ದ್ವಿಜೈಃ || ೩೮ ||

ಇತಿ ಶ್ರುತ್ವಾ ಹರೇರ್ವಾಕ್ಯಂ ಸತ್ಯಂ ಮತ್ವಾ ಮುನೀಶ್ವರಾಃ |
ಸರ್ವಾನ್ದೇವಾನ್ನೃಪಶ್ರೇಷ್ಠ ಹ್ಯಧ್ವರೇ ಚಾಹುತಿಂ ದದುಃ || ೩೯ ||

ಅನ್ಯೇ ಕೇಽಪಿ ನ ಜಾನಂತಿ ವಜ್ರಿಣಾ ಕಥಿತಂ ಚ ಕಿಂ |
ಅಗ್ನಯೇ ಸ್ವಾಹೇತಿಮಂತ್ರೈಶ್ಚ ಸರ್ವಾನೇವಾಹುತೀರ್ದದುಃ || ೪೦ ||

ಕರ್ಪೂರಹವನೇನಾಪಿ ಪ್ರೀತಂ ವಿಶ್ವಂ ಚರಾಚರಂ |
ಉಗ್ರಸೇನಸ್ತು ರಾಜಾ ವೈ ನಿರ್ಋಣೋಽಭೂನ್ಮಹಾಧ್ವರೇ || ೪೧ ||

---

೩೮. ಎಲೈ ಮುನಿಶ್ರೇಷ್ಠರೇ! ಮುಂದೆ ಧರ್ಮರಾಜನು ತನ್ನ ಕುಲ ಕ್ಷಯ ಪಾಪಪರಿಹಾರಕ್ಕಾಗಿ ಹಸ್ತಿನಾವತಿಯಲ್ಲಿ ಋತ್ವಿಕ್ಕುಗಳೊಡನೆ ಇದೇ ಯಾಗವನ್ನು ಮಾಡುವನು. ಆಗ ನಾನು ಆಹುತಿಯನ್ನು ಸ್ವೀಕರಿಸುವೆನು, ಎಂದು ನುಡಿದನು.

೩೯. ಈರೀತಿಯಾಗಿ ಇಂದ್ರನಾಡಿದ ಮಾತನ್ನು ಕೇಳಿ ಆ ಮುನಿಶ್ರೇಷ್ಠರು ಅದನ್ನು ನಿಜವೆಂದು ಅರಿತು ಇತರ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಿದರು.

೪೦. ಓ ರಾಜೇಂದ್ರ! ಇಂದ್ರನಾಡಿದ ಮಾತೇನೆಂಬುದನ್ನು ಯಾರೂ ಅರಿಯರು. ಈ ರೀತಿಯಾಗಿ ಆ ಋತ್ವಿಕ್ಕುಗಳು "ಅಗ್ನಯೇ ಸ್ವಾಹಾ" ಎಂಬ ಮಂತ್ರಗಳಿಂದ ಎಲ್ಲ ಆಹುತಿಗಳನ್ನೂ ಇತ್ತರು.

೪೧. ಆ ಕರ್ಪೂರದ ಆಹುತಿಯಿಂದ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ತಣಿಯಿತು. ಇಂತು ಆ ಮಹಾಯಜ್ಞದಲ್ಲಿ ದೀಕ್ಷಿತನಾದ ಆ ಉಗ್ರಸೇನನು (ಹವಿಸ್ಸನ್ನರ್ಪಿಸಿ) ಋಣಮುಕ್ತನಾದನು.

ಯಜ್ಞಾಂತೇಽವಭೃಥಸ್ನಾನಮುಗ್ರಸೇನೋ ದ್ವಿಜೋತ್ತಮೈಃ ।
ಕೃಷ್ಣಾದ್ಯೈರ್ಯಾದವೈರ್ಭೂಪೈಸ್ತೀರ್ಥೇ ಪಿಂಡಾರಕೇಽಕರೋತ್ ॥

ಭಾರ್ಯಯಾ ಸಹಿತಃ ಸ್ನಾತ್ವಾ ವೇದೋಕ್ತವಿಧಿನಾ ನೃಪಃ ।
ಧೃತ್ವಾ ಕ್ಷೌಮಾಂಬರಂ ರೇಜೇ ಯಜ್ಞೋ ದಕ್ಷಿಣಯಾ ಯಥಾ ॥ ೪೩ ॥

ದೇವದುಂದುಭಯೋ ನೇದುರ್ನರದುಂದಭಯಸ್ತದಾ ।
ಉಗ್ರಸೇನೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೪೪ ॥

ಕಾರಯಿತ್ವಾ ಸ್ವಧಾಪಾನಂ ಪ್ರಾಶಯಿತ್ವಾ ಯಥಾಕ್ರಮಂ ।
ಸರ್ವೇಭ್ಯಶ್ಚ ಪುರೋಡಾಶಂ ದತ್ವಾ ಶೇಷಮಥಾಸೃಜತ್ ॥ ೪೫ ॥

---

೪೨. ಆ ಅಶ್ವಮೇಧಯಜ್ಞದ ಅಂತ್ಯದಲ್ಲಿ ಉಗ್ರಸೇನನು ಬ್ರಾಹ್ಮಣೋತ್ತಮರಿಂದಲೂ, ಕೃಷ್ಣನೇ ಮೊದಲಾದ ಯಾದವರಿಂದಲೂ, ಇತರ ರಾಜರಿಂದಲೂ ಸಮೇತನಾಗಿ ಪಿಂಡಾರಕತೀರ್ಥದಲ್ಲಿ ದೀಕ್ಷಾಸಮಾಪ್ತಿಸೂಚಕವಾದ ಅವಭೃಥಸ್ನಾನವನ್ನು ಮಾಡಿದನು.

೪೩. ವೇದೋಕ್ತವಾದ ವಿಧಾನಗಳಿಂದ ಭಾರ್ಯೆಯಾದ ರುಚಿಮತಿಯೊಂದಿಗೆ ಸ್ನಾನಮಾಡಿದ ನಂತರ ಆ ಉಗ್ರಸೇನನು ಶುದ್ಧವಾದ ದುಕೂಲಗಳನ್ನು ಧರಿಸಿ ರಕ್ಷಣಾಯೆಂಬ ಪತ್ನಿಯೊಡಗೂಡಿದ ಯಜ್ಞಪುರುಷನಂತೆ ಕಂಗೊಳಿಸಿದನು.

೪೪. ಆಗ ದೇವತೆಗಳೂ, ಭೂಲೋಕನಿವಾಸಿಗಳೂ ಹರ್ಷದಿಂದ ನಗಾರಿಗಳನ್ನು ಬಾರಿಸಿದರು. ಮತ್ತು ಆ ಉಗ್ರಸೇನನಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

೪೫. ಅನಂತರ ಆ ಉಗ್ರಸೇನನು ಯಜ್ಞಶೇಷವಾದ ಸುಧಾ ಎಂಬ ರಸವನ್ನು ತನ್ನವರೆಲ್ಲರಿಗೂ ಕ್ರಮವರಿತು ಪಾನಮಾಡಿಸಿದ ಬಳಿಕ ಎಲ್ಲರಗೂ ಪುರೋಡಾಶಗಳನ್ನು ಪ್ರಾಶನಮಾಡಿಸಿದನು. ಅನಂತರ ಉಳಿದ ಯಜ್ಞೀಯವಾದ ವಸ್ತುಗಳೆಲ್ಲವನ್ನೂ ವಿಸರ್ಜಿಸಿದನು.

ಉಗ್ರಸೇನಂ ಚ ವಾದಿತ್ರೈಸ್ತುಷ್ಟುವುರ್ಬಂದಿನೋ ಮುದಾ ।
ತತೋ ನೀರಾಜನಂ ಚಕ್ರುರ್ದೇವಕ್ಯಾದ್ಯಾಶ್ಚ ಯೋಷಿತಃ ॥ ೪೬ ॥

ಅಲಂಕಾರಾಶ್ಚ ರತ್ನಾನಿ ವಸ್ತ್ರಾಣಿ ವಿವಿಧಾನಿ ಚ ।
ನೀರಾಜನಾಂತೇ ಪ್ರದದೌ ತಾಭ್ಯಃ ಪ್ರೀತೋ ನೃಪೇಶ್ವರಃ ॥ ೪೭ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ಯಜ್ಞಪೂರ್ತೌ ನೃಪಸ್ಯಾಭಿಷೇಕೋ ನಾಮ
ಷಟ್ಪಂಚಾಶತ್ತಮೋಽಧ್ಯಾಯಃ

---

೪೬. ಆಗ ಆ ಉಗ್ರಸೇನನನ್ನು ವಂದಿಮಾಗಧರು ವೀಣಾ, ವೇಣು, ಮೃದಂಗಾದಿ ವಾದ್ಯಗಳನ್ನು ನುಡಿಸುತ್ತಾ ಸಂತೋಷದಿಂದ ಹೊಗಳಿದರು. ಅನಂತರ ದೇವಕೀ ಮೊದಲಾದ ಸ್ತ್ರೀಯರು ಆತನಿಗೆ ಆರತಿಯನ್ನು ಬೆಳಗಿದರು.

೪೭. ಬಳಿಕ ಆ ನೃಪಚಕ್ರವರ್ತಿಯು ಆರತಿಯೆತ್ತಿದ ದೇವಕೀ ಮೊದಲಾದ ಸ್ತ್ರೀಯರಿಗೆ ನಾನಾವಿಧವಾದ ವಸ್ತ್ರಗಳನ್ನೂ, ಆಭರಣಗಳನ್ನೂ ಇತ್ತು ಸನ್ಮಾನಿಸಿದರು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ಯಜ್ಞಪೂರ್ತಿ ಅವಭೃಥಸ್ನಾನವೆಂಬ ಐವತ್ತಾರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಸಪ್ತಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ತತಃ ಕೃಷ್ಣೇನ ಭೀಮೇನ ಪ್ರಾರ್ಥಯಿತ್ವಾ ದ್ವಿಜಾನ್ನೃಪಾನ್ ।
ಭೋಜಯಾಮಾಸ ಯದುರಾಟ್ ಭೋಜನೈರ್ವಿವಿಧೈರಪಿ ॥ ೧ ॥

ಸಚ್ಛಷ್ಕುಲೀಪಾಯಸತಂಡುಲಾಭ್ಯೈಃ
ಸಂಯಾವಕಾಪೂಪಸುಸೂಪಕಾದ್ಯೈಃ ।
ಸತ್ಫೇಣಿಕಾದ್ಯೈಸ್ತು ನಿಮಂತ್ರ್ಯ ವಿಪ್ರಾನ್
ಸಂಭೋಜಯಾಮಾಸ ವಿಶೇಷಮನ್ನಂ ॥ ೨ ॥

ಐವತ್ತೇಳನೆಯ ಅಧ್ಯಾಯವು

೧. ಗರ್ಗಮುನಿಯು ಹೇಳತೊಡಗಿದನು :— ರಾಜೇಂದ್ರ, ಕೇಳು. ಅನಂತರ ಯಾದವೇಶ್ವರನಾದ ಉಗ್ರಸೇನನು ಕೃಷ್ಣನನ್ನೂ, ಭೀಮನನ್ನೂ ಕಳುಹಿಸಿ ಯಾಗಕ್ಕೆ ಬಂದಿದ್ದ ಎಲ್ಲಾ ವಿಪ್ರರನ್ನೂ, ಕ್ಷತ್ರಿಯರನ್ನೂ ಊಟಕ್ಕೆ ಬರಮಾಡಿಕೊಂಡು ಬಗೆಬಗೆಯಾದ ಊಟಗಳಿಂದ ಅವರನ್ನು ತೃಪ್ತಿಪಡಿಸಿದನು.

೨. ಆ ವೈಭವವನ್ನೇನು ಹೇಳಲಿ? ಸೊಗಸಾಗಿ ಮಾಡಿದ ಚಕ್ಕುಲಿಗಳು, ಹಾಲುಕೀರು, ಸಣ್ಣಕ್ಕಿಯ ಅನ್ನ, ಗೋಧಿಯ ಹಿಟ್ಟಿನಲ್ಲಿ ಮಾಡಿದ ಪೂರಿ ಮೊದಲಾದ ಭಕ್ಷ್ಯಗಳು, ಹಿತವಾದ ತೊವ್ವೆ, ಎಳೆ ಎಳೆಯಾಗಿ ಎಳೆದ ಫೇಣಿಗಳು, ಇವುಗಳಿಂದ ಆಹ್ವಾನಿಸಿದ ಬ್ರಾಹ್ಮಣರು ಮೊದಲಾದವರನ್ನು ಚೆನ್ನಾಗಿ ತೃಪ್ತಿಪಡಿಸಿದನು.

ಶಿಖರಿಣೀಘೃತಪೂರಸುಶಕ್ತಿಕಾಃ
ಸುಪಟಿನೀದಧಿಪೂಪಕಲಪ್ಸಿಕಾಃ ।
ಸುವೃತಸುಂದರಚಂದ್ರಸುಹಾಲಿಕಾಃ
ಬಟುಕವೋದಕಪರ್ಪಟಕೈರದಾತ್ ॥ ೩ ॥

ಕೇಚಿತ್ಫಲಾಶನಸ್ತತ್ರ ಶುಷ್ಕಪರ್ಣಾಶನಾಸ್ತಥಾ ।
ಕೇಚಿಜ್ಜಲಾಶನಾ ವಿಪ್ರಾಃ ಕೇಚಿದ್ದೂರ್ವಾರಸಾಶನಾಃ ॥ ೪ ॥

ಕೇಚಿದ್ವಾತಾಶನಾ ರಾಜಞ್ಜನ್ಮತಸ್ತಪಕಾರಿಣಃ ।
ಭೋಜನಾನಾಂ ಚ ನಾಮಾನಿ ತೇ ನ ಜಾನಂತಿ ವಿಸ್ಮಿತಾಃ ॥ ೫ ॥

---

೩. ಓ ರಾಜೇಂದ್ರ ! ಮೇಲೆ ಹೇಳಿದುವುಗಳಲ್ಲದೆ ಶಿಖರಿಣಿ (ಸೀಕರಣೆ) ಯಥೇಷ್ಟವಾದ ತುಪ್ಪ, ಕರ್ಜಿಕಾಯಿ ಮೊದಲಾದುವು, ಮೊಸರೊಡೆ ಲಪ್ಸಿಕಾ (ಉತ್ತರಭಾರತದಲ್ಲಿ "ಲುಪ್ಸಿ" ಎಂಬುದಾಗಿ ಈಗಲೂ ಪ್ರಚಾರದಲ್ಲಿರುವ ಮೊಸರನ್ನು ಚೆನ್ನಾಗಿ ಕಡೆದು ಅದಕ್ಕೆ ಉಪ್ಪು, ಸಕ್ಕರೆ, ಹಿಂಗು, ಜೀರಿಗೆ ಮೊದಲಾದುವುಗಳನ್ನು ಹಾಕಿ ಪರಿಷ್ಕರಿಸಿದ ಮಜ್ಜಿಗೆ) ಅಂದವಾಗಿ ದುಂಡಗೆ ಇರುವ ಹೋಳಿಗೆಗಳು- ವಡೆಗಳು, ಕಡುಬುಗಳು, ಹಪ್ಪಳ ಮೊದಲಾದ ಇತರ ಭೋಜನ ಸಾಮುಗ್ರಿಗಳನ್ನೂ ಆದರದಿಂದ ಬಡಿಸಿದನು.

೪. ಆ ಊಟಕ್ಕೆ ಬಂದಿದ್ದ ಬ್ರಾಹ್ಮಣರಲ್ಲಿ ಕೆಲವರು ಮೊದಲಿನಿಂದಲೂ ಹಣ್ಣುಗಳನ್ನು ತಿನ್ನುತ್ತಿದ್ದವರು. ಕೆಲವರು ಒಣಗಿದ ಎಲೆಗಳನ್ನು ಭಕ್ಷಿಸುತ್ತಿದ್ದವರು. ಮತ್ತೆ ಕೆಲವರು ನೀರೇ ಆಹಾರವಾಗಿದ್ದವರು. ಇನ್ನು ಕೆಲವರು ಹುಲ್ಲಿನ ರಸದಿಂದ ಜೀವಿಸುತ್ತಿದ್ದವರು.

೫. ಕೆಲವರು ಗಾಳಿ ಕುಡಿದು ಜೀವಿಸುತ್ತಿದ್ದವರು. ಓ ರಾಜೇಂದ್ರ! ಇವರೆಲ್ಲರೂ ಹುಟ್ಟಿದಾಗಿನಿಂದ ತಪಸ್ಸಿನಲ್ಲಿಯೇ ನಿರತರಾಗಿದ್ದುದರಿಂದ ಈ ಭೋಜನವಸ್ತುಗಳ ಹೆಸರುಗಳನ್ನೇ ಅರಿಯದಿದ್ದವರು. ಆದುದರಿಂದ ಅವರಿಗೆ ಮೇಲೆ ಹೇಳಿದ ಭಕ್ಷ್ಯಗಳನ್ನು ನೋಡಿ ಅಚ್ಚರಿಯುಂಟಾಯಿತು.

ಭಕ್ತಂ ಚ ಮೇನಿರೇ ಕೇಚಿನ್ಮಾಲತ್ಯಾಃ ಕುಸುಮಾನಿ ಚ ।
ಮೋದಕಾಂಶ್ಚ ದ್ವಿಜಾಃ ಕೇಚಿದುದುಂಬರಫಲಾನಿ ಚ ॥ ೬ ॥

ಪಾಯಸಂ ಫೇಣಿಕಾಂ ದೃಷ್ಟ್ವಾ ಚಂದ್ರಬಿಂಬಂ ಚ ಮೇನಿರೇ ।
ಪರ್ಪಟಾನ್ಫೇಣಿಕಾಸ್ದೃಷ್ಟ್ವಾ ಪತ್ರಾಣಿ ಕಿಂಶುಕಸ್ಯ ವೈ ॥ ೭ ॥

ಮೇನಿರೇಽರ್ಕಫಲಾನೀತಿ ದೃಷ್ಟ್ವಾ ಚ ಮಧುಶೀರ್ಷಕಾನ್ ।
ಪ್ರಹೇಲಿಕಾಂ ಲಪ್ಸಿಕಾಂ ಚ ಖುಷಯಶ್ಚಂಡನದ್ರವಂ ॥ ೮ ॥

ದೃಷ್ಟ್ವಾ ತೇ ಮಿಷ್ಟಚೂರ್ಣಂ ವೈ ವಾಲುಕಾಂ ಮುನಿಸತ್ತಮಾಃ ।
ಇತಿ ಮತ್ವಾ ದ್ವಿಜಾಃ ಸರ್ವೇ ಬುಭುಜುರ್ಭೋಜನಾನಿ ಚ ॥ ೯ ॥

---

೬. ಕೆಲವರು ಬೆಳ್ಳಗೆ ಹೊಳೆಯುತ್ತಿರುವ ಸಣ್ಣಕ್ಕಿಯ ಅನ್ನವನ್ನು ಜಾಜಿಯ ಮೊಗ್ಗುಗಳೆಂದು ಭಾವಿಸಿದರು. ಕೆಲಮಂದಿ ಬ್ರಾಹ್ಮಣರು ಕಡುಬುಗಳನ್ನು ಕಂಡು ಅತ್ತಿಯ ಹಣ್ಣೆಂದುಕೊಂಡರು.

೭. ಕೆಲವು ಮಂದಿ ಪಾಯಸಗಳನ್ನೂ, ದುಂಡಗೆ ಬಿಡಿಸಿದ ಪೇಣಿಗಳನ್ನೂ ಪೂರ್ಣಚಂದ್ರನೆಂದು ಭಾವಿಸಿದರು. ಇನ್ನು ಕೆಲವರು ಹಪ್ಪಳಗಳನ್ನೂ, ಪೇಣಿಗಳನ್ನೂ ಮುತ್ತುಗದ ಎಲೆಗಳೆಂದು ಭಾವಿಸಿದರು.

೮ ಮತ್ತೆ ಕೆಲವರು ಜೇನುತಪ್ಪದಲ್ಲಿ ಅದ್ದಿ ಮುಳುಗಿಸಿ ಮಾಡಿದ ಭಕ್ಷ್ಯಗಳನ್ನು ಎಕ್ಕದ ಕಾಯಿಗಳೆಂದೂ' ಮತ್ತೆ ಕೆಲವರು ಋಷಿಗಳು ನಂಚಿಕೊಳ್ಳುವ ಉಪ್ಪಿನಕಾಯಿರಸಗಳನ್ನೂ, ಲಪ್ಸೀ ಎಂಬ ಪರಿಷ್ಕೃತವಾದ ಮಜ್ಜಿಗೆಗಳನ್ನೂ, ಗಂಧೋದಕವೆಂದು ತಿಳಿದುಕೊಂಡರು.

೯. ಮಹಾ ತಪಸ್ವಿಗಳಾದ ಕೆಲವುಮಂದಿ ಬ್ರಾಹ್ಮಣರು ಮಧುರವಾದ ಮೋತೀಚೂರು ಮೊದಲಾದ ಭಕ್ಷ್ಯಗಳನ್ನೂ, ಮರಳಿನ ಉಂಡೆಯೆಂದು ಭಾವಿಸಿದರು ಹೀಗೆ ಆ ಬ್ರಾಹ್ಮಣೋತ್ತಮರು ಭೋಜನವಸ್ತುಗಳನ್ನು ತಮಗೆ ಪರಿಚಿತವಾದ ಫಲಾದಿರೂಪವಾಗಿ ತಿಳಿದು ಸಂತೋಷದಿಂದ ಊಟಮಾಡಿದರು.

ಕೇಚಿತ್ಪಿಬಂತಿ ದುಗ್ಧಂ ವೈ ಕೇಚಿದ್ರಾಕ್ಷಾರಸಂ ತಥಾ ।
ಕೇಚಿದಾಮ್ರರಸಂ ವಿಪ್ರಾಃ ಪ್ರಹಸಂತಿ ಲುಠಂತಿ ವೈ　　॥ ೧೦ ॥

ತತಃ ಕೃಷ್ಣಸ್ತು ಭಗವಾನ್ ಭೀಮೇನ ಪ್ರಹಸನ್ಮುದಾ ।
ಚಕಾರ ಹಾಸ್ಯಂ ವಿಪ್ರಾಣಾಂ ಸಂಸ್ಥಿತಾನಾಂ ತಪಸ್ವಿನಾಂ　　॥ ೧೧ ॥

ಭೋಜನಾನಾಂ ಚ ನಾಮಾನಿ ಮುನಯೋ ವದತಸ್ತ್ವರಂ ।
ತಾನ್ಪ್ರಯಚ್ಛಾಮಿ ಯುಷ್ಮಭ್ಯಂ ಭೀಮೇನ ಸಹಿತೋಽಪ್ಯಹಂ　　॥ ೧೨ ॥

ಶ್ರೀಕೃಷ್ಣಭೀಮಯೋರ್ವಾಕ್ಯಂ ನಿಶಮ್ಯ ಮುನಿಸತ್ತಮಾಃ ।
ನ ಕಿಂಚಿದೂಚುರ್ಮುದಿತಾಃ ಪ್ರಪಶ್ಯಂತಃ ಪರಸ್ಪರಂ　　॥ ೧೩ ॥

---

೧೦. ಆಗ ಹಾಲನ್ನು ಕುಡಿಯುವವರು ಕೆಲವರು. ದ್ರಾಕ್ಷಾಪಾನ ವನ್ನು ಮಾಡುವವರು ಕೆಲವರು. ಮಾವಿನಹಣ್ಣಿನ ರಸವನ್ನು ಸೇವಿಸುವವರು ಕೆಲವರು. ಸಂತೋಷದಿಂದ ನಗುವವರು ಕೆಲವರು. ಇತ್ತಲಿಂದತ್ತ ಹೊರಲಾ ಡುವವರು ಕೆಲವರು.

೧೧. ಅದನ್ನುಕಂಡು ಕೃಷ್ಣನು ಪ್ರೀತನಾಗಿ ನಗುತ್ತಾ ಭೀಮನೊಡನೆ, ಊಟಮಾಡುತ್ತಾ ಕುಳಿತಿದ್ದ ತಪಸ್ವಿಗಳಾದ ಆ ಬ್ರಾಹ್ಮಣರನ್ನು ಹಾಸ್ಯಮಾ ಡಿದನು.

೧೨. ಎಲೈ ಮುನಿಗಳಿರಾ! ಭೋಜನ ವಸ್ತುಗಳ ಹೆಸರುಗಳನ್ನು ಬೇಗಬೇಗನೆ ಹೇಳಿರಿ. ಹಾಗಾದರೆ ಆ ವಸ್ತುಗಳನ್ನು ನಾನೂ, ಭೀಮನೂ ತಂದುಕೊಡುವೆವು, ಎಂದನು.

೧೩. ಅದನ್ನು ಕೇಳಿ ಆ ಮುನಿಶ್ರೇಷ್ಠರು ಸಂತೋಷದಿಂದ ಒಬ್ಬರ ನ್ನೊಬ್ಬರು ನೋಡುತ್ತಾ ಏನನ್ನೂ ಮಾತನಾಡಲಾರದೆ ಹೋದರು.

ತೈಲಂಗಕರ್ಣಾಟಕಗುರ್ಜರಾದ್ಯಾ-
ನನ್ಯಾನ್ದ್ವಿಜಾನ್ಗೌಡಸನಾಢ್ಯಕಾದೀನ್ ।
ಸಂಪೂಜ್ಯ ಹೇಮಾಂಬರರತ್ನವೃಂದೈ-
ರ್ನೃಪೇಶ್ವರೋ ವಿಪ್ರವರಾನ್ನನಾಮ ಹ ॥ ೧೪ ॥

ಏಕಲಕ್ಷಂ ಹಯಾನಾಂ ಚ ಗಜಾನಾಂ ಚ ಸಹಸ್ರಕಂ ।
ದ್ವಿಸಹಸ್ರಂ ರಥಾನಾಂ ಚ ಗವಾಂ ಲಕ್ಷಂ ವಿಧಾನತಃ ॥ ೧೫ ॥

ಶತಭಾರಂ ಸುವರ್ಣಾನಾಮೀದೃಶೀಂ ದಕ್ಷಿಣಾಂ ನೃಪ ।
ಉಗ್ರಸೇನಸ್ತು ಯಜ್ಞಾಂತೇ ಪೂರ್ವಂ ಮಹ್ಯಂ ದದೌ ಕಿಲ ॥ ೧೬ ॥

ಮದರ್ಧಂ ಬಕದಾಲ್ಭ್ಯಾಯ ದದೌ ವ್ಯಾಸಾಯ ಸ್ತೈ ತಥಾ ।
ತುರಗಾಣಾಂ ಸಹಸ್ರಂ ಚ ಗಜಾನಾಂ ಶತಮೇವ ಚ ॥ ೧೭ ॥

---

೧೪. ಅನಂತರ ಆ ಉಗ್ರಸೇನನು ಆಂಧ್ರ, ಕರ್ಣಾಟಕ, ಗುರ್ಜರ, ಗೌಡ, ಸನಾಢ್ಯ ಮುಂತಾದ ದೇಶಗಳಿಂದ ಬಂದಿದ್ದ ವಿಪ್ರೋತ್ತಮರನ್ನು ಚಿನ್ನ ದಿಂದಲೂ, ವಸ್ತ್ರಾಭರಣದಿಂದಲೂ ಸತ್ಕರಿಸಿ ಅವರನ್ನು ನಮಸ್ಕರಿಸಿದನು.

೧೫-೧೬. ಓ ರಾಜೇಂದ್ರ ! ಆ ಉಗ್ರಸೇನನು ಯಜ್ಞವೆಲ್ಲಾ ಮುಗಿದ ನಂತರ ಎಲ್ಲರಿಗಿಂತಲೂ ಮೊದಲು ಪುರೋಹಿತನಾದ ನನಗೆ ಒಂದುಲಕ್ಷ ಕುದುರೆ ಗಳನ್ನೂ, ಸಾವಿರ ಆನೆಗಳನ್ನೂ, ಎರಡುಸಾವಿರ ತೇರುಗಳನ್ನೂ ಒಂದು ಲಕ್ಷ ಗೋವುಗಳನ್ನೂ, ಒಂದುನೂರುಭಾರ (ಗಟ್ಟಿಮುಟ್ಟಾದ ಮನುಷ್ಯನು ಹೊರಬಹು ದಾದ ತೂಕ) ಚಿನ್ನವನ್ನೂ ದಕ್ಷಿಣೆಯಾಗಿತ್ತನು.

೧೭. ನನಗೆ ಕೊಟ್ಟುದರಲ್ಲಿ ಅರ್ಧವನ್ನು ಬಕದಾಲ್ಭ್ಯನಿಗೂ, ಇತ್ತನು. ಅನಂತರ ವ್ಯಾಸಮಹರ್ಷಿಗೆ ಒಂದುಸಾವಿರ ಕುದುರೆಗಳನ್ನೂ ಒಂದುನೂರು ಆನೆಗಳನ್ನೂ—

ದ್ವಿಶತಂ ಸ್ಯಂದನಾನಾಂ ಚ ಧೇನೂನಾಂ ಚ ಸಹಸ್ರಕಂ ।
ವಿಂಶದ್ಭಾರಂ ಸುವರ್ಣಾನಾಮಿಾದೃಶೀಂ ದಕ್ಷಿಣಾಂ ಪುನಃ ॥ ೧೮ ॥

ನಿಮಂತ್ರಿತೇಭ್ಯೋ ವಿಪ್ರೇಭ್ಯ ಉಗ್ರಸೇನೋ ದದೌ ಮುದಾ ।
ಗಜಮೇಕಂ ರಥಂ ಗಾಂ ಚ ಸ್ವರ್ಣಭಾರಂ ಚ ಘೋಟಕಂ ॥ ೧೯ ॥

ದ್ವಿಭಾರಂ ರಜತಂ ಚೈವ ಯಾದವೇಂದ್ರಃ ಪ್ರಹರ್ಷಿತಃ ।
ಈದೃಶೀಂ ದಕ್ಷಿಣಾಂ ರಾಜನ್ಬ್ರಾಹ್ಮಣೇ ಬ್ರಾಹ್ಮಣೇ ದದೌ ॥ ೨೦ ॥

ಮಹಾಧ್ವರೇ ಕೃಷ್ಣಪುರೀ ಯದಾ ಬಭೌ
ಮಹೀತಲೇ ಖೇ ಹ್ಯಮರಾವತೀ ತಥಾ ।
ತದಾಗತಾ ಮಾಗಧಸೂತಕಾದಯೋ
ಬಂದೀಜನಾ ಗಾಯಕವಾರಯೋಷಿತಃ ॥ ೨೧ ॥

---

೧೮ ಇನ್ನೂರು ತೇರುಗಳನ್ನೂ, ಒಂದುಸಾವಿರ ಹಸುಗಳನ್ನೂ, ಇಪ್ಪತ್ತುಭಾರ ಚಿನ್ನವನ್ನೂ ದಕ್ಷಿಣೆಯಾಗಿ ಕೊಟ್ಟನು.

೧೯-೨೦. ಇದಲ್ಲದೆ ಆಹೂತರಾಗಿ ಬಂದಿದ್ದ ಪ್ರತಿಯೊಬ್ಬ ಬ್ರಾಹ್ಮಣನಿಗೂ ಒಂದು ಆನೆ, ಒಂದು ತೇರು ಒಂದು ಕುದುರೆ ಒಂದು ಭಾರ ಚಿನ್ನ, ಎರಡು ಭಾರ ಬೆಳ್ಳಿ ಇವುಗಳನ್ನು ಸಂತುಷ್ಟನಾದ ಆ ಯಾದವೇಶ್ವರನು ದಕ್ಷಿಣೆಯಾಗಿ ಕೊಟ್ಟನು.

೨೧. ಓ ರಾಜೇಂದ್ರ! ಆ ಯಾಗಸಮಯದಲ್ಲಿ ಕೃಷ್ಣ ನಿವಾಸವಾದ ದ್ವಾರಕೆಯು ದೇವಲೋಕದಲ್ಲಿನ ಅಮರಾವತಿಯಂತೆ ಶೋಭಿಸುತ್ತಿತ್ತಷ್ಟೆ! ಆಗ ಸ್ತುತಿಪಾಠಕರಾದ ವಂಧಿಮಾಗಧರೂ, ಸೂತರೂ, ಗಾಯಕರೂ, ವಾರಾಂಗನೆಯರೂ ಅಲ್ಲಿಗೆ ಹೇರಳವಾಗಿ ಬಂದಿದ್ದರು.

ತದಾ ನೃಪದ್ವಾರಿ ಮಹೋತ್ಸವೋಽಭೂ-
ನ್ಮೃದಂಗವೀಣಾಮುರಯಷ್ಟಿವೇಣುಭಿಃ ।
ಸುತಾಲಶಂಖಾನಕದುಂದುಭಿಸ್ವನೈಃ
ಸಂಗೀತನೃತ್ಯಾದಿಕವಾದ್ಯಗೀತಕೈಃ ॥ ೨೨ ॥

ಜಗುಃ ಸುಕಂಠೈರ್ನನೃತುಃ ಸುತಾಲೈಃ
ಸಂಗೀತಗೀತಾಪ್ಸರಸಾಮುಗೀತೈಃ ।
ಕೌಸುಂಭವಸ್ತ್ರಾಣಿ ವಿಚಾಲಯಂತ್ಯಃ
ಸಂಗೀತನೃತ್ಯೇನ ಪರಿಸ್ಫುರಂತ್ಯಃ ॥ ೨೩ ॥

ಬಂದೀಜನಾ ಮಾಗಧಗಾಯಕಾಶ್ಚ
ಯೇ ಚಾಗತಾಸ್ತೇಭ್ಯ ಉಪಾಗತೇಭ್ಯಃ ।
ಪ್ರಾದಾದ್ಧಿರಣ್ಯಂ ಬಹು ರತ್ನವೃಂದಂ
ತಥಾಗತಾ ಹ್ಯಪ್ಸರಸಶ್ಚ ತಾಭ್ಯಃ ॥ ೨೪ ॥

---

೨೨. ಆ ವಂದಿಮಾಗಧರೂ, ಗಾಯಕರೂ ಉಗ್ರಸೇನನ ಅರಮನೆಯ ಬಾಗಿಲಮುಂದೆ ವೀಣೆ, ಕೊಳಲು, ಮೃದಂಗ, ಮುರವೆಂಬ ವಾದ್ಯಭೇದ, ತಾಲ, ಶಂಖ, ಮದ್ದಲೆ, ನಗಾರಿ ಮೊದಲಾದ ವಾದ್ಯಗಳಿಂದಲೂ, ಬಾಯಿಹಾಡುಗಾರಿಕೆಯಿಂದಲೂ ಪಟ್ಟಣಿಗರಿಗೆ ಒಂದು ದೊಡ್ಡ ಹಬ್ಬವನ್ನುಂಟುಮಾಡುತ್ತಿದ್ದರು.

೨೩. ಆ ವಾರಾಂಗನೆಯರೂ ಸಹ ತಮ್ಮ ಇಂಪಾದ ಕಂಠದಿಂದ ಮಧುರವಾಗಿ ಹಾಡುತ್ತಾ ತಾಲಾನುಗುಣವಾಗಿ ಮೈಕೈಗಳನ್ನು ಕುಲುಕಿಸುತ್ತಾ, ಉಟ್ಟಿರುವ ಕೌಸುಂಭವಸ್ತ್ರವು ಅಲುಗಾಡುವಂತೆ ಸಂಗೀತಮಯವಾದ ನೃತ್ಯವನ್ನು ಮನೋಹರವಾಗಿ ಪ್ರದರ್ಶಿಸುತ್ತಿದ್ದರು.

೨೪-೨೫. ಹೀಗೆ ಯಾಗಸಮಾರಂಭದಲ್ಲಿ ನಾನಾದೇಶಗಳಿಂದ ಬಂದು, ಆ ನಗರದ ನಿವಾಸಿಗಳನ್ನು ತಮ್ಮ ಗಾನ, ನೃತ್ಯಗಳಿಂದ ಸಂತೋಷಪಡಿಸಿದ ವಂದಿಗಳಿಗೂ, ಮಾಗಧರಿಗೂ, ಗಾಯಕರಿಗೂ ಅಪ್ಸರೆಯರಂತೆ ಸಕ

ಸೂತೇಭ್ಯೋ ಮಾಗಧೇಭ್ಯಶ್ಚ ಸರ್ವೇಭ್ಯೋ ಬಹುಲಂ ಧನಂ ।
ವವರ್ಷ ಘನವದ್ರಾಜಾ ಹಯಮೇಧೇ ಪ್ರಹರ್ಷಿತಃ ॥ ೨೫ ॥

ತತ್ಪಶ್ಚಾದ್ಯಾದವೇಂದ್ರಸ್ತು ಹ್ಯುಗ್ರಸೇನೋ ಮಹೀಶ್ವರಃ ।
ನಿಯುತಂ ತುರಗಾಣಾಂ ಚ ಸಹಸ್ರಂ ಹಸ್ತಿನಾಂ ತಥಾ ॥ ೨೬ ॥

ಶಿಬಿಕಾನಾಂ ಶತಂ ಚೈವ ಕುಂಡಲೇ ಕಟಕಾನಿ ಚ ।
ತ್ರಿಂಶದ್ಭಾರಂ ಸುವರ್ಣಾನಾಂ ಭೂಪೇ ಭೂಪೇ ದದೌ ಮುದಾ ॥ ೨೭ ॥

ದ್ವಿಗುಣೇನ ಯದೂನ್ಸರ್ವಾನ್ನಂದಾದೀಂಶ್ಚೈವ ಭೂಪತಿಃ ।
ಯಶೋದಾದ್ಯಾಶ್ಚ ಗೋಪ್ಯಶ್ಚ ದೇವಕ್ಯಾದ್ಯಾ ಯದುಸ್ತ್ರಿಯಃ ॥ ೨೮ ॥

ರುಕ್ಮಿಣ್ಯಾದ್ಯಾ ರಾಧಿಕಾದ್ಯಾಃ ಪಟ್ಟರಾಜ್ಞ್ಯೋ ಹರೇರಪಿ ।
ದಿವ್ಯಾಂಬರೈರಲಂಕಾರೈ ರಾಜ್ಞಾ ಸರ್ವಾಶ್ಚ ತೋಷಿತಾಃ ॥ ೨೯ ॥

ಲರ ಮನಸ್ಸನ್ನೂ ಸೆಳೆದ ವಾರಾಂಗನೆಯರಿಗೂ, ಸೂತರಿಗೂ, ಸುಪ್ರೀತನಾದ ಆ ಉಗ್ರಸೇನನು ಯಥೇಚ್ಛವಾದ ಧನವನ್ನೂ, ಚಿನ್ನವನ್ನೂ, ಹೇರಳವಾದ ರತ್ನ ರಾಶಿಗಳನ್ನೂ ಇತ್ತು ಸನ್ಮಾನಿಸಿದನು.

೨೬-೨೭. ಅನಂತರ ಆ ಯಾದವೇಶ್ವರನು ಯಜ್ಞಕ್ಕೆ ಬಂದಿದ್ದ ಪ್ರತಿಯೊಬ್ಬ ರಾಜರಿಗೂ ಹತ್ತುಲಕ್ಷ ಕುದುರೆಗಳನ್ನೂ, ಒಂದುಸಾವಿರ ಆನೆಗಳನ್ನೂ, ಒಂದುನೂರು ಮೇನೆ, ಪಲ್ಲಕ್ಕಿಗಳನ್ನೂ, ಕುಂಡಲಗಳನ್ನೂ, ಅಂದಿಗೆಗಳನ್ನೂ, ಮೂವತ್ತು ಭಾರಗಳಷ್ಟು ಚಿನ್ನವನ್ನೂ ಸಂತೋಷದಿಂದ ಇತ್ತನು.

೨೮-೨೯. ಇದಕ್ಕೆರಡರಷ್ಟು ಪ್ರತಿಯೊಬ್ಬ ಯಾದವರಿಗೂ, ನಂದಾದಿ ಗೋಪರಿಗೂ ಬಹುಮಾನವಿತ್ತು ಸನ್ಮಾನಿಸಿದನು. ಅನಂತರ ಯಶೋದೆ ಮೊದಲಾದ ಗೋಪಿಯರನ್ನೂ, ದೇವಕೀ ಮೊದಲಾದ ಯಾದವ ಸ್ತ್ರೀಯರನ್ನೂ, ರುಕ್ಮಿಣಿ, ರಾಧೆ ಮೊದಲಾದ ಶ್ರೀಕೃಷ್ಣನ ಪಟ್ಟದ ರಾಣಿಯರನ್ನೂ ಸೊಗಸಾದ ವಸ್ತ್ರಾಭರಣಗಳಿಂದ ಸಂತೋಷಪಡಿಸಿದನು.

ಪುನರ್ದದೌ ಚ ಗರ್ಗಾಯ ರಾಜಾ ಗ್ರಾಮಶತಂ ಮುದಾ ।
ಸಸರ್ಗೋ ಬ್ರಾಹ್ಮಣೇಭ್ಯಶ್ಚ ಪ್ರದದೌ ಹಿ ಕ್ರಮಾದೃಷಿಃ ॥ ೩೦ ॥

ತತಃ ಸಂಪೂಜಯಾಮಾಸ ಕೃಷ್ಣಂ ಸಂಕರ್ಷಣಾನ್ವಿತಂ ।
ವಸ್ತ್ರಾಲಂಕಾರತಿಲಕೈಃ ಸ್ರಗ್ಭಿರ್ನೀರಾಜನಾದಿಭಿಃ ॥ ೩೧ ॥

ಉವಾಚ ಕೃಷ್ಣಃ ಪ್ರಹಸನ್ಮಹ್ಯಂ ರಾಜನ್ಮಹಾಧ್ವರೇ ।
ಸಮರ್ಥೇನ ತ್ವಯಾ ಹ್ಯತ್ರ ನ ದತ್ತಂ ಕಿಂಚಿದೇವ ಹಿ ॥ ೩೨ ॥

ಇತಿ ಶ್ರುತ್ವಾ ನೃಪಃ ಪ್ರಾಹ ರಾಮೇಣ ಸಹ ಮಾಧವ ।
ಯಥೋಕ್ತಾಂ ದಕ್ಷಿಣಾಂ ಶೀಘ್ರಂ ಗೃಹಾಣ ಜಗದೀಶ್ವರ ॥ ೩೩ ॥

॥ ಗರ್ಗ ಉವಾಚ ॥

ಇತ್ಯುಕ್ತ್ವಾ ಪ್ರದದೌ ರಾಜಾ ಹರ್ಷಿತಃ ಪ್ರೇಮವಿಹ್ವಲಃ ।
ಫಲಂ ಸರ್ವಂ ಕೃಷ್ಣಕರೇ ರಾಜಸೂಯಾಶ್ವಮೇಧಯೋಃ ॥ ೩೪ ॥

---

೩೦. ಅನಂತರ ಆ ಉಗ್ರಸೇನನು ಪುನಃ ತನ್ನ ಪುರೋಹಿತನಾದ ಗರ್ಗಮುನಿಗೆ ಒಂದುನೂರು ಗ್ರಾಮಗಳನ್ನು ದಾನಮಾಡಿದನು. ಆಗ ಆ ಮುನಿಯು ಅವೆಲ್ಲವನ್ನೂ ಬ್ರಾಹ್ಮಣರಿಗೆ ಕೊಟ್ಟುಬಿಟ್ಟನು.

೩೧. ಬಳಿಕ ಉಗ್ರಸೇನನಿಗೂ, ಬಲರಾಮ, ಶ್ರೀಕೃಷ್ಣನಿಗೂ ದಿವ್ಯವಾದ ವಸ್ತ್ರಗಳನ್ನೂ, ಆಭರಣಗಳನ್ನೂ, ತಿಲಕಗಳನ್ನೂ, ಮಾಲೆಗಳನ್ನೂ ನೀರಾಜನಾದಿಗಳನ್ನೂ ಇತ್ತು ಸತ್ಕರಿಸಿದನು.

೩೨. ಆಗ ಕೃಷ್ಣನು ನಗುತ್ತಾ "ಓ ರಾಜೇಂದ್ರ! ನೀನು ಈ ಭಾರಿ ಯಜ್ಞವನ್ನೇ ಮಾಡಿದೆ. ಆದರೆ ಸರ್ವಸಮರ್ಥನಾಗಿದ್ದರೂ ನೀನು ನನಗೇನನ್ನೂ ಕೊಡಲಿಲ್ಲವಲ್ಲ?" ಎಂದನು.

೩೩-೩೪. ಅದನ್ನು ಕೇಳಿ ಆ ಉಗ್ರಸೇನನು, ಹೇ ಮಾಧವ! ಜಗದೀಶ್ವರ! ನೀನೀ ಬಲರಾಮನೊಡನೆ ಬೇಗನೆ ಯಥೋಕ್ತವಾದ ದಕ್ಷಿಣೆಯನ್ನು ಪಡೆಯುವೆಯಂತೆ, ಎಂದು ಹೇಳಿ, ಪ್ರೇಮವಶದಿಂದ ವಿಹ್ವಲನಾಗಿ ತಾನು ಮಾಡಿದ ರಾಜಸೂಯ, ಅಶ್ವಮೇಧಯಾಗಗಳ ಫಲವೆಲ್ಲವನ್ನೂ "ಶ್ರೀಕೃಷ್ಣಾರ್ಪಣಮಸ್ತು" ಎಂದು ಆ ಶ್ರೀಕೃಷ್ಣನ ಕೈಯಲ್ಲಿ ಧಾರೆಯೆರದುಕೊಟ್ಟನು.

ತದಾ ಜಯಜಯಾರಾವೋ ದ್ವಾರಕಾಯಾಂ ಬಭೂವ ಹ ।
ಸದ್ಯಸ್ಸುರಾಶ್ಚ ಸಂತುಷ್ಟಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೩೫ ॥

ಸರ್ವಾಶ್ಚ ದೇವತಾಸ್ತುಷ್ಟಾಃ ಪ್ರಾಪ್ತಭಾಗಾ ದಿವಂ ಗತಾಃ ।
ರಕ್ಷೋ ದೈತ್ಯಾ ದಂಷ್ಟ್ರಿಣಶ್ಚ ಖಗಾ ಮರ್ಕಾ ಬಿಲೇಶಯಾಃ ॥ ೩೬ ॥

ಶೈಲಾ ಗಾವೋ ವೃಕ್ಷಸಂಘಾ ನದ್ಯಸ್ತೀರ್ಥಾನಿ ಸಿಂಧವಃ ।
ಸಂತುಷ್ಟಾಃ ಪ್ರಾಪ್ತಭಾಗಾ ಯೇ ಸರ್ವೇ ಸ್ವಂ ಸ್ವಂ ಗೃಹಂ ಗತಾಃ ॥೩೭॥

ಪೂಜಿತಾ ದಾನಮಾನಾಭ್ಯಾಂ ರಾಜಾನೋ ಯೇ ಸಮಾಗತಾಃ ।
ಜಗ್ಮುಃ ಸ್ವಂ ಸ್ವಂ ಗೃಹಂ ಸೈನ್ಯೈಃ ಕಂಪಯಂತೋ ಮಹೀತಲಂ ॥೩೮॥

---

೩೫. ಆಗ ದ್ವಾರಕೆಯಲ್ಲಿ ಎಲ್ಲೆಲ್ಲೂ ಜಯಜಯ ಎಂಬ ಧ್ವನಿಗಳಾದುವು. ಸ್ವರ್ಗಲೋಕದಿಂದ ದೇವತೆಗಳು ಪುಷ್ಪವರ್ಷವನ್ನು ಮಾಡಿದರು.

೩೬. ಓ ರಾಜೇಂದ್ರ ! ಆ ಯಾಗದಲ್ಲಿ ತಮ್ಮ ತಮ್ಮ ಹವಿರ್ಭಾಗಗಳನ್ನು ಪಡೆದ ಸಕಲ ದೇವತೆಗಳೂ ಸಂತೋಷಭರಿತರಾಗಿ ತಮ್ಮ ನಿವಾಸವಾದ ಸ್ವರ್ಗಲೋಕಕ್ಕೆ ತೆರಳಿದರು. ಅದರಂತೆಯೇ ರಾಕ್ಷಸರು, ದೈತ್ಯರು, ಕರಡಿಗಳು, ಪಕ್ಷಿಗಳು, ವಾನರರು, ಸರ್ಪಗಳು ಸಹ ತಮ್ಮ ಲೋಕಗಳಿಗೆ ಹೊರಟರು.

೩೭. ಮತ್ತು ಪರ್ವತಗಳು, ಗೋವುಗಳು, ವೃಕ್ಷಜಾತಿಗಳು, ಸಮುದ್ರಗಳು ಮೊದಲಾಗಿ ಯಾರು ಯಾರು ಬಂದಿದ್ದರೋ ಅವರೆಲ್ಲರೂ ತಮ್ಮ ತಮ್ಮ ಭಾಗಗಳನ್ನು ಸ್ವೀಕರಿಸಿ ತಂತಮ್ಮ ನಿವಾಸಗಳಿಗೆ ತೆರಳಿದರು.

೩೮. ಅದರಂತೆಯೇ ಆ ಯಜ್ಞಕ್ಕೆ ಬಂದಿದ್ದ ರಾಜರೆಲ್ಲರೂ ದಾನಗಳಿಂದಲೂ, ಮಾನ ಮರ್ಯಾದೆಗಳಿಂದಲೂ ಸತ್ಕೃತರಾಗಿ ತಮ್ಮ ಸೇನೆಗಳೊಡನೆ ಹೊರಟು ಭೂಮಂಡಲವನ್ನೇ ನಡುಗಿಸುವಂತೆ ನಡೆಯುತ್ತಾ ತಮ್ಮ ಊರುಗಳಿಗೆ ತೆರಳಿದರು.

ಸರ್ವೇ ಗೋಪಾಶ್ಚ ನಂದಾದ್ಯಾ ಯಶೋದಾದ್ಯಾ ವ್ರಜಸ್ತ್ರಿಯಃ ।
ಕೃಷ್ಣೇನ ಪೂಜಿತಾ ರಾಜನ್ವಿರಹಾರ್ತಾ ವ್ರಜಂ ಯಯುಃ ॥ ೩೯ ॥

ಏವಂ ರಾಜಾ ಯಾದವೇಂದ್ರೋ ಮನೋರಥಮಹಾರ್ಣವಂ ।
ದುಸ್ತರಂ ಚ ಸಮುತ್ತೀರ್ಯ ಹರಿಣಾಸೀದ್ಗತವ್ಯಥಃ ॥ ೪೦ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ವಿಶ್ವಭೋಜ್ಯದಕ್ಷಿಣಾವರ್ಣನಂ ನಾಮ
ಸಪ್ತಪಂಚಾಶತ್ತಮೋಽಧ್ಯಾಯಃ

---

೩೯. ಹಾಗೆಯೇ ಕೃಷ್ಣನಿಂದ ಸತ್ಕರಿಸಲ್ಪಟ್ಟ ನಂದ ಮೊದಲಾದ ಎಲ್ಲ ಗೋಪರೂ, ಯಶೋದೆ ಮೊದಲಾದ ವ್ರಜಸ್ತ್ರೀಯರೂ (ಗೋಪಾಂಗನೆಯರು) ಆತನನ್ನು ಅಗಲಲಾರದೆ ದುಃಖದಿಂದ ಗೋಕುಲಕ್ಕೆ ಹೊರಟರು.

೪೦. ಓ ರಾಜೇಂದ್ರ! ಈ ರೀತಿಯಾಗಿ ಶ್ರೀಕೃಷ್ಣನ ಅನುಗ್ರಹದಿಂದ ಯದುಚಕ್ರವರ್ತಿಯಾದ ಆ ಉಗ್ರಸೇನನು ಕೊನೆಮುಟ್ಟಲು ಸಾಧ್ಯವಾಗದಿದ್ದ ತನ್ನ ಮನೋರಥವೆಂಬ ಅಪಾರವಾದ ಸಮುದ್ರವನ್ನು ದಾಟಿ ತನ್ನ ಕೊರತೆಯೆಲ್ಲ ವನ್ನೂ ನೀಗಿ ಸುಖದಿಂದಿದ್ದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ವಿಶ್ವಭೋಜ್ಯ ದಕ್ಷಿಣಾವರ್ಣನವೆಂಬ ಐವತ್ತೇಳನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಅಷ್ಟಪಂಚಾಶತ್ತಮೋಽಧ್ಯಾಯಃ

॥ ಗರ್ಗ ಉವಾಚ ॥

ತತಃ ಸರ್ವೇ ಸಮಾಹೂತಾಃ ಶ್ರೀಕೃಷ್ಣೇನ ಮಹಾತ್ಮನಾ ।
ವೈಕುಂಠದಾಯಯುಃ ಶೀಘ್ರಂ ಕಂಸಾದ್ಯಾ ನವ ಭ್ರಾತರಃ ॥ ೧ ॥

ದೃಷ್ಟ್ವಾ ತಾನಾಗತಾನ್ಸರ್ವೇ ವಿಸ್ಮಯಂ ಪರಮಂ ಯಯುಃ ।
ತೇ ಸಮಾಗತ್ಯ ಶ್ರೀಕೃಷ್ಣಂ ಬಲಂ ಪ್ರದ್ಯುಮ್ನಮೇವ ಚ ॥ ೨ ॥

ಐವತ್ತೆಂಟನೆಯ ಅಧ್ಯಾಯವು

೧. ಗರ್ಗಮುನಿಯು ಹೇಳತೊಡಗಿದನು :—ರಾಜೇಂದ್ರ ! ಕೇಳು. ಅನಂತರ ಮಹಾತ್ಮನಾದ ಶ್ರೀಕೃಷ್ಣನು ವೈಕುಂಠದಲ್ಲಿದ್ದ ಕಂಸ ಮೊದಲಾದ ಒಂಭತ್ತುಮಂದಿ ಸೋದರರನ್ನು ಬರುವಂತೆ ಅಪ್ಪಣೆ ಮಾಡಲು ಅವರೆಲ್ಲರೂ ಬೇಗನೆ ದ್ವಾರಕೆಗೆ ಬಂದರು.

೨. ಅವರು ಬಂದುದನ್ನು ಕಂಡು ಎಲ್ಲರೂ ಪರಮಾಶ್ಚರ್ಯಭರಿತರಾದರು. ಅವರು ಅಲ್ಲಿಗೆ ಬಂದೊಡನೆಯೇ ಕೃಷ್ಣನನ್ನೂ ಬಲರಾಮನನ್ನೂ ಪ್ರದ್ಯುಮ್ನನನ್ನೂ,

ಅನಿರುದ್ಧಂ ಚ ಕಂಸಾದ್ಯಾ ನೇಮುಃ ಸರ್ವೇ ಪೃಥಕ್ಪೃಥಕ್ ।
ದದರ್ಶ ಚೋಗ್ರಸೇನಸ್ತು ಸುಧರ್ಮಾಯಾಂ ಸುತಾನ್ನೃಪ ॥ ३ ॥

ಶಕ್ರಸಿಂಹಾಸನಸ್ಥೋ ವೈ ರುಚಿಮತ್ಯಾ ಸಮನ್ವಿತಃ ।
ಕಂಸಾದೀನ್ಸ್ವಸುತಾನ್ಪ್ರೀತೋ ಕೃಷ್ಣಾಕಾರಾಂಶ್ಚತುರ್ಭುಜಾನ್ ॥ ೪ ॥

ಶಂಖಚಕ್ರಗದಾಪದ್ಮೈರ್ಭೂಷಿತಾನ್ಪೀತವಾಸಸಃ ।
ಕೃಷ್ಣಪಾರ್ಶ್ವೇ ಸ್ಥಿತಾನ್ಪುತ್ರಾನಾಹ್ವಯಾಮಾಸ ಭೂಪತಿಃ ॥ ೫ ॥

ತತಃ ಕೃಷ್ಣಸ್ತು ಭಗವಾನ್ಕಂಸಾದೀನ್ಪ್ರಾಹ ಸಸ್ಮಿತಃ ।
ಪಶ್ಯ ಸ್ವಮಾತಾಪಿತರೌ ಯುಷ್ಮಾಕಂ ದರ್ಶನೋತ್ಸುಕೌ ॥ ೬ ॥

ಗತ್ವಾ ಸಮೀಪೇ ಹೇ ವೀರಾ ಯೂಯಂ ನಮತ ಭಕ್ತಿತಃ ।
ಇತಿ ಕೃಷ್ಣಸ್ಯ ವಚನಂ ಕೃಷ್ಣಭೃತ್ಯಾ ನಿಶಮ್ಯ ಚ ॥ ೭ ॥

೩-೪. ಅನಿರುದ್ಧನನ್ನೂ ಬೇರೆಬೇರೆಯಾಗಿ ನಮಸ್ಕರಿಸಿದರು. ಆಗ ಸುಧರ್ಮಾ ಎಂಬ ದೇವಸಭೆಯ ನಡುವೆ ರುಚಿಮತಿಯೆಂಬ ತನ್ನ ಭಾರ್ಯೆಯೊಡನೆ ಇಂದ್ರನ ಸಿಂಹಾಸನದಲ್ಲಿ ಮಂಡಿಸಿದ್ದ ಉಗ್ರಸೇನನು ಸಂತೋಷದಿಂದ ತನ್ನ ಮಕ್ಕಳಾದ ಕಂಸಾದಿಗಳನ್ನು ಕಂಡನು. ಅವರೆಲ್ಲರೂ ಕೃಷ್ಣನಂತೆಯೇ ಆಕಾರವುಳ್ಳವರು. ಒಬ್ಬೊಬ್ಬರಿಗೂ ನಾಲ್ಕು ತೋಳುಗಳು.

೫. ಅವುಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿ ಪೀತಾಂಬರವನ್ನುಟ್ಟಿದ್ದರು. ಇಂತಹ ವೇಷದಿಂದೊಪ್ಪುತ್ತಾ ಕೃಷ್ಣನ ಪಕ್ಕದಲ್ಲಿ ನಿಂತಿರುವ ಆ ಮಕ್ಕಳನ್ನು ನೋಡಿ ಉಗ್ರಸೇನನು ಕರೆದನು.

೬-೭. ಆಗ ಭಗವಂತನಾದ ಶ್ರೀಕೃಷ್ಣನು ಕಂಸ ಮೊದಲಾದ ಸೋದರರನ್ನು ಕುರಿತು, ಎಲೈ ವೀರರಿರಾ! ನಿಮ್ಮನ್ನು ನೋಡಬೇಕೆಂದು ತವಕಪಡುತ್ತಿರುವ ನಿಮ್ಮ ತಾಯಿತಂದೆಗಳನ್ನು ಮೊದಲು ಕಂಡು ಹತ್ತಿರಕ್ಕೆ ಹೋಗಿ ಭಕ್ತಿಯಿಂದ ಅವರಿಗೆ ನಮಸ್ಕಾರ ಮಾಡಿರಿ, ಎಂದು ನುಡಿಯಲು ಆ ಕೃಷ್ಣಸೇವಕರಾದ—

ಊಚುಃ ಪ್ರಹರ್ಷಿತಾಃ ಸರ್ವೇ ಕಂಕನ್ಯಗ್ರೋಧಕಾದಯಃ ।

॥ ಕಂಸಾದ್ಯಾ ಊಚುಃ ॥

ಈದೃಶಾಃ ಪಿತರೋಽಸ್ಮಾಕಮಾಪ್ಯಶ್ಯೋ ಮಾತರಶ್ಚ ವೈ ॥ ೮ ॥

ಬಹವಶ್ಚಾಭವನ್ನಾಥ ಭ್ರಮತಾಂ ತವ ಮಾಯಯಾ ।
ಹರಿಃ ಪಿತಾ ತು ಜೀವಸ್ಯ ಶ್ರುತಿರೇಷಾ ಸನಾತನೀ ॥ ೯ ॥

ತಸ್ಮಾಚ್ಚಾನ್ಯಂ ನ ಪಶ್ಯಾಮೋ ವಯಂ ತ್ವನ್ನಿಕಟೇ ಸ್ಥಿತಾಃ ।
ಪುರಾ ವಿಲೋಕಿತಸ್ತ್ವಂ ತು ಸಂಗ್ರಾಮೇ ಬಲಸಂಯುತಃ ॥ ೧೦ ॥

ಪಶ್ಚಾಜ್ಜಾತೌ ದ್ವಾರಕಾಯಾಂ ನ ದೃಷ್ಟೌ ಕಾರ್ಷ್ಣಿಕಾರ್ಷ್ಣಿಜೌ ।
ತಸ್ಮಾದ್ದ್ರಷ್ಟುಂ ಚತುರ್ವ್ಯೂಹಂ ವಯಮತ್ರ ಸಮಾಗತಾಃ ॥ ೧೧ ॥

೮-೯. ಕಂಸ, ಕಂಕ, ನ್ಯಗ್ರೋಧ ಮೊದಲಾದ ಆ ಸೋದರರೆಲ್ಲರೂ ನಗುನಗುತ್ತಾ ಆ ಪರಮಾತ್ಮನನ್ನು ಕುರಿತು, ಹೇ ಪ್ರಭು ! ನಿನ್ನ ಮಾಯೆಗೆ ಸಿಕ್ಕಿ ತೊಳಲುತ್ತಿರುವಂಥ ನಮಗೆ ಇಂತಹ ತಂದೆಗಳೂ, ಇಂತಹ ತಾಯಿಯರೂ ಬೇಕಾದಷ್ಟು ಮಂದಿ ಆಗಿಹೋಗಿರುವರು. ಜೀವವೆನಿಸಿದವನಿಗೆ ಹರಿಯೇ ತಂದೆ ಯೆಂದು ವೇದಗಳು ಬಹು ಹಿಂದಿನಿಂದಲೂ ತಿಳಿಸುತ್ತಿರುವುವು.

೧೦. ಆದುದರಿಂದ ನಿನ್ನ ಬಳಿಯಲ್ಲಿಯೇ ಇರುವ ನಾವು ನಿನ್ನನ್ನು ಹೊರತು ಮತ್ತೇನನ್ನೂ ಕಾಣೆವು. ಹಿಂದೆ ರಣರಂಗದಲ್ಲಿ ನಿನ್ನನ್ನು ಬಲರಾಮ ನೊಡನೆ ಕಂಡಿದ್ದೆವು. (ಅಷ್ಟುಹೊರತು)

೧೧. ಇದಾದನಂತರ ದ್ವಾರಕೆಯಲ್ಲಿ ಹುಟ್ಟಿದ ನಿನ್ನ ಪುತ್ರನಾದ ಪ್ರದ್ಯುಮ್ನನನ್ನೂ, ಆತನ ಮಗನಾದ ಅನಿರುದ್ಧನನ್ನೂ ನಾವು ಕಾಣೆವು. ಆದು ದರಿಂದಲೇ ನಾವು ಚತುರ್ವ್ಯೂಹಮೂರ್ತಿಗಳಾದ ನಿಮ್ಮನ್ನು ಕಾಣಲು ಇಲ್ಲಿಗೆ ಬಂದಿರುವೆವು.

ಶ್ರೀಕೃಷ್ಣೋ ಬಲಭದ್ರಶ್ಚ ಶ್ರೀಪ್ರದ್ಯುಮ್ನ ಉಷಾಪತಿಃ ।
ಪರಿಪೂರ್ಣತಮಾ ಏತೇ ಹ್ಯಹೋಽಸ್ಮಾಭಿರ್ವಿಲೋಕಿತಾಃ ॥ ೧೨ ॥

ಕೇನ ಪೂರ್ವೇಣ ಪುಣ್ಯೇನ ದೃಷ್ಟೋ ಯೋ ದುರ್ಲಭಃ ಸತಾಂ ।
ಪರಿಪೂರ್ಣಶ್ಚತುರ್ವ್ಯೂಹೋ ನ ಜಾನೀಮೋ ವಯಂ ಕಿಲ ॥ ೧೩ ॥

ಹೇ ಸಂಕರ್ಷಣ ಹೇ ಕೃಷ್ಣ ಹೇ ಪ್ರದ್ಯುಮ್ನ ಉಷಾಪತೇ ।
ಮೂಢಾನಾಂ ನಃ ಕುಬುದ್ಧೀನಾಮಪರಾಧಂ ಕ್ಷಮಸ್ವ ಚ ॥ ೧೪ ॥

ಗಚ್ಛ ಗೋವಿಂದ ವೈಕುಂಠಂ ಶೂನ್ಯಂ ತೇ ಧಾಮ ಸುಂದರಂ ।
ಧನ್ಯಾ ತ್ವಯಾ ದ್ವಾರಕಾ ವಾ ವೈಕುಂಠಾಚ್ಚ ಕೃತಾಧಿಕಾ ॥ ೧೫ ॥

ಯದರ್ಚಿತಂ ಬ್ರಹ್ಮಶಚೀಶವಹ್ನಿಭಿ-
ರಾದಿತ್ಯಗೌರೀಶಮರುದ್ಯಮಾದಿಭಿಃ ।
ಪೌಲಸ್ತ್ಯತಾರೇಶಜಲೇಶಪೂಜಿತಂ
ಪಾದಾರವಿಂದಂ ಸತತಂ ಭಜಾಮಹೇ ॥ ೧೬ ॥

---

೧೨. ಶ್ರೀಕೃಷ್ಣ, ಬಲರಾಮ, ಪ್ರದ್ಯುಮ್ನ, ಅನಿರುದ್ಧರೆಂಬೀ ನಾಲ್ಕು ಮಂದಿ ವ್ಯೂಹಮೂರ್ತಿಗಳು ಪರಿಪೂರ್ಣಸ್ವರೂಪರೆನಿಸಿರುವರು. ಇಂಥವರನ್ನು ನಾವಿಂದು ಸಂದರ್ಶಿಸಿರುವೆವು.

೧೩. ಸತ್ಪುರುಷರೂ ಸಹ ಸಂದರ್ಶಿಸಲು ದುರ್ಲಭವೆನಿಸಿದ ಪರಿಪೂರ್ಣ ವಾದೀ ಚತುರ್ವ್ಯೂಹವನ್ನು ಸಂದರ್ಶಿಲು ಹಿಂದೆ ನಾವು ಎಂತಹ ಪುಣ್ಯವನ್ನು ಮಾಡಿದ್ದೆವೋ ಅದನ್ನು ಅರಿಯೆವು.

೧೪. ಹೇ ಸಂಕರ್ಷಣ, ಹೇ ಕೃಷ್ಣ, ಹೇ ಪ್ರದ್ಯುಮ್ನ, ಹೇ ಅನಿರುದ್ಧ, ಏನೂ ಅರಿಯದವರೂ, ದುರ್ಬುದ್ಧಿಯುಳ್ಳವರೂ ಆದ ನಮ್ಮ ತಪ್ಪನ್ನು ಕ್ಷಮಿಸಿರಿ.

೧೫. ಹೇ ಗೋವಿಂದ! ನೀನು ಬೇಗನೆ ವೈಕುಂಠಕ್ಕೆ ತೆರಳು. ಆ ಸುಂದರವಾದ ಧಾಮವು ನೀನಿಲ್ಲದೆ ಪಾಳುಬಿದ್ದಂತಾಗಿರುವುದು ಈ ದ್ವಾರಕೆಯೇ ಬಹು ಧನ್ಯವಾಗಿರುವುದು. ಏಕೆಂದರೆ ನೀನು ಇಲ್ಲಿ ನೆಲಸಿರುವೆ. ಆದುದರಿಂದ ಇದು ವೈಕುಂಠಕ್ಕಿಂತಲೂ ಹೆಚ್ಚಿನದೆನಿಸಿರುವುದು.

೧೬. ಹೇ ನಾಥ! ಯಾವುದನ್ನು ಬ್ರಹ್ಮ, ಇಂದ್ರ, ಅಗ್ನಿ, ಸೂರ್ಯ,

ಮುನೀಂದ್ರಲಕ್ಷ್ಮೀಸುರಭಕ್ತಸಾತ್ವತೈಃ
ಸುಪೂಜಿತಂ ಚಂದನಗಂಧಧೂಪಕೈಃ ।
ಲಾಜಾಕ್ಷತೈಶ್ಚಾಂಕುರಪೂಗಚರ್ಚಿತಂ
ಪಾದಾರವಿಂದಂ ಸತತಂ ಭಜಾಮಹೇ ॥ ೧೭ ॥

॥ ಗರ್ಗ ಉವಾಚ ॥

ಇತ್ಯುಕ್ತ್ವಾ ತೇ ಚ ಕಂಸಾದ್ಯಾ ವೈಕುಂಠಂ ಪ್ರಯಯುರ್ನೃಪ ।
ಸರ್ವೇಷಾಂ ಪಶ್ಯತಾಂ ರಾಜಾ ವಿಸ್ಮಿತೋಽಭೂತ್ಸಭಾರ್ಯಯಾ ॥ ೧೮ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ಕಂಸಾದಿದರ್ಶನಂ ನಾಮಾಷ್ಟ-
ಪಂಚಾಶತ್ತಮೋಽಧ್ಯಾಯಃ

ಶಿವ, ವಾಯು, ಯಮ, ಕುಬೇರ, ಗುರು, ವರುಣ ಮೊದಲಾದವರೂ ಭಕ್ತಿಯಿಂದ ಆರಾಧಿಸುವರೋ ಆ ನಿನ್ನ ಪಾದಾರವಿಂದವನ್ನು ಎಂದೆಂದಿಗೂ ಸೇವಿಸುವೆವು.

೧೭. ಮಹಾ ಮಹಾ ಯೋಗಿಗಳೂ, ಲಕ್ಷ್ಮೀದೇವಿಯು, ದೇವತೆಗಳೂ, ಭಕ್ತರೂ, ಸಾತ್ವತರೂ ಸಹ ಚಂದನಾದಿಗಂಧಗಳಿಂದಲೂ, ಧೂಪಗಳಿಂದಲೂ, ಲಾಜಾಕ್ಷತಗಳಿಂದಲೂ, ಚಿಗುರುಗಳಿಂದಲೂ, ಯಾವುದನ್ನು ಅರ್ಚನೆ ಮಾಡಿರುವರೋ ಆ ನಿನ್ನ ಪಾದಾರವಿಂದವನ್ನು ಎಂದೆಂದಿಗೂ ಆರಾಧಿಸುವೆವು, ಎಂದು ನುಡಿದರು.

೧೮. ಹೇ ರಾಜೇಂದ್ರ! ಈ ರೀತಿಯಾಗಿ ಆ ಕಂಸಾದಿ ಸೋದರರು ನುಡಿದು ಎಲ್ಲರೂ ನೋಡುತ್ತಿರುವಂತೆಯೇ ವೈಕುಂಠಕ್ಕೆ ತೆರಳಿದರು. ಇದನ್ನು ಕಂಡು ಆ ಉಗ್ರಸೇನರಾಜೇಂದ್ರನು ತನ್ನ ಪತ್ನಿಯೊಂದಿಗೆ ಆಶ್ಚರ್ಯಚಕಿತನಾದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತದಲ್ಲಿ ಕಂಸಾದಿದರ್ಶನವೆಂಬ ಐವತ್ತೆಂಟನೆಯ
ಅಧ್ಯಾಯವು ಮುಗಿದುದು.

॥ಶ್ರೀಃ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕೋನಷಷ್ಟಿತಮೋಽಧ್ಯಾಯಃ

॥ ಗರ್ಗ ಉವಾಚ ॥

ಅಥೋಗ್ರಸೇನೋ ನೃಪತಿಃ ಪುತ್ರಸ್ಯಾಶಾಂ ವಿಸೃಜ್ಯ ಚ ।
ವ್ಯಾಸಂ ಪಪ್ರಚ್ಛ ಸಂದೇಹಂ ಜ್ಞಾತ್ವಾ ವಿಶ್ವಂ ಮನೋಮಯಂ ॥ ೧ ॥

॥ ಉಗ್ರಸೇನ ಉವಾಚ ॥

ಬ್ರಹ್ಮನ್ಕೇನ ಪ್ರಕಾರೇಣ ಹಿತ್ವಾ ಚ ಜಗತಃ ಸುಖಂ ।
ಭಜೇತ್ಕೃಷ್ಣಂ ಪರಬ್ರಹ್ಮ ತನ್ಮೇ ವ್ಯಾಖ್ಯಾತುಮರ್ಹಸಿ ॥ ೨ ॥

ಐವತ್ತೊಂಭತ್ತನೆಯ ಅಧ್ಯಾಯವು

೧. ಗರ್ಗಮುನಿಯು ಹೇಳತೊಡಗಿದನು :—ಅನಂತರ ಆ ಉಗ್ರಸೇನ ನರಪತಿಯು ಈ ಪ್ರಪಂಚವೆಲ್ಲವೂ ಮಾನಸಿಕವಾದ ಕಲ್ಪನೆಯೆಂಬುದಾಗಿ ಅರಿತು ತನ್ನ ಮಗನ ಹಂಬಲವನ್ನು ತೊರೆದು ತನಗಿರುವ ಸಂದೇಹವನ್ನು ಪರಿಹರಿಸು ವಂತೆ ವ್ಯಾಸಮಹರ್ಷಿಯನ್ನು ಪ್ರಶ್ನಿಸಿದನು.

೨. ಹೇ ಬ್ರಹ್ಮಜ್ಞ! ಈ ಪ್ರಾಪಂಚಿಕ ಸೌಖ್ಯಗಳನ್ನೆಲ್ಲ ತೊರೆದು ಪರ ಬ್ರಹ್ಮನಾದ ಆ ಕೃಷ್ಣನನ್ನು ಪಡೆಯುವ ಬಗೆಹೇಗೆ? ಈ ಅಂಶವನ್ನು ನನಗೆ ವಿಸ್ತಾರವಾಗಿ ತಿಳಿಸಬೇಕು, ಎಂದನು.

॥ ವ್ಯಾಸ ಉವಾಚ ॥

ತ್ವದಗ್ರೇ ಕಥಯಿಷ್ಯಾಮಿ ಸತ್ಯಂ ಹಿತಕರಂ ವಚಃ ।
ಉಗ್ರಸೇನ ಮಹಾರಾಜ ಶೃಣುಷ್ವೈಕಾಗ್ರಮಾನಸಃ ॥ ೩ ॥

ಸೇವನಂ ಕುರು ರಾಜೇಂದ್ರ ರಾಧಾಶ್ರೀಕೃಷ್ಣಯೋಃ ಪರಂ ।
ನಿತ್ಯಂ ಸಹಸ್ರನಾಮಾಭ್ಯಾಮುಭಯೋರ್ಭಕ್ತಿತಃ ಕಿಲ ॥ ೪ ॥

ಸಹಸ್ರನಾಮ ರಾಧಾಯಾ ವಿಧಿರ್ಜಾನಾತಿ ಭೂಪತೇ ।
ಶಂಕರೋ ನಾರದಶ್ಚೈವ ಕೇಚಿದ್ವೈ ಚಾಸ್ಮದಾದಯಃ ॥ ೫ ॥

॥ ಉಗ್ರಸೇನ ಉವಾಚ ॥

ರಾಧಿಕಾನಾಮಸಾಹಸ್ರಂ ನಾರದಾಚ್ಚ ಪುರಾ ಶ್ರುತಂ ।
ಏಕಾಂತೇ ದಿವ್ಯಶಿಬಿರೇ ಕುರುಕ್ಷೇತ್ರೇ ರವಿಗ್ರಹೇ ॥ ೬ ॥

---

೩. ಆಗ ಆ ವ್ಯಾಸಮಹರ್ಷಿಯು, ಎಲೈ ಉಗ್ರಸೇನ ಮಹಾರಾಜನೇ ! ಏಕಾಗ್ರಚಿತ್ತನಾಗಿ ಕೇಳು. ನಿನಗೆ ಯಥಾರ್ಥವೂ. ಹಿತಕರವೂ ಆದ ಮಾತನ್ನು ತಿಳಿಸುವೆನು.

೪. ಹೇ ರಾಜೇಂದ್ರ ! ನೀನು ಪ್ರತಿನಿತ್ಯವೂ ಭಕ್ತಿಯಿಂದ ಆದಿ ದಂಪತಿಗಳಾದ ರಾಧಾಕೃಷ್ಣರನ್ನು ಪ್ರತ್ಯೇಕವಾಗಿ ಸಹಸ್ರನಾಮ ಸಂಕೀರ್ತನದಿಂದ ಸೇವಿಸು.

೫. ರಾಧೆಯ ಸಹಸ್ರನಾಮಗಳನ್ನು ಬ್ರಹ್ಮನೂ, ಶಂಕರನೂ, ನಾರದ ಮಹರ್ಷಿಯೂ, ನಮ್ಮಂತಹ ಕೆಲವುಮಂದಿಯೂ ಮಾತ್ರ ಅರಿತಿರುವೆವು, ಎನ್ನಲು,

೬. ಆ ಉಗ್ರಸೇನನು ವ್ಯಾಸಮಹರ್ಷಿಯನ್ನು ಕುರಿತು, ಹಿಂದೆ ಕುರುಕ್ಷೇತ್ರದಲ್ಲಿ ಸೂರ್ಯಗ್ರಹಣಸಮಯದಲ್ಲಿ ನಾರದಮಹರ್ಷಿಯು ರಾಧಾಸಹಸ್ರನಾಮವನ್ನು ದಿವ್ಯಶಿಬಿರದಲ್ಲಿದ್ದ ನನಗೆ ರಹಸ್ಯವಾಗಿ ಉಪದೇಶಿಸಿರುವನು.

ನ ಶ್ರುತಂ ನಾಮಸಾಹಸ್ರಂ ಕೃಷ್ಣಸ್ಯಾಕ್ಲಿಷ್ಟಕರ್ಮಣಃ ।
ವದ ತನ್ಮೇ ಚ ಕೃಪಯಾ ತಸ್ಮಾಚ್ಛ್ರೇಯೋಽಹಮಾಪ್ನುಯಾಂ ॥ ೭ ॥

॥ ಗರ್ಗ ಉವಾಚ ॥

ಶ್ರುತ್ವೋಗ್ರಸೇನವಚನಂ ವೇದವ್ಯಾಸೋ ಮಹಾಮುನಿಃ ।
ಪ್ರಶಸ್ಯ ತಂ ಪ್ರೀತಮನಾ ಪ್ರಾಹ ಕೃಷ್ಣಂ ವಿಲೋಕಯನ್ ॥ ೮ ॥

॥ ವ್ಯಾಸ ಉವಾಚ ॥

ಶೃಣು ರಾಜನ್ ಪ್ರವಕ್ಷ್ಯಾಮಿ ಸಹಸ್ರಂ ನಾಮ ಸುಂದರಂ ।
ಪುರಾ ಸ್ವಧಾಮ್ನಿ ರಾಧಾಯೈ ಕೃಷ್ಣೇನಾನೇನ ನಿರ್ಮಿತಂ ॥ ೯ ॥

॥ ಭಗವಾನುವಾಚ ॥

ಇದಂ ರಹಸ್ಯಂ ಕಿಲ ಗೋಪನೀಯಂ
ದತ್ತೇ ಚ ಹಾನಿಃ ಸತತಂ ಭವೇದ್ಧಿ ।
ಮೋಕ್ಷಪ್ರದಂ ಸರ್ವಸುಖಪ್ರದಂ ಶಂ
ಪರಂ ಪರಾರ್ಥಂ ಪುರುಷಾರ್ಥದಂ ಚ ॥ ೧೦ ॥

---

೭. ಆದರೆ ಲೀಲಾಮಾತ್ರದಿಂದಲೇ ಸಕಲ ಕಾರ್ಯಗಳನ್ನೂ ನಿರ್ವಹಿಸಬಲ್ಲ ಆ ಕೃಷ್ಣನ ಸಹಸ್ರನಾಮಗಳನ್ನು ಮಾತ್ರ ನಾನಿನ್ನೂ ಕೇಳಿರುವುದಿಲ್ಲ. ದಯವಿಟ್ಟು ನನಗೆ ಆ ಸಹಸ್ರನಾಮವನ್ನು ತಿಳಿಸು. ಆದರಿಂದ ನಾನು ಶ್ರೇಯೋಭಾಗಿಯಾಗುವೆನು, ಎಂದು ನುಡಿದನು.

೮. ಎಲೈ ವಜ್ರನಾಭಿರಾಜನೇ! ಈ ರೀತಿಯಾಗಿ ಉಗ್ರಸೇನನಾಡಿದ ಮಾತನ್ನು ಕೇಳಿ ವೇದವ್ಯಾಸಮಹರ್ಷಿಯು ಮಹಾಸಂತೋಷವನ್ನು ತಾಳಿ ಆ ರಾಜನನ್ನು ಪ್ರಶಂಸಿಸಿ ಕೃಷ್ಣನನ್ನು ನೋಡುತ್ತಾ ಈ ರೀತಿಯಾಗಿ ನುಡಿದನು.

೯. ಎಲೈ ರಾಜೇಂದ್ರನೇ! ಆಲಿಸು, ಸುಂದರವಾದ ಆ ಕೃಷ್ಣಸಹಸ್ರನಾಮಾವಳಿಯನ್ನು ತಿಳಿಸುತ್ತೇನೆ. ಈ ಸಹಸ್ರನಾಮಾವಳಿಯನ್ನು ಹಿಂದೆ ಸಾಕ್ಷಾತ್ ಶ್ರೀಕೃಷ್ಣನೇ ರಾಧೆಗೋಸ್ಕರ ತನ್ನ ನಿಜಧಾಮವಾದ ಗೋಲೋಕದಲ್ಲಿ ರಚಿಸಿದನು.

೧೦. ಆಗ ಆ ಭಗವಂತನು ಹೀಗೆ ಹೇಳಿರುವನು. ಈ ಸಹಸ್ರನಾಮವು ಬಹು ರಹಸ್ಯವಾದುದು. ಇದನ್ನು ಬಹು ಗುಟ್ಟಾಗಿಟ್ಟುಕೊಂಡಿರಬೇಕು. ಇದ

ರೂಪಂ ಚ ಮೇ ಕೃಷ್ಣಸಹಸ್ರನಾಮ
ಪಠೇತು ಮದ್ರೂಪ ಇವ ಪ್ರಸಿದ್ಧಃ ।
ದಾತವ್ಯಮೇವಂ ನ ಶಠಾಯ ಕುತ್ರ
ನ ದಾಂಭಿಕಾಯೋಪದಿಶೇತ್ಕದಾಪಿ ॥ ೧೧ ॥

ದಾತವ್ಯಮೇವಂ ಕರುಣಾವೃತಾಯ
ಗುರ್ವಂಘ್ರಿಭಕ್ತಿಪ್ರಪರಾಯಣಾಯ ।
ಶ್ರೀಕೃಷ್ಣಭಕ್ತಾಯ ಸತಾಂ ಪರಾಯ
ತಥಾ ಮದಕ್ರೋಧವಿವರ್ಜಿತಾಯ ॥ ೧೨ ॥

ಓಂ ಅಸ್ಯ ಶ್ರೀಕೃಷ್ಣಸಹಸ್ರನಾಮಸ್ತೋತ್ರಮಂತ್ರಸ್ಯ ನಾರಾಯಣ-ಋಷಿಃ । ಭುಜಂಗಪ್ರಯಾತಂ-ಛಂದಃ । ಶ್ರೀಕೃಷ್ಣಚಂದ್ರೋ-ದೇವತಾ । ವಾಸುದೇವೋ ಬೀಜಂ । ಶ್ರೀರಾಧಾ ಶಕ್ತಿಃ । ಮನ್ಮಥಃ ಕೀಲಕಂ । ಶ್ರೀಪೂರ್ಣಬ್ರಹ್ಮಕೃಷ್ಣಚಂದ್ರಭಕ್ತಿಜನ್ಮಫಲಪ್ರಾಪ್ತಯೇ ಜಪೇ ವಿನಿಯೋಗಃ

ನ್ನೇನಾದರೂ ಹೊರಗೆಡವಿದುದೇ ಆದರೆ ಮೇಲೆ ಮೇಲೆ ಹಾನಿಯುಂಟಾಗುತ್ತಲೇ ಇರುವುದು. ಈ ಸಹಸ್ರನಾಮವು ಮೋಕ್ಷದಾಯಕವಾದುದು. ಮತ್ತು ಐಹಿಕವಾದ ಸಕಲ ಸುಖಗಳನ್ನೂ ಗಳಿಸಿಕೊಡುವುದಲ್ಲದೆ ಪರಮಪುರುಷಾರ್ಥವನ್ನೂ ಸಾಧಿಸಿಕೊಡುವುದು.

೧೧. ಈ ಸಹಸ್ರನಾಮವು ನನ್ನ ಸ್ವರೂಪವೆಂದೇ ಭಾವಿಸಬೇಕು. ಇದನ್ನು ಪಠಿಸಿದವನೂ ನನ್ನ ಸ್ವರೂಪನೇ ಆಗುವನು. ಇದನ್ನು ದುಷ್ಟನಿಗೂ ದಂಭಾಚಾರನಿರತನಿಗೂ ಎಂದೆಂದಿಗೂ ಉಪದೇಶಿಸಬಾರದು.

೧೨. ಈ ಸಹಸ್ರನಾಮಾವಲಿಯನ್ನು ಮೃದುಹೃದಯನೂ, ಗುರುಚರಣಗಳಲ್ಲಿ ಭಕ್ತಿಯುಳ್ಳವನೂ, ಶ್ರೀಕೃಷ್ಣಭಕ್ತನೂ, ಅಹಂಕಾರ, ಕೋಪ ತಾಪಗಳಿಲ್ಲದವನೂ, ಸತ್ಪುರುಷಸೇವಕನೂ ಆದ ಪುರುಷನಿಗೇ ಉಪದೇಶಿಸಬೇಕು, ಎಂದು ಹೇಳಿರುವನು.

ಈ ಶ್ರೀಕೃಷ್ಣಸಹಸ್ರನಾಮಸ್ತೋತ್ರಕ್ಕೆ ನಾರಾಯಣನು ಋಷಿಯು. ಭುಜಂಗಪ್ರಯಾತವೆಂಬುದು ಛಂದಸ್ಸು. ಶ್ರೀಕೃಷ್ಣಚಂದ್ರನೇ

ಅಥ ಧ್ಯಾನಂ

ಶಿಖಿಮುಕುಟವಿಶೇಷಂ ನೀಲಪದ್ಮಾಂಗದೇಶಂ
ವಿಧುಮುಖಕೃತಕೇಶಂ ಕೌಸ್ತುಭಾಪೀತವೇಷಂ ।
ಮಧುರರವಕಲೇಶಂ ಶಂಭಜೇ ಭ್ರಾತೃಶೇಷಂ
ವ್ರಜಜನವನಿತೇಶಂ ಮಾಧವಂ ರಾಧಿಕೇಶಂ ॥ ೧೩ ॥

॥ ಇತಿ ಧ್ಯಾನಂ ॥

ಹರಿ ರ್ದೇವಕೀನಂದನಃ ಕಂಸಹಂತಾ
ಪರಾತ್ಮಾ ಚ ಪೀತಾಂಬರಃ ಪೂರ್ಣದೇವಃ ।
ರಮೇಶಸ್ತು ಕೃಷ್ಣಃ ಪರೇಶಃ ಪುರಾಣಃ
ಸುರೇಶೋಽಚ್ಯುತೋ ವಾಸುದೇವಶ್ಚ ದೇವಃ ॥ ೧೪ ॥

ದೇವತೆಯು. ವಾಸುದೇವನು ಬೀಜವು. ಶ್ರೀರಾಧೆಯೇ ಶಕ್ತಿಯು. ಮನ್ಮಥನೇ ಕೀಲಕವು. ಪೂರ್ಣಬ್ರಹ್ಮಸ್ವರೂಪನಾದ ಶ್ರೀಕೃಷ್ಣನ ಭಕ್ತಿಯೆಂಬ ಫಲಪ್ರಾಪ್ತಿಯೇ ಪರಮೋದ್ದೇಶವಾಗಿರುವ ಜಪದಲ್ಲಿ ಈ ಮಂತ್ರದವಿನಿಯೋಗವಿರುವುದು.

೧೩. ಬಳಿಕ ಈ ರೀತಿ ಧ್ಯಾನವನ್ನು ಮಾಡಬೇಕು—

ಈ ಸ್ತೋತ್ರಪಾರಾಯಣಕ್ಕೆ ಮುಂಚಿತವಾಗಿ ನವಿಲುಗರಿಯನ್ನು ತಲೆಯಲ್ಲಿ ಧರಿಸಿರುವವನೂ, ಕನ್ನೈದಿಲೆಯಂತೆ ಕಪ್ಪಾದ ಶರೀರವುಳ್ಳವನೂ, ಚಂದ್ರನನ್ನು ಹೋಲುವ ಮುಖಮಂಡಲದಮೇಲೆ ಅಲಂಕಾರವಾಗಿ ಕೂದಲುಗಳನ್ನು ತಳೆದಿರುವವನೂ, ಕೌಸ್ತುಭವೆಂಬ ರತ್ನದ ಕಾಂತಿಯಿಂದ ಹೊಂಬಣ್ಣವಾಗಿ ತೋರುವ ವೇಷವುಳ್ಳವನೂ, ಇಂಪಾದ ಧ್ವನಿಯುಳ್ಳ ಗಾನಕಲೆಗೆ ಆಚಾರ್ಯನೂ- ಶೇಷಮೂರ್ತಿಯಾದ ಬಲರಾಮನ ಅನುಜನೂ, ವ್ರಜಾಂಗನೆಯರ ವಲ್ಲಭನೂ, ರಾಧೆಯ ಪ್ರಾಣಕಾಂತನೂ ಆದ ಆ ಮಾಧವನನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು.

ಸಹಸ್ರನಾಮ ಸ್ತೋತ್ರಾರಂಭವು.

೧೪. ಹರಿಃ—ಸಕಲರ ಮನಸ್ಸನ್ನೂ ಅಪಹರಿಸುವವನು. **ದೇವಕೀನಂದನಃ**--ತಾನು ಜನಿಸಿದುದರಿಂದ ತಾಯಿಯಾದ ದೇವಕಿಗೆ ಆನಂದವನ್ನುಂಟು

ಧರಾಭಾರಹರ್ತಾ ಕೃತೀ ರಾಧಿಕೇಶಃ
ಪರೋ ಭೂವರೋ ದಿವ್ಯಗೋಲೋಕನಾಥಃ ।
ಸುದಾಮ್ನಸ್ತಥಾ ರಾಧಿಕಾಶಾಪಹೇತು-
ರ್ಘೃಣೀ ಮಾನಿನೀಮಾನದೋ ದಿವ್ಯಲೋಕಃ ॥ ೧೫ ॥

ಮಾಡಿದವನು. **ಕಂಸಹಂತಾ**—ಕಂಸನನ್ನು ಸಂಹರಿಸಿದವನು. **ಪರಾತ್ಮಾ**—ಪರಮಪುರುಷನು. **ಪೀತಾಂಬರಃ**—ಹೊಂಬಣ್ಣದ ಬಟ್ಟೆಯುಳ್ಳವನು. **ಪೂರ್ಣ ದೇವಃ**—ಸಂಪೂರ್ಣ ಸ್ವರೂಪನಾದ ದೇವರು. **ರಮೇಶಃ**—ಲಕ್ಷ್ಮೀದೇವಿಯ ವಲ್ಲಭನು. **ಕೃಷ್ಣಃ**—ಕಪ್ಪಾದ ಬಣ್ಣವುಳ್ಳವನು; ಸಕಲ ಕಾರ್ಯಗಳನ್ನೂ ಮಾಡುವವನು; ದೈತ್ಯ ದಾನವರನ್ನು ಸೆಳೆದೊಯ್ಯತಕ್ಕವನು. **ಪರೇಶಃ**—ಎಲ್ಲರಿಗಿಂತಲೂ ಮೇಲೆನಿಸಿದ ಪ್ರಭುವು. **ಪುರಾಣಃ**—ಬಹು ಹಿಂದಿನಿಂದಲೂ ಇರುವವನು. **ಸುರೇಶಃ**—ದೇವತೆಗಳ ಒಡೆಯನು. **ಅಚ್ಯುತಃ**—ನಾಶ ರಹಿತನು. **ವಾಸುದೇವಃ**—ವಸುದೇವನ ಕುಮಾರನು. (ಅಥವಾ ನಿರ್ಗುಣಾವಸ್ಥೆಯಲ್ಲಿ ಶುದ್ಧ ಚೈತನ್ಯಸ್ವರೂಪದಿಂದ ಇರುತ್ತಾ ವಾಸುದೇವನೆಂಬ ಪರಸ್ವರೂಪದಿಂದ ಪ್ರಖ್ಯಾತನಾದವನು) **ದೇವಃ**—ವಿಲಾಸ, ಉತ್ಸಾಹ, ಕಾಂತಿ ಮೊದಲಾದ ಮಂಗಲಗುಣಗಳುಳ್ಳವನು.

೧೫. **ಧರಾಭಾರಹರ್ತಾ**—ಭೂಭಾರವನ್ನು ಪರಿಹರಿಸಿದವನು. **ಕೃತೀ** — ಕೃತಕೃತ್ಯನು; ವಿದ್ವಾಂಸನು. **ರಾಧಿಕೇಶಃ** — ರಾಧಾಕಾಂತನು. **ಪರಃ**—ಶ್ರೇಷ್ಠನಾದವನು. **ಭೂವರಃ**—ಭೂದೇವಿಯ ಪತಿಯು. **ದಿವ್ಯ ಗೋಲೋಕನಾಥಃ**—ದಿವ್ಯವಾದ ಗೋಲೋಕಕ್ಕೆ ಅಧಿಪತಿಯು. **ಸುದಾಮ್ನೋ ರಾಧಿಕಾಶಾಪಹೇತುಃ**—ಸುದಾಮನೆಂಬ ಗೊಲ್ಲನಿಗೆ ರಾಧೆಯ ಶಾಪವುಂಟಾಗಲು ಕಾರಣನಾದವನು. **ಘೃಣೀ**—ದಯಾಶೀಲನು. **ಮಾನಿನೀಮಾನದಃ**—ತಾನೇ ಸೌಭಾಗ್ಯವತಿಯೆಂಬ ಹೆಮ್ಮೆಯಿಂದ ಮೆರೆಯುತ್ತಿರುವ ಸ್ತ್ರೀಯರ ಸೊಕ್ಕನ್ನು ಮುರಿದವನು; ಅಥವಾ ಕುರುಸಭೆಯಲ್ಲಿ ದ್ರೌಪತಿಯ ಮಾನವನ್ನು ಸಂರಕ್ಷಿಸಿದವನು. **ದಿವ್ಯಲೋಕಃ**—ದಿವ್ಯವಾದ ಲೋಕಗಳುಳ್ಳವನು.

ಲಸದ್ಗೋಪವೇಷೋ ಹ್ಯಜೋ ರಾಧಿಕಾತ್ಮಾ
ಚಲತ್ಕುಂಡಲಃ ಕುಂತಲೀ ಪುಂತಲಸ್ರಕ್ ।
ರಥಸ್ಥಃ ಕದಾ ರಾಧಯಾ ದಿವ್ಯರತ್ನಃ
ಸುಧಾಸೌಧಭೂಚಾರಣೋ ದಿವ್ಯವಾಸಾಃ ॥ ೧೬ ॥

ಕದಾ ವೃಂದಕಾರಣ್ಯಚಾರೀ ಸ್ವಲೋಕೇ
ಮಹಾರತ್ನಸಿಂಹಾಸನಸ್ಥಃ ಪ್ರಶಾಂತಃ ।
ಮಹಾಹಂಸಭೈಶ್ಚಾಮರೈರ್ವೀಜ್ಯಮಾನ-
ಶ್ಚಲಚ್ಛತ್ರಮುಕ್ತಾವಲೀಶೋಭಮಾನಃ ॥ ೧೭ ॥

---

೧೬. **ಲಸದ್ಗೋಪವೇಷಃ**— ಮೆರೆಯುತ್ತಿರುವ ಗೋಪಾಲವೇಷವನ್ನು ಧರಿಸಿದವನು. **ಅಜಃ** — ಜನ್ಮರಹಿತನು. **ರಾಧಿಕಾತ್ಮಾ** — ರಾಧೆಯ ಪ್ರೇಮಾಧಾರನಾದುದರಿಂದ ಅವಳಿಗೆ ಪ್ರಾಣಭೂತನೆನಿಸಿದವನು. **ಪುಂತಲ ಸ್ರಕ್**—ಕಾಲಿನವರೆಗೂ ಓಲಾಡುತ್ತಿರುವ ಹಾರವುಳ್ಳವನು. **ರಥಸ್ಥಃ**—ರಥ ದಲ್ಲಿ ಕುಳಿತಿರುವವನು. **ಕದಾರಾಧಯಾದಿವ್ಯರತ್ನಃ**—(?) ಸರ್ವದಾ ರಾಧೆಯ ಪ್ರೀತಿಯ ದಿವ್ಯರತ್ನವೆನಿಸಿರುವವನು. **ಸುಧಾಸೌಧಭೂಚಾರಣಃ**— ಸುಧಾಮಯವಾದ ಸೌಧತಲದಲ್ಲಿ ಸಂಚರಿಸತಕ್ಕವನು. **ದಿವ್ಯವಾಸಾಃ**— ದಿವ್ಯವಾದ ವಸನವುಳ್ಳವನು.

೧೭. **ಕದಾವೃಂದಕಾರಣ್ಯಚಾರೀ**—(?) ಸರ್ವದಾ ವೃಂದಾವನ ದಲ್ಲಿ ಸಂಚರಿಸುವವನು. **ಸ್ವಲೋಕೇ ಮಹಾರತ್ನಸಿಂಹಾಸನಸ್ಥಃ**—ತನ್ನ ಲೋಕದಲ್ಲಿ ಶ್ರೇಷ್ಠವಾದ ರತ್ನಸಿಂಹಾಸನದಮೇಲೆ ಮಂಡಿಸಿರುವವನು. **ಪ್ರಶಾಂತಃ** — ಶಾಂತನಾದವನು. **ಮಹಾಹಂಸಭೈಶ್ಚಾಮರೈರ್ವೀಜ್ಯ ಮಾನಃ**—ಹಂಸದಂತೆ ಶುಭ್ರವಾದ ಚಾಮರಗಳಿಂದ ಬೀಸಲ್ಪಡುತ್ತಿರುವವನು. **ಚಲಚ್ಛತ್ರಮುಕ್ತಾವಲೀಶೋಭಮಾನಃ**-ಅಲುಗುತ್ತಿರುವ ಮುತ್ತುಗಳ ಜಾಲರಿ ಗಳಿಂದ ಅಲಂಕೃತವಾದ ಛತ್ರದಿಂದ ಶೋಭಿಸುತ್ತಿರುವವನು.

ಸುಖೀ ಕೋಟಿಕಂದರ್ಪಲೀಲಾಭಿರಾಮಃ
ಕ್ವಣನ್ನೂಪರಾಂಘ್ರಿಃ ಶುಭಾಂಘ್ರಿಃ ।
ಸುಜಾನುಶ್ಚ ರಂಭಾಶುಭೋರುಃ ಕೃಶಾಂಗಃ
ಪ್ರತಾಪೀಭಶುಂಡಾಸುದೋರ್ದಂಡಖಂಡಃ ॥ ೧೮ ॥

ಜಪಾಪುಷ್ಪಹಸ್ತಶ್ಚ ಶಾತೋದರಶ್ರೀ-
ರ್ಮಹಾಪದ್ಮವಕ್ಷಃಸ್ಥಲಶ್ಚಂದ್ರಹಾಸಃ ।
ಲಸತ್ಕುಂದದಂತಶ್ಚ ಬಿಂಬಾಧರಶ್ರೀ-
ಶರತ್ಪದ್ಮನೇತ್ರಃ ಕಿರೀಟೋಜ್ಜ್ವಲಾಭಃ ॥ ೧೯ ॥

---

೧೮. **ಸುಖೀ** — ಸರ್ವದಾ ಸುಖಶಾಲಿಯು. **ಕೋಟಿಕಂದರ್ಪಲೀಲಾಭಿರಾಮಃ**— ಕೋಟಿಮನ್ಮಥರಿಗೆ ಸರಿಸಮನಾದ ಲೀಲೆಯಿಂದ ಮೆರೆಯುತ್ತಿರುವವನು. **ಕ್ವಣನ್ನೂಪುರಾಲಂಕೃತಾಂಘ್ರಿಃ**— ಝಣಝಣಗುಟ್ಟುತ್ತಿರುವ ಅಂದಿಗೆಗಳಿಂದ ಅಲಂಕರಿಸಲ್ಪಟ್ಟ ಚರಣಗಳುಳ್ಳವನು. **ಶುಭಾಂಘ್ರಿಃ**— ಶುಭವಾದ ಪದತಲವುಳ್ಳವನು. **ಸುಜಾನುಃ**— ಒಳ್ಳೆಯ ಲಕ್ಷಣಗಳಿಂದ ಒಪ್ಪುತ್ತಿರುವ ಜಾನು (ಮಂಡಿ) ಪ್ರದೇಶವುಳ್ಳವನು. **ರಂಭಾಶುಭೋರುಃ**— ಬಾಳೆಯ ಕಂಬದಂತೆ ದುಂಡಾಗಿರುವ ಶುಭವಾದ ಊರುಗಳು (ತೊಡೆ) ಳ್ಳವನು. **ಕೃಶಾಂಗಃ**— ಕೃಶವಾದ ಅವಯುವಗಳುಳ್ಳವನು. **ಪ್ರತಾಪೀ**— ಪರಾಕ್ರಮಶಾಲಿಯು. **ಇಭಶುಂಡಾಸುದೋರ್ದಂಡಖಂಡಃ**— ಆನೆಯ ಸೊಂಡಲಿನಂತೆ ದುಂಡಗಿರುವ ನೀಳವಾದ ತೋಳುಗಳುಳ್ಳವನು.

೧೯. **ಜಪಾಪುಷ್ಪಹಸ್ತಃ**— ದಾಸವಾಳದ ಹೂವಿನಂತೆ ಕೆಂಪಾದ ಅಂಗೈಗಳುಳ್ಳವನು. **ಶಾತೋದರಶ್ರೀಃ**— ತೆಳುವಾದ ಹೊಟ್ಟೆಯುಳ್ಳವನು. **ಮಹಾಪದ್ಮವಕ್ಷಸ್ಥಲಃ**— ದೊಡ್ಡದಾದ ತಾವರೆಯ ಹೂವಿನಂತೆ ಅಗಲವಾದ ಎದೆಯುಳ್ಳವನು. ಅಥವಾ ಶುಭಕರವಾದ ಪದ್ಮಚಿಹ್ನೆಯಿಂದ ಒಪ್ಪುವ ವಕ್ಷಃಪ್ರದೇಶವುಳ್ಳವನು. **ಚಂದ್ರಹಾಸಃ**— ಚಂದ್ರನಂತೆ ಶುಭ್ರವಾದ ನಗೆಯುಳ್ಳವನು. **ಲಸತ್ಕುಂದದಂತಃ**— ಮಲ್ಲೆಯ ಮೊಗ್ಗುಗಳಂತೆ ಕಂಗೊಳಿಸುವ ಹಲ್ಲುಗಳುಳ್ಳವನು. **ಬಿಂಬಾಧರಶ್ರೀಃ**— ತೊಂಡೆಯ ಹಣ್ಣಿನಂತೆ ಕೆಂಪಗಿರುವ ತುಟಿಗಳುಳ್ಳವನು. **ಶರತ್ಪದ್ಮನೇತ್ರಃ**— ಶರತ್ಕಾಲದ ಕಮಲದಂತೆ ಕಂಗೊಳಿಸುವ ಕಂಗಳುಳ್ಳವನು. **ಕಿರೀಟೋಜ್ಜ್ವಲಾಭಃ**— ಕಿರೀಟದಿಂದ ಉಜ್ವಲವಾದ ಕಾಂತಿಯುಳ್ಳವನು.

ಸಖೀಕೋಟಿಭಿರ್ವರ್ತಮಾನೋ ನಿಕುಂಜೇ
ಪ್ರಿಯಾ ರಾಧಯಾ ರಾಸಸಕ್ತೋ ನವಾಂಗಃ ।
ಧರಾಬ್ರಹ್ಮರುದ್ರಾದಿಭಿಃ ಪ್ರಾರ್ಥಿತಃ ಸ-
ದ್ಧರಾಭಾರದೂರೀಕೃತೋಽರ್ಥಂ ಪ್ರಜಾತಃ ॥ ೨೦ ॥

ಯದುರ್ದೇವಕೀಸೌಖ್ಯದೋ ಬಂಧನಚ್ಛಿ-
ತ್ಸಶೇಷೋ ವಿಭುರ್ಯೋಗಮಾಯೀ ಚ ವಿಷ್ಣುಃ ।
ವ್ರಜೇ ನಂದಪುತ್ರೋ ಯಶೋದಾಸುತಾಖ್ಯೋ
ಮಹಾಸೌಖ್ಯದೋ ಬಾಲರೂಪಃ ಶುಭಾಂಗಃ ॥ ೨೧ ॥

---

೨೦. **ಸಖೀಕೋಟಿಭಿರ್ವರ್ತಮಾನೋ ನಿಕುಂಜೇ** — ಕೋಟಿ ಸಂಖ್ಯಾತರಾದ ಪ್ರಿಯಸಖಿಯರೊಡನೆ ಲತಾಗೃಹದಲ್ಲಿರುವವನು. **ಪ್ರಿಯಾ ರಾಧಾಯಾರಾಸಸಕ್ತಃ**— ಪ್ರಿಯತಮೆಯಾದ ರಾಧೆಯೊಡನೆ ರಾಸಲೀಲೆಯಲ್ಲಿ ಆಸಕ್ತನಾದವನು. **ನವಾಂಗಃ**— ಹೊಸಹೊಸದಾಗಿರುವಂತೆ ತೋರುವ ಶರೀರಾವಯವವುಳ್ಳವನು. **ಧರಾಬ್ರಹ್ಮರುದ್ರಾದಿಭಿಃ ಪ್ರಾರ್ಥಿತಃ** — ಭೂಮಿ, ಬ್ರಹ್ಮ, ಮಹೇಶ್ವರ ಮೊದಲಾದವರಿಂದ ಪ್ರಾರ್ಥಿಸಲ್ಪಟ್ಟವನು. **ಸದ್ಧರಾಭಾರದೂರೀಕೃತೋ (?) ರ್ಥಂ ಪ್ರಜಾತಃ**— ಭೂಭಾರವನ್ನು ಪರಿಹರಿಸುವ ಸಲುವಾಗಿ ಅವತರಿಸಿದವನು.

೨೧. **ಯದುಃ**— ಯದುವಂಶದವನು. **ದೇವಕೀಸೌಖ್ಯದಃ**— ದೇವಕಿಗೆ ಸೌಖ್ಯವನ್ನುಂಟುಮಾಡಿದವನು. **ಬಂಧನಚ್ಛಿತ್**— ಮಾತಾಪಿತೃಗಳ ಬಂಧನವನ್ನು ಬಿಡಿಸಿದವನು ಅಥವಾ ಸಂಸಾರ ರೂಪವಾದ ಬಂಧನವನ್ನು ಬಿಡಿಸುವವನು. **ಸಶೇಷಃ**— ಆದಿಶೇಷಾವತಾರನಾದ ಬಲರಾಮನೊಡನೆ ಇರುವವನು. **ವಿಭುಃ**— ಸರ್ವವ್ಯಾಪಿಯು. **ಯೋಗಮಾಯೀ** — ಯೋಗಮಾಯೆಯಿಂದೊಡಗೂಡಿದವನು. **ವಿಷ್ಣುಃ**— ಎಲ್ಲೆಲ್ಲೂ ಇರುವವನು. **ವ್ರಜೇ ನಂದಪುತ್ರಃ**— ಗೋಕುಲದಲ್ಲಿ ನಂದನ ಕುಮಾರನಾದವನು. **ಯಶೋದಾಸುತಾಖ್ಯಃ**— ಯಶೋದೆಯ ಮಗನೆಂದೇ ಪ್ರಸಿದ್ಧನಾದವನು. **ಮಹಾಸೌಖ್ಯದಃ**— ತನ್ನ ಬಾಲಲೀಲೆಗಳಿಂದ ಅತಿಶಯವಾದ ಆನಂದವನ್ನುಂಟುಮಾಡಿದವನು. ಅಥವಾ ಮಹತ್ತಾದ ಸುಖವನ್ನು ಕರುಣಿಸುವವನು. **ಬಾಲರೂಪಃ**— ಎಳೆಯ ಹುಡುಗನಂತೆ ವೇಷವನ್ನು ತಳೆದವನು. **ಶುಭಾಂಗಃ**— ಶುಭಲಕ್ಷಣಗಳಿಂದ ಒಪ್ಪುವ ಅವಯವಗಳುಳ್ಳವನು.

ತಥಾ ಪೂತನಾಮೋಕ್ಷದಃ ಶ್ಯಾಮರೂಪೋ
ದಯಾಲುಸ್ತ್ವನೋಭಂಜನಃ ಪಲ್ಲವಾಂಘ್ರಿಃ ।
ತೃಣಾವರ್ತಸಂಹಾರಕಾರೀ ಚ ಗೋಪೋ
ಯಶೋದಾಯಶೋವಿಶ್ವರೂಪಪ್ರದರ್ಶೀ ॥ ೨೨ ॥

ತಥಾ ಗರ್ಗದಿಷ್ಟಶ್ಚ ಭಾಗ್ಯೋದಯಶ್ರೀ-
ರ್ಲಸದ್ಬಾಲಕೇಲಿಃ ಸರಾಮಃ ಸುವಾಚಃ ।
ಕ್ವಣನ್ನೂಪುರೈಃ ಶಬ್ದಯುಗ್ರಿಂಗಮಾಣ-
ಸ್ತಥಾ ಜಾನುಹಸ್ತೈರ್ವ್ರಜೇಶಾಂಗಣೇ ವಾ ॥ ೨೩ ॥

---

೨೨. **ಪೂತನಾಮೋಕ್ಷದಃ** — ಪೂತನೆಗೆ ಮೋಕ್ಷವನ್ನಿತ್ತವನು. **ಶ್ಯಾಮರೂಪಃ**—ಕಪ್ಪಾದ (ಶರೀರದ) ರೂಪವುಳ್ಳವನು. **ದಯಾಲುಃ**—ದಯಾಶೀಲನು. **ಅನೋಭಂಜನಃ**—ಬಂಡಿಯ ರೂಪದಿಂದ ಬಂದ ಶಕಟಾಸುರನನ್ನು ಮುರಿದು ಕೆಡಹಿದವನು. **ಪಲ್ಲವಾಂಘ್ರಿಃ**—ಚಿಗುರಿನಂತಿರುವ ಅಡಿಗಳುಳ್ಳವನು. **ತೃಣಾವರ್ತಸಂಹಾರಕಾರೀ** — ಸುಂಟರ ಗಾಳಿಯಂತೆ ಬಂದ ತೃಣಾವರ್ತನೆಂಬ ರಾಕ್ಷಸನನ್ನು ಸಂಹರಿಸಿದವನು. **ಗೋಪಃ**—ಗೋಪಾಲಕ ವೇಷವನ್ನು ತಳೆದವನು. **ಯಶೋದಾಯಶೋವಿಶ್ವರೂಪಪ್ರದರ್ಶೀ**—ಯಶೋದೆಗೆ ತನ್ನ ಯಶಃಪ್ರದವಾದ ವಿಶ್ವರೂಪವನ್ನು ಪ್ರದರ್ಶಿಸಿದವನು.

೨೩. **ಗರ್ಗದಿಷ್ಟಃ**—ಗರ್ಗಮಹರ್ಷಿಯಿಂದ ಸಂಸ್ಕಾರಗಳನ್ನು ಹೊಂದಿದವನು. **ಭಾಗ್ಯೋದಯಶ್ರೀಃ**—ಸಕಲ ಭಾಗ್ಯಗಳಿಗೂ ಉದಯಸ್ವರೂಪ (ಕಾರಣ) ನಾದವನು. **ಲಸದ್ಬಾಲಕೇಲಿಃ**— ಮನೋಹರವಾದ ಬಾಲಲೀಲೆಯಿಂದ ರಾರಾಜಿಸುವವನು. **ಸರಾಮಃ** —ಬಲರಾಮನೊಡನೆ ವಿಹರಿಸುವವನು. **ಸುವಾಚಃ**—ಮುದ್ದಾದ ಮಾತುಗಳುಳ್ಳವನು. **ಕ್ವಣನ್ನೂಪುರೈಃ ಶಬ್ದಯುಕ್**—ಝಣ ಝಣನೆ ದನಿಮಾಡುತ್ತಿರುವ ಕಾಲಂದಿಗೆಗಳಿಂದ ಧ್ವನಿಯುಕ್ತನಾದವನು. **ಜಾನುಹಸ್ತೈರ್ವ್ರಜೇಶಾಂಗಣೇ ರಿಂಗಮಾಣಃ** —ಗೋಕುಲಾಧಿಪತಿಯಾದ ನಂದನ ಮನೆಯಂಗಳದಲ್ಲಿ ಅಂಬೆಗಾಲಿಡುತ್ತಾ ನಡುನಡುವೆ ಬೀಳುವವನಂತೆ ಲೀಲೆಯನ್ನು ತೋರ್ಪಡಿಸಿದವನು.

ದಧಿಸ್ಪೃಕ್ ಹೈಯ್ಯಂಗವೀದುಗ್ಧಭೋಕ್ತಾ
ದಧಿಸ್ತೇಯಕೃದ್ದುಗ್ಧಭುಗ್ಭಾಂಡಭೇತ್ತಾ ।
ಮೃದಂ ಭುಕ್ತವಾನ್ ಗೋಪಜೋ ವಿಶ್ವರೂಪಃ
ಪ್ರಚಂಡಾಂಶುಚಂಡಪ್ರಭಾಮಂಡಿತಾಂಗಃ ॥ ೨೪ ॥

ಯಶೋದಾಕರೈರ್ಬಂಧನಂ ಪ್ರಾಪ್ತ ಆದ್ಯೋ
ಮಣಿಗ್ರೀವಮುಕ್ತಿಪ್ರದೋ ದಾಮಬದ್ಧಃ ।
ಕದಾ ನೃತ್ಯಮಾನೋ ವ್ರಜೇ ಗೋಪಿಕಾಭಿಃ
ಕದಾನಂದಸನ್ನಂದಕೈರ್ಲಾಲ್ಯಮಾನಃ ॥ ೨೫ ॥

---

೨೪. **ದಧಿಸ್ಪೃಕ್**--ಮೊಸರನ್ನು ತಿಂದವನು. **ಹೈಯಂಗವೀದುಗ್ಧಭೋಕ್ತಾ**--ಹಿಂದಿನ ದಿನ ಕರೆದ ಹಾಲಿನಿಂದಾದ ತುಪ್ಪವನ್ನೂ, ಹಾಲನ್ನೂ ಭಕ್ಷಿಸಿದವನು. **ದಧಿಸ್ತೇಯಕೃತ್**--ಮೊಸರನ್ನು ಕದ್ದವನು. **ದುಗ್ಧಭಾಂಡ ಪ್ರಭೇತ್ತಾ**--ಹಾಲಿನ ಮಡಕೆಗಳನ್ನೊಡೆದವನು. **ಮೃದಂ ಭುಕ್ತವಾನ್**--ಮಣ್ಣನ್ನು ತಿಂದವನು. **ಗೋಪಜಃ**--ಗೋಪಕುಮಾರನು. **ವಿಶ್ವರೂಪಃ**--ವಿಶ್ವರೂಪವನ್ನು ತಳೆದವನು. **ಪ್ರಚಂಡಾಂಶುಚಂಡಪ್ರಭಾಮಂಡಿತಾಂಗಃ**-ಸೂರ್ಯನಂತೆ ಸಹಿಸಲಸದಳವಾದ ತೇಜಸ್ಸುಳ್ಳವನು.

೨೫. **ಯಶೋದಾಕರೈರ್ಬಂಧನಂ ಪ್ರಾಪ್ತಃ**--ಯಶೋದೆಯ ಕೈಗಳಿಂದ ಕಟ್ಟಿಹಾಕಲ್ಪಟ್ಟವನು. **ಆದ್ಯಃ**--ಎಲ್ಲರಿಗೂ ಮೊತ್ತಮೊದಲನೆಯವನು. **ಮಣಿಗ್ರೀವಮುಕ್ತಿಪ್ರದಃ**--ಮಣಿಗ್ರೀವನೆಂಬುವವನಿಗೆ ಮೋಕ್ಷವನ್ನಿತ್ತವನು. **ದಾಮಬದ್ಧಃ**--ಹಗ್ಗದಿಂದ ಕಟ್ಟಿಹಾಕಲ್ಪಟ್ಟವನು. **ಕದಾ ವ್ರಜೇ ಗೋಪಿಕಾಭಿರ್ನೃತ್ಯಮಾನಃ**--॥ ೧೦೦ ॥ ಆಗಾಗ್ಗೆ ಗೋಪಸ್ತ್ರೀಯರೊಡನೆ ಗೋಕುಲದಲ್ಲಿ ನರ್ತಿಸುವವನು. **ಕದಾ ನಂದಸನ್ನಂದಕೈರ್ಲಾಲ್ಯಮಾನಃ**---ಒಂದೊಂದು ವೇಳೆ ನಂದನಿಂದಲೂ, ಇತರ ಕುಮಾರರಿಂದಲೂ ಲಾಲಿಸಲ್ಪಡುವವನು.

ಕದಾ ಗೋಪನಂದಾಂಕಗೋಪಾಲರೂಪೀ
ಕಲಿಂದಾಂಗಜಾಕೂಲಗೋ ವರ್ತಮಾನಃ ।
ಘನೈರ್ಮಾರುತೈಶ್ಛಿನ್ನಭಾಂಡೀರದೇಶೇ
ಗೃಹೀತೋ ವರೋ ರಾಧಯಾ ನಂದಹಸ್ತಾತ್ ॥ ೨೬ ॥

ನಿಕುಂಜೇ ಚ ಗೋಲೋಕಲೋಕಾಗತೇಽಪಿ
ಮಹಾರತ್ನಸಂಘೈಃ ಕದಂಬಾವೃತೇಽಪಿ ।
ತದಾ ಬ್ರಹ್ಮಣಾ ರಾಧಿಕಾಸದ್ವಿವಾಹೇ
ಪ್ರತಿಷ್ಠಾಂ ಗತಃ ಪೂಜಿತಃ ಸಾಮಮಂತ್ರೈಃ ॥ ೨೭ ॥

ರಸೀ ರಾಸಯುಙ್ಮಾಲತೀನಾಂ ವನೇಽಪಿ
ಪ್ರಿಯಾರಾಧಯಾರಾಧಿತಾರ್ಥಂ ರಮೇಶಃ ।
ಧರಾನಾಥ ಆನಂದದಃ ಶ್ರೀನಿಕೇತೋ
ವನೇಶೋ ಧನೀ ಸುಂದರೋ ಗೋಪಿಕೇಶಃ ॥ ೨೮ ॥

---

೨೬. ಕದಾ ಗೋಪನಂದಾಂಕಗೋಪಾಲರೂಪೀ--ಒಂದೊಂದುಸಲ ಗೋಪನಾದ ನಂದನ ತೊಡೆಯಮೇಲೆ ಗೋಪಾಲರೂಪದಿಂದ ನಲಿಯುವವನು. ಕಲಿಂದಾಂಗಜಾಕೂಲಗೋವರ್ತಮಾನಃ -- ಯಮುನಾನದಿಯ ತೀರಪ್ರದೇಶದಲ್ಲಿ ವಿಹರಿಸುವವನು. **ಘನೈರ್ಮಾರುತೈಶ್ಛಿನ್ನಭಾಂಡೀರದೇಶೇ ನಂದಹಸ್ತಾತ್ ರಾಧಯಾ ಗೃಹೀತೋ ವರಃ**--ಬಿರುಗಾಳಿಯಿಂದ ಮುರಿದು ಬಿದ್ದ ಭಾಂಡೀರವಟ ಪ್ರದೇಶದಲ್ಲಿ ನಂದನ ಕೈತಪ್ಪಿಸಿ ಪ್ರಿಯೆಯಾದ ರಾಧೆಯಿಂದ ಕರೆದೊಯ್ಯಲ್ಪಟ್ಟವನು.

೨೭. **ಗೋಲೋಕಲೋಕಾಗತೇ ಮಹಾರತ್ನಸಂಘೈಃ ಕದಂಬಾವೃತೇ ನಿಕುಂಜೇ ರಾಧಿಕಾಸದ್ವಿವಾಹೇ ಪ್ರತಿಷ್ಠಾಂ ಗತಃ ಬ್ರಹ್ಮಣಾ ಸಾಮಮಂತ್ರೈಃ ಪೂಜಿತಃ**--ಗೋಲೋಕದಲ್ಲಿ ಕದಂಬವೃಕ್ಷಗಳ ನಡುವೆ ಇರುವ ಮಹಾ ಶ್ರೇಷ್ಠವಾದ ರತ್ನಗಳಿಂದ ಅಲಂಕೃತವಾದ ನಿಕುಂಜದ ಮಧ್ಯದಲ್ಲಿ ಸುಖಾಸೀನನಾಗಿ ರಾಧೆಯನ್ನು ವಿವಾಹವಾಗುವ ಸಮಯದಲ್ಲಿ ಬ್ರಹ್ಮನಿಂದ ಸಾಮಮಂತ್ರಗಳಿಂದ ಪೂಜಿಸಲ್ಪಟ್ಟವನು.

೨೮. **ರಸೀ**--ರಸಗಳಿಗೆ ಆಶ್ರಯನು. **ರಾಸಯುಕ್**--ರಾಸಲೀಲೆಯಲ್ಲಿ ತೊಡಗಿದವನು. **ಮಾಲತೀನಾಂ ವನೇ ಪ್ರಿಯಾರಾಧಯಾರಾಧಿತಃ**--ಮಾಲ

ಕದಾ ರಾಧಯಾ ಪ್ರಾಪಿತೋ ನಂದಗೇಹೇ
ಯಶೋದಾಕರೈರ್ಲಾಲಿತೋ ಮಂದಹಾಸಃ ।
ಭಯೀ ಕ್ವಾಪಿ ವೃಂದಾರಕಾರಣ್ಯವಾಸೀ
ಮಹಾಮಂದಿರೇ ವಾಸಕೃದ್ದೇವಪೂಜ್ಯಃ ॥ ೨೯ ॥

ವನೇ ವತ್ಸಚಾರೀ ಮಹಾವತ್ಸಹಾರೀ
ಬಕಾರಿಃ ಸುರೈಃ ಪೂಜಿತೋಽಘಾರಿನಾಮಾ ।
ವನೇ ವತ್ಸಕೃದ್ಗೋಪಕೃದ್ಗೋಪವೇಷಃ
ಕದಾ ಬ್ರಹ್ಮಣಾ ಸಂಸ್ತುತಃ ಪದ್ಮನಾಭಃ ॥ ೩೦ ॥

ತೀವನ (ಜಾಜಿಯ ತೋಟ) ದಲ್ಲಿ ಪ್ರಿಯೆಯಾದ ರಾಧೆಯಿಂದ ಸೇವಿಸಲ್ಪಟ್ಟವನು. **ರಮೇಶಃ**--ಲಕ್ಷ್ಮೀವಲ್ಲಭನು. **ಧರಾನಾಥಃ**---ಭೂದೇವಿಯ ಕಾಂತನು. **ಆನಂದದಃ**---ಆನಂದದಾಯಕನು. **ಶ್ರೀನಿಕೇತಃ**---ಲಕ್ಷ್ಮಿಗೆ ನಿವಾಸ (ನೆಲೆಮನೆ) ನಾದವನು. **ವನೇಶಃ**--ವನಗಳಿಗೆ ಅಧಿಪತಿಯು. **ಧನೀ**--ಧನವುಳ್ಳವನು. **ಸುಂದರಃ**--ಸೌಂದರ್ಯಶಾಲಿಯು. **ಗೋಪಿಕೇಶಃ**--ಗೋಪಿಯರ ಪ್ರಿಯಕಾಂತನು.

೨೯. **ಕದಾ ರಾಧಯಾ ನಂದಗೇಹೇ ಪ್ರಾಪಿತಃ**--ಒಂದೊಂದು ತಡವೆ ನಂದನ ಮನೆಗೆ ರಾಧೆಯಿಂದ ಕರೆದುತರಲ್ಪಟ್ಟವನು. **ಯಶೋದಾಕರೈರ್ಲಾಲಿತಃ**--ಯಶೋದೆಯ ಕೈಗಳಿಂದ ಲಾಲಿಸಲ್ಪಟ್ಟವನು. **ಮಂದಹಾಸಃ**--ಮೆಲುನಗೆಯುಳ್ಳವನು. **ಭಯೀ ಕ್ವಾಪಿ**--ಒಂದೊಂದುಕಡೆ ಹೆದರಿದವನಂತೆ ನಟಿಸುವವನು. **ವೃಂದಾರಕಾರಣ್ಯವಾಸೀ**--ವೃಂದಾರಕವೆಂಬ ವನದಲ್ಲಿರುವವನು. **ಮಹಾಮಂದಿರೇ ವಾಸಕೃತ್**--ದೊಡ್ಡ ಉಪ್ಪರಿಗೆ ಮನೆಯಲ್ಲಿ ವಾಸಮಾಡುವವನು. **ದೇವಪೂಜ್ಯಃ**--ದೇವತೆಗಳಿಂದ ಪೂಜಿಸಲ್ಪಡುವವನು.

೩೦. **ವನೇ ವತ್ಸಚಾರೀ**--ಕಾಡಿನ ನಡುವೆ ಕರುಗಳನ್ನು ಮೇಯಿಸುವವನು. **ಮಹಾವತ್ಸಹಾರೀ**--ವಿಶಾಲವಾದ ಎದೆಯಲ್ಲಿ ಓಲಾಡುತ್ತಿರುವ ಹಾರವುಳ್ಳವನು. ಅಥವಾ ಬ್ರಹ್ಮನಿಂದ ಮರೆಸಲ್ಪಟ್ಟಿದ್ದ ಕರುಗಳ ಮಂದೆಯನ್ನು ಹಿಂದಕ್ಕೆ ಕರೆದು

ವಿಹಾರೀ ತಥಾ ತಾಲಭುಗ್ಧೇನುಕಾರೀ
ಸದಾ ರಕ್ಷಕೋ ಗೋವಿಷಾರ್ತಿಪ್ರಣಾಶೀ ।
ಕಲಿಂದಾಂಗಜಾಕೂಲಗಃ ಕಾಲಿಯಸ್ಯ
ದಮೀ ನೃತ್ಯಕಾರೀ ಫಣೇಷ್ವಪ್ರಸಿದ್ಧಃ ॥ ೩೧ ॥

ಸಲೀಲಃ ಶಮೀ ಜ್ಞಾನದಃ ಕಾಮಪೂರ-
ಸ್ತಥಾ ಗೋಪಯುಗ್ಗೋಪ ಆನಂದಕಾರೀ ।
ಸ್ಥಿರೀ ಹ್ಯಗ್ನಿಭುಕ್ಪಾಲಕೋ ಬಾಲಲೀಲಃ
ಸುರಾಗಶ್ಚ ವಂಶೀಧರಃ ಪುಷ್ಪಶೀಲಃ ॥ ೩೨ ॥

ತಂದವನು. **ಬಕಾರಿಃ**--ಬಕಾಸುರವೈರಿಯು. **ಸುರೈಃ ಪೂಜಿತಃ**--ದೇವತೆಗಳಿಂದ ಸೇವಿತನಾದವನು. **ಅಘಾರಿನಾಮಾ**--ಅಘಾಸುರ ಸಂಹಾರಿಯೆಂದು ವಿಖ್ಯಾತವಾದ ಹೆಸರುಳ್ಳವನು. **ವನೇ ವತ್ಸಕೃತ್**--ಬ್ರಹ್ಮಕೃತ ವತ್ಸಾಪಹರಣ ಸಮಯದಲ್ಲಿ ತನ್ನ ಮಾಯೆಯಿಂದ ಕರುಗಳನ್ನು ನಿರ್ಮಿಸಿದವನು. **ಗೋಪಕೃತ್**--ಗೋಪಾಲಕರನ್ನು ನಿರ್ಮಿಸಿದವನು. **ಗೋಪವೇಷಃ**--ಗೊಲ್ಲರ ಹುಡುಗನಂತೆ ವೇಷವನ್ನು ಧರಿಸಿದವನು. **ಕದಾ ಬ್ರಹ್ಮಣಾ ಸಂಸ್ತುತಃ**—ಒಂದಾನೊಂದು ಸಮಯದಲ್ಲಿ (ವತ್ಸಾಪಹರಣ ಸಮಯದಲ್ಲಿ) ಬ್ರಹ್ಮನಿಂದ ಸ್ತುತಿಸಲ್ಪಟ್ಟವನು. **ಪದ್ಮನಾಭಃ**--ನಾಭಿಯಲ್ಲಿ ಪದ್ಮವನ್ನು ತಳೆದಿರುವವನು.

೩೧. **ವಿಹಾರೀ**--ಸರ್ವದಾ ವಿಹರಿಸುವವನು. **ತಾಲಭುಕ್**--ತಾಲವನದಲ್ಲಿ ತಾಳೆಯ ಹಣ್ಣುಗಳನ್ನು ತಿಂದವನು. **ಧೇನುಕಾರಿಃ**--ಧೇನುಕನೆಂಬ ರಾಕ್ಷಸನಿಗೆ ವೈರಿಯಾದವನು. **ಸದಾ ರಕ್ಷಕಃ**--ಸರ್ವದಾ ಸಂರಕ್ಷಿಸುವವನು. **ಗೋವಿಷಾರ್ತಿಪ್ರಣಾಶೀ**--ಗೋವುಗಳಿಗೆ ಕಾಳಿಯ ಮಡುವಿನಲ್ಲಿ ಉಂಟಾಗುತ್ತಿದ್ದ ವಿಷದ ಬಾಧೆಯನ್ನು ಪರಿಹರಿಸಿದವನು. **ಕಲಿಂದಾಂಗಜಾಕೂಲಗಃ**--ಯಮುನಾತೀರ ವಿಹಾರಿಯು. **ಕಾಲಿಯಸ್ಯ ದಮೀ**— ಕಾಲಿಯ ಸರ್ಪವನ್ನು ದಮನ ಮಾಡಿದವನು. **ನೃತ್ಯಕಾರೀ ಫಣೇಷು**—ಆ ಕಾಲಿಯನ ಹೆಡೆಗಳ ಮೇಲೆ ಕುಣಿದಾಡಿದವನು. **ಅಪ್ರಸಿದ್ಧಃ**—ತನಗಿಂತಲೂ ಪ್ರಸಿದ್ಧನಾದವನಿನ್ನೊಬ್ಬನು ಇಲ್ಲದವನು.

೩೨. **ಸಲೀಲಃ**—ಲೀಲಾ ವಿನೋದಿಯು. **ಶಮೀ**—ಶಮ (ಶಾಂತಿ) ವುಳ್ಳವನು. **ಜ್ಞಾನದಃ**—ಜ್ಞಾನದಾಯಕನು. **ಕಾಮಪೂರಃ**—ಇಷ್ಟಾರ್ಥ

ಪ್ರಲಂಬಪ್ರಭಾನಾಶಕೋ ಗೌರವರ್ಣೋ
ಬಲೋ ರೋಹಿಣೇಜಶ್ಚ ರಾಮಶ್ಚ ಶೇಷಃ ।
ಬಲೀ ಪದ್ಮನೇತ್ರಶ್ಚ ಕೃಷ್ಣಾಗ್ರಜಶ್ಚ
ಧರೇಶಃ ಫಣೀಶಸ್ತು ನೀಲಾಂಬರಾಭಃ ॥ ೩೩ ॥

ಗಳನ್ನು ಈಡೇರಿಸುವವನು. **ಗೋಪಯುಕ್**—ಗೋಪಾಲಕರ ಜೊತೆಯಲ್ಲಿಯೇ ಇರುವವನು. **ಗೋಪಃ**—ತಾನೂ ಗೊಲ್ಲನೆನಿಸಿದವನು. **ಆನಂದಕಾರೀ** — ಆನಂದವನ್ನುಂಟುಮಾಡುವವನು. **ಸ್ಥಿರೀ** — ಸ್ಥಿರನಾದವನು. **ಅಗ್ನಿಭುಕ್**—ಕಾಡುಗಿಚ್ಚನ್ನು ನುಂಗಿದವನು. **ಪಾಲಕಃ**--ಜಗತ್ಸಂರಕ್ಷಕನು. **ಬಾಲಲೀಲಃ**--ಎಳೆಯ ಹುಡುಗನಂತೆ ಲೀಲೆಗಳನ್ನು ತೋರ್ಪಡಿಸಿದವನು **ಸುರಾಗಃ**--ಸೊಗಸಾದ ರಾಗಗಳನ್ನು ಆಲಾಪನೆ ಮಾಡುವವನು. ಅಥವಾ ಒಳ್ಳೆಯ ಅನುರಾಗವುಳ್ಳವನು. **ವಂಶೀಧರಃ**--ಕೊಳಲನ್ನು ಕೈಲಿ ಹಿಡಿದಿರುವವನು. **ಪುಷ್ಪಶೀಲಃ**--ಪುಷ್ಪದಂತೆ ಆಕರ್ಷಣೀಯವಾದ ನಡತೆಯುಳ್ಳವನು. ಅಥವಾ ಹೂಗಳಲ್ಲಿ ಪ್ರೀತಿಯುಳ್ಳವನು.

೩೩. **ಪ್ರಲಂಬಪ್ರಭಾನಾಶಕಃ**--ಪ್ರಲಂಬನ ತೇಜಸ್ಸನ್ನು ಹೋಗಲಾಡಿಸಿದವನು. **ಗೌರವರ್ಣಃ**--ಬಿಳಿದಾದ ಮೈಬಣ್ಣವುಳ್ಳವನು. **ಬಲಃ**--ಬಲಶಾಲಿಯು. **ರೋಹಿಣೇಜಃ**---ರೋಹಿಣಿಯ ಮಗನು. **ರಾಮಃ**---ತನ್ನ ಸೌಂದರ್ಯದಿಂದ ಎಲ್ಲರನ್ನೂ ಸಂತೋಷಪಡಿಸುವವನು. **ಶೇಷಃ**--ಆದಿಶೇಷನ ಅವತಾರನು. **ಬಲೀ**--ಬಲಾಢ್ಯನು. **ಪದ್ಮನೇತ್ರಃ**--ಕಮಲದಂತೆ ಸುಂದರವಾದ ಕಣ್ಣುಗಳುಳ್ಳವನು. **ಕೃಷ್ಣಾಗ್ರಜಃ**--ಕೃಷ್ಣನಿಗಿಂತಲೂ ಮೊದಲು ಜನಿಸಿದವನು. (ಅಣ್ಣ) **ಧರೇಶಃ**--ಭೂಮಿಗಧಿಪತಿಯು. **ಫಣೀಶಃ**--ಸರ್ಪಗಳಿಗೆಲ್ಲಾ ಸಾರ್ವಭೌಮನಾದ ಆದಿಶೇಷನೆನಿಸಿದವನು. **ನೀಲಾಂಬರಾಭಃ**--ನೀಲವಾದ ವರ್ಣವುಳ್ಳ ವಸ್ತ್ರಗಳುಳ್ಳವನು. (ಈ ಮೇಲೆ ಹೇಳಿದ ಹೆಸರುಗಳೆಲ್ಲವೂ ಬಲರಾಮನಿಗೆ ಅನ್ವಯಿಸುವುದಾದರೂ ಆ ಬಲರಾಮನು ಶ್ರೀಕೃಷ್ಣನ ಅಂಶವಾದುದರಿಂದ ಶ್ರೀಕೃಷ್ಣನಿಗೇ ಅನ್ವಯಿಸುವುದೆಂದು ತಿಳಿಯಬೇಕು.)

ಮಹಾಸೌಖ್ಯದೋ ಹ್ಯಗ್ನಿಹಾರವ್ರಜೇಶಃ
ಶರದ್ಗ್ರೀಷ್ಮವರ್ಷಾಕರಃ ಕೃಷ್ಣವರ್ಣಃ |
ವ್ರಜೇ ಗೋಪಿಕಾಪೂಜಿತಶ್ಚೀರಹರ್ತಾ
ಕದಂಬೇ ಸ್ಥಿತಶ್ಚೀರದಃ ಸುಂದರೀಶಃ || ೩೪ ||

ಕ್ಷುಧಾನಾಶಕೃದ್ಯಜ್ಞಪತ್ನೀಮನಸ್ಸ್ಪೃಕ್
ಕೃಪಾಕಾರಕಃ ಕೇಲಿಕರ್ತಾವನೀಶಃ |
ವ್ರಜೇ ಶಕ್ರಯಾಗಪ್ರಣಾಶೀ ಮಿತಾಶೀ
ಶುನಾಸೀರಮೋಹಪ್ರದೋ ಬಾಲರೂಪೀ || ೩೫ ||

---

೩೪. **ಮಹಾಸೌಖ್ಯದಃ**--ಅತಿಶಯವಾದ ಸೌಖ್ಯವನ್ನುಂಟುಮಾಡುವವನು. **ಅಗ್ನಿಹಾರಃ**--ಅಗ್ನಿಯನ್ನು ಉಪಸಂಹರಿಸಿದವನು. **ವ್ರಜೇಶಃ**--ವ್ರಜೇಶ್ವರನು. **ಶರದ್ಗ್ರೀಷ್ಮವರ್ಷಾಕರಃ**--ಶರತ್, ಗ್ರೀಷ್ಮ, ವರ್ಷ ಎಂಬ ಋತುಗಳನ್ನು ರಚಿಸಿದವನು. **ಕೃಷ್ಣವರ್ಣಃ**--ಕಪ್ಪಾದ ಶರೀರಕಾಂತಿಯುಳ್ಳವನು. **ವ್ರಜೇ ಗೋಪಿಕಾಪೂಜಿತಃ**--ಗೋಕುಲದಲ್ಲಿ ಗೋಪಾಂಗನೆಯರಿಂದ ಪೂಜಿಸಲ್ಪಟ್ಟವನು. **ಚೀರಹರ್ತಾ**--ಗೋಪಸ್ತ್ರೀಯರ ಸೀರೆಗಳನ್ನು ಕದ್ದವನು. **ಕದಂಬೇ ಸ್ಥಿತಃ**--ಕದಂಬವೃಕ್ಷದ ಮೇಲೇರಿ ಕುಳಿತವನು. **ಚೀರದಃ**--ಅಪಹರಿಸಿದ ಸೀರೆಗಳನ್ನು ಮರಳಿ ಕೊಟ್ಟವನು. **ಸುಂದರೀಶಃ**--ಚಲುವೆಯರಿಗೆ ಪ್ರಿಯನೆನಿಸಿದವನು.

೩೫. **ಕ್ಷುಧಾನಾಶಕೃತ್**-ಹಸಿವನ್ನು ನಾಶಪಡಿಸಿದವನು. **ಯಜ್ಞಪತ್ನೀಮನಸ್ಸ್ಪೃಕ್**-ಯಜ್ಞದೀಕ್ಷಿತರ ಪತ್ನಿಯರಿಂದ ಮನಸ್ಸಿನಲ್ಲಿಯೇ ಧ್ಯಾನಿಸಲ್ಪಟ್ಟವನು. **ಕೃಪಾಕಾರಕಃ**-ದಯಾಶಾಲಿಯು. **ಕೇಲಿಕರ್ತಾ**-ನಾನಾಲೀಲೆಗಳನ್ನು ವಹಿಸುವನು. **ಅವನೀಶಃ**-ಭೂಕಾಂತನು. **ವ್ರಜೇ ಶಕ್ರಯಾಗಪ್ರಣಾಶೀ**-ಗೋಕುಲದಲ್ಲಿ ನಡೆಯುತ್ತಿದ್ದ ಇಂದ್ರೋತ್ಸವವನ್ನು ನಿಲ್ಲಿಸಿದವನು. **ಮಿತಾಶೀ**-ಮಿತವಾಗಿ ಭುಜಿಸತಕ್ಕವನು. **ಶುನಾಸೀರಮೋಹಪ್ರದಃ**-ಇಂದ್ರನಿಗೂ ಮೋಹವನ್ನುಂಟುಮಾಡಿದವನು. **ಬಾಲರೂಪೀ**-ಬಾಲರೂಪವನ್ನು ಧರಿಸಿದವನು,

ಗಿರೇಃ ಪೂಜಕೋ ನಂದಪುತ್ರೋ ಹ್ಯಗಧೃಃ
ಕೃಪಾಕೃಚ್ಚ ಗೋವರ್ಧನೋದ್ಧಾರಿನಾಮಾ ।
ತಥಾ ವಾತವರ್ಷಾಹರೋ ರಕ್ಷಕಶ್ಚ
ವ್ರಜಾಧೀಶಗೋಪಾಂಗನಾ ಶಂಕಿತಃ ಸಂ ॥ ೩೬ ॥

ಅಗೇಂದ್ರೋಪರಿ ಶಕ್ರಪೂಜ್ಯಃ ಸ್ತುತಃ ಪ್ರಾಕ್
ಮೃಷಾಶಿಕ್ಷಕೋ ದೇವಗೋವಿಂದನಾಮಾ ।
ವ್ರಜಾಧೀಶರಕ್ಷಾಕರಃ ಪಾಶಿಪೂಜ್ಯೋಽ-
ನುಜೈ ರ್ಗೋಪಜೈರ್ದಿವ್ಯವೈಕುಂಠದರ್ಶೀ ॥ ೩೭ ॥

೩೬-೩೭. **ಗಿರೇಃ ಪೂಜಕಃ**-ಗೋವರ್ಧನ ಗಿರಿಯನ್ನು ಪೂಜಿಸಿದವನು. **ನಂದಪುತ್ರಃ**–ನಂದಕುಮಾರನು. **ಅಗಧೃಃ**-ಅದೇಪರ್ವತವನ್ನು ಎತ್ತಿದವನು. **ಕೃಪಾಕೃತ್**---ಕರುಣಾಕರನು. **ಗೋವರ್ಧನೋದ್ಧಾರಿನಾಮಾ**--ಗೋವರ್ಧನೋದ್ಧಾರಿಯೆಂದೇ ಹೆಸರಾದವನು. **ವಾತವರ್ಷಾಹರಃ**-ಗಿರಿಪೂಜಾ ಸಂದರ್ಭದಲ್ಲಿ ಕುಪಿತನಾದ ಇಂದ್ರನಿಂದ ಪ್ರೇರಿತವಾದ ಬಿರುಗಾಳಿಯನ್ನೂ ಭಾರಿಮಳೆಯನ್ನೂ ಹೋಗಲಾಡಿಸಿದವನು. **ವ್ರಜಾಧೀಶಗೋಪಾಂಗನಾಶಂಕಿತಸ್ಸಂರಕ್ಷಕಃ**-ಏನಾಗುವುದೋ ಎಂಬ ಹೆದರಿಕೆಯಿಂದ ತಲ್ಲಣಿಸುತ್ತಿದ್ದ ನಂದಗೋಪನನ್ನೂ, ಗೋಪಾಂಗನೆಯರನ್ನೂ ಸಂರಕ್ಷಿಸಿದವನು. **ಅಗೇಂದ್ರೋಪರಿ ಶಕ್ರಪೂಜ್ಯಃ**–ಗೋವರ್ಧನ ಪರ್ವತದಮೇಲೆ ಇಂದ್ರನಿಂದ ಪೂಜಿಸಲ್ಪಟ್ಟವನು. **ಪ್ರಾಕ್‌ಸ್ತುತಃ**-ಆತನಿಂದ ಮೊದಲು ಸ್ತುತಿಸಲ್ಪಟ್ಟವನು. **ಮೃಷಾಶಿಕ್ಷಕಃ**-ಸುಳ್ಳನ್ನು ಶಿಕ್ಷಿಸುವವನು. **ದೇವಗೋವಿಂದನಾಮಾ**- ಗೋವಿಂದ ದೇವನೆಂಬದಾಗಿ ಕರೆಯಲ್ಪಟ್ಟವನು. **ವ್ರಜಾಧೀಶರಕ್ಷಾಕರಃ**-ವರುಣನ ಅನುಚರರಿಂದ ಅಪಹರಿಸಲ್ಪಟ್ಟಿದ್ದ ವ್ರಜಾಧೀಶನಾದ ನಂದನನ್ನು ಕಾಪಾಡಿದವನು. **ಪಾಶಿಪೂಜ್ಯಃ**-ವರುಣನಿಂದ ಪೂಜಿಸಲ್ಪಟ್ಟವನು. **ಅನುಜೈರ್ಗೋಪಜೈರ್ದಿವ್ಯವೈಕುಂಠದರ್ಶೀ**- ತನ್ನ ಸಹೋದರರಾದ ಗೋಪಾಲರೊಡನೆ ದಿವ್ಯವಾದ ವೈಕುಂಠವನ್ನು ಸಂದರ್ಶಿಸಿದವನು ॥೨೦೦॥

ಚಲಚ್ಚಾರುವಂಶೀಕಣಃ ಕಾಮಿನೀಶೋ
ವ್ರಜೇ ಕಾಮಿನೀಮೋಹದಃ ಕಾಮರೂಪಃ ।
ರಸಾಕ್ತೋ ರಸೀ ರಾಸಕೃದ್ರಾಧಿಕೇಶೋ
ಮಹಾಮೋಹದೋ ಮಾನಿನೀಮಾನಹಾರೀ ॥ ೩೮ ॥

ವಿಹಾರೀ ವರೋ ಮಾನಹೃದ್ರಾಧಿಕಾಂಗೋ
ಧರಾದ್ವೀಪಗಃ ಖಂಡಚಾರೀ ವನಸ್ಥಃ ।
ಪ್ರಿಯೋ ಹ್ಯಷ್ಟವಕ್ರರ್ಷಿದ್ರಷ್ಟಾ ಸರಾಧೋ
ಮಹಾಮೋಕ್ಷದಃ ಪದ್ಮಹಾರೀ ಪ್ರಿಯಾರ್ಥಃ ॥ ೩೯ ॥

---

೩೮. **ಚಲಚ್ಚಾರುವಂಶೀಕ್ವಣಃ**-ಗಾಳಿಯಲ್ಲಿ ಹಬ್ಬುತ್ತಿರುವ ಮುದ್ದಾದ ಕೊಳಲಿನ ದನಿಯುಳ್ಳವನು. **ಕಾಮಿನೀಶಃ**-ತಾವಾಗಿ ಕಾಮಿಸಿ ಬಂದ ಗೋಪಾಂಗನೆಯರ ಪ್ರೇಮಾಸ್ಪದನು. **ವ್ರಜೇ ಕಾಮಿನೀಮೋಹದಃ**-ವ್ರಜಾಂಗನೆಯರಿಗೆ ಮೋಹವುಂಟುಮಾಡಿದವನು. **ಕಾಮರೂಪಃ**-ಇಷ್ಟಬಂದ ರೂಪಗಳನ್ನು ಧರಿಸಬಲ್ಲವನು. ಅಥವಾ ಮನ್ಮಥಾಕಾರನು. **ರಸಾಕ್ತಃ**-ಶೃಂಗಾರಾದಿ ರಸಗಳಲ್ಲಿ ವ್ಯಕ್ತವಾಗುವವನು. **ರಸೀ**-ರಸಾನುಭವಕುಶಲನು. **ರಾಸಕೃತ್**-ರಾಸಲೀಲೆಯನ್ನಾಡಿದವನು. **ರಾಧಿಕೇಶಃ**-ರಾಧಾರಮಣನು. **ಮಹಾಮೋಹದಃ**-ಬಿಡಿಸಿಕೊಳ್ಳಲಾಗದಂತಹ ಮೋಹವನ್ನುಂಟುಮಾಡುವವನು, ಅಥವಾ ಭಾರಿಯಾದ ಅಜ್ಞಾನವನ್ನು ಖಂಡಿಸುವವನು. **ಮಾನಿನೀಮಾನಹಾರೀ**-ಪ್ರಣಯಕೋಪದಿಂದ ಪರಾಙ್ಮುಖರಾದ ನಾರಿಯರ ಬಿಗುಮಾನವನ್ನು ಹೋಗಲಾಡಿಸಿದವನು.

೩೯. **ವಿಹಾರೀ**-ವಿಹಾರಾಸಕ್ತನು. **ವರಃ**-ಶ್ರೇಷ್ಠನಾದವನು. **ಮಾನಹೃತ್**-ಗರ್ವಿತರಾದವರ ಹೆಮ್ಮೆಯನ್ನು ಅಡಗಿಸುವವನು. **ರಾಧಿಕಾಂಗಃ**-ರಾಧೆಯು ಅಂಗವೆನಿಸಿದವನು. **ಧರಾದ್ವೀಪಗಃ**-ಭೂಮಿಯಮೇಲೆ ಇರುವ ದ್ವೀಪಗಳಲ್ಲೆಲ್ಲಾ ಸಂಚರಿಸುವವನು. **ಖಂಡಚಾರೀ**-ಇಂದ್ರ, ಶ್ವೇತ, ಗಭಸ್ತಿ ಮೊದಲಾದ ನವಖಂಡಗಳಲ್ಲಿ ಸಂಚರಿಸಬಲ್ಲವನು. **ವನಸ್ಥಃ**-ಕಾಡಿನಲ್ಲಿರುವವನು. **ಪ್ರಿಯಃ**-ಎಲ್ಲರಿಗೂ ಬೇಕಾದವನು. **ಅಷ್ಟವಕ್ರರ್ಷಿದ್ರಷ್ಟಾ**-ಅಷ್ಟಾವಕ್ರಮುನಿಯಿಂದ ಸಾಕ್ಷಾತ್ಕರಿಸಲ್ಪಟ್ಟವನು. **ಸರಾಧಃ**-ರಾಧೆಯೊಡನೆ ಇರುವವನು.

ವಟಸ್ಥಃ ಸುರಶ್ಚಂದನಾಕ್ತಃ ಪ್ರಸಕ್ತೋ
ವ್ರಜಂ ಹ್ಯಾಗತೋ ರಾಧಯಾ ಮೋಹಿನೀಷು ।
ಮಹಾಮೋಹಕೃದ್ಗೋಪಿಕಾಗೀತಕೀರ್ತಿ
ರಸಸ್ಥಃ ಪಟೀ ದುಃಖಿತಾಕಾಮಿನೀಶಃ ॥ ೪೦ ॥

ವನೇ ಗೋಪಿಕಾತ್ಯಾಗಕೃತ್ಪಾದಚಿಹ್ನ-
ಪ್ರದರ್ಶೀ ಕಲಾಕಾರಕಃ ಕಾಮಮೋಹೀ ।
ವಶೀ ಗೋಪಿಕಾಮಧ್ಯಗಃ ಪೇಶವಾಚಃ
ಪ್ರಿಯಾಪ್ರೀತಿಕೃದ್ರಾಸರಕ್ತಃ ಕಲೇಶಃ ॥ ೪೧ ॥

ಮಹಾಮೋಕ್ಷದಃ-ಉತ್ತಮವಾದ ಮೋಕ್ಷವನ್ನು ಕೊಡುವವನು. **ಪದ್ಮಹಾರೀ**-ಕಮಲಮಾಲೆಯನ್ನು ಧರಿಸಿರುವವನು- **ಪ್ರಿಯಾರ್ಥಃ**-ಪ್ರಿಯವಾದ ಸಕಲವಸ್ತುಗಳುಳ್ಳವನು.

೪೦. **ವಟಸ್ಥಃ**-ಆಲದಎಲೆಯಲ್ಲಿ ಮಲಗಿರುವವನು. **ಸುರಃ**-ತನ್ನತೇಜಸ್ಸಿನಿಂದ ಮೆರೆಯುವವನು. **ಚಂದನಾಕ್ತಃ**-ಶ್ರೀಗಂಧದಿಂದ ಅನುಲೇಪನವನ್ನು ಮಾಡಿಕೊಂಡವನು. **ಪ್ರಸಕ್ತಃ**-ಪ್ರತಿಯೊಂದು ಅಂಶಕ್ಕೂ ಸಂಬಂಧಪಟ್ಟವನು. **ರಾಧಯಾ ವ್ರಜಮಾಗತಃ**-ರಾಧೆಯೊಡನೆ ಗೋಕುಲಕ್ಕೆ ಬಂದವನು. **ಮೋಹಿನೀಷು ಮಹಾಮೋಹಕೃತ್**-ತಮ್ಮ ಹಾವಭಾವ ವಿಲಾಸಗಳಿಂದ ಸಕಲರನ್ನೂ ಮೋಹಗೊಳಿಸಬಲ್ಲ ಕಾಂತೆಯರಿಗೂ ಸಹ ಮಹತ್ತಾದ ಮೋಹಾತಿಶಯವನ್ನು ಉಂಟುಮಾಡಬಲ್ಲವನು. **ಗೋಪಿಕಾಗೀತಕೀರ್ತಿಃ**-ಗೋಪಾಂಗನೆಯರಿಂದ ಗಾನಮಾಡಲ್ಪಟ್ಟ ಕೀರ್ತಿಯುಳ್ಳವನು. **ರಸಸ್ಥಃ**-ರಸಗಳಲ್ಲಿ ನೆಲಸಿರುವವನು. **ಪಟೀ**-ಉತ್ತಮವಾದ ವಸನಗಳುಳ್ಳವನು. **ದುಃಖಿತಾಕಾಮಿನೀಶಃ**-ವಿರಹದುಃಖದಿಂದ ಪೀಡಿತರಾದ ಕಾಮಿನಿಯರಿಗೆ ಪ್ರಿಯನಾದವನು.

೪೧. **ವನೇ ಗೋಪಿಕಾತ್ಯಾಗಕೃತ್**-ಯಮುನಾತೀರದ ವನದಲ್ಲಿ ಗೋಪಾಂಗನೆಯರನ್ನು ತೊರೆದು ಕಣ್ಮರೆಯಾದವನು. **ಪಾದಚಿಹ್ನಪ್ರದರ್ಶೀ**-ಕಾಲಿನ ಗುರುತುಗಳನ್ನು ತೋರ್ಪಡಿಸಿದವನು. **ಕಲಾಕಾರಕಃ**-ಕಲೆಗಳನ್ನು ರಚಿಸಿದವನು. **ಕಾಮಮೋಹೀ**-ಮನ್ಮಥನಂತೆ ಮೋಹವನ್ನುಂಟುಮಾಡು

ರಸಾರಕ್ತಚಿತ್ತೋ ಹ್ಯನಂತಸ್ವರೂಪಃ
ಸ್ರಜಾ ಸಂವೃತೋ ಬಲ್ಲವೀಮಧ್ಯಸಂಸ್ಥಃ ।
ಸುಬಾಹುಃ ಸುಪಾದಃ ಸುವೇಷಃ ಸುಕೇಶೋ
ವ್ರಜೇಶಃ ಸಖಾವಲ್ಲಭೇಶಃ ಸುದೇಶಃ ॥ ೪೨ ॥

ಕ್ವಣತ್ಕಿಂಕಿಣೀಜಾಲಭೃನ್ನೂಪುರಾಢ್ಯೋ
ಲಸತ್ಕಂಕಣೋ ಹ್ಯಂಗದೀ ಹಾರಭಾರಃ ।
ಕಿರೀಟೀ ಚಲತ್ಕುಂಡಲಶ್ಚಾಂಗುಲೀಯ-
ಸ್ಫುರತ್ಕೌಸ್ತುಭೋ ಮಾಲತೀಮಂಡಿತಾಂಗಃ ॥ ೪೩ ॥

ವವನು, ಅಥವಾ ಮನ್ಮಥನಿಗೂ ಮೋಹವುಂಟಾಗುವಂತೆ ಮಾಡುವವನು. ವಶೀ-ಭಕ್ತವಶ್ಯನು. **ಗೋಪಿಕಾಮಧ್ಯಗಃ**-ಗೋಪಿಯರ ನಡವೆ ಇರುವವನು. **ಪೇಶವಾಚಃ**-ಮಧುರವಾದ ಮಾತುಗಳುಳ್ಳವನು. **ಪ್ರಿಯಾಪ್ರೀತಿಕೃತ್**-ತನ್ನ ಪ್ರಿಯೆಯರಾದ ಗೋಪಿಯರಲ್ಲಿ ಅನುರಾಗವುಳ್ಳವನು, ಅಥವಾ ತಮ್ಮ ತಮ್ಮ ಪತಿಗಳಲ್ಲಿ ಅವರಿಗೆ ಪ್ರೀತಿಯಿಲ್ಲದಂತೆ ಮಾಡಿದವನು. **ರಾಸರಕ್ತಃ**-ರಾಸಲೀಲೆಯಲ್ಲಿ ಅಭಿಲಾಷೆಯುಳ್ಳವನು. **ಕಲೇಶಃ**-ಕಲೆಗಳಿಗೆಲ್ಲಾ ಅಧಿಪತಿಯು.

೪೨. **ರಸಾರಕ್ತಚಿತ್ತಃ**-ಭೂದೇವಿಯಲ್ಲಿ ಅನುರಾಗವನ್ನು ತಾಳಿದ ಮನಸ್ಸುಳ್ಳವನು. **ಅನಂತಸ್ವರೂಪಃ**-ಭೂಮಿಯನ್ನು ಹೊತ್ತಿರುವ ಆದಿಶೇಷನ ಸ್ವರೂಪನಾದವನು. **ಸ್ರಜಾಸಂವೃತಃ**-ಹೂವಿನ ಮಾಲೆಯಿಂದ ಮೈಮೇಲೆ ಸುತ್ತುವರಿಯಲ್ಪಟ್ಟವನು (ಅಲಂಕೃತನಾದವನು). **ವಲ್ಲವೀಮಧ್ಯಸಂಸ್ಥಃ**-ತನ್ನನ್ನು ಬಳಸಿ ನಿಂತಿರುವ ಗೋಪಾಂಗನೆಯರ ನಡುವೆ ನಿಂತಿರುವವನು. **ಸುಬಾಹುಃ**-ಸೊಗಸಾದ ಬಾಹುಗಳುಳ್ಳವನು. **ಸುಪಾದಃ**-ಅಂದವಾದ ಕಾಲುಗಳುಳ್ಳವನು. **ಸುವೇಷಃ**-ಮುದ್ದಾದ ವೇಷದಿಂದ ಕಂಗೊಳಿಸುವವನು. **ಸುಕೇಶಃ**-ಸೊಗಸಾದ ಮುಂಗುರುಳುಗಳಿಂದ ರಂಜಿಸುವವನು. **ವ್ರಜೇಶಃ**-ಗೋಕುಲಾಧಿಪತಿಯು. **ಸಖಾ**-ಎಲ್ಲರಿಗೂ ಗೆಳೆಯನೆನಿಸಿದವನು. **ವಲ್ಲಭೇಶಃ**-ಪ್ರಣಯಿನಿಯರ ಪ್ರೀತಿಪಾತ್ರನು, ಅಥವಾ ತನ್ನ ವಿಷಯದಲ್ಲಿ ಸುಪ್ರೀತನಾದ ಉಗ್ರಸೇನನೆಂಬ ಪ್ರಭುವನ್ನು ಪಡೆದವನು. **ಸುದೇಶಃ**-ಒಳ್ಳೆಯ ದೇಶದಲ್ಲಿರುವವನು.

೪೩. **ಕ್ವಣತ್ಕಿಂಕಿಣೀಜಾಲಭೃನ್ನೂಪುರಾಢ್ಯಃ**-ಝಣಝಣರೆನ್ನುತ್ತಿರುವ ಕಿರುಗೆಜ್ಜೆಗಳನ್ನು ಕಟ್ಟಿದ ಕಾಲಂದುಗೆಗಳುಳ್ಳವನು. **ಲಸತ್ಕಂಕಣಃ**-ನೆರೆಯು

ಮಹಾನೃತ್ಯಕೃದ್ರಾಸರಂಗಃ ಕಲಾಢ್ಯಃ
ಚಲದ್ಧಾರಭೋ ಭಾಮಿನೀ ನೃತ್ಯಯುಕ್ತಃ ।
ಕಲಿಂದಾಂಗಜಾಕೇಲಿಕೃತ್ಕುಂಕುಮಶ್ರೀಃ
ಸ್ಸುರೈರ್ನಾಯಿಕಾನಾಯಕೈರ್ಗೀಯಮಾನಃ ॥ ೪೪ ॥

ಸುಖಾಢ್ಯಸ್ತು ರಾಧಾಪತಿಃ ಪೂರ್ಣಬೋಧಃ
ಕಟಾಕ್ಷಸ್ಮಿತೀ ವಲ್ಗಿತಭ್ರೂವಿಲಾಸಃ ।
ಸುರಮ್ಯೋಽಲಿಭಿಃ ಕುಂತಲಾಲೋಲಕೇಶಃ
ಸ್ಫುರದ್ಬರ್ಹಕುಂದಸ್ರಜಾ ಚಾರುವೇಷಃ ॥ ೪೫ ॥

ತ್ತಿರುವ ಕೈಯ ಬಳೆಗಳುಳ್ಳವನು. ಅಂಗದೀ-ತೋಳುಬಂದಿಯಿಂದ ಕೂಡಿರುವವನು. ಹಾರಭಾರಃ-ಹಾರಗಳ ಸಮುದಾಯವನ್ನು ಧರಿಸಿರುವವನು. ಕಿರೀಟೀ-ಕಿರೀಟದಿಂದ ಶೋಭಿಸುವವನು. ಚಲತ್ಕುಂಡಲಃ-ಅಲುಗುತ್ತಿರುವ ಕಡುಕುಗಳುಳ್ಳವನು. ಅಂಗುಲೀಯಸ್ಫುರತ್ಕೌಸ್ತುಭಃ-ಉಂಗುರದಲ್ಲಿ ಹೊಳೆಯುತ್ತಿರುವ ಕೌಸ್ತುಭವೆಂಬ ಮಣಿಜಾತಿಗೆ ಸೇರಿದ ರತ್ನಗಳುಳ್ಳವನು. ಮಾಲತೀಮಂಡಿತಾಂಗಃ-ಜಾತೀಪುಷ್ಪಗಳಿಂದ ಅಂಗಗಳೆಲ್ಲವನ್ನೂ ಅಲಂಕರಿಸಿಕೊಂಡಿರುವವನು.

೪೪. ಮಹಾನೃತ್ಯಕೃತ್-ಅದ್ಭುತವಾದ ನರ್ತನವನ್ನು ಮಾಡುವವನು. ರಾಸರಂಗಃ-ರಾಸಮಂಡಲವೇ ರಂಗಸ್ಥಲವಾಗಿರುವವನು. ಕಲಾಢ್ಯಃ-ಕಲೆಗಳನ್ನು ಚೆನ್ನಾಗಿ ಅರಿತವನು. ಚಲದ್ಧಾರಭಃ-ಥಳಥಳನೆ ಹೊಳೆಯುತ್ತಿರುವ ಹಾರಗಳ ಕಾಂತಿಯುಳ್ಳವನು. ಭಾಮಿನೀನೃತ್ಯಯುಕ್ತಃ-ಕಾಮಿನಿಯರೊಡನೆ ನರ್ತನಮಾಡಿದವನು. ಕಲಿಂದಾಂಗಜಾಕೇಲಿಕೃತ್-ಯಮುನಾನದಿಯಲ್ಲಿ ವಿಹಾರವೆಸಗಿದವನು. ಕುಂಕುಮಶ್ರೀಃ-ಕೇಸರಿಯಂತೆ ಮೆರೆಯುವ ಕಾಂತಿಯುಳ್ಳವನು. ನಾಯಿಕಾನಾಯಕೈಸ್ಸುರೈರ್ಗೀಯಮಾನಃ-ದೇವಲೋಕದ ನರನಾರಿಯರಿಂದ ಗಾನಮಾಡಲ್ಪಡುವವನು.

೪೫. ಸುಖಾಢ್ಯಃ-ಸರ್ವದಾ ಸುಖಪುರುಷನು. ರಾಧಾಪತಿಃ-ರಾಧೆಯ ವಲ್ಲಭನು. ಪೂರ್ಣಬೋಧಃ-ಪರಿಪೂರ್ಣ ಜ್ಞಾನಸ್ವರೂಪನು. ಕಟಾಕ್ಷಸ್ಮಿತೀ-

ಮಹಾಸರ್ಪತೋ ನಂದರಕ್ಷಾಪರಾಂಘ್ರಿಃ
ಸದಾ ಮೋಕ್ಷದಃ ಶಂಖಚೂಡಪ್ರಣಾಶೀ ।
ಪ್ರಜಾರಕ್ಷಕೋ ಗೋಪಿಕಾಗೀಯಮಾನಃ
ಕಕುದ್ಮಿಪ್ರಣಾಶಪ್ರಯಾಸಃ ಸುರೇಜ್ಯಃ ॥ ೪೬ ॥

ಕಲಿಃ ಕ್ರೋಧಕೃತ್ಕಂಸಮಂತ್ರೋಪದೇಷ್ಟಾ
ತಥಾಕ್ರೂರಮಂತ್ರೋಪದೇಶೀ ಸುರಾರ್ಥಃ ।
ಬಲೀ ಕೇಶಿಹಾ ಪುಷ್ಪವರ್ಷೋಽಮಲಶ್ರೀ-
ಸ್ತಥಾ ನಾರದಾದ್ದರ್ಶಿತೋ ವ್ಯೋಮಹಂತಾ ॥ ೪೭ ॥

ಕಣ್ಣಿನ ಕೊನೆಯಿಂದಲೇ ನಗುವನ್ನು ಬೀರುವವನು. **ವಲ್ಗಿತಭ್ರೂವಿಲಾಸಃ**-ನಾನಾವಿಧವಾಗಿ ಹುಬ್ಬುಗಳನ್ನು ರಚಿಸುವವನು. **ಸುರಮ್ಯಃ**-ರಮಣೀಯವಾದ ಆಕಾರವುಳ್ಳವನು ಅಲಿಭಿಃ (?) **ಕುಂತಲಾಲೋಲಕೇಶಃ**-ದುಂಬಿಯಂತೆ ಕಪ್ಪಾದ ಮುಂಗುರುಳುಗಳು ಇತ್ತಲಿಂದತ್ತ ಅಲುಗುತ್ತಿರುವವು. **ಸ್ಫುರದ್ಬರ್ಹಕುಂದಸ್ರಜಾ ಚಾರುವೇಷಃ** --- ಹೊಳೆಯುತ್ತಿರುವ ನವಿಲುಗರಿಯಿಂದಲೂ, ಮೊಲ್ಲೆಯ ಹೂಗಳ ದಂಡೆಯಿಂದಲೂ ಮುದ್ದಾಗಿ ಒಪ್ಪುತ್ತಿರುವ ವೇಷ ಉಳ್ಳವನು

೪೬. **ಮಹಾಸರ್ಪತೋ ನಂದರಕ್ಷಾಪರಾಂಘ್ರಿಃ**-ತನ್ನ ಸ್ಪರ್ಶಮಾತ್ರದಿಂದಲೇ ಭಾರಿಯಾದ ಹಾವಿನಿಂದ ನಂದನನ್ನು ಬಿಡಿಸಿದ ಪಾದವುಳ್ಳವನು. **ಸದಾಮೋಕ್ಷದಃ**–ಶಾಶ್ವತವಾದ ಮೋಕ್ಷಸುಖವನ್ನು ಈಯುವವನು. **ಶಂಖಚೂಡಪ್ರಣಾಶೀ**-- ಶಂಖಚೂಡನೆಂಬ ಯಕ್ಷನನ್ನು ವಧಿಸಿದವನು. **ಪ್ರಜಾರಕ್ಷಕಃ**-ಪ್ರಜೆಗಳನ್ನು ಸಲಹುವವನು. **ಗೋಪಿಕಾಗೀಯಮಾನಃ**–ಗೋಪಿಯರಿಂದ ಹಾಡಲ್ಪಟ್ಟ ನಿಜವೈಭವವುಳ್ಳವನು. **ಕಕುದ್ಮಿಪ್ರಣಾಶಪ್ರಯಾಸಃ**-ಗೂಳಿಯ ವೇಷವನ್ನು ತಾಳಿಬಂದ ಅರಿಷ್ಟನೆಂಬ ದಾನವನನ್ನು ಕೊಂದವನು. **ಸುರೇಜ್ಯಃ**-ದೇವತೆಗಳಿಂದ ಸ್ತುತಿಸಲ್ಪಡುವವನು.

೪೭. **ಕಲಿಃ**---ಕಲಿಯುಗಸ್ವರೂಪನು, ಅಥವಾ ಸಕಲಾಶ್ರಯನು. **ಕ್ರೋಧಕೃತ್**-ಕೋಪವುಳ್ಳವನು. **ಕಂಸಮಂತ್ರೋಪದೇಷ್ಟಾ**–ಕಂಸನಿಗೆ

ತಥಾಕ್ರೂರಸೇವಾಪರಃ ಸರ್ವದರ್ಶೀ
ವ್ರಜೇ ಗೋಪಿಕಾಮೋಹದಃ ಕೂಲವರ್ತೀ ।
ಸತೀರಾಧಿಕಾಬೋಧದಃ ಸ್ವಪ್ನಕರ್ತಾ
ವಿಲಾಸೀ ಮಹಾಮೋಹನಾಶೀ ಸ್ವಬೋಧಃ ॥ ೪೮ ॥

ವ್ರಜೇ ಶಾಪತಸ್ತ್ಯಕ್ತರಾಧಾಸಕಾಶೋ
ಮಹಾಮೋಹದಾವಾಗ್ನಿದಗ್ಧಾಪತಿಶ್ಚ ।
ಸಖೀಬಂಧನಾನ್ಮೋಚಿತಾಕ್ರೂರ ಆರಾ-
ತ್ಸಖೀಕಂಕಣೈಸ್ತಾಡಿತಾಕ್ರೂರರಕ್ಷೀ ॥ ೪೯ ॥

ಹಿತೋಕ್ತಿಗಳನ್ನುಪದೇಶಿಸಿದವನು. **ಅಕ್ರೂರಮಂತ್ರೋಪದೇಶೀ**-ಅಕ್ರೂರನಿಗೆ ಮಂತ್ರೋಪದೇಶವಿತ್ತವನು. **ಸುರಾರ್ಥಃ**-ದೇವತೆಗಳ ಕಾರ್ಯಾರ್ಥವಾಗಿ ಅವತಾರವೆತ್ತಿದವನು. **ಬಲೀ**-ಬಲಶಾಲಿಯು. **ಕೇಶಿಹಾ**-ಕೇಶಿಯೆಂಬ ದಾನವನನ್ನು ಕೊಂದವನು. **ಪುಷ್ಪವರ್ಷಃ**-ಸುರಿಯಲ್ಪಟ್ಟ ಪುಷ್ಪವರ್ಷವುಳ್ಳವನು. **ಅಮಲಶ್ರೀಃ**-ಶುದ್ಧವಾದ ಕಾಂತಿ ಅಥವಾ ವೈಭವವುಳ್ಳವನು. **ನಾರದಾದ್ದರ್ಶಿತಃ**-ನಾರದಮಹರ್ಷಿಯಿಂದ ಸಂದರ್ಶಿಸಲ್ಪಟ್ಟವನು. **ವ್ಯೋಮಹಂತಾ**-ವ್ಯೋಮನೆಂಬ ರಾಕ್ಷಸನನ್ನು ಸಂಹರಿಸಿದವನು.

೪೮. **ಅಕ್ರೂರಸೇವಾಪರಃ**-ಗೋಕುಲಕ್ಕೆ ಬಂದ ಅಕ್ರೂರನನ್ನು ಉಪಚರಿಸಿದವನು. **ಸರ್ವದರ್ಶೀ**-ಎಲ್ಲವನ್ನೂ ಬಲ್ಲವನು. **ವ್ರಜೇ ಗೋಪಿಕಾಮೋಹದಃ**-ಮಧುರೆಗೆ ಹೊರಟುಬಂದು ಗೋಕುಲದಲ್ಲಿಯ ಗೋಪಿಯರಿಗೆ ಮೋಹವನ್ನು (ಮೂರ್ಛೆ) ಉಂಟುಮಾಡಿದವನು, ಅಥವಾ ಗೋಪಿಯರಿಗೆ ತನ್ನಲ್ಲಿ ಮೋಹವುಂಟಾಗುವಂತೆ ಮಾಡಿದವನು. ||೩೦೦|| **ಕೂಲವರ್ತೀ**-ಯಮುನಾತೀರಕ್ಕೆ ಬಂದು ವಿಹರಿಸುವವನು. **ಸತೀರಾಧಿಕಾಬೋಧದಃ**-ಪತಿವ್ರತೆಯಾದ ರಾಧೆಗೆ ಜ್ಞಾನವನ್ನು ಉಪದೇಶಿಸಿದವನು. **ಸ್ವಪ್ನಕರ್ತಾ**-ಮಾಯಾಸ್ವಪ್ನವನ್ನು ರಚಿಸಿದವನು. **ವಿಲಾಸೀ**-ಸರ್ವದಾ ವಿಲಾಸಪರನು. **ಮಹಾಮೋಹನಾಶೀ**-ಮಹತ್ತಾದ ಅಜ್ಞಾನವನ್ನು ನಿವಾರಿಸುವವನು. **ಸ್ವಬೋಧಃ**-ಆತ್ಮಜ್ಞಾನ ಸ್ವರೂಪವನ್ನುಪದೇಶಿಸುವವನು.

೪೯. **ವ್ರಜೇ ಶಾಪತಸ್ತ್ಯಕ್ತರಾಧಾಸಕಾಶಃ**-ಶಾಪವಶದಿಂದ ಗೋಕುಲದಲ್ಲಿ ರಾಧೆಯನ್ನು ಬಿಟ್ಟು ಬಂದವನು. **ಮಹಾಮೋಹದಾವಾಗ್ನಿದಗ್ಧಾ-**

ರಥಸ್ಥೋ ವ್ರಜೇ ರಾಧಯಾ ಕೃಷ್ಣಚಂದ್ರಃ
ಸುಗುಪ್ತೋ ಗಮೀ ಗೋಪಕೈಶ್ಚಾರುಲೀಲಃ ।
ಜಲೇಽಕ್ರೂರಸಂದರ್ಶಿತೋ ದಿವ್ಯರೂಪೋ
ದಿದೃಕ್ಷುಃ ಪುರೀಮೋಹಿನೀಚಿತ್ತಮೋಹೀ ॥ ೫೦ ॥

ತಥಾ ರಂಗಕಾರಪ್ರಣಾಶೀ ಸುವಸ್ತ್ರಃ
ಸ್ರಜೀ ವಾಯಕಪ್ರೀತಿಕೃನ್ಮಾಲಿಪೂಜ್ಯಃ ।
ಮಹಾಕೀರ್ತಿದಶ್ಚಾಪಿ ಕುಬ್ಜಾವಿನೋದೀ
ಸ್ಫುರಚ್ಚಂಡಕೋದಂಡರುಗ್ಣಪ್ರಚಂಡಃ ॥ ೫೧ ॥

ಪತಿಃ-ಮೋಹಾತಿಶಯವೆಂಬ ಕಾಡ್ಗಿಚ್ಚಿನಿಂದ ಬೆಂದುಹೋಗುತ್ತಿರುವ ಕಾಮಿನಿಯರಿಗೆ ಪ್ರಿಯನೆನಿಸಿದವನು. **ಸಖೀಬಂಧನಾನ್ಮೋಚಿತಾಕ್ರೂರಃ**-ತನ್ನ ಕ್ರೀಡಾಸಖಿಯರ ಬಂಧನದಿಂದ ಅಕ್ರೂರನನ್ನು ಬಿಡಿಸಿದವನು. **ಸಖೀಕಂಕಣೈಸ್ತಾಡಿತಾಕ್ರೂರರಕ್ಷೀ**-ಅದೇ ಸಖಿಯರ ಕೈಬಳೆಗಳಿಂದ ಹೊಡೆಯಲ್ಪಡುತ್ತಿದ್ದ ಅಕ್ರೂರನನ್ನು ತಪ್ಪಿಸಿ ಸಲಹಿದವನು.

೫೦. **ರಥಸ್ಥೋ ವ್ರಜೇ ರಾಧಯಾ ಕೃಷ್ಣಚಂದ್ರಸ್ಸುಗುಪ್ತೋ ಗಮೀ**-ಗೋಕುಲದಲ್ಲಿರುವ ರಾಧೆಗೂ ತಿಳಿಯದಂತೆ ಗುಟ್ಟಾಗಿ ರಥದಲ್ಲಿ ಕುಳಿತು (ಮಥುರೆಗೆ) ಹೊರಟವನು. **ಗೋಪಕೈಶ್ಚಾರುಲೀಲಃ** --ಗೋಪಾಲಕರೊಡನೆ ಸೊಗಸಾದ ಆಟಪಾಟಗಳಲ್ಲಿ ತೊಡಗಿದವನು. **ಜಲೇಽಕ್ರೂರಸಂದರ್ಶಿತೋ ದಿವ್ಯರೂಪಃ**-ಯಮುನಾನದಿಯ ನೀರಿನಲ್ಲಿಳಿದ ಅಕ್ರೂರನಿಗೆ ದಿವ್ಯರೂಪದಿಂದ ತೋರಿದವನು. **ದಿದೃಕ್ಷುಃ**-ಮಥುರಾನಗರಿಯನ್ನು ನೋಡಬಯಸಿದವನು. **ಪುರೀಮೋಹಿನೀಚಿತ್ತಮೋಹೀ**-ಮತ್ತು ಆ ನಗರದ ಕಾಮಿನಿಯರ ಮನಸ್ಸಿನಲ್ಲಿ ಮೋಹವನ್ನುಂಟುಮಾಡಿದವನು.

೫೧. **ರಂಗಕಾರಪ್ರಣಾಶೀ**-ಬಟ್ಟೆಗಳಿಗೆ ಬಣ್ಣಕಟ್ಟುವ ಅಗಸನನ್ನು ಕೊಂದವನು. **ಸುವಸ್ತ್ರಃ**-ಅವನ ಬಳಿಯಲ್ಲಿದ್ದ ಸೊಗಸಾದ ಬಟ್ಟೆಗಳನ್ನು ಧರಿಸಿದವನು. **ಸ್ರಜೀ**-ಸೊಗಸಾದ ಹೂವಿನ ಸರಗಳಿಂದ ಅಲಂಕೃತನಾದವನು.

ಭಟಾರ್ತಿಪ್ರದಃ ಕಂಸದುಃಸ್ವಪ್ನಕಾರೀ
ಮಹಾಮಲ್ಲವೇಷಃ ಕರೀಂದ್ರಪ್ರಹಾರೀ ।
ಮಹಾಮಾತ್ಯಹಾ ರಂಗಭೂಮಿಪ್ರವೇಶೀ
ರಸಾಢ್ಯೋ ಯಶಃಸ್ಪೃಗ್ಬಲೀ ವಾಕ್ಪಟುಶ್ರೀಃ ॥ ೫೨ ॥

ಮಹಾಮಲ್ಲಹಾ ಯುದ್ಧಕೃತ್ಸ್ತ್ರೀವಚೋಽರ್ಥೀ
ಧರಾನಾಯಕಃ ಕಂಸಹಂತಾ ಯದುಃ ಪ್ರಾಕ್ ।
ಸದಾ ಪೂಜಿತೋ ಹ್ಯುಗ್ರಸೇನಪ್ರಸಿದ್ಧೋ
ಧರಾರಾಜ್ಯದೋ ಯಾದವೈರ್ಮಂಡಿತಾಂಗಃ ॥ ೫೩ ॥

ನಾಯಕಪ್ರೀತಿಕೃತ್-ನೇಯಿಗೆಯವನಿಗೆ ಸಂತೋಷವುಂಟುಮಾಡಿದವನು. ಮಾಲಿಪೂಜ್ಯಃ-ಮಾಲಾಕಾರ(ಹೂವಾಡಿಗ) ನಿಂದ ಪೂಜಿಸಲ್ಪಟ್ಟವನು. ಮಹಾಕೀರ್ತಿದಃ-ಮಹತ್ತಾದ ಕೀರ್ತಿಯನ್ನುಂಟುಮಾಡುವವನು. ಕುಬ್ಜಾವಿನೋದೀ-ಕುಬ್ಜೆಯೊಡನೆ ವಿನೋದವಾಡಿದವನು, ಅಥವಾ ಅವಳ ಸೊಟ್ಟನ್ನು ನೆಟ್ಟಗೆ ಮಾಡಿದವನು. ಸ್ಫುರಚ್ಚಂಡಕೋದಂಡರುಗ್ಣ ಪ್ರಚಂಡಃ-ಭಾರಿಯಾದ ಅತ್ಯುಗ್ರ ಧನುಸ್ಸನ್ನು ಮುರಿದ ಧೀರನು.

೫೨. ಭಟಾರ್ತಿಪ್ರದಃ--ಧನುಶ್ಶಾಲೆಯಲ್ಲಿದ್ದ ರಕ್ಷಕರಾದ ಭಟರನ್ನು ಗೋಳಿಡಿಸಿದವನು. ಕಂಸದುಸ್ಸ್ವಪ್ನಕಾರೀ--ಕಂಸನಿಗೆ ದುಃಸ್ವಪ್ನವಾಗುವಂತೆ ಮಾಡಿದವನು. ಮಹಾಮಲ್ಲವೇಷಃ--ಜಟ್ಟಿಯಂತೆ ವೇಷವನ್ನು ತಳೆದವನು. ಕರೀಂದ್ರಪ್ರಹಾರೀ--ಕುವಲಯಾಪೀಡವೆಂಬ ಕಂಸನ ಮದ್ದಾನೆಯನ್ನು ಕೊಂದವನು. ಮಹಾಮಾತ್ಯಹಾ--ಅದರ ಮಾವಟಿಗನನ್ನು ಕೊಂದವನು. ರಂಗಭೂಮಿಪ್ರವೇಶೀ--ರಂಗಸ್ಥಲವನ್ನು ಪ್ರವೇಶಿಸಿದವನು. ರಸಾಢ್ಯಃ--ಅಲ್ಲಿದ್ದ ಜನರ ಪ್ರೀತಿಯನ್ನು ಸಂಪಾದಿಸಿದವನು. ಯಶಸ್ಸ್ಪೃಕ್--ತನ್ನ ಯಶಸ್ಸಿನಿಂದ ಮೆರೆಯುವವನು. ಬಲೀ--ಬಲರಾಮನೊಡಗೂಡಿದವನು. ಅಥವಾ ಬಲಾಢ್ಯನು. ವಾಕ್ಪಟುಶ್ರೀಃ--ವಾಕ್ಚಾತುರ್ಯವನ್ನು ಬಲ್ಲವನು.

೫೩. ಯುದ್ಧಕೃತ್ ಮಹಾಮಲ್ಲಹಾ---ಜಟ್ಟಿಕಾಳಗವಾಡುತ್ತಾ ಪ್ರಸಿದ್ಧ ಜಟ್ಟಿಯಾದ ಚಾಣೂರನನ್ನು ಕೊಂದವನು. ಸ್ತ್ರೀವಚೋಽರ್ಥೀ--

ಗುರೋಃ ಪುತ್ರದೋ ಬ್ರಹ್ಮವಿದ್ಬ್ರಹ್ಮಪಾಠೀ
ಮಹಾಶಂಖಹಾ ದಂಡಧೃಕ್ಪೂಜ್ಯ ಏವ ।
ವ್ರಜೇ ಹ್ಯುದ್ಧವಪ್ರೇಷಿತೋ ಗೋಪಮೋಹೀ
ಯಶೋದಾಘೃಣೀ ಗೋಪಿಕಾಜ್ಞಾನದೇಶೀ ॥ ೫೪ ॥

ಸದಾಸ್ನೇಹಕೃತ್ಕುಬ್ಜಯಾ ಪೂಜಿತಾಂಗ-
ಸ್ತಥಾಕ್ರೂರಗೇಹಂಗಮೀ ಮಂತ್ರವೇತ್ತಾ ।
ತಥಾ ಪಾಂಡವಪ್ರೇಷಿತಾಕ್ರೂರ ಏವ
ಸುಖೀ ಸರ್ವದರ್ಶೀನೃಪಾನಂದಕಾರೀ ॥ ೫೫ ॥

ಆ ಕಾಳಗದ ಸಮಯದಲ್ಲಿ ಅಲ್ಲಿ ನೆರೆದಿದ್ದ ಸ್ತ್ರೀಯರ ಮಾತುಗಳಿಗೆ ವಿಷಯನಾದವನು. **ಧರಾನಾಯಕಃ**--ಭೂಮಂಡಲಾಧಿಪತಿಯು. **ಕಂಸಹಂತಾ**--ಕಂಸನನ್ನು ಸಂಹರಿಸಿದವನು. **ಯದುಃ**--ಯದುವಂಶಸಂಜಾತನು. **ಪ್ರಾಕ್**--ಎಲ್ಲರಿಗೂ ಮುಂಚಿನವನು. **ಸದಾಪೂಜಿತಃ**--ಸಕಲರಿಂದಲೂ ಸರ್ವದಾ ಅರ್ಚಿಸಲ್ಪಡುವವನು. **ಉಗ್ರಸೇನ ಪ್ರಸಿದ್ಧಃ**---ಉಗ್ರಸೇನನನ್ನು ಸೆರೆಯಿಂದ ಬಿಡಿಸಿ ಮತ್ತು ರಾಜ್ಯವಿತ್ತುದರಿಂದ ಪ್ರಸಿದ್ಧಿಯನ್ನು ಪಡೆದವನು. **ಧರಾರಾಜ್ಯದಃ**--ಆ ಉಗ್ರಸೇನನಿಗೆ ಭೂಮಂಡಲಾಧಿಪತ್ಯವನ್ನು ಕೊಡಿಸಿದವನು. **ಯಾದವೈರ್ಮಂಡಿತಾಂಗಃ**--ಯಾದವರೊಡನೆ ಸೇರಿ ಮೆರೆಯುತ್ತಿರುವವನು.

೫೪. **ಗುರೋಃ ಪುತ್ರದಃ**--ಗುರುವಾದ ಸಾಂದೀಪನಿಯ ಮಗನನ್ನು ಹಿಂದಕ್ಕೆ ತಂದುಕೊಟ್ಟವನು. **ಬ್ರಹ್ಮವಿತ್**--ಬ್ರಹ್ಮಜ್ಞಾನಿಯು. **ಬ್ರಹ್ಮ-ಪಾಠೀ**---ವೇದಾಧ್ಯಯನಮಾಡಿದವನು. **ಮಹಾಶಂಖಹಾ**---ಶಂಖ ರೂಪದಿಂದಿದ್ದ ಪಂಚಜನನೆಂಬ ರಾಕ್ಷಸನನ್ನು ಸಂಹರಿಸಿದವನು. **ದಂಡಧೃ-ಕ್ಪೂಜ್ಯಃ**--ದಂಡಧರನಾದ ಯಮನಿಂದ ಪೂಜಿಸಲ್ಪಡುವವನು. **ವ್ರಜೇ-ಹ್ಯುದ್ಧವಪ್ರೇಷಿತಃ**--ಗೋಕುಲಕ್ಕೆ ಉದ್ಧವನ್ನು ಕಳುಹಿಸಿದವನು. **ಗೋಪ-ಮೋಹೀ**--ತನ್ನ ಲೀಲೆಗಳಿಂದ ಗೋಪ ಗೋಪಿಯರನ್ನು ಮೋಹಗೊಳಿಸಿದವನು. **ಯಶೋದಾಘೃಣೀ**--ತನ್ನ ಅಗಲಿಕೆಯಿಂದ ವ್ಯಥೆಪಡುತ್ತಿರುವ ಯಶೋದೆಯ ವಿಷಯದಲ್ಲಿ ಮರುಕವುಳ್ಳವನು. **ಗೋಪಿಕಾಜ್ಞಾನದೇಶೀ**--ಗೋಪಿಯರಿಗೆ ಜ್ಞಾನೋಪದೇಶವನ್ನು ಮಾಡಿದವನು.

೫೫. **ಸದಾಸ್ನೇಹಕೃತ್**---ಸಕಲರಲ್ಲಿಯೂ ಸರ್ವದಾ ಸ್ನೇಹಪರನಾದವನು. **ಕುಬ್ಜಯಾ ಪೂಜಿತಾಂಗಃ**--ಕುಬ್ಜೆಯಿಂದ ಪೂಜಿಸಲ್ಪಟ್ಟವನು.

ಮಹಾಕ್ಷೌಹಿಣೀಹಾ ಜರಾಸಂಧಮಾನೀ
ನೃಪೋ ದ್ವಾರಕಾಕಾರಕೋ ಮೋಕ್ಷಕರ್ತಾ ।
ರಣೀ ಸಾರ್ವಭೌಮಸ್ತುತೋ ಜ್ಞಾನದಾತಾ
ಜರಾಸಂಧಸಂಕಲ್ಪಕೃದ್ಧಾವದಂಘ್ರಿಃ ॥ ೫೬ ॥

ನಗಾದುತ್ಪತದ್ದ್ವಾರಿಕಾಮಧ್ಯವರ್ತೀ
ತಥಾ ರೇವತೀಭೂಷಣಸ್ತಾಲಚಿಹ್ನಃ ।
ಯದೂ ರುಕ್ಮಿಣೀಹಾರಕಶ್ಚೈದ್ಯವೇದ್ಯ-
ಸ್ತಥಾ ರುಕ್ಮರೂಪಪ್ರಣಾಶೀ ಸುಖಾಶೀ ॥ ೫೭ ॥

ಅಕ್ರೂರಗೇಹಗಾಮೀ-ತನ್ನ ಭಕ್ತನಾದ ಅಕ್ರೂರನ ಮನೆಗೆ ಹೋಗಿ ಅನುಗ್ರಹ ವಿತ್ತವನು. **ಮಂತ್ರವೇತ್ತಾ**--ರಾಜಕೀಯವಾದ ಮಂತ್ರಾಲೋಚನೆಯನ್ನು ಚೆನ್ನಾಗಿ ಬಲ್ಲವನು. **ಪಾಂಡವಪ್ರೇಷಿತಾಕ್ರೂರಃ**--ಪಾಂಡವರ ಬಳಿಗೆ ಅಕ್ರೂರನನ್ನು ಕಳುಹಿಸಿಕೊಟ್ಟವನು. **ಸುಖೀ**--ಸುಖಪುರುಷನು. **ಸರ್ವ-ದರ್ಶೀ**--ಎಲ್ಲರನ್ನೂ ಸರಿಯಾಗಿ ನೋಡಿಕೊಳ್ಳುವವನು. **ನೃಪಾನಂದಕಾರೀ**--ತನ್ನ ಕಡೆಯ ಅರಸರಿಗೆಲ್ಲಾ ಆನಂದವನ್ನುಂಟುಮಾಡಿದವನು.

೫೬. **ಮಹಾಕ್ಷೌಹಿಣೀಹಾ**-ಭಾರಿಯಾದ ಅಕ್ಷೋಹಿಣೀ ಸೇನೆಗಳನ್ನು ತುಂಡರಿಸಿದವನು. **ಜರಾಸಂಧಮಾನೀನೃಪಃ**-ಜರಾಸಂಧನಿಗೆ ಹೆದರಿದವನಂತೆ ನಟಿಸಿ ಅವನ ಶೌರ್ಯಾಭಿಮಾನವನ್ನು ಹೆಚ್ಚಿಸಿದವನು. **ದ್ವಾರಕಾಕಾರಕಃ**-ದ್ವಾರಕೆಯನ್ನು ನಿರ್ಮಿಸಿದವನು **ಮೋಕ್ಷಕರ್ತಾ**-ಮೋಕ್ಷದಾಯಕನು. **ರಣೀ**-ಯುದ್ಧಕುಶಲನು. **ಸಾರ್ವಭೌಮಸ್ತುತಃ**-ಮುಚುಕುಂದನೆಂಬ ಸಾರ್ವಭೌಮನಿಂದ ಸ್ತುತಿಸಲ್ಪಟ್ಟವನು. **ಜ್ಞಾನದಾತಾ**-ಅವನಿಗೆ ಮೋಕ್ಷಹೇತುವಾದ ದಿವ್ಯಜ್ಞಾನವನ್ನಿತ್ತವನು. ಜರಾಸಂಧಸಂಕಲ್ಪಕೃದ್ಧಾವದಂಘ್ರಿಃ-ಜರಾಸಂಧನ ಒಣಹೆಮ್ಮೆಯು ಹೆಚ್ಚಲನುವಾಗುವಂತೆ ಹೆದರಿದಂತೆ ನಟಿಸಿ ಬರಿಗಾಲುಗಳಿಂದ ಓಡಿಹೋದವನು.

೫೭. **ನಗಾದುತ್ಪತದ್ದ್ವಾರಕಾಮಧ್ಯವರ್ತೀ**-ಜರಾಸಂಧನು ಬೆಂಕಿಯನ್ನು ಹೊತ್ತಿಸಿದ ಪ್ರವರ್ಷವೆಂಬ ಪರ್ವತದಿಂದ ಒಂದೇ ನೆಗೆತದಿಂದ ಹಾರಿ

ಅನಂತಶ್ಚ ಮಾರಶ್ಚ ಕಾರ್ಷ್ಣಿಶ್ಚ ಕಾಮೋ
ಮನೋಜಸ್ತಥಾ ಶಂಬರಾರೀ ರತೀಶಃ |
ರಥೀ ಮನ್ಮಥೋ ಮೀನಕೇತುಃ ಶರೀ ಚ
ಸ್ಮರೋ ದರ್ಪಕೋ ಮಾನಹಾ ಪಂಚಬಾಣಃ || ೫೮ ||

ಕೆಳಗೆ ಬಂದು ದ್ವಾರಕಾನಗರಿಯನ್ನು ಸೇರಿದವನು. **ರೇವತೀಭೂಷಣಃ**-ರೈವತ ರಾಜನ ಮಗಳಾದ ರೇವತಿಗೆ ಅಲಂಕಾರಪ್ರಾಯನಾದವನು. **ತಾಲಚಿಹ್ನಃ**-ತಾಲವೃಕ್ಷದ ಗುರುತುಳ್ಳವನು. **ಯದುಃ**-ಯಾದವಾಗ್ರಣಿಯು. **ರುಕ್ಮಿಣೀ ಹಾರಕಃ**-ರುಕ್ಮಿಣಿಯನ್ನ ಪಹರಿಸಿ ತಂದವನು. **ಚೈದ್ಯವೇದ್ಯಃ**-ಚೇದಿರಾಜನಿಂದ ಅರಿಯಲ್ಪಟ್ಟವನು. **ರುಕ್ಮಿರೂಪಪ್ರಣಾಶೀ**-ರುಕ್ಮಿಣಿಯ ಅಣ್ಣನಾದ ರುಕ್ಮಿಯನ್ನು ವಿರೂಪಗೊಳಿಸಿದವನು. **ಸುಖಾಶೀ**-ಸುಖದಿಂದ ಇದ್ದವನು.

೫೮. **ಅನಂತಃ**-ಕೊನೆಯಿಲ್ಲದವನು ; ಆದಿಶೇಷರೂಪನು. **ಮಾರಃ**-ಮನ್ಮಥನಂತೆ ಸುಂದರನು. **ಕಾರ್ಷ್ಣಿಃ**-ಕೃಷ್ಣನ ಕುಮಾರನು. **ಕಾಮಃ**-ಎಲ್ಲರಿಗೂ ಕಾಮವನ್ನುಂಟುಮಾಡತಕ್ಕವನು. **ಮನೋಜಃ**-ಮನಸ್ಸಿನಲ್ಲಿಯೇ ಹುಟ್ಟಿದವನು. **ಶಂಬರಾರಿಃ**-ಶಂಬರಾಸುರವೈರಿಯು. **ರತೀಶಃ**-ರತಿಯ ಪತಿಯು. **ರಥೀ**-ವಿಚಿತ್ರ ರಥವುಳ್ಳವನು. **ಮನ್ಮಥಃ**-ಬುದ್ಧಿಯನ್ನು ಅಲ್ಲಕಲ್ಲೋಲಮಾಡುವವನು. **ಮೀನಕೇತುಃ**-ಮೀನೇ ಧ್ವಜವಾಗಿರುವವನು. **ಶರೀ**-(ಪುಷ್ಪಮಯವಾದ) ಬಾಣಗಳುಳ್ಳವನು. **ಸ್ಮರಃ**-ತಮ್ಮ ಪ್ರಿಯಜನರನ್ನು ಸ್ಮರಿಸುವಂಥೆ ಮಾಡುವವನು. **ದರ್ಪಕಃ**-ಗರ್ವಶೀಲನು. **ಮಾನಹಾ**-ಮಾನವನ್ನು ಮುರಿಯುವವನು. **ಪಂಚಬಾಣಃ**-ಉನ್ಮಾದನ, ರೋದನ, ಸಂಮೋಹನ, ಶೋಷಣ, ಮಾರಣಗಳೆಂಬ ಐದು ಬಾಣಗಳಿರುವವನು.

---

* ಶ್ರೀಕೃಷ್ಣನನ್ನು ಬಲರಾಮ, ಪ್ರದ್ಯುಮ್ನ, ಅನಿರುದ್ಧ, ಪಾಂಡವಾದಿ ರೂಪಗಳಲ್ಲಿಯೂ ಆರಾಧಿಸಿರುವುದಾಗಿ ಈ ಎರಡುನಾಮಗಳಿಂದಲೂ ಮುಂದಿನ ನಾಮಗಳಿಂದಲೂ ಸ್ಪಷ್ಟವಾಗುವುದು. (58)

ಪ್ರಿಯಃ ಸತ್ಯಭಾಮಾಪತಿರ್ಯಾದವೇಶೋ
ಽಥ ಸತ್ರಾಜಿತಪ್ರೇಮಪೂರಃ ಪ್ರಹಾಸಃ ।
ಮಹಾರತ್ನದೋ ಜಾಂಬವದ್ಯುದ್ಧಕಾರೀ
ಮಹಾಚಕ್ರಧೃಕ್ಖಡ್ಗಧೃಗ್ರಾಮಸಂಧಿಃ ॥ ೫೯ ॥
ವಿಹಾರಸ್ಥಿತಃ ಪಾಂಡವಪ್ರೇಮಕಾರೀ
ಕಲಿಂದಾಂಗಜಾಮೋಹನಃ ಖಾಂಡವಾರ್ಥೀ ।
ಸಖಾ ಫಾಲ್ಗುನಪ್ರೀತಿಕೃನ್ನಗ್ರಕರ್ತಾ
ತಥಾ ಮಿತ್ರವಿಂದಾಪತಿಃ ಕ್ರೀಡನಾರ್ಥೀ ॥ ೬೦ ॥

---

೫೯. **ಪ್ರಿಯಃ**-ಪ್ರೀತಿಯುಂಟಾಗುವಂತೆ ಮಾಡುವವನು. **ಸತ್ಯಭಾಮಾಪತಿಃ**-ಸತ್ಯಭಾಮೆಯ ಕಾಂತನು. **ಯಾದವೇಶಃ**-ಯಾದವರಿಗೆಲ್ಲಾ ಒಡೆಯನು. **ಸತ್ರಾಜಿತಪ್ರೇಮಪೂರಃ**-ಸತ್ರಾಜಿತನ ಸುತೆಯಾದ ಸತ್ಯಭಾಮೆಯ ಪ್ರೇಮಪ್ರವಾಹವೇ ರೂಪವೆತ್ತದಂತೆ ತೋರುವವನು. **ಪ್ರಹಾಸಃ**-ಸಂತೋಷದಿಂದ ಅಟ್ಟಹಾಸಮಾಡುವವನು. **ಮಹಾರತ್ನದಃ**-ಸ್ಯಮಂತಕವೆಂಬ ಮಣಿಯನ್ನು ತಂದುಕೊಟ್ಟವನು. **ಜಾಂಬವದ್ಯುದ್ಧಕಾರೀ**-ಜಾಂಬವಂತನೊಡನೆ ಯುದ್ಧಮಾಡಿದವನು. **ಮಹಾಚಕ್ರಧೃಕ್**-ಆ ಸಮಯದಲ್ಲಿ ತನ್ನ ನಿಜರೂಪದಿಂದ ಚಕ್ರವನ್ನು ಧರಿಸಿ ನಿಂತವನು. **ಖಡ್ಗಧೃಕ್**-ನಂದಕವೆಂಬ ಖಡ್ಗವನ್ನು ಧರಿಸಿದವನು. ||೪೦೦|' **ರಾಮಸಂಧಿಃ**-ಶ್ರೀರಾಮನಂತೆ ತೋರಿದವನು.

೬೦. **ವಿಹಾರಸ್ಥಿತಃ**-ವಿಹಾರಗಳಲ್ಲಿ ಆಸಕ್ತನಾಗಿದ್ದವನು. **ಪಾಂಡವಪ್ರೇಮಕಾರೀ**-ಪಾಂಡವರಿಗೆ ಪ್ರೀತಿಯನ್ನುಂಟುಮಾಡಿದವನು. **ಕಲಿಂದಾಂಗಜಾಮೋಹನಃ**-ಸವಿತೃವಿನ ಮಗಳಾದ ಕಾಳಿಂದಿಯೆಂಬುವವಳಿಗೆ ತನ್ನಲ್ಲಿ ಅನುರಾಗವುಂಟಾಗುವಂತೆ ಮಾಡಿದವನು. **ಖಾಂಡವಾರ್ಥೀ**-ಖಾಂಡವವನದಾಹಕ್ಕಾಗಿ ಪ್ರಾರ್ಥಿಸಲ್ಪಟ್ಟವನು. **ಸಖಾ**-(ಅರ್ಜುನನ) ಸ್ನೇಹಿತನೆನಿಸಿದವನು. **ಫಾಲ್ಗುನಪ್ರೀತಿಕೃತ್**-ಅರ್ಜುನನಿಗೆ ಪ್ರಿಯವುಂಟುಮಾಡಿದವನು. **ಅಗ್ರಕರ್ತಾ**-(?) **ಮಿತ್ರವಿಂದಾಪತಿಃ**-ವಿಂದಾನುವಿಂದರ ಸಹೋದರಿಯಾದ ಮಿತ್ರವಿಂದೆಯ ಪತಿಯು. **ಕ್ರೀಡನಾರ್ಥೀ**-ಸತ್ಯಾ ಎಂಬುವಳ ವಿವಾಹದಲ್ಲಿ ಪಣವಾಗಿದ್ದ ದುಷ್ಟ ವೃಷಭಗಳೇಳನ್ನು ನಿಗ್ರಹಿಸಲು ವಿಲಾಸದಿಂದ ಹೊರಟವನು.

ನೃಪಪ್ರೇಮಕೃದ್ಗೋಜಿತಃ ಸಪ್ತರೂಪೋ
ಽಥ ಸತ್ಯಾಪತಿಃ ಪಾರಬರ್ಹೀಯಥೇಷ್ಟಃ ।
ನೃಪೈಃ ಸಂವೃತಶ್ಚಾಪಿ ಭದ್ರಾಪತಿಸ್ತು
ವಿಲಾಸೀ ಮಧೋರ್ಮಾನಿನೀಶೋ ಜನೇಶಃ ॥ ೬೧ ॥

ಶುನಾಸೀರಮೋಹಾವೃತಃ ಸತ್ಸಭಾರ್ಯಃ
ಸತಾರ್ಕ್ಷ್ಯೋ ಮುರಾರಿಃ ಪುರೀಸಂಘಭೇತ್ತಾ ।
ಸುವೀರಃ ಶಿರಃಖಂಡನೋ ದೈತ್ಯನಾಶೀ
ಶರೀ ಭೌಮಹಾ ಚಂಡವೇಗಃ ಪ್ರವೀರಃ ॥ ೬೨ ॥

---

೬೧. **ನೃಪಪ್ರೇಮಕೃತ್**-ಸತ್ಯೆಯ ತಂದೆಯಾದ ನಗ್ನಜಿತ್ತೆಂಬುವನಿಗೆ ಪ್ರೀತಿಯನ್ನುಂಟುಮಾಡಿದವನು. **ಗೋಜಿತಃ**-ದುಷ್ಟವಾದ ಏಳು ವೃಷಭಗಳನ್ನು ನಿಗ್ರಹಿಸಿದವನು. **ಸಪ್ತರೂಪಃ**–ಆ ವೃಷಭ ನಿಗ್ರಹ ಸಮಯದಲ್ಲಿ ಏಳು ರೂಪಗಳನ್ನು ಧರಿಸಿ ನಿಂತವನು. **ಸತ್ಯಾಪತಿಃ**-ಬಳಿಕ ಸತ್ಯೆಯನ್ನು ಮದುವೆಯಾದವನು. **ಪಾರಿಬರ್ಹೀಯಥೇಷ್ಟಃ**-ಬೇಕಾದಷ್ಟು ಬಳುವಳಿಯನ್ನು (ನಗ್ನಜಿತ್ತು ಇತ್ತ) ಸ್ವೀಕರಿಸಿದವನು. **ನೃಪೈಃ ಸಂವೃತಃ**-ಆಗ ಅಸಹನೆಯಿಂದ ಮೇಲೆ ಬೀಳಲು ಬಂದ ರಾಜರಿಂದ ಸುತ್ತುವರಿಯಲ್ಪಟ್ಟವನು. **ಭದ್ರಾಪತಿಃ**-ತನ್ನ ಸೋದರತ್ತೆಯ ಮಗಳಾದ ಭದ್ರೆಯೆಂಬವಳನ್ನು ಮದುವೆಯಾದವನು. **ಮಧೋರ್ವಿಲಾಸೀ**-ವಸಂತಋತುವಿನಲ್ಲಿ ವಿಲಾಸಪರನಾದವನು. **ಮಾನಿನೀಶಃ**-ಮಾನಿನಿಯರಿಗೆಲ್ಲಾ ಪ್ರಿಯನಾದವನು. **ಜನೇಶಃ**-ಜನರ ಪ್ರಭುವೆನಿಸಿದವನು.

೬೨. **ಶುನಾಸೀರಮೋಹಾವೃತಃ**– ಇಂದ್ರನಿಗೆ ಮೋಹವು ಕವಿಯುವಂತೆ ಮಾಡಿದವನು. **ಸತ್ಸಭಾರ್ಯಃ**- (ಸತ್ಯಭಾಮೆಯೆಂಬ) ಭಾರ್ಯೆಯೊಡಗೂಡಿದವನು. **ಸತಾರ್ಕ್ಷ್ಯಃ**-ಗರುಡನನ್ನೇರಿ ಹೊರಟವನು. **ಮುರಾರಿಃ**-ಮುರನೆಂಬ ದಾನವನನ್ನು ಕೊಂದವನು. **ಪುರೀಸಂಘಭೇತ್ತಾ**–ನರಕಾಸುರನ ನಗರವಾದ ಪ್ರಾಗ್ಜ್ಯೋತಿಷದ ರಕ್ಷಣೋಪಾಯಗಳೆಲ್ಲವನ್ನೂ ಕತ್ತರಿಸಿದವನು. **ಸುವೀರಃ**-ಮಹಾವೀರನೆನಿಸಿದವನು. **ಶಿರಃಖಂಡನಃ**--ಯುದ್ಧದಲ್ಲಿ ಎದುರಾದವರ ತಲೆಗಳನ್ನು ಚೆಂಡಾಡಿದವನು. **ದೈತ್ಯನಾಶೀ**-ನರಕಾಸುರನ ಸಹಾಯಕ್ಕೆ

ಧರಾಸಂಸ್ತುತಃ ಕುಂಡಲಚ್ಛತ್ರಹರ್ತಾ
ಮಹಾರತ್ನಯುಙ್ರಾಜಕನ್ಯಾಭಿರಾಮಃ ।
ಶಚೀಪೂಜಿತಃ ಶಕ್ರಚಿನ್ಮಾನಹರ್ತಾ
ತಥಾ ಪಾರಿಜಾತೋಪಹಾರೀ ರಮೇಶಃ ॥ ೬೩ ॥

ಗೃಹೀ ಚಾಮರೈಃ ಶೋಭಿತೋ ಭೀಷ್ಮಕನ್ಯಾ-
ಪತಿರ್ಹಾಸ್ಯಕೃನ್ಮಾನಿನೀಮಾನಕಾರೀ ।
ತಥಾ ರುಕ್ಮಿಣೀವಾಕ್ಪಟುಃ ಪ್ರೇಮಗೇಹಃ
ಸತೀಮೋಹನಃ ಕಾಮದೇವಾಪರಶ್ರೀಃ ॥ ೬೪ ॥

ಬಂದಿದ್ದ ದೈತ್ಯರನ್ನು ಸಂಹರಿಸಿದವನು. **ಶರೀ**--ಬಾಣಪ್ರಯೋಗಕುಶಲನು. **ಭೌಮಹಾ**-ಭೂಪುತ್ರನಾದ ನರಕಾಸುರನನ್ನು ಕೊಂದವನು. **ಚಂಡವೇಗಃ**-ಸಹಿಸಲಸದಳವಾದ ಪರಾಕ್ರಮಾತಿಶಯವುಳ್ಳವನು. **ಪ್ರವೀರಃ**-ವೀರಾಗ್ರೇಸರನು.

೬೩. **ಧರಾಸಂಸ್ತುತಃ**-ಭೂದೇವಿಯಿಂದ ಸ್ತೋತ್ರಮಾಡಲ್ಪಟ್ಟವನು. **ಕುಂಡಲಚ್ಛತ್ರಹರ್ತಾ**-ಆ ಅಸುರನ ಬಳಿಯಲ್ಲಿದ್ದ ಅದಿತಿಯ ಕುಂಡಲಗಳನ್ನೂ ವರುಣನ ಛತ್ರವನ್ನೂ ಹಿಂದಕ್ಕೆ ತೆಗೆದುಕೊಂಡು ಬಂದವನು. **ಮಹಾರತ್ನಯುಕ್**-ಮೇರುಪರ್ವತದ ಭಾಗವಾದ ಮಹಾರತ್ನವೆಂಬ ಶಿಖರವನ್ನು ತಂದವನು. **ರಾಜಕನ್ಯಾಭಿರಾಮಃ**-ಆ ನರಕಾಸುರನು ಸೆರೆಹಿಡಿದು ತಂದಿದ್ದ ರಾಜಕನ್ಯೆಯರನ್ನು ಬಿಡಿಸಿ ಅವರೊಡನೆ ಕಂಗೊಳಿಸಿದವನು. **ಶಚೀಪೂಜಿತಃ**-ಶಚೀದೇವಿಯಿಂದ ಪೂಜಿಸಲ್ಪಟ್ಟವನು. **ಶಕ್ರಚಿನ್ಮಾನಹರ್ತಾ**-ಇಂದ್ರನ ಹೃದಯದಲ್ಲಿ ಅಡಗಿದ್ದ ಅಹಂಭಾವವನ್ನು ಅಡಗಿಸಿದವನು. **ಪಾರಿಜಾತಾಪಹಾರೀ ರಮೇಶಃ**--ಪಾರಿಜಾತವನ್ನು ಅಪಹರಿಸಿ ತನ್ನ ಪ್ರಿಯೆಗೆ ವಲ್ಲಭನೆನಿಸಿದ ಪ್ರಭುವು.

೬೪. **ಗೃಹೀ**-ಗೃಹಸ್ಥಾಶ್ರಮಿಯ ಧರ್ಮವನ್ನು ಪಾಲಿಸಿದವನು. **ಚಾಮರೈಶ್ಶೋಭಿತಃ**-ತನ್ನ ಕಾಂತೆಯರಿಂದ ಚಾಮರಗಳಿಂದ ಬೀಸಲ್ಪಟ್ಟವನು. **ಭೀಷ್ಮಕನ್ಯಾಪತಿಃ**-ಭೀಷ್ಮಕನ ಕುಮಾರಿಯಾದ ರುಕ್ಮಿಣಿಯ ಪ್ರಿಯತಮನು.

ಸುದೇಷ್ಣಃ ಸುಚಾರುಸ್ತಥಾ ಚಾರುದೇಷ್ಣೋಽ-
ಪರಶ್ಚಾರುದೇಹೋ ಬಲೀ ಚಾರುಗುಪ್ತಃ ।
ಸತೀಭದ್ರಚಾರುಸ್ತಥಾ ಚಾರುಚಂದ್ರೋ
ವಿಚಾರುಶ್ಚ ಚಾರೂ ರಥೀ ಪುತ್ರರೂಪಃ ॥ ೬೫ ॥

ಸುಭಾನುಃ ಪ್ರಭಾನುಸ್ತಥಾ ಚಂದ್ರಭಾನು-
ರ್ಬೃಹದ್ಭಾನುರೇವಾಷ್ಟಭಾನುಶ್ಚ ಸಾಂಬಃ ।
ಸುಮಿತ್ರಃ ಕ್ರತುಶ್ಚಿತ್ರಕೇತುಸ್ತು ವೀರೋಽ
ಶ್ವಸೇನೋ ವೃಷಶ್ಚಿತ್ರಗುಶ್ಚಂದ್ರಬಿಂಬಃ ॥ ೬೬ ॥

ಹಾಸ್ಯಕೃತ್-ಆ ರುಕ್ಮಿಯನ್ನು ಉಪಹಾಸ ಮಾಡಿದವನು. **ಮಾನಿನೀ ಮಾನಕಾರೀ**-ತನ್ನ ಅಕೃತ್ರಿಮ ಪ್ರೇಮದಿಂದ ಅಭಿಮಾನಶಾಲಿನಿಯಾದ ಅವಳ ಮಾನ ಮರ್ಯಾದೆಗಳನ್ನು ಹೆಚ್ಚಿಸಿದವನು. **ರುಕ್ಮಿಣೀವಾಕ್ಪಟುಃ**-ರುಕ್ಮಿಣಿಯ ಮಾತುಗಳನ್ನು ಆಲಿಸುವುದರಲ್ಲಿ ಚತುರನಾದವನು. **ಪ್ರೇಮಗೇಹಃ**-ಅವಳ ಅನುರಾಗಕ್ಕೆ ನೆಲೆವನೆಯಾದವನು. **ಸತೀಮೋಹನಃ**-ತನ್ನ ಪತ್ನಿಯರಿಗೆಲ್ಲಾ (ತನ್ನ) ವಿಲಾಸದಿಂದ ಮೋಹವನ್ನುಂಟುಮಾಡಿದವನು. **ಕಾಮದೇವಾ ಪರಶ್ರೀಃ**-ಎರಡನೆಯ ಮನ್ಮಥನೋ ಎನ್ನುವಂತಹ ಸೌಂದರ್ಯವುಳ್ಳವನು, ಅಥವ ಮನ್ಮಥನಂತೆ ಅತ್ಯುತ್ತಮವಾದ ದಿವ್ಯಸೌಂದರ್ಯವಿರುವವನು.

೬೫. **ಸುದೇಷ್ಣಃ**-ಸುದೇಷ್ಣನು. **ಸುಚಾರುಃ**-ಸುಚಾರುವು. **ಚಾರು ದೇಷ್ಣಃ**-ಚಾರುದೇಷ್ಣನು. **ಚಾರುದೇಹಃ**-ಚಾರುದೇಹನು. **ಬಲೀ ಚಾರು ಗುಪ್ತಃ**-ಬಲಿಷ್ಠನಾದ ಚಾರುಗುಪ್ತನು. **ಭದ್ರಚಾರುಃ**-ಭದ್ರಚಾರುವು. **ಚಾರು ಚಂದ್ರಃ**-ಚಾರುಚಂದ್ರನು. **ವಿಚಾರುಃ**-ವಿಚಾರುವು. **ಚಾರುಃರಥೀ**-ಚಾರು, ರಥಿಯು (ಇವರೆಲ್ಲರೂ ರುಕ್ಮಿಣಿಯಲ್ಲಿ ಜನಿಸಿದ ಕೃಷ್ಣಪುತ್ರರು). **ಪುತ್ರರೂಪಃ**-ಈ ಸುತರ ("ಆತ್ಮಾವೈಪುತ್ರನಾಮಸಿ" ಎಂಬ ಶ್ರುತಿಪ್ರಮಾಣದಿಂದಲೂ ಭಗವಂತನು ಸಕಲ ಸ್ವರೂಪನಾದುದರಿಂದಲೂ ಈ ನಾಮಗಳು ಕೃಷ್ಣಪುತ್ರಾದಿ ಬೋಧಕಗಳಾದರೂ ಭಗವಂತನಾದ ಶ್ರೀಕೃಷ್ಣನಿಗೇ ಅನ್ವಯಿಸುವುದೆಂದು ಅರಿಯಬೇಕು) ರೂಪಗಳಿಂದಿರುವವನು.

೬೬. **ಸುಭಾನುಃ, ಪ್ರಭಾನುಃ, ಚಂದ್ರಭಾನುಃ, ಬೃಹದ್ಭಾನುಃ, ಅಷ್ಟಭಾನುಃ**-ಸುಭಾನು, ಪ್ರಭಾನು, ಚಂದ್ರಭಾನು, ಬೃಹದ್ಭಾನು, ಅಷ್ಟಭಾನು

ವಿಶಂಕುರ್ವಸುಶ್ಚ ಶ್ರುತೋ ಭದ್ರ ಏಕಃ
ಸುಬಾಹುರ್ವೃಷಃ ಪೂರ್ಣಮಾಸಸ್ತು ಸೋಮಃ ।
ವರಃ ಶಾಂತಿರೇವ ಪ್ರಘೋಷೋಽಥಸಿಂಹೋ
ಬಲೋ ಹ್ಯೂರ್ಧ್ವಗೋವರ್ಧನೋಽನ್ನಾದ ಏವ ॥ ೬೭ ॥

ಮಹಾಶೋ ವೃಕಃ ಪಾವನೋ ವಹ್ನಿಮಿತ್ರಃ
ಕ್ಷುಧಿರ್ಹರ್ಷಕಶ್ಚಾನಿಲೋಽಮಿತ್ರಜಿಚ್ಚ ।
ಸುಭದ್ರೋ ಜಯಃ ಸತ್ಯಕೋ ವಾಮ ಆಯು-
ರ್ಯದುಃ ಕೋಟಿಶಃ ಪುತ್ರಪೌತ್ರಪ್ರಸಿದ್ಧಃ ॥ ೬೮ ॥

ಎಂಬ ಸತ್ಯಭಾಮಾ ಸುತರ ಸ್ವರೂಪನು. **ಸಾಂಬಃ, ಸುಮಿತ್ರಃ, ಕ್ರತುಃ, ಚಿತ್ರಕೇತುಃ**-ಸಾಂಬ, ಸುಮಿತ್ರ, ಕ್ರತು, ಚಿತ್ರಕೇತು ಎಂಬ ಜಾಂಬವತೀ ಪುತ್ರರ ಸ್ವರೂಪನು. **ಅಶ್ವಸೇನಃ, ವೃಷಃ, ಚಿತ್ರಗುಃ, ಚಂದ್ರಬಿಂಬಃ**-ಅಶ್ವಸೇನ, ವೃಷ, ಚಿತ್ರಗು, ಚಂದ್ರಬಿಂಬ ಎಂಬ ನಗ್ನಜಿತ್ಪುತ್ರಿಯಾದ ಸತ್ಯಾ ಎಂಬುವಳ ಕುಮಾರರ ಸ್ವರೂಪವಾದವನು.

೬೭-೬೮. **ವಿಶಂಕುಃ, ವಸುಃ, ಶ್ರುತಃ ಭದ್ರಃ, ಏಕಃ, ಸುಬಾಹುಃ, ವೃಷಃ, ಪೂರ್ಣಮಾಸಃ, ಸೋಮಃ, ವರಃ, ಶಾಂತಿಃ, ಪ್ರಘೋಷಃ**-ವಿಶಂಕು, ವಸು, ಶ್ರುತ, ಭದ್ರ, ಏಕ, ಸುಬಾಹು, ವೃಷ, ಪೂರ್ಣಮಾಸ, ಸೋಮ, ವರ, ಶಾಂತಿ, ಪ್ರಘೋಷ, ಎಂಬ ಕಲಿಂದೀಕುಮಾರರ ಸ್ವರೂಪನಾದವನು. **ಸಿಂಹಃ, ಬಲಃ, ಊರ್ಧ್ವಗಃ**, ಎಂಬ ಲಕ್ಷಣಾ ಪುತ್ರರ ರೂಪವಾಂತವನು. **ವರ್ಧನಃ, ಅನ್ನಾದಃ, ಮಹಾಶಃ, ವೃಕಃ, ಪಾವನಃ, ವಹ್ನಿಮಿತ್ರಃ, ಕ್ಷುಧಿಃ, ಹರ್ಷಕಃ, ಅನಿಲಃ**-ವರ್ಧನ, ಅನ್ನಾದ, ಮಹಾಶ, ವೃಕ, ಪಾವನ, ವಹ್ನಿಮಿತ್ರ, ಕ್ಷುಧಿ, ಹರ್ಷಕ, ಅನಿಲ ಎಂಬ ಮಿತ್ರವಿಂದಾಸೂನುಗಳ ಸ್ವರೂಪವಾಗಿರುವವನು. **ಅಮಿತ್ರಜಿತ್, ಸುಭದ್ರಃ, ಜಯಃ, ಸತ್ಯಕಃ, ವಾಮಃ** ॥ ೫೦ ॥ **ಆಯುಃ-ಯದುಃ**-ಅಮಿತ್ರಜಿತ್, ಸುಭದ್ರಃ, ಜಯ, ಸತ್ಯಕ, ವಾಮ, ಆಯು ಯದು, ಎಂಬ ಭದ್ರಾ ಎಂಬ ಪಟ್ಟಮಹಿಷಿಯ ಸುಕುಮಾರರ ಸ್ವರೂಪವಾಗಿರುವವನು. **ಕೋಟಿಶಃ ಪುತ್ರಪೌತ್ರಪ್ರಸಿದ್ಧಃ**- ಮೇಲ್ಕಂಡ ರೀತಿಯಲ್ಲಿ ಕೋಟಿಗಟ್ಟಲೆ ಮಕ್ಕಳು ಮೊಮ್ಮಕ್ಕಳು ಮುಂತಾದವರ ಸ್ವರೂಪವಾಗಿ ತೋರುವ ಯಾದವ ಶ್ರೇಷ್ಠನು.

ಹಲೀ ದಂಡಧೃಗ್ರುಕ್ಮಿಹಾ ಚಾನಿರುದ್ಧೋ
ತಥಾ ರಾಜಭಿರ್ಹಾಸ್ಯಗೋ ದ್ಯೂತಕರ್ತಾ ।
ಮಧುರ್ಬ್ರಹ್ಮಸೂರ್ಬಾಣಪುತ್ರೀಪತಿಶ್ಚ
ಮಹಾಸುಂದರಃ ಕಾಮಪುತ್ರೋ ಬಲೀಶಃ ॥ ೬೯ ॥

ಮಹಾದೈತ್ಯಸಂಗ್ರಾಮಕೃದ್ಯಾದವೇಶಃ
ಪುರೀಭಂಜನೋ ಭೂತಸಂತ್ರಾಸಕಾರೀ ।
ಮೃಧೀ ರುದ್ರಜಿದ್ರುದ್ರಮೋಹೀ ಮೃಧಾರ್ಥೀ
ತಥಾ ಸ್ಕಂಧಜಿತ್ಕೂಪಕರ್ಣಪ್ರಹಾರೀ ॥ ೭೦ ॥

---

೬೯. **ಹಲೀ**-ನೇಗಿಲನ್ನು ಧರಿಸಿರುವವನು. **ದಂಡಧೃಕ್**-ದಂಡಾಕಾರವಾದ ಮುಸಲಾಯುಧವನ್ನು ಹಿಡಿದಿರುವವನು. **ರುಕ್ಮಿಹಾ**-ರುಕ್ಮಿಯನ್ನು ಕೊಂದವನು. **ಅನಿರುದ್ಧಃ**-ಯಾರಿಗೂ ತಡೆಯಲಸಾಧ್ಯವಾದವನು. **ರಾಜಭಿರ್ಹಾಸ್ಯಗಃ**-ರುಕ್ಮಿಯ ಕಡೆಯ ರಾಜರಿಂದ ಅಪಹಾಸ್ಯಮಾಡಲ್ಪಟ್ಟವನು. **ದ್ಯೂತಕರ್ತಾ**-ರುಕ್ಮಿಯೊಡನೆ ಅಕ್ಷದ್ಯೂತಕ್ಕೆ ಇಳಿದವನು. **ಮಧುಃ**-ಮನ್ಮಥನನ್ನು ಸ್ಮರಣೆಗೆ ತರುವವನು. **ಬ್ರಹ್ಮಸೂಃ**-ಬ್ರಹ್ಮನನ್ನು ಮಗನಾಗಿ ಪಡೆದವನು. **ಬಾಣಪುತ್ರೀಪತಿಃ**-ಬಾಣಾಸುರನ ಮಗಳಾದ ಉಷೆಯವಲ್ಲಭನು. **ಮಹಾಸುಂದರಃ**-ಕಡುಚೆಲುವನು. **ಕಾಮಪುತ್ರಃ**-ಪ್ರದ್ಯುಮ್ನನ ಮಗನು. **ಬಲೀಶಃ**-ಬಲಾಢ್ಯರಿಗೆಲ್ಲಾ ಪ್ರಭುವೆನಿಸಿದವನು.

೭೦. **ಮಹಾದೈತ್ಯಸಂಗ್ರಾಮಕೃತ್**-ಬಾಣನಕಡೆಯ ಅನೇಕಮಂದಿ ದೈತ್ಯವೀರರೊಡನೆ ಯುದ್ಧವನ್ನು ಮಾಡಿದವನು. **ಯಾದವೇಶಃ**-ಯಾದವರಿಗೆಲ್ಲಾ ಒಡೆಯನು. **ಪುರೀಭಂಜನಃ**-ಬಾಣನ ನಗರವನ್ನು ಮುರಿದವನು. **ಭೂತಸಂತ್ರಾಸಕಾರೀ**-ಬಾಣನ ಸಹಾಯಕ್ಕೆಂದು ಬಂದ ಶಿವನ ಅನುಚರರಾದ ಭೂತಗಣಗಳಿಗೆ ಹೆದರಿಕೆ ಹುಟ್ಟಿಸಿದವನು. **ಮೃಧೀ ರುದ್ರಜಿತ್**-ಯುದ್ಧಮಾಡುತ್ತಾ ತನಗೆದುರಾದ ರುದ್ರನನ್ನು ಜಯಿಸಿದವನು. **ರುದ್ರಮೋಹೀ**-ರುದ್ರನನ್ನು ಮೂರ್ಛೆಗೊಳಿಸಿದವನು. **ಮೃಧಾರ್ಥೀ ತಥಾ ಸ್ಕಂದಜಿತ್**-ಅದೇರೀತಿ ಯುದ್ಧದಲ್ಲಿ ಹೋರಾಡುತ್ತಾ ಕುಮಾರಸ್ವಾಮಿಯನ್ನುಗೆದ್ದವನು. **ಕೂಪಕರ್ಣಪ್ರಹಾರೀ**-ಕೂಪಕರ್ಣನೆಂಬ ಬಾಣನ ಕಡೆಯ ದೈತ್ಯನನ್ನು ಪ್ರಹಾರಮಾತ್ರದಿಂದ ಕೊಂದವನು.

ಮಹಾವೈಭವೀದ್ವಾರಕೇಶೋ ಹ್ಯನೇಕ-
ಶ್ಚಲನ್ನಾರದಃ ಶ್ರೀಪ್ರಭಾದರ್ಶಕಸ್ತು |
ಮಹರ್ಷಿಸ್ತುತೋ ಬ್ರಹ್ಮದೇವಃ ಪುರಾಣಃ
ಸದಾ ಷೋಡಶಸ್ತ್ರೀಸಹಸ್ರಸ್ಥಿತಶ್ಚ || ೭೫ ||

ಗೃಹೀ ಲೋಕರಕ್ಷಾಪರೋ ಲೋಕರೀತಿಃ
ಪ್ರಭುರ್ಹ್ಯುಗ್ರಸೇನಾವೃತೋ ದುರ್ಗಯುಕ್ತಃ |
ತಥಾ ರಾಜದೂತಸ್ತುತೋ ಬಂಧಭೇತ್ತಾ
ಸ್ಥಿತೋ ನಾರದಪ್ರಸ್ತುತಃ ಪಾಂಡವಾರ್ಥೀ || ೭೬ ||

---

೭೫. ಮಹಾವೈಭವೀ ದ್ವಾರಕೇಶಃ-ಮಹಾವೈಭವದಿಂದ ಮೆರೆಯುತ್ತಿರುವ ದ್ವಾರಕಾನಗರದ ಅಧಿಪತಿಯು. ಅನೇಕಃ-ತನ್ನ ರಾಣಿಯರ ಸಂಖ್ಯೆಗನುಗುಣವಾಗಿ ಅನೇಕ ರೂಪಗಳನ್ನು ತಳೆದವನು. ಚಲನ್ನಾರದಃ-ತನ್ನನ್ನು ಪ್ರತಿಯೊಬ್ಬ ರಾಣಿಯೂ ಅಂತಃಪುರದಲ್ಲಿಯೂ ಕಾಣಬೇಕೆಂದು ಪರೀಕ್ಷಿಸಲು ಬಂದ ನಾರದನನ್ನು ಓಡಾಡಿಸಿದವನು. ಶ್ರೀಪ್ರಭಾದರ್ಶಕಃ-ತನ್ನ ದಿವ್ಯ ಪ್ರಭೆಯನ್ನು ಆತನಿಗೆ ತೋರ್ಪಡಿಸಿದವನು. ಮಹರ್ಷಿಸ್ತುತಃ-ಆ ನಾರದನಿಂದ ಸ್ತುತಿಸಲ್ಪಟ್ಟವನು. ಬ್ರಹ್ಮದೇವಃ ಪುರಾಣಃ-ಜಗತ್ಕಾರಣನಾದ ಪುರಾತನ ಬ್ರಹ್ಮಸ್ವರೂಪನು. ಸದಾ ಷೋಡಶಸ್ತ್ರೀಸಹಸ್ರಸ್ಥಿತಶ್ಚ--ಸರ್ವದಾ ಹದಿನಾರು ಸಾವಿರ ಸ್ತ್ರೀಯರೊಡನೆ ಇರುವವನು.

೭೬. ಗೃಹೀ ಲೋಕರಕ್ಷಾಪರಃ-ಗೃಹಸ್ಥಾಶ್ರಮವನ್ನವಲಂಬಿಸಿ ಲೋಕವ್ಯವಸ್ಥೆಯನ್ನು ಕಾಪಾಡಿದವನು. ಲೋಕರೀತಿಃ-ಸಾಮಾನ್ಯಜನರಂತೆ ನಡೆದುಕೊಂಡವನು. ಪ್ರಭುಃ ಉಗ್ರಸೇನಾವೃತಃ-ಪ್ರಭುವಾಗಿದ್ದ ಉಗ್ರಸೇನನನ್ನು ರಕ್ಷಿಸಿದವನು. ದುರ್ಗಯುಕ್ತಃ-- ದ್ವಾರಕೆಯೆಂಬ ದುರ್ಗದಲ್ಲಿರುವವನು. ರಾಜದೂತಸ್ತುತಃ ಬಂಧಭೇತ್ತಾ-ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ಅನೇಕ ಮಂದಿ ರಾಜರು ತಮ್ಮ ಸೆರೆಯನ್ನು ಬಿಡಿಸುವಂತೆ ತನ್ನ ಬಳಿಗೆ ಕಳುಹಿಸಿದ್ದ ದೂತನಿಂದ ಸ್ತುತಿಸಲ್ಪಟ್ಟವನು. ಪಾಂಡವಾರ್ಥೀ ನಾರದಪ್ರಸ್ತುತಃ-ರಾಜಸೂಯಯಾಗವನ್ನು ಮಾಡಬೇಕೆಂದಿರುವ ಧರ್ಮರಾಜನ ಪರವಾಗಿ ನಾರದನು ಹರ್ಷಿಯಿಂದ ಪ್ರಾರ್ಥಿಸಲ್ಪಟ್ಟವನು.

ನೃಪೈರ್ಮಂತ್ರಕೃದ್ಧ್ಯುದ್ಧವಪ್ರೀತಿಪೂರ್ಣೋ
ವೃತಃ ಪುತ್ರಪೌತ್ರೈಃ ಕುರುಗ್ರಾಮಗಂತಾ ।
ಘೃಣೀ ಧರ್ಮರಾಜಸ್ತುತೋ ಭೀಮಯುಕ್ತಃ
ಪರಾನಂದದೋ ಮಂತ್ರಕೃದ್ಧರ್ಮಜೇನ ॥ ೨೭ ॥

ದಿಶಾಜಿದ್ಬಲೀ ರಾಜಸೂಯಾರ್ಥಕಾರೀ
ಜರಾಸಂಧಹಾ ಭೀಮಸೇನಸ್ವರೂಪಃ ।
ತಥಾ ವಿಪ್ರರೂಪೋ ಗದಾಯುದ್ಧಕರ್ತಾ
ಕೃಪಾಲುರ್ಮಹಾಬಂಧನಚ್ಛೇದಕಾರೀ ॥ ೨೮ ॥

---

೨೭. **ನೃಪೈರ್ಮಂತ್ರಕೃತ್**-ತನ್ನ ಕಡೆಯ ಯಾದವರಾಜನೊಡನೆ ಮಂತ್ರಾಲೋಚನೆಯನ್ನು ಮಾಡಿದವನು. **ಉದ್ಧವಪ್ರೀತಿಪೂರ್ಣಃ**-ಪಾಂಡವರ ಯಾಗಕ್ಕೆ ಹೋಗುವುದುತ್ತಮವೆಂದು ನುಡಿದ ಉದ್ಧವನ ಸಲಹೆಯನ್ನು ಒಪ್ಪಿದುದರಿಂದ ಅವನಿಗೆ ಸಂತೋಷಪಡಿಸಿದವನು. **ಪುತ್ರಪೌತ್ರೈರ್ವೃತಃ**-ಮಕ್ಕಳು ಮೊಮ್ಮಕ್ಕಳು ಮೊದಲಾದವರಿಂದೊಡಗೂಡಿದವನು. **ಕುರುಗ್ರಾಮಗಂತಾ**-ಕೌರವರಾಜಧಾನಿಯಾದ ಹಸ್ತಿನಾವತಿಗೆ ಸಂಧಾನಕ್ಕಾಗಿ ಹೋದವನು. **ಘೃಣೀ**-ದಯಾಳುವು. **ಧರ್ಮರಾಜಸ್ತುತಃ**--ತನ್ನ ಮೇಲೆ ದಯೆಯಿಟ್ಟು ಬಂದುದಕ್ಕಾಗಿ ಧರ್ಮರಾಜನಿಂದ ಸ್ತೋತ್ರಮಾಡಲ್ಪಟ್ಟವನು. **ಭೀಮಯುಕ್ತಃ ಪರಾನಂದಃ**-ಭೀಮನೊಡನೆ ಸೇರಿ ಅತಿಶಯವಾದಆನಂದವನ್ನು ಇತ್ತವನು. **ಧರ್ಮಜೇನ ಮಂತ್ರಕೃತ್**-ಧರ್ಮರಾಜನೊಡನೆ ಮಂತ್ರಾಲೋಚನೆ ಮಾಡಿದವನು.

೨೮. **ದಿಶಾಜಿತ್, ಬಲೀ, ರಾಜಸೂಯಾರ್ಥಕಾರೀ**—ರಾಜಸೂಯ ಯಾಗವನ್ನು ನೆರವೇರಿಸುವ ಸಲುವಾಗಿ ದಿಗ್ವಿಜಯಕ್ಕೆ ಹೊರಟ ಬಲಶಾಲಿಯು. **ಭೀಮಸೇನಸ್ವರೂಪಃ** ಜರಾಸಂಧಹಾ-ಭೀಮಸೇನಾಕೃತಿಯಿಂದ ಜರಾಸಂಧನನ್ನು ಕೊಂದವನು. ವಿಪ್ರರೂಪಃ--ಬ್ರಾಹ್ಮಣ ರೂಪವನ್ನು ಧರಿಸಿದವನು. **ಗದಾಯುದ್ಧಕರ್ತಾ**-ಗದಾಯುದ್ಧವನ್ನು ಮಾಡಿದವನು. **ಕೃಪಾಲುರ್ಮಹಾಬಂಧನಚ್ಛೇದಕಾರೀ**-ರಾಜರನ್ನು ಒಳಗಡೆ ಬಲವಾಗಿ ಬಂದಿಸಿದ್ದ ಭಾರಿ ಸೆರೆಯನ್ನು ಕೃಪೆಯಿಂದ ಮುರಿದು ಕೆಡವಿದವನು.

ನೃಪೈಃ ಸಂಸ್ತುತೋ ಹ್ಯಾಗತೋ ಧರ್ಮಗೇಹಂ
ದ್ವಿಜೈಃ ಸಂವೃತೋ ಯಜ್ಞಸಂಭಾರಕರ್ತಾ ।
ಜನೈಃ ಪೂಜಿತಶ್ಚೈದ್ಯದುರ್ವಾಕ್ಕ್ಷಮಶ್ಚ
ಮಹಾಮೋಕ್ಷದೋಽರೇಃ ಶಿರಶ್ಛೇದಕಾರೀ ॥ ೭೯ ॥

ಮಹಾಯಜ್ಞಶೋಭಾಕರಶ್ಚಕ್ರವರ್ತೀ
ನೃಪಾನಂದಕಾರೀ ವಿಹಾರೀ ಸುಹಾರೀ ।
ಸಭಾಸಂವೃತೋ ಮಾನಹೃತ್ಕೌರವಸ್ಯ
ತಥಾ ಶಾಲ್ವಸಂಹಾರಕೋ ಯಾನಹಂತಾ ॥ ೮೦ ॥

---

೭೯. **ನೃಪೈಸ್ಸಂಸ್ತುತಃ**-ಬಂಧಮುಕ್ತರಾದ ಆ ರಾಜರಿಂದ ಕೊಂಡಾಡಲ್ಪಟ್ಟವನು. **ಧರ್ಮಗೇಹಮಾಗತಃ**-ಧರ್ಮರಾಜನ ಮನೆಗೆ ಹಿಂದಿರುಗಿ ಬಂದವನು. **ದ್ವಿಜೈಸ್ಸಂವೃತಃ**-ಬ್ರಾಹ್ಮಣರಿಂದ ಸುತ್ತುವರಿಯಲ್ಪಟ್ಟವನು. **ಯಜ್ಞಸಂಭಾರಕರ್ತಾ**-ಯಜ್ಞಕ್ಕೆ ಬೇಕಾದ ಸಂಭಾರಗಳನ್ನು ಒದಗಿಸುತ್ತಿದ್ದವನು. **ಜನೈಃಪೂಜಿತಃ**-ಸಕಲ ಜನರಿಂದಲೂ ಅಗ್ರಪೂಜೆಗೆ ಅರ್ಹನೆಂದು ಸನ್ಮಾನಿಸಲ್ಪಟ್ಟವನು. **ಚೈದ್ಯದುರ್ವಾಕ್ಕ್ಷಮಃ**-ಚೇದಿರಾಜನಾದ ಶಿಶುಪಾಲನ ದುರ್ವಾಕ್ಯಗಳನ್ನು ಸಹಿಸಿದವನು. **ಅರೇಶ್ಶಿರಶ್ಛೇದಕಾರೀ ಮಹಾಮೋಕ್ಷದಃ**-ತನ್ನ ಶತ್ರುವಿನ ತಲೆಯನ್ನು ಕತ್ತರಿಸಿ ಉತ್ತಮವಾದ ಮೋಕ್ಷವನ್ನು ಅವನಿಗೆ ಕರುಣಿಸಿದವನು.

೮೦. **ಮಹಾಯಜ್ಞಶೋಭಾಕರಃ**-ಆ ಮಹಾಯಾಗಕ್ಕೆ ಕಳೆಯೇರಿಸಿದವನು. **ಚಕ್ರವರ್ತೀ**-ನಿಜವಾದ ಚಕ್ರಾಧಿಪತಿಯೆನಿಸಿದವನು. **ನೃಪಾನಂದಕಾರೀ**-ಧರ್ಮರಾಜನಿಗೆ ಆನಂದವುಂಟುಮಾಡಿದವನು. **ವಿಹಾರೀ**-ಪಾಂಡವರೊಡನೆ ಸಂತೋಷದಿಂದ ವಿಹರಿಸಿದವನು. **ಸುಹಾರೀ**-ಶ್ರೇಷ್ಠವಾದ ಹಾರವನ್ನು ಧರಿಸಿದವನು. **ಸಭಾಸಂವೃತೋಕೌರವಸ್ಯಮಾನಹೃತ್**-ಸಭೆಯಲ್ಲಿ ದುರ್ಯೋಧನನ ಮಾನವನ್ನು ಕಳೆದವನು, ಅಥವಾ ದುರ್ಯೋಧನನಿಗೆ ಅವಮಾನವುಂಟುಮಾಡಿದವನು. **ಯಾನಹಂತಾ ಶಾಲ್ವಸಂಹಾರಕಃ**-ಇಷ್ಟಬಂದಂತೆ ಸಂಚರಿಸಬಲ್ಲುದಾದ ಸೌಭವೆಂಬ ಶಾಲ್ವನ ವಿಮಾನವನ್ನು ಮುರಿದುದಲ್ಲದೆ ಆ ಶಾಲ್ವನನ್ನೂ ಸಂಹರಿಸಿದವನು.

ಸ ಭೋಜಶ್ಚ ವೃಷ್ಣಿರ್ಮಧುಃ ಶೂರಸೇನೋ
ದಶಾರ್ಹೋ ಯದುರ್ಹ್ಯಂಧಕೋ ಲೋಕಜಿಚ್ಚ ।
ದ್ಯುಮನ್ನಾಮಹಾ ವರ್ಮಭೃದ್ದಿವ್ಯಶಸ್ತ್ರೀ
ಸ್ವಬೋಧಃ ಸದಾ ರಕ್ಷಕೋ ದೈತ್ಯಹಂತಾ ॥ ೮೧ ॥

ತಥಾ ದಂತವಕ್ತ್ರಪ್ರಣಾಶೀ ಗದಾಭೃ-
ಜ್ಜಗತ್ತೀರ್ಥಯಾತ್ರಾಕರಃ ಪದ್ಮಹಾರಃ
ಕುಶೀ ಸೂತಹಂತಾ ಕೃಪಾಕೃತ್ಸ್ಮೃತೀಶೋ
ಮಲೋ ಬಲ್ವಲಾಂಗಪ್ರಭಾಖಂಡಕಾರೀ ॥ ೮೨ ॥

---

೮೧. **ಭೋಜಃ, ವೃಷ್ಣಿಃ, ಮಧುಃ, ಶೂರಸೇನಃ, ದಶಾರ್ಹಃ, ಯದುಃ, ಅಂಧಕಃ**-ಭೋಜ, ವೃಷ್ಣಿ, ಮಧು, ಶೂರಸೇನ, ದಶಾರ್ಹ, ಯದು, ಅಂಧಕ, ಎಂಬ ಯಾದವ ಪ್ರಭೇದಗಳ ಸ್ವರೂಪನು. **ಲೋಕಜಿತ್**-ಸಕಲ ಲೋಕಗಳನ್ನೂ ಗೆದ್ದವನು. ॥ ೬೦೦ ॥ **ದ್ಯುಮನ್ನಾಮಹಾ**-ಸಾಲ್ವನ ಮಂತ್ರಿಯಾದ ದ್ಯುಮಂತನೆಂಬುವನ ಕೊಬ್ಬನ್ನಡಗಿಸಿದವನು. **ವರ್ಮಭೃತ್**-ಯುದ್ಧ ಕವಚವನ್ನು ತೊಟ್ಟವನು. **ದಿವ್ಯಶಸ್ತ್ರೀ**-ದಿವ್ಯವಾದ ಆಯುಧಗಳುಳ್ಳವನು. **ಸ್ವಬೋಧಃ**-ಆತ್ಮಜ್ಞಾನಸ್ವರೂಪನು. **ಸದಾ ರಕ್ಷಕಃ**-ಸತ್ಪುರುಷರನ್ನು ಸಲಹುವವನು. **ದೈತ್ಯಹಂತಾ**-ದುಷ್ಟರಾದ ದೈತ್ಯರನ್ನು ಸಂಹರಿಸಿದವನು.

೮೨. **ಗದಾಭೃಕ್ ದಂತವಕ್ತ್ರಪ್ರಣಾಶೀ**-ಗದೆಯನ್ನು ಕೈಲಿಹಿಡಿದು ದಂತವಕ್ತ್ರನನ್ನು ಸಂಹರಿಸಿದವನು. **ಜಗತ್ತೀರ್ಥಯಾತ್ರಾಕರಃ**-ಬಲರಾಮನ ರೂಪದಿಂದ ಲೋಕದಲ್ಲಿರುವ ಸಕಲ ತೀರ್ಥಗಳನ್ನು ಯಾತ್ರೆಮಾಡಿದವನು. **ಪದ್ಮಹಾರಃ**-ಕಮಲಗಳ ಸರವನ್ನು ಧರಿಸಿರುವವನು. **ಕುಶೀ ಸೂತಹಂತಾ**-ತಾನು ಬಂದಾಗ ಎದ್ದು ಗೌರವಿಸಲಿಲ್ಲವೆಂಬ ಕಾರಣದಿಂದ ಸತ್ರಯಾಗದಲ್ಲಿ ಪುರಾಣ ಹೇಳುತ್ತಿದ್ದ ರೋಮಹರ್ಷಣ (ಸೂತ) ನನ್ನು ದರ್ಭೆಯ ಪ್ರಹಾರದಿಂದ ಕೊಂದವನು. **ಕೃಪಾಕೃತ್**-ಅನಂತರ ಋಷಿಗಳ ಪ್ರಾರ್ಥನೆಯಂತೆ

ತಥಾ ಭೀಮದುರ್ಯೋಧನಜ್ಞಾನದಾತಾ-
ಽಪರೋ ರೋಹಿಣೀಸೌಖ್ಯದೋ ರೇವತೀಶಃ ।
ಮಹಾದಾನಕೃದ್ವಿಪ್ರದಾರಿದ್ರ್ಯಹಾ ಚ
ಸದಾ ಪ್ರೇಮಯುಕ್ಶ್ರೀಸುದಾಮ್ನಃ ಸಹಾಯಃ ॥ ೮೩ ॥

ತಥಾ ಭಾರ್ಗವಕ್ಷೇತ್ರಗಂತಾ ಸ ರಾಮೋಽ-
ಥ ಸೂರ್ಯೋಪರಾಗಶ್ರುತಃ ಸರ್ವದರ್ಶೀ ।
ಮಹಾಸೇನಯಾ ಚಾಸ್ಥಿತಃ ಸ್ನಾನಯುಕ್ತೋ
ಮಹಾದಾನಕೃನ್ಮಿತ್ರಸಂಮೇಲನಾರ್ಥೀ ॥ ೮೪ ॥

ಕೃಪೆಯನ್ನು ತೋರಿಸಿದವನು. **ಸ್ಮೃತೀಶಃ**-ಸ್ಮೃತಿ ಮಾರ್ಗದಂತೆ ಸೂತವಧ ಪ್ರಾಯಶ್ಚಿತ್ತಕ್ಕೆ ಉದ್ಯುಕ್ತನಾದವನು. **ಅಮಲಃ**-ಆ ವಿಧ್ಯುಕ್ತಾಚರಣೆಯಿಂದ ಪಾಪನಿರ್ಮುಕ್ತನಾದವನು. **ಬಲ್ವಲಾಂಗಪ್ರಭಾಖಂಡಕಾರೀ**-ಋಷಿಗಳಿಗೆ ಕಿರುಕುಳ ಕೊಡುತ್ತಿದ್ದ ಇಲ್ವಲಪುತ್ರನಾದ ಬಲ್ವಲನೆಂಬುವನನ್ನು ತುಂಡು ತುಂಡಾಗಿ ಕತ್ತರಿಸಿದವನು,

೮೩. **ಭೀಮದುರ್ಯೋಧನಜ್ಞಾನದಾತಾ**-ಗದಾಯುದ್ಧ ಸಮಯದಲ್ಲಿ ಭೀಮ ದುರ್ಯೋಧನರಿಗೆ ಹೊಡೆದಾಡಬೇಡಿರೆಂದು ಬುದ್ಧಿಹೇಳಿದವನು. **ಅಪರಃ**-ತನಗಿಂತಲೂ ಶ್ರೇಷ್ಠನಿಲ್ಲವೆನಿಸಿದವನು. **ರೋಹಿಣೀಸೌಖ್ಯದಃ**-ತನ್ನ ತಾಯಿಯಾದ ರೋಹಿಣಿಗೆ ಸುಖವುಂಟುಮಾಡಿದವನು. **ರೇವತೀಶಃ**-ರೇವತಿಯ ಪ್ರಿಯಪತಿಯು. **ಮಹಾದಾನಕೃತ್**-ಭಾರಿಭಾರಿ ದಾನಗಳನ್ನು ಮಾಡಿದವನು. **ವಿಪ್ರದಾರಿದ್ರ್ಯಹಾ**-ಬ್ರಾಹ್ಮಣರ ಬಡತನವನ್ನು ಇಂಗಿಸಿದವನು. **ಸದಾಪ್ರೇಮಯುಕ್**-ಸರ್ವದಾ ಪ್ರೇಮದಿಂದ ತುಂಬಿದ ಹೃದಯವುಳ್ಳವನು. **ಶ್ರೀಸುದಾಮ್ನಃ ಸಹಾಯಃ**-ಶ್ರೀ ಸುದಾಮನ ಜೊತೆಗಾರನು.

೮೪. **ಸೂರ್ಯೋಪರಾಗಶ್ರುತಃ ಸರಾಮಃ ಭಾರ್ಗವಕ್ಷೇತ್ರಗಂತಾ**-ಜ್ಯೋತಿಷ್ಕರ ಸಲಹೆಯಂತೆ ಸೂರ್ಯಗ್ರಹಣ ಸಮಯದಲ್ಲಿ ಸ್ಯಮಂತಪಂಚಕ

ತಥಾ ಪಾಂಡವಪ್ರೀತಿದಃ ಕುಂತಿಜಾರ್ಥೀ
ವಿಶಾಲಾಕ್ಷಮೋಹಪ್ರದಃ ಶಾಂತಿದಶ್ಚ ।
ವಟೇ ರಾಧಿಕಾರಾಧನೋ ಗೋಪಿಕಾಭಿಃ
ಸಖೀಕೋಟಿಭೀ ರಾಧಿಕಾಪ್ರಾಣನಾಥಃ ॥ ೭೫ ॥

ಸಖೀಮೋಹದಾವಾಗ್ನಿಹಾ ವೈಭವೇಶಃ
ಸ್ಫುರತ್ಕೋಟಿಕಂದರ್ಪ ಲೀಲಾವಿಶೇಷಃ ।
ಸಖೀರಾಧಿಕಾದುಃಖನಾಶೀ ವಿಲಾಸೀ
ಸಖೀಮಧ್ಯಗಃ ಶಾಪಹಾ ಮಾಧವೀಶಃ ॥ ೭೬ ॥

ವೆಂದು ಪ್ರಖ್ಯಾತವಾದ ಪರಶುರಾಮಕ್ಷೇತ್ರಕ್ಕೆ ಬಲರಾಮನೊಡನೆ ಹೊರಟವನು. **ಸರ್ವದರ್ಶೀ**-ಎಲ್ಲವನ್ನೂ ಬಲ್ಲವನು. **ಮಹಾಸೇನಯಾ ಚಾಸ್ಥಿತಃ**-ಭಾರಿ ಸೇನೆಯೊಡಗೂಡಿ ಬಂದವನು. **ಸ್ನಾನಯುಕ್ತಃ**--ಸ್ಯಮಂತಪಂಚಕ ಕ್ಷೇತ್ರದಲ್ಲಿ ಸ್ನಾನಮಾಡಿದವನು. **ಮಹಾದಾನಕೃತ್**-ಆ ಸೂರ್ಯಗ್ರಹಣ ಸಮಯದಲ್ಲಿ ಗೋದಾನಾದಿ ಮಹಾದಾನಗಳನ್ನು ಮಾಡಿದವನು. **ಮಿತ್ರಸಂಮೇಲನಾರ್ಥೀ**-ಆ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಬಂಧು ಮಿತ್ರರೊಡನೆ ಕಲೆಯಲು ಆಸೆಪಟ್ಟವನು.

೭೫. **ಕುಂತಿಜಾರ್ಥೀ ಪಾಂಡವಪ್ರೀತಿದಃ**-ಕುಂತೀಪುತ್ರರಾದ ಪಾಂಡವರನ್ನುನೋಡಬಯಸಿ ಅವರಿಗೆ ಪ್ರೀತಿಯನ್ನುಂಟುಮಾಡಿದವನು. **ವಿಶಾಲಾಕ್ಷಮೋಹಪ್ರದಃ**-ತಮ್ಮ ಕಂಗಳನ್ನರಳಿಸಿಕೊಂಡು ತನ್ನನ್ನೇ ನೋಡುತ್ತಿರುವ ಜನರಿಗೆ ತನ್ನ ಸೌಂದರ್ಯದಿಂದ ಮೋಹವುಂಟುಮಾಡಿದವನು. **ಶಾಂತಿದಃ**-ಅದರಂತೆಯೇ ಶಾಂತಿಯನ್ನೂ ಉಂಟುಮಾಡಿದವನು. **ಸಖೀಕೋಟಿಭಿರ್ಗೋಪಿಕಾಭಿಃ ವಟೇ ರಾಧಿಕಾರಾಧನಃ**-ಗೆಳತಿಯರ ಗುಂಪಿಗೆ ಸೇರಿಸಿ ಗೋಪಿಯರೊಡನೆ ಭಾಂಡೀರವೆಂಬ ವಟವೃಕ್ಷದ ಬಳಿ ರಾಧಿಕೆಯನ್ನು ಒಲಿಸಿಕೊಂಡವನು. **ರಾಧಿಕಾಪ್ರಾಣನಾಥಃ**-ಆ ರಾಧೆಯ ಪ್ರಾಣಕಾಂತನು.

೭೬. **ಸಖೀಮೋಹದಾವಾಗ್ನಿಹಾ**—ತನ್ನ ಸಖಿಯರಿಗುಂಟಾಗಿದ್ದ ಮೋಹವೆಂಬ ದಾವಾಗ್ನಿಯನ್ನಾರಿಸಿದವನು. **ವೈಭವೇಶಃ**-ವೈಭವದಿಂದ ಮೆರೆ

ಶತಂ ವರ್ಷವಿಶ್ಲೇಷಹೃನ್ನಂದಪುತ್ರ-
ಸ್ತಥಾನಂದವಕ್ಷೋಗತಃ ಶೀತಲಾಂಗಃ ।
ಯಶೋದಾಶುಚಃ ಸ್ನಾನಕೃದ್ದುಃಖಹಂತಾ
ಸದಾ ಗೋಪಿಕಾನೇತ್ರಲಗ್ನೋ ವ್ರಜೇಶಃ ॥ ೮೭ ॥

ಸ್ತುತೋ ದೇವಕೀರೋಹಿಣೀಭ್ಯಾಂ ಸುರೇಂದ್ರೋ
ರಹೋಗೋಪಿಕಾಜ್ಞಾನದೋ ಮಾಸಪಕ್ಷ ।
ತಥಾ ಪಟ್ಟಸಂಸ್ತುತಃ ಪಟ್ಟರಾಜ್ಞೀಭಿರಾರಾ-
ದ್ಧನೀ ಲಕ್ಷಣಾಪ್ರಾಣನಾಥಃ ಸದಾ ಹಿ ॥ ೮೮ ॥

ಯುವ ಪ್ರಭುವು. **ಸ್ಫುರತ್ಕೋಟಿಕಂದರ್ಪಲೀಲಾವಿಶೇಷಃ**-ಹೊಳೆಯುತ್ತಿರುವ ಕೋಟಿಮನ್ಮಥರಿಗೆಣೆಯೆನಿಸಿದ ಲೀಲೆಯುಳ್ಳವನು. **ಸಖೀರಾಧಿಕಾದುಃಖನಾಶೀ** ತನ್ನ ಸಖಿಯಾದ ರಾಧೆಯ ದುಃಖವನ್ನು ಪರಿಹರಿಸಿದವನು. **ಸಖೀಮಧ್ಯಗಃ ವಿಲಾಸೀ**-ಸಖಿಯರ ನಡುವೆ ನಿಂತು ತನ್ನ ವಿಲಾಸವನ್ನು ತೋರ್ಪಡಿಸುತ್ತಿರುವವನು. **ಶಾಪಹಾ**-ರಾಧೆಯ ಶಾಪವನ್ನು ಪರಿಹರಿಸಿದವನು. **ಮಾಧವೀಶಃ**-ಮಾಧವಿಯೆಂಬ ಹೆಸರುಳ್ಳ ಆ ರಾಧೆಯ ವಲ್ಲಭನು.

೮೭. **ಶತಂ ವರ್ಷವಿಶ್ಲೇಷಹೃತ್**--ನೂರುವರ್ಷಗಳ ಕಾಲದಷ್ಟು ಅಮಿತವಾದ ವಿರಹ ದುಃಖವನ್ನು ಪರಿಹರಿಸಿದವನು. **ನಂದಪುತ್ರಃ**-ನಂದನ ಕುಮಾರನೆನಿಸಿದವನು. **ನಂದವಕ್ಷೋಗತಃ**-ನಂದನಿಂದ ಎದೆಗಪ್ಪಿಕೊಳ್ಳಲ್ಪಟ್ಟವನು. **ಶೀತಲಾಂಗಃ**-ಆಗ ಬಂಧುವಿರಹತಪ್ತವಾದ ತನ್ನ ಅಂಗಗಳನ್ನು ತಂಪಾಗಿ ಭಾವಿಸಿದವನು. **ಯಶೋದಾಶುಚಃ ಸ್ನಾನಕೃತ್**-ತನ್ನ ವಿಯೋಗ ದುಃಖವನ್ನು ನೆನೆಸಿ ಅಳುತ್ತಿರುವ ಯಶೋದೆಯ ಕಣ್ಣೀರಿನಿಂದ ತೊಯ್ದುಹೋದವನು. **ದುಃಖಹಂತಾ**-ಆಕೆಯ ದುಃಖವನ್ನು ಪರಿಹರಿಸಿದವನು. **ಸದಾಗೋಪಿಕಾನೇತ್ರಲಗ್ನಃ**-ಯಾವಾಗಲೂ ಗೋಪಿಯರ ಕಣ್ಣುಗಳನಲ್ಲಿ ಕಟ್ಟಿದಂತೆ ಇರುವವನು. **ವ್ರಜೇಶಃ**-ವ್ರಜಕ್ಕೆ ಸ್ವಾಮಿಯು.

೮೮. **ದೇವಕೀರೋಹಿಣೀಭ್ಯಾಂ ಸ್ತುತಃ**-ದೇವಕಿಯಿಂದಲೂ, ರೋಹಿಣಿಯಿಂದಲೂ ಸ್ತುತಿಸಲ್ಪಟ್ಟವನು. **ಸುರೇಂದ್ರಃ**-ದೇವತೆಗಳಿಗೂ ಅಧಿಪತಿಯೆ

ತ್ರಿಭಿಃ ಷೋಡಶಸ್ತ್ರೀಸಹಸ್ರಸ್ತುತಾಂಗಃ
ಶುಕೋ ವ್ಯಾಸದೇವಃ ಸುಮಂತುಃ ಸಿತಶ್ಚ ।
ಭರದ್ವಾಜಕೋ ಗೌತಮೋ ಹ್ಯಾಸುರಿಃ ಸ-
ದ್ವಸಿಷ್ಠಃ ಶತಾನಂದ ಆದ್ಯಃ ಸ ರಾಮಃ ॥ ೮೯ ॥

ಮುನಿಃ ಪರ್ವತೋ ನಾರದೋ ಧೌಮ್ಯ ಇಂದ್ರೋಽ-
ಸಿತೋಽತ್ರಿರ್ವಿಭಾಂಡಃ ಪ್ರಚೇತಾಃ ಕೃಪಶ್ಚ ।
ಕುಮಾರಃ ಸನಂದಸ್ತಥಾ ಯಾಜ್ಞ್ಯವಲ್ಕ್ಯ
ಋಭುರ್ಹ್ಯಂಗಿರಾ ದೇವಲಃ ಶ್ರೀಮೃಕಂಡುಃ ॥ ೯೦ ॥

ಸಿಸಿದವನು. ರಹೋಗೋಪಿಕಾಜ್ಞಾನದಃ-ಏಕಾಂತದಲ್ಲಿ ಗೋಪಿಯರಿಗೆ ದಿವ್ಯ ಜ್ಞಾನವನ್ನುಪದೇಶಿಸಿದವನು. ಮಾನದಃ-ತನ್ನ ಸರಸಸಂಭಾಷಣೆಯಿಂದ ಅವರನ್ನು ಸನ್ಮಾನಿಸಿದವನು. ಅರಾತ್ಪಟ್ಟರಾಜ್ಞೀಭಿಃ ಸಂಸ್ತುತಃ-ತನ್ನ ಎಂಟು ಮಂದಿ ಪಟ್ಟಮಹಿಷಿಯರಿಂದ ಕೊಂಡಾಡಲ್ಪಟ್ಟವನು. ಧನೀ-ಐಶ್ವರ್ಯದಿಂದ ತುಂಬಿದವನು. ಸದಾ ಲಕ್ಷ್ಮಣಾಪ್ರಾಣನಾಥಃ-ಲಕ್ಷ್ಮಣೆಯೆಂಬವಳಿಗೆ ಸರ್ವಕಾಲದಲ್ಲಿಯೂ ಪ್ರಾಣಕ್ಕಿಂತಲೂ ಪ್ರಿಯನಾದವನು.

೮೯. ಷೋಡಶಸ್ತ್ರೀಸಹಸ್ರಸ್ತುತಾಂಗಃ-ಹದಿನಾರು ಸಾವಿರ ಸ್ತ್ರೀಯರಿಂದ ಹೊಗಳಲ್ಪಟ್ಟವನು. ಶುಕಃ, ವ್ಯಾಸದೇವಃ, ಸುಮಂತುಃ, ಸಿತಃ, ಭರದ್ವಾಜಕಃ, ಗೌತಮಃ, ಆಸುರಿಃ, ಸದ್ವಸಿಷ್ಠಃ, ಶತಾನಂದಃ, ಸರಾಮಃ, ಆದ್ಯಃ-ಶುಕ, ವ್ಯಾಸಮುನಿ, ಸುಮಂತು, ಸಿತ, ಭರದ್ವಾಜ, ಗೌತಮ, ಆಸುರಿ, ಸದ್ವಸಿಷ್ಠ, ಶತಾನಂದ, ಆದ್ಯ, ರಾಮ ಎಂಬ ಮಹರ್ಷಿಗಳ ಸ್ವರೂಪನು.

೯೦. ಮುನಿಃ, ಪರ್ವತಃ, ನಾರದಃ, ಧೌಮ್ಯಃ ಇಂದ್ರಃ, ಅಸಿತಃ, ಅತ್ರಿಃ, ವಿಭಾಂಡಃ, ಪ್ರಚೇತಾಃ, ಕೃಪಃ, ಕುಮಾರಃ, ಸನಂದಃ, ಯಾಜ್ಞ-ವಲ್ಕ್ಯಃ ಋಭುಃ, ಅಂಗಿರಾಃ, ದೇವಲಃ, ಶ್ರೀಮೃಕಂಡುಃ-ಪರ್ವತಮುನಿ, ನಾರದ, ಧೌಮ್ಯ, ಇಂದ್ರ, ಅಸಿ, ಅತ್ರಿ, ವಿಭಾಡಕ, ಪ್ರಚೇತಸ್ಸು, ಕೃಪ, ಕುಮಾರ, ಸನಂದ, ಯಾಜ್ಞವಲ್ಕ್ಯ, ಋಭು, ಅಂಗಿರಸ್ಸು, ದೇವಲ, ಮೃಕಂಡು ಈ ಮುನಿಗಳ ಸ್ವರೂಪನು.

ಮರೀಚಿಃ ಕ್ರತುಶ್ಚೌರ್ವಕೋ ಲೋಮಶಶ್ಚ
ಪುಲಸ್ತ್ಯೋ ಭೃಗುರ್ಬ್ರಹ್ಮರಾತೋ ವಸಿಷ್ಠಃ ।
ನರಶ್ಚಾಪಿ ನಾರಾಯಣೋ ದತ್ತ ಏವ
ತಥಾ ಪಾಣಿನಿಃ ಪಿಂಗಲೋ ಭಾಷ್ಯಕಾರಃ ॥ ೯೧ ॥

ಸ ಕಾತ್ಯಾಯನೋ ವಿಪ್ರಪಾತಂಜಲಿಶ್ಚಾ-
ಥ ಗರ್ಗೋ ಗುರುರ್ಗೀಷ್ಪತಿರ್ಗೌತಮೀಶಃ ।
ಮುನಿರ್ಜಾಜಲಿಃ ಕಶ್ಯಪೋ ಗಾಲವಶ್ಚ
ದ್ವಿಜಃ ಸೌರಭಿಶ್ಚರ್ಷ್ಯಶೃಂಗಶ್ಚ ಕಣ್ವಃ ॥ ೯೨ ॥

ದ್ವಿತಶ್ಚೈಕತಶ್ಚಾಪಿ ಜಾತೂದ್ಭವಶ್ಚ
ಘನಃ ಕರ್ದಮಸ್ಯಾತ್ಮಜಃ ಕರ್ದಮಶ್ಚ ।
ತಥಾ ಭಾರ್ಗವಃ ಕೌತ್ಸಕಶ್ಚಾರುಣಸ್ತು
ಶುಚಿಃ ಪಿಪ್ಪಲಾದೋ ಮೃಕಂಡಸ್ಯ ಪುತ್ರಃ ॥ ೯೩ ॥

---

೯೧. **ಮರೀಚಿಃ, ಕ್ರತುಃ, ಔರ್ವಕಃ, ಲೋಮಶಃ, ಪುಲಸ್ತ್ಯಃ, ಭೃಗುಃ ಬ್ರಹ್ಮರಾತಃ, ವಸಿಷ್ಠಃ, ನರಃ, ನಾರಾಯಣಃ, ದತ್ತಃ, ಪಾಣಿನಿಃ, ಪಿಂಗಲಃ, ಭಾಷ್ಯಕಾರಃ**-ಮರೀಚಿ, ಕ್ರತು, ಔರ್ವ, ಲೋಮಶ, ಪುಲಸ್ತ್ಯ, ಭೃಗು, ಬ್ರಹ್ಮರಾತ, ವಸಿಷ್ಠ, ನರ, ನಾರಾಯಣ, ದತ್ತ, ಪಾಣಿನಿ, ಪಿಂಗಲ, ಭಾಷ್ಯಕಾರರೆಂಬಿವರ ಸ್ವರೂಪವನು.

೯೨. **ಕಾತ್ಯಾಯನಃ, ವಿಪ್ರಪಾತಂಜಲಿಃ, ಗರ್ಗಃ, ಗುರುಃ,** ||೭೦೦||
ಗೀಷ್ಪತಿಃ, ಗೌತಮೀಶಃ, ಮುನಿರ್ಜಾಜಲಃ, ಕಶ್ಯಪಃ, ಗಾಲವಃ, ದ್ವಿಜಃ ಸೌರಭಿಃ, ಋಷ್ಯಶೃಂಗಃ, ಕಣ್ವಃ-ಕಾತ್ಯಾಯನ, ಪಾತಂಜಲಿ, ಗರ್ಗ, ಗುರು, ಗೀಷ್ಪತಿ. ಗೌತಮೀಶ, ಜಾಜಲಮುನಿ, ಕಶ್ಯಪ, ಗಾಲವ, ಸೌರಭಿಯೆಂಬ ದ್ವಿಜನು, ಋಷ್ಯಶೃಂಗ, ಕಣ್ವ, ಎಂಬವರ ಸ್ವರೂಪವನು

೯೩. **ದ್ವಿತಃ, ಏಕತಃ, ಜಾತೂದ್ಭವಃ, ಘನಃ, ಕರ್ದಮಸ್ಯಾತ್ಮಜಃ, ಕರ್ದಮಃ, ಭಾರ್ಗವಃ, ಕೌತ್ಸಕಃ, ಅರುಣಃ, ಶುಚಿಃ, ಪಿಪ್ಪಲಾದಃ, ಮೃಕಂಡಸ್ಯಪುತ್ರಃ**-ದ್ವಿತ, ಏಕತ, ಜಾತೂದ್ಭವ, ಘನ, ಕರ್ದಮಪುತ್ರನಾದ ಕಪಿಲಮುನಿ, ಕರ್ದಮ, ಭಾರ್ಗವ, ಕೌತ್ಸ, ಅರುಣ, ಶುಚಿ, ಪಿಪ್ಪಲಾದ, ಮಾರ್ಕಂಡೇಯರೆಂಬ ಮುನಿಗಳ ಸ್ವರೂಪವನು.

ಸ ಪೈಲಸ್ತಥಾ ಜೈಮಿನಿಃ ಸತ್ಸುಮಂತು-
ವರೋ ಗಾಂಗಲಃ ಸ್ಫೋಟಗೇಹಃ ಫಲಾದಃ |
ಸದಾ ಪೂಜಿತೋ ಬ್ರಾಹ್ಮಣಃ ಸರ್ವರೂಪೀ
ಮುನೀಶೋ ಮಹಾಮೋಹನಾಶೋऽಮರಃ ಪ್ರಾಕ್ || ೯೪ ||

ಮುನೀಶಸ್ತುತಃ ಶೌರಿವಿಜ್ಞಾನದಾತಾ
ಮಹಾಯಜ್ಞಕೃಚ್ಚಾವಭೃಥಸ್ನಾನಪೂಜ್ಯಃ |
ಸದಾ ದಕ್ಷಿಣಾದೋ ನೃಪೈಃ ಪಾರಿಬರ್ಹೀ
ಪ್ರಜಾನಂದದೋ ದ್ವಾರಿಕಾಗೇಹದರ್ಶೀ || ೯೫ ||

---

೯೪. **ಪೈಲಃ, ಜೈಮಿನಿಃ, ಸುಮಂತುಃ, ವರಃ ಗಾಂಗಲಃ, ಸ್ಫೋಟಗೇಹಃ, ಫಲಾದಃ**-ಅದರಂತೆ ಪೈಲ, ಜೈಮಿನಿ, ಸುಮಂತು, ಶ್ರೇಷ್ಠನಾದ ಗಾಂಗಲಮುನಿ, ಸ್ಫೋಟಗೇಹ, ಫಲಾದ ಎಂಬ ಋಷಿಗಳ ರೂಪದಲ್ಲಿರುವವನು. **ಸದಾ ಪೂಜಿತಃ**—ಸರ್ವಕಾಲದಲ್ಲಿಯೂ ಪೂಜಿಸಲ್ಪಡುವವನು. **ಬ್ರಾಹ್ಮಣಃ**-ಬ್ರಾಹ್ಮಣಸ್ವರೂಪನು **ಸರ್ವರೂಪೀ**-ಚೇತನಾಚೇತನಾತ್ಮಕಗಳಾದ ಸಕಲ ವಸ್ತುಗಳ ರೂಪದಿಂದಿರುವವನು. **ಮುನೀಶಃ**-ಮುನಿಗಳಿಗೆ ಅಧೀಶ್ವರನು. **ಮಹಾಮೋಹನಾಶಃ**—ಭಾರಿಯಾದ ಅಜ್ಞಾನವನ್ನು ಹೋಗಲಾಡಿಸುವವನು. **ಅಮರಃ**-ಮರಣವರ್ಜಿತನು. **ಪ್ರಾಕ್**-ಎಲ್ಲರಿಗಿಂತಲೂ ಮೊದಲನೆಯವನು.

೯೫. **ಮುನೀಶಸ್ತುತಃ**-ಮುನಿಶ್ರೇಷ್ಠರಿಂದ ಸ್ತೋತ್ರಮಾಡಲ್ಪಟ್ಟವನು. **ಶೌರಿವಿಜ್ಞಾನದಾತಾ**-ಶೂರಸೇನ (ವಸುದೇವ) ಪುತ್ರನಾದ ತನ್ನ ಯಥಾರ್ಥ ಜ್ಞಾನವನ್ನು ಮಹರ್ಷಿಗಳ ಮುಖಾಂತರ ವಸುದೇವನಿಗುಂಟಾಗುವಂತೆ ಅನುಗ್ರಹಿಸಿದವನು. **ಮಹಾಯಜ್ಞಕೃತ್**-ವಸುದೇವನಿಂದ ಅನೇಕ ಭಾರಿ ಯಾಗಗಳನ್ನು ಸ್ಯಮಂತಕ ಪಂಚಕದಲ್ಲಿ ಮಾಡಿಸಿದವನು. **ಅವಭೃಥಸ್ನಾನಪೂಜ್ಯಃ**-ಅವಭೃತ ಸ್ನಾನಸಮಯದಲ್ಲಿ ಪೂಜಿಸಲ್ಪಡುವವನು. **ಸದಾದಕ್ಷಿಣಾದಃ**-ಆ ಯಾಗಕಾಲದಲ್ಲಿ ಸರ್ವದಾ ದಕ್ಷಿಣೆಯನ್ನು ಈಯುತ್ತಿದ್ದವನು. **ನೃಪೈಃ ಪಾರಿಬರ್ಹೀ**-ಅನೇಕ ಮಂದಿ ಅರಸರಿಂದ ಒಪ್ಪಿಸಲ್ಪಟ್ಟ ಕಾಣಿಕೆಗಳುಳ್ಳವನು. **ಪ್ರಜಾ**

ಮಹಾಜ್ಞಾನದೋ ದೇವಕೀಪುತ್ರದಶ್ಚಾ-
ಸುರೈಃ ಪೂಜಿತೋ ಹೀಂದ್ರಸೇನಾದೃತಶ್ಚ ।
ಸದಾ ಫಾಲ್ಗುನಪ್ರೀತಿಕೃತ್ಸತ್ಸುಭದ್ರಾ-
ವಿವಾಹೇ ದ್ವಿಪಾಶ್ವಪ್ರದೋ ಮಾನಯಾನಃ ॥ ೯೬ ॥

ಭುವಂ ದರ್ಶಕೋ ಮೈಥಿಲೇನ ಪ್ರಯುಕ್ತೋ
ದ್ವಿಜೇನಾಶು ರಾಜ್ಞಾ ಸ್ಥಿತೋ ಬ್ರಾಹ್ಮಣೈಶ್ಚ ।
ಕೃತೀ ಮೈಥಿಲೇ ಲೋಕವೇದೋಪದೇಶೀ
ಸದಾ ವೇದವಾಕ್ಯೈಃ ಸ್ತುತಃ ಶೇಷಶಾಯೀ ॥ ೯೭ ॥

ನಂದದಃ--ವ್ರಜನಿವಾಸಿಗಳಿಗೆ ಆನಂದಪಿತ್ತವನು. **ದ್ವಾರಿಕಾಗೇಹದರ್ಶೀ**-ಯಜ್ಞಾನಂತರದಲ್ಲಿ ಸ್ಯಮಂತಪಂಚಕದಿಂದ ಹೊರಟು ದ್ವಾರಕೆಗೆ ಹಿಂದಿರುಗಿದವನು.

೯೬. **ಮಹಾಜ್ಞಾನದಃ**–ವಸುದೇವನಿಗೆ ತತ್ತ್ವಾರ್ಥವೇನೆಂಬುದನ್ನು ವಿವರಿಸಿದವನು. **ದೇವಕೀಪುತ್ರದಃ**–ದೇವಕಿಯ ಆರುಮಂದಿ ಸತ್ತುಹೋದ ಮಕ್ಕಳನ್ನು ಹಿಂದಕ್ಕೆ ಕರೆತಂದು ತೋರಿಸಿದವನು. **ಅಸುರೈಃ ಪೂಜಿತಃ**-ಆ ಮಕ್ಕಳನ್ನು ಕರೆತರುವಾಗ ಸುತಲ ಲೋಕದಲ್ಲಿ ಬಲಿ ಮೊದಲಾದ ಅಸುರರಿಂದ ಪೂಜಿಸಲ್ಪಟ್ಟವನು. **ಅಹೀಂದ್ರಸೇನಾದೃತಃ**-ಸರ್ಪರಾಜನ ಸೈನ್ಯದಿಂದ ಆದರಿಸಲ್ಪಟ್ಟವನು. **ಸದಾಫಲ್ಗುನಪ್ರೀತಿಕೃತ್**—ಯಾವಾಗಲೂ ಅರ್ಜುನನಿಗೆ ಪ್ರಿಯವನ್ನುಂಟುಮಾಡಿದವನು. **ಸುಭದ್ರಾವಿವಾಹೇ ದ್ವಿಪಾಶ್ವಪ್ರದಃ**—ಸುಭದ್ರೆಯ ವಿವಾಹದಲ್ಲಿ ಆನೆ, ಕುದುರೆಗಳನ್ನು ಇತ್ತವನು. **ಮಾನಯಾನಃ**-ಕುಪಿತನಾದ ಬಲರಾಮನ ಅಭಿಮಾನವನ್ನು ಮೆಲ್ಲನೆ ಶಮನಗೊಳಿಸಿದವನು

೯೭. **ಮೈಥಿಲೇನ ದ್ವಿಜೇನ ರಾಜ್ಞಾ ಚ ಪ್ರಯುಕ್ತಃ ಭುವಂ ದರ್ಶಕಃ**-ಮಿಥಿಲಾದೇಶದ ನಿವಾಸಿಗಳಾದ ಶ್ರುತದೇವನೆಂಬ ಬ್ರಾಹ್ಮಣನಿಂದಲೂ, ಬಹುಲಾಶ್ವನೆಂಬ ರಾಜನಿಂದಲೂ ಪ್ರಾರ್ಥಿಸಲ್ಪಡುತ್ತಿದ್ದು ಅವರೂರಿಗೆ ಬಂದವನು. **ಸ್ಥಿತಃ ಬ್ರಾಹ್ಮಣೈಃ ಕೃತೀ ಮೈಥಿಲೇ**-ಆ ಮೈಥಿಲ ದೇಶದಲ್ಲಿ ತನ್ನೊಡನೆಯೇ ಬಂದ

ಪರೀಕ್ಷಾವೃತೋ ಬ್ರಾಹ್ಮಣೈಶ್ಚಾಮರೇಷು
ಭೃಗುಪ್ರಾರ್ಥಿತೋ ದೈತ್ಯಹಾ ಚೇಶರಕ್ಷೀ ।
ಸಖಾ ಚಾರ್ಜುನಸ್ಯಾಪಿ ಮಾನಪ್ರಹಾರೀ
ತಥಾ ವಿಪ್ರಪುತ್ರಪ್ರದೋ ಧಾಮಗಂತಾ ॥ ೯೮ ॥

ವಿಹಾರಸ್ಥಿತೋ ಮಾಧವೀಭಿಃ ಕಲಾಂಗೋ
ಮಹಾಮೋಹದಾವಾಗ್ನಿದಗ್ಧಾಭಿರಾಮಃ ।
ಯದುಶ್ಚೋಗ್ರಸೇನೋ ನೃಪೋಽಕ್ರೂರ ಏವ
ತಥಾ ಚೋದ್ಧವಃ ಶೂರಸೇನಶ್ಚ ಶೂರಃ ॥ ೯೯ ॥

ಮಹರ್ಷಿಗಳೊಡನೆ ಸತ್ಕೃತನಾದವನು. ಲೋಕವೇದೋಪದೇಶೀ-ಪ್ರಪಂಚಕ್ಕೆ ವೇದಗಳ ರೂಪವಾಗಿ ಉಪದೇಶವಿತ್ತವನು. ಸದಾ ವೇದವಾಕ್ಯೈಃ ಸ್ತುತಃ-ಸರ್ವದಾ ವೇದವಾಕ್ಯಗಳಿಂದ ಸ್ತುತಿಸಲ್ಪಟ್ಟವನು. ಶೇಷಶಾಯೀ-ತನ್ನ ನಿತ್ಯ ನಿವಾಸವಾದ ವೈಕುಂಠದಲ್ಲಿ ಆದಿಶೇಷನಮೇಲೆ ಮಲಗಿರುವವನು.

೯೮. ಅಮರೇಷು ಪರೀಕ್ಷಾವೃತಃ ಬ್ರಾಹ್ಮಣೈಃ ಭೃಗುಪ್ರಾರ್ಥಿತಃ-ದೇವತೆಗಳಲ್ಲಿ ಯಾರು ಹೆಚ್ಚೆಂದು ಪರೀಕ್ಷಿಸುವಂತೆ ಭೃಗುಮಹರ್ಷಿಯನ್ನು ಬ್ರಾಹ್ಮಣರು ಪ್ರಾರ್ಥಿಸಲು ಅದರಂತೆ ಆ ಮಹರ್ಷಿಯಿಂದ ತಾನು ಪರೀಕ್ಷಿಸಲ್ಪಟ್ಟು ಸತ್ತ್ವಮೂರ್ತಿಯೆಂದೂ, ಶ್ರೇಷ್ಠನೆಂದೂ ಪ್ರಖ್ಯಾತನಾದವನು. ದೈತ್ಯಹಾ ಚೇಶರಕ್ಷೀ-ಮುಂದೆಭಸ್ಮಾಸುರನೆಂದೇಪ್ರಖ್ಯಾತನಾದ ವೃಕನೆಂಬ ದೈತ್ಯನನ್ನು ಕೊಂದು ಈಶ್ವರನನ್ನು ಸಂರಕ್ಷಿಸದವನು ಅರ್ಜುನಸ್ಯ ಸಖಾಪಿ ಮಾನಪ್ರಹಾರೀ-ಅರ್ಜುನನು ತನ್ನ ಸ್ನೇಹಿತನಾಗಿದ್ದರೂ ತಾನೇ ಶೂರನೆಂಬ ಅವನ ಅಹಂಕಾರವನ್ನು ಅಡಗಿಸಿದವನು. ವಿಪ್ರಪುತ್ರಪ್ರದಃ-ಸತ್ತುಹೋದ ಬ್ರಾಹ್ಮಣಪುತ್ರನನ್ನು ಮತ್ತೆ ತಂದುಕೊಟ್ಟವನು. ಧಾಮಗಂತಾ-ಆ ಸಂದರ್ಭದಲ್ಲಿ ತನ್ನ ನಿವಾಸವಾದ ವೈಕುಂಠಕ್ಕೆ ಹೋದವನು.

೯೯. ಮಾಧವೀಭಿರ್ವಿಹಾರಸ್ಥಿತಃ-ತನ್ನ ಪ್ರಿಯೆಯರಾದ ಗೋಪಿಯರೊಡನೆ ವಿಹಾರದಲ್ಲಿ ನಿರತನಾದವನು. ಕಲಾಂಗಃ-ಮಧುರವಾದ (ಅಂದವಾದ) ಶರೀರವುಳ್ಳವನು. ಮಹಾಮೋಹದಾವಾಗ್ನಿದಗ್ಧಾಭಿರಾಮಃ-ಮೋಹಾತಿಶಯ

ಹೃದೀಕಶ್ಚ ಸತ್ರಾಜಿತಶ್ಚಾಪ್ರಮೇಯೋ
ಗದಃ ಸಾರಣಃ ಸಾತ್ಯಕಿರ್ದೇವಭಾಗಃ ।
ತಥಾ ಮಾನಸಃ ಸಂಜಯಃ ಶ್ಯಾಮುಕಶ್ಚ
ವೃಕೋ ವತ್ಸಕೋ ದೇವಕೋ ಭದ್ರಸೇನಃ ॥ ೧೦೦ ॥

ನೃಪೋಽಜಾತಶತ್ರುರ್ಜಯೋ ಮಾದ್ರಿಪುತ್ರೋಽ-
ಥ ಭೀಷ್ಮಃ ಕೃಪೋ ಬುದ್ಧಿಚಕ್ಷುಶ್ಚ ಪಾಂಡುಃ ।
ತಥಾ ಶಂತನುರ್ದೇವಬಾಹ್ಲೀಕ ಏವಾ-
ಥ ಭೂರಿಶ್ರವಾಶ್ಚಿತ್ರವೀರ್ಯೋ ವಿಚಿತ್ರಃ ॥ ೧೦೧ ॥

ವೆಂಬ ಕಾಡ್ಗಿಚ್ಚಿಗೆ ಸಿಕ್ಕಿ ಬೆಂದುಹೋದ ರಮಣಿಯರಿಗೆ ರಮಣೀಯವಾಗಿ ತೋರಿದವನು. **ಯದುಃ, ಉಗ್ರಸೇನೋ ನೃಪಃ, ಅಕ್ರೂರಃ, ಉದ್ಧವಃ, ಶೂರಸೇನಃ, ಶೂರಃ**-ಯದು, ರಾಜನಾದ ಉಗ್ರಸೇನ, ಅಕ್ರೂರ, ಉದ್ಧವ, ಶೂರಸೇನ, ಶೂರರೆಂಬ ಯಾದವರ ರೂಪದಿಂದ ತೋರುವವನು.

೧೦೦. **ಹೃದೀಕಃ, ಸತ್ರಾಜಿತಃ, ಅಪ್ರಮೇಯಃ, ಗದಃ, ಸಾರಣಃ, ಸಾತ್ಯಕಿಃ, ದೇವಭಾಗಃ, ಮಾನಸಃ, ಸಂಜಯಃ, ಶ್ಯಾಮುಕಃ, ವೃಕಃ, ವತ್ಸಕಃ, ದೇವಕಃ, ಭದ್ರಸೇನಃ**—ಹೃದೀಕ, ಸತ್ರಾಜಿತ, ಅಪ್ರಮೇಯ, ಗದ, ಸಾರಣ, ಸಾತ್ಯಕಿ, ದೇವಭಾಗ, ಮಾನಸ, ಸಂಜಯ, ಶ್ಯಾಮುಕ, ವೃಕ, ವತ್ಸಕ, ದೇವಕ, ಭದ್ರಸೇನ, ಎಂಬಿವರ ರೂಪದಿಂದ ಕಂಗೊಳಿಸುವವನು.

೧೦೧. **ನೃಪೋಽಜಾತಶತ್ರುಃ, ಜಯಃ, ಮಾದ್ರಿಪುತ್ರಃ, ಭೀಷ್ಮಃ, ಕೃಪಃ, ಬುದ್ಧಿಚಕ್ಷುಃ, ಪಾಂಡುಃ, ಶಂತನುಃ, ದೇವಬಾಹ್ಲೀಕಃ, ಭೂರಿಶ್ರವಾಃ, ಚಿತ್ರವೀರ್ಯಃ, ವಿಚಿತ್ರಃ**-ಯುಧಿಷ್ಠಿರ, ಅರ್ಜುನ, ಮಾದ್ರೀಸುತ, ಭೀಷ್ಮ, ಕೃಪ, ಧೃತರಾಷ್ಟ್ರ, ಪಾಂಡು, ಶಂತನು, ಬಾಹ್ಲಿಕ, ಭೂರಿಶ್ರವಸ್ಸು, ಚಿತ್ರವೀರ್ಯ, ವಿಚಿತ್ರರೆಂಬುವರ ರೂಪವನ್ನು ತಾಳಿದವನು.

ಶಲಶ್ಚಾಪಿ ದುರ್ಯೋಧನಃ ಕರ್ಣ ಏವ
ಸುಭದ್ರಾಸುತೋ ವಿಷ್ಣುರಾತಃ ಪ್ರಸಿದ್ಧಃ ।
ಸ ಜನ್ಮೇಜಯಃ ಪಾಂಡವಃ ಕೌರವಶ್ಚ
ತಥಾ ಸರ್ವತೇಜಾ ಹರಿಃ ಸರ್ವರೂಪೀ ॥ ೧೦೨ ॥

ವ್ರಜಂ ಹ್ಯಾಗತೋ ರಾಧಯಾ ಪೂರ್ಣದೇವೋ
ವರೋ ರಾಸಲೀಲಾಪರೋ ದಿವ್ಯರೂಪೀ ।
ರಥಸ್ಥೋ ನವದ್ವೀಪಖಂಡಪ್ರದರ್ಶೀ
ಮಹಾಮಾನದೋ ಗೋಪಜೋ ವಿಶ್ವರೂಪಃ ॥ ೧೦೩ ॥

---

೧೦೨. **ಶಲಃ, ದುರ್ಯೋಧನಃ, ಕರ್ಣಃ, ಸುಭದ್ರಾಸುತಃ, ಪ್ರಸಿದ್ಧಃ, ವಿಷ್ಣುರಾತಃ, ಜನ್ಮೇಜಯಃ, ಪಾಂಡವಃ,** ॥ ೮೦೦ ॥ **ಕೌರವಃ, ಸರ್ವತೇಜಾಃ, ಸರ್ವರೂಪೀ ಹರಿಃ**-ಶಲ, ದುರ್ಯೋಧನ, ಕರ್ಣ, ಅರ್ಜುನ, ಪ್ರಸಿದ್ಧನಾದ ವಿಷ್ಣುರಾತ, ಜನಮೇಜಯ, ಉಳಿದ ಪಾಂಡವರು ಮತ್ತು ಕೌರವರು, ಇವರ ಸ್ವರೂಪನಾದವನು, ಸಕಲ ತೇಜೋರೂಪನು, ಎಲ್ಲರ ರೂಪನಾಗಿಯೂ ತೋರುವ ಹರಿಯು.

೧೦೩. **ವ್ರಜಂ ಹ್ಯಾಗತೋ ರಾಧಯಾ**-ನಿಜಧಾಮವಾದ ಗೋಲೋಕದಿಂದ ರಾಧೆಯೊಡನೆ ಗೋಕುಲಕ್ಕೆ ಬಂದವನು. **ಪೂರ್ಣದೇವಃ**-ಪರಿಪೂರ್ಣದೇವತಾಸ್ವರೂಪನು. **ವರಃ**-ತಾವಾಗಿ ಕಾಮಿನಿಯರಿಂದ ವರಿಸಲ್ಪಡುವವನು. **ರಾಸಲೀಲಾಪರಃ**--ರಾಸಲೀಲೆಯಲ್ಲಿ ಆಸಕ್ತಿಯುಳ್ಳವನು. **ದಿವ್ಯರೂಪೀ**--ಆ ರಾಸಸಮಯದಲ್ಲಿ ದಿವ್ಯರೂಪದಿಂದ ಕಂಗೊಳಿಸುವವನು. **ರಥಸ್ಥೋ ನವದ್ವೀಪಖಂಡಪ್ರದರ್ಶೀ**-ರಥದಲ್ಲಿ ಕುಳಿತು ಒಂಭತ್ತು ದ್ವೀಪಖಂಡಗಳನ್ನೂ ತೋರಿಸಿದವನು. **ಮಹಾಮಾನದಃ**-ಮಹತ್ತಾದ ಸನ್ಮಾನವನ್ನುಂಟುಮಾಡಿಸುವವನು. **ಗೋಪಜಃ**-ಗೋಪಕುಮಾರನು. **ವಿಶ್ವರೂಪಃ**-ಚರಾಚರಾತ್ಮಕವಾದ ಪ್ರಪಂಚದ ರೂಪವಾಗಿ ತೋರುವವನು.

ಸನಂದಶ್ಚ ನಂದೋ ವೃಷೋ ವಲ್ಲಭೇಶಃ
ಸುದಾಮಾರ್ಜುನಃ ಸೌಬಲಸ್ತೋಕ ಏವ ।
ಸ ಕೃಷ್ಣಃ ಶುಕಃ ಸದ್ವಿಶಾಲರ್ಷಭಾಖ್ಯಃ
ಸುತೇಜಸ್ವಿಕಃ ಕೃಷ್ಣಮಿತ್ರೋ ವರೂಥಃ ॥ ೧೦೪ ॥

ಕುಶೇಶೋ ವನೇಶಸ್ತು ವೃಂದಾವನೇಶ-
ಸ್ತಥಾ ಮಾಥುರೇಶಾಧಿಪೋ ಗೋಕುಲೇಶಃ ।
ಸದಾ ಗೋಗಣೋ ಗೋಪತಿರ್ಗೋಪಿಕೇಶೋऽ-
ಥ ಗೋವರ್ಧನೋ ಗೋಪತಿಃ ಕನ್ಯಕೇಶಃ ॥ ೧೦೫ ॥

೧೦೪-೧೦೫. **ಸನಂದಃ, ನಂದಃ, ವೃಷಃ, ವಲ್ಲಭೇಶಃ, ಸುದಾಮಾ, ಅರ್ಜುನಃ, ಸೌಬಲಃ, ತೋಕಃ, ಕೃಷ್ಣಃ, ಶುಕಃ, ವಿಶಾಲಃ, ಋಷಭಾಖ್ಯಃ- ಸುತೇಜಸ್ವಿಕಃ, ಕೃಷ್ಣಮಿತ್ರಃ, ವರೂಥಃ**,-ಸನಂದ,-ನಂದ, ವೃಷ, ವಲ್ಲಭೇಶ, ಸುದಾಮ, ಅರ್ಜುನ, ಸೌಬಲ, ತೋಕ, ಕೃಷ್ಣ, ಶುಕ ವಿಶಾಲರ್ಷಭ, ಸುತೇಜಸ್ವಿ, ಕೃಷ್ಣಮಿತ್ರ, ವರೂಥ ಎಂಬ ಗೋಪರ ಸ್ವರೂಪನು. **ಕುಶೇಶಃ**-ದರ್ಭೆಗಳ ಅಥವಾ ನೀರಿನ ಪ್ರಭುವು. **ವನೇಶಃ**-ಕಾಡಿನ ಒಡೆಯನು. **ವೃಂದಾವನೇಶಃ**-ವೃಂದಾವನದ ಸ್ವಾಮಿಯು. **ಮಾಥುರೇಶಃ**-ಮಥುರಾರಾಜ್ಯದ ಅಧಿಪತಿಯು. **ಅಧಿಪಃ**-ಸಕಲರಿಗೂ ಒಡೆಯನು. **ಗೋಕುಲೇಶಃ**-ವ್ರಜಮಂಡಲಕ್ಕೆ ಅರಸನೆನಿಸಿದವನು. **ಸದಾಗೋಗಣಃ**-ಯಾವಾಗಲೂ ಹಸುವಿನ ಮಂದೆಯೊಡನೆ ಇರುವವನು. **ಗೋಪತಿಃ**-ಆ ಗೋವುಗಳಿಗೆ ಸ್ವಾಮಿಯು. **ಗೋಪಿಕೇಶಃ**-ಗೋಪಿಯರ ವಲ್ಲಭನು. **ಗೋವರ್ಧನಃ**-ಗೋವರ್ಧನ ಪರ್ವತದ ಸ್ವರೂಪನು. ಅಥವಾ ಗೋವುಗಳಿಗೆ ಪುಷ್ಟಿಯನ್ನುಂಟುಮಾಡುವವನು. **ಗೋಪತಿಃ**-ಭೂವಿಶ್ವರನು. **ಕನ್ಯಕೇಶಃ**-ಮದುವೆಯಾಗದ ಹುಡುಗಿಯರಿಗೆ ಪ್ರಿಯಪತಿಯೆನಿಸಿದವನು.

ಅನಾದಿಸ್ತು ಚಾತ್ಮಾ ಹರಿಃ ಪೂರುಷಶ್ಚ
ಪರೋ ನಿರ್ಗುಣೋ ಜ್ಯೋತಿರೂಪೋ ನಿರೀಹಃ ।
ಸದಾ ನಿರ್ವಿಕಾರಃ ಪ್ರಪಂಚಾತ್ಪರಶ್ಚ
ಸ ಸತ್ಯಸ್ತು ಪೂರ್ಣಃ ಪರೇಶಸ್ತು ಸೂಕ್ಷ್ಮಃ ॥ ೧೦೬ ॥

ದ್ವಾರಕಾಯಾಂ ತಥಾ ಚಾಶ್ವಮೇಧಸ್ಯ ಕರ್ತಾ
ನೃಪೇಣಾಪಿ ಪೌತ್ರೇಣ ಭೂಭಾರಹರ್ತಾ ।
ಪುನಃ ಶ್ರೀವ್ರಜೇ ರಾಸರಂಗಸ್ಯ ಕರ್ತಾ
ಹರೀ ರಾಧಯಾ ಗೋಪಿಕಾನಾಂ ಚ ಭರ್ತಾ ॥ ೧೦೭ ॥

---

೧೦೬. **ಅನಾದಿಃ**- ಮೊದಲಿಲ್ಲದವನು. **ಆತ್ಮಾ**-ಸಕಲ ಹೃದಯಗಳಲ್ಲಿಯೂ ಕರ್ತೃವಾಗಿ ತೋರುವವನು. **ಹರಿಃ**-ಪಾಪಪರಿಹಾರಕನು. **ಪೂರುಷಃ ಪರಃ**-ಪರಮಪುರುಷನು. **ನಿರ್ಗುಣೋ ಜ್ಯೋತಿರೂಪಃ**—ನಿರ್ಗುಣಾವಸ್ಥೆಯಲ್ಲಿ ಕೇವಲ ಪ್ರಕಾಶರೂಪವಾಗಿ ತೋರುವವನು. **ನಿರೀಹಃ**-ಯಾವೊಂದು ಆಸೆಯೂ ಇಲ್ಲದವನು(ಪರಿಪೂರ್ಣಕಾಮನು). **ಸದಾ ನಿರ್ವಿಕಾರಃ**-ಸರ್ವದಾ ಯಾವೊಂದು ವಿಕಾರಕ್ಕೂ ಈಡಾಗದವನು. (ಸ್ವಸ್ವರೂಪಾವಸ್ಥೆಯಲ್ಲಿ ಯಾವ ವಿಕಾರಗಳೂ ಇಲ್ಲದವನು) **ಪ್ರಪಂಚಾತ್ಪರಃ**-ಸಂಸಾರಕ್ಕತೀತನಾದವನು. **ಸತ್ಯಃ**--ಸತ್ಸ್ವರೂಪನು. (ಉಳಿದುದೆಲ್ಲವೂ ಸುಳ್ಳಾಗಿ ತಾನು ಮಾತ್ರ ನಿಜವೆನಿಸಿದವನು). **ಪೂರ್ಣಃ ಪರೇಶಃ**-ಪರಿಪೂರ್ಣರೂಪನಾದ ಪರಮಪ್ರಭುವು. **ಸೂಕ್ಷ್ಮಃ**-ಅತ್ಯಂತ ಸೂಕ್ಷ್ಮವಾಗಿರುವವನು.

೧೦೭. **ನೃಪೇಣಾಪಿ ದ್ವಾರಕಾಯಾಮಶ್ವಮೇಧಯಾಗಸ್ಯ ಕರ್ತಾ**--ದ್ವಾರಕೆಯಲ್ಲಿ ಯಾದವ ಪ್ರಭುವಾದ ಉಗ್ರಸೇನನಿಂದ ಅಶ್ವಮೇಧಯಾಗವನ್ನು ಮಾಡಿಸಿದವನು. **ಪೌತ್ರೇಣ ಭೂಭಾರಹರ್ತಾ**-ತನ್ನ ಮೊಮ್ಮಗನಿಂದ ಭೂಮಿಯ ಭಾರವನ್ನು ಇಳಿಸಿದವನು. **ಪುನಃ ಶ್ರೀವ್ರಜೇ ರಾಸರಂಗಸ್ಯ ಕರ್ತಾ ರಾಧಾಯಾ ಹರಿಃ**-ಮರಳಿ ಗೋಕುಲದಲ್ಲಿ ರಾಧೆಯೊಡನೆ ರಾಸಲೀಲೆಯನ್ನು ತೋರಿದವನು. **ಗೋಪಿಕಾನಾಂ ಚ ಭರ್ತಾ**-ಗೋಪಾಂಗನೆಯರಿಗೆ ಪ್ರಿಯನೆನಿಸಿದವನು.

ಸದೈಕಸ್ತ್ವನೇಕಃ ಪ್ರಭಾಪೂರಿತಾಂಗ-
ಸ್ತಥಾ ಯೋಗಮಾಯಾಕರಃ ಕಾಲಜಿಚ್ಚ |
ಸುದೃಷ್ಟಿರ್ಮಹತ್ತತ್ತ್ವರೂಪಃ ಪ್ರಜಾತಃ
ಸ ಕೂಟಸ್ಥ ಆದ್ಯಾಂಕುರೋ ವೃಕ್ಷರೂಪಃ ‖ ೧೦೮ ‖

ವಿಕಾರಸ್ಥಿತಶ್ಚ ಹ್ಯಹಂಕಾರ ಏವ
ಸ ವೈಕಾರಕಸ್ತೈಜಸಸ್ತಾಮಸಶ್ಚ |
ಮನೋ ದಿಕ್ಸಮೀರಸ್ತು ಸೂರ್ಯಃ ಪ್ರಚೇತೋ-
ಶ್ವಿವಹ್ನಿಶ್ಚ ಶಕ್ರೋ ಹ್ಯುಪೇಂದ್ರಸ್ತು ಮಿತ್ರಃ ‖ ೧೦೯ ‖

---

೧೦೮. **ಸದೈಕಃ ಅನೇಕಃ**-ಸ್ವಸ್ವರೂಪದಲ್ಲಿ ಏಕೈಕಪುರುಷನಾಗಿದ್ದರೂ ನಾನಾರೂಪವಾಗಿ ತೋರುವವನು. **ಪ್ರಭಾಪೂರಿತಾಂಗಃ**-ಕಾಂತಿಯಿಂದ ಉಜ್ಜ್ವಲವಾದ ದೇಹವುಳ್ಳವನು. **ಯೋಗಮಾಯಾಕರಃ**-ಯೋಗಮಾಯೆಯನ್ನು ಸೃಷ್ಟಿಸಿದವನು. **ಕಾಲಜಿತ್**-ಕಾಲ (ಯಮ) ನನ್ನು ಜಯಿಸಿದವನು. **ಸುದೃಷ್ಟಿಃ**-ಸೊಗಸಾದ ಕಣ್ಣುಗಳುಳ್ಳವನು, ಅಥವಾ ದಿವ್ಯಜ್ಞಾನವುಳ್ಳವನು. **ಮಹತ್ತತ್ತ್ವರೂಪಃ**-ಪ್ರಕೃತಿಯ ವಿಕಾರವಾದ ಮಹತ್ತತ್ತ್ವವೆಂಬುದರ ಸ್ವರೂಪನು. **ಪ್ರಜಾತಃ**-ಸಂತತಿಕ್ರಮದಿಂದ ಉತ್ಪತ್ತಿಯಾದವನು. **ಕೂಟಸ್ಥಃ**-ತ್ರಿಕಾಲಾಬಾಧಿತನು. **ಆದ್ಯಾಂಕುರೋ ವೃಕ್ಷರೂಪಃ**-ಮುಂದೆ ದೊಡ್ಡದಾಗಿ ಬೆಳೆದು ತೋರುವ ಮರವು ಸೂಕ್ಷ್ಮರೂಪದಿಂದ ಹುದುಕಿಕೊಂಡಿರುವ ಮೊಳಕೆಯಂತಿರುವವನು.

೧೦೯. **ವಿಕಾರಸ್ಥಿತಃ ಅಹಂಕಾರಃ**-ವಿಕಾರಕ್ಕಾಸ್ಪದವಾದ ಅಹಂಕಾರವೆಂಬ ತತ್ತ್ವಸ್ವರೂಪನು. **ವೈಕಾರಕಃ, ತೈಜಸಃ, ತಾಮಸಃ**,--- ವೈಕಾರಕ, ತೈಜಸ, ತಾಮಸಗಳೆಂಬ ಅಹಂಕಾರ ಸ್ವರೂಪನು. **ದಿಕ್**-ಪೂರ್ವಾದಿ ದಿಗ್ರೂಪನು. **ಸಮೀರಃ, ಸೂರ್ಯಃ, ಪ್ರಚೇತಾಃ, ಅಶ್ವಿ, ವಹ್ನಿಃ, ಶಕ್ರಃ, ಉಪೇಂದ್ರಃ, ಮಿತ್ರಃ**-ವಾಯು, ಸೂರ್ಯ, ವರುಣ, ಅಶ್ವಿನೀಕುಮಾರ, ಅಗ್ನಿ, ಇಂದ್ರ, ವಾಮನ, ಮಿತ್ರರೆಂಬ ದೇವತೆಗಳ ಸ್ವರೂಪನಾದವನು.

ಶ್ರುತಿಸ್ತ್ವಕ್ಚ ದೃಗ್ಘ್ರಾಣಜಿಹ್ವಾಗಿರಶ್ಚ
ಭುಜಾ ಮೇಢ್ರಕಃ ಪಾಯುರಂಘ್ರಿಃ ಸ ಚೇಷ್ಟಃ ।
ಧರಾ ವ್ಯೋಮ ವಾರ್ಮಾರುತಶ್ಚೈವ ತೇಜೋಽ
ಥ ರೂಪಂ ರಸೋ ಗಂಧಶಬ್ದಸ್ಪೃಶಶ್ಚ ॥ ೧೧೦ ॥

ಸ ಚಿತ್ತಶ್ಚ ಬುದ್ಧಿರ್ವಿರಾಟ್ಕಾಲರೂಪ-
ಸ್ತಥಾ ವಾಸುದೇವೋ ಜಗತ್ಕೃದ್ಧೃತಾಂಗಃ ।
ತಥಾಂಡೇ ಶಯಾನಃ ಸ ಶೇಷಃ ಸಹಸ್ರ-
ಸ್ವರೂಪೋ ರಮಾನಾಥ ಆದ್ಯೋಽವತಾರಃ ॥ ೧೧೧ ॥

ಸದಾ ಸರ್ಗಕೃತ್ಪದ್ಮಜಃ ಕರ್ಮಕರ್ತಾ
ತಥಾ ನಾಭಿಪದ್ಮೋದ್ಭವೋ ದಿವ್ಯವರ್ಣಃ ।
ಕವಿರ್ಲೋಕಕೃತ್ಕಾಲಕೃತ್ಸೂರ್ಯರೂಪೋ-
ನಿಮೇಷೋಽಭವೋ ವತ್ಸರಾಂತೋ ಮಹೀಯಾನ್ ॥ ೧೧೨ ॥

---

೧೧೦. ಶ್ರುತಿಃ, ತ್ವಕ್, ದೃಕ್, ಘ್ರಾಣ, ಜಿಹ್ವಾ, ಗಿರಃ, **ಭುಜಾ, ಮೇಢ್ರಕಃ**, ಪಾಯುಃ, ಅಂಘ್ರಿಃ, ಚೇಷ್ಟಃ, ಧರಾ. **ವ್ಯೋಮ**, **ವಾಃ, ಮಾರುತಃ, ತೇಜಃ**, ರೂಪಂ, ರಸಃ, ಗಂಧಃ, ಶಬ್ದಃ, **ಸ್ಪೃಕ್-ಶ್ರೋತ್ರ, ತ್ವಕ್**, ನೇತ್ರ, ಘ್ರಾಣ, ರಸನಾ-ಎಂಬ ಪಂಚೇಂದ್ರಿಯಗಳೂ, ಭೂಮಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳ ವಿಶೇಷಗುಣಗಳೂ ಇವುಗಳ ರೂಪವಾಗಿರುವವನು.

೧೧೧. **ಚಿತ್ತಃ**-ಮನೋರೂಪನು. **ಬುದ್ಧಿಃ**-- ಬುದ್ಧಿತತ್ತ್ವವೆನಿಸಿದವನು. ವಿರಾಟ್-ವಿರಾಟ್ ಪುರುಷನು. ಕಾಲರೂಪಃ-ಕಾಲಸ್ವರೂಪನು. **ವಾಸುದೇವಃ**-ವಾಸುದೇವನೆಂಬ ಪರಸ್ವರೂಪವುಳ್ಳವನು. **ಜಗತ್ಕೃದ್ಧೃತಾಂಗಃ**-ವ್ಯಕ್ತರೂಪದಿಂದ ಪ್ರಪಂಚವನ್ನು ಸೃಷ್ಟಿಸಿದವನು. ಅಂಡೇ ಶಯಾನಃ-ಅಂಡಗಳಲ್ಲಿ ಮಲಗಿ (ವ್ಯಾಪಿಸಿ) ರುವವನು. ಶೇಷಃ ಸಹಸ್ರಸ್ವರೂಪಃ-ಸಹಸ್ರಾಕೃತಿಯಿಂದ ತೋರುವ ಆದಿಶೇಷಾಕಾರನು. ರಮಾನಾಥಃ **ಆದ್ಯೋಽವತಾರಃ**-ಲಕ್ಷ್ಮೀವಲ್ಲಭನೆನಿಸಿದ ಆದ್ಯಾವತಾರನು.

೧೧೨. **ಸದಾ ಸರ್ಗಕೃತ್ ಪದ್ಮಜಃ ಕರ್ಮಕರ್ತಾ**-ಕಮಲದಲ್ಲಿ ಹುಟ್ಟಿ ಸಕ್ರಿಯನಾಗಿ ಸೃಷ್ಟಿಕಾರ್ಯದಲ್ಲಿ ಸರ್ವದಾ ತೊಡಗಿರುವವನು **ನಾಭಿ-**

ತಿಥಿರ್ವಾರನಕ್ಷತ್ರಯೋಗಾಶ್ಚ ಲಗ್ನೋ-
ಽಥ ಮಾಸೋ ಘಟೀ ಚ ಕ್ಷಣಃ ಕಾಷ್ಠಿಕಾ ಚ ।
ಮುಹೂರ್ತಸ್ತು ಯಾಮೋ ಗ್ರಹಾ ಯಾಮಿನೀ ಚ
ದಿನಂ ಚರ್ಕ್ಷಮಾಲಾಗತೋ ದೇವಪುತ್ರಃ ॥ ೧೧೩ ॥

ಕೃತೋ ದ್ವಾಪರಸ್ತು ತ್ರಿತಸ್ತತ್ಕಲಿಸ್ತು
ಸಹಸ್ರಂ ಯುಗಸ್ತತ್ರಮನ್ವಂತರಶ್ಚ ।
ಲಯಃ ಪಾಲನಂ ಸತ್ಕೃತಿಸ್ತತ್ಪರಾರ್ಧಂ
ಸದೋತ್ಪತ್ತಿಕೃದ್ವ್ಯಕ್ಷರೋ ಬ್ರಹ್ಮರೂಪಃ ॥ ೧೧೪ ॥

ಪದ್ಮೋದ್ಭವೋ ದಿವ್ಯವರ್ಣಃ-ನಾಭಿಪದ್ಮದಲ್ಲಿ ಅವತರಿಸಿದಾಗ ದಿವ್ಯವಾದ ಶರೀರವರ್ಣವುಳ್ಳವನು. **ಕವಿರ್ಲೋಕಕೃತ್** ॥ ೯೦೦ ॥ **ಲೋಕಸೃಷ್ಟಿಯನ್ನು** ಮಾಡುತ್ತಾ ಕವಿಯೆನಿಸಕೊಂಡವನು. **ಕಾಲಕೃತ್ಸೂರ್ಯರೂಪಃ**-ಸೂರ್ಯಸ್ವರೂಪದಿಂದ ಕಾಲನಿಮಿತ್ತನಾದವನು. **ನಿಮೇಷಃ**-ಕಣ್ಣೆವೆಗಳನ್ನು ಮುಚ್ಚಿ ತೆರೆಯುವಷ್ಟು ಕಾಲದ ಸ್ವರೂಪನು. **ಭವಃ**-ಸಂಸಾರಸ್ವರೂಪನು. **ವತ್ಸರಾಂತಃ**-ವರ್ಷದ ಕೊನೆಯೆನಿಸಿದವನು. **ಮಹೀಯಾನ್**-ಮಾಹಾತ್ಮ್ಯಾತಿಶಯವುಳ್ಳವನು.

೧೧೩. **ತಿಥಿಃ, ವಾರ, ನಕ್ಷತ್ರ, ಯೋಗಃ, ಲಗ್ನಃ, ಮಾಸಃ, ಘಟೀ, ಕ್ಷಣಃ, ಕಾಷ್ಠಿಕಾ, ಮುಹೂರ್ತ ಯಾಮಃ, ಗ್ರಹಾಃ ಯಾಮಿನೀ, ದಿನಂ, ಋಕ್ಷಮಾಲಾಗತಃ**-ತಿಥಿ, ವಾರ, ನಕ್ಷತ್ರ, ಯೋಗ, ಲಗ್ನ, ತಿಂಗಳು, ಗಳಿಗೆ, ಕ್ಷಣ, ಕಾಷ್ಠಾ, ಮುಹೂರ್ತ, ಯಾಮ, (ಜಾವ) ನವಗ್ರಹಗಳು, ರಾತ್ರಿ, ಹಗಲು, ನಕ್ಷತ್ರ ಮಂಡಲಗಳ ರೂಪದಲ್ಲಿ ತೋರುವವನು. **ದೇವಪುತ್ರಃ**-ದೇವತೆಗಳ ಪುತ್ರನೆನಿಸಿದವನು.

೧೧೪. **ಕೃತಃ, ದ್ವಾಪರಃ, ತ್ರಿತಃ, ಕಲಿಃ**-ಕೃತ, ತ್ರೇತ, ದ್ವಾಪರ, ಕಲಿಯುಗಗಳ ಸ್ವರೂಪನು. **ಸಹಸ್ರಂಯುಗಃ, ಮನ್ವಂತರಃ, ಲಯಃ, ಪಾಲನಂ, ಸತ್ಕೃತಿಃ, ಪರಾರ್ಧಂ**-ಯುಗಸಹಸ್ರ, ಮನ್ವಂತರ, ಪ್ರಳಯ, ಪಾಲನ, ಸತ್ಕಾರ, ಪರಾರ್ಧ ಸಂಖ್ಯೆಗಳ ಸ್ವರೂಪನು. **ಸದೋತ್ಪತ್ತಿಕೃತ್**-ಸರ್ವದಾ ಸೃಷ್ಟಿಕಾರ್ಯವನ್ನೆಸಗುವವನು. **ದ್ವ್ಯಕ್ಷರಃ**-ಅಕ್ಷರದ್ವಯವುಳ್ಳವನು. **ಬ್ರಹ್ಮರೂಪಃ**-ಬ್ರಹ್ಮನ ರೂಪವಾಗಿರುವವನು.

ತಥಾ ರುದ್ರಸರ್ಗಸ್ತು ಕೌಮಾರಸರ್ಗೋ
ಮುನೇಃ ಸರ್ಗಕೃದ್ದೇವಕೃತ್ಪ್ರಾಕೃತಸ್ತು ।
ಶ್ರುತಿಸ್ತು ಸ್ಮೃತಿಃ ಸ್ತೋತ್ರಮೇವಂ ಪುರಾಣಂ
ಧನುರ್ವೇದ ಇಜ್ಯಾಥ ಗಾಂಧರ್ವವೇದಃ　　॥ ೧೧೫ ॥

ವಿಧಾತಾ ಚ ನಾರಾಯಣಃ ಸತ್ಕುಮಾರೋ
ವರಾಹಸ್ತಥಾ ನಾರದೋ ಧರ್ಮಪುತ್ರಃ ।
ಮುನಿಃ ಕರ್ದಮಸ್ಯಾತ್ಮಜೋ ದತ್ತ ಏವ
ಸ ಯಜ್ಞೋಽಮರೋ ನಾಭಿಜಃ ಶ್ರೀಪೃಥುಶ್ಚ　　॥ ೧೧೬ ॥

ಸುಮತ್ಸ್ಯಶ್ಚ ಕೂರ್ಮಶ್ಚ ಧನ್ವಂತರಿಶ್ಚ
ತಥಾ ಮೋಹಿನೀ ನಾರಸಿಂಹಃ ಪ್ರತಾಪೀ ।
ದ್ವಿಜೋ ವಾಮನೋ ರೇಣುಕಾಪುತ್ರರೂಪೋ
ಮುನಿರ್ವ್ಯಾಸದೇವಃ ಶ್ರುತಿಸ್ತೋತ್ರಕರ್ತಾ　　॥ ೧೧೭ ॥

---

೧೧೫. **ರುದ್ರಸರ್ಗಃ, ಕೌಮಾರಸರ್ಗಃ**-ರುದ್ರಸೃಷ್ಟಿ, ಕುಮಾರಸೃಷ್ಟಿಗಳ ಸ್ವರೂಪನು. **ಮುನೇಸ್ಸರ್ಗಕೃತ್**-ಮುನಿಸೃಷ್ಟಿಯನ್ನು ಮಾಡಿದವನು. **ದೇವಕೃತ್**-ದೇವತೆಗಳನ್ನು ಸೃಷ್ಟಿಸಿದವನು. **ಪ್ರಾಕೃತಃ**-ಪ್ರಕೃತಿಯಿಂದುತ್ಪತ್ತಿಯಾದ ಪ್ರಪಂಚದ ಸ್ವರೂಪನು. **ಶ್ರುತಿಃ, ಸ್ಮೃತಿಃ, ಸ್ತೋತ್ರಂ. ಪುರಾಣಂ, ಧನುರ್ವೇದಃ, ಇಜ್ಯಾ, ಗಾಂಧರ್ವವೇದಃ**-ವೇದ, ಸ್ಮೃತಿ, ಸ್ತೋತ್ರ, ಪುರಾಣಂ, ಧನುರ್ವೇದ, ಯಾಗಾದಿಕ್ರಿಯೆ, ಸಂಗೀತಗಳ ಸ್ವರೂಪವಾಗಿರುವವನು.

೧೧೬. **ವಿಧಾತಾ**-ಪ್ರಪಂಚ ಸೃಷ್ಟಿಕಾರಣನು. **ನಾರಾಯಣಃ**-ನೀರಿನಲ್ಲಿ (ಪ್ರಳಯ ಸಮಯದಲ್ಲಿ) ನೆಲೆಸಿರುವವನು. **ಸತ್ಕುಮಾರಃ**-ಕುಮಾರ ಸ್ವರೂಪನು. **ವರಾಹಃ**-ವರಾಹಾವತಾರಿಯು. **ನಾರದಃ, ಧರ್ಮಪುತ್ರಃ, ಮುನಿಃ, ಕರ್ದಮಸ್ಯಾತ್ಮಜಃ, ದತ್ತಃ, ಯಜ್ಞಃ, ಅಮರಃ, ನಾಭಿಜಃ, ಶ್ರೀಪೃಥುಃ**-ನಾರದ, ಧರ್ಮರಾಜ, ಕರ್ದಮಪುತ್ರನಾದ ಕಪಿಲ ಮಹರ್ಷಿ, ದತ್ತಾತ್ರೇಯ, ಯಜ್ಞಪುರುಷ, ಅಮರ, ನಾಭಿಪುತ್ರ, ಪೃಥುಚಕ್ರವರ್ತಿ ಇವರ ರೂಪವಾಂತವನು.

೧೧೭. **ಸುಮತ್ಸ್ಯಃ, ಕೂರ್ಮಃ, ಧನ್ವಂತರಿಃ, ಮೋಹಿನೀ, ಪ್ರತಾಪೀ ನಾರಸಿಂಹಃ, ದ್ವಿಜೋ ವಾಮನಃ, ರೇಣುಕಾಪುತ್ರರೂಪಃ, ಶ್ರುತಿ**

ಧನುರ್ವೇದಭಾಗ್ರಾಮಚಂದ್ರಾವತಾರಃ
ಸ ಸೀತಾಪತಿರ್ಭಾರಹೃದ್ರಾವಣಾರಿಃ ।
ನೃಪಃ ಸೇತುಕೃದ್ವಾನರೇಂದ್ರಪ್ರಹಾರೀ
ಮಹಾಯಜ್ಞಕೃದ್ರಾಘವೇಂದ್ರಃ ಪ್ರಚಂಡಃ ॥ ೧೧೮ ॥

ಬಲಃ ಕೃಷ್ಣಚಂದ್ರಸ್ತು ಕಲ್ಕಿಃ ಕಲೇಶ-
ಸ್ತು ಬುದ್ಧಪ್ರಸಿದ್ಧಸ್ತು ಹಂಸಸ್ತಥಾಶ್ವಃ ।
ಋಷೀಂದ್ರೋಽಜಿತೋ ದೇವವೈಕುಂಠನಾಥೋ
ಹ್ಯಮೂರ್ತಿಶ್ಚ ಮನ್ವಂತರಸ್ಯಾವತಾರಃ ॥ ೧೧೯ ॥

ಸ್ತೋತ್ರಕರ್ತಾ ಮುನಿರ್ವ್ಯಾಸದೇವಃ-ಮತ್ಸ್ಯ, ಕೂರ್ಮ, ಧನ್ವಂತರಿ, ಮೋಹಿನೀ ಪರಾಕ್ರಮಿಯಾದ ನಾರಸಿಂಹ, ಬ್ರಾಹ್ಮಣವಟುವಾದ ವಾಮನ, ರೇಣುಕೆಯ ಪುತ್ರನಾನ ಪರಶುರಾಮ, ವೇದಗಳನ್ನು ವಿಂಗಡಿಸಿ, ಸ್ತೋತ್ರಾದಿಗಳನ್ನು ರಚಿಸಿ ಪ್ರಖ್ಯಾತನಾದ ವ್ಯಾಸಮಹರ್ಷಿ ಇವರ ಅವತಾರವೆತ್ತಿದವನು.

೧೧೮. **ರಾಮಚಂದ್ರಾವತಾರಃ ಧನುರ್ವೇದಭಾಕ್**-ಶ್ರೀರಾಮಚಂದ್ರನ ಅವತಾರವೆತ್ತಿ ಧನುರ್ವೇದವನ್ನು ಕಲಿತವನು. **ಸೀತಾಪತಿಃ**-ಸೀತೆಯ ಪ್ರಿಯಪತಿಯು. **ಭಾರಹೃತ್**-ಭೂಭಾರವನ್ನಿಳುಹಿದವನು. **ರಾವಣಾರಿಃ**-ರಾವಣನ ವೈರಿಯು. **ನೃಪಸ್ಸೇತುಕೃತ್**-ಸೇತುವನ್ನು ಕಟ್ಟಿದ ಪ್ರಭುವು. **ವಾನರೇಂದ್ರಪ್ರಹಾರೀ**-ವಾನರೇಶ್ವರನಾದ ವಾಲಿಯನ್ನು ಕೊಂದವನು. **ಮಹಾಯಜ್ಞಕೃತ್**-ಅಶ್ವಮೇಧಾದಿ ಮಹಾಯಾಗಗಳನ್ನು ಮಾಡಿದವನು. **ರಾಘವೇಂದ್ರಃ**-ರಘುವಂಶದ ಚಕ್ರವರ್ತಿಯು. **ಪ್ರಚಂಡಃ**-ಅತಿ ದುಃಸಹವಾದ ಪರಾಕ್ರಮವುಳ್ಳವನು.

೧೧೯. **ಬಲಃ**--ಬಲರಾಮನು. **ಕೃಷ್ಣಚಂದ್ರಃ**-ಕೃಷ್ಣಾವತಾರಿಯು-**ಕಲ್ಕಿಃ**-ಕಲ್ಕ್ಯವತಾರನು. **ಕಲೇಶಃ**-ಕಲೆಗಳಿಗೆ ಅಧೀಶನೆನಿಸಿದವನು. **ಬುದ್ಧಪ್ರಸಿದ್ಧಃ**—ಬುದ್ಧನೆಂದು ಪ್ರಸಿದ್ಧನಾದವನು. **ಹಂಸಃ**--ಹಂಸಾವತಾರನು. **ಅಶ್ವಃ**-ಹಯಗ್ರೀವಾವತಾರವೆತ್ತಿದವನು. **ಋಷೀಂದ್ರಃ**-ಋಷಿಗಳಿಗೆಲ್ಲಾ ಪ್ರಭುವೆನಿಸಿದವನು. **ಅಜಿತಃ**-ಯಾರಿಗೂ ಸೋಲದವನು. **ದೇವವೈಕುಂಠನಾಥಃ**-

ಗಜೋದ್ಧಾರಣಃ ಶ್ರೀಮನುಬ್ರಹ್ಮಪುತ್ರೋ
ನೃಪೇಂದ್ರಸ್ತು ದುಷ್ಯಂತಜೋ ದಾನಶೀಲಃ ।
ಸ ದೃಷ್ಟಃ ಶ್ರುತೋ ಭೂತ ಏವಂ ಭವಿಷ್ಯ-
ದ್ಭವತ್ಸ್ಥಾವರೋ ಜಂಗಮೋಽಲ್ಪಂ ಮಹಚ್ಚ ॥ ೧೨೦ ॥

ಇತಿ ಶ್ರೀಭುಜಂಗಪ್ರಯಾತೇನ ಚೋಕ್ತಂ
ಹರೇ ರಾಧಿಕೇಶಸ್ಯ ನಾಮ್ನಾಂ ಸಹಸ್ರಂ ।
ಪಠೇದ್ಭಕ್ತಿಯುಕ್ತೋ ದ್ವಿಜಃ ಸರ್ವದಾ ಹಿ
ಕೃತಾರ್ಥೋ ಭವೇತ್ಕೃಷ್ಣಚಂದ್ರಸ್ವರೂಪಃ ॥ ೧೨೧ ॥

ವೈಕುಂಠಕ್ಕೆ ಒಡೆಯನಾದ ಸ್ವಾಮಿಯು. **ಅಮೂರ್ತಿಃ**-ಆಕಾರರಹಿತನು. (ದೇಹವರ್ಜಿತನು) **ಮನ್ವಂತರಾವತಾರಃ**-ವೈವಸ್ವತಾದಿ ಮನ್ವಂತರಗಳಲ್ಲಿ ಅವ ತಾರವೆತ್ತಿದವನು.

೧೨೦. **ಗಜೋದ್ಧಾರಣಃ**-ಗಜೇಂದ್ರನನ್ನು ಉದ್ಧರಿಸಿದವನು. **ಶ್ರೀ ಮನುಃ ಬ್ರಹ್ಮಪುತ್ರಃ**-ಬ್ರಹ್ಮಮಾನಸ ಪುತ್ರನಾದ ಸ್ವಾಯಂಭುವ ಮನುವಿನ ಸ್ವರೂಪನು. **ನೃಪೇಂದ್ರಃ ದುಷ್ಯಂತಜಃ**-ದುಷ್ಯಂತಪುತ್ರನಾದ ಭರತ ಚಕ್ರ ವರ್ತಿಯ ಸ್ವರೂಪನು. **ದಾನಶೀಲಃ**-ದಾನಮಾಡುವುದೇ ಸ್ವಭಾವವಾಗುಳ್ಳ ವನು. **ದೃಷ್ಟಃ**-ಕಣ್ಣಿಗೆ ಕಾಣುವ ಸಮಸ್ತ ವಸ್ತುಸ್ವರೂಪನು. **ಶ್ರುತಃ**-ಕಿವಿಗೆ ಕೇಳತಕ್ಕವುಗಳೆಲ್ಲದರ ರೂಪಮಾಗಿರುವವನು. **ಭೂತಃ, ಭವಿಷ್ಯತ್, ಭವತ್, ಸ್ಥಾವರಃ, ಜಂಗಮಃ, ಅಲ್ಪಂ, ಮಹತ್**--ಹಿಂದೆ ನಡೆದುದು, ಮುಂದೆ ನಡೆ ಯುವುದು, ಈಗಾಗುವುದು, ಚಲಿಸದೇ ನಿಂತಲ್ಲಿಯೇ ನಿಂತಿರುವುದು, ಇಲ್ಲಿಂದ ಲ್ಲಿಗೆ ಸಂಚರಿಸಬಹುದಾದುದು, ಸಣ್ಣದು, ದೊಡ್ಡದು, ಇವುಗಳೆಲ್ಲಬರ ರೂಪ ವಾಗತಕ್ಕವನು ॥ ೧೦೦೦ ॥

೧೨೧. ಈರೀತಿಯಾಗಿ ಭುಜಂಗಪ್ರಯಾತವೆಂಬ ವೃತ್ತದಲ್ಲಿ ವರ್ಣಿಸಿದ ರಾಧಾರಮಣನಾದ ಶ್ರೀಹರಿಯ ಸಹಸ್ರನಾಮಾವಳಿಯನ್ನು ಯಾವ ದ್ವಿಜನು ಸರ್ವದಾ ಭಕ್ತಿಯಿಂದ ಜಪಿಸುವನೋ ಆತನು ಶ್ರೀಕೃಷ್ಣನಲ್ಲೇ ಐಕ್ಯವಾಗಿ ಕೃತಾ ರ್ಥತೆಯನ್ನು ಪಡೆಯುವನು.

ಮಹಾಪಾಪರಾಶಿಂ ಭಿನತ್ತಿ ಶ್ರುತಂ ಯ-
ತ್ಸದಾ ವೈಷ್ಣವಾನಾಂ ಪ್ರಿಯಂ ಮಂಗಲಂ ಚ ।
ಇದಂ ಮಾಸರಾಕಾದಿನೇ ಚಾಶ್ವಿನಸ್ಯ
ಕಥಾ ಕೃಷ್ಣಜನ್ಮಾಷ್ಟಮೀಮಧ್ಯ ಏವ ॥ ೧೨೨ ॥

ತಥಾ ಚೈತ್ರಮಾಸಸ್ಯ ರಾಕಾದಿನೇ ವಾ-
ಥ ಭಾದ್ರೇ ಚ ರಾಧಾಷ್ಟಮೀಸದ್ದಿನೇ ವಾ ।
ಪಠೇದ್ಭಕ್ತಿಯುಕ್ತೋ ಇದಂ ಪೂಜಯಿತ್ವಾ
ಚತುರ್ಧಾ ಸುಮುಕ್ತಿಂ ತನೋತಿ ಪ್ರಶಸ್ತಃ ॥ ೧೨೩ ॥

ಪಠೇತ್ಕೃಷ್ಣಪುರ್ಯಾಂ ಚ ವೃಂದಾವನೇ ವಾ
ವ್ರಜೇ ಗೋಕುಲೇ ವಾಪಿ ವಂಶೀವಟೇ ವಾ ।
ವಟೇ ಚಾಕ್ಷಯೇ ವಾ ತಟೇ ಸೂರ್ಯಪುತ್ರ್ಯಾಃ
ಸ ಭಕ್ತೋಽಥ ಗೋಲೋಕಧಾಮ ಪ್ರಯಾತಿ ॥ ೧೨೪ ॥

---

೧೨೨. ಈ ಸ್ತೋತ್ರವನ್ನು ಒಂದುಬಾರಿ ಕೇಳಿಸಿದರೆ ಸಾಕು; ಅದರಿಂದ ಮಾಡಿದ ಪಾಪಗಳೆಲ್ಲವೂ ಪರಿಹಾರವನ್ನು ಹೊಂದುವುವು. ಈ ಸ್ತೋತ್ರವು ವಿಷ್ಣುಭಕ್ತರಾದವರಿಗೆ ಬಹುಪ್ರಿಯವಾದದು. ಮತ್ತು ಮಂಗಲಕರವಾದುದು. ಯಾವನು ಈ ಸ್ತೋತ್ರವನ್ನು ಆಶ್ವಯುಜಮಾಸದ ಹುಣ್ಣಿಮೆಯಲ್ಲಾಗಲಿ, ಕೃಷ್ಣಜನ್ಮಾಷ್ಟಮಿಯ ಮಧ್ಯದಲ್ಲಾಗಲಿ,

೧೨೩. ಚೈತ್ರಮಾಸದ ಶುದ್ಧ ಪೂರ್ಣಿಮಾದಿನದಲ್ಲಾಗಲಿ, ಭಾದ್ರಪದಮಾಸದಲ್ಲಿ ಬರುವ ರಾಧಾಷ್ಟಮಿಯಲ್ಲಾಗಲಿ ಪೂಜೆಮಾಡಿ ಭಕ್ತಿಯಿಂದ ನಾಲ್ಕುಬಾರಿ ಪಠಿಸುವನೋ ಅವನು ಮೋಕ್ಷಭಾಗಿಯಾಗುವನು.

೧೨೪. ಈ ಸ್ತೋತ್ರವನ್ನು ದ್ವಾರಕೆಯಲ್ಲಾಗಲಿ, ವೃಂದಾವನ, ವ್ರಜಮಂಡಲ, ಗೋಕುಲ, ವಂಶೀವಟಗಳಲ್ಲಾಗಲಿ, ಅಕ್ಷಯವಟದಲ್ಲಿಯಾಗಲಿ, ಯಮುನಾನದಿಯ ತೀರದಲ್ಲಾಗಲಿ ಭಕ್ತನಾದವನು ಪಠಿಸಿದುದೇ ಆದರೆ ಅವನು ತನ್ನ ಜನ್ಮಾಂತರದಲ್ಲಿ ದಿವ್ಯವಾದ ಗೋಲೋಕವನ್ನು ಸೇರುವನು.

ಭಜೇದ್ಭಕ್ತಿಭಾವಾಚ್ಚ ಸರ್ವತ್ರ ಭೂಮೌ
ಹರಿಂ ಕುತ್ರ ಚಾನೇನ ಗೇಹೇ ವನೇ ವಾ ।
ಜಹಾತಿ ಕ್ಷಣಂ ನೋ ಹರಿಸ್ತತ್ರ ಭಕ್ತಂ
ಸುವಶ್ಯೋ ಭವೇನ್ಮಾಧವಃ ಕೃಷ್ಣಚಂದ್ರಃ ॥ ೧೨೫ ॥

ಸದಾ ಗೋಪನೀಯಂ ಸದಾ ಗೋಪನೀಯಂ
ಸದಾ ಗೋಪನೀಯಂ ಪ್ರಯತ್ನೇನ ಭಕ್ತೈಃ ।
ಪ್ರಕಾಶ್ಯಂ ನ ನಾಮ್ನಾಂ ಸಹಸ್ರಂ ಹರೇಶ್ಚ
ನ ದಾತವ್ಯಮೇವಂ ಕದಾಲಂಪಟಾಯ ॥ ೧೨೬ ॥

ಇದಂ ಪುಸ್ತಕಂ ಯತ್ರ ಗೇಹೇऽಪಿ ತಿಷ್ಠೇ-
ದ್ವಸೇದ್ರಾಧಿಕಾನಾಥ ಆದ್ಯಸ್ತು ತತ್ರ ।

---

೧೨೫. ಯಾವ ಪುರುಷನು ಈ ಸಹಸ್ರನಾಮಸ್ತೋತ್ರವನ್ನು ಜಪಿಸುತ್ತ ಮನೆಯಲ್ಲಿಯಾಗಲಿ, ಕಾಡಿನಲ್ಲಿಯಾಗಲಿ, ಭೂಮಿಯಮೇಲೆ ಇರುವ ಯಾವ ಪ್ರದೇಶದಲ್ಲಿಯಾಗಲಿ ಭಕ್ತಿಭಾವದಿಂದ ಶ್ರೀಹರಿಯನ್ನು ಆರಾಧಿಸುವನೋ ಆ ಭಕ್ತಾಗ್ರಣಿಯನ್ನು ಶ್ರೀಕೃಷ್ಣಚಂದ್ರನು ಒಂದು ಕ್ಷಣವೂ ಅಗಲಿರಲಾರನು, ಅಂತಹ ಭಕ್ತನಿಗೆ ಆ ಮಾಧವನು ವಶನಾಗಿಬಿಡುವನು.

೧೨೬. ಈ ಸ್ತೋತ್ರವನ್ನು ಭಕ್ತರು ಎಂದೆಂದಿಗೂ ರಹಸ್ಯವಾಗಿಟ್ಟಿರಬೇಕು; ಗುಟ್ಟಾಗಿಡಬೇಕು; ಗುಪ್ತವಾಗಿ ಸಂರಕ್ಷಿಸಬೇಕು; ಶ್ರೀಹರಿಯ ಈ ಸಹಸ್ರನಾಮವನ್ನು ಎಂದೆಂದಿಗೂ ಹೊರಗೆಡಹಬಾರದು. ಮತ್ತು ವಿಷಯಸುಖಗಳಲ್ಲೇ ಸರ್ವದಾ ತೊಳಲುತ್ತಿರುವವನಿಗೆ ಉಪದೇಶಿಸಲೇ ಬಾರದು.

೧೨೭. ಈ ಸಹಸ್ರನಾಮ ಸ್ತೋತ್ರವಿರತಕ್ಕ ಪುಸ್ತಕವು ಯಾವ ಮನೆಯಲ್ಲಿದ್ದರೂ ಸರಿಯೇ ಅಲ್ಲಿ ಶ್ರೀರಾಧಾಕಾಂತನು ವಾಸಮಾಡುವನು. ಅಲ್ಲಿ

ಓಂ ಸುದಾಮ್ನೋ ರಾಧಿಕಾಶಾಪಹೇತವೇ ನಮಃ
ಓಂ ಘೃಣಿನೇ ನಮಃ
ಓಂ ಮಾನಿನೀಮಾನದಾಯ ನಮಃ
ಓಂ ದಿವ್ಯಲೋಕಾಯ ನಮಃ
ಓಂ ಲಸದ್ಗೋಪವೇಷಾಯ ನಮಃ
ಓಂ ಅಜಾಯ ನಮಃ
ಓಂ ರಾಧಿಕಾತ್ಮನೇ ನಮಃ
ಓಂ ಪುಂತಲಸ್ರಜೇ ನಮಃ
ಓಂ ರಥಸ್ಥಾಯ ನಮಃ
ಓಂ ಕದಾರಾಧಯಾದಿವ್ಯರತ್ನಾಯ ನಮಃ ॥ ೩೦ ॥
ಓಂ ಸುಧಾಸೌಧಭೂಚಾರಣಾಯ ನಮಃ
ಓಂ ದಿವ್ಯವಾಸಸೇ ನಮಃ
ಓಂ ಕದಾವೃಂದಕಾರಣ್ಯಚಾರಿಣೇ ನಮಃ
ಓಂ ಸ್ವಲೋಕೇ ಮಹಾರತ್ನಸಿಂಹಾಸನಸ್ಥಾಯ ನಮಃ
ಓಂ ಪ್ರಶಾಂತಾಯ ನಮಃ
ಓಂ ಮಹಾಹಂಸಭೈಶ್ಚಾಮರೈರ್ವೀಜ್ಯಮಾನಾಯ ನಮಃ
ಓಂ ಚಲಚ್ಛತ್ರಮುಕ್ತಾವಲೀಶೋಭಮಾನಾಯ ನಮಃ
ಓಂ ಸುಖಿನೇ ನಮಃ
ಓಂ ಕೋಟಿಕಂದರ್ಪಲೀಲಾಭಿರಾಮಾಯ ನಮಃ
ಓಂ ಕ್ವಣನ್ನೂಪುರಾಲಂಕೃತಾಂಘ್ರಯೇ ನಮಃ ॥ ೪೦ ॥
ಓಂ ಶುಭಾಂಘ್ರಯೇ ನಮಃ
ಓಂ ಸುಜಾನವೇ ನಮಃ
ಓಂ ರಂಭಾಶುಭೋರವೇ ನಮಃ
ಓಂ ಕೃಶಾಂಗಾಯನಮಃ
ಓಂ ಪ್ರತಾಪಿನೇ ನಮಃ
ಓಂ ಇಭಶುಂಡಾಸುದೋರ್ದಂಡಖಂಡಾಯ ನಮಃ
ಓಂ ಜಪಾಪುಷ್ಪಹಸ್ತಾಯ ನಮಃ

ಓಂ ಶಾತೋದರಶ್ರಿಯೇ ನಮಃ
ಓಂ ಮಹಾಪದ್ಮವಕ್ಷಸ್ಸ್ಥಲಾಯ ನಮಃ
ಓಂ ಚಂದ್ರಹಾಸಾಯ ನಮಃ || ೫೦ ||
ಓಂ ಲಸತ್ಕುಂದದಂತಾಯ ನಮಃ
ಓಂ ಬಿಂಬಾಧರಶ್ರಿಯೇ ನಮಃ
ಓಂ ಶರತ್ಪದ್ಮನೇತ್ರಾಯ ನಮಃ
ಓಂ ಕಿರೀಟೋಜ್ಜ್ವಲಾಭಾಯ ನಮಃ
ಓಂ ನಿಕುಂಜೇ ಸಖೀಕೋಟಿಭಿರ್ನರ್ತಮಾನಾಯ ನಮಃ
ಓಂ ಪ್ರಿಯಾರಾಧಾಯಾ ರಾಸಸಕ್ತಾಯ ನಮಃ
ಓಂ ನವಾಂಗಾಯ ನಮಃ
ಓಂ ಧರಾಬ್ರಹ್ಮರುದ್ರಾದಿಭಿಃ ಪ್ರಾರ್ಥಿತಾಯ ನಮಃ
ಓಂ ಸದ್ಧರಾಭಾದೂರೀಕೃತೇಽರ್ಥಂ ಪ್ರಜಾತಾಯ ನಮಃ
ಓಂ ಯದವೇ ನಮಃ || ೬೦ ||
ಓಂ ದೇವಕೀಸೌಖ್ಯದಾಯ ನಮಃ
ಓಂ ಬಂಧನಚ್ಛಿದೇ ನಮಃ
ಓಂ ಸಶೇಷಾಯ ನಮಃ
ಓಂ ವಿಭವೇ ನಮಃ
ಓಂ ಯೋಗಮಾಯಿನೇ ನಮಃ
ಓಂ ವಿಷ್ಣವೇ ನಮಃ
ಓಂ ವ್ರಜೇ ನಂದಪುತ್ರಾಯ ನಮಃ
ಓಂ ಯಶೋದಾಸುತಾಖ್ಯಾಯ ನಮಃ
ಓಂ ಮಹಾಸೌಖ್ಯದಾಯ ನಮಃ
ಓಂ ಬಾಲರೂಪಾಯ ನಮಃ || ೭೦ ||
ಓಂ ಶುಭಾಂಗಾಯ ನಮಃ
ಓಂ ಪೂತನಾಮೋಕ್ಷದಾಯ ನಮಃ
ಓಂ ಶ್ಯಾಮರೂಪಾಯ ನಮಃ
ಓಂ ದಯಾಲವೇ ನಮಃ

ಓಂ ಅನೋಭಂಜನಾಯ ನಮಃ
ಓಂ ಪಲ್ಲವಾಂಘ್ರಯೇ ನಮಃ
ಓಂ ತೃಣಾವರ್ತಸಂಹಾರಕಾರಿಣೇ ನಮಃ
ಓಂ ಗೋಪಾಯ ನಮಃ
ಓಂ ಯಶೋದಾಯಶೋವಿಶ್ವರೂಪಪ್ರದರ್ಶಿನೇ ನಮಃ
ಓಂ ಗರ್ಗದಿಷ್ಟಾಯ ನಮಃ ॥ ೮೦ ॥
ಓಂ ಭಾಗ್ಯೋದಯಶ್ರಿಯೇ ನಮಃ
ಓಂ ಲಸದ್ಬಾಲಕೇಲಯೇ ನಮಃ
ಓಂ ಸರಾಮಾಯ ನಮಃ
ಓಂ ಸುವಾಚಾಯ ನಮಃ
ಓಂ ಕ್ವಣನ್ನೂಪುರೈಃಶಬ್ದಯುಜೇ ನಮಃ
ಓಂ ಜಾನುಹಸ್ತೈರ್ವ್ರಜೇಶಾಂಗಣೇ ರಿಂಗಮಾಣಾಯ ನಮಃ
ಓಂ ದಧಿಸ್ಪೃಶೇ ನಮಃ
ಓಂ ಹೈಯಂಗವೀದುಗ್ಧಭೋಕ್ತ್ರೇ ನಮಃ
ಓಂ ದಧಿಸ್ತೇಯಕೃತೇ ನಮಃ
ಓಂ ದುಗ್ಧಭಾಂಡಪ್ರಭೇತ್ರೇ ನಮಃ ॥ ೯೦ ॥
ಓಂ ಮೃದಂ ಭುಕ್ತವತೇ ನಮಃ
ಓಂ ಗೋಪಜಾಯ ನಮಃ
ಓಂ ವಿಶ್ವರೂಪಾಯ ನಮಃ
ಓಂ ಪ್ರಚಂಡಾಂಶುಚಂಡಪ್ರಭಾಮಂಡಿತಾಂಗಾಯ ನಮಃ
ಓಂ ಯಶೋದಾಕರೈರ್ಬಂಧನಂ ಪ್ರಾಪ್ತಾಯ ನಮಃ
ಓಂ ಆದ್ಯಾಯ ನಮಃ
ಓಂ ಆದ್ಯಾಯ ನಮಃ
ಓಂ ಮಣಿಗ್ರೀವಮುಕ್ತಿಪ್ರದಾಯ ನಮಃ
ಓಂ ದಾಮಬದ್ಧಾಯ ನಮಃ
ಓಂ ಕದಾ ವ್ರಜೇ ಗೋಪಿಕಾಭಿರ್ನೃತ್ಯಮಾನಾಯ ನಮಃ
ಓಂ ಕದಾನಂದಸನ್ನಂದಕೈರ್ಲಾಲ್ಯಮಾನಾಯ ನಮಃ ॥ ೧೦೦ ॥

ಓಂ ಕದಾ ಗೋಪನಂದಾಂಕಗೋಪಾಲರೂಪಿಣೇ ನಮಃ
ಓಂ ಕಲಿಂದಾಂಗಜಾಕೂಲಗೋವರ್ತಮಾನಾಯ ನಮಃ
ಓಂ ಘನೈರ್ಮಾರುತೈಶ್ಛಿನ್ನಭಾಂಡೀರದೇಶೇ ನಂದಹಸ್ತಾದ್ರಾ-
ಧಯಾ ಗೃಹೀತವರಾಯ ನಮಃ
ಓಂ ಗೋಲೋಕಲೋಕಾಗತೇ ಮಹಾರತ್ನಸಂಘೈಃ ಕದಂಬಾವೃತೇ
ನಿಕುಂಜೇ ರಾಧಿಕಾಸದ್ವಿವಾಹೇ ಪ್ರತಿಷ್ಠಾಗತಬ್ರಹ್ಮಣಾ
ಸಾಮಮಂತ್ರೈಃ ಪೂಜಿತಾಯ ನಮಃ
ಓಂ ರಸಿನೇ ನಮಃ
ಓಂ ರಾಸಯುಜೇ ನಮಃ
ಓಂ ಮಾಲತೀನಾಂ ವನೇ ಪ್ರಿಯಾರಾಧಯಾರಾಧಿತಾಯ ನಮಃ
ಓಂ ರಮೇಶಾಯ ನಮಃ
ಓಂ ಧರಾನಾಥಾಯ ನಮಃ
ಓಂ ಆನಂದದಾಯ ನಮಃ ॥ ೧೧೦ ॥
ಓಂ ಶ್ರೀನಿಕೇತಾಯ ನಮಃ
ಓಂ ವನೇಶಾಯ ನಮಃ
ಓಂ ಧನಿನೇ ನಮಃ
ಓಂ ಸುಂದರಾಯ ನಮಃ
ಓಂ ಗೋಪಿಕೇಶಾಯ ನಮಃ
ಓಂ ಕದಾ ರಾಧಯಾ ನಂದಗೇಹೇ ಪ್ರಾಪಿತಾಯ ನಮಃ
ಓಂ ಯಶೋದಾಕರೈರ್ಲಾಲಿತಾಯ ನಮಃ
ಓಂ ಮಂದಹಾಸಾಯ ನಮಃ
ಓಂ ಕ್ವಾಪಿ ಭಯಿನೇ ನಮಃ
ಓಂ ವೃಂದಾರಕಾರಣ್ಯವಾಸಿನೇ ನಮಃ ॥ ೧೨೦ ॥
ಓಂ ಮಹಾಮಂದಿರೇ ವಾಸಕೃತೇ ನಮಃ
ಓಂ ದೇವಪೂಜ್ಯಾಯ ನಮಃ
ಓಂ ವನೇ ವತ್ಸಚಾರಿಣೇ ನಮಃ
ಓಂ ಮಹಾವತ್ಸಹಾರಿಣೇ ನಮಃ

ಓಂ ಬಕಾರಯೇ ನಮಃ
ಓಂ ಸುರೈಃ ಪೂಜಿತಾಯ ನಮಃ
ಓಂ ಅಘಾರಿನಾಮ್ನೇ ನಮಃ
ಓಂ ಪನೇ ವತ್ಸಕೃತೇ ನಮಃ
ಓಂ ಗೋಪಕೃತೇ ನಮಃ
ಓಂ ಗೋಪವೇಷಾಯ ನಮಃ ॥ ೧೩೦ ॥

ಓಂ ಕದಾ ಬ್ರಹ್ಮಣಾ ಸಂಸ್ತುತಾಯ ನಮಃ
ಓಂ ಪದ್ಮನಾಭಾಯ ನಮಃ
ಓಂ ವಿಹಾರಿಣೇ ನಮಃ
ಓಂ ಕಾಲಭುಜೇ ನಮಃ
ಓಂ ಧೇನುಕಾರಯೇ ನಮಃ
ಓಂ ಸದಾ ರಕ್ಷಕಾಯ ನಮಃ
ಓಂ ಗೋವಿಷಾರ್ತಪ್ರಣಾಶಿನೇ ನಮಃ
ಓಂ ಕಲಿಂದಾಂಗಜಾಕೂಲಗಾಯ ನಮಃ
ಓಂ ಕಾಲಿಯಸ್ಯ ದಮಿನೇ ನಮಃ
ಓಂ ಕಾಲಿಯಫಣೇಷು ನೃತ್ಯಕಾರಿಣೇ ನಮಃ ॥ ೧೪೦ ॥

ಓಂ ಅಪ್ರಸಿದ್ಧಾಯ ನಮಃ
ಓಂ ಸಲೀಲಾಯ ನಮಃ
ಓಂ ಶಮಿನೇ ನಮಃ
ಓಂ ಜ್ಞಾನದಾಯ ನಮಃ
ಓಂ ಕಾಮಪೂರಾಯ ನಮಃ
ಓಂ ಗೋಪಯುಜೇ ನಮಃ
ಓಂ ಗೊಪಾಯ ನಮಃ
ಓಂ ಆನಂದಕಾರಿಣೇ ನಮಃ
ಓಂ ಸ್ಥಿರಿಣೇ ನಮಃ
ಓಂ ಅಗ್ನಿಭುಜೇ ನಮಃ ॥ ೧೫೦ ॥

ಓಂ ಪಾಲಕಾಯ ನಮಃ
ಓಂ ಬಾಲಲೀಲಾಯ ನಮಃ
ಓಂ ಸುರಾಗಾಯ ನಮಃ
ಓಂ ವಂಶೀಧರಾಯ ನಮಃ
ಓಂ ಪುಷ್ಪಶೀಲಾಯ ನಮಃ
ಓಂ ಪ್ರಲಂಬಪ್ರಭಾನಾಶಕಾಯ ನಮಃ
ಓಂ ಗೌರವರ್ಣಾಯ ನಮಃ
ಓಂ ಬಲಾಯ ನಮಃ
ಓಂ ರೋಹಿಣೇಜಾಯ ನಮಃ
ಓಂ ರಾಮಾಯ ನಮಃ ॥ ೧೬೦ ॥

ಓಂ ಶೇಷಾಯ ನಮಃ
ಓಂ ಬಲಿನೇ ನಮಃ
ಓಂ ಪದ್ಮನೇತ್ರಾಯ ನಮಃ
ಓಂ ಕೃಷ್ಣಾಗ್ರಜಾಯ ನಮಃ
ಓಂ ಧರೇಶಾಯ ನಮಃ
ಓಂ ಫಣೇಶಾಯ ನಮಃ
ಓಂ ನೀಲಾಂಬರಾಭಾಯ ನಮಃ
ಓಂ ಮಹಾಸೌಖ್ಯದಾಯ ನಮಃ
ಓಂ ಅಗ್ನಿಹರಾಯ ನಮಃ
ಓಂ ವ್ರಜೇಶಾಯ ನಮಃ ॥ ೧೭೦ ॥

ಓಂ ಶರದ್ಗ್ರೀಷ್ಮವರ್ಷಾಕರಾಯ ನಮಃ
ಓಂ ಕೃಷ್ಣವರ್ಣಾಯ ನಮಃ
ಓಂ ವ್ರಜೇ ಗೋಪಿಕಾಪೂಜಿತಾಯ ನಮಃ
ಓಂ ಚೀರಹರ್ತ್ರೇಯ ನಮಃ
ಓಂ ಕದಂಬೇ ಸ್ಥಿತಾಯ ನಮಃ
ಓಂ ಚೀರಧಾಯ ನಮಃ

ಓಂ ಸುಂದರೀಶಾಯ ದಮಃ
ಓಂ ಕ್ಷುದಾನಾಶಕೃತೇ ನಮಃ
ಓಂ ಯಜ್ಞಪತ್ನೀಮನಸ್ಸ್ಪೃಶೇ ನಮಃ
ಓಂ ಕೃಪಾಕಾರಕಾಯ ನಮಃ ॥ ೧೮೦ ॥
ಓಂ ಕೇಲಿಕರ್ತ್ರೇ ನಮಃ
ಓಂ ಅವನೀಶಾಯ ನಮಃ
ಓಂ ವ್ರಜೇ ಶಕ್ರಯಾಗಪ್ರಣಾಶಿನೇ ನಮಃ
ಓಂ ಮಿತಾಶಿನೇ ನಮಃ
ಓಂ ಶುನಾಶೀರಮೋಹಪ್ರದಾಯ ನಮಃ
ಓಂ ಬಾಲರೂಪಿಣೇ ನಮಃ
ಓಂ ಗಿರೇಃ ಪೂಜಕಾಯ ನಮಃ
ಓಂ ನಂದಪುತ್ರಾಯ ನಮಃ
ಓಂ ಅಗಧಾರಿಣೇ ನಮಃ
ಓಂ ಕೃಪಾಕೃತೇ ನಮಃ ॥ ೧೯೦ ॥
ಓಂ ಗೋವರ್ಧನೋದ್ಧಾರಿನಾಮ್ನೇ ನಮಃ
ಓಂ ವಾತವರ್ಷಾಹರಾಯ ನಮಃ
ಓಂ ವ್ರಜಾಧೀಶಗೋಪಾಂಗನಾಶಂಕಿತಸ್ಸಂರಕ್ಷಕಾಯ ನಮಃ
ಓಂ ಅಗೇಂದ್ರೋಪರಿ ಶಕ್ರಪೂಜ್ಯಾಯ ನಮಃ
ಓಂ ಪ್ರಾಕ್‌ಸ್ತುತಾಯ ನಮಃ
ಓಂ ವೃಷಾಶಿಕ್ಷಕಾಯ ನಮಃ
ಓಂ ದೇವಗೋವಿಂದನಾಮ್ನೇ ನಮಃ
ಓಂ ವ್ರಜಾಧೀಶರಕ್ಷಾಕರಾಯ ನಮಃ
ಓಂ ಪಾಶಿಪೂಜ್ಯಾಯನಮಃ
ಓಂ ಅನುಜೈರ್ಗೋಪಜೈರ್ದಿವ್ಯವೈಕುಂಠದರ್ಶಿನೇ ನಮಃ ॥೨೦೦॥
ಓಂ ಜಲಚ್ಚಾರುವಂಶೀಕ್ವಣಾಯ ನಮಃ
ಓಂ ಕಾಮಿನೀಶಾಯ ನಮಃ

ಓಂ ವ್ರಜೇ ಕಾಮಿನೀಮೋಹನಾಯ ನಮಃ
ಓಂ ಕಾಮರೂಪಾಯ ನಮಃ
ಓಂ ರಸಾಕ್ತಾಯ ನಮಃ
ಓಂ ರಸಿನೇ ನಮಃ
ಓಂ ರಾಸಕೃತೇ ನಮಃ
ಓಂ ರಾಧಿಕೇಶಾಯ ನಮಃ
ಓಂ ಮಹಾಮೋಹದಾಯ ನಮಃ
ಓಂ ಮಾನಿನೀಮಾನಹಾರಿಣೇ ನಮಃ ॥ ೨೧೦ ॥

ಓಂ ವಿಹಾರಿಣೇ ನಮಃ
ಓಂ ವರಾಯ ನಮಃ
ಓಂ ಮಾನಹೃತೇ ನಮಃ
ಓಂ ರಾಧಿಕಾಂಗಾಯ ನಮಃ
ಓಂ ಧರಾದ್ವೀಪಗಾಯ ನಮಃ
ಓಂ ಖಂಡಚಾರಿಣೇ ನಮಃ
ಓಂ ವನಸ್ಥಾಯ ನಮಃ
ಓಂ ಅಷ್ಟಾವಕ್ರರ್ಷಿದ್ರಷ್ಟ್ರೇ ನಮಃ
ಓಂ ಸರಾಧಾಯ ನಮಃ
ಓಂ ಮಹಾಮೋಕ್ಷದಾಯ ನಮಃ ॥ ೨೨೦ ॥

ಓಂ ಪದ್ಮಹಾರಿಣೇ ನಮಃ
ಓಂ ಪ್ರಿಯೊರ್ಥಾಯ ನಮಃ
ಓಂ ವಟಸ್ಥಾಯ ನಮಃ
ಓಂ ಸುರಾಯ ನಮಃ
ಓಂ ಚಂದನಾಕ್ತಾಯ ನಮಃ
ಓಂ ಪ್ರಸಕ್ತಾಯ ನಮಃ
ಓಂ ರಾಧಯಾ ವ್ರಜಮಾಗತಾಯ ನಮಃ
ಓಂ ಮೋಹಿನೀಷು ಮಹಾಮೋಹಕೃತೇ ನಮಃ

ಓಂ ಗೋಪಿಕಾಗೀತಕೀರ್ತಯೇ ನಮಃ
ಓಂ ರಸಸ್ಥಾಯ ನಮಃ ೨೩೦

ಓಂ ಪಟವೇ ನಮಃ
ಓಂ ದುಃಖಿತಾಕಾಮಿನೀಶಾಯ ನಮಃ
ಓಂ ವನೇ ಗೋಪಿಕಾತ್ಯಾಗಕೃತೇ ನಮಃ
ಓಂ ಪಾದಚಿಹ್ನಪ್ರದರ್ಶಿನೇ ನಮಃ
ಓಂ ಕಲಾಕಾರಕಾಯ ನಮಃ
ಓಂ ಕಾಮಮೋಹಿನೇ ನಮಃ
ಓಂ ವಶಿನೇ ನಮಃ
ಓಂ ಗೋಪಿಕಾಮಧ್ಯಗಾಯ ನಮಃ
ಓಂ ಪೇಶವರ್ಚಸೇ ನಮಃ
ಓಂ ಪ್ರಿಯಾಪ್ರೀತಿಕೃತೇ ನಮಃ ೨೪೦

ಓಂ ರಾಸರಕ್ತಾಯ ನಮಃ
ಓಂ ಕಲೇಶಾಯ ನಮಃ
ಓಂ ರಸಾರಕ್ತಚಿತ್ತಾಯ ನಮಃ
ಓಂ ಅನಂತಸ್ವರೂಪಾಯ ನಮಃ
ಓಂ ಸ್ರಜಾ ಸಂವೃತಾಯ ನಮಃ
ಓಂ ವಲ್ಲವೀಮಧ್ಯಸಂಸ್ಥಾಯ ನಮಃ
ಓಂ ಸುಬಾಹವೇ ನಮಃ
ಓಂ ಸುಪಾನಾಯ ನಮಃ
ಓಂ ಸುವೇಷಾಯ ನಮಃ
ಓಂ ಸುಕೇಶಾಯ ನಮಃ ೨೫೦

ಓಂ ವ್ರಜೇಶಾಯ ನಮಃ
ಓಂ ಸಖ್ಯೇ ನಮಃ
ಓಂ ವಲ್ಲಭೇಶಾಯ ನಮಃ
ಓಂ ಸುದೇಶಾಯ ನಮಃ

ಓಂ ಕ್ವಣತ್ಕಿಂಕಿಣೀಜಾಲಭೃನ್ನೂಪುರಾಢ್ಯಾಯ ನಮಃ
ಓಂ ಲಸತ್ಕಂಕಣಾಯ ನಮಃ
ಓಂ ಅಂಗದಿನೇ ನಮಃ
ಓಂ ಹಾರಭಾರಾಯ ನಮಃ
ಓಂ ಕಿರೀಟಿನೇ ನಮಃ
ಓಂ ಚಲತ್ಕುಂಡಲಾಯ ನಮಃ ೨೬೦

ಓಂ ಅಂಗುಲೀಯಸ್ಫುರತ್ಕೌಸ್ತುಭಾಯ ನಮಃ
ಓಂ ಮಾಲತೀಮಂಡಿತಾಂಗಾಯ ನಮಃ
ಓಂ ಮಹಾನೃತ್ಯಕೃತೇ ನಮಃ
ಓಂ ರಾಸರಂಗಾಯ ನಮಃ
ಓಂ ಕಲಾಢ್ಯಾಯ ನಮಃ
ಓಂ ಚಲದ್ಧಾರಭಾಯ ನಮಃ
ಓಂ ಭಾಮಿನೀನೃತ್ಯಯುಕ್ತಾಯ ನಮಃ
ಓಂ ಕಲಿಂದಾಂಗಜಾಕೇಲಿಕೃತೇ ನಮಃ
ಓಂ ಕುಂಕುಮಶ್ರಿಯೇ ನಮಃ
ಓಂ ನಾಯಿಕಾನಾಯಕೈಸ್ಸುರೈರ್ಗೀಯಮಾನಾಯ ನಮಃ ೨೭೦

ಓಂ ಸುಖಾಢ್ಯಾಯ ನಮಃ
ಓಂ ರಾಧಾಪತಯೇ ನಮಃ
ಓಂ ಪೂರ್ಣಬೋಧಾಯ ನಮಃ
ಓಂ ಕಟಾಕ್ಷಸ್ಮಿತಿನೇ ನಮಃ
ಓಂ ವಲ್ಗಿತಭ್ರೂವಿಲಾಸಾಯ ನಮಃ
ಓಂ ಸುರಮ್ಯಾಯ ನಮಃ
ಓಂ ಅಲಭಿಃಕುಂತಲಾಲೋಲಕೇಶಾಯ ನಮಃ
ಓಂ ಸ್ಫುರದ್ಬರ್ಹಕುಂದಸ್ರಜಾ ಚಾರುವೇಷಾಯ ನಮಃ
ಓಂ ಮಹಾಸರ್ಪತೋ ನಂದರಕ್ಷಾಪರಾಂಘ್ರಯೇ ನಮಃ
ಓಂ ಸದಾ ಮೋಕ್ಷದಾಯ ನಮಃ ೨೮೦

ಓಂ ಶಂಖಚೂಡಾಪ್ರಣಾಶಿನೇ ನಮಃ
ಓಂ ಪ್ರಜಾರಕ್ಷಕಾಯ ನಮಃ
ಓಂ ಗೋಪಿಕಾಗೀಯಮಾನಾಯ ನಮಃ
ಓಂ ಕಕುದ್ಮಿಪ್ರಣಾಶಪ್ರಯಾಸಾಯ ನಮಃ
ಓಂ ಸುರೇಜ್ಯಾಯ ನಮಃ
ಓಂ ಕಲಯೇ ನಮಃ
ಓಂ ಕ್ರೋಧಕೃತೇ ನಮಃ
ಓಂ ಕಂಸಮಂತ್ರೋಪದೇಷ್ಟ್ರೇ ನಮಃ
ಓಂ ಅಕ್ರೂರಮಂತ್ರೋಪದೇಶಿನೇ ನಮಃ
ಓಂ ಸುರಾರ್ಥಾಯ ನಮಃ ೨೯೦

ಓಂ ಬಲಿನೇ ನಮಃ
ಓಂ ಕೇಶಿಘ್ನಾಯ ನಮಃ
ಓಂ ಪುಷ್ಪವರ್ಷಾಯ ನಮಃ
ಓಂ ಅಮಲಶ್ರಿಯೇ ನಮಃ
ಓಂ ನಾರದಾದ್ದರ್ಶಿತಾಯ ನಮಃ
ಓಂ ವ್ಯೋಮಹಂತ್ರೇ ನಮಃ
ಓಂ ಅಕ್ರೂರಸೇವಾಪರಾಯ ನಮಃ
ಓಂ ಸರ್ವದರ್ಶಿನೇ ನಮಃ
ಓಂ ವ್ರಜೇ ಗೋಪಿಕಾಮೋಹದಾಯ ನಮಃ
ಓಂ ಕೂಲವರ್ತಿನೇ ನಮಃ ೩೦೦

ಓಂ ಸತೀರಾಧಿಕಾಬೋಧದಾಯ ನಮಃ
ಓಂ ಸ್ವಪ್ನಕರ್ತ್ರೇ ನಮಃ
ಓಂ ವಿಲಾಸಿನೇ ನಮಃ
ಓಂ ಮಹಾಮೋಹನಾಶಿನೇ ನಮಃ
ಓಂ ಸ್ವಬೋಧಾಯ ನಮಃ
ಓಂ ವ್ರಜೇ ಶಾಪತಸ್ತ್ಯಕ್ತರಾಧಾಸಕಾಶಾಯ ನಮಃ

ಓಂ ಮಹಾಮೋಹದಾವಾಗ್ನಿದಗ್ಧಾಪತಯೇ ನಮಃ
ಓಂ ಸಖೀಬಂಧನಾನ್ಮೋಚಿತಾಕ್ರೂರಾಯ ನಮಃ
ಓಂ ಸಖೀಕಂಕಣೈಸ್ತಾಡಿತಾಕ್ರೂರರಕ್ಷಿಣೇ ನಮಃ
ಓಂ ರಥಸ್ಥಾಯ ನಮಃ ೩೧೦

ಓಂ ವ್ರಜೇ ರಾಧಯಾ ಕೃಷ್ಣಚಂದ್ರಾಯ ಸುಗುಪ್ತಗಾಮಿನೇ ನಮಃ
ಓಂ ಗೋಪಕೈಶ್ಚಾರುಲೀಲಾಯ ನಮಃ
ಓಂ ಜಲೇಽಕ್ರೂರಸಂದರ್ಶಿತದಿವ್ಯರೂಪಾಯ ನಮಃ
ಓಂ ದಿದೃಕ್ಷವೇ ನಮಃ
ಓಂ ಪುರೀಮೋಹಿನೀಚಿತ್ತಮೋಹಿನೇ ನಮಃ
ಓಂ ರಂಗಕಾರಪ್ರಣಾಶಿನೇ ನಮಃ
ಓಂ ಸುವಸ್ತ್ರಾಯ ನಮಃ
ಓಂ ಸ್ರಜಿನೇ ನಮಃ
ಓಂ ವಾಯಕಪ್ರೀತಿಕೃತೇ ನಮಃ
ಓಂ ಮಾಲಿಪೂಜ್ಯಾಯ ನಮಃ ೩೨೦

ಓಂ ಮಹಾಕೀರ್ತಿದಾಯ ನಮಃ
ಓಂ ಕುಬ್ಜಾವಿನೋದಿನೇ ನಮಃ
ಓಂ ಸ್ಫುರಚ್ಚಂಡಕೋದಂಡರುಗ್ಣಪ್ರಚಂಡಾಯ ನಮಃ
ಓಂ ಭಟಾರ್ತಿಪ್ರದಾಯ ನಮಃ
ಓಂ ಕಂಸದುಸ್ಸ್ವಪ್ನಕಾರಿಣೇ ನಮಃ
ಓಂ ಮಹಾಮಲ್ಲವೇಷಾಯ ನಮಃ
ಓಂ ಕರೀಂದ್ರಪ್ರಹಾರಿಣೇ ನಮಃ
ಓಂ ಮಹಾಮಾತ್ಯಘ್ನಾಯ ನಮಃ
ಓಂ ರಂಗಭೂಮಿಪ್ರವೇಶಿನೇ ನಮಃ
ಓಂ ರಸಾಢ್ಯಾಯ ನಮಃ ೩೩೦

ಓಂ ಯಶಸ್ಪೃಶೇ ನಮಃ
ಓಂ ಬಲಿನೇ ನಮಃ

ಓಂ ವಾಕ್ಪಟುಶ್ರಿಯೇ ನಮಃ
ಓಂ ಯದ್ಧಕೃನ್ಮಹಾಮಲ್ಲಘ್ನಾಯ ನಮಃ
ಓಂ ಸ್ತ್ರೀವಚೋರ್ಥಿನೇ ನಮಃ
ಓಂ ಧರಾನಾಯಕಾಯ ನಮಃ
ಓಂ ಕಂಸಹಂತ್ರೇ ನಮಃ
ಓಂ ಯದವೇ ನಮಃ
ಓಂ ಪ್ರಾಕ್ಪೂಜಿತಾಯ ನಮಃ
ಓಂ ಉಗ್ರಸೇನಪ್ರಸಿದ್ಧಾಯ ನಮಃ ೩೪೦

ಓಂ ಧರಾರಾಜ್ಯದಾಯ ನಮಃ
ಓಂ ಯಾದವೈರ್ಮಂಡಿತಾಂಗಾಯ ನಮಃ
ಓಂ ಗುರೋಃ ಪುತ್ರದಾಯ ನಮಃ
ಓಂ ಬ್ರಹ್ಮವಿದೇ ನಮಃ
ಓಂ ಬ್ರಹ್ಮಪಾಠಿನೇ ನಮಃ
ಓಂ ಮಹಾಶಂಖಘ್ನಾಯ ನಮಃ
ಓಂ ದಂಡಧೃಕ್ಪೂಜ್ಯಾಯ ನಮಃ
ಓಂ ವ್ರಜೇ ಉದ್ಧವಪ್ರೇಷಿತಾಯ ನಮಃ
ಓಂ ಗೋಪಮೋಹಿನೇ ನಮಃ
ಓಂ ಯಶೋದಾಘೃಣಿನೇ ನಮಃ ೩೫೦

ಓಂ ಗೋಪಿಕಾಜ್ಞಾನದೇಶಿನೇ ನಮಃ
ಓಂ ಸದಾ ಸ್ನೇಹಕೃತೇ ನಮಃ
ಓಂ ಕುಬ್ಜಯಾ ಪೂಜಿತಾಂಗಾಯ ನಮಃ
ಓಂ ಅಕ್ರೂರಗೇಹಗಾಮಿನೇ ನಮಃ
ಓಂ ಮಂತ್ರವೇತ್ರೇ ನಮಃ
ಓಂ ಪಾಂಡವಪ್ರೇಷಿತಾಕ್ರೂರಾಯ ನಮಃ
ಓಂ ಸುಖಿನೇ ನಮಃ
ಓಂ ಸರ್ವದರ್ಶಿನೇ ನಮಃ

ಓಂ ನೃಪಾನಂದಕಾರಿಣೇ ನಮಃ
ಓಂ ಮಹಾಕ್ಷೌಹಿಣೀಸಂಹಾರಕಾಯ ನಮಃ ೩೬೦

ಓಂ ಜರಾಸಂಧಮಾನಿನೇ ನಮಃ
ಓಂ ನೃಪಾಯ ನಮಃ
ಓಂ ದ್ವಾರಕಾಕಾರಕಾಯ ನಮಃ
ಓಂ ಮೋಕ್ಷಕರ್ತ್ರೇ ನಮಃ
ಓಂ ರಣೇ ಸಾರ್ವಭೌಮಸ್ತುತಾಯ ನಮಃ
ಓಂ ಜ್ಞಾನದಾತ್ರೇ ನಮಃ
ಓಂ ಜರಾಸಂಧಸಂಕಲ್ಪಕೃದ್ಧಾವದಂಘ್ರಯೇ ನಮಃ
ಓಂ ನಗಾದುತ್ಪತದ್ದ್ವಾರಕಾಮಧ್ಯವರ್ತಿನೇ ನಮಃ
ಓಂ ರೇವತೀಭೂಷಣಾಯ ನಮಃ
ಓಂ ತಾಲಚಿಹ್ನಾಯ ನಮಃ ೩೭೦

ಓಂ ಯದವೇ ನಮಃ
ಓಂ ರುಕ್ಮಿಣೀಹಾರಕಾಯ ನಮಃ
ಓಂ ಚೈದ್ಯವೇದ್ಯಾಯ ನಮಃ
ಓಂ ರುಕ್ಮಿರೂಪಪ್ರಣಾಶಿನೇ ನಮಃ
ಓಂ ಸುಖಾಶಿನೇ ನಮಃ
ಓಂ ಅನಂತಾಯ ನಮಃ
ಓಂ ಮಾರಾಯ ನಮಃ
ಓಂ ಕಾರ್ಷ್ಣಯೇ ನಮಃ
ಓಂ ಕಾಮಾಯ ನಮಃ
ಓಂ ಮನೋಜಾಯ ನಮಃ ೩೮೦

ಓಂ ಶಂಬರಾರಯೇ ನಮಃ
ಓಂ ರತೀಶಾಯ ನಮಃ
ಓಂ ರಥಿನೇ ನಮಃ
ಓಂ ಮನ್ಮಥಾಯ ನಮಃ

ಓಂ ವಿಾನಕೇತವೇ ನಮಃ
ಓಂ ಶರಿಸೇ ನಮಃ
ಓಂ ಸ್ಮರಾಯ ನಮಃ
ಓಂ ದರ್ಪಕಾಯ ನಮಃ
ಓಂ ಮಾನಘ್ನಾಯ ನಮಃ
ಓಂ ಪಂಚಬಾಣಾಯ ನಮಃ ೩೯೦

ಓಂ ಪ್ರಿಯಾಯ ನಮಃ
ಓಂ ಸತ್ಯಭಾಮಾಪತೆಯೇ ನಮಃ
ಓಂ ಯಾದವೇಶಾಯ ನಮಃ
ಓಂ ಸತ್ರಾಜಿತಪ್ರೇಮಪೂರಾಯ ನಮಃ
ಓಂ ಪ್ರಕಾಸಾಯ ನಮಃ
ಓಂ ಮಹಾರತ್ನದಾಯ ನಮಃ
ಓಂ ಜಾಂಬವದ್ಯುದ್ಧಕಾರಿಣೇ ನಮಃ
ಓಂ ಮಹಾಚಕ್ರಧೃತೇ ನಮಃ
ಓಂ ಖಡ್ಗಧೃತೇ ನಮಃ
ಓಂ ರಾಮಸಂಧಯೇ ನಮಃ ೪೦೦

ಓಂ ವಿಹಾರಸ್ಥಿತಾಯ ನಮಃ
ಓಂ ಪಾಂಡವಪ್ರೇಮಕಾರಿಣೇ ನಮಃ
ಓಂ ಕಲಿಂದಾಂಗಜಾಮೋಹನಾಯ ನಮಃ
ಓಂ ಖಾಂಡವಾರ್ಥಿನೇ ನಮಃ
ಓಂ ಸಖ್ಯೇ ನಮಃ
ಓಂ ಫಾಲ್ಗುನಪ್ರೀತಿಕೃತೇ ನಮಃ
ಓಂ ಅಗ್ರಕರ್ತ್ರೇ ನಮಃ
ಓಂ ಮಿತ್ರವಿಂದಾಪತಯೇ ನಮಃ
ಓಂ ಕ್ರೀಡನಾರ್ಥಿನೇ ನಮಃ
ಓಂ ನೃಪಪ್ರೇಮಕೃತೇ ನಮಃ ೪೧೦

ಓಂ ಗೋಜಿತಾಯ ನಮಃ
ಓಂ ಸಪ್ತರೂಪಾಯ ನಮಃ
ಓಂ ಸತ್ಯಾಪತಯೇ ನಮಃ
ಓಂ ಯಥೇಷ್ಟಪಾರಬರ್ಹಿಣೇ ನಮಃ
ಓಂ ನೃಪೈಃ ಸಂವೃತಾಯ ನಮಃ
ಓಂ ಭದ್ರಾಪತಯೇ ನಮಃ
ಓಂ ಮಧೋರ್ವಿಲಾಸಿನೇ ನಮಃ
ಓಂ ಮಾನಿನೀಶಾಯ ನಮಃ
ಓಂ ಜನೇಶಾಯ ನಮಃ
ಓಂ ಶುನಾಶೀರಮೋಹಾವೃತಾಯ ನಮಃ ೪೨೦

ಓಂ ಸತ್ಸಭಾಯರ್ಾಯ ನಮಃ
ಓಂ ಸತಾಕ್ಷ್ಯಾರ್ಯ ನಮಃ
ಓಂ ಮುರಾರಯೇ ನಮಃ
ಓಂ ಪುರೀಸಂಘಭೇತ್ರೇ ನಮಃ
ಓಂ ಸುವೀರಾಯ ನಮಃ
ಓಂ ಶಿರಃಖಂಡನಾಯ ನಮಃ
ಓಂ ದೈತ್ಯನಾಶಿನೇ ನಮಃ
ಓಂ ಶರಿಣೇ ನಮಃ
ಓಂ ಭೌಮಘ್ನಾಯ ನಮಃ
ಓಂ ಚಂಡವೇಗಾಯ ನಮಃ ೪೩೦

ಓಂ ಪ್ರವೀರಾಯ ನಮಃ
ಓಂ ಧರಾಸಂಸ್ತುತಾಯ ನಮಃ
ಓಂ ಕುಂಡಲಚ್ಛತ್ರಹರ್ತ್ರೇ ನಮಃ
ಓಂ ಮಹಾರತ್ನಯುಜೇ ನಮಃ
ಓಂ ರಾಜಕನ್ಯಾಭಿರಾಮಾಯ ನಮಃ
ಓಂ ಶಚೀಪೂಜಿತಾಯ ನಮಃ

ಓಂ ಶಕ್ರಜಿನ್ಮಾನಹರ್ತ್ರೇ ನಮಃ
ಓಂ ಪಾರಿಜಾತಾಪಹಾರಿಣೇ ನಮಃ
ಓಂ ಗೃಹಿಣೇ ನಮಃ
ಓಂ ಚಾಮರೈಶ್ಚೋಭಿತಾಯ ನಮಃ ೪೪೦

ಓಂ ಭೀಷ್ಮಕನ್ಯಾಪತಯೇ ನಮಃ
ಓಂ ಹಾಸ್ಯಕೃತೇ ನಮಃ
ಓಂ ಮಾನಿನೀಮಾನಕಾರಿಣೇ ನಮಃ
ಓಂ ರುಕ್ಮಿಣೀವಾಕ್ಪಟವೇ ನಮಃ
ಓಂ ಪ್ರೇಮಗೇಹಾಯ ನಮಃ
ಓಂ ಸತೀಮೋಹನಾಯ ನಮಃ
ಓಂ ಕಾಮದೇವಾಪರಶ್ರಿಯೇ ನಮಃ
ಓಂ ಸುದೇಷ್ಣಾಯ ನಮಃ
ಓಂ ಸುಚಾರವೇ ನಮಃ
ಓಂ ಚಾರುದೇಷ್ಣಾಯ ನಮಃ || ೪೫೦ ||

ಓಂ ಚಾರುದೇಹಾಯ ನಮಃ
ಓಂ ಬಲಿನೇ ನಮಃ
ಓಂ ಚಾರುಗುಪ್ತಾಯ ನಮಃ
ಓಂ ಭದ್ರಚಾರವೇ ನಮಃ
ಓಂ ಚಾರುಚಂದ್ರಾಯ ನಮಃ
ಓಂ ವಿಚಾರವೇ ನಮಃ
ಓಂ ಚಾರವೇ ನಮಃ
ಓಂ ರಥಿನೇ ನಮಃ
ಓಂ ಪುತ್ರರೂಪಾಯ ನಮಃ
ಓಂ ಸುಭಾನವೇ ನಮಃ || ೪೬೦ ||

ಓಂ ಪ್ರಭಾನವೇ ನಮಃ
ಓಂ ಚಂದ್ರಭಾನವೇ ನಮಃ

ಓಂ ಬೃಹದ್ಭಾನವೇ ನಮಃ
ಓಂ ಅಷ್ಟಭಾನವೇ ನಮಃ
ಓಂ ಸಾಂಬಾಯ ನಮಃ
ಓಂ ಸುಮಿತ್ರಾಯ ನಮಃ
ಓಂ ಕ್ರತವೇ ನಮಃ
ಓಂ ಚಿತ್ರಕೇತವೇ ನಮಃ
ಓಂ ಅಶ್ವಸೇನಾಯ ನಮಃ
ಓಂ ವೃಷಾಯ ನಮಃ ॥ ೪೭೦ ॥

ಓಂ ಚಿತ್ರಗವೇ ನಮಃ
ಓಂ ಚಂದ್ರಬಿಂಬಾಯ ನಮಃ
ಓಂ ವಿಶಂಕವೇ ನಮಃ
ಓಂ ವಸವೇ ನಮಃ
ಓಂ ಶ್ರುತಾಯ ನಮಃ
ಓಂ ಭದ್ರಾಯ ನಮಃ
ಓಂ ಏಕಾಯ ನಮಃ
ಓಂ ಸುಬಾಹವೇ ನಮಃ
ಓಂ ವೃಷಾಯ ನಮಃ
ಓಂ ಪೂರ್ಣಮಾಸಾಯ ನಮಃ ॥ ೪೮೦ ॥

ಓಂ ಸೋಮಾಯ ನಮಃ
ಓಂ ವರಾಯ ನಮಃ
ಓಂ ಶಾಂತಯೇ ನಮಃ
ಓಂ ಪ್ರಘೋಷಾಯ ನಮಃ
ಓಂ ಸಿಂಹಾಯ ನಮಃ
ಓಂ ಬಲಾಯ ನಮಃ
ಓಂ ಊರ್ಧ್ವಗಾಯ ನಮಃ
ಓಂ ವರ್ಧನಾಯ ನಮಃ

ಓಂ ಅನ್ನಾದಾಯ ನಮಃ
ಓಂ ಮಹಾಶಾಯ ನಮಃ ॥ ೪೯೦ ॥

ಓಂ ವೃಕಾಯ ನಮಃ
ಓಂ ಪಾವನಾಯ ನಮಃ
ಓಂ ವಹ್ನಿಮಿತ್ರಾಯ ನಮಃ
ಓಂ ಕ್ಷುಧಯೇ ನಮಃ
ಓಂ ಹರ್ಷಕಾಯ ನಮಃ
ಓಂ ಅನಿಲಾಯ ನಮಃ
ಓಂ ಅಮಿತ್ರಜಿತೇ ನಮಃ
ಓಂ ಜಯಾಯ ನಮಃ
ಓಂ ಸತ್ಯಕಾಯ ನಮಃ
ಓಂ ವಾವರಾಯ ನಮಃ ॥ ೫೦೦ ॥

ಓಂ ಆಯುವೇ ನಮಃ
ಓಂ ಸುಭದ್ರಾಯ ನಮಃ
ಓಂ ಯದವೇ ನಮಃ
ಓಂ ಕೋಟಿಶಃ ಪುತ್ರಪೌತ್ರಪ್ರಸಿದ್ಧಾಯ ನಮಃ
ಓಂ ಹಲಯೇ ನಮಃ
ಓಂ ದಂಡಧೃತೇ ನಮಃ
ಓಂ ರುಕ್ಮಿಘ್ನಾಯ ನಮಃ
ಓಂ ಅನಿರುದ್ಧಾಯ ನಮಃ
ಓಂ ರಾಜಭಿಹಾರ್ಸ್ಯಗಾಯ ನಮಃ
ಓಂ ದ್ಯೂತಕರ್ತ್ರೇ ನಮಃ ॥ ೫೧೦ ॥

ಓಂ ಮಧವೇ ನಮಃ
ಓಂ ಬ್ರಹ್ಮಸುವೇ ನಮಃ
ಓಂ ಬಾಣಪುತ್ರೀಪತಯೇ ನಮಃ
ಓಂ ಮಹಾಸುಂದರಾಯ ನಮಃ

ಓಂ ಕಾಮಪುತ್ರಾಯ ನಮಃ
ಓಂ ಬಲೀಶಾಯ ನಮಃ
ಓಂ ಮಹಾದೈತ್ಯಸಂಗ್ರಾಮಕೃತೇ ನಮಃ
ಓಂ ಯಾದವೇಶಾಯ ನಮಃ
ಓಂ ಪುರೀಭಂಜನಾಯ ನಮಃ
ಓಂ ಭೂತಸಂತ್ರಾಸಕಾರಿಣೇ ನಮಃ ॥ ೫೨೦ ॥

ಓಂ ಮೃಥೇ ರುದ್ರಜಿತೇ ನಮಃ
ಓಂ ರುದ್ರಮೋಹಿನೇ ನಮಃ
ಓಂ ಮೃಧಾರ್ಥಿನೇ ನಮಃ
ಓಂ ಸ್ಕಂದಜಿತೇ ನಮಃ
ಓಂ ಕೂಪಕರ್ಣಪ್ರಹಾರಿಣೇ ನಮಃ
ಓಂ ಧನುರ್ಭಂಜನಾಯ ನಮಃ
ಓಂ ಬಾಣಮಾನಪ್ರಹಾರಿಣೇನಮಃ
ಓಂ ಜ್ವರೋತ್ಪತ್ತಿಕೃತೇ ನಮಃ
ಓಂ ಜ್ವರೇಣ ಸಂಸ್ತುತಾಯ ನಮಃ
ಓಂ ಭುಜಾಚ್ಛೇದಕೃದ್ಬಾಣಸಂತ್ರಾಸಕರ್ತ್ರೇ ನಮಃ ॥ ೫೩೦ ॥

ಓಂ ಮೃಡಪ್ರಸ್ತುತಾಯ ನಮಃ
ಓಂ ಯುದ್ಧಕೃತೇ ನಮಃ
ಓಂ ಭೂಮಿಭರ್ತ್ರೇ ನಮಃ
ಓಂ ನೃಗಮುಕ್ತಿದಾಯ ನಮಃ
ಓಂ ಯಾದವಾನಾಂ ಜ್ಞಾನದಾಯ ನಮಃ
ಓಂ ರಥಸ್ಥಾಯ ನಮಃ
ಓಂ ವ್ರಜಪ್ರೇಮಪಾಯ ನಮಃ
ಓಂ ಗೋಪಮುಖ್ಯಾಯ ನಮಃ
ಓಂ ಮಹಾಸುಂದರೀಕ್ರೀಡಿತಾಯ ನಮಃ
ಓಂ ಪುಷ್ಪಮಾಲಿನೇ ನಮಃ ॥ ೫೪೦ ॥

ಓಂ ಕಲಿಂದಾಂಗಜಾಭೇದನಾಯ ನಮಃ
ಓಂ ಸೀರಪಾಣಯೇ ನಮಃ
ಓಂ ಮಹಾದಂಭಘ್ನಾಯ ನಮಃ
ಓಂ ಪೌಂಡ್ರಮಾನಪ್ರಹಾರಿಣೇ ನಮಃ
ಓಂ ತಚ್ಛಿರಚ್ಛೇದಕಾಯ ನಮಃ
ಓಂ ಕಾಶಿರಾಜಪ್ರಣಾಶಿನೇ ನಮಃ
ಓಂ ಮಹಾಕ್ಷೋಹಿಣೀಧ್ವಂಸಕೃತೇ ನಮಃ
ಓಂ ಚಕ್ರಹಸ್ತಾಯ ನಮಃ
ಓಂ ಪುರೀದೀಪಕಾಯ ನಮಃ
ಓಂ ರಾಕ್ಷಸೀನಾಶಕರ್ತ್ರೇ ನಮಃ ॥ ೫೫೦ ॥

ಓಂ ಅನಂತಾಯ ನಮಃ
ಓಂ ಮಹೀಧ್ರಾಯ ನಮಃ
ಓಂ ಫಣಿನೇ ನಮಃ
ಓಂ ವಾನರಾರಯೇ ನಮಃ
ಓಂ ಸ್ಫುರದ್ಗೌರವರ್ಣಾಯ ನಮಃ
ಓಂ ಮಹಾಪದ್ಮನೇತ್ರಾಯ ನಮಃ
ಓಂ ಕುರುಗ್ರಾಮತಿರ್ಯಗ್ಗತಾಯ ನಮಃ
ಓಂ ಗೌರವಾರ್ಥಾಯ ನಮಃ
ಓಂ ಕೌರವೈಃಸ್ತುತಾಯ ನಮಃ
ಓಂ ಪಾರಿಬರ್ಹಿಣೇ ನಮಃ ॥ ೫೬೦ ॥

ಓಂ ಸಸಾಂಬಾಯ ನಮಃ
ಓಂ ಮಹಾವೈಭವಿನೇ ನಮಃ
ಓಂ ದ್ವಾರಕೇಶಾಯ ನಮಃ
ಓಂ ಅನೇಕಾಯ ನಮಃ
ಓಂ ಚಲನ್ನಾರದಾಯ ನಮಃ
ಓಂ ಶ್ರೀಪ್ರಭಾದರ್ಶಕಾಯ ನಮಃ

ಓಂ ಮಹರ್ಷಿಸ್ತುತಾಯ ನಮಃ
ಓಂ ಬ್ರಹ್ಮದೇವಾಯ ನಮಃ
ಓಂ ಪುರಾಣಾಯ ನಮಃ
ಓಂ ಸದಾ ಷೋಡಶಸ್ತ್ರೀಸಹಸ್ರಸ್ಥಿತಾಯ ನಮಃ ॥ ೫೭೦ ॥

ಓಂ ಗೃಹಿಣೇ ನಮಃ
ಓಂ ಲೋಕರಕ್ಷಾಪರಾಯ ನಮಃ
ಓಂ ಲೋಕರೀತಯೇ ನಮಃ
ಓಂ ಪ್ರಭವೇ ನಮಃ
ಓಂ ಉಗ್ರಸೇನಾವೃತಾಯ ನಮಃ
ಓಂ ದುರ್ಗಯುಕ್ತಾಯ ನಮಃ
ಓಂ ರಾಜದೂತಸ್ತುತಾಯ ನಮಃ
ಓಂ ಬಂಧಭೇತ್ರೇ ನಮಃ
ಓಂ ಪಾಂಡವಾರ್ಥಿನೇ ನಮಃ
ಓಂ ನಾರದಪ್ರಸ್ತುತಾಯ ನಮಃ ॥ ೫೮೦ ॥

ಓಂ ನೃಪೈರ್ಮಂತ್ರಕೃತೇ ನಮಃ
ಓಂ ಉದ್ಧವಪ್ರೀತಿಪೂರ್ಣಾಯ ನಮಃ
ಓಂ ಪುತ್ರಪೌತ್ರೈರ್ವೃತಾಯ ನಮಃ
ಓಂ ಕುರುಗ್ರಾಮಗಂತ್ರೇ ನಮಃ
ಓಂ ಘೃಣಿನೇ ನಮಃ
ಓಂ ಧರ್ಮರಾಜಸ್ತುತಾಯ ನಮಃ
ಓಂ ಭೀಮಯುಕ್ತಾಯ ನಮಃ
ಓಂ ಪರಾನಂದಾಯ ನಮಃ
ಓಂ ಧರ್ಮಜೇನ ಮಂತ್ರಕೃತೇ ನಮಃ
ಓಂ ದಿಶಾಜಿತೇ ನಮಃ ॥ ೫೯೦ ॥

ಓಂ ಬಲಿನೇ ನಮಃ
ಓಂ ರಾಜಸೂಯಾರ್ಥಕಾರಿಣೇ ನಮಃ

ಓಂ ಭೀಮಸೇನಸ್ವರೂಪಾಯ ನಮಃ
ಓಂ ಜರಾಸಂಧಘ್ನಾಯ ನಮಃ
ಓಂ ವಿಪ್ರರೂಪಾಯ ನಮಃ
ಓಂ ಗದಾಯುದ್ಧಕರ್ತ್ರೇ ನಮಃ
ಓಂ ಕೃಪಾಲವೇ ನಮಃ
ಓಂ ಮಹಾಬಂಧನಚ್ಛೇದಕಾರಿಣೇ ನಮಃ
ಓಂ ನೃಪೈಃ ಸಂಸ್ತುತಾಯ ನಮಃ
ಓಂ ಧರ್ಮಗೇಹಮಾಗತಾಯ ನಮಃ || ೬೦೦ ||

ಓಂ ದ್ವಿಜೈಃ ಸಂವೃತಾಯ ನಮಃ
ಓಂ ಯಜ್ಞಸಂಭಾರಕರ್ತ್ರೇ ನಮಃ
ಓಂ ಜನೈಃ ಪೂಜಿತಾಯ ನಮಃ
ಓಂ ಚೈದ್ಯದುರ್ವಾಕ್‌ಕ್ಷಮಾಯ ನಮಃ
ಓಂ ಮಹಾಮೋಕ್ಷದಾಯ ನಮಃ
ಓಂ ಅರೇಃ ಶಿರಚ್ಛೇದಕಾರಿಣೇ ನಮಃ
ಓಂ ಮಹಾಯಜ್ಞಶೋಭಾಕರಾಯ ನಮಃ
ಓಂ ಚಕ್ರವರ್ತಿನೇ ನಮಃ
ಓಂ ನೃಪಾನಂದಕಾರಿಣೇ ನಮಃ
ಓಂ ವಿಹಾರಿಣೇ ನಮಃ || ೬೧೦ ||

ಓಂ ಸುಹಾರಿಣೇ ನಮಃ
ಓಂ ಕೌರವಸ್ಯ ಮಾನಹೃತೇ ನಮಃ
ಓಂ ಶಾಲ್ವಸಂಹಾರಕಾಯ ನಮಃ
ಓಂ ಯಾನಹಂತ್ರೇ ನಮಃ
ಓಂ ಭೋಜಾಯ ನಮಃ
ಓಂ ವೃಷ್ಣಯೇ ನಮಃ
ಓಂ ಮಧವೇ ನಮಃ
ಓಂ ಶೂರಸೇನಾಯ ನಮಃ

ಓಂ ದಶಾರ್ಹಾಯ ನಮಃ
ಓಂ ಯದವೇ ನಮಃ ॥ ೬೨೦ ॥

ಓಂ ಅಂಧಕಾಯ ನಮಃ
ಓಂ ಲೋಕಜಿತೇ ನಮಃ
ಓಂ ದ್ಯುಮನ್ಮಾನಹೃತೇ ನಮಃ
ಓಂ ವರ್ಮಧೃತೇ ನಮಃ
ಓಂ ದಿವ್ಯಶಸ್ತ್ರಿಣೇ ನಮಃ
ಓಂ ಸ್ವಬೋಧಾಯ ನಮಃ
ಓಂ ಸದಾ ರಕ್ಷಕಾಯ ನಮಃ
ಓಂ ದೈತ್ಯಹಂತ್ರೇ ನಮಃ
ಓಂ ಗದಾಧೃತೇ ನಮಃ
ಓಂ ದಂತವಕ್ತ್ರಪ್ರಣಾಶಿನೇ ನಮಃ ॥ ೬೩೦ ॥

ಓಂ ಜಗತ್ತೀರ್ಥಯಾತ್ರಾಕರಾಯ ನಮಃ
ಓಂ ಪದ್ಮಹಾರಾಯ ನಮಃ
ಓಂ ಕುಶೇನ ಸೂತಹಂತ್ರೇ ನಮಃ
ಓಂ ಕೃಪಾಕೃತೇ ನಮಃ
ಓಂ ಸ್ಮೃತೀಶಾಯ ನಮಃ
ಓಂ ಅಮಲಾಯ ನಮಃ
ಓಂ ಬಲ್ವಲಾಂಗಪ್ರಭಾಖಂಡಕಾರಿಣೇ ನಮಃ
ಓಂ ಭೀಮದುರ್ಯೋಧನಜ್ಞಾನದಾತ್ರೇ ನಮಃ
ಓಂ ಅಪರಾಯ ನಮಃ
ಓಂ ರೋಹಿಣೀಸೌಖ್ಯದಾಯ ನಮಃ ॥ ೬೪೦ ॥

ಓಂ ರೇವತೀಶಾಯ ನಮಃ
ಓಂ ಮಹಾದಾನಕೃತೇ ನಮಃ
ಓಂ ವಿಪ್ರದಾರಿದ್ರ್ಯನಾಶಕಾಯ ನಮಃ
ಓಂ ಸದಾ ಪ್ರೇಮಯುಜೇ ನಮಃ

ಓಂ ಶ್ರೀಸುದಾಮ್ನಃ ಸಹಾಯಕಾರಿಣೇ ನಮಃ
ಓಂ ಸೂರ್ಯೋಪರಾಗಸಮಯೇ ರಾಮಸಹಿತ ಭಾರ್ಗವ ಕ್ಷೇತ್ರ ಗಂತ್ರೇ ನಮಃ
ಓಂ ಸರ್ವದರ್ಶಿನೇ ನಮಃ
ಓಂ ಮಹಾಸೇನಯಾ ಆಸ್ಥಿತಾಯ ನಮಃ
ಓಂ ಸ್ನಾನಯುಕ್ತಾಯ ನಮಃ
ಓಂ ಮಹಾದಾನಕೃತೇ ನಮಃ ॥ ೬೫೦ ॥

ಓಂ ಮಿತ್ರಸಂಮೇಲನಾರ್ಥಿನೇ ನಮಃ
ಓಂ ಕುಂತಿಜಾರ್ಥಿನೇ ನಮಃ
ಓಂ ಪಾಂಡವಪ್ರೀತಿದಾಯ ನಮಃ
ಓಂ ವಿಶಾಲಾಕ್ಷಮೋಹಪ್ರದಾಯ ನಮಃ
ಓಂ ಶಾಂತಿದಾಯ ನಮಃ
ಓಂ ಸಖೀಕೋಟಿಭಿರ್ಗೋಪಿಕಾಭಿರ್ವಟೇ ರಾಧಿಕಾರಾಧನಾಯ ನಮಃ
ಓಂ ರಾಧಿಕಾಪ್ರಾಣನಾಥಾಯ ನಮಃ
ಓಂ ಸಖೀಮೋಹದಾವಾಗ್ನಿಹರ್ತ್ರೇ ನಮಃ
ಓಂ ವೈಭವೇಶಾಯ ನಮಃ
ಓಂ ಸ್ಫುರತ್ಕೋಟಿಕಂದರ್ಪಲಿಲಾವಿಶೇಷಾಯ ನಮಃ ॥ ೬೬೦ ॥

ಓಂ ಸಖೀರಾಧಿಕಾದುಃಖನಾಶಿನೇ ನಮಃ
ಓಂ ಸಖೀಮಧ್ಯಗಾಯ ನಮಃ
ಓಂ ವಿಲಾಸಿನೇ ನಮಃ
ಓಂ ಶಾಪಘ್ನಾಯ ನಮಃ
ಓಂ ಮಾಧವೀಶಾಯ ನಮಃ
ಓಂ ಶತಂ ವರ್ಷವಿಕ್ಷೇಪಹೃತೇ ನಮಃ
ಓಂ ನಂದಪುತ್ರಾಯ ನಮಃ
ಓಂ ನಂದವಕ್ಷೋಗತಾಯ ನಮಃ

ಓಂ ಶೀತಲಾಂಗಾಯ ನಮಃ
ಓಂ ಯಶೋದಾಶುಚಪಸ್ನಾನಕೃತೇ ನಮಃ || ೬೭೦ ||

ಓಂ ದುಃಖಹಂತ್ರೇ ನಮಃ
ಓಂ ಸದಾಗೋಪಿಕಾನೇತ್ರಲಗ್ನಾಯ ನಮಃ
ಓಂ ವ್ರಜೇಶಾಯ ನಮಃ
ಓಂ ದೇವಕೀರೋಹಿಣೀಭ್ಯಾಂ ಸ್ತುತಾಯ ನಮಃ
ಓಂ ಸುರೇಂದ್ರಾಯ ನಮಃ
ಓಂ ರಹೋಗೋಪಿಕಾಜ್ಞಾನದಾಯ ನಮಃ
ಓಂ ಮಾನದಾಯ ನಮಃ
ಓಂ ಅರಾತ್ಪಟ್ಟರಾಜ್ಞೀಭಿಃ ಸಂಸ್ತುತಾಯ ನಮಃ
ಓಂ ಧನಿನೇ ನಮಃ
ಓಂ ಸದಾ ಲಕ್ಷಣಾಪ್ರಾಣನಾಥಾಯ ನಮಃ || ೬೮೦ ||

ಓಂ ಷೋಡಶಸ್ತ್ರೀಸಹಸ್ರಸ್ತುತಾಂಗಾಯ ನಮಃ
ಓಂ ಶ್ರುತಾಯ ನಮಃ
ಓಂ ವ್ಯಾಸದೇವಾಯ ನಮಃ
ಓಂ ಸುಮಂತವೇ ನಮಃ
ಓಂ ಸಿತಾಯ ನಮಃ
ಓಂ ಭರದ್ವಾಜಾಯ ನಮಃ
ಓಂ ಗೌತಮಾಯ ನಮಃ
ಓಂ ಆಸುರಯೇ ನಮಃ
ಓಂ ವಸಿಷ್ಠಾಯ ನಮಃ
ಓಂ ಶತಾನಂದಾಯ ನಮಃ || ೬೯೦ ||

ಓಂ ಸರಾಮಾಯ ನಮಃ
ಓಂ ಆದ್ಯಾಯ ನಮಃ
ಓಂ ಮುನಯೇ ನಮಃ
ಓಂ ಪರ್ವತಾಯ ನಮಃ

ಓಂ ನಾರದಾಯ ನಮಃ
ಓಂ ಧೌಮ್ಯಾಯ ನಮಃ
ಓಂ ಇಂದ್ರಾಯ ನಮಃ
ಓಂ ಅಸಿತಾಯ ನಮಃ
ಓಂ ಅತ್ರಯೇ ನಮಃ
ಓಂ ವಿಭಾಂಡಾಯ ನಮಃ ॥ ೭೦೦ ॥

ಓಂ ಪ್ರಚೇತಸೇ ನಮಃ
ಓಂ ಕೃಪಾಯ ನಮಃ
ಓಂ ಕುಮಾರಾಯ ನಮಃ
ಓಂ ಸನಂದಾಯ ನಮಃ
ಓಂ ಯಾಜ್ಞವಲ್ಕ್ಯಾಯ ನಮಃ
ಓಂ ಋಭವೇ ನಮಃ
ಓಂ ಅಂಗಿರಸೇ ನಮಃ
ಓಂ ದೇವಲಾಯ ನಮಃ
ಓಂ ಶ್ರೀಮೃಕಂಡವೇ ನಮಃ
ಓಂ ಮರೀಚಯೇ ನಮಃ ॥ ೭೧೦ ॥

ಓಂ ಕ್ರತವೇ ನಮಃ
ಓಂ ಔರ್ವಕಾಯ ನಮಃ
ಓಂ ಲೋಮಶಾಯ ನಮಃ
ಓಂ ಪುಲಸ್ತ್ಯಾಯ ನಮಃ
ಓಂ ಭೃಗವೇ ನಮಃ
ಓಂ ಬ್ರಹ್ಮರಾತಾಯ ನಮಃ
ಓಂ ವಸಿಷ್ಠಾಯ ನಮಃ
ಓಂ ನರಾಯ ನಮಃ
ಓಂ ನಾರಾಯಣಾಯ ನಮಃ
ಓಂ ದತ್ತಾಯ ನಮಃ ॥ ೭೨೦ ॥

ಓಂ ಪಾಣಿನಯೇ ನಮಃ
ಓಂ ಪಿಂಗಲಾಯ ನಮಃ
ಓಂ ಭಾಷ್ಯಕಾರಾಯ ನಮಃ
ಓಂ ಕಾತ್ಯಾಯನಾಯ ನಮಃ
ಓಂ ವಿಪ್ರಾಯ ನಮಃ
ಓಂ ಪತಂಜಲಯೇ ನಮಃ
ಓಂ ಗಗರ್ಾಯ ನಮಃ
ಓಂ ಗುರವೇ ನಮಃ
ಓಂ ಗೀಷ್ಪತಯೇ ನಮಃ
ಓಂ ಮುನಿಜರ್ಾಜಲಾಯ ನಮಃ ॥ ೭೩೦ ॥

ಓಂ ಕಶ್ಯಪಾಯ ನಮಃ
ಓಂ ಗಾಲವಾಯ ನಮಃ
ಓಂ ದ್ವಿಜಾಯ ನಮಃ
ಓಂ ಸೌರಭಯೇ ನಮಃ
ಓಂ ಋಷ್ಯಶೃಂಗಾಯ ನಮಃ
ಓಂ ಕಣ್ವಾಯ ನಮಃ
ಓಂ ದ್ವಿತಾಯ ನಮಃ
ಓಂ ಏಕತಾಯ ನಮಃ
ಓಂ ಜಾತೂಧ್ವಾಯ ನಮಃ
ಓಂ ಘನಾಯ ನಮಃ ॥ ೭೪೦ ॥

ಓಂ ಕರ್ದಮಸ್ಯಾತ್ಮಜಾಯ ನಮಃ
ಓಂ ಕರ್ದಮಾಯ ನಮಃ
ಓಂ ಭಾರ್ಗವಾಯ ನಮಃ
ಓಂ ಕೌತ್ಸಕಾಯ ನಮಃ
ಓಂ ಆರುಣಾಯ ನಮಃ
ಓಂ ಶುಚಯೇ ನಮಃ

ಓಂ ಪಿಪ್ಪಲಾದಾಯ ನಮಃ
ಓಂ ಮೃಕಂಡಸ್ಯ ಪುತ್ರಾಯ ನಮಃ
ಓಂ ಪೈಲಾಯ ನಮಃ
ಓಂ ಜೈಮಿನಯೇ ನಮಃ || ೭೫೦ ||

ಓಂ ಸುಮಂತವೇ ನಮಃ
ಓಂ ವರಾಯ ನಮಃ
ಓಂ ಗಾಂಗಲಾಯ ನಮಃ
ಓಂ ಸ್ಫೋಟಗೇಹಾಯ ನಮಃ
ಓಂ ಫಲಾದಾಯ ನಮಃ
ಓಂ ಸದಾ ಪೂಜಿತಾಯ ನಮಃ
ಓಂ ಬ್ರಾಹ್ಮಣಾಯ ನಮಃ
ಓಂ ಸರ್ವರೂಪಿಣೇ ನಮಃ
ಓಂ ಮುನೀಶಾಯ ನಮಃ
ಓಂ ಮಹಾಮೋಹನಾಶಾಯ ನಮಃ || ೭೬೦ ||

ಓಂ ಅಮರಾಯ ನಮಃ
ಓಂ ಪ್ರಾಜ್ಞಮುನೀಶಸ್ತುತಾಯ ನಮಃ
ಓಂ ಶೌರಿವಿಜ್ಞಾನದಾತ್ರೇ ನಮಃ
ಓಂ ಮಹಾಯಜ್ಞಕೃತೇ ನಮಃ
ಓಂ ಅವಭೃಥಸ್ನಾನಪೂಜ್ಯಾಯ ನಮಃ
ಓಂ ಸದಾದಕ್ಷಿಣಾದಾಯ ನಮಃ
ಓಂ ನೃಪೈಃ ಪಾರಿಬರ್ಹಿಣೇ ನಮಃ
ಓಂ ಪ್ರಜಾನಂದದಾಯ ನಮಃ
ಓಂ ದ್ವಾರಕಾಗೇಹದರ್ಶಿನೇ ನಮಃ
ಓಂ ಮಹಾಜ್ಞಾನದಾಯ ನಮಃ || ೭೭೦ ||

ಓಂ ದೇವಕೀಪುತ್ರದಾಯ ನಮಃ
ಓಂ ಅಸುರೈಃ ಪೂಜಿತಾಯ ನಮಃ

ಓಂ ಅಹೀಂದ್ರಸೇನಾದೃತಾಯ ನಮಃ
ಓಂ ಸದಾ ಫಲ್ಗುನಪ್ರೀತಿಕೃತೇ ನಮಃ
ಓಂ ಸುಭದ್ರಾವಿವಾಹೇ ದ್ವಿಪಾಶ್ವಪ್ರದಾಯ ನಮಃ
ಓಂ ಮಾನಯಾನಾಯ ನಮಃ
ಓಂ ಮೈಥಿಲೇನ ದ್ವಿಜೇನ ರಾಜ್ಞಾ ಚ ಪ್ರಯುಕ್ತಾಯ ನಮಃ
ಓಂ ಭುವಂ ದರ್ಶಕಾಯ ನಮಃ
ಓಂ ಲೋಕವೇದೋಪದೇಶಿನೇ ನಮಃ
ಓಂ ವೇದವಾಕ್ಯೈಃ ಸ್ತುತಾಯ ನಮಃ || ೭೮೦ ||

ಓಂ ಶೇಷಶಾಯಿನೇ ನಮಃ
ಓಂ ಅಮರೇಷು ಪರಿಕ್ಷಾವೃತಾಯ ನಮಃ
ಓಂ ಬ್ರಾಹ್ಮಣೈರ್ಭೃಗುಪ್ರಾರ್ಥಿತಾಯ ನಮಃ
ಓಂ ದೈತ್ಯಘ್ನಾಯ ನಮಃ
ಓಂ ಈಶರಕ್ಷಿಣೇ ನಮಃ
ಓಂ ಅರ್ಜುನಸ್ಯ ಸಖಾಪಿ ತನ್ಮಾನಪ್ರಹಾರಿಣೇ ನಮಃ
ಓಂ ವಿಪ್ರಪುತ್ರಪ್ರದಾಯ ನಮಃ
ಓಂ ಧಾಮಗಂತ್ರೇ ನಮಃ
ಓಂ ಮಾಧವೀಭಿರ್ವಿಹಾರಸ್ಥಿತಾಯ ನಮಃ
ಓಂ ಕಲಾಂಗಾಯ ನಮಃ || ೭೯೦ ||

ಓಂ ಮಹಾಮೋಷದಾವಾಗ್ನಿದಗ್ಧಾಭಿರಾಮಾಯ ನಮಃ
ಓಂ ಯದವೇ ನಮಃ
ಓಂ ಉಗ್ರಸೇನನೃಪಾಯ ನಮಃ
ಓಂ ಅಕ್ರೂರಾಯ ನಮಃ
ಓಂ ಉದ್ಧವಾಯ ನಮಃ
ಓಂ ಶೂರಸೇನಾಯ ನಮಃ
ಓಂ ಶೂರಾಯ ನಮಃ
ಓಂ ಹೃದೀಕಾಯ ನಮಃ

ಓಂ ಸತ್ರಾಜಿತಾಯ ನಮಃ
ಓಂ ಅಪ್ರಮೇಯಾಯ ನಮಃ ॥ ೮೦೦ ॥

ಓಂ ಗದಾಯ ನಮಃ
ಓಂ ಸಾರಣಾಯ ನಮಃ
ಓಂ ಸಾತ್ಯಕಯೇ ನಮಃ
ಓಂ ದೇವಭಾಗಾಯ ನಮಃ
ಓಂ ಮಾನಸಾಯ ನಮಃ
ಓಂ ಸಂಜಯಾಯ ನಮಃ
ಓಂ ಶ್ಯಾಮಕಾಯ ನಮಃ
ಓಂ ವೃಕಾಯ ನಮಃ
ಓಂ ವತ್ಸಕಾಯ ನಮಃ
ಓಂ ದೇವಕಾಯ ನಮಃ ॥ ೮೧೦ ॥

ಓಂ ಭದ್ರಸೇನಾಯ ನಮಃ
ಓಂ ನೃಪಾಯಾಜಾತಶತ್ರವೇ ನಮಃ
ಓಂ ಜಯಾಯ ನಮಃ
ಓಂ ಮಾದ್ರಿಪುತ್ರಾಯ ನಮಃ
ಓಂ ಭೀಷ್ಮಾಯ ನಮಃ
ಓಂ ಕೃಪಾಯ ನಮಃ
ಓಂ ಬುದ್ಧಿಚಕ್ಷುಷೇ ನಮಃ
ಓಂ ಪಾಂಡವೇ ನಮಃ
ಓಂ ಶಂತನವೇ ನಮಃ
ಓಂ ದೇವಬಾಹ್ಲೀಕಾಯ ನಮಃ ॥ ೮೨೦ ॥

ಓಂ ಭೂರಿಶ್ರವಸೇ ನಮಃ
ಓಂ ಚಿತ್ರಪೀಯರ್ಾಯ ನಮಃ
ಓಂ ವಿಚಿತ್ರಾಯ ನಮಃ
ಓಂ ಶಲಾಯ ನಮಃ

ಓಂ ದುರ್ಯೋಧನಾಯ ನಮಃ
ಓಂ ಕರ್ಣಾಯ ನಮಃ
ಓಂ ಸುಭದ್ರಾಸುತಾಯ ನಮಃ
ಓಂ ಪ್ರಸಿದ್ಧಾಯ ನಮಃ
ಓಂ ವಿಷ್ಣುರಾತಾಯ ನಮಃ
ಓಂ ಜನಮೇಜಯಾಯ ನಮಃ ॥ ೮೩೦ ॥

ಓಂ ಪಾಂಡವಾಯ ನಮಃ
ಓಂ ಕೌರವಾಯ ನಮಃ
ಓಂ ಸರ್ವತೇಜಸೇ ನಮಃ
ಓಂ ಸರ್ವರೂಪಿಣೇ ನಮಃ
ಓಂ ಹರಯೇ ನಮಃ
ಓಂ ರಾಧಯಾ ವ್ರಜಮಾಗತಾಯ ನಮಃ
ಓಂ ಪೂರ್ಣದೇವಾಯ ನಮಃ
ಓಂ ವರಾಯ ನಮಃ
ಓಂ ರಾಸಲೀಲಾಪರಾಯ ನಮಃ
ಓಂ ದಿವ್ಯರೂಪಿಣೇ ನಮಃ ॥ ೮೪೦ ॥

ಓಂ ರಥಸ್ಥಾಯ ನಮಃ
ಓಂ ನವದ್ವೀಪಖಂಡಪ್ರದರ್ಶಿನೇ ನಮಃ
ಓಂ ಮಹಾಮಾನದಾಯ ನಮಃ
ಓಂ ಗೋಪಜಾಯ ನಮಃ
ಓಂ ವಿಶ್ವರೂಪಾಯ ನಮಃ
ಓಂ ಸನಂದಾಯ ನಮಃ
ಓಂ ನಂದಾಯ ನಮಃ
ಓಂ ವೃಷಾಯ ನಮಃ
ಓಂ ವಲ್ಲಭೇಶಾಯ ನಮಃ
ಓಂ ಸುದಾಮ್ನೇ ನಮಃ ॥ ೮೫೦ ॥

ಓಂ ಅರ್ಜುನಾಯ ನಮಃ
ಓಂ ಸೌಬಲಾಯ ನಮಃ
ಓಂ ತೋಕಾಯ ನಮಃ
ಓಂ ಕೃಷ್ಣಾಯ ನಮಃ
ಓಂ ಶುಕಾಯ ನಮಃ
ಓಂ ವಿಶಾಲಾಯ ನಮಃ
ಓಂ ಋಷಭಾಖ್ಯಾಯ ನಮಃ
ಓಂ ಸುತೇಜಸ್ವಿಕಾಯ ನಮಃ
ಓಂ ಕೃಷ್ಣಮಿತ್ರಾಯ ನಮಃ
ಓಂ ವರೂಥಾಯ ನಮಃ || ೮೬೦ ||

ಓಂ ಕುಶೇಶಾಯ ನಮಃ
ಓಂ ವನೇಶಾಯ ನಮಃ
ಓಂ ವೃಂದಾವನೇಶಾಯ ನಮಃ
ಓಂ ಮಾಥುರೇಶಾಯ ನಮಃ
ಓಂ ಅಧಿಪಾಯ ನಮಃ
ಓಂ ಗೋಕುಲೇಶಾಯ ನಮಃ
ಓಂ ಸದಾಗೋಗಣಾಯ ನಮಃ
ಓಂ ಗೋಪತಯೇ ನಮಃ
ಓಂ ಗೋಪಿಕೇಶಾಯ ನಮಃ
ಓಂ ಗೋವರ್ಧನಾಯ ನಮಃ || ೮೭೦ ||

ಓಂ ಗೋಪತಯೇ ನಮಃ
ಓಂ ಕನ್ಯಕೇಶಾಯ ನಮಃ
ಓಂ ಅನಾದಯೇ ನಮಃ
ಓಂ ಆತ್ಮನೇ ನಮಃ
ಓಂ ಹರಯೇ ನಮಃ
ಓಂ ಪರಮಪುರುಷಾಯ ನಮಃ

ಓಂ ನಿರ್ಗುಣಾಯ ನಮಃ
ಓಂ ಜ್ಯೋತೀರೂಪಾಯ ನಮಃ
ಓಂ ನಿರೀಹಾಯ ನಮಃ
ಓಂ ಸದಾ ನಿರ್ವಿಕಾರಾಯ ನಮಃ || ೮೮೦ ||

ಓಂ ಪ್ರಪಂಚಾತ್ಪರಾಯ ನಮಃ
ಓಂ ಸತ್ಯಾಯ ನಮಃ
ಓಂ ಪೂರ್ಣಾಯ ನಮಃ
ಓಂ ಪರೇಶಾಯ ನಮಃ
ಓಂ ಸೂಕ್ಷ್ಮಾಯ ನಮಃ
ಓಂ ನೃಪೇಣಾಪಿ ದ್ವಾರಕಾಯಾಮಶ್ವಮೇಧಯಾಗಸ್ಯ ಕರ್ತ್ರೇ
ಓಂ ಪೌತ್ರೇಣ ಭೂಭಾರಹರ್ತ್ರೇ ನಮಃ
ಓಂ ಪುನಃ ಶ್ರೀವಜೇ ರಾಧಯಾ ರಾಸರಂಗಸ್ಯ ಕರ್ತ್ರೇ ನಮಃ
ಓಂ ಹರಯೇ ನಮಃ
ಓಂ ಗೋಪಿಕಾನಾಂ ಭರ್ತ್ರೇ ನಮಃ || ೮೯೦ ||

ಓಂ ಸದೈಕಾಯ ನಮಃ
ಓಂ ಅನೇಕಾಯ ನಮಃ
ಓಂ ಪ್ರಭಾಪೂರಿತಾಂಗಾಯ ನಮಃ
ಓಂ ಯೋಗಮಾಯಾಕರಾಯ ನಮಃ
ಓಂ ಕಾಲಜಿತೇ ನಮಃ
ಓಂ ಸುದೃಷ್ಟಯೇ ನಮಃ
ಓಂ ಮಹತ್ತತ್ತ್ವರೂಪಾಯ ನಮಃ
ಓಂ ಪ್ರಜಾತಾಯ ನಮಃ
ಓಂ ಕೂಟಸ್ಥಾಯ ನಮಃ
ಓಂ ಆದ್ಯಾಂಕುರಾಯ ನಮಃ || ೯೦೦ ||

ಓಂ ವೃಕ್ಷರೂಪಾಯ ನಮಃ
ಓಂ ವಿಕಾರಸ್ಥಿತಾಹಂಕಾರಾಯ ನಮಃ

ಓಂ ವೈಕಾರಕಾಯ ನಮಃ
ಓಂ ತೈಜಸಾಯ ನಮಃ
ಓಂ ತಾಮಸಾಯ ನಮಃ
ಓಂ ದಿಗ್ರೂಪಾಯ ನಮಃ
ಓಂ ಸಮೀರಾಯ ನಮಃ
ಓಂ ಸೂರ್ಯಾಯ ನಮಃ
ಓಂ ಪ್ರಚೇತಸೇ ನಮಃ
ಓಂ ಅಶ್ವಿನೀಭ್ಯಾಂ ನಮಃ ॥ ೯೧೦ ॥

ಓಂ ವಹ್ನಯೇ ನಮಃ
ಓಂ ಶಕ್ರಾಯ ನಮಃ
ಓಂ ಉಪೇಂದ್ರಾಯ ನಮಃ
ಓಂ ಮಿತ್ರಾಯ ನಮಃ
ಓಂ ಶ್ರುತಯೇ ನಮಃ
ಓಂ ತ್ವಚೇ ನಮಃ
ಓಂ ದೃಶೇ ನಮಃ
ಓಂ ಘ್ರಾಣಾಯ ನಮಃ
ಓಂ ಜಿಹ್ವಾಯೈ ನಮಃ
ಓಂ ಗಿರೇ ನಮಃ ॥ ೯೨೦ ॥

ಓಂ ಭುಜಾಯ ನಮಃ
ಓಂ ಮೇಢ್ರಕಾಯ ನಮಃ
ಓಂ ಪಾಯುವೇ ನಮಃ
ಓಂ ಅಂಘ್ರಯೇ ನಮಃ
ಓಂ ಚೇಷ್ಟಾಯ ನಮಃ
ಓಂ ಧರಾಯೈ ನಮಃ
ಓಂ ವ್ಯೋಮ್ನೇ ನಮಃ
ಓಂ ವಾರಿಣೇ ನಮಃ

ಓಂ ಮಾರುತಾಯ ನಮಃ
ಓಂ ತೇಜಸೇ ನಮಃ || ೯೩೦ ||

ಓಂ ರೂಪಾಯ ನಮಃ
ಓಂ ರಸಾಯ ನಮಃ
ಓಂ ಗಂಧಾಯ ನಮಃ
ಓಂ ಶಬ್ದಾಯೇ ನಮಃ
ಓಂ ಸ್ಪೃಶೇ ನಮಃ
ಓಂ ಚಿತ್ರಾಯ ನಮಃ
ಓಂ ಬುದ್ಧಯೇ ನಮಃ
ಓಂ ವಿರಾಟ್ಪುರುಷಾಯ ನಮಃ
ಓಂ ಕಾಲರೂಪಾಯ ನಮಃ
ಓಂ ವಾಸುದೇವಾಯ ನಮಃ || ೯೪೦ ||

ಓಂ ಜಗತ್ಕೃದ್ಧೃತಾಂಗಾಯ ನಮಃ
ಓಂ ಅಂಡೇಶಯಾನಾಯ ನಮಃ
ಓಂ ಶೇಷಾಯ ನಮಃ
ಓಂ ಸಹಸ್ರಸ್ವರೂಪಾಯ ನಮಃ
ಓಂ ರಮಾನಾಥಾಯ ನಮಃ
ಓಂ ಆದ್ಯಾವತಾರಾಯ ನಮಃ
ಓಂ ಸದಾ ಸರ್ವಕೃತ್ಪದ್ಮಜಾಯ ನಮಃ
ಓಂ ಕರ್ಮಕರ್ತ್ರೇ ನಮಃ
ಓಂ ನಾಭಿಪದ್ಮೋದ್ಭವಾಯ ನಮಃ
ಓಂ ದಿವ್ಯವರ್ಣಾಯ ನಮಃ || ೯೫೦ ||

ಓಂ ಕವಯೇ ನಮಃ
ಓಂ ಲೋಕಕೃತೇ ನಮಃ
ಓಂ ಕಾಲಕೃತೇ ನಮಃ
ಓಂ ಸೂರ್ಯರೂಪಾಯ ನಮಃ

ಓಂ ನಿಮೇಷಾಯ ನಮಃ
ಓಂ ಭವಾಯ ನಮಃ
ಓಂ ವತ್ಸರಾಂತಾಯ ನಮಃ
ಓಂ ಮಹೀಯಸೇ ನಮಃ
ಓಂ ತಿಥಯೇ ನಮಃ
ಓಂ ವಾರಾಯ ನಮಃ ॥ ೯೬೦ ॥

ಓಂ ನಕ್ಷತ್ರಾಯ ನಮಃ
ಓಂ ಯೋಗಾಯ ನಮಃ
ಓಂ ಲಗ್ನಾಯ ನಮಃ
ಓಂ ಮಾಸಾಯ ನಮಃ
ಓಂ ಘಟಯೇ ನಮಃ
ಓಂ ಕ್ಷಣಾಯ ನಮಃ
ಓಂ ಕಾಷ್ಠಿಕಾಯೈ ನಮಃ
ಓಂ ಮುಹೂರ್ತಾಯ ನಮಃ
ಓಂ ಯಾಮಾಯ ನಮಃ
ಓಂ ಗ್ರಹೇಭ್ಯೋ ನಮಃ ॥ ೯೭೦ ॥

ಓಂ ಯಾಮಿನ್ಯೈ ನಮಃ
ಓಂ ದಿನಾಯ ನಮಃ
ಓಂ ಋಕ್ಷಮಾಲಾಗತಾಯ ನಮಃ
ಓಂ ದೇವಪುತ್ರಾಯ ನಮಃ
ಓಂ ಕೃತಾಯ ನಮಃ
ಓಂ ದ್ವಾಪರಾಯ ನಮಃ
ಓಂ ತ್ರೇತಾಯ ನಮಃ
ಓಂ ಕಲಯೇ ನಮಃ
ಓಂ ಸಹಸ್ರಯುಗಾಯ ನಮಃ
ಓಂ ಮನ್ವಂತರಾಯ ನಮಃ ॥ ೯೮೦ ॥

ಓಂ ಲಯಾಯ ನಮಃ
ಓಂ ಪಾಲನಾಯ ನಮಃ
ಓಂ ಸತ್ಕೃತಯೇ ನಮಃ
ಓಂ ಪರಾರ್ಧಾಯ ನಮಃ
ಓಂ ಸದೋತ್ಪತ್ತಿಕೃತೇ ನಮಃ
ಓಂ ದ್ವ್ಯಕ್ಷರಾಯ ನಮಃ
ಓಂ ಬ್ರಹ್ಮರೂಪಾಯ ನಮಃ
ಓಂ ರುದ್ರಸರ್ಗಾಯ ನಮಃ
ಓಂ ಕೌಮಾರಸರ್ಗಾಯ ನಮಃ
ಓಂ ಮುನೇಸ್ಸರ್ಗಕೃತೇ ನಮಃ ॥ ೯೯೦ ॥

ಓಂ ದೇವಕೃತೇ ನಮಃ
ಓಂ ಪ್ರಾಕೃತಾಯ ನಮಃ
ಓಂ ಶ್ರುತಯೇ ನಮಃ
ಓಂ ಸ್ಮೃತಯೇ ನಮಃ
ಓಂ ಸ್ತೋತ್ರಾಯ ನಮಃ
ಓಂ ಪುರಾಣಾಯ ನಮಃ
ಓಂ ಧನುರ್ವೇದಾಯ ನಮಃ
ಓಂ ಇಜ್ಯಾಯೈ ನಮಃ
ಓಂ ಗಾಂಧರ್ವವೇದಾಯ ನಮಃ
ಓಂ ವಿಧಾತ್ರೇ ನಮಃ ॥ ೧೦೦೦ ॥

ಓಂ ಸತ್ಕುಮಾರಾಯ ನಮಃ
ಓಂ ವರಾಹಾಯ ನಮಃ
ಓಂ ನಾರದಾಯ ನಮಃ
ಓಂ ಧರ್ಮಪುತ್ರಾಯ ನಮಃ
ಓಂ ಮುನಯೇ ನಮಃ
ಓಂ ಕರ್ದಮಸ್ಯಾತ್ಮಜಾಯ ನಮಃ

ಓಂ ದತ್ತಾ್ರಯ ನಮಃ
ಓಂ ಯಜ್ಞಾಯ ನಮಃ
ಓಂ ಅಮರಾಯ ನಮಃ
ಓಂ ನಾಭಿಜಾಯ ನಮಃ ॥ ೧೦೧೮ ॥

ಓಂ ಶ್ರೀಪೃಥವೇ ನಮಃ
ಓಂ ಸುಮತ್ಸ್ಯಾಯ ನಮಃ
ಓಂ ಕೂರ್ಮಾಯ ನಮಃ
ಓಂ ಧನ್ವಂತರಯೇ ನಮಃ
ಓಂ ಮೋಹಿನ್ಯೈ ನಮಃ
ಓಂ ಪ್ರತಾಪಿನೇ ನಮಃ
ಓಂ ನಾರಸಿಂಹಾಯ ನಮಃ
ಓಂ ದ್ವಿಜಾಯ ವಾಮನಾಯ ನಮಃ
ಓಂ ರೇಣುಕಾಪುತ್ರರೂಪಾಯ ನಮಃ
ಓಂ ಶ್ರುತಿಸ್ತೋತ್ರಕರ್ತ್ರೇ ನಮಃ ॥ ೧೦೨೦ ॥

ಓಂ ವ್ಯಾಸದೇವಮುನಯೇ ನಮಃ
ಓಂ ರಾಮಚಂದ್ರಾವತಾರಾಯ ಧನುರ್ವೇದಭಾಜೇ ನಮಃ
ಓಂ ಸೀತಾಪತಯೇ ನಮಃ
ಓಂ ಭಾರಹೃತೇ ನಮಃ
ಓಂ ರಾವಣಾರಯೇ ನಮಃ
ಓಂ ಸೇತುಕೃತೇ ನೃಪಾಯ ನಮಃ
ಓಂ ವಾನರೇಂದ್ರಪ್ರಹಾರಿಣೇ ನಮಃ
ಓಂ ಮಹಾಯಜ್ಞಕೃತೇ ನಮಃ
ಓಂ ರಾಘವೇಂದ್ರಾಯ ನಮಃ
ಓಂ ಪ್ರಚಂಡಾಯ ನಮಃ ॥ ೧೦೩೦ ॥

ಓಂ ಬಲಾಯ ನಮಃ
ಓಂ ಕೃಷ್ಣಚಂದ್ರಾಯ ನಮಃ

ಓಂ ಕಲ್ಕಯೇ ನಮಃ
ಓಂ ಕಲೀಶಾಯ ನಮಃ
ಓಂ ಬುದ್ಧಪ್ರಸಿದ್ಧಾಯ ನಮಃ
ಓಂ ಹಂಸಾಯ ನಮಃ
ಓಂ ಅಶ್ವಾಯ ನಮಃ
ಓಂ ಋಷೀಂದ್ರಾಯ ನಮಃ
ಓಂ ಅಜಿತಾಯ ನಮಃ
ಓಂ ದೇವವೈಕುಂಠನಾಥಾಯ ನಮಃ ॥ ೧೦೪೦ ॥

ಓಂ ಅಮೂರ್ತಯೇ ನಮಃ
ಓಂ ಮನ್ವಂತರಾವತಾರಾಯ ನಮಃ
ಓಂ ಗಜೋದ್ಧಾರಣಾಯ ನಮಃ
ಓಂ ಮನುಪುತ್ರಾಯ ನಮಃ
ಓಂ ನೃಪೇಂದ್ರಾಯ ದುಷ್ಯಂತಜಾಯ ನಮಃ
ಓಂ ದಾನಶೀಲಾಯ ನಮಃ
ಓಂ ಶ್ರುತಾಯ ನಮಃ
ಓಂ ಭೂತಾಯ ನಮಃ
ಓಂ ಭವಿಷ್ಯತೇ ನಮಃ
ಓಂ ಭವತೇ ನಮಃ ॥ ೧೦೫೦ ॥

ಓಂ ಸ್ಥಾವರಾಯ ನಮಃ
ಓಂ ಜಂಗಮಾಯ ನಮಃ
ಓಂ ಅಲ್ಪಾಯ ನಮಃ
ಓಂ ಮಹತೇ ನಮಃ

ಇತಿ ಶ್ರೀಕೃಷ್ಣಸಹಸ್ರನಾಮಾವಳೀ ಸಮಾಪ್ತಾ.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಷಷ್ಟಿತಮೋಽಧ್ಯಾಯಃ

॥ ಗರ್ಗ ಉವಾಚ ॥

ಇತಿ ಶ್ರುತ್ವಾ ವ್ಯಾಸಮುಖಾತ್ಕೃಷ್ಣನಾಮ್ನಾಂ ಸಹಸ್ರಕಂ ।
ಸಂಪೂಜ್ಯ ತಂ ಯಾದವೇಂದ್ರೋ ಭಕ್ತ್ಯಾ ಕೃಷ್ಣೇ ಮನೋ ದಧೇ ॥ ೧ ॥

ತತಃ ಸ ಮಿಥಿಲಾಯಾಂ ಚ ಬಹುಲಾಶ್ವಶ್ರುತದೇವಯೋಃ ।
ದತ್ವಾ ಸ್ವದರ್ಶನಂ ಕೃಷ್ಣ ಆಯಯೌ ದ್ವಾರಕಾಂ ಪುರೀಂ ॥ ೨ ॥

ಅರವತ್ತನೆಯ ಅಧ್ಯಾಯವು

೧. ಗರ್ಗಮುನಿಯು ಹೇಳತೊಡಗಿದನುಃ— ಈರೀತಿ ವ್ಯಾಸಮಹರ್ಷಿಯ ಮುಖದಿಂದ ಶ್ರೀಕೃಷ್ಣನ ಸಹಸ್ರನಾಮಗಳನ್ನು ಕೇಳಿದನಂತರ ಯಾದವಾಧಿಪತಿಯಾದ ಆ ಉಗ್ರಸೇನನು ಆ ಮಹರ್ಷಿಯನ್ನು ಪೂಜಿಸಿ ಶ್ರೀಕೃಷ್ಣನಲ್ಲಿಯೇ ತನ್ನ ಮನಸನ್ನು ನೆಲೆಗೊಳಿಸಿದನು.

೨. ಅನಂತರ ಶ್ರೀಕೃಷ್ಣನು ಮಿಥಲಾದೇಶಕ್ಕೆ ತೆರಳಿ ತನ್ನ ಭಕ್ತರಾದ ಬಹುಲಾಶ್ವ ಶ್ರುತದೇವರೆಂಬವರಿಗೆ ತನ್ನ ಸಂದರ್ಶನವನ್ನು ಅನುಗ್ರಹಿಸಿ ಮತ್ತೆ ದ್ವಾರಕೆಗೆ ಹಿಂದಿರುಗಿದನು.

ತತಶ್ಚ ಪಾಂಡವಾಃ ಸರ್ವೇ ದ್ರೌಪದ್ಯಾ ಸಹ ಭಾರ್ಯಯಾ |
ದ್ವಾರಕಾಯಾ ವಿನಿರ್ಗತ್ಯ ವಿಚೇರುಸ್ತೇ ವನೇ ವನೇ || ೩ ||

ಭುಕ್ತ್ವಾ ಚ ವನವಾಸಾಂತೇಽಜ್ಞಾತವಾಸಂ ತಥೈವ ಚ |
ವಿರಾಟನಗರೇ ಸರ್ವೇ ಸಸೈನ್ಯಾಸ್ತೇಽಭವನ್ನೃಪ || ೪ ||

ತತಶ್ಚ ಕೌರವಾಃ ಸರ್ವೇ ಶ್ರೀಕೃಷ್ಣೇನಾಪಿ ಪ್ರಾರ್ಥಿತಾಃ |
ನ ತೇಷಾಂ ಪ್ರದದೂ ರಾಜ್ಯಮರ್ಧಾರ್ಧಂ ಚ ತದರ್ಧಕಂ || ೫ ||

ಪಾಂಡವಾನಾಂ ಕೌರವಾಣಾಂ ಜ್ಞಾತ್ವಾ ಯುದ್ಧಂ ಜನಾರ್ದನಃ |
ನಿರಾಯುಧೋಽಭೂದ್ಯಾತ್ರಾಯಾಂ ಬಲೋಽಹನ್ಬಲ್ವಲಂ ಬಲೀ || ೬ ||

---

೩. ಅನಂತರ ಪಾಂಡವರೆಲ್ಲರೂ ತಮ್ಮ ಪತ್ನಿಯಾದ ದ್ರೌಪದಿಯೊಂದಿಗೆ ದ್ವಾರಕೆಯಿಂದ ಹೊರಟು ಮೊದಲಿನಂತೆ ದ್ವೈತಕಾಮ್ಯಕಾದಿ ವನಪ್ರದೇಶಗಳಲ್ಲಿ ಸಂಚರಿಸತೊಡಗಿದರು.

೪. ಓ ರಾಜೇಂದ್ರ! ಈ ರೀತಿಯಾಗಿ ಆ ಪಾಂಡವರು ನಿಯಮಿತವಾಗಿದ್ದಷ್ಟು ಕಾಲ ಅರಣ್ಯವಾಸವನ್ನು ಮುಗಿಸಿದನಂತರ ಯಾರಿಗೂ ತಿಳಿಯದಂತೆ ಒಂದು ವರ್ಷಕಾಲ ವಿರಾಟನ ರಾಜಧಾನಿಯಲ್ಲಿ ಅಜ್ಞಾತವಾಸವನ್ನನುಭವಿಸಿ ತಮ್ಮ ಸೇನೆಗಳನ್ನು ಸನ್ನಾಹಮಾಡಿಕೊಳ್ಳತೊಡಗಿದರು.

೫. ಆಗ (ಯುದ್ಧವಾಗದಂತೆ ಮಾಡಬೇಕೆಂಬಾಸೆಯಿಂದ) ಶ್ರೀಕೃಷ್ಣನು ತಮ್ಮನ್ನು ಪ್ರಾರ್ಥಿಸಿದರೂ ಕೂಡ ಆ ಕೌರವರು ಪಾಂಡವರಿಗೆ ತಮ್ಮ ರಾಜ್ಯದಲ್ಲಿ ಅರ್ಧ ಭಾಗವನ್ನೇ ಏಕೆ? ಅದರ ಅರ್ಧಭಾಗವನ್ನೂ ಕೂಡ ಬಿಟ್ಟುಕೊಡಲು ಒಪ್ಪದೆ ಹೋದರು.

೬. ಆಗ ಸಂಧಿಗೆ ಬಂದಿದ್ದ ಶ್ರೀಕೃಷ್ಣನು ಕೌರವಪಾಂಡವರಿಗೆ ಯುದ್ಧವು ಅನಿವಾರ್ಯವೆಂದು ಬಗೆದು ತಾನು ಯಾವ ಆಯುಧವನ್ನೂ ಹಿಡಿಯಲಾರೆನೆಂದು ನಿಶ್ಚಯಿಸಿದನು. ಅದೇ ಸಮಯದಲ್ಲಿ ಬಲರಾಮನು ತೀರ್ಥಯಾತ್ರೆಗೆ ಹೊರಟು ನೈಮಿಷಾರಣ್ಯದಲ್ಲಿ ಆ ಋಷಿಗಳಿಗೆ ಹಿಂಸೆ ಕೊಡುತ್ತಿದ್ದ ಪಲ್ವಲನೆಂಬ ದೈತ್ಯನನ್ನು ಸಂಹರಿಸಿದನು.

ತತಃ ಸರ್ವೇ ಕುರುಕ್ಷೇತ್ರೇ ಧರ್ಮಕ್ಷೇತ್ರೇ ಪ್ರವಿಶ್ಯ ಚ ।
ಕೌರವಾಃ ಪಾಂಡವಾಶ್ಚೈವ ಯುದ್ಧಂ ಚಕ್ರುಃ ಪರಸ್ಪರಂ ॥ ೭ ॥

ಜಯಃ ಕೃಷ್ಣಸ್ಯ ಕೃಪಯಾ ಪಾಂಡವಾನಾಂ ಬಭೂವ ಹ ।
ಭಾರತೇ ಚ ಮೃತಾಃ ಸರ್ವೇ ಕೌರವಾಃ ಕೃತಕಿಲ್ಬಿಷಾಃ ॥ ೮ ॥

ತತಶ್ಚ ನವವರ್ಷಾಣಿ ಧರ್ಮೋ ರಾಜ್ಯಂ ಚಕಾರ ಹ ।
ಹಯಮೇಧತ್ರಯಂ ಚಕ್ರೇ ತೇನ ಶುದ್ಧೋಽಭವನ್ನೃಪಃ ॥ ೯ ॥

ತತಃ ಕೃಷ್ಣೇಚ್ಛಯಾ ರಾಜನ್ದ್ವಾರಕಾಯಾಂ ಕಿಲೈಕದಾ ।
ಯಾದವೇಭ್ಯಶ್ಚ ಸರ್ವೇಭ್ಯೋ ವಿಪ್ರಶಾಪೋಽಭವನ್ಮಹಾನ್ ॥ ೧೦ ॥

ತತಃ ಕೃಷ್ಣಸ್ತು ಭಗವಾನ್ಪ್ರಪನ್ನಾಯೋದ್ಧವಾಯ ಚ ।
ಅಶ್ವತ್ಥೇ ಕಥಯಾಮಾಸ ಶ್ರೀಮದ್ಭಾಗವತಂ ಪರಂ ॥ ೧೧ ॥

---

೭. ಇತ್ತಲಾಗಿ ಧರ್ಮಕ್ಷೇತ್ರವೆನಿಸಿದ ಕುರುಕ್ಷೇತ್ರದಲ್ಲಿ ಕೌರವರೂ, ಪಾಂಡವರೂ ಪರಸ್ಪರವಾಗಿ ಯುದ್ಧವನ್ನು ಮಾಡತೊಡಗಿದರು

೮. ಆ ಭಾರತಯುದ್ಧದಲ್ಲಿ ಕೃಷ್ಣನ ಕೃಪೆಯಿಂದ ಪಾಂಡವರಿಗೆ ಗೆಲವುಂಟಾಯಿತು. ಪಾಪಕಾರ್ಯನಿರತರಾದ ಆ ಕೌರವರೆಲ್ಲರೂ ಮಡಿದುಹೋದರು.

೯. ಅನಂತರ ಧರ್ಮರಾಜನು ಒಂಭತ್ತು ವರ್ಷಗಳು ರಾಜ್ಯವನ್ನಾಳಿದನು. ಮೂರಾವರ್ತಿ ಅಶ್ವಮೇಧಯಾಗವನ್ನು ಮಾಡಿದನು. ಈ ಯಾಗಗಳಿಂದ ಅವನು ಬಂಧುವಧಪಾಪದಿಂದ ನಿರ್ಮುಕ್ತನಾದನು.

೧೦. ಹೇ ರಾಜೇಂದ್ರ ! ಅನಂತರ ಒಂದಾನೊಂದು ಸಮಯದಲ್ಲಿ ದ್ವಾರಕೆಯಲ್ಲಿದ್ದ ಆ ಯಾದವರಿಗೆ ಶ್ರೀಕೃಷ್ಣನ ಇಚ್ಛೆಯಂತೆ ಭಾರಿ ಬ್ರಾಹ್ಮಣ ಶಾಪವು ಒದಗಿಬಿಟ್ಟಿತು.

೧೧. ಬಳಿಕ ಆ ಭಗವಂತನು ತನ್ನನ್ನೇ ನಂಬಿ ಮರೆಹೊಕ್ಕ ಉದ್ಧವನಿಗೆ ಅಶ್ವತ್ಥವೃಕ್ಷದ ಅಡಿಯಲ್ಲಿ ಶ್ರೇಷ್ಠವಾದ ಭಾಗವತವನ್ನು ಉಪದೇಶಿಸಿದನು. (ಶ್ರವಣ ಮಾಡಿಸಿದನು).

ತತೋ ಬಭೂವ ಸಂಗ್ರಾಮೋ ಯಾದವಾನಾಂ ಪರಸ್ಪರಂ ।
ನಿಹತಾಸ್ತೇ ಪ್ರಭಾಸೇ ವೈ ಶಾಸ್ತ್ರೈರ್ನಾನಾವಿಧೈರಪಿ ॥ ೧೨ ॥

ಬಲಃ ಶರೀರಂ ಮಾನುಷ್ಯಂ ತ್ಯಕ್ತ್ವಾ ಧಾಮ ಜಗಾಮ ಹ ।
ದೇವಾಂಸ್ತತ್ರಾಗತಾನ್ದೃಷ್ಟ್ವಾ ಹರಿರಂತರಧೀಯತ ॥ ೧೩ ॥

ವ್ರಜೇ ಗತ್ವಾ ಹರಿರ್ನಂದಂ ಯಶೋದಾಂ ರಾಧಿಕಾಂ ತಥಾ ।
ಗೋಪಾನ್ಗೋಪೀರ್ಮಿಲಿತ್ವಾಹ ಪ್ರೇಮ್ಣಾ ಪ್ರೇಮ್ಣೋ ಪ್ರಿಯಾನ್ಸ್ವಕಾನ್ ॥

॥ ಶ್ರೀಕೃಷ್ಣ ಉವಾಚ ॥

ಗಚ್ಛ ನಂದ ಯಶೋದೇ ತ್ವಂ ಪುತ್ರವೃದ್ಧಿಂ ವಿಹಾಯ ಚ ।
ಗೋಲೋಕಂ ಪರಮಂ ಧಾಮ ಸಾರ್ಧಂ ಗೋಕುಲವಾಸಿಭಿಃ ॥ ೧೫ ॥

---

೧೨. ಅನಂತರ ಬ್ರಾಹ್ಮಣ ಶಾಪದಂತೆ ಯಾದವರಿಗೆ ತಮ್ಮ ತಮ್ಮಲ್ಲೇ ಹೊಡೆದಾಟವಾರಂಭವಾಗಿ ಕೊನೆಗದು ಯುದ್ಧದಲ್ಲಿ ಪರಿಣಮಿಸಿತು. ಆಗ ಆ ಯಾದವರು ವಿಧವಿಧವಾದ ಶಸ್ತ್ರಗಳನ್ನು ಧರಿಸಿ ಹೊಡೆದಾಡುತ್ತಾ ಪ್ರಭಾಸವೆಂಬಲ್ಲಿ ತಮ್ಮ ಶರೀರಗಳನ್ನೇ ತೊರೆದುಬಿಟ್ಟರು.

೧೩. ಇದಾದನಂತರ ಬಲರಾಮನು ತನ್ನ ಮಾನುಷಶರೀರವನ್ನು ತ್ಯಜಿಸಿ ನಿಜಧಾಮವನ್ನು ತೆರಳಿದನು. ಶ್ರೀಕೃಷ್ಣನೂ ಸಹ ತನ್ನ ಬಳಿಗೆ ದೇವತೆಗಳು ಬಂದುದನ್ನು ಕಂಡು ಆ ದ್ವಾರಕೆಯಿಂದ ಕಣ್ಮರೆಯಾದನು.

೧೪. ಅನಂತರ ಆ ಹರಿಯು ಗೋಕುಲಕ್ಕೆ ಹೋಗಿ ತನ್ನಲ್ಲಿಯೇ ಪ್ರೀತಿಯನ್ನಿಟ್ಟಿರುವ ನಂದ, ಯಶೋದೆಯರನ್ನೂ, ರಾಧೆಯನ್ನೂ ಗೋಪ ಗೋಪಿಯರನ್ನೂ ಕಲೆತು ತನ್ನ ಪ್ರಿಯಜನರೆನಿಸಿದ ಅವರನ್ನು ಕುರಿತು ಇಂತು ನುಡಿದನು.

೧೫. ಅಪ್ಪ, ನಂದ! ಅಮ್ಮ, ಯಶೋದೆ! ನೀವು ನನ್ನಲ್ಲಿ ಮಗನೆಂಬ ಅಭಿಮಾನವನ್ನು ಬಿಟ್ಟು ಈ ಗೋಕುಲ ನಿವಾಸಿಗಳೆಲ್ಲರೊಡನೆ ಸೇರಿ ಅತ್ಯುತ್ತಮವಾದ ಗೋಲೋಕಧಾಮವನ್ನು ಕುರಿತು ತೆರಳಿರಿ.

ಅಗ್ರೇ ಕಲಿಯುಗೋ ಘೋರಶ್ಚಾಗಮಿಷ್ಯತಿ ದುಃಖದಃ ।
ಯಸ್ಮಿನ್ಸ್ಕೈ ಪಾಪಿನೋ ಮರ್ತ್ಯಾ ಭವಿಷ್ಯಂತಿ ನ ಸಂಶಯಃ ॥ ೧೬ ॥

ಸ್ತ್ರೀಪುಂಸೋರ್ನಿಯಮೋ ನಾಸ್ತಿ ವರ್ಣಾನಾಂ ಚ ತಥೈವ ಚ ।
ತಸ್ಮಾದ್ಗಚ್ಛಾಶು ಮದ್ಧಾಮ ಜರಾಮೃತ್ಯುಹರಂ ಪರಂ ॥ ೧೭ ॥

ಇತಿ ಬ್ರುವತಿ ಶ್ರೀಕೃಷ್ಣೇ ರಥಂ ಚ ಪರಮಾದ್ಭುತಂ ।
ಪಂಚಯೋಜನವಿಸ್ತೀರ್ಣಂ ಪಂಚಯೋಜನಮೂರ್ಧ್ವಗಂ ॥ ೧೮ ॥

ವಜ್ರನಿರ್ಮಲಸಂಕಾಶಂ ಮುಕ್ತಾರತ್ನವಿಭೂಷಿತಂ ।
ಮಂದಿರೈರ್ನವಲಕ್ಷೈಶ್ಚ ದೀಪೈರ್ಮಣಿಮಯೈರ್ಯುತಂ ॥ ೧೯ ॥

---

೧೬. ಇನ್ನು ಮುಂದೆ ಕಷ್ಟದಾಯಕವಾದ ಘೋರವಾದ ಕಲಿಯುಗವು ಪ್ರಾಪ್ತವಾಗುವುದು. ಆ ಸಮಯದಲ್ಲಿ ಮಾನವರೆಲ್ಲರೂ ಪಾಪಕಾರ್ಯಗಳಲ್ಲೇ ತೊಡಗುವರು.

೧೭. ಆಗ ಗಂಡಸರಿಗಾಗಲಿ, ಹೆಂಗಸರಿಗಾಗಲಿ, ಯಾವೊಂದು ನಿಯಮವೂ ಇಲ್ಲದೆಯೇ ಹೋಗುವುದು ವರ್ಣವ್ಯವಸ್ಥೆಯು ತಪ್ಪಿಹೋಗುವುದು. ಆದುದರಿಂದ ಬೇಗನೆ ನೀವು ಜರಾ ಮೃತ್ಯು (ಮುಪ್ಪು ಸಾವು) ಗಳನ್ನು ಪರಿಹರಿಸುವಂತಹ ಪವಿತ್ರವಾದ ನನ್ನ ನಿಜಲೋಕವಾದ ಗೋಲೋಕವನ್ನು ಹೋಗಿ ಸೇರಿರಿ.

೧೮. ಹೀಗೆಂದು ಶ್ರೀಕೃಷ್ಣನು ನುಡಿಯುವಷ್ಟರಲ್ಲಿಯೇ ಐದು ಯೋಜನ ಅಗಲ, ಐದು ಯೋಜನ ಎತ್ತರವಿರುವ ಆಶ್ಚರ್ಯಕರವಾದ ದಿವ್ಯವಾದ ರಥವೊಂದು ಅಲ್ಲಿಗೆ ಬಂದಿತು.

೧೯. ಆ ದಿವ್ಯ ರಥವು ವಜ್ರಗಳಂತೆ ನಿರ್ಮಲವಾಗಿ ತಳತಳನೆ ಹೊಳೆಯುತ್ತಾ ಮುತ್ತುಗಳಿಂದಲೂ, ರತ್ನಗಳಿಂದಲೂ ರಮಣೀಯವಾಗಿ ಅಲಂಕರಿಸಲ್ಪಟ್ಟಿತ್ತು. ಅವರಲ್ಲಿ ಮಣಿಮಯವಾದ ದೀಪಗಳು ಬೆಳಗುತ್ತಿದ್ದುವು.

ಸಹಸ್ರದ್ವಯಚಕ್ರಂ ಚ ಸಹಸ್ರದ್ವಯಘೋಟಕಂ ।
ಸೂಕ್ಷ್ಮವಸ್ತ್ರಚ್ಛಾದಿತಂ ಚ ಸಖೀಕೋಟಿಭಿರಾವೃತಂ ॥ ೨೦ ॥
ಗೋಲೋಕಾದಾಗತಂ ಗೋಪಾ ದದೃಶುಸ್ತೇ ಮುದಾನ್ವಿತಾಃ ।
ಏತಸ್ಮಿನ್ನಂತರೇ ತತ್ರ ಕೃಷ್ಣದೇಹಾದ್ವಿನಿರ್ಗತಃ ॥ ೨೧ ॥
ದೇವಶ್ಚತುರ್ಭುಜೋ ರಾಜನ್ಕೋಟಿಮನ್ಮಥಸನ್ನಿಭಃ ।
ಶಂಖಚಕ್ರಧರಃ ಶ್ರೀಮಾನ್ಲಕ್ಷ್ಮ್ಯಾ ಸಾರ್ಧಂ ಜಗತ್ಪತಿಃ ॥ ೨೨ ॥
ಕ್ಷೀರೋದಂ ಪ್ರಯಯೌ ಶೀಘ್ರಂ ರಥಮಾರುಹ್ಯ ಸುಂದರಂ ।
ತಥಾ ಚ ವಿಷ್ಣುರೂಪೇಣ ಶ್ರೀಕೃಷ್ಣೋ ಭಗವಾನ್ ಹರಿಃ ॥ ೨೩ ॥
ಲಕ್ಷ್ಮ್ಯಾ ಗರುಡಮಾರುಹ್ಯ ವೈಕುಂಠಂ ಪ್ರಯಯೌ ನೃಪ ।
ತತೋ ಭೂತ್ವಾ ಹರಿಃ ಕೃಷ್ಣೋ ನರನಾರಾಯಣಾವೃಷೀ ॥ ೨೪ ॥

---

೨೦. ಅದಕ್ಕೆ ಎರಡುಸಾವಿರ ಚಕ್ರಗಳೂ, ಎರಡುಸಾವಿರ ಕುದುರೆಗಳೂ ಇದ್ದುವು. ಆ ರಥಕ್ಕೆ ತೆಳುವಾದ (ನವಿರು) ಬಟ್ಟೆಯನ್ನು ಹೊದ್ದಿಸಿದ್ದರು. ಮತ್ತು ಸೇವೆಗಾಗಿ ಕೋಟಿಗಟ್ಟಲೆ ಸಖಿಯರು (ಪರಿಚಾರಿಣಿಯರು) ಸಿದ್ಧವಾಗಿದ್ದರು.

೨೧. ಈರೀತಿಯಾಗಿ ಗೋಲೋಕದಿಂದ ಬಂದಿದ್ದ ಆ ದಿವ್ಯರಥವನ್ನು ಆ ಗೋಪರೆಲ್ಲರೂ ಸಂತೋಷದಿಂದ ಕಂಡರು. ಈ ಮಧ್ಯದಲ್ಲಿ ಶ್ರೀಕೃಷ್ಣನ ದೇಹದಿಂದ ದಿವ್ಯವಾದ ಆಕೃತಿಯೊಂದು ಹೊರಹೊರಟಿತು.

೨೨. ಆ ಮೂರ್ತಿಗೆ ನಾಲ್ಕು ಕೈಗಳು! ಕೋಟಿ ಮನ್ಮಥರಿಗೆ ಎಣೆಯೆನಿಸಿದ ಸೌಂದರ್ಯ! ಕೈಗಳಲ್ಲಿ ಶಂಖ ಚಕ್ರಗಳು! ಇಂತಹ ರೂಪದಿಂದ ಒಪ್ಪುವ ಆ ಜಗತ್ಪ್ರಭುವು ಲಕ್ಷ್ಮಿಯೊಡನೆ—

೨೩-೨೪. ಬೇಗನೆ ದಿವ್ಯವಾದ ರಥವೊಂದನ್ನೇರಿ ಕ್ಷೀರಸಮುದ್ರಕ್ಕೆ ತೆರಳಿದನು. ಅದೇರೀತಿ ಭಗವಂತನಾದ ಆ ಶ್ರೀಕೃಷ್ಣನು ವಿಷ್ಣುವಿನ ರೂಪದಿಂದ ಲಕ್ಷ್ಮಿಯೊಡನೆ ಗರುಡವಾಹನನಾಗಿ ವೈಕುಂಠವನ್ನು ಕುರಿತು ತೆರಳಿದನು. ಅನಂತರ ಆ ಶ್ರೀಹರಿ ಸ್ವರೂಪನಾದ ಕೃಷ್ಣನು ನರ, ನಾರಾಯಣರೆಂಬ ಋಷಿಗಳ ರೂಪದಿಂದ—

ಕಲ್ಯಾಣಾರ್ಥಂ ನರಾಣಾಂ ಚ ಪ್ರಯಯೌ ಬದ್ರಿಕಾಶ್ರಮಂ ।
ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ರಾಧಯಾ ಯುತಃ ॥ ೨೫ ॥

ಗೋಲೋಕಾದಾಗತಂ ಯಾನಮಾರುರೋಹ ಜಗತ್ಪತಿಃ ।
ಸರ್ವೇ ಗೋಪಾಶ್ಚ ನಂದಾದ್ಯಾ ಯಶೋದಾದ್ಯಾ ವ್ರಜಸ್ತ್ರಿಯಃ ॥ ೨೬ ॥

ತ್ಯಕ್ತ್ವಾ ತತ್ರ ಶರೀರಾಣಿ ದಿವ್ಯದೇಹಾಶ್ಚ ತೇಽಭವನ್ ।
ಸ್ಥಾಪಯಿತ್ವಾ ರಥೇ ದಿವ್ಯೇ ನಂದಾದೀನ್ಭಗವಾನ್ ಹರಿಃ ॥ ೨೭ ॥

ಗೋಲಕಂ ಪ್ರಯಯೌ ಶೀಘ್ರಂ ಗೋಪಾಲೋ ಗೋಕುಲಾನ್ವಿತಃ ।
ಬ್ರಹ್ಮಾಂಡೇಭ್ಯೋ ಬಹಿರ್ಗತ್ವಾ ದದರ್ಶ ವಿರಜಾಂ ನದೀಂ ॥ ೨೮ ॥

ಶೇಷೋತ್ಸಂಗೇ ಮಹಾಲೋಕಂ ಸುಖದಂ ದುಃಖನಾಶನಂ ।
ದೃಷ್ಟ್ವಾ ರಥಾತ್ಸಮುತ್ತೀರ್ಯ ಸಾರ್ಧಂ ಗೋಕುಲವಾಸಿಭಿಃ ॥ ೨೯ ॥

೨೫-೨೬. ಜನಗತ್ತಿನಲ್ಲಿರುವ ಜೀವಿಗಳ ಮಂಗಳದ ಸಲುವಾಗಿ ಬದರಿ ಕಾಶ್ರಮವನ್ನು ಕುರಿತು ಹೊರಟನು. ಬಳಿಕ ಪರಿಪೂರ್ಣ ಸ್ವರೂಪನಾದ ಆ ಶ್ರೀಕೃಷ್ಣನು ರಾಧೆಯೊಡನೆ ಗೋಲೋಕದಿಂದ ಬಂದಿದ್ದ ಆ ದಿವ್ಯರಥವನ್ನೇರಿ ಕುಳಿತುದನ್ನು ನೋಡಿ, ಆಗ ನಂದನೇ ಮೊದಲಾದ ಗೋಪಾಲಕರೂ, ಯಶೋದೆ ಮೊದಲಾದ ಗೋಪಾಂಗನೆಯರೂ—

೨೭. ತಮ್ಮ ತಮ್ಮ ಮಾನವ ಶರೀರಗಳನ್ನು ತ್ಯಜಿಸಿ ದಿವ್ಯವಾದ ದೇಹಗಳನ್ನು ಧರಿಸಿದರು. ಅನಂತರ ಆ ಭಗವಂತನಾದ ಹರಿಯು ಆ ನಂದಾದಿಗಳನ್ನು ಆ ದಿವ್ಯರಥದಲ್ಲಿ ಕುಳ್ಳಿರಿಸಿಕೊಂಡನು.

೨೮. ಹೀಗೆ ಗೋಕುಲದ ನಿವಾಸಿಗಳೆಲ್ಲರೊಡನೆ ಕೂಡಿ ಆ ಗೋಪಾಲನು ಬೇಗನೆ ಅಲ್ಲಿಂದ ಹೊರಟು ಬ್ರಹ್ಮಾಂಡಗಳಿಗಿಂತಲೂ ಆಚೆಗೆ ತೆರಳಿ ಅಲ್ಲಿ ವಿರಜಾನದಿಯನ್ನು ಕಂಡನು.

೨೯-೩೦. ಅದರಾಚೆಗೆ ಆದಿಶೇಷನ ಶರೀರದಮೇಲೆ ಧರಿಸಲ್ಪಟ್ಟಿರುವ ಸುಖದಾಯಕವೂ, ಕ್ಲೇಶನಾಶಕವೂ ಆದ ಮಹಾ ದಿವ್ಯಲೋಕವನ್ನು ಕಂಡು

ವಿನೇಶ ರಾಧಯಾ ಕೃಷ್ಣೋ ಪಶ್ಯನ್ನ್ಯಗ್ರೋಧಮಕ್ಷಯಂ ।
ಶತಶೃಂಗಂ ಗಿರಿವರಂ ತಥಾ ಶ್ರೀರಾಸಮಂಡಲಂ ॥ ೩೦ ॥

ತತೋ ಯಯೌ ಕಿಯದ್ದ್ವಾರಂ ಶ್ರೀಮದ್ವೃಂದಾವನಂ ವನಂ ।
ವನೈರ್ದ್ವಾದಶಭಿರ್ಯುಕ್ತಂ ದ್ರುಮೈಃ ಕಾಮದುಘೈರ್ವೃತಂ ॥ ೩೧ ॥

ನದ್ಯಾ ಯಮುನಯಾ ಯುಕ್ತಂ ವಸಂತಾನಿಲಮಂಡಿತಂ ।
ಪುಷ್ಪಕುಂಜನಿಕುಂಜಂ ಚ ಗೋಪೀಗೋಪಜನೈರ್ವೃತಂ ॥ ೩೨ ॥

ತದಾ ಜಯಜಯಾರಾವಃ ಶ್ರೀಗೋಲೋಕೇ ಬಭೂವ ಹ ।
ಶೂನ್ಯೀಭೂತೇ ಪುರಾ ಧಾಮ್ನಿ ಶ್ರೀಕೃಷ್ಣೇ ಚ ಸಮಾಗತೇ ॥ ೩೩ ॥

ತತಶ್ಚ ಯದುಪತ್ನ್ಯಶ್ಚ ಚಿತಾಮಾರುಹ್ಯ ದುಃಖಿತಃ ।
ಪತಿಲೋಕಂ ಯಯುಃ ಸರ್ವಾ ದೇವಕ್ಯಾದ್ಯಾಶ್ಚ ಯೋಷಿತಃ ॥ ೩೪ ॥

ಆ ವಿರಾಜನದಿಯನ್ನು ಗೋಕುಲ ನಿವಾಸಿಗಳೊಡನೆ ದಾಟಿ ಅಕ್ಷಯವಟವನ್ನು ನೋಡುತ್ತಾ, ಮುಂದೆ ಹೊರಟು ಶತಶೃಂಗವೆಂಬ (ಗೋವರ್ಧನ) ಗಿರಿಶ್ರೇಷ್ಠವನ್ನೂ, ರಾಸಮಂಡಲವನ್ನೂ ವೀಕ್ಷಿಸುತ್ತಾ ಕೆಲವೊಂದು ಬಾಗಿಲುಗಳನ್ನು ದಾಟಿ ಶ್ರೀವೃಂದಾವನವೆಂಬ ವನವನ್ನು ಪ್ರವೇಶಿಸಿದನು. ಆ ವೃಂದಾವನಕ್ಕೆ ಸೇರಿದಂತೆ ಹನ್ನೆರಡು ವನಗಳಿರುವವು. ಅವುಗಳಲ್ಲೆಲ್ಲಾ ಕೇಳಿದುದನ್ನು ಕೊಡುವಂತಹ ಕಲ್ಪವೃಕ್ಷಗಳು ನಿಬಿಡವಾಗಿ ಬೆಳೆದಿರುವುವು.

೩೨. ಆ ವನಗಳ ಬಳಿ ಯಮುನಾನದಿಯು ಪ್ರವಹಿಸುತ್ತಿರುವುದು. ಅಲ್ಲಿ ವಸಂತಋತುವಿನಲ್ಲಿರುವಂತೆ ಸರ್ವದಾ ಮಂದಾನಿಲವು ಬೀಸುತ್ತಿರುವುದು. ಮತ್ತು ಅಲ್ಲಲ್ಲಿ ಪುಷ್ಪಗಳಿಂದ ಕಂಗೊಳಿಸುತ್ತಿರುವ ಕುಂಜ, ನಿಕುಂಜಗಳು ಹೇರಳವಾಗಿರುವುವು. ಅಲ್ಲದೆ ಗೋಪ, ಗೋಪಿಯರು (ಅಲ್ಲೆಲ್ಲಾ) ನೆಲಸಿರುವರು.

೩೩. ಇಂತಹ ಆ ಶ್ರೀಗೋಲೋಕವು ಇಷ್ಟು ದಿವಸಗಳವರೆಗೂ ಶೂನ್ಯಪ್ರಾಯವಾಗಿದ್ದಿತು. ಈಗ ತನ್ನ ಸ್ವಾಮಿಯಾದ ಶ್ರೀಕೃಷ್ಣನು ಬಂದು ಸೇರುತ್ತಲೇ ಹರ್ಷಸೂಚಕವಾದ ಜಯ ಜಯ ಧ್ವನಿಗಳಿಂದ ತುಂಬಿಹೋಯಿತು.

೩೪. ಇತ್ತಲಾಗಿ ಪರಸ್ಪರ ಹೊಡೆದಾಡಿ ಮಡಿದುಹೋದ ಯಾದವರ ಪತ್ನಿಯರೂ, ದೇವಕಿ ಮೊದಲಾದ ಇತರ ಸ್ತ್ರೀಯರೂ ಬಹು ದುಃಖಕ್ಕೀಡಾಗಿ

ಬಂಧೂನಾಂ ನಷ್ಟಗೋತ್ರಾಣಾಂ ಚಕಾರ ಸಾಂಪರಾಯಿಕಂ ।
ಗೀತಾಜ್ಞಾನೇನ ಸ್ವಾತ್ಮಾನಂ ಶಾಂತಯಿತ್ವಾ ಸ ದುಃಖಿತಃ ॥ ೩೫ ॥

ಅರ್ಜುನಃ ಸ್ವಪುರಂ ಗತ್ವಾ ತಮುವಾಚ ಯುಧಿಷ್ಠಿರಂ ।
ಸ ರಾಜಾ ಭ್ರಾತೃಭಿಃ ಸಾರ್ಧಂ ಯಯೌ ಸ್ವರ್ಗಂ ಚ ಭಾರ್ಯಯಾ ॥೩೬॥

ಪ್ಲಾವಯದ್ದ್ವಾರಕಾಂ ಸಿಂಧೂ ರೈವತೇನ ಸಮನ್ವಿತಾಂ ।
ವಿಹಾಯ ನೃಪಶಾರ್ದೂಲ ಗೇಹಂ ಶ್ರೀರುಕ್ಮಿಣೀಪತೇಃ ॥ ೩೭ ॥

ಅದ್ಯಾಪಿ ಶ್ರೂಯತೇ ಘೋಷೋ ದ್ವಾರ್ವತ್ಯಾಮರ್ಣವೇ ಹರೇಃ ।
ಅವಿದ್ಯೋ ವಾ ಸವಿದ್ಯೋ ವಾ ಬ್ರಾಹ್ಮಣೋ ಮಾಮಕೀ ತನುಃ ॥ ೩೮ ॥

ಚಿಂತಾಗ್ನಿಯನ್ನು ಹೊತ್ತಿಸಿ ಅದರಲ್ಲಿ ತಮ್ಮ ದೇಹವನ್ನು ನೀಗಿ ತಂತಮ್ಮ ಪತಿಗಳ ಲೋಕವನ್ನು ಸೇರಿದರು.

೩೫. ಆಗ ಅರ್ಜುನನು ಬಂಧುವಿಯೋಗದಿಂದ ತನಗೆ ಅಮಿತವಾದ ದುಃಖವುಂಟಾಗಿದ್ದರೂ ಶ್ರೀಕೃಷ್ಣನು ಉಪದೇಶಿಸಿದ ಗೀತೆಯನ್ನು ಚೆನ್ನಾಗಿ ಅರಿತವನಾದುದರಿಂದ ವಿವೇಕವನ್ನು ತಾಳಿ ವ್ಯಥೆಪಡದೆ ಮುಂದಿನ ಸಂತಾನವೇ ಉಳಿಯದಂತೆ ಮಡಿದುಹೋಗಿದ್ದ ಆ ಯಾದವರಿಗೆ ಪಾರಲೌಕಿಕ ಕ್ರಿಯೆಗಳನ್ನು ನೆರವೇರಿಸಿದನು.

೩೬. ಅನಂತರ ತನ್ನ ಊರಿಗೆ ತೆರಳಿ ತನ್ನಣ್ಣನಾದ ಯುಧಿಷ್ಠಿರನಿಗೆ ಈ ಸಂಗತಿಯೆಲ್ಲವನ್ನೂ ತಿಳಿಸಿದನು. ಆಗ ಆ ಧರ್ಮಪುತ್ರನು ತನ್ನ ಸೋದರರೊಡನೆಯೂ, ಭಾರ್ಯೆಯೊಡನೆಯೂ ಕೂಡಿ ಸ್ವರ್ಗಕ್ಕೆ ಮಹಾಪ್ರಸ್ಥಾನವನ್ನು ಬೆಳಸಿದನು.

೩೭. ಇತ್ತಲಾಗಿ ಸಮುದ್ರವು ಉಕ್ಕತೊಡಗಿ ಕೃಷ್ಣನ ನಿವಾಸವಾಗಿದ್ದ ಅರಮನೆಯೊಂದನ್ನು ಬಿಟ್ಟು ಉಳಿದ ದ್ವಾರಕಾನಗರಿಯೆಲ್ಲವನ್ನೂ, ರೈವತನೆಂಬ ರಾಜನನ್ನೂ ತನ್ನಲ್ಲಿ ಮುಳುಗಿಸಿಕೊಂಡುಬಿಟ್ಟಿತು.

೩೮. ಓ ರಾಜೇಂದ್ರ ! ಈಗಲೂ ಕೂಡ ಸಮುದ್ರದಲ್ಲಿ ಮುಳುಗಿಹೋದ ಆ ದ್ವಾರಾವತೀ ಪ್ರದೇಶದಲ್ಲಿ " ವಿದ್ಯಾವಂತನೇ (ಜ್ಞಾನಿ) ಆಗಿರಲಿ, ಅಥವಾ

ವಿಷ್ಣುಸ್ವಾಮೀ ರವೇರಂಶಃ ಕಲೇರಾದೌ ಮಹಾರ್ಣವೇ ।
ಗತ್ವಾ ನೀತ್ವಾ ಹರೇರರ್ಚಾಂ ದ್ವಾರವತ್ಯಾಂ ಸ್ಥಾಪಯಿಷ್ಯತಿ ॥ ೩೯ ॥
ತದ್ವಾರಕೇಶಂ ಪಶ್ಯಂತಿ ಮನುಜಾ ಯೇ ಕಲೌಯುಗೇ ।
ಸರ್ವೇ ಕೃತಾರ್ಥತಾಂ ಯಾಂತಿ ತತ್ರ ಗತ್ವಾ ನೃಪೇಶ್ವರ ॥ ೪೦ ॥
ಯಃ ಶೃಣೋತಿ ಚರಿತ್ರಂ ವೈ ಗೋಲೋಕಾರೋಹಣಂ ಹರೇಃ ।
ಮುಕ್ತಿಂ ಯದೂನಾಂ ಗೋಪಾನಾಂ ಸರ್ವಪಾಪೈಃ ಪ್ರಮುಚ್ಯತೇ ॥ ೪೧ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರೌ ರಾಧಾಕೃಷ್ಣಯೋರ್ಗೋಲೋಕಾರೋಹಣಂ
ನಾಮ ಷಷ್ಟಿತಮೋಽಧ್ಯಾಯಃ

ವಿದ್ಯೆಯಿಲ್ಲದಿರಲಿ, ಬ್ರಾಹ್ಮಣನಾದವನು ತನ್ನ ಶರೀರವು" ಎಂಬ ಘೋಷವು (ಶಬ್ದವು) ಕೇಳಿಬರುತ್ತಿರುವುದು,

೩೯. ಕಲಿಯುಗದ ಆದಿಯಲ್ಲಿ ವಿಷ್ಣುಸ್ವಾಮಿಯೆಂಬ ಸೂರ್ಯಾಂಶದಿಂದ ಅವತರಿಸಿದ ಬ್ರಾಹ್ಮಣನೊಬ್ಬನು ಆ ಮಹಾಸಮುದ್ರದ ಬಳಿಗೆ ಹೋಗಿ ಅಳಿಮುಳಿದ ಆ ದ್ವಾರಾವತಿಯ ಮಂದಿರದಲ್ಲಿ ಶ್ರೀಹರಿಯನ್ನು ಪ್ರತಿಷ್ಠಿಸುವನು.

೪೦. ಆ ಕಲಿಯುಗದಲ್ಲಿ ಯಾವ ಮಾನವರು ಅಲ್ಲಿಗೆ ಹೋಗಿ ಆ ದ್ವಾರಕಾಧೀಶನನ್ನು ಸಂದರ್ಶಿಸುವರೋ ಅವರೆಲ್ಲರೂ ಕೃತಾರ್ಥತೆಯನ್ನು ಪಡೆಯುವರು.

೪೧. ಯಾವ ಪುರುಷನು ಶ್ರೀಹರಿಯು ಗೋಲೋಕವನ್ನು ಸೇರಿದ ವೃತ್ತಾಂತವನ್ನೂ, ಗೋಪರಿಗೂ ಮುಕ್ತಿಯು ದೊರೆತ ಸಂಗತಿಯನ್ನೂ ಒಳಗೊಂಡ ಈ ಚರಿತ್ರವನ್ನು ಆಲಿಸುವನೋ ಆತನು ಸಕಲಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ರಾಧಾಕೃಷ್ಣರು ಗೋಲೋಕವನ್ನು ಸೇರಿದರೆಂಬ
ಅರವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕಷಷ್ಟಿತಮೋಽಧ್ಯಾಯಃ

॥ ವಜ್ರನಾಭಿರುವಾಚ ॥

ಬ್ರಹ್ಮನ್ನಾರಾಯಣಃ ಕೃಷ್ಣೋ ಭಗವಾನ್ ಪ್ರಕೃತೇಃ ಪರಃ ।
ತಸ್ಯ ರೂಪಂ ಕಥಂ ಶ್ಯಾಮಂ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧ ॥

ತ್ವಾದೃಶಾ ಮುನಯೋ ಬ್ರಹ್ಮನ್ ಜಾನಂತಿ ಚರಿತಂ ಹರೇಃ ।
ತಥಾ ಕೃಷ್ಣಸ್ಯ ದೇವಸ್ಯ ನ ವಯಂ ಕರ್ಮಮೋಹಿತಾಃ ॥ ೨ ॥

ಅರವತ್ತೊಂದನೆಯ ಅಧ್ಯಾಯವು

೧. ಇಂತು ನುಡಿದ ಗರ್ಗಾಚಾರ್ಯನ ಮಾತನ್ನು ಕೇಳಿದ ಆ ವಜ್ರನಾಭಿ ರಾಜನು ಆತನನ್ನು ಕುರಿತು " ಓ ಬ್ರಾಹ್ಮಣೋತ್ತಮಾ ! ಆ ಭಗವಂತನಾದ ಶ್ರೀಕೃಷ್ಣನು ಪ್ರಕೃತಿಗಿಂತಲೂ ಪರ (ಶ್ರೇಷ್ಠ) ನೆನಿಸಿದ ಸಾಕ್ಷಾನ್ನಾರಾಯಣನೇ ಅಲ್ಲವೇ? ಆತನ ರೂಪವು ಶ್ಯಾಮಲವಾಗಿರಲು (ಎಳೆಯ ಕಪ್ಪು) ಕಾರಣವೇನು ಎಂಬುದನ್ನು ತಿಳಿಸು.

೨. ಓ ಮುನಿವರ್ಯ ! ನಿನ್ನಂತಹವರು ಆ ಶ್ರೀಹರಿಯ ದಿವ್ಯ ಚರಿತ್ರವನ್ನು ಅರಿತಿರುವರು. ಆದರೆ ಶ್ರೀಕೃಷ್ಣನ ಚರಿತ್ರವನ್ನು ನೀವು ತಿಳಿದಿರುವಂತೆ ಕರ್ಮವಶರಾಗಿ ಅಜ್ಞಾನಕ್ಕೀಡಾಗಿರುವ ನಾವು ತಿಳಿಯಲಾರೆವು " ಎಂದನು.

॥ ಸೂತ ಉವಾಚ ॥

ಇತ್ಯಾಕರ್ಣ್ಯ ವಚಸ್ತೇನ ಸಂಸ್ತುತಃ ಸ ಮುನಿರ್ಮನೇ ।
ತತ್ತ್ವಜ್ಞಾನಾಯ ತತ್ತ್ವಜ್ಞಃ ಕರುಣಃ ಪ್ರತ್ಯಭಾಷತ ॥ ೩ ॥

॥ ಗರ್ಗ ಉವಾಚ ॥

ಶ್ಯಾಮಂ ತು ಶೃಂಗಾರರಸಸ್ಯ ರೂಪಂ
ಶ್ರೀಕೃಷ್ಣದೈವಂ ಕಥಿತಂ ಮುನೀಂದ್ರೈಃ ।
ಲಾವಣ್ಯಸಂಘಾಚ್ಚ ತಥೋಜ್ಜ್ವಲತ್ವಾ-
ಚ್ಛ್ಯಾಮಂ ಸುರೂಪಂ ಹಿ ತಥಾ ಹರೇಶ್ಚ ॥ ೪ ॥

ಯಥಾ ದೂರತೋ ದೃಶ್ಯತೇ ಶ್ಯಾಮರೂಪಂ
ಘಟಾಯಾಸ್ತಥೇದಂ ನದಸ್ಯಾಪಿ ಗರ್ತೇ ।
ಯಥಾಕಾಶರೂಪಂ ಮಹಚ್ಛ್ಯಾಮಲಂ ವಾ
ಜಲಂ ಚಾಂಬರಂ ಚೋಜ್ಜ್ವಲಂ ನಾಪಿ ಕೃಷ್ಣಂ ॥ ೫ ॥

---

೩. ಎಲೈ ಶೌನಕಮಹರ್ಷಿಯೇ! ಈರೀತಿಯಾಗಿ ವಜ್ರನಾಭಿರಾಜನಿಂದ ಪ್ರಾರ್ಥಿಸಲ್ಪಟ್ಟ ಆ ಗರ್ಗಮಹರ್ಷಿಯು ಆತನ ಮೇಲಿನ ಕನಿಕರದಿಂದ ತತ್ತ್ವಾಂಶವನ್ನು ತಿಳಿಸುವಸಲುವಾಗಿ ಇಂತು ನುಡಿದನು.

೪. “ಓ ರಾಜೇಂದ್ರ! ಆಲಿಸು. ಪ್ರಾಜ್ಞರಾದವರು ಶೃಂಗಾರರಸವನ್ನು ಶ್ಯಾಮವರ್ಣವುಳ್ಳದುದೆಂದು ಹೇಳುವರು. ಆ ರಸಕ್ಕೆ ಶ್ರೀಕೃಷ್ಣನೇ ಅಧಿದೈವವು. ಆ ರಸದಂತೆಯೇ ಶ್ರೀಹರಿಯೂ ಸಹ ಲಾವಣ್ಯದಿಂದ ಮೆರೆಯುತ್ತಿರುವುದರಿಂದಲೂ, ಉಜ್ಜ್ವಲವಾಗಿರುವುದರಿಂದಲೂ (ಆತನು) ರೂಪದಲ್ಲಿ ಶ್ಯಾಮಲನಾಗಿ ತೋರುವನು.

೫. . ಯಾವರೀತಿ ದೂರದಲ್ಲಿ ಆನೆಯ ಹಿಂಡು ಕಪ್ಪಾಗಿ ಕಾಣುವುದೋ ಆಳವಾಗಿರುವ ಹೊಳೆಯ ಮಡುವಿನಲ್ಲಿ ಇಂತಕ್ಕ ನೀರು ಯಾವರೀತಿ ಕಪ್ಪಾಗಿ ಕಂಗೊಳಿಸುವುದೋ ಯಾವರೀತಿ ಆಕಾಶವು ಕಪ್ಪು ಬಣ್ಣದಿಂದ ತೋರುವುದೋ ಮತ್ತು ಆ ಆಕಾಶವೂ, ನೀರೂ ಕಪ್ಪಾಗಿದ್ದರೂ ಹಾಗೆ ಕಾಣದೆ ಯಾವರೀತಿ ಹೊಳೆಯುತ್ತಿರುವುದೋ ಅದೇರೀತಿ ಶ್ರೀಹರಿಯ ರೂಪವು ಕಪ್ಪಾಗಿ ತೋರುತ್ತಾ ಮೆರೆಯುತ್ತಿರುವುದು.

ಯಥಾ ಧೌತವಸ್ತ್ರೇ ಪರೇ ಶ್ಯಾಮಲಾ ಹಿ
ಛವಿರ್ದೃಶ್ಯತೇ ಚೈವ ಭಾವೈಃ ಪರಸ್ಯ ।
ತಥಾ ಕೋಟಿಕಂದರ್ಪಲೀಲಾಶಯತ್ವಾ-
ದ್ಧರೇಃ ಶ್ಯಾಮರೂಪಂ ತು ಸಂತೋ ವದಂತಿ ॥ ೬ ॥

॥ ವಜ್ರನಾಭಿರುವಾಚ ॥

ತವ ವಾಕ್ಯಾನ್ಮುನಿಶ್ರೇಷ್ಠ ಸಂದೇಹಶ್ಚ ಗತೋ ಮಮ ।
ಅಗ್ರೇ ಬ್ರಹ್ಮನ್ಕಲಿರ್ಘೋರೋ ಹ್ಯಾಗಮಿಷ್ಯತಿ ಭೂತಲೇ ॥ ೭ ॥

ತಸ್ಮಿನ್ಮರ್ತ್ಯಾಃ ಕೀದೃಶಾಶ್ಚ ಭವಿಷ್ಯಂತಿ ಮುನೇ ವದ ।
ತ್ವಂ ಜಾನಾಸಿ ಭವಿಷ್ಯಂ ಚ ತಸ್ಮಾತ್ತ್ವಾಂ ಪ್ರಣಮಾಮ್ಯಹಂ ॥ ೮ ॥

॥ ಗರ್ಗ ಉವಾಚ ॥

ಕಲೇರ್ದಶಸಹಸ್ರಾಣಿ ಜಗನ್ನಾಥಸ್ತು ತಿಷ್ಠತಿ ।
ತದರ್ಧಂ ಜಾಹ್ನವೀತೋಯಂ ತದರ್ಧಂ ಗ್ರಾಮದೇವತಾಃ ॥ ೯ ॥

---

೬. ಸೊಗಸಾಗಿ ಒಗೆದು ಮಡಿಮಾಡಿದ ಬಿಳಿದಾದ ಬಟ್ಟೆಯು ಸ್ವತಃ ಶುದ್ಧವಾಗಿದ್ದರೂ ಮತ್ತೊಂದು ಕಪ್ಪಾದ ಬಟ್ಟೆಯು ಮೇಲಿದ್ದುದೇ ಆದರೆ, ಅದು ಕಪ್ಪಾಗಿ ತೋರುವಂತೆ, ಧ್ಯಾನಮಾಡುವವರ ಭಾವನಾನುಗುಣವಾಗಿಯೂ, ಕೋಟಿ ಮನ್ಮಥರಿಗೆ ಸರಿಸಮವೆನಿಸಿದ ದಿವ್ಯವಾದ ಸೌಂದರ್ಯ ಸಂಪದಕ್ಕೆ ನೆಲೆಯಾಗಿರುವುದರಿಂದಲೂ ಆ ಶ್ರೀಹರಿಯ ರೂಪವು ಶ್ಯಾಮಲವಾಗಿರುವುದೆಂದು ಸಜ್ಜನರು ಹೇಳುವರು" ಎನ್ನಲು,

೭. ಆ ವಜ್ರನಾಭಿರಾಜನು ಗರ್ಗಾಚಾರ್ಯರನ್ನು ಕುರಿತು "ಓ ಮುನಿವರ್ಯ! ನಿನ್ನ ಮಾತಿನಿಂದ ನನ್ನ ಸಂದೇಹವು ನಿವೃತ್ತಿಯಾಯಿತು. ಬ್ರಾಹ್ಮಣೋತ್ತಮಾ! ಮುಂದೆ ಘೋರವಾದ ಕಲಿಯುಗವು ಬರುವುದಷ್ಟೆ!

೮. ಆಗ ಮಾನವರು ಯಾವರೀತಿಯಲ್ಲಿ ಇರತೊಡಗುವರು? ಓ ಮುನೀಂದ್ರ! ನೀನು ಮುಂದಾಗುವುದೆಲ್ಲವನ್ನೂ ಅರಿತಿರುವೆ ಆದುದರಿಂದ ಅದನ್ನು ನನಗೆ ತಿಳಿಸು. ನಿನಗೆ ನಮಸ್ಕರಿಸುವೆನು" ಎಂದನು.

೯. ಅದನ್ನು ಕೇಳಿ ಗರ್ಗಮಹರ್ಷಿಯು ಇಂತು ಹೇಳತೊಡಗಿದನು :- "ಕಲಿಯುಗವು ಆರಂಭವಾಗಿ ಹತ್ತುಸಾವಿರ ವರ್ಷಗಳಾಗುವವರೆಗೂ ಶ್ರೀಜಗ

ತತಃ ಸರ್ವೇ ಭವಿಷ್ಯಂತಿ ಪಾಪಿನಃ ಕಲಿನೋಹಿತಾಃ ।
ನರಕಾಂಸ್ತೇ ಪ್ರಯಾಸ್ಯಂತಿ ಸರ್ವೇ ಚಾಲ್ಪಾಯುಷೋ ನರಾಃ ॥ ೧೦ ॥

ವಿಪ್ರಾಃ ಸ್ವಕನ್ಯಾಂ ದಾಸ್ಯಂತಿ ಬ್ರಾಹ್ಮಣಾಯ ಚ ಮೌಲ್ಯತಃ ।
ಕ್ಷತ್ರಿಯಾಶ್ಚೈವ ಪುತ್ರೀಂ ಸ್ವಾಂ ಮಾರಯಿಷ್ಯಂತಿ ಲೋಲುಪಾಃ ॥ ೧೧ ॥

ಮೃಷಾ ಕುರ್ವಂತಿ ವಾಣಿಜ್ಯಂ ವೈಶ್ಯಾ ಬ್ರಹ್ಮಸ್ವತತ್ಪರಾಃ ।
ಶೂದ್ರಾಶ್ಚ ಮ್ಲೇಚ್ಛಸಂಘೇನ ದೂಷಯಿಷ್ಯಂತಿ ಬ್ರಾಹ್ಮಣಾನ್ ॥ ೧೨ ॥

ನ್ನಾಥನು ಇರುವನು. (ಭಗವಂತನ ಸ್ಮರಣೆಯು ಉಳಿದಿರುವುದು) ಅದರಲ್ಲಿ ಅರ್ಧ ಅಂದರೆ ಐದುಸಾವಿರ ವರ್ಷಗಳವರೆಗೆ ಗಂಗಾನದಿಯ ಜಲವು ಇರುವುದು. (ಅದನ್ನು ಪಾವನವೆಂಬುದಾಗಿ ಸನ್ಮಾನಿಸುವರು) ಅವರಲ್ಲಿ ಅರ್ಧ ಅಂದರೆ ಎರಡೂವರೆ ಸಾವಿರ ವರ್ಷಗಳ ಕಾಲ ಗ್ರಾಮದೇವತೆಗಳು ಇರುವುವು. (ಆ ದೇವತೆಗಳ ಪೂಜಾದಿ ಕಾರ್ಯಗಳು ನಡೆಯುವುವು).

೧೦. ಆ ಕಾಲವು ಕಳೆದನಂತರ ಎಲ್ಲರೂ ಕಲಿಪ್ರಾಬಲ್ಯದಿಂದ ಅಜ್ಞಾನವಶರಾಗಿ ಪಾಪಕಾರ್ಯಗಳಲ್ಲಿ ನಿರತರಾಗುವರು. ಅದರ ಫಲವಾಗಿ ಆ ಮಾನವರು ಹೆಚ್ಚುಕಾಲ ಬದುಕದೆ ಅಲ್ಪಾಯುಷ್ಯದಲ್ಲಿಯೇ ಸಾವಿಗೀಡಾಗಿ ನರಕದಲ್ಲಿ ಬೀಳುವರು.

೧೧. (ಆ ಕಲಿಯಲ್ಲಿ) ಬ್ರಾಹ್ಮಣರು ತಮ್ಮ ಹೆಣ್ಣುಮಕ್ಕಳನ್ನು ಮದುವೆಮಾಡಿಕೊಡುವಾಗ ಮೌಲ್ಯವನ್ನು ತೆಗೆದುಕೊಂಡು ನಂತರವೇ ವರನಾದವನಿಗೆ ದಾನಮಾಡುವರು. ಕ್ಷತ್ರಿಯರಾದವರು ತುಚ್ಛವ್ಯಾಪಾರಗಳಲ್ಲಿ ಆಸಕ್ತರಾಗಿ ತಮ್ಮ ಕನ್ಯೆಯರನ್ನು ಕೊಲ್ಲತೊಡಗುವರು.

೧೨. ವೈಶ್ಯರು ಬ್ರಾಹ್ಮಣರ ಸ್ವತ್ತನ್ನು ದಕ್ಕಿಸಿಕೊಳ್ಳುವುದರಲ್ಲಿಯೇ ಆಸಕ್ತಿವಹಿಸಿ ಹೆಸರಿಗೆ ಮಾತ್ರ ತಮ್ಮ ವಾಣಿಜ್ಯವನ್ನು (ವ್ಯಾಪಾರಾದಿಗಳನ್ನು) ನಡೆಸುವರು. ಶೂದ್ರರಾದವರು ಮ್ಲೇಚ್ಛರೊಡನೆ ಬೆರೆತು ಬ್ರಾಹ್ಮಣರನ್ನು ಕೆಡಿಸತೊಡಗುವರು.

ಬ್ರಾಹ್ಮಣಾಃ ಶಾಸ್ತ್ರಹೀನಾಶ್ಚ ರಾಜ್ಯಹೀನಾಶ್ಚ ಕ್ಷತ್ರಿಯಾಃ ।
ವೈಶ್ಯಾಶ್ಚ ದ್ರವ್ಯಹೀನಾ ವೈ ಶೂದ್ರಾನಾಥಸ್ಯ ದುಃಖದಾಃ ॥ ೧೩ ॥

ದಿನೇ ವ್ಯವಾಯನಿರತಾ ವಿರತಾ ಧರ್ಮಕರ್ಮಣಿ ।
ಸ್ತ್ರಿಯಃ ಸ್ವಚ್ಛಂದಗಾಮಿನ್ಯಃ ಪುರುಷಾ ಯೋನಿಲಂಪಟಾಃ ॥ ೧೪ ॥

ಪಿತೄಣಾಮರ್ಚನಂ ಚೈವ ದೇವಾನಾಮತಿಥೀನಾಂ ತಥಾ ।
ವಿಷ್ಣೋಶ್ಚ ವೈಷ್ಣವಾನಾಂ ಚ ತುಲಸ್ಯಾಶ್ಚ ಗವಾಂ ತಥಾ ॥ ೧೫ ॥

ನ ಪ್ರಾಯೇಣ ಕರಿಷ್ಯಂತಿ ಮಾನವಾಃ ಕಲಿಮೋಹಿತಾಃ ।
ಗಣಿಕಾಸು ಪರಸ್ತ್ರೀಷು ಪರವಿತ್ತೇಷು ಮೋಹಿತಾಃ ॥ ೧೬ ॥

---

೧೩. ಬ್ರಾಹ್ಮಣರು ತಮ್ಮ ಭಂಡಾರವಾದ ಜ್ಞಾನವನ್ನೇ ಬರಿದುಮಾಡಿಕೊಳ್ಳುವರು. ಕ್ಷತ್ರಿಯರು ತಮ್ಮ ತಮ್ಮ ರಾಜ್ಯಗಳನ್ನು ಕಳೆದುಕೊಳ್ಳುವರು. ವೈಶ್ಯರು ದ್ರವ್ಯಹೀನರಾಗುವರು. ಶೂದ್ರರು ತಮ್ಮ ಧಣಿಯಾದವನಿಗೆ ಇಲ್ಲದ ಕಿರುಕುಳವನ್ನು ಕೊಡುವರು.

೧೪. ಆಗಿನ ಜನರು ಹಗಲುಹೊತ್ತಿನಲ್ಲಿಯೇ ಸ್ತ್ರೀಯರೊಡನೆ ಬೆರೆಯುವರು. ಧರ್ಮಕಾರ್ಯಗಳಲ್ಲಿ ಅವರಿಗೆ ಪ್ರವೃತ್ತಿಯೇ ಉಂಟಾಗದೆ ಹೋಗುವುದು. ಸ್ತ್ರೀಯರು ತಮ್ಮ ಮನಸ್ಸು ಬಂದಂತೆ ನಡೆಯತೊಡಗುವರು. ಪುರುಷರೂ ಸಹ ಹೆಣ್ಣೆಂದರೆ ಹಾತೊರೆಯತೊಡಗುವರು.

೧೫. ಪಿತೃಗಳಿಗೆ ಕೊಡಬೇಕಾದ ತರ್ಪಣಾದಿಗಳಾಗಲಿ, ದೇವತಾರ್ಚನೆಯಾಗಲಿ, ಅತಿಥಿ ಸತ್ಕಾರವಾಗಲಿ, ವಿಷ್ಣು, ವಿಷ್ಣು ಭಕ್ತರು, ತುಲಸಿ, ಗೋವು ಇವುಗಳ ಪೂಜೆಯಾಗಲಿ,

೧೬. ಇವು ಯಾವುದನ್ನೂ ಕೂಡ ಕಲಿಯು ಬಲದಿಂದ ಅಜ್ಞಾನಿಗಳಾದ ಆ ಮಾನವರು ಪ್ರಾಯಶಃ ಮಾಡದೆಯೇ ಇರತೊಡಗುವರು. ಮತ್ತು ವೇಶ್ಯಾಸ್ತ್ರೀಯರಲ್ಲಿಯೂ, ಪರಾಂಗನೆಯರಲ್ಲಿಯೂ, ಪರದ್ರವ್ಯಗಳಲ್ಲಿಯೂ ಅವರು ಆಸಕ್ತಿಯನ್ನು ವಹಿಸುವರು.

ಏಕವರ್ಣಾ ಭವಿಷ್ಯಂತಿ ಮಹಾಶೂದ್ರಸಮಾಃ ಕಿಲ ।
ಸಸ್ಯಹೀನಾ ಭವೇತ್ಪೃಥ್ವೀ ಶಿಲಾವೃಷ್ಟ್ಯಾ ನಿರಂತರಂ ॥ ೧೭ ॥

ಫಲಹೀನೋಽಪಿ ವೃಕ್ಷಶ್ಚ ಜಲಹೀನಾ ಸರಿತ್ತಥಾ ।
ಪ್ರಜಾಭಿಸ್ತಾಡಿತೋ ಭೂಪೋ ಭೂಪೇನ ತಾಡಿತಾಃ ಪ್ರಜಾಃ ॥ ೧೮ ॥

॥ ರಾಜೋವಾಚ ॥

ಕೇನೋಪಾಯೇನ ಜೀವಾನಾಂ ಕಲೌ ಮುಕ್ತಿರ್ಭವಿಷ್ಯತಿ ।
ತನ್ಮಮಾಖ್ಯಾಹಿ ವಿಪ್ರೇಂದ್ರ ತ್ವಂ ಪರಾವರವಿತ್ತಮಃ ॥ ೧೯ ॥

॥ ಗರ್ಗ ಉವಾಚ ॥

ಯುಧಿಷ್ಠಿರೋ ವಿಕ್ರಮಶ್ಚ ತಥಾ ವೈ ಶಾಲಿವಾಹನಃ ।
ವಿಜಯಾಭಿನಂದನಶ್ಚೈವ ತಥಾ ನಾಗಾರ್ಜುನೋ ನೃಪಃ ॥ ೨೦ ॥

---

೧೭. ಆಗ ವರ್ಣವ್ಯವಸ್ಥೆಯು ಲುಪ್ತವಾಗಿ ಎಲ್ಲರೂ ಒಂದೇ ಜಾತಿಗೆ ಸೇರಿ ಮಹಾಶೂದ್ರರಿಗೆ (ಹುಟ್ಟುಶೂದ್ರರಿಗೆ) ಸರಿಸಮಾನಾಗುವರು. ಮತ್ತು ನಿರಂತರವೂ ಬೀಳತೊಡಗುವ ಶಿಲಾವರ್ಷದಿಂದ ಭೂಮಿಯು ಬೆಳೆಯಿಲ್ಲದೆ ಹೋಗುವುದು

೧೮. ಅದರಂತೆ ವೃಕ್ಷಗಳೆಲ್ಲವೂ ಫಲಗಳನ್ನು ಬಿಡದೆ ಹೋಗುವುವು. ನದಿಗಳಲ್ಲಿ ನೀರಿಲ್ಲವಾಗುವುದು, ಪ್ರಜೆಗಳು ಅರಸರನ್ನೇ ತಾಡನಾದಿಗಳಿಂದ ಪೀಡಿಸುವರು. ಹಾಗೆಯೇ ಅರಸರೂ ಸಹ ಪ್ರಜೆಗಳನ್ನು ದಂಡಿಸುವರು" ಎನ್ನಲು

೧೯ ಆ ವಜ್ರನಾಭಿಯು ಗರ್ಗಮುನಿಯನ್ನು ಕುರಿತು "ಓ ವಿಪ್ರೇಂದ್ರ! ಕಲಿಯುಗದಲ್ಲಿ ಪ್ರಾಣಿಗಳು ಯಾವ ಉಪಾಯದಿಂದ ಮೋಕ್ಷವನ್ನು ಪಡೆಯುವರು? ಅದನ್ನು ನೀನು ನನಗೆ ತಿಳಿಸು. ನೀನು ಪರಾವರಗಳನ್ನು (ಹಿಂದೆ ನಡೆದುದನ್ನೂ ಮುಂದೆ ನಡೆಯುವುದನ್ನೂ) ಬಲ್ಲವನು" ಎಂದು

೨೦. ಪ್ರಶ್ನಿಸಲು ಗರ್ಗಮುನಿಯು ಹೇಳತೊಡಗಿದನು :—ರಾಜೇಂದ್ರ ಕೇಳು. ಯುಧಿಷ್ಠಿರ, ವಿಕ್ರಮ, ಶಾಲಿವಾಹನ, ವಿಜಯ, ಅಭಿನಂದನ, ನಾಗಾರ್ಜುನ,—

ತಥಾ ಕಲ್ಕಿಶ್ಚ ಭಗವಾನೇತೇ ವೈ ಶಕಬಂಧಿನಃ ।
ಕರಿಷ್ಯಂತಿ ಕಲೌ ಭೂಪಾ ಧರ್ಮಸ್ಥಾಪನಮೇವ ಚ ॥ ೨೧ ॥

ಅಭೂದ್ಯುಧಿಷ್ಠಿರೋ ರಾಜಾ ಭವಿಷ್ಯಂತಿ ನೃಪಾಶ್ಚ ತೇ ।
ಅಧರ್ಮಂ ನಾಶಯಿಷ್ಯಂತಿ ಭೂತ್ವಾ ವೈ ಚಕ್ರವರ್ತಿನಃ ॥ ೨೨ ॥

ವಾಮನಶ್ಚ ವಿಧಿಃ ಶೇಷಃ ಸನಕೋ ವಿಷ್ಣುವಾಕ್ಯತಃ ।
ಧರ್ಮಾರ್ಥಹೇತವೇ ಚೈತೇ ಭವಿಷ್ಯಂತಿ ದ್ವಿಜಾಃ ಕಲೌ ॥ ೨೩ ॥

ವಿಷ್ಣುಸ್ವಾಮೀ ವಾಮನಾಂಶಸ್ತಥಾ ಮಾಧ್ವಸ್ತು ಬ್ರಾಹ್ಮಣಃ ।
ರಾಮಾನುಜಸ್ತು ಶೇಷಾಂಶೋ ನಿಂಬಾರ್ಕಃ ಸನಕಸ್ಯ ಚ ॥ ೨೪ ॥

---

೨೧. ಭಗವದಂಶಸಂಭೂತನಾದ ಕಲ್ಕಿ ಎಂಬ ಈ ಏಳು ಮಂದಿ ಶಕ ಪುರುಷರೆನಿಸಿರುವರು. ಇವರು ಕಲಿಯುಗದಲ್ಲಿ ಧರ್ಮಸಂಸ್ಥಾಪನೆಯನ್ನು ಮಾಡುವರು.

೨೨. ಇವರಲ್ಲಿ ಯುಧಿಷ್ಠಿರನು ಇದುವರೆಗೆ ಧರ್ಮಸ್ಥಾಪನೆ ಮಾಡಿದುದಾಯಿತು. ಉಳಿದವರು ಇನ್ನುಮುಂದೆ ಚಕ್ರವರ್ತಿಗಳಾಗಿ ಅಧರ್ಮವನ್ನು ನಾಶಪಡಿಸುವರು.

೨೩. ಆ ಕಲಿಯುಗದಲ್ಲಿ ಪರಮಾತ್ಮನಾದ ವಿಷ್ಣುವಿನ ಮಾತಿನಂತೆ ವಾಮನನೂ, ಬ್ರಹ್ಮನೂ, ಶೇಷನೂ, ಸನಕನೂ, ಪ್ರಪಂಚದಲ್ಲಿ ಧರ್ಮವನ್ನೂ ಅರ್ಥವನ್ನೂ ನೆಲೆಗೊಳಿಸುವ ಸಲುವಾಗಿ ಬ್ರಾಹ್ಮಣರಾಗಿ ಅವತರಿಸುವರು

೨೪. ಅವರಲ್ಲಿ ವಿಷ್ಣುಸ್ವಾಮಿಯೆಂಬುವನು ವಾಮನನ ಅಂಶದಿಂದ ಅವತರಿಸಿದವನು. ಮಾಧ್ವನು ಬ್ರಹ್ಮನ ಅಂಶದಿಂದ ಹುಟ್ಟಿದವನು. ರಾಮಾನುಜನು ಆದಿಶೇಷಾಂಶಸಂಭೂತನು. ನಿಂಬಾರ್ಕನು ಸನಕಮುನಿಯ ಅವತಾರವು.

ಏತೇ ಕಲೌ ಯುಗೇ ಭಾವ್ಯಾಃ ಸಂಪ್ರದಾಯಪ್ರವರ್ತಕಾಃ ।
ಸಂವತ್ಸರೇ ವಿಕ್ರಮಸ್ಯ ಚತ್ವಾರಃ ಕ್ಷಿತಿಪಾವನಾಃ ॥ ೨೫ ॥

ಸಂಪ್ರದಾಯವಿಹೀನಾ ಯೇ ಮಂತ್ರಾಸ್ತೇ ನಿಷ್ಫಲಾಃ ಸ್ಮೃತಾಃ ।
ತಸ್ಮಾಚ್ಚ ಗಮನಂ ಹ್ಯಸ್ತಿ ಸಂಪ್ರದಾಯೇ ನರೈರಪಿ ॥ ೨೬ ॥

ಪಾಪಕ್ಷಯಕರಾ ಯತ್ರ ಶ್ರೀಕೃಷ್ಣಸ್ಯ ಕಥಾ ಭವೇತ್ ।
ವೈಷ್ಣವೈರ್ವಿಪ್ರಮುಖ್ಯೈಶ್ಚ ನಾರಾಯಣಪರಾಯಣೈಃ ॥ ೨೭ ॥

ಕೃತೇ ತು ಲಿಪ್ಯತೇ ದೇಶೋ ತ್ರೇತಾಯಾಂ ಗ್ರಾಮ ಏವ ಚ ।
ದ್ವಾಪರೇ ಚ ಕುಲಂ ಪ್ರೋಕ್ತಂ ಕಲೌ ಕರ್ತೈವ ಲಿಪ್ಯತೇ ॥ ೨೮ ॥

---

೨೫. ತಮ್ಮ ಶುದ್ಧ ಚರಿತ್ರದಿಂದ ಪ್ರಪಂಚವನ್ನೇ ಪಾವನಗೊಳಿಸುವ ಈ ನಾಲ್ಕು ಮಂದಿ ಮಹನೀಯರು ಕಲಿಯುಗದಲ್ಲಿ ವಿಕ್ರಮಸಂವತ್ಸರವು (ಶಕ ?) ಆರಂಭವಾದನಂತರ ಶುದ್ಧವಾದ ಸಂಪ್ರದಾಯವನ್ನು ಜನರಲ್ಲಿ ಪ್ರಚುರಗೊಳಿಸುವರು.

೨೬. ಯಾವೊಂದು ಮಂತ್ರವೇ ಆಗಲಿ ಸಂಪ್ರದಾಯವಿಲ್ಲದಿದ್ದರೆ ಅದು ನಿಷ್ಫಲವೆನಿಸುವುದು. ಆದುದರಿಂದ ಮಾನವರು ಯಾವುದಾದರೂ ಒಂದು ಸಂಪ್ರದಾಯಕ್ಕೆ ಒಳಪಡಲೇಬೇಕು.

೨೭. ಮತ್ತು ವಿಷ್ಣುಭಕ್ತಾಗ್ರೇಸರರಾದ ಬ್ರಾಹ್ಮಣೋತ್ತಮರು ಎಲ್ಲೆಲ್ಲಿ ಪಾಪಪರಿಹಾರಕವಾದ ಶ್ರೀಕೃಷ್ಣನ ದಿವ್ಯಚರಿತವನ್ನು ಕಥಾರೂಪದಿಂದ ಶ್ರವಣ ಮಾಡಿಸುವರೋ ಅಲ್ಲೆಲ್ಲಾ ಜನರು ಹೋಗಿ ಅದನ್ನಾಲಿಸಬೇಕು.

೨೮. ಕೃತಯುಗದಲ್ಲಿ ಪಾಪವನ್ನಾಗಲಿ, ಪುಣ್ಯವನ್ನಾಗಲಿ ಮಾಡಿದರೆ ಅದರ ಫಲವು ಆ ಪಾಪ ಪುಣ್ಯ ಕರ್ಮಗಳನ್ನು ಮಾಡಿದವನಿರುವ ದೇಶಕ್ಕೇ ವ್ಯಾಪಿಸುವುದು. ತ್ರೇತಾಯುಗದಲ್ಲಿ ಅಂತಹ ಪುರುಷನಿರುವ ಗ್ರಾಮಕ್ಕೆ ಮಾತ್ರ ಸಂಭವಿಸುವುದು. ಕಲಿಯುಗದಲ್ಲಿ ಮಾತ್ರ ಆಯಾ ಪುರುಷನನ್ನೇ ಆ ಕರ್ಮಗಳ ಫಲವು ಆಶ್ರಯಿಸುವುದು.

ಧ್ಯಾಯನ್ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ ॥ ೨೯ ॥

ಕೃತೇ ಯದ್ದಶಭಿರ್ವರ್ಷೈಸ್ತ್ರೇತಾಯಾಂ ಹಾಯನೇನ ಚ ।
ದ್ವಾಪರೇ ಚೈಕಮಾಸೇನ ಹ್ಯಹೋರಾತ್ರೇಣ ತತ್ಕಲೌ ॥ ೩೦ ॥

ಘೋರೇ ಕಲಿಯುಗೇ ಪ್ರಾಪ್ತೇ ಸರ್ವಧರ್ಮವಿವರ್ಜಿತೇ ।
ವಾಸುದೇವಪರಾ ಮರ್ತ್ಯಾಸ್ತೇ ಕೃತಾರ್ಥಾ ನ ಸಂಶಯಃ ॥ ೩೧ ॥

ತೇ ಸಭಾಗ್ಯಾ ಮನುಷ್ಯೇಷು ಕೃತಾರ್ಥಾ ನೃಪ ನಿಶ್ಚಿತಂ ।
ಸ್ಮರಂತಿ ಸ್ಮಾರಯಂತೇ ಯೇ ಹರೇರ್ನಾಮಾನಿ ವೈ ಕಲೌ ॥ ೩೨ ॥

---

೨೯. ಕೃತಯುಗದಲ್ಲಿ ಶ್ರೀಹರಿಯನ್ನು ಧ್ಯಾನಮಾಡುತ್ತಿದ್ದರೆ (ತಪಸ್ಸು) ಏನು ಫಲವುಂಟಾಗುವುದೋ, ತ್ರೇತಾಯುಗದಲ್ಲಿ ಆ ಪರಮಾತ್ಮನನ್ನು ಯಾಗಾದಿಗಳಿಂದ ಆರಾಧಿಸಿದರೆ ಯಾವ ಫಲವು ಲಭಿಸುವುದೋ, ದ್ವಾಪರದಲ್ಲಿ ಆ ಪರಮಪುರುಷನನ್ನು ಪೂಜಿಸಿದರೆ ಯಾವ ಫಲವು ದೊರೆಯುವುದೋ ಆ ಫಲವೆಲ್ಲವೂ ಕಲಿಯುಗದಲ್ಲಿ ಶ್ರೀಹರಿಯ ನಾಮಸಂಕೀರ್ತನವೊಂದರಿಂದಲೇ ಉಂಟಾಗುವುದು.

೩೦. ಕೃತಯುಗದಲ್ಲಿ ಹತ್ತು ವರ್ಷಗಳಿಂದಲೂ, ತ್ರೇತಾಯುಗದಲ್ಲಿ ಒಂದು ವರ್ಷದಿಂದಲೂ, ದ್ವಾಪರಯುಗದಲ್ಲಿ ಒಂದು ತಿಂಗಳಿನಿಂದಲೂ ಯಾವ ಫಲವನ್ನು ಸಾಧಿಸಬಹುದೋ ಅದನ್ನು ಕಲಿಯುಗದಲ್ಲಿ ಅಹೋರಾತ್ರ-(ಒಂದುದಿನ) ದಲ್ಲಿ ಸಾಧಿಸಬಹುದು.

೩೧. ಯಾವ ಧರ್ಮಕಾರ್ಯಗಳೂ ನಡೆಯದ ಘೋರವಾದ ಆ ಕಲಿಯುಗದಲ್ಲಿ ಯಾವ ಮಾನವರು ವಾಸುದೇವನಲ್ಲಿಯೇ ತಮ್ಮ ಸರ್ವಸ್ವವನ್ನೂ ಅರ್ಪಿಸುವರೋ ಆ ಮಾನವರು ಮಾತ್ರ ಖಂಡಿತವಾಗಿಯೂ ಧನ್ಯರೆನಿಸುವರು.

೩೨. ಓ ರಾಜೇಂದ್ರ! ಯಾರು ಈ ಕಲಿಯುಗದಲ್ಲಿ ಶ್ರೀಹರಿಯ ನಾಮಗಳನ್ನು ಸ್ಮರಿಸುವರೋ ಮತ್ತು ಶ್ರೀಹರಿಯ ನಾಮಗಳನ್ನು ಸ್ಮರಿಸುವರೋ ಮತ್ತು ಶ್ರೀಹರಿಯ ನಾಮಗಳನ್ನು ಮತ್ತೊಬ್ಬರು ಸ್ಮರಣೆ ಮಾಡುವಂತೆ ಪ್ರೇರೇಪಿಸುವರೋ ಆ ಮಾನವರೀಗ ನಿಜವಾಗಿಯೂ ಆ ಕಾಲದವರಲ್ಲೆಲ್ಲಾ ಭಾಗ್ಯಶಾಲಿಗಳೆನಿಸುವರು.

ಕೃಷಿಶ್ಚ ಸರ್ವವಚನೋ ನಕಾರಶ್ಚಾತ್ಮವಾಚಕಃ ।
ಸರ್ವಾತ್ಮಾ ಚ ಪರಂಬ್ರಹ್ಮ ತೇನ ಕೃಷ್ಣಃ ಪ್ರಕೀರ್ತಿತಃ ॥ ೩೩ ॥

ಸಂಜಪ್ಯ ಬ್ರಹ್ಮ ಪರಮಂ ವೇದಸಾರಂ ಪರಾತ್ಪರಂ ।
ಪರಂ ನಾಸ್ತೀತಿ ನಾಸ್ತೀತಿ ಕೃಷ್ಣ ಇತ್ಯಕ್ಷರದ್ವಯಂ ॥ ೩೪ ॥

ತಾವದ್ಗರ್ಭೇ ವಸೇತ್ಕಾಮೀ ತಾವತೀ ಯಮಯಾತನಾ ।
ತಾವದ್ಗೃಹೀ ಚ ಭೋಗಾರ್ಥೀ ಯಾವತ್ಕೃಷ್ಣಂ ನ ಸೇವತೇ ॥ ೩೫ ॥

ನಶ್ವರೋ ವಿಷಮಃ ಸತ್ಯಂ ಭೋಗಶ್ಚ ಬಂಧವೋ ಭುವಿ ।
ಸ್ವಯಂ ತ್ಯಕ್ತ್ವಾ ಸುಖಾಯೈವ ದುಃಖಾಯ ತ್ಯಾಜಿತಃ ಪರೈಃ ॥ ೩೬ ॥

---

೩೩. 'ಕೃಷ್ಣ' ಎಂಬ ನಾಮದಲ್ಲಿರುವ 'ಕೃಷ್' ಎಂಬ ಧಾತುವು 'ಸಕಲ' ಎಂಬ ಅರ್ಥವನ್ನು ಕೊಡುವುದು. ಅದರ ಮುಂದಿನ 'ನ' ಕಾರವು ಆತ್ಮನೆಂದು ಅರ್ಥವನ್ನು ಬೋಧಿಸುವುದು. ಹೀಗಾಗಿ ಕೃಷ್ಣನೆಂಬ ಶಬ್ದವು ಸರ್ವಾತ್ಮನೆಂಬ ಅರ್ಥವನ್ನು ಬೋಧಿಸುವುದು. ಆದುದರಿಂದಲೇ ಶ್ರೀಕೃಷ್ಣನು ಸರ್ವಾಂತರ್ಯಾಮಿಯಾದ ಪರಬ್ರಹ್ಮನೆಂಬುದಾಗಿ ಕೀರ್ತಿಸಲ್ಪಟ್ಟಿರುವನು.

೩೪. ಸಕಲ ವೇದಗಳಿಗೂ ಸಾರಭೂತವಾದುದೂ, ಉತ್ತಮೋತ್ತಮವಾದುದೂ, ಪರಬ್ರಹ್ಮಾತ್ಮಕವೂ ಆದ 'ಕೃಷ್ಣ' ಎಂಬ ಆ ಎರಡು ಅಕ್ಷರಗಳನ್ನು, ಇದಕ್ಕಿಂತಲೂ ಶ್ರೇಷ್ಠವಾದುದು ಮತ್ತೊಂದಿಲ್ಲವೆಂದು ಭಾವಿಸಿ ಜಪಿಸಬೇಕು.

೩೫. ಮಾನವನಾದವನು ಎಲ್ಲಿಯವರೆಗೆ ಶ್ರೀಕೃಷ್ಣನನ್ನು ಆರಾಧಿಸದೆ ಇರುವನೋ ಅಲ್ಲಿಯವರೆಗೆ ಗರ್ಭವಾಸ ದುಃಖವನ್ನು ಅನುಭವಿಸುವನು. ಅಲ್ಲಿಯವರೆಗೆ ಮನೆ-ಮಡದಿ ಎಂಬ ಮೋಹಕ್ಕೊಳಗಾಗಿ ನಾನಾವಿಧವಾದ ಭೋಗಗಳಿಗೆ ಹಂಬಲಿಸುವನು.

೩೬. ಓ ರಾಜೇಂದ್ರ ! ಈ ಪ್ರಪಂಚದಲ್ಲಿರುವ ಭೋಗಗಳೂ, ಬಂಧುಗಳೂ ಪ್ರತಿಯೊಂದೂ ಅಸ್ಥಿರವಾದುದೆಂದೂ ಮಹಾಕ್ಲೇಶಕರವಾದುದೆಂದೂ ತಿಳಿ.

ಶ್ರುತ್ವಾ ದೈವಾನ್ಮಹನ್ನಿಂದಾಂ ಶ್ರೀಕೃಷ್ಣಸ್ಮರಣಾದ್ಬುಧಃ ।
ಮುಚ್ಯತೇ ಸರ್ವಪಾಪೇಭ್ಯೋ ಚಾನ್ಯಥಾ ರೌರವಂ ವ್ರಜೇತ್ ॥ ೩೭ ॥

ನ ಕಾಷ್ಠೇ ವಿದ್ಯತೇ ದೇವೋ ನ ಶಿಲಾಯಾಂ ನ ಕಾಂಚನೇ ।
ಯತ್ರ ಭಾವಸ್ತತ್ರ ಹರಿಸ್ತಸ್ಮಾದ್ಭಾವಂ ಹಿ ಕಾರಯೇತ್ ॥ ೩೮ ॥

ಸಕೃದುಚ್ಚರಿತಂ ಯೇನ ಕೃಷ್ಣ ಇತ್ಯಕ್ಷರದ್ವಯಂ ।
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥ ೩೯ ॥

ಸರೋಗತಾ ಸಾಧುಜನೇಷು ವೈರಂ
ಪರೋಪತಾಪೋ ದ್ವಿಜವೇದನಿಂದಾ ।
ಅತ್ಯಂತಕೋಪಃ ಕಟುಕಾ ಚ ವಾಣೀ
ನರಸ್ಯ ಚಿಹ್ನಂ ನರಕೇ ಗತಸ್ಯ ॥ ೪೦ ॥

ಇದು ನಿಜವಾದುದು. ಇವೆಲ್ಲವನ್ನೂ ಮಾನವನು ತಾನಾಗಿಯೇ ತೊರೆದರೆ ಆಗ ಸುಖವುಂಟಾಗುವುದು. ಹಾಗಿಲ್ಲದೆ ಮತ್ತೊಬ್ಬರು (ಅವುಗಳಿಂದ ತನ್ನನ್ನು) ಬಿಡಿಸುವಂತಾದರೆ ಅದೀಗ ಬಹು ದುಃಖಕ್ಕೆ ಕಾರಣವಾಗುವುದು.

೩೭. ಪ್ರಾಜ್ಞನಾದವನು ಆಕಸ್ಮಿಕವಾಗಿ ಪೂಜ್ಯರ ನಿಂದೆಯು ಕಿವಿಗೆ ಬಿದ್ದುದೇ ಆದರೆ ಆಗ ಶ್ರೀಕೃಷ್ಣನನ್ನು ಸ್ಮರಣೆ ಮಾಡಿ ಆ ಪಾಪವೆಲ್ಲವನ್ನೂ ಪರಿಹರಿಸಿಕೊಳ್ಳಬೇಕು. ಇಲ್ಲದಿದ್ದರೆ ರೌರವವೆಂಬ ನರಕದಲ್ಲಿ ಆತನು ದುಃಖವನ್ನನುಭವಿಸಬೇಕಾಗುವುದು.

೩೮. ದೇವರು ನೆಲಸಿರುವುದು ಮರದ ಕೊಂಬೆಯಲ್ಲಲ್ಲ—ಕಲ್ಲಿನ ವಿಗ್ರಹದಲ್ಲಲ್ಲ. ಆದರೆ ಆ ಶ್ರೀಹರಿಯು ನೆಲಸಿರುವುದು ಭಾವನೆಯಲ್ಲಿ. ಆದುದರಿಂದಲೇ ಶ್ರೀಹರಿಯನ್ನು ಭಾವನೆಯಿಂದ ಅರ್ಚಿಸಬೇಕು.

೩೯. ಯಾವನು ಒಂದು ಸಲವಾದರೂ ಕೃಷ್ಣ ಎಂಬ ಎರಡಕ್ಷರಗಳನ್ನು ಉಚ್ಚರಿಸುವನೋ ಆ ಪುರುಷನು ಮೋಕ್ಷಸುಖವನ್ನು ಅನುಭವಿಸಲು ನಡುಕಟ್ಟನ್ನು ಬಿಗಿದುಕೊಂಡಿರುವನೆಂತಲೇ (ಸಿದ್ಧನಾದನೆಂದೇ) ಭಾವಿಸು.

೪೦. ಯಾವಾಗಲೂ ರೋಗವು ಪೀಡಿಸುತ್ತಿರುವುದು, ಸತ್ಪುರುಷರೊಡನೆ ದ್ವೇಷವನ್ನು ಕಟ್ಟಿಕೊಳ್ಳುವುದು, ಮತ್ತೊಬ್ಬರಿಗೆ ಕಿರುಕುಳಕೊಡು

ಸ್ವರ್ಗಗತಾನಾಮಿಹ ಜೀವಲೋಕೇ
ಚತ್ವಾರಿ ಚಿಹ್ನಾನಿ ಸದಾ ವಸಂತಿ ।
ದಾನಪ್ರಸಂಗೋ ಮಧುರಾ ಚ ವಾಣೀ
ದೇವಾರ್ಚನಂ ಬ್ರಾಹ್ಮಣಪೂಜನಂ ಚ ॥ ४೧ ॥

॥ ರಾಜೋವಾಚ ॥

ವ್ರತೇಷು ಕಿಂ ವರಂ ಬ್ರಹ್ಮನ್ಸತ್ಸು ತೀರ್ಥೇಷು ಕಿಂ ಮಹತ್ ।
ದೇವೇಷು ಪೂಜನೀಯೇಷು ಕೋ ಮುಖ್ಯಃ ಕಥಯಸ್ವ ನಃ ॥ ४೨ ॥

॥ ಗರ್ಗ ಉವಾಚ ॥

ಏಕಾದಶೀ ವರಾ ಹ್ಯಸ್ತಿ ವ್ರತೇಷು ಯದುನಂದನ ।
ಭಾಗಿರಥೀ ಚ ತೀರ್ಥೇಷು ದೇವಭಕ್ತೇಷು ವೈಷ್ಣವಃ ॥ ४೩ ॥

ವುದು, ಬ್ರಾಹ್ಮಣರನ್ನೂ ವೇದಗಳನ್ನೂ ನಿಂದಿಸುವುದು, ಮಿತಿಮೀರಿ ರೇಗಿ ಬೀಳುವುದು, ಕಠಿಣವಾದ ಮಾತುಗಳನ್ನೇ ಆಡುವುದು, ಇವೆಲ್ಲ ಚಿಹ್ನೆಗಳು ಮನುಷ್ಯನಾದವನು ತಾನು ಹುಟ್ಟುವ ಮೊದಲು ನರಕದಲ್ಲಿ ಬಿದ್ದಿದ್ದವನೆಂಬು ದನ್ನು ಸೂಚಿಸುವುವು.

४೧. ಇದೇರೀತಿ ಮಾನವನಾದವನು ತಾನು ಹುಟ್ಟುವ ಮುಂಚೆ ಸ್ವರ್ಗದಲ್ಲಿದ್ದನೆನ್ನಲು ಈ ನಾಲ್ಕು ಚಿಹ್ನೆಗಳು ಪ್ರಪಂಚದಲ್ಲಿ ತೋರುವುವು. ಅವಾವುವೆಂದರೆ, ದಾನಶೀಲತೆ, ಮಧುರವಾದ ಮಾತು, ದೇವತಾರ್ಚನೆ, ಬ್ರಾಹ್ಮಣಸತ್ಕಾರ ಇವುಗಳು ಎಂದನು.

४೨. ಆಗ ವಜ್ರನಾಭಿರಾಜನು ಗರ್ಗಮುನಿಯನ್ನು ಕುರಿತು "ಓ ವಿಪ್ರವರ್ಯ! ವ್ರತಗಳಲ್ಲಿ ಯಾವುದು ಶ್ರೇಷ್ಠವಾದುದು? ತೀರ್ಥಗಳಲ್ಲಿ ಯಾವುದು ಪವಿತ್ರವಾದುದು? ದೇವತೆಗಳಲ್ಲಿಯೂ, ಪೂಜಾರ್ಹರಲ್ಲಿಯೂ ಯಾರು ಮುಖ್ಯರಾದವರು? ಅದನ್ನು ನನಗೆ ತಿಳಿಸಬೇಕು" ಎಂದು ಪ್ರಶ್ನಿಸಿದನು.

४೩-४४. ಆಗ ಗರ್ಗಮಹರ್ಷಿಯು 'ಎಲೈ ಯದುಕುಮಾರನೆ, ವ್ರತ ಗಳಲ್ಲೆಲ್ಲಾ ಏಕಾದಶೀವ್ರತವು ಉತ್ತಮವಾದುದು. ತೀರ್ಥಗಳಲ್ಲಿ ಗಂಗಾನದಿಯು

ಸುರೇಷು ವಿಷ್ಣುರ್ಭಗವಾನ್ಪೂಜನೀಯೇಷು ಶ್ರೀಗುರುಃ |
ಇಮಾಂ ವಾರ್ತಾಂ ನ ಮನ್ಯಂತೇ ಕುಂಭೀಪಾಕೇ ಪತಂತಿ ತೇ || ೪೪ ||

|| ರಾಜೋವಾಚ ||

ಏಕಾದಶ್ಯಾಸ್ತು ಮಾಹಾತ್ಮ್ಯಮನ್ಯೇಷಾಂ ಚೈವ ಮೇ ಮುನೇ |
ಕಥಯಸ್ವ ಪ್ರಸಾದೇನ ಗುರುದೇವ ನಮೋऽಸ್ತು ತೇ || ೪೫ ||

|| ಗರ್ಗ ಉವಾಚ ||

ಕಥಯಿಷ್ಯಾಮ್ಯಹಂ ಸರ್ವಂ ಶೃಣುಷ್ವ ಯದುನಂದನ |
ಏಕಾದಶ್ಯಾಂ ನ ಭೋಕ್ತವ್ಯಮನ್ನಂ ಚೈವ ಫಲಂ ತಥಾ || ೪೬ ||

ಯಥೋಕ್ತವಿಧಿನಾ ಕುರ್ಯಾದೇಕಾದಶೀಂ ಮುದಾ ನರಃ |
ತದಾ ಸಾ ತಸ್ಯ ಫಲದಾ ಭವತಿ ನೃಪಸತ್ತಮ || ೪೭ ||

ಶ್ರೇಷ್ಠವಾದುದು. ದೈವಭಕ್ತರಲ್ಲಿ ವಿಷ್ಣುಭಕ್ತನೇ ಉತ್ತಮನಾದವನು. ದೇವತೆಗಳಲ್ಲೆಲ್ಲಾ ವಿಷ್ಣುವೇ ಉತ್ತಮನಾದವನು. ಪೂಜಾರ್ಹರಲ್ಲಿ ವಿದ್ಯೋಪದೇಶ ಮಾಡಿದ ಗುರುವು ಉತ್ತಮನಾದವನು. ಈ ನಿಜವಾದ ಮಾತನ್ನು ಒಪ್ಪದವರು ಕುಂಭೀಪಾಕವೆಂಬ ನರಕದಲ್ಲಿ ಬೀಳುವರು ಎಂದು ಉತ್ತರವೀಯಲು-

೪೫. ಮತ್ತೆ ಆ ವಜ್ರನಾಭರಾಜನು 'ಓ ಮುನೀಂದ್ರ! ಏಕಾದಶೀ ವ್ರತದ ಮಹಿಮೆಯನ್ನೂ, ಇನ್ನೂ ಇತರ ಮಾಹಾತ್ಮ್ಯವನ್ನೂ ದಯವಿಟ್ಟು ನನಗೆ ತಿಳಿಸು. ಗುರುದೇವ! ನಿನಗೆ ನಮಸ್ಕಾರವು' ಎಂದು ನುಡಿದನು.

೪೬. ಆಗ ಗರ್ಗಾಚಾರ್ಯನು ಹೇಳತೊಡಗಿದನು ;—'ಎಲೈ ಯದುನಂದನನೇ! ಕೇಳು. ನೀನು ಕೇಳಿದುದೆಲ್ಲವನ್ನೂ ನಾನು ಹೇಳುವೆನು. ಏಕಾದಶಿಯ ದಿವಸ ಅನ್ನವನ್ನಾಗಲಿ, ಹಣ್ಣು ಹಂಪಲವನ್ನಾಗಲೀ ತಿನ್ನಬಾರದು.

೪೭. ಆ ಏಕಾದಶೀವ್ರತವನ್ನು ಮಾನವನು ವಿಧಿವತ್ತಾಗಿ ಆಚರಿಸಬೇಕು. ಓ ನೃಪವರ್ಯ! ಹಾಗೆ ಮಾಡಿದರೆ ಮಾತ್ರ ಆ ಏಕಾದಶಿಯು ಆ ಮಾನವನಿಗೆ ಯಥೋಕ್ತವಾದ ಫಲವನ್ನನುಗ್ರಹಿಸುವುದು.'

॥ ವಜ್ರನಾಭಿರುವಾಚ ॥

ಫಲಾಹಾರಂ ಚ ಕುರ್ವಂತಿ ಯೇ ನರಾ ಹರಿವಾಸರೇ ।
ತೇಷಾಂ ಗತಿಃ ಕಾ ಭವತಿ ತನ್ಮೇ ವರ್ಣಯ ವಿಸ್ತರಾತ್ ॥ ೪೮ ॥

॥ ಋಷಿರುವಾಚ ॥

ಸಮಸ್ತಂ ಚೋಪವಾಸೇನ ಯಥೋಕ್ತಂ ಲಭತೇ ಫಲಂ ।
ಫಲಾಹಾರೇಣ ಚಾರ್ಧಂ ಸ್ಯಾತ್ಕಿಂಚಿನ್ನ್ಯೂನಂ ಜಲೇನ ಚ ॥ ೪೯ ॥

ಅನ್ನಾನ್ಸರ್ವಾನ್ವರ್ಜಯಿತ್ವಾ ಗೋಧೂಮಾದ್ಯಾನ್ನೃಪೇಶ್ವರ ।
ಏಕಾದಶ್ಯಾಂ ಪ್ರಕುರ್ವೀತ ಫಲಾಹಾರಂ ಮುದಾ ನರಃ ॥ ೫೦ ॥

ಅನ್ನಂ ಭುಂಜತಿ ಯೋ ರಾಜನ್ನೇಕಾದಶ್ಯಾಂ ನರಾಧಮಃ ।
ಇಹ ಲೋಕೇ ಸ ಚಾಂಡಾಲೋ ಮೃತಃ ಪ್ರಾಪ್ನೋತಿ ದುರ್ಗತಿಂ ॥ ೫೧ ॥

---

೪೮. ಎನ್ನಲು ಆಗ ವಜ್ರನಾಭಿರಾಜನು ಪುನಃ ಆ ಮುನಿಯನ್ನು ಕುರಿತು, ಆರ್ಯ! ಆ ಹರಿದಿವಸ (ಏಕಾದಶಿ) ದಲ್ಲಿ ಫಲವನ್ನು ಯಾರು ಆಹಾರ ಮಾಡುವರೋ ಆ ಮಾನವರಿಗೆ ಯಾವ ಫಲವು ಉಂಟಾಗುವುದೆಂಬು ದನ್ನು ನನಗೆ ವಿಸ್ತಾರವಾಗಿ ತಿಳಿಸಬೇಕು ಎಂದು ಪ್ರಶ್ನಿಸಲು ಆ ಗರ್ಗ ಮುನಿಯು ಈರೀತಿ ಉತ್ತರವಿತ್ತನು.

೪೯. ರಾಜೇಂದ್ರ! ಆಲಿಸು. ಸಂಪೂರ್ಣವಾಗಿ ನಿರಾಹಾರವನ್ನು ಮಾಡಿದರೆ ಆ ಏಕಾದಶೀವ್ರತದ ಫಲವನ್ನು ಮಾನವನು ಸಂಪೂರ್ಣವಾಗಿ ಪಡೆಯುವನು. ಫಲಾಹಾರಮಾಡಿದರೆ ಅದರಲ್ಲಿ ಅರ್ಧ ಫಲಕ್ಕೆ ಮಾತ್ರ ಭಾಗಿ ಯಾಗುವನು. ಜಲಾಹಾರವನ್ನು ಮಾಡಿದರೆ ಸಂಪೂರ್ಣ ಫಲಕ್ಕಿಂತಲೂ ಸ್ವಲ್ಪ ಕಡಮೆ ಫಲವನ್ನು ಹೊಂದುವನು.

೫೦. ಓ ನೃಪೇಂದ್ರ! ಆ ಏಕಾದಶೀ ದಿವಸ ಗೋದುವೆ ಮೊದಲಾದ ಧಾನ್ಯಗಳಿಂದ ಮಾಡಿದ ಅನ್ನ (ಆಹಾರ ವಸ್ತು) ಗಳಾವುವನ್ನೂ ಮುಟ್ಟದೆ ಸಂತೋಷದಿಂದ ಫಲಾಹಾರವನ್ನು ಮಾಡಬಹುದು.

೫೧. ಯಾವ ನರಾಧಮನು ಆ ಏಕಾದಶೀವ್ರತದಿವಸದಲ್ಲಿ ಅನ್ನವನ್ನು ತಿನ್ನುವನೋ ಅವನು ಈ ಲೋಕದಲ್ಲಿ ಚಂಡಾಲನೆನಿಸುವನು. ಮತ್ತು ಸತ್ತ ಮೇಲೆ ಅತಿಶಯವಾದ ದುರ್ಗತಿಗೆ ಈಡಾಗುವನು.

ದಧಿ ದುಗ್ಧಂ ತಥಾ ಮಿಷ್ಟಂ ಕೂಟಂ ಕರ್ಕಟಿಕಾಂ ತಥಾ ।
ವಾಸ್ತೂಕಂ ಪದ್ಮಮೂಲಂ ಚ ರಸಾಲಂ ಜಾನಕೀಫಲಂ ॥ ೫೨ ॥

ಗಂಗಾಫಲಂ ಪತ್ರನಿಂಬಂ ದಾಡಿಮಂ ಚ ವಿಶೇಷತಃ ।
ಶೃಂಗಾಟಕಂ ನಾಗರಂಗಂ ಸೈಂಧವಂ ಕದಲೀಫಲಂ ॥ ೫೩ ॥

ಆಮ್ರಾತಕಂ ಆರ್ದ್ರಕಂ ಚ ತೂಲಂ ಚ ಬದರೀಫಲಂ ।
ಜಂಬೂಫಲಮಾಮಲಕಂ ಪಟೋಲಂ ತ್ರಿಕುಶಂ ತಥಾ ॥ ೫೪ ॥

ರತಾಲೂಂ ಶರ್ಕರಾಕಂದಮಿಕ್ಷುದಂಡಂ ತಥೈವ ಚ ।
ದ್ರಾಕ್ಷಾದೀನಿ ಹಿ ಚಾನ್ಯಾನಿ ಪವಿತ್ರಂ ಚ ಫಲಂ ತಥಾ ॥ ೫೫ ॥

ಏಕವಾರಂ ಚ ರಾಜೇಂದ್ರ ಭೋಕ್ತವ್ಯಂ ಹರಿವಾಸರೇ ।
ತೃತೀಯೇ ಪ್ರಹರೇಽತೀತೇ ಪ್ರಸ್ಥಸ್ಯ ಚ ಫಲಸ್ಯ ಚ ॥ ೫೬ ॥

೫೨-೫೫. ಹಾಲು, ಮೊಸರು, ಸಿಹಿಯಾದ ಕೂಟು, ಸೌತೆಕಾಯಿ, ಚಕ್ಕೋತನ ಸೊಪ್ಪು, ಕಮಲದ ದಂಟು, ಮಾವಿನ ಹಣ್ಣು, ಸೀತಾಫಲದ ಹಣ್ಣು, ಗಂಗಾಫಲ ಪತ್ರ ನಿಂಬು ದಾಳಿಂಬೆ ಹಣ್ಣು, ಶೃಂಗಾಟಕ, ಹೆರಳೆಹಣ್ಣು, ಸಿಂಧುದೇಶದಲ್ಲಿ ಬಿಡುವ ಪ್ರಸಿದ್ಧವಾದ ಹಣ್ಣು, ಬಾಳೆಹಣ್ಣು, ಅಮಟೇಕಾಯಿ, ಶುಂಠಿ, ಸೂಲ, ಎಲಚಿಹಣ್ಣು, ನೇರಳೆಹಣ್ಣು, ನೆಲ್ಲಿ ಕಾಯಿ, ಪಡವಲಕಾಯಿ, ತ್ರಿಕುಶ. ರತಾಲು ಸಕ್ಕರೆಯಂತೆ ಸಿಹಿಯಾಗಿರುವ ಗೆಡ್ಡೆ (ಗೆಣಸು) ಕಬ್ಬು, ದ್ರಾಕ್ಷೆ ಮೊದಲಾದ ಇನ್ನೂ ಇತರ ಶುದ್ಧವಾದ ಹಣ್ಣು ಮತ್ತು ಸೊಪ್ಪು ಸೆದೆಗಳು ಇವುಗಳನ್ನು—

೫೬-೫೭. ಆ ಏಕಾದಶೀ ದಿವಸ ಮೂರನೇ ಜಾವ (ಹಗಲು) ಕಳೆದ ನಂತರ ತಾನು ತಂದದ್ದರಲ್ಲಿ ಅರ್ಧ ಭಾಗದಷ್ಟು ಬ್ರಾಹ್ಮಣನಿಗೆ ಇತ್ತು ಉಳಿದರ್ಧಭಾಗವನ್ನು ತಾನು ಭುಜಿಸಬಹುದು. ಅದೂ ಒಂದು ವೇಳೆ ಮಾತ್ರ

ದ್ವಿಜಾಯ ಚಾರ್ಘಂ ದಾತವ್ಯಮರ್ಘಮಾತ್ಮನಿ ಭೋಜನಂ ।
ದ್ವಿವಾರಂ ಜಲಮಶ್ನೀಯಾದೇಕವಾರಂ ಫಲಂ ತಥಾ ॥ ೫೭ ॥

ಸಮಾಚರೇಜ್ಜಾಗರಣಂ ಪೂಜಯಿತ್ವಾ ಜನಾರ್ದನಂ ।
ದ್ವಿವಾರಂ ವಾ ತ್ರಿವಾರಂ ವಾ ಯೋ ನರೋ ಹರಿವಾಸರೇ ॥ ೫೮ ॥

ಕರೋತಿ ಚ ಫಲಾಹಾರಂ ತಸ್ಯ ಕಿಂಚಿತ್ಫಲಂ ನ ಹಿ ।
ಅನ್ನಭುಕ್ತೇನ ಯತ್ಪಾಪಂ ಜಾತಂ ಪಂಚದಶೈರ್ದಿನೈಃ ॥ ೫೯ ॥

ಏಕಾದಶ್ಯುಪವಾಸೇನ ತತ್ಸರ್ವಂ ವಿಲಯಂ ಭವೇತ್ ।
ಭೋಜನಂ ಬ್ರಾಹ್ಮಣೇ ದತ್ವಾ ಹ್ಯುಪವಾಸಂ ಸಮಾಚರೇತ್ ॥ ೬೦ ॥

ನೀರನ್ನು ಮಾತ್ರ ಎರಡು ಬಾರಿ ಸೇವಿಸಬಹುದು. ಫಲಗಳನ್ನು ಮಾತ್ರ ಒಂದು ಬಾರಿ ತಿನ್ನಬೇಕು.

೫೮-೫೯. ಅನಂತರ ಶ್ರೀಹರಿಯನ್ನು ಪೂಜಿಸಿ ರಾತ್ರಿಯೆಲ್ಲಾ ಎಚ್ಚೆತ್ತಿದ್ದು ಜಾಗರಣೆ ಮಾಡಬೇಕು. ಯಾವ ಮನುಜನು ಇಂಥ ಏಕಾದಶಿ ದಿವಸದಲ್ಲಿ ಎರಡು ಸಲವಾಗಲಿ, ಮೂರು ಸಲವಾಗಲಿ ಫಲಾಹಾರ ಮಾಡುವನೋ ಆ ಮಾನವನಿಗೆ ಏಕಾದಶೀ ವ್ರತಫಲವು ಸ್ವಲ್ಪವೂ ಇಲ್ಲವಾಗುವುದು. ಹಿಂದಿನ ಹದಿನೈದು ದಿನಗಳಲ್ಲಿ ಊಟಮಾಡಿದ್ದುದರಿಂದ ಯಾವ ಪಾಪವುಂಟಾಗಿರುವುದೋ—

೬೦. ಆ ಪಾಪವೆಲ್ಲವೂ ಏಕಾದಶೀ ದಿವಸ ಮಾಡಿದ ಉಪವಾಸದಿಂದ ನಾಶವನ್ನು ಹೊಂದುವುದು. ಈ ವ್ರತವನ್ನು ಮಾಡಬಯಸುವವನು ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದನಂತರ ತಾನು ಉಪವಾಸವನ್ನು ಮಾಡಬೇಕು.

ಶ್ರುತ್ವಾ ತಸ್ಯಾಶ್ಚ ಮಾಹಾತ್ಮ್ಯಂ ಸರ್ವಪಾಪೈಃ ಪ್ರಮುಚ್ಯತೇ ।
ದ್ರವ್ಯಾರ್ಥೀ ಲಭತೇ ದ್ರವ್ಯಂ ಸುತಾರ್ಥೀ ಲಭತೇ ಸುತಂ
ಮೋಕ್ಷಾರ್ಥೀ ಲಭತೇ ಮೋಕ್ಷಮೇಕಾದಶ್ಯಾ ವ್ರತೇನ ವೈ ॥ ೬೧ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ ಸುಮೇರೌ ಏಕಷಷ್ಟಿತಮೋಽಧ್ಯಾಯಃ

---

೬೧. ಈ ಏಕಾದಶೀವ್ರತದ ಮಹಾತ್ಮ್ಯವನ್ನು ಆಲಿಸಿದವನು ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದುವನು. ಮತ್ತು ಈ ಏಕಾದಶೀವ್ರತದಿಂದ ಧನಾಪೇಕ್ಷೆಯುಳ್ಳವನು ಧನವನ್ನೂ, ಪುತ್ರಕಾಮನೆಯುಳ್ಳವನು ಪುತ್ರಸಂಪದವನ್ನೂ, ಮೋಕ್ಷಾಪೇಕ್ಷಿಯು ಮೋಕ್ಷಸುಖವನ್ನೂ ಹೊಂದುವನು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ಸುಮೇರುನಾಮಕ ಹಯಮೇಧ
ಚರಿತ್ರದಲ್ಲಿ ಏಕಾದಶೀಮಹಾತ್ಮ್ಯವರ್ಣನವೆಂಬ
ಅರವತ್ತೊಂದನೆಯ ಅಧ್ಯಾಯವು ಮುಗಿದುದು.

||ಶ್ರೀಃ ||

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ದ್ವಿಷಷ್ಟಿತಮೋಽಧ್ಯಾಯಃ

|| ಗರ್ಗ ಉವಾಚ ||

ತಪಃ ಕೃತಂ ಪುರಾ ಯೇನ ದುರ್ಜರಂ ಪೂರ್ವಜನ್ಮನಿ |
ಇಹ ಲೋಕೇ ಚ ತಸ್ಯಾಶು ಗುರೋರ್ಭಕ್ತಿರ್ಹಿ ಜಾಯತೇ || ೧ ||

ಗುರೋಃ ಸೇವಾಂ ನ ಕುರುತೇ ಸ್ವಗುರುಂ ಯೋ ನ ಮನ್ಯತೇ |
ಯಃ ಸಮರ್ಥಶ್ಚ ಪತತಿ ಕುಂಭೀಪಾಕೇ ಚ ಸರ್ವದಾ || ೨ ||

ಅರವತ್ತೆರಡನೆಯ ಅಧ್ಯಾಯವು

೧. ಗರ್ಗಮುನಿಯು ಹೇಳತೊಡಗಿದನು :—ರಾಜೇಂದ್ರ ! ಕೇಳು. ಯಾವ ಮಾನವನು ಪೂರ್ವಜನ್ಮದಲ್ಲಿ ಅತಿಶಯವಾದ ತಪಸ್ಸನ್ನು ಮಾಡಿರುವನೋ ಆತನಿಗೆ ಮಾತ್ರ ಈ ಜನ್ಮದಲ್ಲಿ ಗುರುವಿನ ವಿಷಯದಲ್ಲಿ ಬೇಗನೆ ಭಕ್ತಿಯು ಉಂಟಾಗುವುದು.

೨. ಯಾವನು ಶಕ್ತನಾಗಿದ್ದರೂ ಗುರುವನ್ನು ಸೇವೆಮಾಡದಿರುವನೋ ಮತ್ತು ಆ ಗುರುವಿನಲ್ಲಿ ಗೌರವಬುದ್ಧಿಯನ್ನು ತೋರ್ಪಡಿಸದಿರುವನೋ ಆ ಪಾಪಿಯು ಶಾಶ್ವತವಾಗಿ ಕುಂಭೀಪಾಕವೆಂಬ ನರಕದಲ್ಲಿ ಬೀಳುವನು.

ಗುರೋರಭಕ್ತಂ ಪ್ರಗತಂ ದೃಷ್ಟ್ವಾ ಗೋಘ್ನೋ ಭವೇನ್ನರಃ ।
ಸ್ನಾತ್ವಾ ಗಂಗಾಂ ಚ ಯಮುನಾಂ ತದಾ ಭವತಿ ನಿರ್ಮಲಃ ॥ ೩ ॥

ದ್ರವ್ಯಲಾಭಸ್ತು ಶಿಷ್ಯಸ್ಯ ಭವೇದ್ಯೈ ಯತ್ರ ಯತ್ರ ಚ ।
ದಶಾಂಶಂ ಚ ಗುರೋಸ್ತಸ್ಮಿನ್ಗೃಹದ್ರವ್ಯೇ ತಥಾ ಹಿ ನಃ ॥ ೪ ॥

ತಂ ಭುಂಜತಿ ಬಲಾಚ್ಛಿಷ್ಯೋ ನ ದಾಸ್ಯತಿ ಗುರುಂ ಪೃಥಕ್ ।
ಸ ಮಹಾರೌರವಂ ಯಾತಿ ಹೀನಃ ಸರ್ವಸುಖೈರಿಹ ॥ ೫ ॥

ಹರೌ ಕುರ್ವಂತಿ ಯೇ ನಿತ್ಯಂ ಭಕ್ತಿಂ ಚ ನವಲಕ್ಷಣಾಂ ।
ಸಂಸಾರಸಾಗರಂ ರಾಜಂಸ್ತೇ ತರಂತಿ ಸುಖೇನ ವೈ ॥ ೬ ॥

---

೩. ಯಾವನು ಗುರುವಿನಲ್ಲಿ ಭಕ್ತಿಯನ್ನಿಡದಿರುವನೋ ಮತ್ತು ಯಾವನು ಗುರುವನ್ನು ಲೆಕ್ಕಿಸದೆ ಮೀರಿ ವಿಚಾರಿ ವರ್ತಿಸುವನೋ ಅಂಥವನನ್ನು ಒಂದು ಬಾರಿ ನೋಡಿದವನಿಗೆ ಸಹ ಗೋಹತ್ಯಾಪಾತಕವುಂಟಾಗುವುದು. ಆ ಮನುಜನು ಆ ಪಾಪವನ್ನು ಪರಿಹರಿಸಿಕೊಳ್ಳಲು ಗಂಗಾ ಯಮುನಾನದಿಗಳಲ್ಲಿ ಸ್ನಾನಮಾಡಬೇಕು, ಅನಂತರವೇ ಅವನು ಪರಿಶುದ್ಧನಾಗುವನು.

೪. ಶಿಷ್ಯನಾದವನಿಗೆ ಎಲ್ಲೆಲ್ಲಿ ಹಣವು ದೊರೆಯುವುದೋ ಅಲ್ಲೆಲ್ಲಾ ಆ ಹಣದ ಹತ್ತನೆಯೊಂದು ಪಾಲನ್ನು ಗುರುವಿಗೆ ಒಪ್ಪಿಸಬೇಕು. ಅದರಂತೆ ತನ್ನ ಮನೆಯ ಹಣದಲ್ಲಿಯೂ ಹತ್ತನೆ ಒಂದುಪಾಲನ್ನು ಗುರುವಿಗರ್ಪಿಸಬೇಕು.

೫. ಹೀಗೆ ಗುರುವಿಗೆ ಸಲ್ಲಬೇಕಾದ ಆ ಪಾಲನ್ನು ಯಾವ ಶಿಷ್ಯನು ಬುದ್ಧಿಪೂರ್ವಕವಾಗಿ ಗುರುವಿಗೆ ಕೊಡದೆಯೇ ತಾನೇ ಬಲವಂತವಾಗಿ ಅನುಭವಿಸುವನೋ ಅವನು ತನ್ನ ಜೀವಿತಕಾಲದಲ್ಲಿ ಯಾವೊಂದು ಸುಖವನ್ನೂ ಅನುಭವಿಸದೆ ಸಾವಿಗೆ ತುತ್ತಾಗಿ ಮಹಾ ರೌರವವೆಂಬ ನರಕದಲ್ಲಿ ಬೀಳುವನು.

೬. ಓ ರಾಜೇಂದ್ರ! ಯಾವ ಮಾನವನು ಒಂಬತ್ತು ಬಗೆಯ ಲಕ್ಷಣಗಳುಳ್ಳ ಭಕ್ತಿಯನ್ನು ಶ್ರೀಹರಿಯಲ್ಲಿ ನೆಲೆಗೊಳಿಸುವನೋ ಅವನು ಸುಖವಾಗಿ ಈ ಸಂಸಾರಸಾಗರವನ್ನು ದಾಟಿಬಿಡುವನು.

ಜ್ಞಾತಿಂ ವಿದ್ಯಾಂ ಮಹತ್ತ್ವಂ ಚ ರೂಪಂ ಯೌವನಮೇವ ಚ |
ಯತ್ನೇನ ಪರಿವರ್ಜೇಯೋಃ ಪಂಚೈತೇ ಭಕ್ತಿಕಂಟಕಾಃ ॥ ೭ ॥

ಭಕ್ತ್ಯಾ ಕೃಷ್ಣಸ್ಯ ರಾಜೇಂದ್ರ ಪ್ರಸಾದಂ ಚರಣೋದಕಂ |
ಯೇ ಗೃಹ್ಣಂತಿ ಭವೇಯುರ್ಭೂಪಾವನಾ ನಾತ್ರ ಸಂಶಯಃ ॥ ೮ ॥

ಗಂಗಾ ಪಾಪಂ ಶಶೀ ತಾಪಂ ದೈನ್ಯಂ ಕಲ್ಪತರುರ್ಹರೇತ್ |
ಪಾಪಂ ತಾಪಂ ತಥಾ ದೈನ್ಯಂ ಸದ್ಯಃ ಸಾಧುಸಮಾಗಮಃ ॥ ೯ ॥

ತಾವದ್ಭ್ರಮಂತಿ ಸಂಸಾರೇ ಪಿತರಃ ಪಿಂಡತತ್ಪರಾಃ |
ಯಾವದ್ವಂಶೇ ಸುತಃ ಕೃಷ್ಣಭಕ್ತಿಯುಕ್ತೋ ನ ಜಾಯತೇ ॥ ೧೦ ॥

---

೭. ಜಾತಿ, ವಿದ್ಯೆ, ದೊಡ್ಡಸ್ತಿಕೆ, ರೂಪ, ಯೌವನಗಳೆಂಬಿವೈದು ಭಕ್ತಿಗೆ ಕಂಟಕಗಳೆನಿಸುವುವು. ಆದುದರಿಂದ ಇವುಗಳಲ್ಲಿ ಪ್ರಯತ್ನಪೂರ್ವಕವಾಗಿ ಅಭಿಮಾನವನ್ನು ತೊರೆಯಬೇಕು.

೮. ಓ ರಾಜೇಂದ್ರ! ಯಾವ ಮಾನವರು ಭಕ್ತಿಯಿಂದ ಶ್ರೀಕೃಷ್ಣನ ಪ್ರಸಾದವನ್ನೂ ಪಾದೋದಕವನ್ನೂ ಸೇವಿಸುವರೋ ಅವರು ಈ ಭೂಮಂಡಲವನ್ನೇ ಪಾವನವನ್ನಾಗಿ ಮಾಡುವರು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

೯. ಗಂಗೆಯು ಪಾಪವನ್ನು ಪರಿಹರಿಸುವಳು. ಚಂದ್ರನು ತಾಪವನ್ನು (ಬೇಗೆ) ಹೋಗಲಾಡಿಸುವನು. ಕಲ್ಪವೃಕ್ಷವು ಬಡತನವನ್ನು ಹೋಗಲಾಡಿಸುವುದು. ಆದರೆ ಸಜ್ಜನ ಸಮಾಗಮವು ಘಟಿಸಿದ ಕೂಡಲೇ ಪಾಪವೂ, ತಾಪವೂ ಬಡತನವೂ (ಎಲ್ಲವೂ) ಒಟ್ಟಿಗೆ ಪರಿಹಾರವಾಗುವುದು.

೧೦. ಪಿತೃದೇವತೆಗಳು ತಮ್ಮ ವಂಶದಲ್ಲಿ ಎಲ್ಲಿಯವರೆಗೆ ಕೃಷ್ಣನಲ್ಲಿ ಭಕ್ತಿಯುಳ್ಳ ಕುಮಾರನು ಜನಿಸದೆ ಇರುವನೊ, ಅಲ್ಲಿಯವರೆಗೆ ಪಿಂಡವನ್ನು ಯಾರಾದರೂ ಕೊಟ್ಟರೆ ಸಾಕೆಂಬುವುದಾಗಿ ನಿರೀಕ್ಷಿಸುತ್ತಾ ಈ ಸಂಸಾರದಲ್ಲಿ ತೊಳಲುತ್ತಲಿರುವರು. (ಕೃಷ್ಣಭಕ್ತನ ಜನನದಿಂದ ಪಿತೃಗಳು ನಿತ್ಯತೃಪ್ತಿ ಮೋಕ್ಷರೂಪವಾದ ಸುಖಕ್ಕೆ ಭಾಗಿಗಳಾಗುವುದರಿಂದ ಅವರಿಗೆ ಪಿಂಡ, ಭೋಜನಗಳಲ್ಲಿ ಆಸೆಯು ತಪ್ಪುವುದೆಂದು ಭಾವವು).

ಸ ಕಿಂ ಗುರುಃ ಸ ಕಿಂ ತಾತಃ ಸ ಕಿಂ ಪುತ್ರಃ ಸ ಕಿಂ ಸಖಾ ।
ಸ ಕಿಂ ರಾಜಾ ಸ ಕಿಂ ಬಂಧುರ್ನ ದದ್ಯಾದ್ಯೋ ಹರೌ ಮತಿಂ ॥ ೧೧ ॥

ವಿದ್ಯಾಧನಾಗಾರಕಲಾಭಿಮಾನಿನೋ
ರೂಪಾದಿದಾರಾಸುತನಿತ್ಯಬುದ್ಧಯಃ ।
ದೃಷ್ಟ್ವಾಽನ್ಯದೇವಾನ್ಫಲಕಾಮಿನಶ್ಚ
ಜೀವನ್ಮೃತಾಸ್ತೇ ನ ಭಜಂತಿ ಕೇಶವಂ ॥ ೧೨ ॥

ಹಯಮೇಧಚರಿತ್ರಸ್ಯ ಸುಮೇರುಃ ಕಥಿತೋ ಮಯಾ ।
ವ್ಯಾಪ್ತಃ ಕೃಷ್ಣಚರಿತ್ರೈಶ್ಚ ತವಾಗ್ರೇ ನೃಪಸತ್ತಮ ॥ ೧೩ ॥

ಯಸ್ಯ ಶ್ರವಣಮಾತ್ರೇಣ ಕೃಷ್ಣಭಕ್ತಿರ್ಭವಿಷ್ಯತಿ ।
ನರಾಣಾಂ ನೃಪಶಾರ್ದೂಲ ಶೋಕಮೋಹಭಯಾಪಹಾ ॥ ೧೪ ॥

---

೧೧. ಯಾವನು ಶ್ರೀಹರಿಯಲ್ಲಿ ಭಕ್ತಿಯನ್ನಿಡುವಂತೆ ಉಪದೇಶಮಾಡದೆಯೇ ಇರುವನೋ ಅವನು ಎಂತಹ ಗುರು? ಎಂತಹ ತಂದೆ? ಅವನೆಂತಹ ಮಗ? ಅವನೆಂತಹ ಸ್ನೇಹಿತ; ಅವನೆಂತಹ ದೊರೆ? ಅವನೆಂತಹ ಬಂಧು?

೧೨. ಯಾರು ವಿದ್ಯೆಯನ್ನೂ, ಧನವನ್ನೂ, ಗೃಹಾದಿಗಳನ್ನೂ, ಗೀತ ನೃತ್ಯಾದಿ ಕಲೆಗಳನ್ನೂ ಆರ್ಜಿಸಬೇಕೆಂದು ಸರ್ವದಾ ಹಂಬಲಿಸುತ್ತಿರುವರೋ ಮತ್ತು ಯಾರು ರೂಪದಲ್ಲಿಯೂ, ಸತ್ನೀ ಪುತ್ರರಲ್ಲಿಯೂ ವಿಶೇಷವಾದ ಮಮತೆಯನ್ನು ಹೊಂದಿರುವರೋ ಮತ್ತು ಯಾರು ಶ್ರೀಹರಿಯನ್ನು ಸೇವಿಸದೆ ಇತರ ದೇವತೆಗಳನ್ನು ನಾನಾವಿಧವಾದ ಫಲಾಪೇಕ್ಷೆಯಿಂದ ಆರಾಧಿಸುವರೋ ಅವರೆಲ್ಲರೂ ಜೀವನ್ಮೃತ (ಬದುಕಿದ್ದರೂ ಸತ್ತವರಂತೆ) ರೆಂದೇ ತಿಳಿಯಬೇಕು.

೧೩. ಓ ನೃಪಶ್ರೇಷ್ಠ! ನಾನು ನಿನಗೆ ಸುಮೇರುವೆಂಬ ಹೆಸರುಳ್ಳ— ಶ್ರೀಕೃಷ್ಣ ಚರಿತ್ರಗಳಿಂದ ನಿಬಿಡವಾಗಿರುವ ಈ ಹಯಮೇಧ ಚರಿತ್ರವನ್ನು ತಿಳಿಯಪಡಿಸಿದೆನು.

೧೪. ಇದನ್ನು ಕೇಳಿದ ಮಾತ್ರದಿಂದಲೇ ಮಾನವರ ಸಕಲ ದುಃಖಗಳನ್ನೂ, ಅಜ್ಞಾನವನ್ನೂ ಭಯಾತಂಕಗಳನ್ನೂ ಪರಿಹರಿಸುವಂತಹ ಶ್ರೀಕೃಷ್ಣ ಭಕ್ತಿಯು ಧೃಢವಾಗಿ ಬೇರೂರುವುದು.

ಅನೇನ ಚರಿತೇನಾಪಿ ಲಭತೇ ವಾಂಛಿತಂ ಫಲಂ ।
ಧನಂ ಧಾನ್ಯಂ ಸುತಂ ಭಕ್ತಿಂ ತಥಾ ಶತ್ರುಕ್ಷಯಂ ನರಃ ॥ ೧೫ ॥

ತಸ್ಮಾದ್ಭಜಾಶು ರಾಜೇಂದ್ರ ಶ್ರೀಕೃಷ್ಣಂ ಜಗದೀಶ್ವರಂ ।
ಭಕ್ತ್ಯಾ ಗೃಹೇ ವಾ ವಿಪಿನೇ ಜ್ಞಾತ್ವಾ ವಿಶ್ವಂ ಮನೋಮಯಂ ॥ ೧೬ ॥

ಆಯುಸ್ತೇ ನರವೀರ ವರ್ಧತು ಸದಾ ಹೇಮಂತರಾತ್ರಿರ್ಯಥಾ
ಲೋಕಾನಾಂ ಪ್ರಿಯದರ್ಶನೋ ಭವ ಸದಾ ಹೇಮಂತಸೂರ್ಯೋ ಯಥಾ
ಶತ್ರೂಣಾಮಪಿ ದುಃಸಹೋ ಭವ ಸದಾ ಹೇಮಂತತೋಯಂ ಯಥಾ
ನಾಶಂ ಯಾಂತು ತವಾರಯೋಽಪಿ ಸತತಂ ಹೇಮಂತಪದ್ಮಂ ಯಥಾ ॥

॥ ಸೂತ ಉವಾಚ ॥

ಇತಿ ಶ್ರುತ್ವಾ ವಜ್ರನಾಭಿರ್ಹರ್ಷಿತಃ ಪ್ರೇಮವಿಹ್ವಲಃ ।
ಸ್ಮರನ್ಕೃಷ್ಣಸ್ಯ ಮಾಹಾತ್ಮ್ಯಂ ನತ್ವಾ ಗುರುಮಥಾಬ್ರವೀತ್ ॥ ೧೮ ॥

---

೧೫. ಈ ಹಯಮೇಧ ಚರಿತ್ರದ ಶ್ರವಣಾದಿಗಳಿಂದಲೂ ಸಹ ಮಾನವನು ತಾನು ಬಯಸಿದ ಧನ ಧಾನ್ಯಗಳನ್ನೂ, ಪುತ್ರ ಸಂಪತ್ತನ್ನೂ, ದೈವಭಕ್ತಿಯನ್ನೂ ಶತ್ರುವಿನಾಶ ರೂಪವಾದ ಫಲವನ್ನೂ ಪಡೆಯುವನು.

೧೬. ಓ ರಾಜೇಂದ್ರ! ಆದುದರಿಂದ ನೀನು ಈ ಜಗತ್ತೆಲ್ಲವೂ ಮನಸ್ಸಿನ ಭ್ರಾಂತಿಯಿಂದ ಹುಟ್ಟಿದುದೆಂದು ತತ್ತ್ವಾಂಶವನ್ನರಿತು ಜಗದೀಶ್ವರನಾದ ಆ ಶ್ರೀಕೃಷ್ಣನನ್ನು ಭಕ್ತಿಯಿಂದ ಮನೆಯಲ್ಲಾಗಲಿ, ಕಾಡಿನಲ್ಲಾಗಲಿ ಆರಾಧಿಸು.

೧೭. ಎಲೈ ವೀರಾಗ್ರಣಿಯೇ! ನಿನ್ನ ಆಯುಸ್ಸು ಹೇಮಂತಋತುವಿನ ರಾತ್ರಿಯು ಸಮುದಂತೆ ಹೆಚ್ಚುತ್ತಾ ಬೆಳೆಯಲಿ. ಮತ್ತು ನೀನು ಅದೇ ಹೇಮಂತ ಸಮಯದ ಸೂರ್ಯನಂತೆ ಪ್ರಜೆಗಳೆಲ್ಲರಿಗೂ ಪ್ರಿಯದರ್ಶನನಾಗುವುದಲ್ಲದೆ (ಎಲ್ಲರಿಂದಲೂ ಅಪೇಕ್ಷಿಸಲ್ಪಡುವ ದರ್ಶನವುಳ್ಳವನು.) ಆ ಹೇಮಂತಋತುವಿನಂತೆಯೇ ನಿನ್ನ ಶತ್ರುಗಳಿಗೆ ದುಸ್ಸಹನು (ಸಹಿಸಲು ಅಸಾಧ್ಯನೂ) ಆಗು. ಮತ್ತು ಆ ಹೇಮಂತಕಾಲದ ಕಮಲಗಳಂತೆ ನಿನ್ನ ಶತ್ರುಗಳೆಲ್ಲರೂ ವಿನಾಶವನ್ನು ಹೊಂದಲಿ ಎಂದನು.

೧೮. ಸೂತಮುನಿಯು ಹೇಳಿದನು :—ಎಲೈ ಶೌನಕಾದಿಗಳಿರಾ! ಈ ರೀತಿ ಗರ್ಗಾಚಾರ್ಯನು ಹೇಳಿದುದನ್ನು ಕೇಳಿ ಆ ವಜ್ರನಾಭಿರಾಜನು ಅತಿ

|| ರಾಜೋವಾಚ ||

ಧನ್ಯೋಽಹಂ ಚ ಕೃತಾರ್ಥೋಽಹಂ ಭವತಾ ಕರುಣಾತ್ಮನಾ |
ಶ್ರುತ್ವಾ ಕೃಷ್ಣಸ್ಯ ಮಾಹಾತ್ಮ್ಯಂ ಲಗ್ನಃ ಕೃಷ್ಣೇ ಚ ನೋ ಮನಃ ||೧೯||

|| ಸೂತ ಉವಾಚ ||

ಇತ್ಯುಕ್ತ್ವಾ ಪೂಜಯಾಮಾಸ ಗರ್ಗಾಚಾರ್ಯಂ ನೃಪೋತ್ತಮಃ |
ಗಂಧಾಕ್ಷತೈಃ ಪುಷ್ಪಹಾರೈಸ್ತಥಾ ಜಾಲಕಮಾಲಯಾ || ೨೦ ||

ಗಜೈ ರಥೈಸ್ತುರಂಗೈಶ್ಚ ಶಿಬಿಕಾಭಿಶ್ಚ ಮಂದಿರೈಃ |
ರೌಪ್ಯಾಣಾಂ ಚೈವ ಭಾರೈಶ್ಚ ಸ್ವರ್ಣಭಾರೈಶ್ಚ ಶೌನಕ || ೨೧ ||

ತಥಾ ರತ್ನೈಶ್ಚ ಗ್ರಾಮೈಶ್ಚ ಹ್ಯಾತ್ಮನಾ ಹರ್ಷಪೂರಿತಃ |
ಪ್ರದಕ್ಷಿಣಾಪ್ರಣಾಮೈಶ್ಚ ತಥಾ ನೀರಾಜನಾದಿಭಿಃ || ೨೨ ||

ಶಯವಾದ ಸಂತೋಷವನ್ನೂ, ಸಂಪ್ರೀತಿಯನ್ನೂ ತಾಳಿ ಆ ಶ್ರೀಕೃಷ್ಣನ ಮಾಹಾತ್ಮ್ಯವನ್ನೇ ಪುನಃ ಪುನಃ ಸ್ಮರಿಸುತ್ತಾ ತನ್ನ ಗುರುವಾದ ಆ ಗರ್ಗಾಚಾರ್ಯನಿಗೆ ಅಭಿವಂದಿಸಿ—

೧೯. ಆರ್ಯ! ಕರುಣಾನಿಧಿಯಾದ ನಿನ್ನಿಂದ ನಾನು ಧನ್ಯನಾದೆನು. ಕೃತಕೃತ್ಯನಾದೆನು. ನೀನು ವರ್ಣಿಸಿದ ಶ್ರೀಕೃಷ್ಣನ ಮಹಿಮೆಯನ್ನು ಕೇಳಿ ನನ್ನ ಮನಸ್ಸು ಶ್ರೀಕೃಷ್ಣನಲ್ಲಿಯೇ ನೆಲೆಗೊಂಡಿತು.

೨೦. ಎಂಬುದಾಗಿ ಹೇಳಿ ಆ ನೃಪಶ್ರೇಷ್ಠನಾದ ವಜ್ರನಾಭಿಕುಮಾರನು ಗಂಧಾದ್ಯನುಲೇಪನಗಳಿಂದಲೂ, ಅಕ್ಷತೆಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಎಳೆ ಮೊಗ್ಗುಗಳ ಹಾರಗಳಿಂದಲೂ, ಆ ಗರ್ಗಾಚಾರ್ಯನನ್ನು ಪೂಜಿಸಿದುದಲ್ಲದೆ,—

೨೧-೨೨. ಆತನಿಗೆ ಆನೆ, ಕುದುರೆಗಳನ್ನೂ, ರಥಗಳನ್ನೂ ಮೇನೆ, ಪಲ್ಲಕ್ಕಿ ಮೊದಲಾದ ಯಾನಗಳನ್ನೂ, ಅನೇಕ ಗೃಹಗಳನ್ನೂ ಬೇಕಾದಷ್ಟು ಭಾರ ಪ್ರಮಾಣದ (ಗಟ್ಟಿಮುಟ್ಟಾದ ಆಳು ಹೊರಬಹುದಾದಷ್ಟು ತೂಕವಿರುವ) ಚಿನ್ನ ಬೆಳ್ಳಿಗಳನ್ನೂ ನಾನಾವಿಧವಾದ ರತ್ನಗಳನ್ನೂ, ಮಾನ್ಯರೂಪವಾಗಿ ಅನೇಕ ಗ್ರಾಮಗಳನ್ನೂ ಇತ್ತು ಸತ್ಕರಿಸಿ ಮಹಾಸಂತೋಷದಿಂದ ಪ್ರದಕ್ಷಿಣಗಳನ್ನೂ, ಪ್ರಣಾಮಗಳನ್ನೂ ಮಾಡುತ್ತಾ ನೀರಾಜನಾದಿಗಳಿಂದ ಉಪಚರಿಸಿದನು.

॥ ಸೂತ ಉವಾಚ ॥

ತತಶ್ಚ ಗರ್ಗ ಉತ್ಥಾಯ ದತ್ವಾ ವಜ್ರಾಯ ಚಾಶಿಷಂ ।
ಭೂಪೇನ ವಂದಿತಃ ಸೋಽಪಿ ಯಯೌ ದಕ್ಷಿಣಯಾ ಯುತಃ ॥ ೨೩ ॥

ಸ ಗತ್ವಾ ಯಮುನಾತೀರೇ ತೀರ್ಥೇ ವಿಶ್ರಾಂತಿಸಂಜ್ಞಕೇ ।
ಮಾಥುರೇಭ್ಯಶ್ಚ ವಿಪ್ರೇಭ್ಯೋ ಮುನಿಃ ಸರ್ವಂ ಧನಂ ದದೌ ॥ ೨೪ ॥

ಗರ್ಗವಾಕ್ಯಾತ್ತತೋ ವಜ್ರೋ ಮಥುರಾಯಾಂ ಮುನೀಶ್ವರೈಃ ।
ಚಕಾರ ಹಯಮೇಧಂ ವೈ ಯಥಾ ನಾಗಪುರೇಶ್ವರಃ ॥ ೨೫ ॥

ತತಃ ಸ ಮಥುರಾಯಾಂ ಚ ದೀರ್ಘವಿಷ್ಣುಂ ಚ ಕೇಶವಂ ।
ವೃಂದಾವನೇ ಚ ಗೋವಿಂದಂ ಹರಿದೇವಂ ಗಿರೀಶ್ವರೇ ॥ ೨೬ ॥

---

೨೩. ಅನಂತರ ಆ ಗರ್ಗಾಚಾರ್ಯನು ಪೀಠದಿಂದೆದ್ದು ಆ ವಜ್ರನಾಭಿ ಕುಮಾರನನ್ನು ಆಶೀರ್ವದಿಸಿ, ಅವನಿಂದ ಮತ್ತೊಮ್ಮೆ ನಮಸ್ಕೃತನಾಗಿ ಅವನಿತ್ತ ದಕ್ಷಿಣಾದ್ರವ್ಯದೊಡನೆ ಪ್ರಯಾಣಬೆಳಸಿದನು.

೨೪. ಅಲ್ಲಿಂದ ಯಮುನಾನದೀ ತೀರವನ್ನು ಸೇರಿ ವಿಶ್ರಾಂತಿಯೆಂಬ ಹೆಸರುಳ್ಳ ತೀರ್ಥನಲ್ಲಿ ಮಥುರಾನಿವಾಸಿಗಳಾದ ಬ್ರಾಹ್ಮಣಂಗೆ ತನ್ನ ಆ ಧನವೆಲ್ಲವನ್ನೂ ದಾನಮಾಡಿಬಿಟ್ಟನು.

೨೫. ಇತ್ತಲಾಗಿ ಗರ್ಗಮಹರ್ಷಿಯ ಮಾತಿನಂತೆ ಆ ವಜ್ರನಾಭಿರಾಜನು ಮಥುರಾನಗರಿಯಲ್ಲಿ ಮಹರ್ಷಿಸಮೇತನಾಗಿ ಹಿಂದೆ ಧರ್ಮರಾಜನು ಮಾಡಿದಂತೆ ಅಶ್ವಮೇಧಯಾಗವನ್ನು ಮಾಡಿದನು.

೨೬-೨೭. ಅನಂತರ ಆ ವಜ್ರಕುಮಾರನು ಮಥುರೆಯಲ್ಲಿ ದೀರ್ಘವಿಷ್ಣುವನ್ನೂ, ಕೇಶವನೆಂಬ ಮೂರ್ತಿಯನ್ನೂ, ವೃಂದಾವನದಲ್ಲಿ ಗೋವಿಂದನೆಂಬ ವಿಗ್ರಹವನ್ನೂ, ಗೋವರ್ಧನವೆಂಬ ಪರ್ವತದಲ್ಲಿ ಹರಿದೇವನೆಂಬ ಮೂರ್ತಿಯನ್ನೂ, ಗೋಕುಲದಲ್ಲಿ ಗೋಕುಲೇಶ್ವರ ಪ್ರತಿಮೆಯನ್ನೂ ಅದಕ್ಕೆ ಒಂದು

ಗೋಕುಲೇ ಗೋಕುಲೇಶಂ ಚ ಗೋಕುಲಾದ್ಯೋಜನೇ ಬಲಂ ।
ಸ್ಥಾಪಯಾಮಾಸ ವಜ್ರಸ್ತು ಹರೇಶ್ಚ ಪ್ರತಿಮಾಶ್ಚ ಷಟ್ ॥ ೨೭ ॥
ಬಲಸ್ಯ ಪ್ರತಿಮಾಶ್ಚಾನ್ಯಾಃ ಪಂಚ ವೈ ವ್ರಜಮಂಡಲೇ ।
ನೃಣಾಂ ಶುಭಾಯ ವಜ್ರಸ್ತು ಸ್ಥಾಪಯಾಮಾಸ ಹರ್ಷಿತಃ ॥ ೨೮ ॥
ಅಬ್ದಾಶ್ಚತುಃಸಹಸ್ರಾಣಿ ಕಲೌ ಪಂಚಶತಾನಿ ಚ ।
ಗತೇ ಗಿರಿವರೇ ಹಿ ಶ್ರೀನಾಥಃ ಪ್ರಾದುರ್ಭವಿಷ್ಯತಿ ॥ ೨೯ ॥
ತಂ ಪೂಜಯಿಷ್ಯತಿ ವ್ರಜೇ ವಿಷ್ಣುಸ್ವಾಮೀ ರವೇಸ್ತನುಃ ।
ವಲ್ಲಭಾದ್ಯಾಶ್ಚ ತಚ್ಛಿಷ್ಯಾಶ್ಚಾನ್ಯೇ ಗೋಕುಲಸ್ವಾಮಿನಃ ॥ ೩೦ ॥
ಶ್ರೀಮದ್ಭಾಗವತಾನ್ಮುಕ್ತಿಂ ದೃಷ್ಟ್ವಾ ವಜ್ರಃ ಪರೀಕ್ಷಿತಃ ।
ವೈರಾಗ್ಯೇಣಾಪಿ ಮುನಯೋ ರಾಜ್ಯಂ ತ್ಯಕ್ತುಂ ಮನೋ ದಧೇ ॥ ೩೧ ॥

ಯೋಜನ ದೂರದಲ್ಲಿ ಬಲರಾಮವಿಗ್ರಹವನ್ನೂ ಇಂತು ಒಟ್ಟು ಶ್ರೀಹರಿಯ ಆರು ವಿಗ್ರಹಗಳನ್ನು ಪ್ರತಿಷ್ಠಿಸಿದನು.

೨೮. ಇದಲ್ಲದೆ ಆ ವ್ರಜಮಂಡಲದಲ್ಲಿ ಸಕಲ ಜನಗಳ ಶ್ರೇಯಸ್ಸಿಗಾಗಿ ಆ ವಜ್ರನು ಮಹಾಸಂತೋಷದಿಂದ ಇನ್ನೂ ಐದು ಬಲರಾಮ ವಿಗ್ರಹಗಳನ್ನು ಪ್ರತಿಷ್ಠೆಮಾಡಿದನು.

೨೯. ಎಲೈ ಶೌನಕಾದಿಗಳಿರಾ! ಕಲಿಯುಗವು ಆರಂಭವಾಗಿ ನಾಲ್ಕು ಸಾವಿರದೈನೂರು ವರ್ಷಗಳು ಕಳೆದಮೇಲೆ ಶ್ರೀಹರಿಯು ಗಿರಿಶ್ರೇಷ್ಠವಾದ ಗೋವರ್ಧನದಲ್ಲಿ ಆವಿರ್ಭವಿಸುವನು.

೩೦. ಆ ಸ್ವಾಮಿಯನ್ನು ರವಿಯ ಅವತಾರವಾದ ವಿಷ್ಣುಸ್ವಾಮಿಯು, ಪೂಜಿಸುವನು. ಅನಂತರ ಆತನ ಶಿಷ್ಯರಾದ ವಲ್ಲಭಾದಿಗಳೂ, ಇತರ ಗೋಕುಲ ಸ್ವಾಮಿಗಳೂ (ಗೋಸ್ವಾಮಿ) ಆ ವಿಗ್ರಹವನ್ನು ಅರ್ಚಿಸುವರು.

೩೧. ಎಲೈ ಮುನಿಗಳಿರಾ! ವಜ್ರನೆಂಬ ಆ ಯದುಕುಮಾರನು ಭಾಗವತ ಶ್ರವಣದಿಂದ ಪರೀಕ್ಷಿದ್ರಾಜನು ಮೋಕ್ಷವನ್ನು ಪಡೆದುದನ್ನು ನೋಡಿದ್ದರಿಂದಲೂ ತನಗೆ ವೈರಾಗ್ಯಬುದ್ಧಿಯು ಸಹಜವಾಗಿ ಹುಟ್ಟಿದುದರಿಂದಲೂ, ತನ್ನ ರಾಜ್ಯವನ್ನು ಪರಿತ್ಯಜಿಸಲು ನಿಶ್ಚಯಿಸಿದನು.

ತದಾಯಯೌ ಚೌಪಗವಿರ್ನರನಾರಾಯಣಾಶ್ರಮಾತ್ ।
ಪಾದುಕಾಂ ಮಸ್ತಕೇ ಬಿಭ್ರತ್ಕೃಷ್ಣಚಂದ್ರಸ್ಯ ವೈಷ್ಣವಃ ॥ ೩೨ ॥

ಭೂಪೇನ ವಂದಿತಃ ಸೋಽಪಿ ಪ್ರತ್ಯುತ್ಥಾನಾಸನಾದಿಭಿಃ ।
ಕಥಯಾಮಾಸ ವಜ್ರಾಗ್ರೇ ಶ್ರೀಮದ್ಭಾಗವತಂ ಮುದಾ ॥ ೩೩ ॥

ಶ್ರುತ್ವೋದ್ಧವಾದ್ಭಾಗವತಂ ವಜ್ರಃ ಪ್ರೋವಾಚ ಹರ್ಷಿತಃ ।
ಶ್ರುತಾ ಮಯಾ ಪುರಾ ತಾತ ಸುಸಭಾಯಾಂ ಪರೀಕ್ಷಿತಃ ॥ ೩೪ ॥

ಸಮಾಧಿಭಾಷಾ ವ್ಯಾಸಸ್ಯ ಶುಕದೇವೇನ ವರ್ಣಿತಾ ।
ಪುನಸ್ತ್ವಯಾಪಿ ಕಥಿತಾ ಕೃತಾರ್ಥೋಽಹಂ ಬಭೂವ ಹ ॥ ೩೫ ॥

---

೩೨. ಆ ಸಮಯಕ್ಕೆ ಸರಿಯಾಗಿ ವೈಷ್ಣವಾಗ್ರಣಿಯೂ ಉಪಗವಿಯ ಪುತ್ರನೂ ಆದ ಉದ್ಧವನು ಶ್ರೀಕೃಷ್ಣಚಂದ್ರನ ಪಾದುಕೆಗಳನ್ನು ತಲೆಯಮೇಲೆ ಧರಿಸಿ ನರನಾರಾಯಣಾಶ್ರಮದಿಂದ ಅಲ್ಲಿಗೆ ಬಂದನು.

೩೩. ಆಗವನನ್ನು ವಜ್ರನಾಭಿರಾಜನು ತಟ್ಟನೆ ಪ್ರತ್ಯುಸ್ಥಾನಮಾಡಿ ಆಸನಾದ್ಯುಪಚಾರಗಳಿಂದ ಸತ್ಕರಿಸಿ ನಮಸ್ಕರಿಸಿದನು. ಅನಂತರ ಸುಪ್ರೀತನಾದ ಆ ಉದ್ಧವನು ವಜ್ರನೆದುರಿಗೆ ಶ್ರೀಮದ್ಭಾಗವತವನ್ನು ಶ್ರವಣ ಮಾಡಿದನು.

೩೪-೩೫. ಆ ಭಾಗವತ ಶ್ರವಣಾನಂತರ ವಜ್ರನಾಭಿರಾಜನು ಆ ಉದ್ಧವನನ್ನು ಕಂಡು ಮಹಾ ಸಂತೋಷದಿಂದ “ಅಪ್ಪಾ! ಹಿಂದೆ ನಾನು ತುಂಬಿದ ಸಭೆಯಲ್ಲಿ ಶುಕಮಹರ್ಷಿಯಿಂದ ಪ್ರೋಕ್ತವಾದುದೂ, ವ್ಯಾಸಮಹರ್ಷಿಯಿಂದ ರಚಿತವಾದುದೂ ಆದ ಈ ಶ್ರೀಮದ್ಭಾಗವತವನ್ನು ಕೇಳಿದ್ದೆನು. ಈಗಲಂತೂ ಮತ್ತೊಮ್ಮೆ ನಿನ್ನ ಮುಖದಿಂದ ಅದನ್ನು ಶ್ರವಣಮಾಡಿದೆನು. ಆದುದರಿಂದ ನಾನು ಕೃತಾರ್ಥನಾದೆನು” ಎಂದು ನುಡಿದು—

ಇತ್ಯುಕ್ತ್ವಾ ವಜ್ರನಾಭಿಸ್ತು ಸ್ವರಾಜ್ಯಂ ಪ್ರತಿಬಾಹವೇ ।
ದತ್ವಾ ಜಗಾಮ ಗೋಲೋಕಂ ವಿಮಾನೇನಾಪಿ ಚೋದ್ಧವಃ ॥ ೩೬ ॥

ಚಕಾರ ರಾಜ್ಯಂ ಧರ್ಮೇಣ ಮಥುರಾಯಾಂ ಚ ದಕ್ಷಿಣೇ ।
ಪ್ರತಿಬಾಹುಃ ಸುತಸ್ತಸ್ಯ ಚೋತ್ತರೇ ಜನಮೇಜಯಃ ॥ ೩೭ ॥

ಅಗ್ರೇ ಕಲಿಯುಗೋ ಬ್ರಹ್ಮನ್ನಾಗಮಿಷ್ಯತಿ ದಾರುಣಃ ।
ಪರಂತು ಚೈಕಂ ನಿರ್ವಾಹಂ ದೃಶ್ಯತೇ ಪಾಪನಾಶನಂ ॥ ೩೮ ॥

ಯಾವದ್ಭಾಗವತಂ ಶಾಸ್ತ್ರಂ ಯಾವದ್ಗೋಕುಲಸ್ವಾಮಿನಃ ।
ಯಾವದ್ಗೋವರ್ಧನೋ ಗಂಗಾ ತಾವತ್ಕಲಿಯುಗಂ ನ ಹಿ ॥ ೩೯ ॥

---

೩೬. (ಆ ವಜ್ರನಾಭಿರಾಜನು) ತನ್ನ ಮಗನಾದ ಪ್ರತಿಬಾಹುವಿಗೆ ರಾಜ್ಯಭಾರವನ್ನು ಒಪ್ಪಿಸಿ ದಿವ್ಯವಾದ ವಿಮಾನವನ್ನೇರಿ ಉದ್ಧವನೊಡನೆ ಗೋಲೋಕಕ್ಕೆ ಹೊರಟುಹೋದನು.

೩೭. ಅನಂತರ ಅವನ ಮಗನಾದ ಪ್ರತಿಭಾನುಕುಮಾರನು ಮಥುರಾ ನಗರದಲ್ಲಿದ್ದುಕೊಂಡು ದಕ್ಷಿಣ ಭಾಗದ ಭೂಮಂಡಲವನ್ನು ಧರ್ಮದಿಂದ ಆಳಿದನು. ಅದಕ್ಕೆ ಉತ್ತರದಲ್ಲಿರುವ ಭೂಭಾಗವನ್ನು ಪರೀಕ್ಷಿದ್ರಾಜನ ಪುತ್ರನಾದ ಜನಮೇಜಯನು ಆಳಿದನು.

೩೮. ಎಲೈ ಬ್ರಾಹ್ಮಣಶ್ರೇಷ್ಠನಾದ ಶೌನಕಮುನಿಯೇ! ಮುಂದಕ್ಕೆ ಭಯಂಕರವಾದ ಕಲಿಗಾಲವು ಪ್ರಾಪ್ತವಾಗುವುದು. ಆದರೂ ಹೆದರಿಕೆಯಿಲ್ಲ. ಏಕೆಂದರೆ ಪಾಪಗಳನ್ನು ಪರಿಹರಿಸುವಂತಹ ಒಂದು ಉಪಾಯವಿದೆ.

೩೯. ಎಲ್ಲಿಯವರೆಗೆ ಭಾಗವತವೆಂಬ ಶಾಸ್ತ್ರವಿರುವುದೋ, ಎಲ್ಲಿಯವರೆಗೆ ಗೋಕುಲಸ್ವಾಮಿಗಳು ಮತ್ತು ಗೋವರ್ಧನಪರ್ವತ, ಗಂಗಾನದಿಗಳು ಇರುವುವೋ ಅಲ್ಲಿಯವರೆಗೂ ಕಲಿಯುಗವಿಲ್ಲವೆಂದೇ ತಿಳಿ.

ಭಾರತಾನಾಂ ಚ ಖಂಡಾನಾಂ ಜಂಬೂದ್ವೀಪೇ ಯಥಾ ಮುನೇ ।
ಮಧ್ಯೇ ಸಂರಾಜತೇ ಮೇರುಃ ಸೌವರ್ಣಃ ಪದ್ಮಪುಷ್ಪವತ್ ॥ ೪೦ ॥

ತಥಾ ಗೋಲೋಕಖಂಡಾನಾಂ ಸಂಹಿತಾಯಾಂ ಮಹಾಮುನೇ ।
ಹಯಮೇಧಚರಿತ್ರಸ್ಯ ಮಧ್ಯೇ ಮೇರುರ್ವಿರಾಜತೇ ॥ ೪೧ ॥

ಅಸ್ಯ ಶ್ರವಣಮಾತ್ರೇಣ ವಿಪ್ರಹಾ ಗುರುತಲ್ಪಗಃ ।
ಸ್ತ್ರೀರಾಜಪಿತೃಗೋಹಂತಾ ಮುಚ್ಯತೇ ಸರ್ವಪಾತಕೈಃ ॥ ೪೨ ॥

ವಿಪ್ರಸ್ತು ಲಭತೇ ವಿದ್ಯಾಂ ರಾಜ್ಯಂ ರಾಜನ್ಯ ಏವ ಚ ।
ಶ್ರವಣಾಚ್ಚ ಧನಂ ವೈಶ್ಯೋ ಧರ್ಮಂ ಶೂದ್ರಸ್ತಥೈವ ಚ ॥ ೪೩ ॥

ನದೀಷು ಚ ಯಥಾ ಗಂಗಾ ದೇವೇಷು ಭಗವಾನ್ಯಥಾ ।
ತೀರ್ಥೇಷು ವೈ ತೀರ್ಥರಾಜ ಇಯಂ ವೈ ಸಂಹಿತಾಸು ಚ ॥ ೪೪ ॥

೪೦-೪೧. ಓ ಮುನೀಂದ್ರ! ಜಂಬೂದ್ವೀಪದ ಮಧ್ಯದಲ್ಲಿ ಭಾರತಾದಿ ನವಖಂಡಗಳ ನಡುವೆ ಅರಳಿದ ತಾವರೆಯ ಹೂವಿನಂತೆ ಇರುವ ಸುವರ್ಣಮಯವಾದ ಮೇರುಪರ್ವತವು ಕಂಗೊಳಿಸುವಂತೆ ಗರ್ಗಮಹಾಮುನಿಪ್ರಣೀತವಾದ ಈ ಸಂಹಿತೆಯಲ್ಲಿ ಗೋಲೋಕಾದಿ ಖಂಡಗಳ ನಡುವೆ ಸುಮೇರುವೆಂಬ ಹೆಸರುಳ್ಳ ಹಯಮೇಧ ಚರಿತ್ರವು ವಿರಾಜಿಸುವುದು.

೪೨. ಇದನ್ನು ಶ್ರವಣಮಾಡಿದ ಮಾತ್ರದಿಂದಲೇ ಬ್ರಹ್ಮಹತ್ಯೆ ಮಾಡಿದವನೂ, ಗುರುತಲ್ಪಗಾಮಿಯೂ, ಸ್ತ್ರೀಹತ್ಯೆ, ರಾಜಹತ್ಯೆ, ಪಿತೃಹತ್ಯೆ, ಗೋಹತ್ಯೆ ಮುಂತಾದ ಮಹಾ ಪಾಪಗಳನ್ನು ಮಾಡಿದವನೂ ತಮ್ಮ ತಮ್ಮ ಪಾಪಗಳಿಂದ ಬಿಡುಗಡೆ ಹೊಂದುವರು.

೪೩. ಈ ಹಯಮೇಧ ಚರಿತ್ರಶ್ರವಣದಿಂದ ಬ್ರಾಹ್ಮಣನು ಜ್ಞಾನಿಯಾಗುವನು. ಕ್ಷತ್ರಿಯವಂಶ ಸಂಜಾತನು ರಾಜ್ಯವನ್ನು ಹೊಂದುವನು. ವೈಶ್ಯನು ಹಣಗಾರನಾಗುವನು. ಶೂದ್ರನು ಧರ್ಮವಾಗಿ ನಡೆಯುವನು.

೪೪. ನದಿಗಳಲ್ಲಿ ಗಂಗೆಯು ಹೇಗೋ, ದೇವತೆಗಳಲ್ಲೆಲ್ಲಾ ಭಗವಂತನಾದ ಶ್ರೀಹರಿಯು ಹೇಗೋ, ತೀರ್ಥಗಳಲ್ಲೆಲ್ಲಾ ತೀರ್ಥರಾಜವೆನಿಸಿದ ಪ್ರಯಾ

ಅಸ್ಯಾಃ ಶ್ರವಣಮಾತ್ರೇಣ ತೃಪ್ತಿಂ ಯಾತಿ ನರೋತ್ತಮಃ |
ನ ಸಜ್ಜೇತಾನ್ಯಶಾಸ್ತ್ರೇಷು ಯಥಾ ಭಾಗವತಾನ್ಮುನೇ || ೪೫ ||

ತಸ್ಮಾದ್ಭಜತ ಪಾದಾಬ್ಜಂ ಶ್ರೀಕೃಷ್ಣಸ್ಯ ಮಹಾತ್ಮನಃ |
ಕಲ್ಯಾಣಾರ್ಥಂ ಚ ಮುನಯೋ ಭಕ್ತದುಃಖಹರಸ್ಯ ಚ || ೪೬ ||

|| ಗರ್ಗ ಉವಾಚ ||

ಇತಿ ಶ್ರುತ್ವಾ ಶೌನಕಾದ್ಯಾ ಮುನಯಶ್ಚರಿತಂ ಹರೇಃ |
ಶ್ಲಾಘಾಂ ವೈ ಸೂತಪುತ್ರಸ್ಯ ಚಕ್ರುರ್ಹರ್ಷಿತಮಾನಸಾಃ || ೪೭ ||

ಸಂಸಾರಸಾಗರೇ ಮಗ್ನಂ ದೀನಂ ಮಾಂ ಕರುಣಾನಿಧೇ |
ಕಾಲಗ್ರಹಗೃಹೀತಾಂಗಂ ತ್ರಾಹಿ ವಿಷ್ಣೋ ನಮೋಽಸ್ತು ತೇ || ೪೮ ||

ಗವು ಹೇಗೋ, ಹಾಗೆ ಸಂಹಿತೆಗಳಲ್ಲೆಲ್ಲಾ ಈ ಗರ್ಗಸಂಹಿತೆಯು ಉತ್ತಮವಾದುದಾಗಿರುವುದು.

೪೫. ಈ ಸಂಹಿತೆಯನ್ನು ಶ್ರವಣ ಮಾಡಿದ ಮಾತ್ರದಿಂದಲೇ ಮಾನವನು ಉತ್ತಮನಾಗಿ ತೃಪ್ತಿಯನ್ನು ಪಡೆಯುವನು. ಓ ಮುನೀಂದ್ರ! ಭಾಗವತವನ್ನು ಶ್ರವಣಮಾಡಿದಮೇಲೆ ಯಾವರೀತಿ ಇತರ ಶಾಸ್ತ್ರಗಳಲ್ಲಿ ಆಸಕ್ತಿಯುಂಟಾಗುವುದಿಲ್ಲವೋ, ಅದೇರೀತಿ ಈ ಸಂಹಿತಾಶ್ರವಣಾನಂತರ ಶಾಸ್ತ್ರಾಂತರಗಳಲ್ಲಿ ಪ್ರವೃತ್ತಿಯೇ ಉಂಟಾಗದೆ ಹೋಗುವುದು.

೪೬. ಎಲೈ ಮುನಿಗಳಿರಾ! ಆದುದರಿಂದ ಭಕ್ತರಾದವರ ದುಃಖಗಳನ್ನು ಪರಿಹರಿಸುವವನೂ, ಮಹಾನುಭಾವನೂ ಆದ ಶ್ರೀಕೃಷ್ಣಚಂದ್ರನ ಪಾದಕಮಲಗಳನ್ನು ಕಲ್ಯಾಣವುಂಟಾಗುವುದಕ್ಕೋಸ್ಕರ ಭಜಿಸಿರಿ ಎಂದನು.

೪೭. ಗರ್ಗಮಹರ್ಷಿಯು ನುಡಿದನು:— ಈರೀತಿಯಾಗಿ ಆ ಶೌನಕಾದಿ-ಮುನಿಗಳು ಶ್ರೀಕೃಷ್ಣನ ಚರಿತ್ರವನ್ನು ಕೇಳಿದನಂತರ ಬಹು ಸಂತೋಷದಿಂದ ಆ ಸೂತಪುತ್ರನನ್ನು ಕೊಂಡಾಡಿದರು.

೪೮. ಎಲೈ ಕರುಣಾನಿಧಿಯೂ, ಸರ್ವವ್ಯಾಪಿಯೂ ಆದ ಪ್ರಭುವೇ! ಸಂಸಾರವೆಂಬ ಸಾಗರದಲ್ಲಿ ಮುಳುಗಿಹೋಗಿ ಯಮನ-ಹಿಡಿತಕ್ಕೆ ಸಿಕ್ಕಿದೈನ್ಯದಿಂದ ಕಳವಳಿಸುತ್ತಿರುವ ನನ್ನನ್ನು ಕಾಪಾಡು, ಇಗೋ ನಿನಗೆ ನಮಸ್ಕರಿಸುವೆನು.

ಅನುಗೃಹ್ಣೀಷ್ವ ನಃ ಸಾಧೋ ತ್ವಂ ಹ್ಯನಾಥಸ್ಯ ವಲ್ಲಭ ।
ತ್ರೈಲೋಕ್ಯಸ್ಯಾಭಯಂ ದದ್ಯಾದ್ಯಥಾ ಸ್ವಾಮಿ ತಥಾ ಕುರು ॥ ೪೯ ॥

ಶ್ರೀಗುರೋಃ ಕೃಪಯಾ ಹಿ ಶ್ರೀಮದನಮೋಹನಸೇವಯಾ ।
ಬಭೂವ ವಾಙ್ಮಮ ಹರೇಸ್ತಯಾ ಚರಿತವಿಸ್ತಾರಿತಂ ॥ ೫೦ ॥

ವಾಲ್ಮೀಕಾದ್ಯಾಶ್ಚ ವ್ಯಾಸಾದ್ಯಾ ಲಘೂಕ್ತಾಂ ಕವಿತಾಂ ಮಮ ।
ಪಶ್ಯಂತು ದೃಷ್ಟ್ವಾ ಯೂಯಂ ಚಾಪರಾಧಂ ಕ್ಷಂತುಮರ್ಹಥ ॥ ೫೧ ॥

ಶ್ರೀಮಾಧವಂ ವ್ರಜಪತಿಂ ನವಮೇಘಗಾತ್ರಂ
ರಾಧಾಪತಿಂ ಸುರಪತಿಂ ಮುರಲೀಧರಂ ಚ ।
ಭಕ್ತಾರ್ತಿಹಂ ಚ ಪರಮಾರ್ಥಮನಂತದೇವಂ
ಕೃಷ್ಣಂ ನಮಾಮಿ ಶಿರಸಾ ಮನಸಾ ಚ ಭಕ್ತ್ಯಾ ॥ ೫೨ ॥

---

೪೯. ಎಲೈ ಸತ್ಪುರುಷಾಗ್ರಣಿಯೇ! ನೀನು ಗತಿಯಿಲ್ಲದವರಿಗೆ ಗತಿಯಾಗಿರುವೆ. ಎಲೈ ಸ್ವಾಮಿಯೇ! ಮೂರು ಲೋಕಗಳಿಗೂ ಅಭಯವುಂಟಾಗುವಂತೆ ಅನುಗ್ರಹಿಸು.

೫೦. ಶ್ರೀಗುರುವಿನ ಕೃಪೆಯಿಂದಲೂ ಶ್ರೀಮದನಮೋಹನನ ಸೇವೆಯಿಂದಲೂ ನನಗೆ ಶ್ರೀಹರಿಯ (ಗುಣವರ್ಣನೆಯನ್ನೊಳಗೊಂಡ) ಮಾತು ಲಬ್ಧವಾಯಿತು. ಆದರಿಂದಲೇ ಆತನ ದಿವ್ಯಚರಿತ್ರವನ್ನು ವರ್ಣಿಸಿದೆನು.

೫೧. ಎಲೈ ವಾಲ್ಮೀಕಿ ವ್ಯಾಸಾದಿಗಳಿರಾ! ನಾನು ರಚಿಸಿದ ನಿಸ್ಸಾರವಾದ ಈ ಕವಿತೆಯನ್ನು ನೋಡಿ ಪರಿಶೀಲಿಸಿರಿ. ಅನಂತರ ನನ್ನ ಅಪರಾಧವೇನಿದ್ದರೂ ಅದನ್ನು ಕ್ಷಮಿಸಿರಿ.

೫೨. ಶ್ರೀವ್ರಜಮಂಡಲದ ಸ್ವಾಮಿಯೂ, ಹೊಸದಾಗಿ ನೀರು ತುಂಬಿಕೊಂಡಿರುವ ಮೋಡದಂತೆ ಕಪ್ಪಾದ ದೇಹಕಾಂತಿಯುಳ್ಳವನೂ, ರಾಧಾಕಾಂತನೂ, ದೇವಾಧೀಶ್ವರನೂ, ವಂಶೀಧರನೂ (ಕೊಳಲನ್ನು ಧರಿಸಿರುವವನು) ಭಕ್ತರ ದುಃಖವನ್ನು ಪರಿಹರಿಸುವವನೂ, ಪರತತ್ತ್ವಸ್ವರೂಪನೂ, ಅನಂತ

ಷಡ್ವಿಂಶಚ್ಚ ಶತಾರಾವಾಪಿ ಸಪ್ತಾಶೀತಿ ಸುಪ್ರಿಯಾಃ ।
ಶ್ಲೋಕಾಶ್ಚರಿತ್ರಮೇರೋರ್ವೈ ಶ್ರೀಕೃಷ್ಣಸ್ಯ ಮಹಾತ್ಮನಃ ॥ ೫೩ ॥

ಇತಿ ಶ್ರೀಮದ್ಗರ್ಗಾಚಾರ್ಯಸಂಹಿತಾಯಾಂ ಹಯಮೇಧಚರಿತ್ರೇ
ಸುಮೇರುಸಂಪೂರ್ತಿರ್ನಾಮ ದ್ವಿಷಷ್ಟಿತಮೋಽಧ್ಯಾಯಃ

॥ ಶ್ರೀಕೃಷ್ಣಾಯ ಪರಮಾತ್ಮನೇ ನಮಃ ॥

॥ ಶುಭಂ ಭೂಯಾತ್ ॥

ಮೂರ್ತಿಯೂ ಆದ ಆ ಶ್ರೀಕೃಷ್ಣನನ್ನು ಭಕ್ತಿಯುಕ್ತವಾದ ಮನಸ್ಸಿನಿಂದ ತಲೆವಾಗಿ ನಮಸ್ಕರಿಸುವೆನು ಎಂದನು.

೫೩. ಮಹಾತ್ಮನಾದ ಶ್ರೀಕೃಷ್ಣನ ವರ್ಣನವನ್ನೊಳಗೊಂಡಿರುವ ಈ ಸುಮೇರು ನಾಮಕ ಹಯಮೇಧ ಚರಿತ್ರದಲ್ಲಿ ಎರಡು ಸಾವಿರದಾರುನೂರ ಎಂಬತ್ತೇಳು ಮಧುರವಾದ ಶ್ಲೋಕಗಳು ಇರುವುವು.

ಅಶ್ವಮೇಧಖಂಡವು ಮುಗಿದುದು.

॥ ಮಂಗಳಂ ॥

ಮೈಸೂರು
ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ
ಪ್ರೊ:— ವೈ. ಆರ್. ರಂಗರಾವ್‌ರವರಿಂದ
ಮುದ್ರಿಸಲ್ಪಟ್ಟಿತು.